THE BOOK WAS DRENCHED

DAMAGE BOOK

UNIVERSAL LIBRARY
OU_200960
UNIVERSAL LIBRARY

# Bhagavadgita-Sara-Vichara

being a collection

OF

a series of lectures delivered

BY

Vidyabhushana Vedantavachaspati

Dr. Shri Mahabhagavat of Kurtkoti

Ph.D.; F.R.S.A.; M.R.A.S. etc.

PUBLISHED BY

**H. Chidambarayya**

*Retired A. V. School Head Master of the Mysore State*

AND

*Formerly. Editor of "**Paramartha**"*

*Price Rs. 1-8-0.*

*All Rights Reserved.*

ವಿದ್ಯಾಭೂಷಣ ವೇದಾಂತವಾಚಸ್ಪತಿ

ಇತ್ಯಾದಿ ಬಿರುದಾಂಕಿತರಾದ

ಕುರ್ತಕೋಟಿಯ

ಶ್ರೀಮಹಾಭಾಗವತರ

# ಭಗವದ್ಗೀತಾಸಾರವಿಚಾರ

ವೆಂಬ

## ವ್ಯಾಖ್ಯಾನಮಾಲೆ

ಪ್ರಕಾಶಕ:

ಎಚ್. ಚಿದಂಬರಯ್ಯ.

ಮೈಸೂರುಸಂಸ್ಥಾನದ ರಿಟೈರ್ಡ್ ಎ. ವಿ. ಸ್ಕೂಲ್ ಹೆಡ್ಮಾಸ್ಟರ್ ಮತ್ತು

ಪರಮಾರ್ಥಪತ್ರಿಕಾಪೂರ್ವಸಂಪಾದಕ.

ಬೆಲೆ ರೂ. ೧—೮—೦.

Printed by
U. Narayanacharya
at the
Dharma Prakasha Press
Mangalore.

This Book

IS

with kind permission granted

most respectfully dedicated by the lecturer

To

His Highness

Sri Krishna Rajendra Wodeyar Bahadur

(G. C. S. I. Etc.)

Maharajah of Mysore

for favours received in connection with

The Sanskrit Academy at Bangalore

AND

for the high regard

HIS HIGHNESS

entertains towards

The Bhagavad-Gita

# ಶುದ್ಧಪತ್ರ

## ೧ನೇ ವ್ಯಾಖ್ಯಾನ — ಗೀತೆಯು ಕೃತಕರೂಪಕವೋ?

| ಪುಟ | ಪಙ್ಕ್ತಿ | ಅಶುದ್ಧ | ಶುದ್ಧ |
|---|---|---|---|
| ೩ | ೧೩ | in | at |
| ೧೦ | ೨೨ | ಧರ್ಮಶಬದ | ಧರ್ಮಶಬ್ದದ |
| ೧೩ | ೬ | ಶೀಕ್ಷೆ | ಶಿಕ್ಷೆ |
| ೧೮ | ೨೫ | Certion | Certain |
| ೩೪ | ೧೨ | ಗೌತುಮ ಬುದ್ಧರು | ಗೌತಮ ಬುದ್ಧರು |
| ೪೦ | ೫ | ಹುಡಿಕಿ | ಹುಡುಕಿ |
| ೫೧ | ೧ | पौत्रारशाला | पौत्राःश्याला |
| ೫೩ | ೧೨ | ಶರಣ್ಯಹೋದ | ಶರಣುಹೋದ |
| ೫೫ | ೭ | ತತ್ತವಿಚಾರವನ್ನು | ತತ್ತ್ವವಿಚಾರವನ್ನು |
| ೫೫ | ೧೦ | ದರ್ಮಯುದ್ಧ | ಧರ್ಮಯುದ್ಧ |
| ೫೬ | ೧೭ | ವಿಶೇಷವಾಗಿರಬೇಕು | ವಿಶೇಷಣವಾಗಿರಬೇಕು |
| ೫೯ | ೧೨ | ಅಡ್ಡಗೀಟೆಳದು | ಅಡ್ಡಗೀಟೆಳೆದು |

## ೨ನೇ ವ್ಯಾಖ್ಯಾನ — ಗೀತೆಯ ಕರ್ಮಪ್ರವರ್ತಕತ್ವವು

| ಪುಟ | ಪಙ್ಕ್ತಿ | ಅಶುದ್ಧ | ಶುದ್ಧ |
|---|---|---|---|
| ೧೪ | ೨೬ | ಹರಿದು ಹೊಗುತ್ತಿರುವೆವು | ಹರಿದು ಹೋಗುತ್ತಿರುವೆವು |
| ೩೨ | ೧ | ತಿರಿಗಿಸದಿದ್ದರೆ | ತಿರುಗಿಸದಿದ್ದರೆ |
| ೩೩ | ೨೨ | ತಿರಿಗಿಸುವದಕ್ಕಾಗಿ | ತಿರುಗಿಸುವದಕ್ಕಾಗಿ |
| ೩೬ | ೧೯ | चिकीपुर्लोक | चिकीर्षुर्लोक |
| ೩೯ | ೧೬ | तेनैव भूतेन | तेनैवंभूतेन |
| ೪೦ | ೪ | भवेन्मोक्ष | भवेन्मोक्षः |
| ೪೧ | ೨ | ದೂಡ್ಡದೊಡ್ಡ | ದೊಡ್ಡದೊಡ್ಡ |
| ೪೩ | ೮ | तस्माद्युद्धस्व | तस्माद्युद्ध्यस्व |
| ೪೭ | ೭, ೧೩ | " | " |
| ೪೮ | ೧೯ | त्वत्प्रसान्मयाच्युत | त्वत्प्रसादान्मयाच्युत |

## ೩ನೇ ವ್ಯಾಖ್ಯಾನ — ಕರ್ತವ್ಯಕ್ಕಾಗಿ ಕರ್ತವ್ಯವು

| ಪುಟ | ಪಙ್ಕ್ತಿ | ಅಶುದ್ಧ | ಶುದ್ಧ |
|---|---|---|---|
| ೪ | ೧೬ | ಕಡಮೆಯಾಗಿದರೂ | ಕಡಿಮೆಯಾಗಿದ್ದರೂ |
| ೪ | ೨೬ | ಮನುಷ್ಯರಿಂದ | ಮನುಷ್ಯರಾದ |
| ೧೩ | ೧೫ | ಒಂಡೆರಡು | ಒಂದೆರಡು |
| ೧೭ | ೧೦, ೧೫ | कळेवरं | कलेवरम् |
| ೧೯ | ೭ | ಶೀಕ್ಷೆಯಾಗುವದು | ಶಿಕ್ಷೆಯಾಗುವದು |
| ೨೬ | ೫ | यत्त | यत्तु |
| ೨೬ | ೧೬ | चिकीपुः | चिकीर्षुः |
| ೨೬ | ೨೧ | ನಿವೃತ್ತಿ ೂಪವಾವ | ನಿವೃತ್ತಿರೂಪವಾದ |
| ೩೬ | ೩ | बुघ्यानुष्टीयमानः | बुद्ध्यानुष्ठीयमानः |
| " | ೪ | ज्ञाननिष्टा | ज्ञाननिष्ठा |
| ೩೭ | ೧೧ | नागवल्यपि | नागवल्ल्यपि |
| ೪೧ | ೩ | सत्वं | सत्त्व |
| ೪೨ | ೫ | ಬೆಳಸಿ | ಬೆಳೆಸಿ |
| ೪೭ | ೨೦ | वर्णाश्रमाचारवताः | वर्णाश्रमाचारवता |
| ೪೮ | ೨ | तपशौचं | तपःशौचं |
| ೫೫ | ೨೨ | सात्विको | सात्त्विको |

## ೪ನೇ ವ್ಯಾಖ್ಯಾನ — ಗೀತೋಪದಿಷ್ಟ ಯೋಗಗಳು

| ಪುಟ | ಪಙ್ಕ್ತಿ | ಅಶುದ್ಧ | ಶುದ್ಧ |
|---|---|---|---|
| ೪ | ೨೨ | सिध्यसिध्योः | सिद्ध्यसिद्ध्योः |
| ೭ | ೩ | कतव्य | कर्तव्यं |
| ೭ | ೧೧ | विषयानींद्रिये | विषयानिंद्रियै |
| ೮ | ೨೦ | मुह्यति | मुह्यन्ति |
| ೯ | ೨೩ | शनः | शनैः |
| ೧೧ | ೨೦ | ಪೂರ್ವೀಕರು | ಪೂರ್ವಿಕರು |
| ೧೧ | ೨೬ | ಸಾಧುಗಳೂ | ಸಾಧುಗಳು |
| ೧೨ | ೬ | माहापुरुष | महापुरुष |

| ಪುಟ | ಪಙ್ಕ್ತಿ | ಅಶುದ್ಧ | ಶುದ್ಧ |
|---|---|---|---|
| ೧೭ | ೧೯ | ತಾಂಡವಾಡುವದೊ | ತಾಂಡವವಾಡುವದೊ |
| ೨೯ | ೧೦ | ಮುಳುಗಿದ್ದದರಿಂದ | ಮುಳುಗಿದ್ದದ್ದರಿಂದ |
| ೨೯ | ೧೯ | ನೊಡುವನೊ | ನೋಡುವನೊ |
| ೩೦<br>೩೨ | ೭<br>೧೫ | ತಿರಿಗಿ | ತಿರುಗಿ |
| ೩೪ | ೩ | ತಿರಿಗಿದ | ತಿರುಗಿದ |
| ೪೩ | ೨೦ | ಸಾಧನವಾಗುವಂಥ | ಸಾಧನವಾಗದಂಥ |
| ೪೪ | ೧೧ | क्रीयते | क्रियते |
| ೪೯ | ೧೬ | ಬೆಳಸಿಕೊಳ್ಳಬಹುದು | ಬೆಳೆಸಿಕೊಳ್ಳಬಹುದು |
| ೪೯ | ೧೭ | ಬೆಳಸಿಕೊಳ್ಳುವದಕ್ಕೆ | ಬೆಳೆಸಿಕೊಳ್ಳುವದಕ್ಕೆ |
| ೫೦ | ೧ | ಬೆಳವಳಿಗೆ | ಬೆಳೆವಳಿಗೆ |
| ೫೪ | ೨೨ | ಪ್ರಮಾಣವು | ಪ್ರಮಾಣವು. |
| ೫೫ | ೧೭ | ತಿರಿಗಿ | ತಿರುಗಿ |
| ೫೭ | ೭ | उद्धरेदात्मनात्मान | उद्धरेदात्मनात्मानम् |
| ೫೮ | ೨೩ | बुद्या | बुद्ध्या |
| ೬೨ | ೭ | वीय | वीर्य |
| ೬೫ | ೧೩ | प्रसङ्ेन | प्रसङ्गेन |
| ೬೭ | ೨ | सत्व | सत्त्व |
| ೭೩ | ೧೨ | ಸಾತ್ತ್ವರಿಕಹೋಮ | ಸಾತ್ತ್ವಕಹೋಮ |
| ೭೫ | ೨ | मानसउच्यते | मानसमुच्यते |
| ೭೭ | ೧ | द्वद्वानभिघ्रातः | द्वंद्वानभिघातः |
| ೮೪ | ೪ | विकृर्ता | विकृतिं |
| ೮೫ | ೧ | ಬೆಳಸಿ | ಬೆಳೆಸಿ |
| ೮೬ | ೧೮ | बुध्या | बुद्ध्या |
| ೮೭ | ೧ | ಅನಾತ್ಮಕಾರವೃತ್ತಿ | ಅನಾತ್ಮಾಕಾರವೃತ್ತಿ |
| ೯೦ | ೧೪ | गति” | गतिम्” |
| ೯೨ | ೨೫ | ಬೆಳವಳಿಗೆಯನು | ಬೆಳೆವಳಿಗೆಯನ್ನು |

| ಪುಟ | ಪಙ್ಕ್ತಿ | ಅಶುದ್ಧ | ಶುದ್ಧ |
|---|---|---|---|
| ೧೦೦ | ೪ | सर्वभुतानि | सर्वभूतानि |
| ೧೦೪ | ೨೦ | ಮೊದಲು | ತೊದಲು |
| ೧೦೮ | ೨೦ | देहवध्भि | देहवाद्भि |
| ೧೦೯ | ೬ | वेत्त्ति | वेत्ति |
| ೧೧೬ | ೧೪ | मनसा | मनसो |
| ೧೧೯ | ೧೩ | भत्कियोगे | भाक्तियोगो |
| ೧೧೯ | ೧೩ | तन्नामश्रवणादिभिः | तन्नामग्रहणादिभिः |
| ೧೨೦ | ೨೨ | तरतीशोकमत्मावित् | तरतिशोकमत्मावित् |
| ೧೨೨ | ೧೧ | ಪೂಜೆಯಲ್ಲಿ | ಪೂಜೆಯೆಲ್ಲ |
| ೧೨೨ | ೧೨ | ಸ್ಮರಣೆಗೆ | ಸ್ಮರಣೆ |
| ೧೨೨ | ೧೬ | ಸುಗುಣಮೂರ್ತಿಯ | ಸಗುಣಮೂರ್ತಿಯ |
| ೧೩೯ | ೮ | ಬೆಳಸಿಕೊಳ್ಳುವನು | ಬೆಳೆಸಿಕೊಳ್ಳುವನು |
| ೧೪೧ | ೨೧ | तत्वत | तत्वतः |
| ೧೪೯ | ೧೧ | इंद्रियाणोंद्रियार्थेभ्यस्तस्य | इन्द्रियाणीन्द्रियार्थेभ्यस्तस्य |
| ೧೫೧ | ೧೦ | निशिं | निशा |
| ೧೫೩ | ೪ | ಬೀಗರು | ಬೀಗನು |
| ೧೬೪ | ೬ | लोकैस्त्रिविर्वार | लोकैस्त्रिभिर्वार |
| ೧೬೫ | ೧೧ | ಬೆಳಸಿಕೊಂಡು | ಬೆಳೆಸಿಕೊಂಡು |

## ೫ನೇ ವ್ಯಾಖ್ಯಾನ — ಧರ್ಮಗ್ರಂಥಗಳಲ್ಲಿ ಭಗವದ್ಗೀತೆಯ ಸ್ಥಾನವು

| ಪುಟ | ಪಙ್ಕ್ತಿ | ಅಶುದ್ಧ | ಶುದ್ಧ |
|---|---|---|---|
| ೬ | ೨೩ | ಮಾಡವರೊ | ಮಾಡುವರೊ |
| ೭ | ೨೬ | ಸಂಭವವೆಂದು | ಅಸಂಭವವೆಂದು |
| ೧೮ | ೮ | ಲ್ಯಾಸರ್ಗ | ಲ್ಯಾಸೆನ್ |
| ೧೯ | ೩ | ಬೆಳಿಸ | ಬೆಳೆಸ |
| ೨೦ | ೩ | ಪೇಮವು | ಪ್ರೇಮವು |
| ೨೦ | ೬ | ಮಾನುಷಪ್ರೇಮವೆಂಬ | ಮಾನುಷಪ್ರೇಮದ |

ಇವುಗಳಲ್ಲದೆ ಈ ಗ್ರಂಥದ ಸಮರ್ಪಣವನ್ನು ಅತ್ಯುದಾರಬುದ್ಧಿಯಿಂದ ಸ್ವೀಕರಿಸಿರುವ

## ಮೈಸೂರು ಶ್ರೀಮನ್ ಮಹಾರಾಜರವರ

ಕಡೆಯಿಂದ ಬಂದ ಸೂಚನೆಯಂತೆ ಓದುವವರು ಇದರಲ್ಲಿ ಬಿಡಬೇಕಾದ ಸಂಗತಿಗಳ ಪಟ್ಟಿ.

| ವ್ಯಾಖ್ಯಾನ ಸಂಖ್ಯೆ | ಪುಟ ಸಂಖ್ಯೆ | ಪಙ್ತಿ ಸಂಖ್ಯೆ | ಸಂಗತಿ |
|---|---|---|---|
| ೨ | ೨೪ | ೧೯ | "चुंबनं देहि मे भार्ये कामचांडाल तृप्तये" |
| " | ೩೧ ಇಂದ ೩೪ | ೧೧ ಇಂದ ೪ | ಬರೀ ಸಿದ್ಧಾಂತವನ್ನು ಓದಿದ ಒಬ್ಬ ಗ್ರಹಸ್ಥನ ಕಥೆ. |
| ೩ | ೯ | ೧೮,೧೯. | "ದಂಡಿಸದೆ ದೇಹವನು ಖಂಡಿಸದೆ ಕರಣವನು ಉಂಡುಂಡು ಸ್ವರ್ಗವನ್ನೈದಲಿಕ್ಕದನೇನು ರಂಡೆ ಯಾಳುವಳೇ ಸರ್ವಜ್ಞ." |
| ೪ | ೩೯ ಇಂದ ೪೦ | ೧೬ ಇಂದ ೧ | ರಾಮರಾವಣರ ಕಥೆ. |
| " | ೧೨೧ | ೬,೧೫ | ಮಾಯೆಯನ್ನು ನ್ಯೂಫೌಂಡ್‌ಲ್ಯಾಂಡಿನ ನಾಯಿಗೆ ಹೋಲಿಸಿರುವದು |
| " | ೧೫೧ | ೧ | ಪರಮಾತ್ಮಸ್ವರೂಪವೆಂಬುದು ರಾತ್ರಿಯಂತೆ. |
| " | ೧೫೫ | ೨೫ | ಮೋಕ್ಷದಲ್ಲೇನಿದೆ? |

# ವಿಷಯಾನುಕ್ರಮಣಿಕೆ.


ವ್ಯಾಖ್ಯಾನಸಂಖ್ಯೆ. ವ್ಯಾಖ್ಯಾನವಿಷಯ. ಪುಟಸಂಖ್ಯೆ

೧ ಗೀತೆಯು ಕೃತಕರೂಪಕವೊ?

ಧರ್ಮವೇ ಭರತಖಂಡದ ಸರ್ವಸ್ವವೆಂಬುದು, ಧರ್ಮದ ಲಕ್ಷಣ, ಪ್ರಮಾಣಗಳ ವಿಚಾರ, ವೇದದ ಮಹತ್ವ, ಶ್ರುತಿಸ್ಮೃತೀತಿಹಾಸಗಳ ಪ್ರಾಮಾಣ್ಯ, ಮಹಾಭಾರತದ ಶ್ರೇಷ್ಠತೆ, ಗೀತೆಯ ಹೆಚ್ಚುಗಾರಿಕೆ, ಗೀತೆಗೆ ಎಲ್ಲರೂ ಅಧಿಕಾರಿಗಳೆಂಬುದು, ಗೀತೆಯು ಕೃತಕರೂಪಕವಲ್ಲವೆಂಬುದು. ೬೧

೨ ಗೀತೆಯ ಕರ್ಮಪ್ರವರ್ತಕತ್ವವು.

ಅನುಬಂಧಚತುಷ್ಟಯಗಳು, ವಿಷಯಸುಖದ ಕ್ಷುದ್ರತೆ, ಜ್ಞಾನವು ಪರಮಾನಂದರೂಪವಾಗಿರುವದು, ಜ್ಞಾನಕ್ಕೆ ನಿಷ್ಕಾಮಕರ್ಮವು ಸಾಧನವೆಂಬುದು, ಏನನ್ನೂ ಮಾಡದೆ ಸುಮ್ಮನಿರುವದು ನೈಷ್ಕರ್ಮ್ಯವೆನಿಸಿಕೊಳ್ಳುವದಿಲ್ಲವೆಂಬುದು, ಜ್ಞಾನಿಗಳಾದರೂ ಲೋಕಸಂಗ್ರಹಾರ್ಥವಾಗಿ ಕರ್ಮಗಳನ್ನು ಮಾಡುತ್ತಾರೆಂಬುದು, ಬಲಾತ್ಕಾರದಿಂದ ಕರ್ಮವನ್ನು ಬಿಡಲಿಕ್ಕೆ ಹೋಗಬಾರದೆಂಬುದು. ೪೯

೩ ಕರ್ತವ್ಯಕ್ಕಾಗಿ ಕರ್ತವ್ಯವು.

ಧರ್ಮವನ್ನು ಆಶ್ರಯಿಸದೆ ಹೋದರೆ ಮನುಷ್ಯನು ಪಶುಸಮಾನನೆನಿಸಿಕೊಳ್ಳುವನೆಂಬುದು, ಅಧರ್ಮವು ಮುಂದೆ ಕೆಡುಕನ್ನುಂಟುಮಾಡುವದೆಂಬುದು, ಜನ್ಮದ ಸಾರ್ಥಕತೆಗೆ ಧರ್ಮವೇ ಮುಖ್ಯಮಾರ್ಗವೆಂಬುದು, ಸತ್ತಮೇಲೆ ಧರ್ಮವೊಂದೇ ಸಹಾಯವಾಗುವದೆಂಬುದು, ಜನ್ಮಾಂತರ ವಿಚಾರ, ಅನುಷ್ಠಾನಕ್ಕೇ ಆಗಲಿ ಸನ್ಯಾಸಕ್ಕೇ ಆಗಲಿ ಶಾಸ್ತ್ರವನ್ನು ಪ್ರಮಾಣೀಕರಿಸಬೇಕೆಂಬುದು, ಅನ್ಯಧರ್ಮವನ್ನು ದ್ವೇಷಿಸದೆ ಸ್ವಧರ್ಮವನ್ನು ಸಮರ್ಪಕವಾಗಿ ನಡೆಸಬೇಕೆಂಬುದು, ಚಾತುರ್ವರ್ಣ್ಯಗಳ ಅವಶ್ಯಕತೆ, ಸರ್ವಸಾಮಾನ್ಯಧರ್ಮಗಳು, ಕರ್ತವ್ಯವೆಂದೇ ಕರ್ತವ್ಯವನ್ನು ಮಾಡುವದು. ೫೬

೪ ಗೀತೋಪದಿಷ್ಟಯೋಗಗಳು.

ಪೀಠಿಕೆ ೧—೫

ಯೋಗಶಬ್ದಾರ್ಥ, ಯೋಗಭೇದಗಳು, ಯೋಗವೆಂದರೆ ಸಮತ್ವವೆಂಬುದರ ಸಮನ್ವಯ.

## ಜ್ಞಾನಯೋಗ ೬-೪೦.

ಅಜ್ಞಾನದಿಂದ ಬದ್ಧರಾಗಿರುವದು, ಅದನ್ನು ಕಳೆಯುವದಕ್ಕೆ ಶುಭೇಚ್ಛೆಯನ್ನು ಬೆಳೆಸಿಕೊಂಡು ಸಚ್ಛಾಸ್ತ್ರಗಳನ್ನು ವ್ಯಾಸಂಗಮಾಡಿ ಸದ್ಗುರುವನ್ನು ಆಶ್ರಯಿಸಿ ತತ್ತ್ವಜ್ಞಾನವನ್ನು ಪಡೆಯಬೇಕೆಂಬುದು, ದೇಹವನ್ನು ಆತ್ಮವೆಂದು ತಿಳಿಯುವದರಿಂದಲೇ ಮರಣದ ಭೀತಿ ಬಂಧಿಸುವದೆಂಬುದು, ಇಂದ್ರಿಯಗಳಾಗಲಿ ಪ್ರಾಣವಾಗಲಿ ಮನಸ್ಸಾಗಲಿ ಬುದ್ಧಿಯಾಗಲಿ ಆತ್ಮನಲ್ಲವೆಂಬುದು, ಆತ್ಮನ ಸಚ್ಚಿದಾನಂದಸ್ವರೂಪವು ಅನುಭವೈಕವೇದ್ಯವೆಂಬುದು, ರಾಗದ್ವೇಷಗಳನ್ನು ಸಂಪೂರ್ಣವಾಗಿ ಬಿಟ್ಟ ಮನಸ್ಸು ಆತ್ಮಸ್ವರೂಪವನ್ನು ಪಡೆಯುವದಕ್ಕೆ ತಕ್ಕದ್ದಾಗುವದೆಂಬುದು, ಅಮಾನಿತ್ವಾದಿಜ್ಞಾನಸಾಧನಗಳನ್ನು ಸಾಂಗವಾಗಿ ನಡೆಸಿದರೆ ಸಿದ್ಧಾಂತವು ತನಗೆತಾನೇ ಅನುಭವಕ್ಕೆ ಬರುವದೆಂಬುದು.

## ಕರ್ಮಯೋಗ ೪೦–೫೬.

ಜ್ಞಾನಕ್ಕೆ ಚಿತ್ತಶುದ್ಧಿಬೇಕೆಂಬುದು, ಕರ್ಮಯೋಗವು ಅದಕ್ಕೆ ಸಾಧನವೆಂಬುದು, ನಿಷ್ಕಾಮಕರ್ಮಪ್ರಶಂಸೆ, ಸತ್ವಾದಿಗುಣಭೇದಗಳಿಂದ ಕರ್ಮದ ಮೂರು ಬಗೆ, ಫಲಾಭಿಸಂಧಿಯು ಜ್ಞಾನನಿಷ್ಠೆಗೆ ಅಡ್ಡಬರುವದೆಂಬುದು, ಯಾವ ಕರ್ಮವನ್ನೂ ಮಾಡದೆ ಇರುವದು ತ್ಯಾಗವೆನಿಸಿಕೊಳ್ಳುವದಿಲ್ಲವೆಂಬುದು, ಫಲತ್ಯಾಗಪೂರ್ವಕವಾಗಿ ಬ್ರಹ್ಮಾರ್ಪಣಬುದ್ಧಿಯಿಂದ ವಿಧ್ಯುಕ್ತಕರ್ಮವನ್ನು ಮಾಡಿದರೆ ಚಿತ್ತಶುದ್ಧಿಯಾಗುವದೆಂಬುದು, ನಿಷಿದ್ಧಕರ್ಮವನ್ನು ಅಗತ್ಯವಾಗಿ ಬಿಡಬೇಕೆಂಬುದು, ಚಿತ್ತಶುದ್ಧಿಯೆಂದರೆ ಗುಣೋತ್ಕರ್ಷವುಂಟಾಗುವದೆಂಬುದು, ಸತ್ತ್ವಗುಣವು ಹೆಚ್ಚಿದ ಲಕ್ಷಣ.

## ರಾಜಯೋಗ ೫೭–೯೦.

ಮನಸ್ಸೇ ಬಂಧಕ್ಕೂ ಮೋಕ್ಷಕ್ಕೂ ಕಾರಣವೆಂಬುದು, ಯೋಗದ ಎಂಟು ಅಂಗಗಳ ವಿಚಾರ, ಮನೋನಿಗ್ರಹಕ್ಕೆ ಎಡೆಬಿಡದ ಪ್ರಯತ್ನವನ್ನು ಮಾಡಬೇಕೆಂಬುದು.

## ಭಕ್ತಿಯೋಗ ೯೧—೧೬೮.

ಭಕ್ತಿಯೋಗದ ಸೌಲಭ್ಯ, ಭಕ್ತಿಲಕ್ಷಣ, ಪ್ರೇಮದ ಪ್ರಭಾವ, ಭಗವತ್ಸ್ವರೂಪವನ್ನು ತಿಳಿಯುವವರಿಗೂ ಶಬ್ದಪ್ರಮಾಣದಿಂದ ಭಗವಂತನಲ್ಲಿ ಗೌಣೀಭಕ್ತಿಯನ್ನು ಮಾಡಬೇಕೆಂಬುದು, ಗೌಣೀಭಕ್ತಿಯನ್ನು ಆರಂಭಿಸುವವನ ಮನಸ್ಸಿಗೆ ನಿರ್ಗುಣನಿರಾಕಾರಗಳು ಹಿಡಿಯುವದಿಲ್ಲವೆಂಬುದು, ಭಗವಂತನು ಭಕ್ತನಿಗನುಗುಣವಾಗಿ ಸಗುಣನಾಗುವದು, ಭಕ್ತನು ತನ್ನ ಯೋಗಕ್ಷೇಮದ ಭಾರವನ್ನು ಭಗವಂತನಿಗೆ ವಹಿಸಿ ತಾನು ನಿಶ್ಚಿಂತನಾಗಿರುವದು, ಅವತಾರಗಳ

ಪ್ರಯೋಜನ, ಒಂದವತಾರದ ಮೇಲೆ ಪ್ರೇಮವನ್ನು ಮಾಡುವ ಸಡಗರದಲ್ಲಿ ಇನ್ನೊಂದವತಾರವನ್ನು ದ್ವೇಷಿಸಬಾರದೆಂಬುದು, ನವವಿಧಭಕ್ತಿಗಳ ವಿಚಾರ, ಜ್ಞಾನಮಾರ್ಗಕ್ಕೂ ಭಕ್ತಿಮಾರ್ಗಕ್ಕೂ ಭೇದ, ವಿಗ್ರಹಾರಾಧನೆಯ ವಿಷಯ, ಗೌಣೀಭಕ್ತಿಯಿಂದಾದ ಚಿತ್ತಶುದ್ಧಿಯ ಪ್ರಮಾಣ, ನಿಧಿಧ್ಯಾಸ, ನಾಮಸ್ಮರಣೆಯ ಪ್ರಾಶಸ್ತ್ಯ, ನಿರಿಚ್ಛೆ, ಜ್ಞಾನಪ್ರಾಪ್ತಿ, ಪರಭಕ್ತಿ, ಪರವೈರಾಗ್ಯ, ಭಕ್ತನಲಕ್ಷಣ, ಭಕ್ತಿ ಮಾರ್ಗಪ್ರಶಂಸೆ. ೧೬೮

೪ ಪೃಥ್ವಿಯೊಳಗಣ ಧರ್ಮಗ್ರಂಥಗಳಲ್ಲಿ ಭಗವದ್ಗೀತೆಯ ಸ್ಥಾನವು–

ಗೀತೆಯ ಸರ್ವೋತ್ಕೃಷ್ಟತೆಯ ವಿಷಯದಲ್ಲಿ ಪಾಶ್ಚಾತ್ಯರ ಅಭಿಪ್ರಾಯಗಳು, ಧರ್ಮವೇ ಜಗತ್ತಿನ ಸುಸ್ಥಿತಿಗೆ ಕಾರಣವೆಂಬುದು, ಎಲ್ಲಾ ಧರ್ಮಸ್ಥಾಪಕರ ಪ್ರಯತ್ನವೂ ಜಗತ್ತಿನ ಸುಸ್ಥಿತಿಗಾಗಿಯೇ ಇರುವದೆಂಬುದು, ಧರ್ಮಪ್ರತಿಪಾದನ ಶೈಲಿಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಮಾತ್ರ ಗೀತೆಯ ಸ್ಥಾನವನ್ನು ನಿರ್ಣಯಿಸಬೇಕೆಂಬುದು, ಸರ್ವಧರ್ಮಗಳ ಸಹಾನುಭೂತಿ, ಸ್ವಧರ್ಮನಿಷ್ಠೆ, ಎಲ್ಲಯೋಗಗಳಿಗೂ ಅದಕ್ಕದಕ್ಕೆ ತಕ್ಕ ಬೆಲೆಯನ್ನು ಕಟ್ಟುವದು, ಸಾಧನದ ಕಡೆಗೇ ಹೆಚ್ಚು ಲಕ್ಷ್ಯವನ್ನಿಟ್ಟಿರುವದು, ಉದ್ಯೋಗಿಯಾಗಿರುವಂತೆ ಪ್ರೇರಿಸುವದು ಮೊದಲಾದ ಸಂಗತಿಗಳಿಂದ ಗೀತೆಯ ಹೆಚ್ಚುಗಾರಿಕೆ, ಗೀತೆಯಲ್ಲಿ ತಪ್ಪಾಗಿ ಕಾಣುವದೆಲ್ಲಾ ಅಭಾಸವೆಂಬುದು, ಗೀತೆಯ ಸರ್ವೋತ್ಕೃಷ್ಟತೆಯನ್ನು ಪುಷ್ಟಿಗೊಳಿಸುವ ಇತರ ಸಂಗತಿಗಳು, ಗೀತೆಯ ಯಥಾರ್ಥವನ್ನು ಅನುಭವಕ್ಕೆ ತಂದುಕೊಳ್ಳಬೇಕಾದರೆ ಸದ್ಗುರುವಿಗೇ ಶರಣುಹೋಗಬೇಕೆಂಬುದು. ೨೦



"ವಿದ್ಯಾಭೂಷಣ" "ವೇದಾಂತವಾಚಸ್ಪತಿ" ಪೀ. ಎಚ್. ಡೀ., ಎಮ್. ಆರ್. ಏ. ಎಸ್.,
ಎಫ್. ಆರ್. ಎಸ್. ಏ., ಇತ್ಯಾದಿಬಿರುದಾಂಕಿತರಾದ ಕುರ್ತಕೋಟಿಯ

**ಶ್ರೀ ಮಹಾಭಾಗವತರು.**



ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯೇತ್ಯಾದಿಬಿರುದಾಂಕಿತ ಶ್ರೀಮತ್ಕರವೀರ
ಸಿಂಹಾಸನಾಧೀಶ್ವರ **ಶ್ರೀಜಗದ್ಗುರು** ಶಂಕರಾಚಾರ್ಯ
**ಶ್ರೀವಿದ್ಯಾಶಂಕರಭಾರತೀಸ್ವಾಮಿಗಳು.**

# ಪೀಠಿಕೆ.

ಐದಾರುವರ್ಷಗಳ ಹಿಂದೆ–ಶಾಲಿವಾಹನಶಕ ೧೮೩೩ರ ಆಶ್ವಿನಮಾಸದಲ್ಲಿ ಶ್ರೀ ಮಹಾಭಾಗವತರು ಧಾರವಾಡದ ಮಹಾಸಭೆಯಲ್ಲಿ ಕೊಟ್ಟ ಭಗವದ್ಗೀತಾ ಸಾರವಿಚಾರವ್ಯಾಖ್ಯಾನಮಾಲೆಯನ್ನು ಈಗ ಪುಸ್ತಕರೂಪದಲ್ಲಿ ಕರ್ಣಾಟಕ ವಾಚಕಮಂಡಲಿಯ ಮುಂದೆ ಇಡುವದಕ್ಕೆ ನನಗೆ ಬಹುಸಂತೋಷವಾಗುತ್ತದೆ. ಭಗವದ್ಗೀತೆಯ ವಿಚಾರದಲ್ಲಿ ಎಷ್ಟೋ ಜನರು ಎಷ್ಟೋ ವ್ಯಾಖ್ಯಾನಗಳನ್ನು ಕೊಟ್ಟಿರಬಹುದು; ಮತ್ತು ಎಷ್ಟೋ ಗ್ರಂಥಗಳನ್ನೂ ಹೊರಡಿಸಿರಬಹುದು. ಗೀತೆಯ ಮಾತೆಂದ ಕೂಡಲೆ ವಾಚಕರು ಒಂದುವಿಷಯದಲ್ಲಿ ಜಾಗರೂಕರಾಗಿರಬೇಕೆಂದು ನಾನು ವಿನಯಪೂರ್ವಕವಾಗಿ ಸೂಚಿಸುತ್ತೇನೆ. ಗೀತೆಯ ಅರ್ಥವು ಬರೀ ಮೇಧಾಶಕ್ತಿಗೆ ಎಂದಿಗೂ ಸಿಕ್ಕುವದಲ್ಲ. ಶಬ್ದಾರ್ಥವು ಸಿಕ್ಕೀತು; ಅದು ದೊಡ್ಡಮಾತಲ್ಲ. ಶ್ರೀಕೃಷ್ಣನ ನಿಜವಾದ ತಾತ್ಪರ್ಯವನ್ನು ಹಿಡಿಯುವದು ಬರೀ ಮೇಧಾಶಕ್ತಿಗೆ ಸಾಧ್ಯವಲ್ಲ. ಬಹುಕಾಲದಿಂದ ಜೀವಿಸಿಕೊಂಡಿರುವ ಗೀತಾಗ್ರಂಥಗಳೆಲ್ಲಾ ಸಂಪ್ರದಾಯವನ್ನು ಹಿಡಿದು ಅಭ್ಯಾಸಮಾಡಿ ಅದರ ಅರ್ಥವನ್ನು ಅನುಭವಕ್ಕೆ ತಂದುಕೊಳ್ಳುವದಕ್ಕಾಗಿ ತಮ್ಮ ಆಯುಷ್ಯವನ್ನೆಲ್ಲಾ ಧಾರೆಯೆರೆದ ಪ್ರಾಜ್ಞರಿಂದಲೇ ಹೊರಟಿರುವವು. ಪ್ರಜ್ಞಾಶಾಲಿಯಾಗಿ ಸಾಧನಚತುಷ್ಟಯಸಂಪನ್ನನಾಗಿ ಗುರುವಿಗೆ ಶರಣೆಂದವನಿಗೆ ಮಾತ್ರ ಗೀತೆಯ ಯಥಾರ್ಥವು ಸ್ಫೂರ್ತಿಯಾದೀತು. ಶ್ರೀಮಹಾಭಾಗವತರು ಈ ಗೀತೆಯ ವ್ಯಾಖ್ಯಾನವನ್ನು ಕೊಡುವದಕ್ಕೆ ತಕ್ಕವರಾದ್ದರಿಂದ ಇವರ ಉಪನ್ಯಾಸವು ಸಭಿಕರ ಮನಸ್ಸಿನ ಮೇಲೆ ಎಷ್ಟು ತೀವ್ರವಾದ ಪರಿಣಾಮವನ್ನುಂಟುಮಾಡಿತೆಂಬುದಕ್ಕೆ ದಿಗ್ದರ್ಶನವಾಗಿ ಆ ಸಭಾಮಧ್ಯದಲ್ಲಿಯೇ ಮ। ರಾ। ನರಸಿಂಹಾಚಾರ್ಯಕಾವ್ಯಾನಂದ ಎಂಬುವರು ಈ ವ್ಯಾಖ್ಯಾನದಿಂದ ಆದ ಆನಂದದಿಂದ ಶ್ಲೋಕರೂಪವಾಗಿ ಹಾಡಿದ್ದೇನೆಂದರೆ:—

"भगवत्येव यस्यास्ति भक्तिर्व्यभिचारिणी ।
महाभागवतं प्राहुस्तं जनं ज्ञानिनः खलु ॥ १ ॥
एवंविधः किलायं प्रथितो लिंगेशपण्डितः श्रीमान् ।
क्रतुकोटिग्रामाधिपकुलदीपो मद्बहिश्चरप्राणः ॥ २ ॥
यद्विद्यया भवति गाढविवेकबुद्धिर्यद्विद्यया भवति चंचलचित्तशुद्धिः ।
यद्विद्यया भवति मूढजनोपदेशस्तद्विद्ययाऽस्ति ननु भूषणवानिहैषः ॥ ३ ॥
अयं गृहस्थोऽपि विरक्तचित्तः स्वयंपरित्यक्तकुटुंबवित्तः ।
धियं निवेश्य प्रभुपादयोस्तन्मयं जगत्पश्यति साधुवृत्तः ॥ ४ ॥
भवतिमिरनाशकोऽयं भगवद्गीतार्थतत्त्वचंडांशुः ।
जयति जनादरपात्रं मित्रं नरसिंहशर्मसदृशानां ॥ ५ ॥

ಮತ್ತು ಈ ವ್ಯಾಖ್ಯಾನಮಾಲೆಯ ಮೊದಲನೇ ವ್ಯಾಖ್ಯಾನವನ್ನು ಓದಿ ನೋಡಿದ ಮದರಾಸು ಗವರ್ನಮೆಂಟಿನ ಕನ್ನಡ ಟ್ರಾನ್ಸಲೇಟರ್ ಮ। ರಾ। ಬಿ. ರಾಮರಾವ್, M. A., LL.B. ಇವರ ಅಭಿಪ್ರಾಯವೂ ಮೇಲಿನ ಅಭಿಪ್ರಾಯವನ್ನು ಪುಷ್ಟಿಗೊಳಿಸುತ್ತದೆ. ಅದೇನಂದರೆ:—"I have read the Mahabhagavater's Bhagavadgitasaravichara. The style is good and eloquent. I am a great admirer of Bhagavadgita myself and therefore believe that these lectures by the Mahabhagavatar, when published, will become a valuable addition to our religious literature." ಇಂಥ ಅಭಿಪ್ರಾಯಗಳನ್ನು ಸಭಾಸ್ಥಾನದಲ್ಲಿಯೆ ತಟಸ್ಥವಾಗಗೊಡಲಾರದೆ ಅವುಗಳನ್ನು ಪುಸ್ತಕ ರೂಪದಲ್ಲಿ ಕೂಡಿಟ್ಟು ಕಾಪಾಡಬೇಕೆಂದು ಪ್ರಯತ್ನಿಸಿರುವೆನು. ಪಾತ್ರೆಯಲ್ಲಿ ತುಂಬಿಟ್ಟ ಹಾಲು ಆಗ ತಾನೆ ಹಸುವಿನ ಕೆಚ್ಚಲಿನಿಂದ ಹೊರಟ ಹಾಲಿನಷ್ಟು ಗುಣಕಾರಿಯಲ್ಲವೆಂಬುದು ಹೇಗೋ ಹಾಗೆ ಇದು ಅವರ ಸಾಕ್ಷಾನ್ಮುಖದಿಂದ ತನಗೆ ತಾನೇ ಸ್ಫೂರ್ತಿಯಾಗಿ ಏಕಪ್ರಕಾರವಾಗಿ ಪ್ರವಹಿಸುತ್ತಿದ್ದ ವಾಣಿಯಷ್ಟು ಉದ್ಬೋಧಕಾರಿಯಾಗಲಾರದಿದಾದುದರಿಂದ ಬರೀ ಈ ಗ್ರಂಥದ ಮೇಲಿ

ನಿಂದ ಅವರ ವ್ಯಾಖ್ಯಾನದ ಮಾಧುರ್ಯಕ್ಕೆ ಬೆಲೆಯನ್ನು ಕಟ್ಟಬಾರದು. ಥಿಯೆಟರ್ ಹಿಡಿಯಲಾರದಷ್ಟು ಜನಸಮ್ಮರ್ದವಾಗಿದ್ದ ಆ ಸಭೆಯಲ್ಲಿ ಚಿತ್ರದ ಬೊಂಬೆಯಂತೆ ಕೂತು ಅವರ ಪ್ರತಿಯೊಂದು ಸ್ವರವನ್ನೂ ಯಾರು ಆಲಿಸಿದರೊ ಅವರಿಗೆ ಮಾತ್ರ ಅದರ ಮಾಧುರ್ಯವು ಗೊತ್ತು. ಅವರು ಆ ಕಾಲದಲ್ಲಿ ಪ್ರತಿಪಾದನೆಮಾಡಿದ ಸಂಗತಿಗಳನ್ನೆಲ್ಲಾ ಒಟ್ಟುಗೂಡಿಸಿ ಸಿದ್ಧಗೊಳಿಸಿದ ಈ ಗ್ರಂಥವನ್ನು ನಾನು ಅವರೆದುರಿಗೆ ಆಮೂಲಾಗ್ರವಾಗಿ ಓದಿ ಅವರಿಂದ ಅಗತ್ಯವಾದ ತಿದ್ದುಪಾಟುಗಳನ್ನು ಮಾಡಿಸಿರುವೆನು. ಇದರ ಮೇಲೆ ಇನ್ನೂ ಎಲ್ಲಿಯಾದರೂ ಅಸಂಗತವಾದ ಮಾತುಗಳೇನಾದರೂ ಉಳಿದಿದ್ದರೆ ಅವುಗಳಿಗೆಲ್ಲಾ ನಾನು ಹೊಣೆಯೇ ಹೊರತು ವ್ಯಾಖ್ಯಾನಕರ್ತರಲ್ಲ.


ಇದು ಮೊನ್ನೆಮೊನ್ನೆ ಪ್ರಸಿದ್ಧವಾದ ಗೀತಾರಹಸ್ಯವೆಂಬ ಮಹಾರಾಷ್ಟ್ರ ಗ್ರಂಥದಲ್ಲಿ ಅದರ ಕರ್ತರಾದ ಶ್ರೀಯುತ ಬಾಲಗಂಗಾಧರತಿಲಕರವರು ಸಂಪ್ರದಾಯವನ್ನು ಮೂಲೆಗೊತ್ತರಿಸಿ ಕೇವಲ ತಮ್ಮ ಬುದ್ಧಿಶಕ್ತಿಯಿಂದ ಗೀತಾರ್ಥವನ್ನು ತಮ್ಮ ಅಭಿಪ್ರಾಯಕ್ಕೆ ತಕ್ಕಂತೆ ಕೂಡಿಸುವದಕ್ಕೆ ಹೋಗಿ ಎಲ್ಲೆಲ್ಲಿ ಮುಗ್ಗರಿಸಿರುವರೆಂಬುದನ್ನು ತೋರಿಸುವದಕ್ಕಾಗಿ ಈಗ ಬರೆದ ಗ್ರಂಥವೆಂಬಂತೆ ಭಗವದ್ಗೀತೆಯನ್ನು ಮೊದಲೇ ಸರ್ವತೋಮುಖದಿಂದ ವಿಚಾರಮಾಡಿದುದಾಗಿರುವದು. ಶ್ರೀಯುತ ತಿಲಕರು ಶ್ರೀಮಚ್ಛಂಕರಭಗವತ್ಪಾದರೇ ಮೊದಲಾದವರ ನಿಜವಾದ ಅಭಿಪ್ರಾಯವನ್ನು ತಿಳಿಯದೆ ಗಡಿಬಿಡಿಮಾಡಿಕೊಂಡು ಅವರ ಮೇಲೆ ಅಜ್ಞಾನವನ್ನಾರೋಪಿಸಿರುವದು ಸಂಪೂರ್ಣ ನಿರಾಧಾರವಾದುದೆಂದು ಈಪುಸ್ತಕದ ಎರಡನೇ ಮತ್ತು ಮೂರನೇ ವ್ಯಾಖ್ಯಾನಗಳನ್ನು ಓದಿದವರು ಯಾರೂ ಮನಗಾಣದೆ ಹೋಗಲಾರರು. ಗೀತಾರ್ಥದಲ್ಲಿ ತೋರಬಹುದಾದ ಎಷ್ಟೋ ಸಂಶಯಗಳ ಗಂಟುಗಳನ್ನು ಬಿಚ್ಚಿ ಶ್ರುತಿಸ್ಮೃತಿ ಮೊದಲಾದವುಗಳ ಪ್ರಮಾಣವಾಕ್ಯಗಳನ್ನೂ ಲೌಕಿಕವಾದ ಯುಕ್ತಿಗಳನ್ನೂ ಸಮಂಜಸವಾದ ಉದಾಹರಣೆಗಳನ್ನೂ ಸೂರೆಮಾಡುವ ಈ ವ್ಯಾಖ್ಯಾನಗಳನ್ನು ಕನ್ನಡಿಗರೆಲ್ಲರೂ ಅಗತ್ಯವಾಗಿ ಓದಬೇಕಾಗಿರುವದು.

ಈಗ್ರಂಥದ ಮುದ್ರಣಕ್ಕೆ ಪ್ರಾರಂಭಮಾಡಿದ ಸ್ವಲ್ಪ ಕಾಲದಲ್ಲಿಯೇ ನಾನು ಇದರ ಒಂದೆರಡು ವ್ಯಾಖ್ಯಾನಗಳನ್ನು ಬಿಡಿಬಿಡಿಯಾಗಿ ಪ್ರಕಟಿಸಿದೆ

ನಾದರೂ ದ್ರವ್ಯದ ಅನನುಕೂಲತೆಯಿಂದ ಈಪೂರ್ಣಗ್ರಂಥವನ್ನು ಪ್ರಸಿದ್ಧ ಮಾಡುವದಕ್ಕೆ ಇಷ್ಟುಕಾಲ ತಡವಾಗಬೇಕಾಯಿತು. ಇದುವರೆಗೆ ಪ್ರಜೆಗಳ ಪರಸ್ಪರ ಐಕಮತ್ಯ, ರಾಜರ ಮತ್ತು ಪ್ರಜೆಗಳ ಸಹಾನುಭೂತಿ, ಸ್ವದೇಶ ಮತ್ತು ವಿದೇಶಗಳ ಪರಸ್ಪರಮಿತ್ರತ್ವ, ಪೂರ್ವದೇಶೀಯರ ಮತ್ತು ಪಶ್ಚಿಮ ದೇಶೀಯರ ವಿಚಾರವಿಶೇಷಗಳ ಪರಸ್ಪರಸಮ್ಮೇಳನ, ಭಾರತೀಯಕಲಾ ವಿಶೇಷಗಳ ಉಜ್ಜೀವನ, ಸಂಸ್ಕೃತಭಾಷಾಭಿವೃದ್ಧಿ ಮತ್ತು ಧರ್ಮಪ್ರಸಾರ ಮೊದಲಾದವುಗಳಿಗಾಗಿಯೇ ನಿರಂತರಸಂಚಾರದಲ್ಲಿದ್ದ ನಮ್ಮ ಶ್ರೀಮಹಾಭಾಗ ವತರು ಇನ್ನುಮುಂದೆ ಮೇಲೆಕಂಡ ತಮ್ಮ ಉದ್ದೇಶಗಳನ್ನು ಅನಾಯಾಸ ದಿಂದ ಮೊದಲಿಗಿಂತ ಚೆನ್ನಾಗಿ ಸಾಗಿಸುವದಕ್ಕೆ ತಕ್ಕಂಥ ಒಂದು ಅನುಕೂಲ ಸಂಪತ್ತು ತಾನಾಗಿ ಹುಡುಕಿಕೊಂಡು ಬಂದು ನಿರ್ಬಂಧಗೊಳಿಸಿದ್ದರ ಮೇಲೆ ಆ ಅನುಕೂಲವಿಶೇಷವನ್ನು ಉಪಯೋಗಮಾಡಿಕೊಂಡು ತಮ್ಮ ಧ್ಯೇಯ ವನ್ನು ಬೆಳಿಸಬೇಕೆಂದು ಕೆಲವು ದಿವಸಗಳ ಹಿಂದೆ ಪರಮಪವಿತ್ರವಾದ ಚತುರ್ಥಾಶ್ರಮವನ್ನು ಸ್ವೀಕರಿಸಿ ಶ್ರೀವಿದ್ಯಾಶಂಕರಭಾರತಿಗಳೆಂಬ ನಾಮ ಧೇಯದಿಂದ ಶ್ರೀಕರವೀರಕ್ಷೇತ್ರದ ಶ್ರೀಜಗದ್ಗುರುಶಂಕರಾಚಾರ್ಯಪೀಠವನ್ನು ಆರೋಹಣಮಾಡಿ ಶ್ರೀಸಂಸ್ಥಾನದಿಂದ ದ್ರವ್ಯಸಹಾಯವನ್ನು ಮಾಡಲಾಗಿ ಈಗ ಈಗ್ರಂಥವು ಈ ರೀತಿಯಲ್ಲಿ ವಾಚಕಮಂಡಲಿಯ ಮುಂದಕ್ಕೆ ಬಂದಿರು ವದು. ಈ ವ್ಯಾಖ್ಯಾನಮಾಲೆಯಲ್ಲಿ ಮೊದಲನೆಯದನ್ನು ನಾನು ಪ್ರತ್ಯೇಕ ಪುಸ್ತಕವಾಗಿ ಪ್ರಕಟಿಸಿದಾಗ ಅದರಲ್ಲಿ ಶ್ರೀ ಮಹಾಭಾಗವತರ ವಿಚಾರದಲ್ಲಿ ನಾಲ್ಕು ಮಾತುಗಳನ್ನು ಬರೆದಿದ್ದೆನಲ್ಲದೆ ಗ್ರಂಥವು ಮುಗಿದ ಮೇಲೆ ಅವರ ಚರಿತ್ರೆಯನ್ನು ವಿಸ್ತಾರವಾಗಿ ತಿಳಿಸುವೆನೆಂದು ವಾಚಕರಿಗೆ ಮಾತು ಕೊಟ್ಟಿ ದ್ದೆನು. ಆರೀತಿಯಲ್ಲಿ ವಿಸ್ತಾರವಾದ ಚರಿತ್ರೆಯನ್ನು ಬರೆಯುವದು ಶ್ರೀ ಮಹಾಭಾಗವತರ ಮನಸ್ಸಿಗೆ ಬರದೆ ಇದ್ದದ್ದನ್ನು ನೋಡಿ ನಾನು ಆ ನನ್ನ ಉದ್ದೇಶವನ್ನು ನನ್ನ ಮನಸ್ಸಿನಿಂದ ದೂರಮಾಡಿದ್ದೆನು. ಇಷ್ಟರಲ್ಲಿ ಶ್ರೀ ಮಹಾಭಾಗವತರು ಐಹಿಕಸಂಬಂಧಗಳನ್ನೆಲ್ಲಾ ತೊರೆದು ಪರಮಹಂಸ ಸನ್ಯಾಸಿಗಳಾದ್ದರಿಂದ ಅವರ ಪೂರ್ವಾಶ್ರಮದ ವಿದ್ಯಮಾನಗಳನ್ನೆಲ್ಲಾ ಬರೆಯು ವದಕ್ಕೆ ಇದು ಸಮಯವೆಂದು ಯೋಚಿಸಿ ವಾಚಕರಿಗೆ ಅವರ ಚರಿತ್ರದ ಪರಿ ಚಯವು ಚೆನ್ನಾಗಿ ಆಗುವಂತೆ ಇಲ್ಲಿ ಕೆಲವು ಸಂಗತಿಗಳನ್ನು ಉಲ್ಲೇಖಿಸುತ್ತೇನೆ.

ಧಾರವಾಡ ಜಿಲ್ಹಾ ಗದಗ ತಾಲ್ಲೂಕು ಕುರ್ತಕೋಟಿಯಲ್ಲಿ ಋಗ್ವೇದೀ ದೇಶಸ್ಥಬ್ರಾಹ್ಮಣರಾದ ವತನದಾರ ಗೌಡಶ್ಯಾನುಭೋಗರ ಮನೆತನದಲ್ಲಿ ಲಿಂಗನಗೌಡರ ಹೆಸರಿನದೊಂದು ಮನೆ ಇದೆ. ಈ ಹೆಸರು ಶ್ರೀಮಹಾಭಾಗ ವತರ ಅಜ್ಜಂದಿರದು. ಲಿಂಗನಗೌಡರು ತಮ್ಮ ಹೆಸರು ಅಷ್ಟುಮಟ್ಟಿಗೆ ಜನರಿ ಗೆಲ್ಲಾ ಬಳಕೆಯಾಗುವ ಹಾಗೆ ಕೇವಲ ಸರಳಹೃದಯರಾಗಿಯೂ ಅತಿಥಿ ಗಳನ್ನು ಸಾಕ್ಷಾದ್ದೇವರೆಂದೇ ಭಾವಿಸುವಂಥವರಾಗಿಯೂ ಸಾಧುಸಜ್ಜನರಲ್ಲಿ ಅತಿಪ್ರೀತಿಯುಳ್ಳವರಾಗಿಯೂ ವಿಶೇಷವಾಗಿ ಅನ್ನದಾನವನ್ನು ಮಾಡುವದರಲ್ಲಿ ಪ್ರೇಮವುಳ್ಳವರಾಗಿಯೂ ಬಡಬಗ್ಗರ ವಿಷಯದಲ್ಲಿ ತುಂಬ ಕನಿಕರವನ್ನು ತೋರಿಸುವಂಥವರಾಗಿಯೂ ಇದ್ದರು. ಪ್ರತಿದಿನವೂ ದೇವಪೂಜಾವೈಶ್ವ ದೇವಾದಿಗಳಾದ ಮೇಲೆ ಊರಲ್ಲಿ ಮಾರ್ಗಸ್ಥರೆಲ್ಲಿಯಾದರೂ ಬಂದಿರುವರೊ ಹೇಗೆಂಬುವರ ವಿಚಾರವನ್ನು ನಡೆಸಿ ಅವರನ್ನು ಬರಮಾಡಿಕೊಳ್ಳುವವರಿಗೂ ಅವರು ಊಟಮಾಡದೆ ಇದ್ದ ನಡವಳಿಕೆಯು ಈಗಲೂ ಅಲ್ಲಿಯ ಜನರ ಮನಸ್ಸಿನಲ್ಲಿ ಬಣ್ಣಗುಂದದೆ ಇರುವದು. ಇವರು ದಿವಂಗತರಾಗಿ ಸುಮಾರು ನಲವತ್ತು ವರ್ಷಗಳಾದರೂ ಇವರ ಜೀವಿತಕಾಲದಲ್ಲಿ ಇವರ ವಿಷಯದಲ್ಲಿ ಜನರ ಮನಸ್ಸಿನಲ್ಲಿ ಬಿಂಬಿಸಿದ್ದ ಸದ್ಭಾವವು ಆಜನರ ಮಕ್ಕಳುಮರಿಗಳ ರಕ್ತ ಪ್ರವಾಹದಲ್ಲೆಲ್ಲಾ ಹರಿದುಬಂದು ಇನ್ನೂ ಉಜ್ಜ್ವಲವಾಗಿ ಬೆಳಗುತ್ತಿರುವದರ ಪರಿಣಾಮದ ಮೇಲೆ ಆಗ ಅವರು ಜನಮಂಡಲಿಯಲ್ಲಿ ಎಷ್ಟರಮಟ್ಟಿಗೆ ಪ್ರೇಮ ಪಾತ್ರರಾಗಿದ್ದರೆಂಬುದನ್ನು ವಾಚಕರು ಊಹಿಸಿಕೊಳ್ಳಬೇಕು. ಧರ್ಮದಲ್ಲಿ ಹೆಚ್ಚು ಆಸಕ್ತಿಯುಳ್ಳ ಮನೆತನದಲ್ಲಿ ಧಾರ್ಮಿಕಸ್ವಭಾವದ ಉತ್ತಮ ಸಂತತಿ ಯುಂಟಾಗುವದೆಂಬ ನಿಯಮಕ್ಕೆ ತಕ್ಕ ಉದಾಹರಣೆಯೆಂಬಂತೆ ಲಿಂಗನಗೌಡ ರಿಗೆ ನಮ್ಮ ಶ್ರೀಮಹಾಭಾಗವತರು ಶಾ. ಶ. ೧೮೦೧ನೆ ಪ್ರಮಾಥಿ ಸಂವತ್ಸರದ ವೈಶಾಖ ಕೃಷ್ಣ ೧೪ ಮಂಗಳವಾರಕ್ಕೆ ಸಲ್ಲುವ ಕ್ರಿ. ಶ. ೧೮೭೯ನೆ ಮೇ ೨೦ನೇ ತಾರೀಕಿನ ಶುಭದಿವಸ ಮುಮ್ಮಕ್ಕಳಾಗಿ ಹುಟ್ಟಿದರು. ಧಾರ್ಮಿಕ ರಾಗಿಯೂ ಸಾತ್ತ್ವಿಕರಾಗಿಯೂ ಇದ್ದ ಇವರ ತಂದೆಯವರಾದ ಮೇಲಗಿರಿ ಗೌಡರು ಇವರಿಗೆ ತಮ್ಮ ಹಿರಿಯರ ಹೆಸರನ್ನೇ ಇಟ್ಟು ಲಿಂಗನಗೌಡರೆಂದು ನಾಮಕರಣಮಾಡಿದರು. ಆಸಮಯದಲ್ಲಿ ಜ್ಯೋತಿಷ್ಕರು ಶಿಶುವಿನ ಜನನ

ಕಾಲವನ್ನು ಹಿಡಿದು ಹಾಕಿರುವ ಕುಂಡಲಿಯುನ್ನು ವಾಚಕರ ಅವಗಾಹನೆಗಾಗಿ ಈಕೆಳಗೆ ಕೊಟ್ಟಿರುತ್ತೇನೆ.




ಇದರಲ್ಲಿ ಗ್ರಹಗಳೆಲ್ಲಾ ಉತ್ತರಗೋಳದಲ್ಲಿರುವಿಕೆಯು ಇವರು ಮಹತ್ಕಾರ್ಯಗಳನ್ನು ಸಾಧಿಸಿ ಪ್ರಸಿದ್ಧಪುರುಷರಾಗುವರೆಂದು ಹೇಳುವ ದೊಡ್ಡ ಶುಭ ಸೂಚನೆಯಾಗಿರುವದೆಂದೂ ಅಧಿಕಾರಸ್ಥಾನಾಧಿಪತಿಯಾದ ಗುರು ಮಂಗಳನೊಡನೆ ನವಮಸ್ಥಾನದಲ್ಲಿರುವದೂ ಮತ್ತು ನವಮಸ್ಥಾನಾಧಿಪತಿಯಾದ ಶನಿಯು ಅಧಿಕಾರಸ್ಥಾನವಾದ ದ್ವಾದಶದಲ್ಲಿರುವದೂ ಸಾಮ್ರಾಜ್ಯಯೋಗವನ್ನು ವ್ಯಕ್ತಗೊಳಿಸುವವೆಂದೂ ಅಧಿಕಾರಸ್ಥಾನಾಧಿಪತಿಯು ಧರ್ಮಸ್ಥಾನವಾದ ಒಂಭತ್ತನೇ ಮನೆಯುಲ್ಲಿರುವದರಿಂದ ಧರ್ಮಸಾಮ್ರಾಜ್ಯಯೋಗವಿರುವದೆಂದೂ ಭವಿಷ್ಯತ್ತನ್ನು ಹೇಳಿ ಶಿಶುವಿಗೆ ಬ್ರಾಹ್ಮಣರೆಲ್ಲರೂ ಆಶೀರ್ವಾದ ಮಾಡಿದರು.

ಅಜ್ಜಂದಿರಾದ ಲಿಂಗನಗೌಡರ ಧಾರ್ಮಿಕಸ್ವಭಾವವು ವಂಶಪಾರಂಪರ್ಯವಾಗಿ ಹರಿದುಬಂದು ಈ ನಮ್ಮ ಲಿಂಗನಗೌಡರಲ್ಲಿ ಮೂರ್ತಿಗೊಂಡಿತೆಂಬುದನ್ನು ಇವರ ಚಿಕ್ಕಂದಿನ ನಡವಳಿಕೆಯೇ ತೋರಿಸುವದು. ಸಾಧಾರಣವಾಗಿ

ಮಕ್ಕಳು ತಮಗೇನಾದರೂ ಬೇಕಾದರೆ ಅದಕ್ಕಾಗಿ ಸುಮ್ಮನೆ ತಾಯಿತಂದೆ ಗಳನ್ನು ಹಿಡಿದುಕಾಡುವರು. ಈಲಿಂಗನಗೌಡರು ತಮಗೇನಾದರೂ ಬೇಕಾಗಿ ತೋರಿದರೆ "ದೇವಾ, ನನಗೆ ಈವಸ್ತು ದೊರೆಯುವಂತೆಮಾಡು" ಎಂದು ದೇವರಿಗೆ ಶರಣುಹೋಗುತ್ತಿದ್ದರು. ಅವರಿಗೆ ಬೇಕಾದುದನ್ನು ದೇವರೇ ಕೊಡ ಬೇಕು; ಬೇಡವಾದುದನ್ನು ದೇವರೇ ಬಿಡಿಸಬೇಕು. ಹೀಗೆ ಚಿಕ್ಕಂದಿನಿಂದಲೂ ಅವರಿಗೆ ದೇವರೊಡನೆಯೇ ಹೆಚ್ಚಿನ ಸಂಬಂಧ. ಈ ಸಂಬಂಧವು ತಿಳಿದು ಮಾಡಿದ್ದಾಗಿರಲಿ ತಿಳಿಯದೆ ಮಾಡಿದ್ದಾಗಿರಲಿ ಬೆಳೆಯುವ ಪೈರು ಮೊಳಕೆಯಲ್ಲಿ ಯೇ ಕಾಣುವದೆಂಬಂತೆ ಇವರಲ್ಲಿ ದೈವಿಕಪ್ರೇಮವು ಪ್ರತಿಯೊಂದು ಸಂದರ್ಭ ದಲ್ಲಿಯೂ ಹೊರಬೀಳುತ್ತಿತ್ತು. ಎಲ್ಲಿಯಾದರೂ ಭಜನೆಯಾಗಲಿ ಕೀರ್ತನ ವಾಗಲಿ ಪುರಾಣವಾಗಲಿ ನಡೆಯುವದೆಂದರೆ ಅಲ್ಲಿಗೆ ಇವರು ಹೋಗದೆ ಬಿಡು ತ್ತಿರಲಿಲ್ಲ. ಇವರ ಆಟಪಾಟಗಳುಕೂಡ ದೇವರ ಸಂಬಂಧವಾಗಿಯೇ ಇರು ತ್ತಿದ್ದವು. ಇತರ ಗೃಹಸ್ಥರಂತೆ ಇವರ ತಂದೆಯವರು ಇವರನ್ನು ತಮ್ಮ ಊರಿನ ಕನ್ನಡಶಾಲೆಯಲ್ಲಿ ಕಲಿಯಲಿಕ್ಕೆ ಕಳುಹಿಸಿದರು. ಅಲ್ಲಿ ಇತರ ಹುಡುಗ ರಂತೆ ಇವರಿಗೂ ಕನ್ನಡದ ಅಭ್ಯಾಸವು ನಡೆಯಿತು. ಆಮೇಲೆ ಎಂಟನೇ ವಯಸ್ಸಿನಲ್ಲಿ ಇವರಿಗೆ ಮುಂಜಿಯಾಯಿತು. ಇದಾದ ಸ್ವಲ್ಪ ದಿವಸಗಳಲ್ಲಿಯೇ ಬ್ರಹ್ಮೀಭೂತರಾದ ಶ್ರೀಶೃಂಗೇರೀ ಜಗದ್ಗುರು ಶಂಕರಾಚಾರ್ಯ ಶ್ರೀಸಚ್ಚಿದಾನಂದ ಶಿವಾಭಿನವನರಸಿಂಹಭಾರತೀಸ್ವಾಮಿಗಳವರ ಶ್ರೀಚರಣಧೂಳಿಯು ಇವರ ಮನೆಗೆ ಬೀಳುವ ಸುಯೋಗವು ಒದಗಿತು. ಶ್ರೀಸ್ವಾಮಿಗಳವರು ವಿದ್ವತ್ತಿ ನಲ್ಲಿಯೂ ತಪಶ್ಶಕ್ತಿಯಲ್ಲಿಯೂ ಈನಮ್ಮ ಭರತಖಂಡದಲ್ಲಿ ಅದ್ವಿತೀಯರಾಗಿದ್ದ ರೆಂಬ ಅಭಿಪ್ರಾಯವು ಈಗಲೂ ಎಲ್ಲರ ಮನಸ್ಸಿನಲ್ಲಿಯೂ ಹೊಸದಾಗಿದ್ದಂತೆ ಯೇ ಇದೆ. ಅವರ ಸವಾರಿಯು ಧಾರವಾಡ ಪ್ರಾಂತಕ್ಕೆ ಬಂದಾಗ ಅವರ ತಪ ಶ್ಚರ್ಯಕ್ಕೂ ಚಾತುರ್ಮಾಸ್ಯವ್ರತಕ್ಕೂ ಕುರ್ತಕೋಟಿಯು ಪ್ರಶಸ್ತವಾದದ್ದೆಂದು ಶ್ರೀಸ್ವಾಮಿಗಳವರು ಆರಿಸಿದರು. ದಿವಂಗತರಾದ ಲಿಂಗನಗೌಡರ ಧಾರ್ಮಿಕ ಪ್ರಭಾವವು ಫಲಿಸಿತೆಂದು ಜನರೆಲ್ಲರೂ ಅಂದುಕೊಳ್ಳುವಂತೆ ಶ್ರೀಶ್ರೀಗಳವರು ನಮ್ಮ ಈ ಲಿಂಗನಗೌಡರ ಮನೆಯಲ್ಲಿ ಪದಾರ್ಪಣಮಾಡಿ ಚಾತುರ್ಮಾಸ್ಯವ್ರತವನ್ನು ಹಿಡಿದರು. ಅವರ ವ್ರತವು ಸಾಂಗವಾಗುವವರಿಗೂ ಆ ಮಹನೀಯರ ಸೇವೆ

ಯನ್ನು ಮಾಡಿ ಧನ್ಯರಾಗುವ ಪರಮ ಪುಣ್ಯವು ಭಗವದನುಗ್ರಹದಿಂದ ನಮ್ಮ ಈ ಲಿಂಗನಗೌಡರ ತಂದೆಯವರಿಗೆ ಸಿಕ್ಕಿತು. ಪರಮಪೂಜ್ಯರಾದ ಆ ಶ್ರೀಗಳ ಪೂಜಾದಿಗಳನ್ನು ನೋಡುತ್ತ ಅವರ ಕೃಪಾಕಟಾಕ್ಷಕ್ಕೆ ಪಾತ್ರರಾಗಿ ಅವರ ತಪಶ್ಚರ್ಯೆಯಿಂದ ಪರಮಪವಿತ್ರವಾದ ವಾತಾವರಣದಲ್ಲಿ ನಲಿದಾಡುವ ಸುಯೋಗವು ನಮ್ಮ ಈಲಿಂಗನಗೌಡರದಾಗಿತ್ತು. ಇವರ ಬಾಲ್ಯಸ್ವಭಾವದ ಚಾಪಲ್ಯವನ್ನೂ ಒಳಗೆ ಅಡಗಿಕೊಂಡಿದ್ದ ಬುದ್ಧಿಶಕ್ತಿಯಪ್ರಭಾವವನ್ನೂ ನೋಡಿ ಪರಮಪ್ರೀತರಾಗಿ ಶ್ರೀಗಳು ಇವರ ಮೇಲೆ ಹೆಚ್ಚು ಕೃಪಾಕಟಾಕ್ಷವನ್ನು ಬೀರುತ್ತಿದ್ದರು. ಆಮೇಲೆ ಲಿಂಗನಗೌಡರು ಕುರ್ತಕೋಟಿಯ ಕನ್ನಡಶಾಲೆಯ ಅಭ್ಯಾಸವನ್ನೆಲ್ಲಾ ಮುಗಿಸಿಕೊಂಡು ಅಲ್ಲಿಂದ ಮುಂದೆ ಗದಗಿನಲ್ಲಿರುವ ಇಂಗ್ಲೀಷ್‌ಶಾಲೆಗೆ ಹೋದರು. ಅವರ ಮನಸ್ಸು ಧರ್ಮಸಂಬಂಧವಾದ ಅನುಷ್ಠಾನಗಳ ಕಡೆಗೆ ಹೆಚ್ಚಾಗಿ ಒಲಿಯುತ್ತಿದ್ದುದರಿಂದ ಅಲ್ಲಿ ಅವರ ಅಭ್ಯಾಸವು ಅವರ ಬುದ್ಧಿಶಕ್ತಿಗೆ ಅನುಗುಣವಾದಷ್ಟೇನೂ ಸಾಗುತ್ತಿರಲಿಲ್ಲ. ಶಾಲೆಯ ರಜಾಕಾಲದಲ್ಲಿ ಇವರು ಊರಿಗೆ ಬಂದಾಗ ಯಾವಾಗ ನೋಡಿದರೂ ಇವರಲ್ಲಿ ಧರ್ಮವಿಚಾರದ ಉತ್ಸುಕತೆಯೇ ತುಂಬಿತುಳುಕುತ್ತಿತ್ತು. "ಮನಸ್ಸಿದ್ದಕಡೆ ದಾರಿ" ಎಂಬ ಗಾದೆಗೆ ಸರಿಯಾಗಿ ಪೂರ್ವಜನ್ಮದ ಸಂಸ್ಕಾರಫಲವೆಂಬಂತೆ ನಮ್ಮ ಈ ಲಿಂಗನಗೌಡರಿಗೆ ಧರ್ಮಸಂಬಂಧವಾದ ಅನುಷ್ಠಾನಗಳ ಅನುಕೂಲತೆಗಳೂ ತಾವಾಗಿ ಮುಂದೆ ಬಂದು ನಿಲ್ಲುತ್ತಿದ್ದವು. ಇದಕ್ಕೆ ಉದಾಹರಣೆಯಾಗಿ ಆಕಾಲದಲ್ಲಿ ಗಗನಾಚಾರ್ಯರೆಂಬ ಮಹನೀಯರು ಆ ಗ್ರಾಮಕ್ಕೆ ಬಂದಿದ್ದರು. ಅವರು ಮದರಾಸು ವಿಶ್ವವಿದ್ಯಾಲಯದ ಎಫ್. ಎ. ಪರೀಕ್ಷೆಯನ್ನು ಕೊಟ್ಟವರಾಗಿಯೂ ಸಂಸ್ಕೃತದಲ್ಲಿ ಉತ್ತಮ ಪಾಂಡಿತ್ಯವನ್ನು ಪಡೆದವರಾಗಿಯೂ ಮಹಾಯೋಗಿಗಳೆಂದು ಹೆಸರುಗೊಂಡವರಾಗಿಯೂ ಇದ್ದು ಮಹಾವಿರಕ್ತರಾಗಿ ಮಾಧುಕರೀವೃತ್ತಿಯಿಂದ ತಮ್ಮ ಜೀವಿಕೆಯನ್ನು ಸಾಗಿಸಿಕೊಳ್ಳುತ್ತ ತಮ್ಮ ಅನುಷ್ಠಾನವನ್ನು ತಾವು ಸಾಗಿಸಿಕೊಂಡು ವಿರಾಮಕಾಲದಲ್ಲಿ ಜನರಿಗೆ ಧರ್ಮಗ್ರಂಥಗಳ ಅರ್ಥವನ್ನು ಮನಸ್ಸಿಗೆ ಹಿಡಿಯುವಂತೆ ಹೇಳುತ್ತಿದ್ದರು. ಇವರ ನಡವಳಿಕೆಯು ನಮ್ಮ ಈಲಿಂಗನಗೌಡರನ್ನು ತನ್ನ ಕಡೆಗೆ ಎಳೆಯಿತು. ನಮ್ಮ ಲಿಂಗನಗೌಡರು ಇಂಗ್ಲೀಷ್‌ಶಾಲೆಯ ರಜಾಕಾಲದಲ್ಲಿ ಊರಿಗೆ ಬಂದಾಗಲೆಲ್ಲಾ ಗಗನಾಚಾರ್ಯರ

ಮನಸ್ಸನ್ನು ತಮ್ಮ ಕಡೆಗೆ ಒಲಿಸಿಕೊಳ್ಳುವ ಲಕ್ಷಣಗಳು ಅವರಲ್ಲಿ ಕಾಣು ತ್ತಿದ್ದವು. ಕೊನೆಗೆ ಗಗನಾಚಾರ್ಯರು ಈನಮ್ಮ ಗೌಡರ ಸಚ್ಛೀಲವನ್ನು ನೋಡಿ ತಾವಾಗಿ ಅವರಿಗೆ ಪ್ರಾಣಾಯಾಮವನ್ನು ಹೇಳಿಕೊಟ್ಟರು. ಅಂದಿನಿಂದ ಇವರು ಇದನ್ನು ಇತರರಿಗೆ ತಿಳಿಯಗೊಡದೆ ಎಡೆಬಿಡದೆ ಪ್ರಾಣಾಯಾಮದ ಅಭ್ಯಾಸವನ್ನು ನಡೆಸುತ್ತಬಂದರು. ಹೀಗೆ ಇವರ ಮನೋವೃತ್ತಿಯು ದೇವರ ಕಡೆಗೆ ಬೆಳೆಯುವ ಲಕ್ಷಣಗಳೇ ಕಣ್ಣಾರೆ ಕಾಣುತ್ತಿದ್ದರೂ ಇವರ ತಂದೆ ಯುವರು ತಮ್ಮ ಮಗನ ಗೃಹಸ್ಥಾಶ್ರಮವನ್ನು ನೋಡಬೇಕೆಂಬ ಕುತೂಹಲ ದಿಂದ ಇವರ ೧೨-೧೩ನೇ ವಯಸ್ಸಿನಲ್ಲಿಯೇ ಇವರಿಗೊಬ್ಬ ಕುಲೀನವಾದ ಮನೆತನದ ಕನ್ಯೆಯನ್ನು ತಂದು ವಿವಾಹಮಾಡಿದರು. ಆಮೇಲೆ ಗದಗಿನ ಇಂಗ್ಲೀಷ್ ಶಾಲೆಯ ಅಭ್ಯಾಸವೂ ಮುಗಿಯಿತು. ಅಲ್ಲಿಂದ ಇವರ ತಂದೆಯುವರು ಇವರನ್ನು ಧಾರವಾಡಕ್ಕೆ ಕಳುಹಿಸಿ ಅಲ್ಲಿಯ ಹೈಸ್ಕೂಲಿನಲ್ಲಿ ಓದುವದಕ್ಕೆ ಇಟ್ಟರು. ಆಗ ಇವರ ಗುಣವಿಶೇಷಗಳು ಒಂದೊಂದಾಗಿ ಹೊರಬೀಳುವದಕ್ಕೆ ಮೊದಲು ಮಾಡಿದವು. ಓದುವದಕ್ಕೆ ಪುಸ್ತಕಗಳಿಲ್ಲದಂಥ ಮತ್ತು ಊಟಕ್ಕೆ ದುಡ್ಡಿಲ್ಲದಂಥ ವಿದ್ಯಾರ್ಥಿಗಳನ್ನು ಕಂಡರೆ ಇವರು ನನ್ನವರು ಇವರು ಪರರೆಂದು ನೋಡದೆ ತಮ್ಮ ದುಡ್ಡಿನಿಂದ ಅವರಿಗೆ ಪುಸ್ತಕಗಳನ್ನು ಕೊಡಿಸುವದೂ ಅನ್ನವನ್ನು ಹಾಕಿಸುವದೂ ಮೊದಲಾದ ರೀತಿಯಿಂದ ಇವರು ಎಲ್ಲರನ್ನೂ ತಮ್ಮವರನ್ನಾಗಿ ಭಾವಿಸುತ್ತಿದ್ದರು. ಇವರ ಈ ನಡವಳಿಕೆಯಿಂದ ವೆಚ್ಚವು ಮಿತಿಮೀರಿದರೂ ಇವರ ತಂದೆಯುವರು ಸಹಜವಾಗಿ ಉದಾರಿಗಳಾಗಿದ್ದುದರಿಂದಲೂ ಮಗನ ಮೇಲಿನಮುದ್ದಿನಿಂದಲೂ ಇವರು ಬೇಡಿದಷ್ಟು ಹಣವನ್ನು ಕಳುಹಿಸುತ್ತಿದ್ದರು. ಇಷ್ಟಾದರೂ ಇವರ ವ್ಯಾಸಂಗವೇನೂ ವಿಶೇಷವಾಗಿ ಸಾಗುತ್ತಿರಲಿಲ್ಲ. ಇವರ ಮನಸ್ಸಿಗೆ ಏನಾದರೊಂದು ಹಿಡಿದರೆ ಅದು ಕೊನೆಮುಟ್ಟುವವರಿಗೂ ಅದರಲ್ಲಿ ತನ್ಮಯರಾಗಿರುವದೇ ಇವರ ಸ್ವಭಾವ. ಹೊರಗಣವರ ದೃಷ್ಟಿಯಿಂದ ಇವರು ಆಂಗ್ಲ ಭಾಷಾಭ್ಯಾಸದಲ್ಲಿ ತೊಡಗಿದವರಾಗಿ ಕಂಡರೂ ಅಂತರಂಗದಲ್ಲಿ ಇವರ ಮನಸ್ಸು ಯೋಗಾಭ್ಯಾಸದಲ್ಲಿ ಮುಳುಗಿಹೋಗಿತ್ತು. ಇವರು ತಮ್ಮ ವಿರಾಮ ಕಾಲದಲ್ಲೆಲ್ಲಾ ವಿಜನವಾದ ಒಂದುಕಡೆ ಕುಳಿತು ಸುಮ್ಮನೆ ಯೋಗಾಭ್ಯಾಸ ವನ್ನು ಸಾಧಿಸುತ್ತಿದ್ದರು. ಶಾಲೆಗೆ ಕೂಡ ನಿಯಮಿತತನದಿಂದ ಹೋಗುತ್ತಿರ

ಲಿಲ್ಲ. ಆದರೂ ಗ್ರಹಣಶಕ್ತಿ ಮತ್ತು ವಿಚಾರಶಕ್ತಿ ಬಹು ಚೆನ್ನಾಗಿದ್ದದ್ದರಿಂದ ಇತರರಿಗಿಂತ ಇವರಿಗೆ ಪಾಠದ ಸಂಗತಿಯೆಲ್ಲಾ ಚೆನ್ನಾಗಿ ಗೊತ್ತಾಗಿರುತ್ತಿತ್ತು. ಅದರಲ್ಲಿಯೂ ಇವರಿಗೆ ಇತರ ಪಾಠಗಳಿಗಿಂತಲೂ ಆಂಗ್ಲಭಾಷಾಜ್ಞಾನವು ಬಹು ಚನ್ನಾಗಿ ಹಿಡಿದಿರುತ್ತಿತ್ತು. ಹೀಗಿರುವಾಗ ಇವರ ಈ ಬಗೆಯಾದ ಶಾಲಾವ್ಯಾಸಂಗಕ್ಕೊಂದು ಅಡ್ಡಬಂತು. ಏನಾದರೊಂದನ್ನು ತಿಳಿಯಬೇಕೆಂದು ಮನಸ್ಸಿಗೆ ಬಂದರೆ ಅದನ್ನು ಆಮೂಲಾಗ್ರವಾಗಿ ಶೋಧಿಸಿಬಿಡುವದು ಇವರ ಸ್ವಭಾವ. ಇಂಗ್ಲಿಷ್‌ಶಾಲೆಯಲ್ಲಿ ಸಂಸ್ಕೃತಪಾಠವನ್ನು ಓದುವಾಗ ಇವರು ಪ್ರತಿಯೊಂದು ಶಬ್ದಗಳ ಉತ್ಪತ್ತಿಯ ಕಡೆಗೂ ಕಣ್ಣುಹಾಕುತ್ತ ಬಂದರು. ಈ ಬಗೆಯ ಬುದ್ಧಿಗೆ ಒಪ್ಪುವಂತೆ ತಿಳಿಸಿಕೊಡುವ ಬೋಧಕರು ಆಸಮಯದಲ್ಲಿ ಒದಗಲಿಲ್ಲ. ಸಮಗ್ರವಾಗಿ ತಿಳಿಯದೆ ಸುಮ್ಮನೆ ಹಾಳೆಗಳನ್ನು ಮಗುಚಿಹಾಕುವದು ಇವರ ಮನಸ್ಸಿಗೆ ಬರಲಿಲ್ಲ. ಆದ್ದರಿಂದ ಜುಗುಪ್ಸೆಯುಂಟಾಗಿ ಇವರು ಶಾಲಾವ್ಯಾಸಂಗದಿಂದ ಮನಸ್ಸನ್ನು ಹಿಂದಿರುಗಿಸಿ ತಮ್ಮ ಮನೋಗತವನ್ನು ತಮ್ಮ ತಂದೆಗೆ ಬರೆದರು. ಆಪತ್ರದ ಸಾರಾಂಶವೇನೆಂದರೆ:—“ಯಾರು ಹೊಟ್ಟೆಗಾಗಿ ದುಡಿಯಬೇಕಾಗಿದೆಯೊ ಅವರು ಈಕಾಲದಲ್ಲಿ ಇಂಗ್ಲೀಷನ್ನು ಓದಬೇಕಾದ್ದು ಅಗತ್ಯ. ದೇವರು ನಮಗೆ ಅನ್ನಬಟ್ಟೆಗೆ ತಕ್ಕಷ್ಟು ಕೊಟ್ಟಿರುತ್ತಾನೆ. ಇದನ್ನು ನೋಡಿದರೆ ನಮ್ಮ ಆಯುಸ್ಸನ್ನೆಲ್ಲಾ ಇಂಗ್ಲೀಷುಭಾಷೆಯ ವ್ಯಾಸಂಗಕ್ಕಾಗಿ ಕಳೆಯುವದು ದೇವರ ಇಚ್ಛೆಯಲ್ಲಿದ್ದಂತೆ ತೋರುವದಿಲ್ಲ. ಅದಕ್ಕಿಂತ ಹೆಚ್ಚಿನದನ್ನು ನಾವು ಅವಲಂಬಿಸಲೆಂದು ಭಗವದಿಚ್ಛೆ ಇರಬಹುದು. ಅದ್ದರಿಂದ ನಾವು ನಮ್ಮ ಪೂರ್ವಜಪುಣ್ಯಪುರುಷರ ಪವಿತ್ರಭಾಷೆಯಾದ ಸಂಸ್ಕೃತದ ಕಡೆಗೆ ಲಕ್ಷ್ಯವನ್ನು ಕೊಡಬೇಕು. ಹೊಟ್ಟೆಗಾಗಿ ದುಡಿಯಬೇಕಾದ ಅಗತ್ಯವಿಲ್ಲದೆ ಇರುವವರು ಕೂಡ ಸಂಸ್ಕೃತವನ್ನು ಕಡೆಗಾಣುವದಾದರೆ ಇನ್ನು ಅದನ್ನು ಯಾರು ಆಶ್ರಯಿಸಬೇಕು! ಆದ್ದರಿಂದ ನಾನು ಇನ್ನು ಮೇಲೆ ನನ್ನ ಆಯುಷ್ಯವನ್ನೆಲ್ಲಾ ಸಂಸ್ಕೃತಭಾಷೆಗಾಗಿ ಧಾರೆಯೆರೆಯಬೇಕೆಂದಿದ್ದೇನೆ. ಈ ಕಾರಣದಿಂದ ನಾನು ಇನ್ನು ಆಂಗ್ಲಭಾಷಾಶಾಲೆಗೆ ನಮಸ್ಕಾರವನ್ನು ಹಾಕಿ ಮನೆಗೆ ಬರುವದಕ್ಕೆ ಅನುಜ್ಞೆಯನ್ನು ಕೊಡಬೇಕು” ಹೀಗೆ ಅದರಲ್ಲಿ ಬರೆದಿತ್ತು. ಈ ಅಭಿಪ್ರಾಯವು ಇವರ ತಂದೆಯವರ

ಮನಸ್ಸಿಗೆ ಅಷ್ಟೊಂದು ರುಚಿಸಲಿಲ್ಲ. ಏಕೆಂದರೆ ತಮ್ಮ ಮಗನು ಇಂಗ್ಲೀಷ್ ಭಾಷೆಯನ್ನು ಕಲಿತು ಲಾಯರ್ ಆದದ್ದನ್ನು ನೋಡಬೇಕೆಂದು ಅವರ ಆಶೆ ಇತ್ತು. ಇಷ್ಟು ಹೊತ್ತಿಗೆ ಮಗನ ಮನಸ್ಸು ಧರ್ಮದ ಕಡೆಗೆ ಹೆಚ್ಚಾಗಿ ಒಲಿದಿದ್ದದ್ದೂ ಅವರಿಗೆ ತಿಳಿದಿದ್ದದ್ದರಿಂದ ಮಗನು ಪ್ರಪಂಚದ ಕಡೆಯ ಲಕ್ಷ್ಯ ವುಳ್ಳವನಾಗಿ ಮನೆಯಲ್ಲಿದ್ದರೆ ಸಾಕೆಂದು ಯೋಚಿಸಿ ಮಗನ ಅಭಿಪ್ರಾಯಕ್ಕೆ ತಮ್ಮ ಸಮ್ಮತಿಯನ್ನು ಕೊಟ್ಟರು. ಒಡನೆಯೇ ಈ ನಮ್ಮ ಲಿಂಗನಗೌಡರು ಊರಿಗೆ ಬಂದು ಸಂಸ್ಕೃತಭಾಷೆಯ ಅಭ್ಯಾಸವನ್ನು ಕೈಗೊಂಡರು. ಇವರ ಸೌಕಾರ್ಯಕ್ಕಾಗಿ ಮೇಲಗಿರಿಗೌಡರು ಮನೆಯಲ್ಲಿ ಒಳ್ಳೇ ಶಾಸ್ತ್ರಜ್ಞರನ್ನು ತಂದಿಟ್ಟರು. ಆಗ ಅವರಿಂದ ಇವರಿಗೆ ಸಾಹಿತ್ಯದಲ್ಲಿಯೂ ವ್ಯಾಕರಣದಲ್ಲಿ ಯೂ ಮತ್ತು ತರ್ಕದಲ್ಲಿಯೂ ವ್ಯಾಸಂಗವು ನಡೆಯಿತು. ಪಾಠವನ್ನು ಹೇಳಿಕೊಡುವದಕ್ಕೆ ಪಂಡಿತರಿದ್ದರೂ ಅವರ ಪಾಂಡಿತ್ಯವು ಬೆರಳು ತೋರಿಸಿ ದರೆ ಹಸ್ತವನ್ನು ನುಂಗುವ ಇವರ ಆಕ್ಷೇಪಗಳಿಗೆಲ್ಲಾ ತಕ್ಕ ಸಮಾಧಾನ ವನ್ನು ಮಾಡಿಕೊಡುವದಕ್ಕೆ ಸಾಲುತ್ತಿರಲಿಲ್ಲ. ಆಗ ಇವರು ತಮ್ಮ ಸಂಶಯಗಳನ್ನೆಲ್ಲಾ ಕಲ್ಕತ್ತೆಯಲ್ಲಿದ್ದ ಜೀವಾನಂದವಿದ್ಯಾಸಾಗರ ಮೊದಲಾದ ವರಿಗೆ ಬರೆದು ಅವರ ಲೇಖನಗಳ ಮೂಲಕ ಸಮಾಧಾನವನ್ನು ಪಡೆದು ಕೊಳ್ಳುತ್ತಿದ್ದರು. ಹೀಗೆಮಾಡಿ ಸಾಹಿತ್ಯ ವ್ಯಾಕರಣಾದಿ ಜ್ಞಾನವನ್ನುಂಟು ಮಾಡಿಕೊಂಡ ಮೇಲೆ ವೇದಾಂತವಿಚಾರದ ಕಡೆಗೆ ಮನಸ್ಸು ಹೊರಳಿತು. ಆಗ ಅವರು ಸ್ವಪ್ರಯತ್ನದಿಂದಲೇ ವೇದಾಂತದ ಮರ್ಮವನ್ನು ಕರತಲಾಮಲಕವಾಗಿ ತಿಳಿದು "ಸಚ್ಚಿದಾನಂದಸ್ತವ"ವೆಂಬದೊಂದು ಪದ್ಯಗ್ರಂಥವನ್ನು ಪ್ರಕಾಶಮಾಡಿ ದರು. ಆಗ ಆ ಗ್ರಂಥವನ್ನು ಕಲ್ಕತ್ತೆಯ ಪ್ರಸಿದ್ಧಪಂಡಿತರಾದ ಜೀವಾನಂದ ವಿದ್ಯಾಸಾಗರ ಭಟ್ಟಾಚಾರ್ಯ, ಬಿ. ಎ. ಮತ್ತು ಪ್ರಬುದ್ಧಭಾರತವೆಂಬ ಆಂಗ್ಲ ಭಾಷಾ ಮಾಸಪತ್ರಿಕೆಯ ಸಂಪಾದಕರೇ ಮೊದಲಾದವರು ಇವರ ಮೇಲೆ ಎಷ್ಟೋ ಧನ್ಯವಾದಗಳನ್ನು ಸೂರೆಮಾಡಿರುವರು. ಹೀಗೆ ವೇದಾಂತವಿಚಾರವು ಮನಸ್ಸಿಗೆ ಹಿಡಿಯುತ್ತಲೇ ಸ್ವಭಾವಸಿದ್ಧವಾಗಿಯೇ ಇವರಿಗೆ ಶ್ರೀಮಚ್ಛಂಕರ ಭಗವತ್ಪಾದರಲ್ಲಿದ್ದ ಪ್ರೀತಿಯು ಚೆನ್ನಾಗಿ ಪುಷ್ಟಿಗೊಂಡಿತು. ಆಗಲೇ ಅವರು ಹುಬ್ಬಳ್ಳಿಯಲ್ಲಿ "ಶ್ರೀಶಂಕರಾಚಾರ್ಯಉತ್ಸವ ಕಮಿಟಿ" ಎಂಬದೊಂದು ಸಂಸ್ಥೆ

ಯನ್ನು ಸ್ಥಾಪಿಸಿದರು. ಈಗಲೂ ಆ ಸಂಸ್ಥೆಯವರು ಪ್ರತಿವರ್ಷವೂ ಶ್ರೀ ಶಂಕರಜಯಂತಿಯ ಉತ್ಸವವನ್ನು ಬಹುವಿಜೃಂಭಣೆಯಿಂದ ನಡೆಸುವರಲ್ಲದೆ ಆ ಕಾಲದಲ್ಲಿ ಪರಸ್ಥಳಗಳಿಂದ ದೊಡ್ಡದೊಡ್ಡ ವಿದ್ವಾಂಸರನ್ನು ಬರಮಾಡಿಕೊಂಡು ಅವರ ಮೂಲಕವಾಗಿ ಶ್ರೀಮಚ್ಛಂಕರಾಚಾರ್ಯರವರ ಸಿದ್ಧಾಂತಗಳನ್ನು ಜನರಿಗೆ ತಿಳಿಸುವದರಿಂದಲೂ ಮತ್ತು ಕೆಲಕೆಲವು ಗ್ರಂಥಗಳನ್ನು ದೇಶಭಾಷೆಗೆ ತಿರುಗಿಸಿ ಪ್ರಚಾರಮಾಡುವದರಿಂದಲೂ ಆಚಾರ್ಯಸೇವೆಯನ್ನು ಮಾಡು ತ್ತಿದ್ದಾರೆ. ಆಮೇಲೆ ಅವರು ಸಂಸ್ಕೃತವನ್ನು ಮತ್ತಷ್ಟು ಬೆಳಸಿಕೊಂಡು ವೇದಾಂತವನ್ನು ಆಮೂಲಾಗ್ರವಾಗಿ ಕಲಿತುಕೊಂಡು ಬರಬೇಕೆಂದು ತಮ್ಮ ಸುಮಾರು ಇಪ್ಪತ್ತನೇ ವಯಸ್ಸಿನಲ್ಲಿ ಕಾಶಿ ಮತ್ತು ಕಲ್ಕತ್ತಾ ಕಡೆಗೆಹೋಗಿ ಅಲ್ಲಿ ಪ್ರಸಿದ್ಧ ಪಂಡಿತರಲ್ಲಿ ವೇದಾಂತವನ್ನು ಕಲಿತದ್ದಲ್ಲದೆ ತಾವು ಸಂಚಾರ ಮಾಡಿದ ಕಡೆಗಳಲ್ಲೆಲ್ಲಾ ಸಂಸ್ಕೃತಭಾಷೆಯಿಂದ ಅನೇಕ ವ್ಯಾಖ್ಯಾನಗಳನ್ನು ಕೊಟ್ಟು ತಮ್ಮ ವಿದ್ಯಾಕೌಶಲ್ಯವನ್ನು ಹೊರಪಡಿಸಿದರು. ಇವರು ಅಷ್ಟು ಚಿಕ್ಕ ವಯಸ್ಸಿನಲ್ಲಿ ಅಷ್ಟು ಚೆನ್ನಾಗಿ ಸಂಸ್ಕೃತಭಾಷೆಯಲ್ಲಿ ಗಂಗಾಪ್ರವಾಹ ದಂತೆ ಸರಸವಾಗಿ ಸಮಂಜಸವಾಗಿ ವಿಷಯಪ್ರತಿಪಾದನೆಮಾಡಿದ್ದನ್ನೂ ಇವರ ಗ್ರಂಥರಚನಾಕೌಶಲ್ಯವನ್ನೂ ನೋಡಿ ಕಲ್ಕತ್ತೆಯ ಮಹಾಮಹಾಪಂಡಿತ ರೆಲ್ಲರೂ ಸೇರಿ ಇವರಿಗೆ ಒಂದು ಯೋಗ್ಯತಾಪತ್ರದೊಡನೆ "ವಿದ್ಯಾಭೂಷಣ" ಎಂಬ ಬಿರುದನ್ನು ಕೊಟ್ಟರು. ಹೀಗೆ ಇವರು ತಮ್ಮ ಕೀರ್ತಿಚಂದ್ರಿಕೆಯನ್ನು ನಾಲ್ಕು ದಿಕ್ಕುಗಳಿಗೂ ಹರಡಿ ತಮ್ಮ ಊರಿಗೆ ಹಿಂದಿರುಗಿ ಬಂದು ಅಲ್ಲಿ ಎಷ್ಟೋ ಜನ ಒಳ್ಳೇ ವಿದ್ಯಾರ್ಥಿಗಳನ್ನು ತಮ್ಮ ಕಡೆಗೆ ಬರಮಾಡಿಕೊಂಡು ಅವರೆಲ್ಲರನ್ನೂ ತಮ್ಮ ಮನೆಯಲ್ಲಿಟ್ಟುಕೊಂಡು ಅವರಿಗೆಲ್ಲಾ ತಾವೇ ಪಾಠವನ್ನು ಹೇಳುತ್ತ ಬಂದರು. ಆಗ ಇವರಲ್ಲಿ ಕಲಿತ ಎಷ್ಟೋ ಜನರು ಈಗಲೂ ಆ ಪ್ರಾಂತದಲ್ಲಿ ಪ್ರಸಿದ್ಧಪಂಡಿತರೆನಿಸಿಕೊಂಡಿದ್ದಾರೆ. ಹೀಗೆ ತಮ್ಮ ಮನೆಯನ್ನೇ ಸಂಸ್ಕೃತ ಪ್ರೌಢವಿದ್ಯಾಲಯವಾಗಿಮಾಡಿದ್ದಲ್ಲದೆ ಆಗ ಕೊಲ್ಲಾಪುರದಿಂದ ಹೊರಡುತ್ತಿದ್ದ "ಸಂಸ್ಕೃತಚಂದ್ರಿಕೆ" ಎಂಬ ಮಾಸಪತ್ರಿಕೆಗೂ ಮಲಬಾರು ಪ್ರಾಂತದಲ್ಲಿ ಪ್ರಕಟವಾಗುತ್ತಿದ್ದ "ವಿಜ್ಞಾನಚಿಂತಾಮಣಿ" ಎಂಬ ಸಾಪ್ತಾಹಿಕಪತ್ರಿಕೆಗೂ ಆಗಾಗ ಅತ್ಯುತ್ತಮವಾದ ಸಂಸ್ಕೃತಲೇಖನಗಳನ್ನು ಕಳುಹಿಸುತ್ತಿದ್ದು ವೇ

ದಾಂತವಿಷಯಕವಾದ "ಸಿದ್ಧಾಂತಸಾರ"ವೆಂಬುದೊಂದು ಗದ್ಯಗ್ರಂಥವನ್ನು ಬರೆದು ಪ್ರಕಟಿಸಿದರು. ಈಗ್ರಂಥವನ್ನು ಪ್ರಬುದ್ಧಭಾರತಕಾರರೂ ವಿಜ್ಞಾನ ಚಿಂತಾಮಣಿಕಾರರೂ ಶ್ರೀಯುತ ಜೀವಾನಂದವಿದ್ಯಾಸಾಗರರೇ ಮೊದಲಾದ ವರೂ ಘಂಟಾಘೋಷವಾಗಿ ಹೊಗಳಿರುವರು. ಹೀಗೆ ವಿದ್ಯಾವಿಚಾರವು ಬೆಳೆಯು ತ್ತಿದ್ದುದರ ಜೊತೆಗೆ ಇವರು ಯೋಗಾಭ್ಯಾಸವನ್ನೂ ಮುಂದುವರಿಸುತ್ತಿದ್ದು ದಲ್ಲದೆ ತ್ರಿಕಾಲ ಸ್ನಾನಸಂಧ್ಯಾಗಾಯತ್ರೀಪುರಶ್ಚರಣ ಮೊದಲಾದ ಅನು ಷ್ಠಾನಗಳನ್ನು ವಿಶೇಷವಾಗಿ ನಡೆಸುತ್ತ ಪೂರ್ಣವಾದ ದೈವೀಸಂಪತ್ತನ್ನೂ ಸಂಪಾದನೆಮಾಡುತ್ತಿದ್ದರು. ಆಗ ಇವರಿಗೆ ಸ್ವಲ್ಪ ಓದಿದರೆ ಬಹಳ ತಿಳಿಯು ವಂತೆ ಆಗಿ ವೇದಾಂತವಿಚಾರದಂಥ ಕ್ಲಿಷ್ಟವಾದ ಗ್ರಂಥಗಳು ಪ್ರಥಮದರ್ಶನ ದಲ್ಲಿಯೇ ಪೂರ್ಣವಾಗಿ ತಿಳಿಯುತ್ತಿದ್ದುದನ್ನು ಲಕ್ಷ್ಯಕ್ಕೆ ತಂದುಕೊಂಡು ನೋಡಿ ದರೆ ಇವರ ಮನಸ್ಸು ಎಷ್ಟು ಶುದ್ಧವಾಗಿತ್ತೆಂಬುದು ತಿಳಿಯುತ್ತದೆ. ಇದರ ಜೊತೆಗೆ ಇವರಿಗೆ ಸ್ಮೃತಿಶಕ್ತಿಯು ಸ್ವಭಾವಸಿದ್ಧವಾಗಿ ಬಹು ಪ್ರಬಲವಾಗಿದ್ದು ಒಮ್ಮೆ ಕಣ್ಣಮುಂದೆ ಅಥವಾ ಕಿವಿಯ ಮುಂದೆ ಹಾದು ಹೋದಂಥ ಉತ್ತಮ ವಾದ ಸಂಗತಿಗಳು ಬೇಕಾದಾಗ ನೆನಪಿಗೆ ಬರುವದರಿಂದ ಇವರ ವ್ಯಾಖ್ಯಾನ ಕಾಲದಲ್ಲಿ ಸಮಯೋಚಿತವಾದ ಸದುಕ್ತಿಗಳು ಬೇಕಾದಷ್ಟು ಒದಗಿ ಜನರ ಮನಸ್ಸಿನ ಮೇಲೆ ಬಹುಉತ್ತಮವಾದ ಪರಿಣಾಮವನ್ನುಂಟುಮಾಡುವದಕ್ಕೆ ಸಾಧನವಾಯಿತು. ಹೀಗಾಗಿ ಪಂಡಿತ ಲಿಂಗೇಶ ವಿದ್ಯಾಭೂಷಣರೆಂಬ ಹೆಸರಿ ನಿಂದ ಇವರು ನಮ್ಮ ಭರತಖಂಡದ ಸಂಸ್ಕೃತವಿದ್ವನ್ಮಂಡಲಿಯ ಪ್ರಸಿದ್ಧ ಜನರಿ ಗೆಲ್ಲಾ ಚೆನ್ನಾಗಿ ಪರಿಚಿತರಾದರು. ಸಂಸ್ಕೃತಭಾಷಾಪ್ರವೀಣರಾಗಿ ಮಲ ಬಾರು ಪ್ರಾಂತದ ಎಟ್ಟನ್ ರಾಜರಾಗಿದ್ದ ಮಾನವಿಕ್ರಮರಾಜರು (His Highness Manavikrama, Ettan Rajah)ಕೂಡ ಇವರ ವಿದ್ಯೆಗೆ ಮೆಚ್ಚಿ ಇವರ ಸಂಗಡ ಸ್ನೇಹಭಾವದಿಂದ ವರ್ತಿಸುವದಕ್ಕೆ ಮೊದಲು ಮಾಡಿದರು. ಇವರಿಬ್ಬರಿಗೂ ಪರಸ್ಪರ ಎಷ್ಟೋ ಪತ್ರವ್ಯವಹಾರಗಳು ನಡೆದುವಲ್ಲದೆ ಕೆಲವು ಪತ್ರಗಳು "**घोषपुरमहाराज्ञीचारित्रं**" ಎಂಬ ಆ ರಾಜರ ತಾಯಿಯಾದ ಮಹಾರಾಣಿಯವರ ಚರಿತ್ರೆಯಲ್ಲಿ ಮುದ್ರಿಸಲ್ಪ ಟ್ಟಿವೆ. ಇವರ ವಿಷಯದಲ್ಲಿ ಆ ರಾಜರಿಗಿರುವ ಗೌರವವು ವಿಜ್ಞಾನಚಿಂತಾ ಮಣಿಯಲ್ಲಿ ಅವರೇ ಸಮಸ್ಯಾಪೂರಣ ಪ್ರಸಂಗದಿಂದ ಪ್ರಕಟಿಸಿರುವ—

"दुष्प्रापोत्तरपारमत्र विबुधैरालोडितं चामृत
प्रेप्साव्याकुलमानसैर्बहुविधार्थश्रीगभीराशयम् ।
शास्त्रांभोनिधिमप्रमत्तमतिरेवाभ्येत्यविद्वन्मणि
र्हैतागस्तिरिवांभसां निधिमयं लिंगेशशर्मापिबत् ॥"

ಎಂಬೀ ಪದ್ಯದಲ್ಲಿ— ಅಗಸ್ತ್ಯಋಷಿಗಳು ಸಮುದ್ರವನ್ನು ಪಾನಮಾಡಿದಂತೆ ಈ ಲಿಂಗೇಶ ವಿದ್ಯಾಭೂಷಣರು ಅಪಾರವಾದ ಶಾಸ್ತ್ರಸಾಗರವನ್ನು ಪಾನಮಾಡಿದ್ದಾರೆಂದು ವರ್ಣಿಸಿರುವದರಿಂದ ವ್ಯಕ್ತವಾಗುತ್ತದೆ. ಈ ರೀತಿಯಲ್ಲಿ ಮಲಯಾಳೆ, ವಂಗ, ಸಿಂಹಳ ಮೊದಲಾದ ದೂರದೂರದೇಶದ ಮಹಾಮಹಾಪಂಡಿತರ ಶ್ಲಾಘನೆಗೆ ಪಾತ್ರರಾಗಿ ಆಸೇತುಹಿಮಾಚಲದವರಿಗೂ ಹೆಸರುಗೊಂಡು ಸರಸ್ವತಿ ಮತ್ತು ಲಕ್ಷ್ಮಿಯರ ಸಮಾಗಮವು ಅಸಂಭವವೆಂಬ ನಾಣ್ಣುಡಿಯನ್ನು ಸುಳ್ಳು ಮಾಡುವವರಂತೆ ಇವರು ಪಿತ್ರಾರ್ಜಿತವಾದ ಧನಸಂಪತ್ತಿನ ಜೊತೆಗೆ ಸ್ವಾರ್ಜಿತವಾದ ವಿದ್ಯಾಸಂಪತ್ತನ್ನು ಕೂಡಿಸಿಕೊಂಡು ನಮ್ಮ ದೇಶಕ್ಕೊಂದು ಭೂಷಣಪ್ರಾಯರಾದರು. ಇವರ ಮನಸ್ಸಿಗೆ ಏನಾದರೊಂದು ಹಿಡಿದರೆ ಅದು ಕೊನೆಮುಟ್ಟುವವರಿಗೂ ಅದರಲ್ಲಿ ತನ್ಮಯರಾಗಿರುವದೇ ಇವರ ಸ್ವಭಾವವೆಂದು ನಾನು ಮೊದಲೇ ಸೂಚಿಸಿರುವದನ್ನು ವಾಚಕರು ಯಾವಾಗಲೂ ಲಕ್ಷ್ಯದಲ್ಲಿಟ್ಟಿರಬೇಕು. ಅದರಂತೆ ಸಂಸ್ಕೃತದಲ್ಲಿ ನೈಪುಣ್ಯವನ್ನು ಪಡೆಯಬೇಕೆಂದು ಮನಸ್ಸಿಗೆ ಬರುತ್ತಲೇ ಅದನ್ನು ಕೊನೆ ಮುಟ್ಟಿಸುವವರಿಗೂ ಅದರಲ್ಲಿ ಅವರು ತನ್ಮಯರಾಗಿದ್ದರು. ಇಲ್ಲಿಗೆ ಅವರ ಜೀವನಚರಿತ್ರೆಯಲ್ಲಿ ಮೊದಲನೆಯ ಅಂಕವು ಮುಗಿಯಿತೆಂದು ಹೇಳಬಹುದು.

ಈ ರೀತಿಯಲ್ಲಿ ಇವರು ಓದಿತಿಳಿಯಬೇಕಾವದ್ದನ್ನೆಲ್ಲಾ ತಿಳಿದ ಮೇಲೆ ಇವರ ಲಕ್ಷ್ಯವು ವೇದಾಂತದಲ್ಲಿ ಹೇಳಿದ ಅರ್ಥವನ್ನು ಅನುಭವಕ್ಕೆ ತಂದುಕೊಳ್ಳುವದರ ಕಡೆಗೆ ಹರಿಯಿತು. ಎಲ್ಲಿಯಾದರೂ ಸಾಧುಸತ್ಪುರುಷರಿದ್ದಾರೆಂದು ಸುದ್ದಿ ತಿಳಿದರೆ ಇವರು ಅವರ ಕಡೆಗೆ ಹೋಗದೆ ಇರುತ್ತಿರಲಿಲ್ಲ. ಇಷ್ಟರಲ್ಲಿ ಸತಾರಾ ಡಿಸ್ಟ್ರಿಕ್ಟ ಗೋಂದಾವಳಿಯ ಶ್ರೀಬ್ರಹ್ಮಚೈತನ್ಯ ಸದ್ಗುರು ಮಹಾರಾಜರೆಂದು ಹೆಸರುಗೊಂಡಿದ್ದ ಮಹಾಪುರುಷರು ಕುರ್ತಕೋಟಿಯ ಪ್ರಾಂತದಲ್ಲಿದ್ದ ಬೆಳಧಡಿ ಎಂಬ ಗ್ರಾಮಕ್ಕೆ ಬಂದರು. ಅಲ್ಲಿ ನಮ್ಮ ಲಿಂಗೇಶ

ವಿದ್ಯಾಭೂಷಣರು ಅವರ ದರ್ಶನಕ್ಕೆ ಹೋದರು. ಅವರಿವರಿಗೆ ಒಂದೆರಡು ಮಾತುಗಳಾಗುವದರೊಳಗೆ ಇವರ ಮನಸ್ಸು ಕರಗಿ ನೀರಾಗಿ ಅವರ ಕಡೆಗೆ ಹರಿಯಹೋಯಿತು. ಆದರೂ "ಶಿಷ್ಯನಿಗಿಂತ ಗುರುವಿನ ಜ್ಞಾನವು ಹೆಚ್ಚಿನದಾದ್ದರಿಂದ ಗುರುಗಳೇ ಬಂದು ನನ್ನನ್ನು ಕರೆದುಕೊಳ್ಳಬೇಕೇಹೊರತು ನೀವೇ ಗುರುವೆಂದು ನಾನಾಗಿ ಯಾರನ್ನೂ ಮಾಡಿಕೊಳ್ಳಲಾರೆನು" ಎಂದು ಇವರ ಪ್ರತಿಜ್ಞೆ ಇತ್ತು. ಭಗವದಂಶಸಂಭೂತರೆಂದು ನಾಲ್ಕುದಿಕ್ಕುಗಳಿಂದಲೂ ಹೊಗಳಿಸಿಕೊಳ್ಳುತ್ತಿದ್ದ ಆ ಸಾಧುವರ್ಯರು ಸಚ್ಛಿಷ್ಯರ ಪ್ರತಿಜ್ಞೆಯನ್ನು ಪೂರ್ಣಮಾಡುವದಕ್ಕೆ ಬಂದವರಂತೆ ಕುರ್ತಕೋಟಿಗೆ ಬಂದು ಮೇಲಗಿರಿ ಗೌಡರನ್ನು ಕಂಡು "ನಿಮ್ಮ ಮಗನನ್ನು ಕೆಲವು ದಿವಸ ನಮ್ಮಲ್ಲಿ ಬಿಡಿರಿ" ಎಂದು ಆಮಂತ್ರಣವನ್ನು ಕೊಟ್ಟರು. ತಮ್ಮ ಮಗನು ಸಂಸಾರದ ಕಡೆಗೆ ಮನಸ್ಸು ಹಾಕದೆ ಕಂಡಕಂಡ ಸಾಧುಗಳ ಕಡೆಗೆ ಓಡಿಹೋಗುತ್ತಿರುವದರಿಂದ ತಮ್ಮ ಮನಸ್ಸಿಗೆ ಕೊರತೆಯಾಗುತ್ತಿರುವದೆಂದು ಇವರ ಮಾತಾಪಿತೃಗಳಿಬ್ಬರೂ ಹೇಳಿಕೊಂಡರು. ಆಗ ಆ ಮಹಾಪುರುಷರು "ಇನ್ನು ಮೇಲೆ ಹಾಗೆ ಆಗದಂತೆ ಮಾಡಿಕೊಡುತ್ತೇನೆ" ಎಂದು ಮಾತುಕೊಟ್ಟು ಮಗನನ್ನು ಕಳುಹಿಸುತ್ತೇನೆಂದು ತಂದೆತಾಯಿಗಳ ಸಮ್ಮತಿಯನ್ನು ಪಡೆದು ತಮ್ಮ ಊರಿಗೆ ಹೋದರು. ಕೆಲವು ದಿವಸಗಳಲ್ಲಿಯೇ ನಮ್ಮ ಲಿಂಗೇಶವಿದ್ಯಾಭೂಷಣರು ತಮ್ಮ ಶ್ರೀಮಂತಗಿರಿಗೆ ತಕ್ಕಂತೆ ಉಡಿಗೆತೊಡಿಗೆ ಹಾಸಿಗೆ ಹೊದ್ದಿಕೆಗಳೊಡನೆ ಗೋಂದಾವಳಿಗೆ ಹೊರಟು ಕೋರೇಗಾಂವ ಎಂಬ ಸ್ಟೇಶನಕ್ಕೆ ಬಂದು ಇಳಿದರು. ಅಲ್ಲಿಗೆ ಗೋಂದಾವಳಿ ಮೂವತ್ತು ಮೈಲಿ. ಯಾವದನ್ನು ಹಿಡಿದರೆ ಅದರಲ್ಲಿ ತನ್ಮಯರಾಗುವ ಇವರ ಸ್ವಭಾವವು ಆ ಸಮಯದಲ್ಲಿ ಉಲ್ಬಣವಾಗುತ್ತಲೇ ಇವರು ಉಡುವ ಮತ್ತು ಹೊದಿಯುವ ಧೋತ್ರದ ಹೊರತು ಉಳಿದವುಗಳನ್ನೆಲ್ಲಾ ಕಂಡಕಂಡವರ ಪಾಲುಮಾಡಿ ಕಾಲು ನಡಿಗೆಯಿಂದ ಸದ್ಗುರುಮಹಾರಾಜರ ಆಶ್ರಯವನ್ನು ಸೇರಿದರು. ಆಮೇಲೆ ಇವರು ಶ್ರೀಮಂತಗಿರಿಯನ್ನು ಕನಸಿನಲ್ಲಿಯೂ ಕೂಡ ಕಂಡರಿಯದವರೆಂಬಂತೆ ಆ ಸದ್ಗುರುಮಹಾರಾಜರೆದುರಿಗೆ ದೀನವೇಷದಿಂದ ಇದ್ದದ್ದಲ್ಲದೆ ಆಹಾರನಿದ್ರಾದಿಗಳ ಸೌಖ್ಯವನ್ನು ಕೂಡ ತೊರೆದು ಕಟ್ಟಾದ ನಿಯಮದಿಂದ ೭-೮ವರ್ಷ ಗುರುಸೇವೆಯನ್ನು ಮಾಡಿ

ಕೊಂಡಿದ್ದರು. ಈ ಸಮಯದಲ್ಲಿ ಸದ್ಗುರುಗಳ ಸಂಬಂಧವಾಗಿ ತಾವು ಮಾಡಬಹುದಾದ ಸೇವೆ ಯಾವದು? ತಾವು ಮಾಡಬಾರದ ಸೇವೆ ಯಾವದು? ಎಂಬ ಭಾವನೆಯೇ ಅವರ ಮನಸ್ಸಿಗೆ ಬರುತ್ತಿರಲಿಲ್ಲ. ಆ ಸಮಯದಲ್ಲಿ ಅವರು ಮಾಡದೆ ಇದ್ದ ಸೇವೆಯೇ ಇಲ್ಲ. ನಡುನಡುವೆ ಆಮಹಾರಾಜರು ಒಮ್ಮೊಮ್ಮೆ ಇವರನ್ನು ಊರಿಗೆ ಕಳುಹಿಸಿದರೆ ಅವರ ವಿಯೋಗವನ್ನು ಸಹಿಸಲಾರದೆ ಕಣ್ಣೀರಿಡುತ್ತಿದ್ದರಲ್ಲದೆ ಅವರ ದೇಹವು ಊರಿಗೆ ಬಂದರೂ ಮನಸ್ಸೆಲ್ಲಾ ಮಹಾರಾಜರಲ್ಲಿಯೇ ನೆಲಸಿರುತ್ತಿತ್ತು. ಶ್ರೀಸದ್ಗುರುಮಹಾರಾಜರನ್ನಗಲಿ ಊರಲ್ಲಿರುವ ಸಮಯದಲ್ಲಿ ಊರ ಹೊರಗೆಲ್ಲಿಯೋ ಒಂದು ಏಕಾಂತ ಸ್ಥಳದಲ್ಲಿರುತ್ತ ಇವರ ಭಾಗಕ್ಕೆ ಹೊರಗಣ ಪ್ರಪಂಚವೇ ಇಲ್ಲವೆಂಬಂತೆ ಇವರು ಕೇವಲ ಅಂತರ್ಮುಖರಾಗಿರುತ್ತಿದ್ದರು. ಹೀಗೆ ಅವರು ಕೆಲವು ಕಾಲ ಸೇವೆಮಾಡಿದ ಮೇಲೆ ಆಮಹಾರಾಜರು ಇನ್ನು ಮೇಲೆ ಸೇವೆಮಾಡಬೇಡವೆಂದು ಹೇಳಿ ಇವರಿಗೆ ಮಹಾಭಾಗವತರೆಂದು ತಮ್ಮ ಪ್ರೀತಿಯ ಹೆಸರನ್ನಿಟ್ಟದ್ದಲ್ಲದೆ ಇನ್ನು ಮುಂದೆ ಅಜ್ಞಾತವಾಸವನ್ನು ಬಿಟ್ಟು ಹೊರಬಿದ್ದು ಧರ್ಮವನ್ನೂ ಧರ್ಮಕ್ಕೆ ಸಾಧನವಾದ ವಿದ್ಯೆಯನ್ನೂ ಬೆಳಸುವ ಕಾರ್ಯದಲ್ಲಿ ತೊಡಗೆಂದು ಆಶೀರ್ವಾದವನ್ನುಮಾಡಿ ಇವರನ್ನು ಊರಿಗೆ ಕಳುಹಿಸಿದರು. ಅಲ್ಲಿಂದ ಮುಂದೆ ಶ್ರೀಮಹಾಭಾಗವತರು ಗೋಂದಾವಳಿಗೆ ಬಂದಾಗಲೆಲ್ಲಾ ಇವರನ್ನು ಇದಿರುಗೊಳ್ಳುವದಕ್ಕೆ ಭಜನೆಯ ಮಂಡಲಿಯನ್ನು ಕಳುಹಿಸುತ್ತ ಇವರು ಮಹಾ ಭಗವದ್ಭಕ್ತರಾದ ಸಾಧುಗಳೆಂದು ಜನರಿಗೆ ತಿಳಿಯಹೇಳುತ್ತಿದ್ದರು ಶ್ರೀ ಮಹಾರಾಜರ ಶಿಷ್ಯಮಂಡಲಿಯೆಲ್ಲಾ ಇವರಲ್ಲಿ ಗುರುತ್ವಬುದ್ಧಿಯನ್ನಿಟ್ಟು ಬಹುಭಕ್ತಿಯಿಂದ ನಡೆದುಕೊಳ್ಳುವದಕ್ಕೆ ಮೊದಲುಮಾಡಿದರು. ಆಮೇಲೆ ಇವರು ಭಕ್ತಮಂಡಲಿಗೆಲ್ಲಾ ತಮ್ಮ ಉಪದೇಶದಿಂದ ಧರ್ಮಾಮೃತವನ್ನೆರೆಯುತ್ತಿದ್ದು ಒಮ್ಮೆ ಗೋಂದಾವಳೀ ಮಹಾರಾಜರನ್ನು ತಮ್ಮ ಊರಿಗೆ ಕರೆದುಕೊಂಡು ಬಂದು ಅವರಿಂದ ತಮ್ಮ ಊರಲ್ಲಿ ಶ್ರೀರಾಮಮಂದಿರವನ್ನು ಸ್ಥಾಪಿಸಿ ಅಲ್ಲಿ ಪೂಜಾ, ಭಜನ, ಉತ್ಸವ ಮೊದಲಾದವುಗಳನ್ನು ನಡೆಸುತ್ತ ಊರಲ್ಲಿ ನಿಂತರು. ಕಂಡಕಂಡ ಸಾಧುಗಳ ಕಡೆಗೆ ಇನ್ನು ಮುಂದೆ ಹೋಗದಂತೆ ಮಾಡಿಕೊಡುತ್ತೇನೆಂದು ಸದ್ಗುರುಮಹಾರಾಜರು ಇವರ ತಂದೆಗೆ ಕೊಟ್ಟಿದ್ದ

ವಾಗ್ದಾನವು ಈಗ ಸಾರ್ಥಕವಾಯಿತೆಂಬಂತೆ ಇನ್ನು ಮುಂದೆ ಇವರ ಮನಸ್ಸು ಶಾಂತವಾಗಿ ಇನ್ಯಾರ ಮುಂದೆಯೂ ದೇಹಿ ಎನ್ನದಂತೆ ಸಂಪೂರ್ಣ ತೃಪ್ತಿಯನ್ನು ಪಡೆದಿತ್ತೆಂಬುದು ಇವರ ನಡವಳಿಕೆಗಳಿಂದಲೂ ಮುಖಕಾಂತಿಯಿಂದಲೂ ಪ್ರಕಟವಾಯಿತು. ಇವರು ಕುರ್ತಕೋಟಿಯಲ್ಲಿ ನಿಂತಕಾಲದಲ್ಲಿ ಪರಸ್ಥಳಗಳಿಂದ ಎಷ್ಟೋ ಜನರು ಆಗಾಗ ಬಂದು ಧರ್ಮವಿಚಾರಗಳನ್ನು ನಡೆಸಿ ತಮ್ಮ ಸಂಶಯಗಳನ್ನೆಲ್ಲಾ ಕಳೆದುಕೊಂಡು ಸಮಾಧಾನಚಿತ್ತರಾಗಿ ಹೋಗುತ್ತಿದ್ದರು. ಎಷ್ಟೋ ಜನ ಆರ್ತರು ಬಂದು ಇವರ ಆಶ್ರಯದಲ್ಲಿದ್ದು ದೇವರ ಸೇವೆಯನ್ನು ಮಾಡಿಕೊಂಡು ಉತ್ತಮಸ್ಥಿತಿಯನ್ನು ಪಡೆದು ಹೋದರು. ಎಷ್ಟೋ ಜನ ವಿದ್ವಾಂಸರು ಬಂದು ಶಾಸ್ತ್ರವಿಚಾರಗಳನ್ನು ನಡೆಸಿ ಸಂಭಾವನೆಗಳನ್ನು ಪಡೆದು ಹೋದರು. ಎಷ್ಟೋ ಜನ ಕಾಲೇಜಿನ ವಿದ್ಯಾರ್ಥಿಗಳು ತಮ್ಮ ವಿರಾಮಕಾಲದಲ್ಲಿ ಇವರ ಬಳಿಗೆ ಬಂದು ತಮ್ಮ ಕಾಲೇಜಿನ ಸಂಸ್ಕೃತಗ್ರಂಥಗಳನ್ನು ಹೇಳಿಸಿಕೊಂಡು ಹೋಗುತ್ತಿದ್ದರು. ಹೀಗೆ ಬಂದುಹೋಗುವವರ ಊಟಉಪಚಾರ ಮೊದಲಾದವುಗಳಿಗೆಲ್ಲಾ ಶ್ರೀಮಹಾಭಾಗವತರು ತಕ್ಕ ವ್ಯವಸ್ಥೆಯನ್ನಿಟ್ಟು ಅನ್ನಸತ್ರವನ್ನೂ ಜ್ಞಾನಸತ್ರವನ್ನೂ ಕೂಡಿ ನಡೆಸುತ್ತಿದ್ದರು. ಈ ಸಂಧಿಕಾಲದಲ್ಲಿ ಇವರು ಪರಮಪುರುಷಾರ್ಥಸಿದ್ಧಿಗೆ ಭಕ್ತಿಯೇ ಸಾಧನವೆಂಬರ್ಥವನ್ನು ಪುಷ್ಟಿಗೊಳಿಸುವಂಥ ಅಷ್ಟೋತ್ತರ ಶತಶ್ಲೋಕೀ ಎಂಬ ಸಂಸ್ಕೃತಪದ್ಯಗ್ರಂಥವನ್ನು ಪ್ರಕಾಶಮಾಡಿದರು. ಈಗ್ರಂಥವು ನನ್ನಿಂದಲೇ ಕನ್ನಡಕ್ಕೆ ಭಾಷಾಂತರವಾಗಿ ಮೈಸೂರು ಸರಕಾರದಿಂದ ಕೂಡ ಉತ್ತೇಜನವನ್ನು ಪಡೆದು ಪ್ರಸಿದ್ಧವಾಗಿದೆ. ಈವ್ಯವಹಾರಗಳನ್ನು ನಡೆಸುವಾಗಲೆಲ್ಲಾ ಇವರು ಗುರುಗಳಿಗೆ ಶರಣುಹೋದಂದಿನ ದೀನವೇಷದಿಂದಲೇ ಇರುತ್ತಿದ್ದರು. ಈಸಮಯದಲ್ಲಿ ಇವರ ಜೀವನ ಚರಿತ್ರೆಯ ಎರಡನೇ ಅಂಕದ ಪರದೆ ಬೀಳುವದಕ್ಕೆ ತಕ್ಕ ಕಾರಣಗಳೊದಗಿದವು. ಸಾಧು ಸತ್ಪುರುಷರೆಂದರೆ ಜನರೆಲ್ಲರೂ ದೋಷದೃಷ್ಟಿಯಿಂದ ನೋಡುವಂಥ ದುಷ್ಕಾಲ ಒದಗಿದುದರಿಂದ ಸಾಧುತ್ವವನ್ನು ಆದರ ವೇಷದ ಮೂಲಕ ತೋರಗೊಡದೆ ಮುಚ್ಚಿಕೊಂಡಿರುವದು ಆಗತ್ಯವೆಂದೂ ಈಗ ಧರ್ಮಕ್ಕೆ ಏಳಿಗೆಯ ಕಾಲವಲ್ಲದ್ದರಿಂದ ಸಾಕ್ಷಾತ್ತಾಗಿ ಧರ್ಮವನ್ನು ಬೆಳೆಸುವದಕ್ಕೆ ಹೋಗುವದಕ್ಕಿಂತಲೂ ಅದಕ್ಕೆ ಸಾಧನವಾದ

ಸಂಸ್ಕೃತಭಾಷೆಯನ್ನು ಬೆಳೆಸಬೇಕೆಂದೂ ಶ್ರೀಸದ್ಗುರುಮಹಾರಾಜರು ಸೂಚನೆ
ಯನ್ನು ಕೊಟ್ಟದ್ದೊಂದು. ಸಾಧುಗಳೆಂದು ಹೇಳಿಸಿಕೊಳ್ಳುತ್ತಿದ್ದವರಲ್ಲಿ
ಕೆಲವರು ಸಾಧುವೃತ್ತಿಗೆ ವಿರೋಧವಾದ ಕೆಲಸಗಳನ್ನು ನಡೆಸಿದರೆಂದು ಜನರು
ಆಡಿಕೊಳ್ಳುತ್ತಿದ್ದದ್ದೊಂದು. ಈಗಿನ ಕಾಲದ ನಾಗರಿಕರು ಇವರ ದೀನ
ವೇಷವನ್ನು ನೋಡಿ "Plain living and high thinking"
ಎಂಬ ಆಂಗ್ಲೇಯರ ಉಕ್ತಿಯಂತೆ ಇವರು ವರ್ತನದಲ್ಲಿ ಯಾವ ಆಡಂಬರವೂ
ಇಲ್ಲದೆ ಇದ್ದು ವಿಚಾರದಲ್ಲಿ ವಿಶೇಷಸಂಪತ್ತನ್ನು ಹೊಂದಿರುವದನ್ನೊಂದು
ಅನ್ಯಾದೃಶವಾದ ಗುಣವೆಂದು ಭಾವಿಸಲರಿಯದೆ ಉಡಿಗೆಯ ಬೆಲೆಯ ಮೇಲೆ
ಬೆಲೆಯನ್ನು ಕಟ್ಟುತ್ತಿದ್ದದ್ದು ಇವರ ಅನುಭವಕ್ಕೆ ಬಂದದ್ದೊಂದು. ಈಕಾರಣ
ಗಳಿಂದ ಶ್ರೀಮಹಾಭಾಗವತರು ತಮ್ಮ ದೀನವೇಷವನ್ನು ಒಂದು ಮೂಲೆ
ಯಲ್ಲಿ ಮುದುರಿಟ್ಟು ಸಾಧುತನವನ್ನು ಹೃದಯದಲ್ಲಿ ಬಚ್ಚಿಟ್ಟು ಹೊರಗೆ
ನೋಡುವವರಿಗೆ ಸಾಮಾನ್ಯಗೃಹಸ್ಥರಂತೆ ಬೇಕುಬೇಕಾದ ಉಡುಪುಗಳನ್ನು
ಧರಿಸಿ ಪ್ರತಿಷ್ಠಿತಜನರ ಪರಿಚಯವನ್ನು ಪಡೆಯುತ್ತ ಸದ್ಗುರುಮಹಾ
ರಾಜರು ಸೂಚಿಸಿರುವ ಕಾರ್ಯಗಳನ್ನು ಸಾಧಿಸುವದಕ್ಕೆ ಬದ್ಧಕಂಕಣರಾಗಿ
ಮುಂದುವರಿದರು.

ಶ್ರೀಸದ್ಗುರುಮಹಾರಾಜರ ಇಚ್ಛೆಯು ನೆರವೇರಬೇಕಾದರೆ ಶ್ರೀಮ
ಚ್ಛಂಕರಭಗವತ್ಪಾದರು ಉದಾಹರಣೆಯನ್ನು ತೋರಿಸಿರುವಂತೆ ರಾಜಕೀ
ಯಾಧಿಕಾರಿಗಳ ಸಹಾನುಭೂತಿಯನ್ನು ಸಂಪಾದನೆಮಾಡಿಕೊಂಡು ಅದರ
ಮೂಲಕ ಧರ್ಮಪೀಠಗಳ ವರ್ಚಸ್ಸನ್ನು ಬೆಳೆಸತಕ್ಕದ್ದೇ ಸರಿಯಾದ ಮಾರ್ಗ
ವೆಂದು ಯೋಚಿಸಿ ಮೈಸೂರು ದೇಶದಲ್ಲಿರುವ ಕೂಡಲೀಮಠವೆಂಬ ಶ್ರೀ
ಶಂಕರಾಚಾರ್ಯ ಸಂಸ್ಥಾನದ ಸನ್ಮಾನಿತಪ್ರಧಾನ ಪದವಿಯನ್ನು ಕೈಗೊಂಡರು.
ಕಾಲದೇಶವಿದ್ಯಮಾನಗಳಿಗೆ ತಕ್ಕಂತೆ ಇವರು ಸರಕಾರದ ಸಹಾನುಭೂತಿ
ಯನ್ನು ಪಡೆದು ಹೊಸಹೊಸ ಸುಧಾರಣೆಗಳನ್ನು ಮಾಡಬೇಕೆಂದು ಹೊರ
ಟಾಗ ಹಳೆಯದೊಂದು ಪದ್ಧತಿಯಿಂದಾಚೆಯದೇನನ್ನೂ ಅರಿಯದ ಅಲ್ಲಿಯ
ಮುಖಂಡರು ಒಪ್ಪದೆ ಹೋದಕಾರಣ ಶ್ರೀಮಹಾಭಾಗವತರು ಅದನ್ನು
ಕೈಬಿಟ್ಟರು. ಆಮೇಲೆ ತಮ್ಮ ಸ್ವಂತ ವೆಚ್ಚದಿಂದ ಕೆಲವುಕಾಲ ಧಾರವಾಡ

ದಲ್ಲಿದ್ದು ಅಲ್ಲಿಯ ಶ್ರೀಶಂಕರಾಚಾರ್ಯ ಸಂಸ್ಕೃತ ಪಾಠಶಾಲೆಯನ್ನು ಊರ್ಜಿತಸ್ಥಿತಿಗೆ ತರುವದಕ್ಕೆ ನಿಂತರು. ಹೀಗೆ ಇವರು ಕೆಲಸ ನಡೆಯದೆ ನಿಂತುಹೋಗಿದ್ದ ಆ ಪಾಠಶಾಲೆಗೆ ತಕ್ಕ ಉಪಾಧ್ಯಾಯರನ್ನೂ ಮತ್ತು ವ್ಯವಸ್ಥೆಯನ್ನೂ ನೋಡಿಕೊಳ್ಳುವದಕ್ಕಾಗಿ ಯೋಗ್ಯ ಜನರನ್ನೂ ಆರಿಸಿಟ್ಟು ಕೆಲಸವನ್ನು ಪ್ರಾರಂಭಿಸಿದುದಲ್ಲದೆ ಅಲ್ಲಿರುವ ಆಂಗ್ಲಭಾಷಾಶಾಲೆಗಳ ಪ್ರಧಾನ ಶಿಕ್ಷಕರಲ್ಲೆಲ್ಲಾ ಮಾತನಾಡಿ ಅಲ್ಲಿ ಓದುವ ವಿದ್ಯಾರ್ಥಿಗಳು ಈ ಪಾಠಶಾಲೆಗೆ ಬಂದು ತಮ್ಮ ಸಂಸ್ಕೃತಪಾಠವನ್ನು ಚೆನ್ನಾಗಿ ಕಲಿತುಕೊಂಡು ಹೋಗುವಂತೆ ಪಾಠಶಾಲೆಯಲ್ಲಿ ಅನುಕೂಲತೆಗಳನ್ನು ಕಲ್ಪಿಸಿ ಅದಕ್ಕಾಗಿ ತಮ್ಮ ಶಿಷ್ಯರೊಬ್ಬರನ್ನೂ ನಿಯಮಿಸಿದರು. ಇದಲ್ಲದೆ ಅಲ್ಲಿ ಶ್ರೀಮಹಾಭಾಗವತರು ಪ್ರತಿದಿನ ಸಾಯಂಕಾಲ ಹೇಳುತ್ತಿದ್ದ ಯೋಗವಾಸಿಷ್ಠಪ್ರವಚನವು ಅಲ್ಲಿನ ಪ್ರಮುಖರನ್ನೆಲ್ಲಾ ಆಕರ್ಷಣೆಮಾಡಿತ್ತು. ಅದು ಸುಶಿಕ್ಷಿತರಾದ ದೊಡ್ಡದೊಡ್ಡ ಅಧಿಕಾರಿಗಳ ಮನಸ್ಸನ್ನು ಕೂಡ ಧರ್ಮವಿಚಾರದ ಕಡೆಗೆ ತಿರುಗಿಸಿ ಅವರೆಲ್ಲರೂ ಶ್ರೀಗಳಕಡೆಗೆ ಬಂದು ಏಕಾಂತದಲ್ಲಿ ಎಷ್ಟೋ ವಿಚಾರಗಳನ್ನು ತಿಳಿದುಕೊಂಡು ಹೋಗುವಂತೆ ಮಾಡಿತು.

ಹೀಗಿರುವಾಗ ಬೇರೆಬೇರೆ ಜನರಿಂದ ಅಲ್ಲಿ ಭಗವದ್ಗೀತೆಯ ವಿಷಯದಲ್ಲಿ ವ್ಯಾಖ್ಯಾನಮಾಲೆಗಳು ಆಗಿ ಜನರ ಮನಸ್ಸಿಗೊಂದು ಬಗೆಯ ಹೊಯ್ದಾಟವುಂಟಾಗಿತ್ತು. ಶ್ರೀಮಹಾಭಾಗವತರಿಗೆ ಸಾಮಾನ್ಯವಾಗಿ ಎಲ್ಲಾ ವೇದಾಂತ ಗ್ರಂಥಗಳೂ ನೀರು ಕುಡಿದಂತೆ ಆಗಿದ್ದರೂ ಇವರು ಗೀತೆಯಲ್ಲಿ ತಮ್ಮ ಬುದ್ಧಿಶಕ್ತಿಯನ್ನೆಲ್ಲಾ ಹಾಕಿ ವಿಶೇಷವಿಚಾರಗಳನ್ನು ನಡೆಸಿ ತನ್ಮಯವಾದ ಮನಸ್ಸನ್ನು ಮಾಡಿಕೊಂಡವರಾಗಿದ್ದರು. ಇದನ್ನು ತಿಳಿದು ಆಗ ಅಲ್ಲಿಯ ಜನರೆಲ್ಲಾ ಕೇಳಿಕೊಂಡ ಪ್ರಕಾರ ಶ್ರೀಮಹಾಭಾಗವತರು ಅಲ್ಲಿ ಗೀತಾರ್ಥದ ಮೇಲೆ ಅತ್ಯುತ್ಸಾಹದಿಂದ ಆರು ವ್ಯಾಖ್ಯಾನಗಳನ್ನು ಕೊಟ್ಟರು. ಆ ವ್ಯಾಖ್ಯಾನಮಾಲೆಯ ಅಭಿಪ್ರಾಯವೇ ಈ ಗ್ರಂಥವಾಗಿ ರೂಪುಗೊಂಡಿರುವದು. ಇದಾದ ಕೆಲವು ದಿವಸಗಳ ಮೇಲೆ ಇವರಿಗೆ ದಕ್ಷಿಣದೇಶದ ತಿರುವಾದಿ ಪರಿಷತ್ತಿಗೆ ಆಮಂತ್ರಣ ಬಂತು. ಭರತಖಂಡದ ಪ್ರಸಿದ್ಧವಿದ್ವಾಂಸರೆಲ್ಲಾ ಅಲ್ಲಿ ಸೇರಿದ್ದರು. ಶ್ರೀಗಳು ಅಲ್ಲಿಗೆ ಹೋದರು. ಒಂದು ದಿನ ಸಂಧ್ಯಾಕಾಲದವರಿಗೂ

ಪಂಡಿತರೆಲ್ಲರೂ ವಿಚಾರಗಳನ್ನು ನಡೆಸಿನಡೆಸಿ ಬೇಸರಗೊಂಡಿರುವಾಗ ಸಂಸ್ಕೃತವನ್ನು ಉಜ್ಜೀವನಗೊಳಿಸುವದು ಹೇಗೆಂಬ ವಿಚಾರದಲ್ಲಿ ಉಪನ್ಯಾಸಮಾಡಬೇಕಾಗಿ ಬಂತು. ಎಲ್ಲರೂ ಕೈಬಿಟ್ಟರೆ ಸಾಕೆಂದಿರುವಾಗ ಈ ಕಾರ್ಯವನ್ನು ಕೈಗೊಳ್ಳುವದು ಬಹುಕಷ್ಟಸಾಧ್ಯವಾಗಿತ್ತು. ಆದರೂ ಇವರು ಪ್ರಥಮವಾಕ್ಯವನ್ನುಚ್ಚರಿಸುತ್ತಲೆ ಸಭಿಕರೆಲ್ಲರಿಗೂ ಒಂದು ಬಗೆಯ ಪ್ರಬಲಶಕ್ತಿಯುಂಟಾದಂತಾಗಿ ಎಲ್ಲರೂ ಅತ್ಯಾದರದಿಂದ ಕೇಳುವದಕ್ಕೆ ಮೊದಲು ಮಾಡಿದರು. ಶ್ರೀಗಳು ತಮ್ಮ ವ್ಯಾಖ್ಯಾನವನ್ನು ಮುಗಿಸುತ್ತೇವೆಂದು ೨-೩ ಸಲ ಹೇಳಿದರೂ ಕೂಡ ಇನ್ನೂ ಬೆಳೆಸಬೇಕೆಂದು ಮತ್ತೆಮತ್ತೆ ಹೇಳುತ್ತ ಎಲ್ಲರೂ ಇವರನ್ನೂ ದೇವರ್ಷಿಗಳೆಂದು ಕರೆದು ಆವ್ಯಾಖ್ಯಾನಶ್ರವಣದಿಂದ ತಮಗಾದ ಆನಂದವನ್ನು ತೋರಿಸುತ್ತಿದ್ದರು. ಟ್ರಾವನ್ಕೂರು ಮತ್ತು ಮೈಸೂರು ಮೊದಲಾದ ದೇಶಗಳ ಮಂತ್ರಿತ್ವವನ್ನು ಮಾಡಿ ಹೆಸರುಗೊಂಡವರಾಗಿ ಆಸಭೆಯ ಅಧ್ಯಕ್ಷರಾಗಿದ್ದ ಶ್ರೀಯುತ ವಿ. ಪಿ. ಮಾಧವರಾವ್, ಬಿ. ಎ. ಇವರು ನಮ್ಮ ಶ್ರೀಗಳ ಇದೊಂದುಪನ್ಯಾಸವನ್ನು ಕೇಳಿಯೇ ಅಲ್ಲಿ ಸೇರಿದ್ದ ಪಂಡಿತರೊಳಗೆಲ್ಲಾ ನಮ್ಮ ಶ್ರೀಗಳೊಬ್ಬರು ಈಗಿನ ಕಾಲಕ್ಕೆ ಉಪಯುಕ್ತರಾದ ನಿಜವಾದ ಪಂಡಿತರೆಂದು ತಮ್ಮ ಅಭಿಪ್ರಾಯವನ್ನು ಪ್ರಕಟಿಸಿರುವರು. ಅಲ್ಲಿಂದ ಅವರು ರಾಮೇಶ್ವರಕ್ಕೆ ಹೋಗಿ ಅಲ್ಲಿ ಪಂಡಿತಮಂಡಲಿಯಲ್ಲಿ ಭಕ್ತಿಯೋಗದ ಪ್ರಸ್ತಾಪನ್ನು ನಡೆಸಿ ಹಿಂದಿರುಗಿ ಬೆಂಗಳೂರಿಗೆ ಬಂದು ಅಲ್ಲಿಯವರ ಪ್ರಾರ್ಥನೆಯಂತೆ ಆರ್ಯಧರ್ಮ ಮೊದಲಾದ ವಿಚಾರಗಳಲ್ಲಿ ಉಪನ್ಯಾಸಗಳನ್ನು ಕೊಟ್ಟದ್ದಲ್ಲದೆ ಬೆಂಗಳೂರಲ್ಲೊಂದು ಸಲವೂ ಹುಬ್ಬಳ್ಳಿಯಲ್ಲೊಂದು ಸಲವೂ ಶ್ರೀಶಂಕರಜಯಂತಿಯ ಉತ್ಸವ ಸಮಯದಲ್ಲಿ ಭಗವದ್ಗೀತಾವಿಚಾರದಲ್ಲಿ ವ್ಯಾಖ್ಯಾನಮಾಲೆಗಳನ್ನು ಕೊಟ್ಟಿರುವರು. ಈ ವ್ಯಾಖ್ಯಾನಗಳ ಸಾರಾಂಶವು ನನ್ನ ಮಿತ್ರರಾದ ಮ। ರಾ। ವೈ. ಸುಬ್ಬರಾಯರು ಬರೆದಿರುವ Highest Goal of Human Life ಮತ್ತು Spirtual Knowledge and how to attain it ಎಂಬ ಹೆಸರಿನ ಎರಡು ಇಂಗ್ಲೀಷು ಗ್ರಂಥಗಳಲ್ಲಿ ಅಡಕವಾಗಿದೆ. ಇವುಗಳ ಹೊರತು ಎಷ್ಟೋ ಕಡೆಗಳಲ್ಲಿ ಬೇರೆಬೇರೆ ಎಷ್ಟೋ ಧಾರ್ಮಿಕವಿಚಾರಗಳಲ್ಲಿ ಇವರು ತಮ್ಮ

ಉಪದೇಶಾಮೃತವನ್ನು ಸೂರೆಮಾಡಿರುವರು. ಇದಲ್ಲದೆ ಸರಕಾರದವರು ಸಂಸ್ಕೃತಭಾಷೆಯ ಪಾಂಡಿತ್ಯವನ್ನು ಬಹುಮಾನಿಸಿ ಆ ಪಾಂಡಿತ್ಯಕ್ಕೆ ತಕ್ಕ ಪದವಿಗಳನ್ನು ಕೊಟ್ಟು ಅವರ ಜೀವನೋಪಾಯಕ್ಕೂ ಆದಷ್ಟು ಅನುಕೂಲತೆಗಳನ್ನು ಕಲ್ಪಿಸುವಂತೆ ಮಾಡಬೇಕೆಂದು ಸರಕಾರದಲ್ಲಿ ಪ್ರಮುಖರಾದ ಅಧಿಕಾರಿಗಳನ್ನು ಮನಗಾಣಿಸುವದಕ್ಕಾಗಿ ಇವರು ವೈಸರಾಯ್, ಗವರ್ನರ್ ಮೊದಲಾದ ದೊಡ್ಡದೊಡ್ಡ ರಾಜಪ್ರತಿನಿಧಿಗಳೊಡನೆ ಸಮಾಲೋಚನೆಗಳನ್ನು ನಡೆಸಿದ್ದಲ್ಲದೆ Study of Sanskrit ಎಂಬ ಹೆಸರಿನದೊಂದು ಇಂಗ್ಲಿಷು ಪುಸ್ತಕವನ್ನು ಬರೆದು ಪ್ರಸಿದ್ಧಮಾಡಿದರು. ಆ ಪುಸ್ತಕವನ್ನು ಬರೀ ಭರತ ಖಂಡದವರು ಮಾತ್ರವೇ ಅಲ್ಲ. ಇಂಗ್ಲೆಂಡ್, ಅಮೇರಿಕ, ಜಪಾನ, ಜರ್ಮನಿ, ಫ್ರಾನ್ಸ್ ಇಟಲಿ ಮೊದಲುಗೊಂಡು ಈಪ್ರಪಂಚದ ಎಂಟು ದಿಕ್ಕುಗಳಲ್ಲಿಯೂ ಇರುವ ಮಹಾಮಹಾವಿದ್ವಾಂಸರು ಕೂಡ ಡಂಗುರೆಯನ್ನು ಹೊಡೆದಂತೆ ಹೊಗಳಿರುವರು. ಈಗ್ರಂಥದ ಉದ್ದೇಶವನ್ನು ಡಾ|| ಭಂಡಾರಕರ ಇವರು ಅನುಮೋದಿಸಿದರೂ ಕೂಡ ಸೆನೇಟಿನಲ್ಲಿ ಅದು ಸಮ್ಮತವಾಗಲಿಲ್ಲ. ಹೇಗಾದರೂ ಮಾಡಿ ಸಂಸ್ಕೃತವನ್ನು ಅಭಿವೃದ್ಧಿಗೆ ತರಬೇಕೆಂದು ಬೆಂಗಳೂರಲ್ಲಿ ಮೈಸೂರಿನ ಶ್ರೀಮನ್ಮಹಾರಾಜರವರ ಮತ್ತು ಶ್ರೀ ಶೃಂಗೇರೀ ಜಗದ್ಗುರುಗಳವರ ಉದಾರವಾದ ಪ್ರೋತ್ಸಾಹದಿಂದ "ಸಂಸ್ಕೃತ ಅಕೇಡಮಿ" ಎಂಬ ಹೆಸರಿನದೊಂದು ಸಂಸ್ಥೆಯನ್ನು ಸ್ಥಾಪಿಸಿ ಅದಕ್ಕೆ ಬೇರೆಬೇರೆ ದೂರ ದೇಶಗಳಲ್ಲಿರುವ ಸಂಸ್ಕೃತಭಾಷಾಭಿಮಾನಿಗಳಾದ ಪ್ರಸಿದ್ಧಪುರುಷರ ಸಹಾನುಭೂತಿಯನ್ನು ಪಡೆದು ಅಲ್ಲಿಗೆ ಆಗಾಗ ಬೇರೆಬೇರೆ ಕಡೆಗಳಿಂದ ದೊಡ್ಡದೊಡ್ಡ ವಿದ್ವಾಂಸರನ್ನು ಬರಮಾಡಿಕೊಂಡು ಅವರ ಸತ್ಕಾರದ ಭಾರವನ್ನು ವಹಿಸಿ ಅವರಿಂದ ಬೇರೆಬೇರೆ ಕ್ಲಿಷ್ಟವಿಷಯಗಳ ವಿಮರ್ಶನ ವಿಷಯವಾದ ಉಪನ್ಯಾಸಗಳನ್ನು ಮಾಡಿಸಿದ್ದಲ್ಲದೆ ವಿಮರ್ಶನದ ಅಭ್ಯಾಸವನ್ನು ಮಾಡಿ ತೋರಿಸುವಂಥ ವಿದ್ಯಾರ್ಥಿಗಳಿಗೆ ಧನರೂಪವಾದ ಅಥವಾ ಪುಸ್ತಕರೂಪವಾದ ಬಹುಮಾನಗಳನ್ನು ಕೊಟ್ಟಿರುತ್ತಾರೆ. ಈನಮ್ಮ ಶ್ರೀಮಹಾಭಾಗವತರು ಈ ಅಕೇಡಮಿಯ ಸಂಬಂಧವಾಗಿ "Sanskrit Research" ಎಂಬ ಹೆಸರಿನದೊಂದು ತ್ರೈಮಾಸಿಕ ಪತ್ರದ ಸಂಪಾದಕತ್ವವನ್ನು ನಿರ್ವಹಿಸಿದ್ದೊಂದು

ಅವರ ಅಸ್ವಾದೃಶವಾದ ವಿದ್ಯಾಸಂಪತ್ತಿಗೆ ನಿದರ್ಶನವಾಗಿದೆ. ಈ ತ್ರೈಮಾಸಿಕಕ್ಕೆ ಅವರು ತಮ್ಮ ಲೇಖನದ ಜೊತೆಗೆ ಭರತಖಂಡದ ಪಂಡಿತರಿಂದ ಮಾತ್ರವೇ ಅಲ್ಲದೆ ವಿಲಾಯಿತಿಯಿಂದಲೂ ಕೂಡ ಹೊಸಹೊಸ ಸಂಗತಿಗಳ ಮೇಲೆ ಲೇಖನಗಳನ್ನು ಪಡೆದು ವಾಚಕವೃಂದದ ಮುಂದೆ ಇಟ್ಟಿರುತ್ತಾರೆ. ಇವರ ಈ ಸಂಸ್ಕೃತಸಂಬಂಧವಾದ ಪತ್ರಿಕೆಯು ಯುರೋಪಿಯನರೇ ಮೊದಲಾದವರನ್ನು ವರ್ಗಣಿದಾರರನ್ನಾಗಿ ಆಕರ್ಷಣೆಮಾಡಿರುವದಲ್ಲದೆ ಅವರನ್ನು ಸಂಸ್ಕೃತಗ್ರಂಥಗಳ ವಿಮರ್ಶೆಯ ಕೆಲಸಕ್ಕೆ ಹಚ್ಚಿ ಅವರಿಂದ ಲೇಖನಗಳನ್ನು ಪಡೆದಿರುವದನ್ನು ಲಕ್ಷ್ಯದಲ್ಲಿಟ್ಟುಕೊಂಡು ನೋಡಿದರೆ ಇದು ನಮ್ಮ ದೇಶಕ್ಕೆ ಎಷ್ಟು ಭೂಷಣಪ್ರಾಯವಾಗಿರುವದೆಂಬುದು ತಿಳಿಯುತ್ತದೆ. ಈ ಸಂಸ್ಕೃತ ಅಕೇಡಮಿಯನ್ನು ಹಿಂದೂಸ್ಥಾನದ ವೈಸರಾಯ, ಮುಂಬಯಿ ಮತ್ತು ಮದರಾಸಿನ ಗವರ್ನರುಗಳು ಬಡೋದೆಯ ಶ್ರೀಮಂತಗಾಯಕವಾಡ್ ಮಹಾರಾಜರು ಮೊದಲಾದವರೆಲ್ಲಾ ಕಣ್ಣಾರೆ ನೋಡಿ ತಮ್ಮ ಧನ್ಯವಾದಗಳನ್ನು ಪ್ರಕಟಿಸಿರುತ್ತಾರೆ. ಟ್ರಾವನ್ಕೂರು ಮತ್ತು ಮೈಸೂರು ಸಂಸ್ಥಾನಗಳ ದಿವಾನಗಿರಿಯನ್ನು ಮಾಡಿ ಪ್ರಸಿದ್ಧರಾದ ಶ್ರೀಯುತ ವಿ. ಪಿ. ಮಾಧವರಾವ್, ಬಿ. ಎ. ಇವರು ಬಡೋದೆಯ ದಿವಾನಪದವಿಯನ್ನಲಂಕರಿಸಿದ್ದಾಗ ಶ್ರೀಮಹಾಭಾಗವತರ ಸೂಚನೆಯಿಂದಲೇ ಅಲ್ಲಿ ಸಂಸ್ಕೃತ ಕಾನಫರೆನ್ಸ್ ಆಗಿ ಈಗಿನ ಕಾಲಕ್ಕೆ ತಕ್ಕಂತೆ ಶಿಕ್ಷಣವನ್ನು ಕೊಡುವ ಸಂಸ್ಕೃತಪ್ರೌಢವಿದ್ಯಾಲಯವೊಂದು ಸ್ಥಾಪಿತವಾಗಿದೆ. ನಮ್ಮ ದೇಶದ ತತ್ತ್ವಶಾಸ್ತ್ರವನ್ನೂ ಪಶ್ಚಿಮದೇಶದ ತತ್ತ್ವಶಾಸ್ತ್ರವನ್ನೂ ಜೊತೆಯಲ್ಲಿ ಅಭ್ಯಾಸಮಾಡುವಂಥ ಮತ್ತೊಂದು ಸಂಸ್ಥೆಯು ಅಲ್ಲಿ ಇವರ ಸೂಚನೆಯಿಂದಲೇ ಜನ್ಮವನ್ನೆತ್ತಿದೆ. ಸಂಸ್ಕೃತದಲ್ಲಿರುವ ಗ್ರಂಥಗಳನ್ನೆಲ್ಲಾ ವಿಮರ್ಶೆಮಾಡುವದಕ್ಕೆ ಸಾಧನವಾಗಿ Bhandarker Research Institute ಎಂಬ ಹೆಸರಿನದೊಂದು ಸಂಸ್ಥೆಯು ಇವರ ಪ್ರಯತ್ನ ಬಲದಿಂದಲೇ ಪುಣೆಯಲ್ಲಿ ಪ್ರಾರಂಭವಾಗಿದೆ. ಇವರ ವ್ಯವಸಾಯದಿಂದಲೇ ದಕ್ಷಿಣಖಾಂದೇಶಕ್ಕೆ ಸೇರಿದ ಅಮ್ಮಳನೇರೆಂಬ ಕಡೆ ಎಂ. ಎ. ಪರೀಕ್ಷೆಗೆ ಹೋಗುವವರಿಗೆ ವಿದ್ಯಾರ್ಥಿವೇತನವನ್ನು ಕೊಟ್ಟು ಎಲ್ಲಾ ತತ್ತ್ವಶಾಸ್ತ್ರಗಳನ್ನೂ ಹೇಳಿ

ಕೊಡುವದಲ್ಲದೆ ಶ್ರೀಶಂಕರಾಚಾರ್ಯರ ತತ್ತ್ವಶಾಸ್ತ್ರವನ್ನು ವಿಶೇಷವಾಗಿ ಕಲಿಸುವಂಥ ಸಂಸ್ಥೆಯೊಂದು ನಡೆಯುತ್ತಿದೆ. ಅಲ್ಲಿ ಕಳೆದ ವರ್ಷ ಶ್ರೀಗಳು ತಾವೇ ಶ್ರೀಶಂಕರಾಚಾರ್ಯರ ಸಿದ್ಧಾಂತದ ವಿಷಯವಾಗಿ ಬಿ. ಎ. ಮತ್ತು ಎಂ. ಎ. ಪದವಿಗಳನ್ನು ಪಡೆದಂಥವರ ಮನಸ್ಸಿನ ಮೇಲೆ ಬಹು ಉತ್ತಮ ವಾದ ಪರಿಣಾಮವಾಗುವಂತೆ ಬಹುಸ್ವಾರಸ್ಯವಾದ ವ್ಯಾಖ್ಯಾನಗಳನ್ನು ಕೊಟ್ಟು ಶ್ರೀಶಂಕರಾಚಾರ್ಯರ ಮಹತ್ವವನ್ನು ಅವರಿಗೆ ಬಹು ಚೆನ್ನಾಗಿ ಮನ ಗಾಣಿಸಿರುವರು. ಇವರು ಈಚೆಗೆ ಬರೆದ Heart of Bhagavadgita ಎಂಬ ಗ್ರಂಥವನ್ನು ಓದಿನೋಡಿ ಅಮೇರಿಕದ ವಾಷಿಂಗಟನ್ ವಿಶ್ವವಿದ್ಯಾಲಯದವರು ಇವರ ಪ್ರೌಢಿಮೆಗೆ ಮೆಚ್ಚಿ ಇವರಿಗೆ Ph. D. ಎಂಬ ಬಿರುದನ್ನು ಕೊಟ್ಟಿರುವರು. ಇವರ ಪ್ರಭಾವವು ಭರತಖಂಡವನ್ನೆಲ್ಲಾ ಬೆಳಗಿ ವಿದೇಶಗಳಿಗೆ ಕೂಡ ನುಗ್ಗಿ ಹರಡಿಕೊಂಡದ್ದರ ಮೇಲೆ ಲಂಡನ್ನಿನ ರಾಯಲ್ ಏಷ್ಯಾಟಿಕ್ ಸೊಸೈಟಿಯವರೂ ರಾಯಲ್ ಆರ್ಟ್ಸ್ ಸೊಸೈಟಿಯವರೂ ಮತ್ತು ನೀತಿವಿದ್ಯಾಪ್ರಸಾರಕ ಸಂಘದವರೂ ಸಹ ಇವರನ್ನು ತಮ್ಮ ಸಭಾ ಸದರನ್ನಾಗಿ ಮಾಡಿಕೊಂಡಿದ್ದರು. ಮುಂಬಯಿ ವಿಶ್ವವಿದ್ಯಾಲಯದವರು ಇವರನ್ನು ಎಂ. ಎ. ಪರೀಕ್ಷೆಯ ವೇದಾಂತಭಾಗಕ್ಕೆ ಪರೀಕ್ಷಕರನ್ನಾಗಿ ಆರಿಸಿ ಕೊಂಡಿದ್ದರು. ಮುಂಬಯಿ ಸರಕಾರದವರು ವಿದ್ಯಾಸಂಬಂಧವಾದ ವಿಚಾರ ಗಳಲ್ಲಿ ಆಗಾಗ ಇವರನ್ನು ಬರಮಾಡಿಕೊಂಡು ಇವರ ಸೂಚನೆಗಳನ್ನು ತೆಗೆದುಕೊಳ್ಳುತ್ತಿದ್ದರು. ಇವರು ಹೀಗೆ ಸ್ವಾರ್ಥವಿಲ್ಲದೆ ಧರ್ಮಪ್ರಸಾರ ಕ್ಕಾಗಿ ಮತ್ತು ಸಂಸ್ಕೃತಭಾಷೆಯ ಅಭ್ಯುದಯಕ್ಕಾಗಿ ತಮ್ಮ ತನುಮನಧನ ಗಳನ್ನು ಧಾರೆಯೆರೆದಿರುವದನ್ನು ನೋಡಿ ರೈಲ್ವೆಕಂಪೆನಿಯವರು ಇವರಿಗೆ ಸೆಕೆಂಡ್ ಕ್ಲಾಸ್ ಫ್ರೀಪಾಸನ್ನು ಕೊಟ್ಟಿದ್ದರು. ಇವರ ಈ ಬಗೆಯ ಸಂಚಾರಕಾಲದಲ್ಲಿ ಕೊಲ್ಹಾಪುರ ಮಠದ ಆಗಿನ ಶ್ರೀಜಗದ್ಗುರು ಶಂಕರಾಚಾ ರ್ಯರವರು ಇವರ ಪ್ರಜ್ಞೆಯನ್ನು ನೋಡಿ ಬಹುಮಾನಿಸಿ ಇವರಿಗೆ ಮುಂಬ ಯಿಯಲ್ಲಿ ಸರ್ ಬಾಲಚಂದ್ರಕೃಷ್ಣಭಾಟವಡೆಕರ Kt. ಇವರ ಅಧ್ಯಕ್ಷತೆಯಲ್ಲಿ ವೇದಾಂತವಾಚಸ್ಪತಿ ಎಂಬ ಬಿರುದನ್ನು ಕೊಟ್ಟರು. ಈರೀತಿಯಲ್ಲಿ ಇವರು ಪೂರ್ವದೇಶೀಯರ ಮತ್ತು ಪಶ್ಚಿಮದೇಶೀಯರ ವಿಚಾರವಿಶೇಷಗಳನ್ನು ಸಮ

ದೃಷ್ಟಿಯಿಂದ ನೋಡುತ್ತ ಪೂರ್ವದೇಶದವರಿಗೂ ಪಶ್ಚಿಮದೇಶದವರಿಗೂ ಇರುವ ಭಿನ್ನಭಾವನೆಗಳೆಲ್ಲಾ ದೂರವಾಗಿ ಪರಸ್ಪರಮೈತ್ರಿಯು ಬೆಳೆದು ಭಾರತೀಯ ಶಾಸ್ತ್ರಗಳ ಏಳಿಗೆಯಾಗುವಂತೆ ಗುಣಗ್ರಹಣತತ್ಪರರಾಗಿ ಮಾಡಿರುವ ಈ ಕೆಲಸಗಳ ಪ್ರಯೋಜನವು ಬರೀ ಹಿಂದೂಸ್ಥಾನಕ್ಕೆ ಮಾತ್ರವೇ ಆಗಿರದೆ ಸಂಸ್ಕೃತಭಾಷೆಯ ವಿಷಯದಲ್ಲಿಯೂ ಹಿಂದೂ ಧರ್ಮದ ವಿಷಯದಲ್ಲಿಯೂ ಯುರೋಪ್ ಮೊದಲಾದ ದೂರ ದೇಶಗಳ ದೊಡ್ಡದೊಡ್ಡ ವಿದ್ವಾಂಸರನ್ನೂ ವೈಸರಾಯ್ ಗವರ್ನರ್ ಮೊದಲಾದ ದೊಡ್ಡದೊಡ್ಡ ಬ್ರಿಟಿಷ್ ಅಧಿಕಾರಿಗಳನ್ನೂ ರಾಜಾಧಿರಾಜರುಗಳನ್ನೂ ಮನಗಾಣಿಸಿ ಅವರ ಸಹಾನುಭೂತಿಯನ್ನು ಪಡೆಯುವದರ ಮೂಲಕ ಭೂಮಂಡಲದ ನಾಲ್ಕು ಕಡೆಗಳಲ್ಲಿಯೂ ಹರಡಿಕೊಂಡಿರುವದು. ಸ್ವಪ್ರಯೋಜನವನ್ನು ಕನಸಿನಲ್ಲಿಯೂ ಕೂಡ ಲಕ್ಷ್ಯದಲ್ಲಿಡದೆ ಧರ್ಮಕ್ಕಾಗಿಯೂ ಧರ್ಮಕ್ಕೆ ಸಾಧನವಾದ ವಿದ್ಯೆಯ ಅಭಿವೃದ್ಧಿಗಾಗಿಯೂ ಇವರು ನಡೆಸಿರುವಂಥ ಮೇಲೆ ಕಂಡ ಪ್ರತಿಯೊಂದು ಸಂದರ್ಭದಲ್ಲಿಯೂ ಹಿಂದುಮುಂದು ನೋಡದೆ ತಮ್ಮ ಸ್ವಂತವಾದ ಹಣವನ್ನು ನೀರಿಗಿಂತ ಕಡೆಯಾಗಿ ವೆಚ್ಚಮಾಡಿರುವರಲ್ಲದೆ ತಮ್ಮ ಉದ್ದೇಶಕ್ಕೆ ಅನುಗುಣವಾದಂಥ ಕೆಲಸಗಳನ್ನು ಬೇರೆಬೇರೆಯಾಗಿ ಯಾರುಯಾರು ಕೈಗೊಂಡಿರುವರೊ ಅವರಿಗೆ ಕೂಡ ದ್ರವ್ಯಸಹಾಯದ ಮೂಲಕವೂ ವಾಕ್ಸಹಾಯದ ಮೂಲಕವೂ ಸಂಪೂರ್ಣವಾದ ಸಹಾನುಭೂತಿಯನ್ನು ತೋರಿಸಿರುತ್ತಾರೆ. ಇವರು ಈ ಪ್ರಯತ್ನಗಳಿಂದ ಉತ್ತಮ ಜಾತಿಯವರ ಅಭ್ಯುದಯಕ್ಕೆ ಉತ್ತೇಜಕರಾದದ್ದಿಷ್ಟೇ ಅಲ್ಲ. ಮುಟ್ಟಿಸಿಕೊಳ್ಳಬಾರದ ಜಾತಿಯವರ ಏಳಿಗೆಗೆ ಕೂಡ ಧನಸಹಾಯವನ್ನು ಮಾಡಿರುತ್ತಾರಲ್ಲದೆ ಉತ್ತಮ ಜಾತಿಯವರು ಮುಟ್ಟುವದಿಲ್ಲವೆಂದು ಅವರ ಮೇಲೆ ಹಗೆತನವನ್ನು ಮಾಡದೆ ತಮ್ಮ ನಡವಳಿಕೆಯಲ್ಲಿರುವ ಹೀನತನವನ್ನು ಹೋಗಲಾಡಿಸಿಕೊಂಡು ನೀತಿಪರರಾಗಿ ಸುಧಾರಿಸಿಕೊಳ್ಳಿರೆಂದು ಅವರಿಗೆ ಮೇಲಿಂದ ಮೇಲೆ ಎಚ್ಚರಿಕೆಯನ್ನು ಕೊಟ್ಟಿರುತ್ತಾರೆ.

ಹೀಗೆ ಎಷ್ಟೋ ಸಂದರ್ಭಗಳಲ್ಲಿ ಇವರು ಜನರ ಪರಸ್ಪರಶತ್ರುಭಾವವನ್ನು ತಗ್ಗಿಸಿ ಮಿತ್ರಭಾವವನ್ನು ಪ್ರೋತ್ಸಾಹಿಸುತ್ತಿದ್ದರಲ್ಲದೆ ಭರತಖಂಡದಲ್ಲೆಲ್ಲಾ ಗುಡುಗಾಡಿದಂತೆ ಸರ್ವತೋಮುಖವಾದ ವ್ಯವಹಾರದಲ್ಲಿ ತನ್ಮಯ

ರಾಗಿರುವಾಗ ಇವರು ತಮ್ಮ ವಿಷಯವಾಗಿ ಯಾರಾದರೂ ಏನಾದರೂ ಆಡಿಕೊಂಡರೆ ಅದರಲ್ಲೇನಾದರೂ ಹುರುಳಿದ್ದರೆ ಮಾತ್ರ ತಾವು ತಮ್ಮನ್ನು ತಿದ್ದಿಕೊಳ್ಳುತ್ತಿದ್ದರಲ್ಲದೆ ಆ ಆಕ್ಷೇಪಗಳು ನಿರಾಧಾರವಾಗಿದ್ದರೆ ಅವರ ಮೇಲೆ ಹಗೆತನವನ್ನಿಡದೆ ಉಪೇಕ್ಷೆಯಿಂದ ಸುಮ್ಮನಿರುತ್ತಿದ್ದರು. ಇವರು ದೀನವೇಷವನ್ನು ಬಿಟ್ಟು ಎಲ್ಲರಂತೆ ಉಡುಪುಗಳನ್ನು ಹಾಕಿಕೊಂಡು ಹೊರಗಣಕಾರ್ಯಗಳಲ್ಲಿ ತೊಡಗಿದ ಮೇಲೆ ತಿಳಿದವರೆನಿಸಿಕೊಂಡಿರುವವರಲ್ಲಿ ಕೂಡ ಮೂಢಭಕ್ತಿಸಂಪನ್ನರಾದ ಎಷ್ಟೋ ಜನರು ಶ್ರೀಮಹಾಭಾಗವತರನ್ನು ನೋಡಿ ಇವರು ತಮ್ಮ ಪಾರಮಾರ್ಥಿಕಸಂಪತ್ತನ್ನು ಕಳೆದುಕೊಂಡು ವ್ಯವಹಾರಿಕರಲ್ಲೆಲ್ಲಾ ಅಗ್ರಗಣ್ಯರಾದರೆಂದು ತಮತಮಗೆ ತೋರಿದಂತೆ ಆಡಿಕೊಂಡು ಅವರನ್ನು ಪೂಜ್ಯಬುದ್ಧಿಯಿಂದ ನೋಡುವದನ್ನು ಬಿಟ್ಟು ತಮಗೆ ಸರಿಯವರಂತೆ ನೋಡುವದಕ್ಕೆ ಮೊದಲುಮಾಡಿದರು. ಬರೀ ವೇಷಕ್ಕೆ ಮರುಳಾಗುವ ಅವರ ಅಲ್ಪ ಬುದ್ಧಿಯನ್ನು ನೋಡಿ ಶ್ರೀಗಳು ಮತ್ತಷ್ಟು ಕನಿಕರವನ್ನು ಹೊಂದಿದ್ದಲ್ಲದೆ ತಾವು ಮೈಮೇಲೆ ಹಾಕಿಕೊಂಡ ವ್ಯವಹಾರಿಕ ವೇಷವು ಜನರಿಗೆ ಚೆನ್ನಾಗಿ ಒಪ್ಪಿತೆಂದು ಸಂತೋಷಪಟ್ಟರು. ಇವರ ಮನಸ್ಸಿಗೆ ಏನಾದರೊಂದು ಹಿಡಿದರೆ ಅದು ಕೊನೆಮುಟ್ಟುವವರಿಗೂ ಅದರಲ್ಲಿ ತನ್ಮಯರಾಗಿರುವ ಇವರ ಸ್ವಭಾವವು ಈ ಸಂದರ್ಭದಲ್ಲಿ ಕೂಡ ಚೆನ್ನಾಗಿ ಕಾಣಿಸಿಕೊಂಡಿರುವದು. ಈ ವ್ಯವಹಾರ ವೇಷವನ್ನು ಧರಿಸಿ ಹೊರಬಿದ್ದ ಸ್ವಲ್ಪ ಕಾಲದಲ್ಲಿಯೇ ಇಷ್ಟು ಮಹತ್ಕಾರ್ಯಗಳನ್ನು ಸಾಧಿಸಿದ್ದಕ್ಕೂ ಮುಂದೆ ಸಾಧಿಸುವದಕ್ಕೂ ತಮ್ಮ ಸದ್ಗುರು ಮಹಾರಾಜರ ಬೆಂಬಲವೇ ಕಾರಣವೆಂದು ಇವರು ಮನಸ್ಸಿನಲ್ಲಿ ಭಾವಿಸಿರುವದಿಷ್ಟೇ ಅಲ್ಲ; ಆ ಭಾವನೆಯು ಮನಸ್ಸನ್ನು ತುಂಬಿ ತುಳುಕಿದಂತೆ ಎಷ್ಟೋ ವೇಳೆ ಆಡಿಕೂಡ ತೋರಿಸಿರುವರು. ಹೀಗೆ ಏನಾದರೂ ಏನು ಹೋದರೂ ಅದು ತಮ್ಮ ಸದ್ಗುರು ಮಹಾರಾಜರ ಇಚ್ಛೆಯೆಂದುಕೊಳ್ಳುವದರ ಮೂಲಕ ಇವರು ಮಹಾರಾಜರ ವಿಷಯದಲ್ಲಿ ಆತ್ಮನಿವೇದನಭಕ್ತಿಯನ್ನು ಪ್ರದರ್ಶನಮಾಡುತ್ತಿರುವರು.

ಇವರಿಗೆ ಧರ್ಮಸಾಮ್ರಾಜ್ಯಯೋಗವಿರುವದೆಂದು ಎಷ್ಟೋ ವರ್ಷಗಳ ಹಿಂದೆ ಜ್ಯೋತಿಷ್ಕರು ಭವಿಷ್ಯತ್ತನ್ನು ಹೇಳಿದ್ದರಷ್ಟೆ. ಅದಕ್ಕೆ ಬೆಂಬಲವಾಗಿ

ಇಷ್ಟರಲ್ಲಿ ಇನ್ನೆರಡು ಸಂಗತಿಗಳು ನಡೆದವು. ಒಂದನೇದೇನೆಂದರೆ ಬ್ರಹ್ಮೀಭೂತರಾದ ಶ್ರೀ ಶೃಂಗೇರೀ ಜಗದ್ಗುರುಮಹಾಸ್ವಾಮಿಗಳವರ ಸ್ವಾರಿಯು ಅವರ ಕೊನೇ ಸಲದ ಸಂಚಾರದಿಂದ ಹಿಂದಿರುಗಿ ಬರುತ್ತ ಶಿವಮೊಗ್ಗ ಎಂಬ ಊರಲ್ಲಿದ್ದಾಗ ಶ್ರೀಮಹಾಭಾಗವತರು ಕಾರ್ಯಾಂತರದಿಂದ ಅವರ ದರ್ಶನಕ್ಕೆ ಅಲ್ಲಿಗೆ ಹೋದರು. ಆಗ ಅವರು ಅತ್ಯಾದರದಿಂದ ಚರಣದರ್ಶನವನ್ನು ಕೊಟ್ಟು ಯೋಗಕ್ಷೇಮವನ್ನು ವಿಚಾರಿಸಿದ್ದಲ್ಲದೆ ನಮ್ಮ ಶ್ರೀಮಹಾಭಾಗವತರು ಬೇಡದಿದ್ದರೂ ಮಹಾತಪಸ್ವಿಗಳಾದ ಶ್ರೀಸ್ವಾಮಿಗಳವರು ತಾವಾಗಿ ಇವರನ್ನು ಮುಂದಕ್ಕೆ ಕರೆದು ನೀವು ಮಾಡುವ ಕಾರ್ಯಗಳಿಗೆ ಸಿದ್ಧಿಕಾರಕವಾಗಿರಲೆಂದು ತಮ್ಮ ಕೃಪಾಕಟಾಕ್ಷವನ್ನು ಅವರ ಮೇಲೆ ಬೀರಿ ವಿಭೂತಿಯನ್ನು ಅಭಿಮಂತ್ರಿಸಿ ಆಶೀರ್ವಾದಪೂರ್ವಕವಾಗಿ ಕೊಟ್ಟು ಕಳುಹಿಸಿದರು. ಎರಡನೆಯದೇನೆಂದರೆ ಆಮೇಲೆ ಕೆಲವು ದಿವಸಗಳಲ್ಲಿ ಶ್ರೀಗೋಂದಾವಳೀ ಮಹಾರಾಜರವರು ಮಹಾಸಮಾಧಿಯನ್ನು ತೆಗೆದುಕೊಳ್ಳುವ ಕಾಲವು ಸನ್ನಿಹಿತವಾಯಿತು. ಆಗ ಅವರು ತಮಗೆ ಆಗಿರುವ ಲೆಕ್ಕವಿಲ್ಲದಷ್ಟು ಶಿಷ್ಯರಲ್ಲೆಲ್ಲಾ ಶ್ರೀಮಹಾಭಾಗವತರ ಮೇಲೆ ತಮ್ಮ ಪ್ರೀತಿಯು ಎಷ್ಟು ಹೆಚ್ಚಾಗಿತ್ತೆಂಬುದನ್ನು ತೋರಿಸುವಂತೆ ಅವರನ್ನು ತಾವೇ ಮುಂದಾಗಿ ಕರೆಸಿಕೊಂಡು ೭-೮ದಿನ ವಿಶೇಷವಾಗಿ ಅವರೊಡನೆ ಏಕಾಂತವನ್ನು ಮಾಡಿ ಅವರನ್ನು ಊರಿಗೆ ಕಳುಹಿಸುವಾಗ ಅಲ್ಲಿಯ ಶಿಷ್ಯಮಂಡಲಿಯೆಲ್ಲಾ ಸೇರಿ ಅವರನ್ನು ಗೋಂದಾವಳಿಯ ಗುರುಸ್ಥಾನದಲ್ಲಿಯೇ ಇಟ್ಟುಕೊಡಬೇಕೆಂದು ಕೇಳಲಾಗಿ ಮಹಾರಾಜರು "ಇವರಿಗೆ ಬರೀ ಗೋಂದಾವಳಿಯ ಗುರುತ್ವವೇಕೆ? ಇವರು ಜಗತ್ತಿಗೆ ಗುರುವಾಗತಕ್ಕವರಿದ್ದಾರೆ" ಎಂದು ಹೇಳಿದರು. ಈ ಮಹಾಪುರುಷರ ಕಾಲಜ್ಞಾನವು ಕಾರ್ಯರೂಪವಾಗುವ ಯೋಗವು ಸನ್ನಿಹಿತವಾಗಿ ಇಲ್ಲಿಂದ ಮುಂದೆ ಇವರ ಜೀವನಚರಿತ್ರೆಯು ಇನ್ನೊಂದು ಸ್ವರೂಪವನ್ನು ತೆಗೆದುಕೊಂಡದ್ದರಿಂದ ಇಲ್ಲಿಗೆ ಮೂರನೇ ಅಂಕವು ಮುಗಿಯಿತೆಂದು ಹೇಳುವ ಹಾಗಿರುವದು.

ಧರ್ಮದ ಪ್ರಸಾರಕ್ಕೂ ಸಂಸ್ಕೃತದ ಅಭ್ಯುದಯಕ್ಕೂ ಇವರು ಎಡೆಬಿಡದೆ ಮಾಡುವ ಮಹತ್‌ಪ್ರಯತ್ನವನ್ನು ನೋಡಿ ಭಗವಂತನು ಕನಿಕರದಿಂದ ಇವರಿಗೆ ತಕ್ಕ ಅನುಕೂಲವನ್ನು ರೂಪಾಂತರದಿಂದ ತಾನಾಗಿ ಒದಗಿಸಿಕೊಡ

ಬೇಕೆಂದು ಯೋಚಿಸಿದನೆಂಬಂತೆ ಕೊಲ್ಹಾಪುರದ ಶ್ರೀಮಂತಶಾಹುಮಹಾ ರಾಜರಿಗೆ ಹೃದಯದಲ್ಲಿ ವಿರಕ್ತರಾಗಿ ಪರಹಿತೈಷಿಗಳಾಗಿ ಸಂಚರಿಸುತ್ತಿದ್ದ ಇವರನ್ನು ತಮ್ಮ ಗುರುವಾಗಿ ಮಾಡಿಕೊಳ್ಳಬೇಕೆಂದು ಉತ್ಕಟವಾದ ಇಚ್ಛೆ ಯುಂಟಾಯಿತು. ಆಗ ಶ್ರೀಕರವೀರಮಠದಲ್ಲಿ ವೃದ್ಧರಾಗಿದ್ದ ಶ್ರೀಜಗದ್ಗುರು ಸ್ವಾಮಿಗಳವರು ಕೂಡ ಶ್ರೀಮಹಾಭಾಗವತರನ್ನು ಆಶ್ರೀಶಂಕರಾಚಾರ್ಯ ಜಗದ್ಗುರು ಪೀಠದ ಮೇಲೆ ಕೂಡಿಸುವ ಸುಯೋಗವನ್ನು ತಮ್ಮ ಭಾಗಕ್ಕೆ ತಂದುಕೊಳ್ಳಬೇಕೆಂದು ಪೂರ್ಣಕುತೂಹಲವನ್ನು ಹೊಂದಿದರು. ಇವೆರಡೂ ಒಂದಕ್ಕೊಂದು ಕೂಡಿ ಧರ್ಮದ ಪ್ರಸಾರಕ್ಕೂ ಸಂಸ್ಕೃತದ ಅಭ್ಯುದಯಕ್ಕೂ ಶ್ರೀಮಠವು ಆಧಾರಸ್ಥಾನವಾಗುವದೆಂಬುದನ್ನು ತೋರಿಸುವದರ ಮೂಲಕ ಶ್ರೀಮಹಾಭಾಗವತರ ಮನಸ್ಸನ್ನು ತಮ್ಮ ಕಡೆಗೆ ಒಲಿಸಿಕೊಂಡವು. ಇದಕ್ಕೆ ಒಪ್ಪುವದರಿಂದ ಸ್ವಲ್ಪ ಕಾಲದಲ್ಲಿಯೇ ತಮ್ಮ ಮನಸ್ಸಿನಲ್ಲಿರುವ ಕಾರ್ಯ ಗಳನ್ನೆಲ್ಲಾ ಸಮರ್ಪಕವಾಗಿ ಸಾಧಿಸಿ ಮುಂದೆ ಅವುಗಳನ್ನು ಚೆನ್ನಾಗಿ ನಡೆಸಿಕೊಂಡು ಹೋಗಬಲ್ಲ ಒಬ್ಬ ಸಚ್ಛಿಷ್ಯನನ್ನು ಸಿದ್ಧಮಾಡಿಟ್ಟು ಅಲ್ಲಿಂದ ಮುಂದೆ ಒಂದುಕಡೆ ಸ್ವಸ್ಥವಾಗಿರಬಹುದೆಂದು ಇವರ ಮನಸ್ಸಿಗೆ ತೋಚಿತು. ಇವರ ಮನೆಯ ಸ್ಥಿತಿಯನ್ನು ವಿಚಾರಕ್ಕೆ ತಂದುಕೊಂಡರೆ ಅದು ಇವರಿಗೆ ಸರ್ವವಿಧದಲ್ಲಿಯೂ ಉತ್ಸಾಹಕಾರಕವಾಗಿತ್ತೇ ಹೊರತು ಅದನ್ನು ಬಿಟ್ಟು ಹೋಗಬೇಕೆಂಬ ಮನಸ್ಸನ್ನು ಹುಟ್ಟಿಸುವಂಥದ್ದೆಳ್ಳಷ್ಟು ಇರಲಿಲ್ಲ. ಮನೆಯ ಯಜಮಾನರಾದ ಇವರು ಮನೆಯ ಆದಾಯವ್ಯಯಗಳ ಕಡೆಗೆ ಕಡೆಗಣ್ಣನ್ನು ಕೂಡ ಹಾಕದೆ ಇದ್ದದ್ದಿಷ್ಟೇ ಅಲ್ಲದೆ ತಾವು ಮಾಡುವ ಸಾರ್ವಜನಿಕಹಿತಕ್ಕಾಗಿ ಮನೆಯ ಹಣವನ್ನೇ ಧಾರಾಳವಾಗಿ ಬಳಸಿಕೊಂಡು ವಿಶೇಷವಾಗಿ ಹೊರ ಹೊರಗೆ ಸಂಚಾರಮಾಡುತ್ತಿದ್ದರೂ ಕೂಡ ಇವರು ಮನೆಯ ಯಜಮಾನ ರೆನಿಸಿಕೊಂಡಿರೋಣವೇ ತಮಗೊಂದು ಹೆಚ್ಚಿನ ಶ್ರೇಯಸ್ಕರವೆಂದು ಮನೆಯ ಮಂದಿ ಎಲ್ಲಾ ಇವರಲ್ಲಿ ಏಕಮುಖವಾದ ಪ್ರೇಮವನ್ನಿಟ್ಟಿದ್ದರು. ಮನೆಯಲ್ಲಿ ವೃದ್ಧಳಾದ ತಾಯಿ; ಆರೋಗ್ಯಸಂಪತ್ತು ಸಾಲದ ಹೆಂಡತಿ; ಇನ್ನೂ ಹನ್ನೆ ರಡನೇ ವಯಸ್ಸಿನಲ್ಲಿರುವ ಗಂಡುಮಗ; ನಿನ್ನೆ ಮೊನ್ನೆ ಗಂಡನ ಮನೆಗೆ ಹೋಗಿರುವ ಹೆಣ್ಣುಮಗಳೊಬ್ಬಳು; ಇನ್ನೂ ಲಗ್ನವಾಗಬೇಕಾಗಿರುವ ಮಗ

ಳೊಬ್ಬಳು; ಅಕಾಲಮರಣವನ್ನು ಹೊಂದಿದ ಹಿರಿಯುಮಗಳ ಮಗಳೊಬ್ಬಳು; ಇನ್ನೂ ಕಾಲೇಜಿನಲ್ಲಿ ಓದುತ್ತಿರುವ ತಮ್ಮನೊಬ್ಬನು; ಆತನ ಹೆಂಡತಿ; ಊರಿನ ಗೌಡಿಕೆಯನ್ನು ನೋಡಿಕೊಂಡು ಮನೆಯ ವ್ಯವಹಾರಗಳನ್ನು ನಡೆಸುವ ತಮ್ಮನೊಬ್ಬನು; ಆತನ ಹೆಂಡತಿ ಮತ್ತು ಮಗಳು; ಆತನೊಬ್ಬನಿಂದಲೇ ನೋಡಿಕೊಳ್ಳುವದಕ್ಕಾಗಲಾರದಷ್ಟು ಹೊಲಮನೆಗಳು. ಹೀಗಿದ್ದರೂ ಇಷ್ಟೇ ಜನರ ಹಿತಚಿಂತನೆಯು ತನ್ನದೆಂಬ ಸಂಕೋಚಬುದ್ಧಿಯನ್ನು ವಿಧಿಪ್ರಕಾರವಾಗಿ ಬಿಟ್ಟು ಸಾರ್ವಜನಿಕಹಿತಾರ್ಥವಾದ ದೀಕ್ಷೆಯೆಂಬಂತೆ ಸನ್ಯಾಸಗ್ರಹಣವನ್ನು ಮಾಡುವದರಿಂದ ತಮ್ಮ ಸದ್ಗುರುಮಹಾರಾಜರ ಅಜ್ಞೆಯಂತೆ ಧರ್ಮವನ್ನೂ ಧರ್ಮಕ್ಕೆ ಸಾಧನವಾದ ವಿದ್ಯೆಯನ್ನೂ ಬೆಳೆಸಬಹುದೆಂದು ತೋರುತ್ತಲೇ ಮನೆಯ ಮಂದಿಯ ಸಂಬಂಧವನ್ನು ಒಂದು ಹುಲ್ಲಿಗಿಂತ ಕಡೆಯಾಗಿ ಕಂಡು ಇದು ತಮ್ಮ ಮಹಾರಾಜರ ಪರಮಾನುಗ್ರಹವೆಂದು ಭಾವಿಸಿ ಇವರು ಆಶ್ರಮ ಸ್ವೀಕಾರವನ್ನು ಸಂಕಲ್ಪಮಾಡಿಕೊಂಡು ಪ್ರಯಾಣಸನ್ನದ್ಧರಾದರು. ಮನೆಯಲ್ಲಿ ನಾನಾ ವಿಧವಾದ ದುಃಖಗಳೊದಗಿದವೆಂದೂ ಸನ್ಯಾಸಮಾಡಿದರೆ ತನ್ನ ದಾರಿದ್ರ್ಯವು ಇಂಗಿ ಹೆಚ್ಚಿನ ಸುಖಸಂಪತ್ತು ಕೈಸೇರೀತೆಂದೂ ತಳಮಳದಿಂದ ತಲೇ ತಪ್ಪಿಸಿಕೊಂಡುಹೋಗಿ ಆಶ್ರಮಸ್ವೀಕಾರ ಮಾಡುವವರು ಎಷ್ಟೋ ಜನರಿರಬಹುದು. ಇವರು ಸುಖಸಮೃದ್ಧಿಯಿಂದಲೂ ಸಂಪತ್ಸಮೃದ್ಧಿಯಿಂದಲೂ ತುಂಬಿತುಳುಕುವ ಮನೆಯನ್ನು ಬಿಟ್ಟು ಹೊರಡುವದಕ್ಕೆ ಸಿದ್ಧವಾದದ್ದನ್ನೂ ಹಾಗೆ ಹೊರಡುವಾಗಲೂ ಬಂಧುಗಳಿಗೂ ಬಳಗದವರಿಗೂ ಇಷ್ಟರಿಗೂ ಮಿತ್ರರಿಗೂ ಎಲ್ಲರಿಗೂ ಹೇಳಿ ಕೇಳಿ ನಗುತ್ತ ನಲಿಯುತ್ತ ಹೊರಟದ್ದನ್ನು ನೋಡಿದರೆ ಇವರ ವೇದಾಂತಜ್ಞಾನವೂ ಗುರುಸೇವೆಯೂ ಇವರ ಮನಸ್ಸನ್ನು ಎಂಥ ಸ್ಥಿತಿಗೆ ತಂದಿಟ್ಟಿತ್ತೆಂಬುದನ್ನು ವಿಚಕ್ಷಣರಾದವರು ಸ್ವಲ್ಪವಾದರೂ ಊಹಿಸಲಾಗುವದು. ಚಿಕ್ಕಂದಿನಿಂದಲೂ ಮನಸ್ಸಿನ ಶಾಂತಿಯನ್ನೇ ಹಂಬಲಿಸುತ್ತಿದ್ದು ಅದನ್ನು ಸಾಧಿಸಿಕೊಂಡಿದ್ದಂಥ ಇವರ ಮಾತು ಹಾಗಿರಲಿ. ಇವರು ಎಲ್ಲಿಗಾದರೂ ಪರಸ್ಥಳಕ್ಕೆ ಹೋದರೆ ಅವರು ತಿರುಗಿಬರುವ ದಿವಸವನ್ನೇ ಕನವರಿಸಿಕೊಳ್ಳುತ್ತಿದ್ದು ಅವರು ಮನೆಗೆ ಬರುತ್ತಲೇ ಅತ್ಯುತ್ಸಾಹದಿಂದ ಅವರನ್ನು ಮುತ್ತಿಕೊಂಡು ಅವರ ಸಾನ್ನಿಧ್ಯದಿಂದ ಹಿಗ್ಗುತ್ತಿದ್ದ ಇವರ

ಮನೆಯ ಮಂದಿಯು ತಮ್ಮ ಸುಖವನ್ನೇ ಮುಖ್ಯವಾಗಿ ಭಾವಿಸದೆ ನಾಲ್ಕು ಮಂದಿಯ ಹಿತವು ಹೆಚ್ಚಿನದೆಂದು ಇವರ ಸಂಕಲ್ಪಕ್ಕೆ ಸಮ್ಮತಿಯನ್ನು ಕೊಟ್ಟಿದ್ದು ಇವರ ಸಂಬಂಧದ ಫಲವಾಗಿರುವ ಅವರ ಉದಾರ ಹೃದಯವನ್ನು ವ್ಯಕ್ತಗೊಳಿಸುತ್ತದೆ. ಇದಕ್ಕಿಂತ ಹೆಚ್ಚಿನದಿನ್ನೊಂದೇನೆಂದರೆ ಆಶ್ರಮಸ್ವೀಕಾರವನ್ನು ಮಾಡುತ್ತೇನೆಂದು ಇವರು ಮನೆಯನ್ನು ಬಿಟ್ಟು ಹೊರಟಾಗ ಇವರ ವಿಯೋಗದಿಂದಾಗುವ ದುಃಖವು ಎಲ್ಲರಿಗಿಂತ ಹೆಚ್ಚಾಗಿ ಇವರ ಹೆಂಡತಿಗೆ ಇರಬೇಕಾದ್ದು ಸಹಜವಷ್ಟೆ. ಆಸಮಯದಲ್ಲಿ ಅವರಿಗೆ ಇವರು ಹೇಳಿದ ಸಮಾಧಾನದ ಮಾತು ನೆನಪಿನಲ್ಲಿಡತಕ್ಕದಾಗಿದೆ. ಅದೇನೆಂದರೆ "ನೀನು ನಿನ್ನ ಹಿತವೊಂದನ್ನು ನೋಡಿಕೊಂಡು ನನ್ನ ಆಶ್ರಮಸ್ವೀಕಾರದಿಂದ ನೊಂದುಕೊಳ್ಳುವದಾದರೆ ನಾನು ಅದಕ್ಕೆ ಹೋಗುವದೇ ಇಲ್ಲ. ಬಹು ಜನರ ಹಿತದ ಕಡೆಗೆ ಲಕ್ಷ್ಯವನ್ನು ಕೊಟ್ಟು ನಿನಗೆ ದುಃಖವಾದರೂ ಸಂತೋಷದಿಂದ ಸಹಿಸಿಕೊಳ್ಳುವದಾದರೆ ಮಾತ್ರ ನಾನು ಪ್ರಯಾಣಮಾಡುತ್ತೇನೆ. ಹೀಗೆಂದು ಅವರು ಹೇಳಲಾಗಿ ಈಮಾತನ್ನು ಕೇಳಿದ ಮೇಲೆ ಅವರ ಕುಟುಂಬವು ತಮ್ಮ ದುಃಖವನ್ನೂ ನುಂಗಿಕೊಂಡದ್ದಲ್ಲದೆ ಶ್ರೀಗಳ ವಿಯೋಗವನ್ನು ಸಹಿಸಲಾರದ ಇತರರಿಗೂ ಕೂಡ ತಾವೇ ಸಮಾಧಾನವನ್ನು ಹೇಳುವಂಥವರಾದದ್ದನ್ನು ನೋಡಿದರೆ ಶ್ರೀಗಳ ಸಾಮಿಪ್ಯಪ್ರಭಾವವು ಎಷ್ಟು ಹೆಚ್ಚಿನ ಸಮಾಧಾನವನ್ನು ತಂದುಕೊಟ್ಟಿತ್ತೆಂಬುದು ಕಣ್ಣಿಗೆ ಕಟ್ಟಿದಂತೆ ಕಾಣುತ್ತದೆ. ಇರಲಿ.

ಇತ್ತ ಇವರು ಕೊಲ್ಹಾಪುರಕ್ಕೆ ಬಂದು ಇದೇ ಶಾ. ಶ. ೧೮೩೪ನೇ ನಳ ಸಂವತ್ಸರ ಜ್ಯೇಷ್ಠ ಶು. ೧೩ಗೆ ಸಲ್ಲುವ ಕ್ರಿ. ಶ. ೧೯೧೨ನೇ ಜೂನ್ ೩ನೇ ತಾರೀಖಿನ ದಿವಸ ಸನ್ಯಾಸವನ್ನು ಸ್ವೀಕಾರಮಾಡಿ ಶ್ರೀಜಗದ್ಗುರು ಶಂಕರಾಚಾರ್ಯರ ಸಿಂಹಾಸನದಲ್ಲಿ ವಿರಾಜಿಸುತ್ತಿರುವರು. ಇವರ ಆಶ್ರಮಸ್ವೀಕಾರ ಕಾಲದಲ್ಲಿ ಮದರಾಸು, ತಿನ್ನವೆಲ್ಲಿ, ಮೈಸೂರು, ಪುಣೆ, ಮುಂಬಯಿ, ಬಡೋದೆ, ಖಾಂದೇಶ, ಕಾಶಿ ಮೊದಲಾದ ಭರತಖಂಡದ ಬೇರೆಬೇರೆ ಕಡೆಗಳಿಂದ ನಮ್ಮ ಶ್ರೀಗಳ ಮಿತ್ರರಾದ ಪಂಡಿತರೂ ಪ್ರೊಫೆಸರುಗಳೂ, ಪ್ರಿನ್ಸ್‌ಪಾಲರುಗಳೂ ಲಾಯರುಗಳೂ ಸಾಕ್ಷಾತ್ತಾಗಿ ಬಂದು ತಮ್ಮ ಭಕ್ತಿವಿಶ್ವಾಸಗಳನ್ನು ತೋರಿಸಿದರು. ಈಮಂಡಲಿಯಲ್ಲಿ ಯುರೋಪಿಯನ ಮತ್ತು ಜಪಾನಿ ಪ್ರೊಫೆಸರು

ಗಳು ಕೂಡ ಇದ್ದರು. ನಮ್ಮ ಶ್ರೀಗಳು ಹಿಂದೆ ಅಧಿಕಾರಮಾಡಿದ್ದ ಶ್ರೀ ಕೂಡಲೀಮಠದ ಶ್ರೀಸಂಸ್ಥಾನಾಧಿಪತಿಗಳು ಕೂಡ ಈಸಮಾರಂಭಕ್ಕೆ ತಮ್ಮ ಪ್ರತಿನಿಧಿಯನ್ನು ಕಳುಹಿಸುವವರ ಮೂಲಕ ತಮ್ಮ ಸಹಾನುಭೂತಿಯನ್ನು ಪ್ರಕಾಶಗೊಳಿಸಿರುವರು. ಇದಲ್ಲದೆ ನಮ್ಮ ಶ್ರೀಗಳ ಪರಾರ್ಥವ್ಯವಹಾರದ ಪ್ರಯೋಜನವನ್ನು ಪಡೆದಿರುವ ಎಲ್ಲಾ ಕಡೆಯುವರೂ ಮತ್ತು ಇವರ ವಿಷಯ ದಲ್ಲಿ ಪೂಜ್ಯಬುದ್ಧಿಯುಳ್ಳವರಾಗಿದ್ದು ಈಗ ಈ ಸಮಾರಂಭಕ್ಕೆ ಬರುವದಕ್ಕೆ ಅನುಕೂಲಿಸದೆ ಇದ್ದ ವೈಸರಾಯ್, ಮುಂಬಯಿ ಗವರ್ನರ್, ಮದರಾಸು ಗವರ್ನರ್, ಬಡೋದೆಯ ಶ್ರೀಮಂತಮಹಾರಾಜರು, ಮೈಸೂರು ಸಂಸ್ಥಾನದ ಶ್ರೀಮಂತಯುವರಾಜರು, ಮೈಸೂರು ದಿವಾನರವರು, ಮದರಾಸ್ ಕೌನ್ಸಿಲರ್, ಮುಂಬಯಿ ಕೌನ್ಸಿಲರ್, ಕಲ್ಕತ್ತೆಯ ಹೈಕೋರ್ಟು ಜಡ್ಜ್ ಮೊದಲಾದ ಸುಪ್ರತಿಷ್ಠಿತ ಜನರೂ ಬಂಗಾಳ, ಕಾಶ್ಮೀರ, ಗುಜರಾತ್, ಮಲಬಾರ್, ಸಿಲೋನ್ ಮೊದಲಾದ ಕಡೆಗಳಲ್ಲಿರುವ ಎಷ್ಟೋ ಜನ ದೊಡ್ಡ ಮನುಷ್ಯರೂ ತಂತೀವರ್ತಮಾನದ ಮೂಲಕವಾಗಿಯೂ ಪತ್ರಗಳ ಮೂಲಕ ವಾಗಿಯೂ ಅಭಿನಂದನಮಾಡಿರುವರಲ್ಲದೆ ತಮ್ಮ ಹೃದಯದಲ್ಲಿ ತುಂಬಿ ಹೊರ ಸೂಸುವ ಧನ್ಯವಾದಗಳನ್ನು ಸೂಚಿಸುವಂಥ ಮಾನಪತ್ರಗಳ ಸುರಿಮಳೆ ಯಿಂದ ಶ್ರೀಮಹಾಭಾಗವತರಿಗೆ ಅಭಿಷೇಕವನ್ನು ಮಾಡಿದರು. ಈಮಾನ ಪತ್ರಗಳಲ್ಲಿ ವಾಷಿಂಗಟನ ಯೂನಿವರ್ಸಿಟಿಯವರದು ಕೂಡ ಸೇರಿರುವದು.

ಹೀಗೆ ಪಟ್ಟಾಭಿಷೇಕವಾದ ಮೇಲೆ ಇವರು ಶ್ರೀಮಠದಲ್ಲಿ ದೇವತಾರ್ಚನೆ ಮೊದಲಾದವುಗಳಲ್ಲಿ ಸುವ್ಯವಸ್ಥೆಯನ್ನಿಟ್ಟು ಸೂತ್ರಭಾಷ್ಯವನ್ನೂ ಉಪನಿಷದ್ಭಾಷ್ಯವನ್ನೂ ಗೀತಾಪ್ರವಚನವನ್ನೂ ಸಾಗಿಸುತ್ತಿರುವರಲ್ಲದೆ ಕ್ರಮ ಕ್ರಮವಾಗಿ ವೇದಾಂತಗ್ರಂಥಗಳನ್ನೆಲ್ಲಾ ಹೇಳಿ ಮುಗಿಸಬೇಕೆಂದಿರುವರು. ಇವರ ಪ್ರವಚನಗಳನ್ನು ಎಷ್ಟೋ ಜನರು ಚೆನ್ನಾಗಿ ಮನನಮಾಡಿಕೊಂಡು ಆಗಾಗ ಬಂದು ತಮ್ಮ ಸಂಶಯಗಳನ್ನೆಲ್ಲಾ ಕಳೆದುಕೊಂಡು ಹೋಗುತ್ತ ಪ್ರಯತ್ನದಿಂದ ಪರಮಾರ್ಥಸಾಧನಗಳನ್ನು ತಿಳಿದು ನಡೆಸುತ್ತ ಇರುವದನ್ನು ನೋಡಿದರೆ ಇವರ ಉಪದೇಶದಿಂದ ಧರ್ಮಪ್ರಸಾರವು ಎಷ್ಟು ತೀವ್ರವಾಗಿರುತ್ತೆಂಬುದು ಕಣ್ಣಿಗೆ ಕಟ್ಟಿದಂತೆ ಕಾಣುತ್ತದೆ. ಈ ಸಂದರ್ಭದಲ್ಲಿ ಶ್ರೀಗಳು

ಅನುಷ್ಠಾನ ಮೊದಲಾದವುಗಳಲ್ಲಿ ಕೇವಲ ಪ್ರಾಚೀನ ಪದ್ಧತಿಯನ್ನು ಸಾಧಿಸುತ್ತಿರುವರಲ್ಲದೆ ವಿದ್ಯಾಪ್ರಸಾರಸಂಬಂಧವಾದ ಕೆಲಸಗಳನ್ನು ಸಾಧಿಸುವದರಲ್ಲಿ ಆಧುನಿಕ ಪದ್ಧತಿಯನ್ನು ಅವಲಂಬಿಸುತ್ತಿರುವರು. ವಿದ್ಯಾಪ್ರಸಾರಕ್ಕಾಗಿ ಈಗಾಗಲೆ ಇಲ್ಲಿ "ಛತ್ರಪತಿ ಸಂಸ್ಕೃತ ಮಹಾವಿದ್ಯಾಲಯ"ವೆಂಬುದೊಂದು ಸಂಸ್ಥೆಯನ್ನು ಸ್ಥಾಪಿಸಿ ಒಳ್ಳೇ ವ್ಯುತ್ಪನ್ನರಾದ ಪಾಠಕರನ್ನಿಟ್ಟು ಪ್ರೌಢವಿದ್ಯಾರ್ಥಿಗಳ ಸಂಸ್ಕೃತವ್ಯಾಸಂಗಕ್ಕೆ ಉತ್ತಮವಾದ ಸೌಕರ್ಯವನ್ನು ಕಲ್ಪಿಸಿ ಅಲ್ಲಿ ಅವರಿಗೆ ಆಂಗ್ಲಭಾಷಾಪರಿಚಯವೂ ಚೆನ್ನಾಗಿ ಆಗುವಂತೆ ಮಾಡಿರುವರು. ಪುಣೆಯ ಫರ್ಗ್ಯುಸನ್ ಕಾಲೇಜಿನಲ್ಲಿ ಪೂರ್ವದೇಶದ ತತ್ತ್ವಶಾಸ್ತ್ರವನ್ನೂ ಪಶ್ಚಿಮದೇಶದ ತತ್ತ್ವಶಾಸ್ತ್ರವನ್ನೂ ಕೂಡಿ ಕಲಿಯುವವರಿಗೆ ತಕ್ಕ ಸಾಧನಗಳುಂಟಾಗಿರುವವು. ಇಷ್ಟೇ ಏಕೆ ಸಂಸ್ಕೃತವಿಶ್ವವಿದ್ಯಾಲಯವನ್ನೇ ಸ್ಥಾಪಿಸಿಬಿಡಬೇಕೆಂದು ಕೂಡ ಅವರ ಮಹತ್ಕಾಂಕ್ಷೆ ಇರುವದು. ಈರೀತಿಯಲ್ಲಿ ಇವರು ತಮ್ಮ ಸನ್ಯಾಸವು ಮುಖ್ಯವಾಗಿ ಧರ್ಮದ ಪ್ರಸಾರಕ್ಕೂ ಸಂಸ್ಕೃತಭಾಷೆಯ ಅಭ್ಯುದಯಕ್ಕೂ ಯಾವ ಪ್ರಯತ್ನವೂ ಉಳಿಯದಂತೆ ಮಾಡುವದಕ್ಕೆ ವಹಿಸಿದ ದೀಕ್ಷೆಯೆಂಬುದನ್ನು ಸರ್ವವಿಧದಲ್ಲಿಯೂ ಮನಗಾಣಿಸುತ್ತಿರುವರು. ಈಎಲ್ಲಾ ವಿದ್ಯಮಾನಗಳೂ ವಾಚಕರ ಮನಃಪಥದ ಮುಂದೆ ಹಾದುಹೋಗುವದರಿಂದ ವಾಚಕರಿಗೆ ಈಗ್ರಂಥದಲ್ಲೊಂದು ಬಗೆಯ ಆದರ ಉಂಟಾಗುವದಕ್ಕೆ ಇಷ್ಟು ಸಾಕೆಂದು ಈ ವಿಷಯವನ್ನು ಇಲ್ಲಿಗೆ ಮುಗಿಸುತ್ತೇನೆ. ಈ ಪುಸ್ತಕದ ಮುದ್ರಿತಪತ್ರಗಳನ್ನು ಎರಡನೇ ಸಲ ನೋಡುವದಕ್ಕೆ ಅವಕಾಶವು ಸಿಕ್ಕದೆ ಹೋದುದರಿಂದ ಅಲ್ಲಲ್ಲಿ ಉಳಿದಿರುವ ಅಕ್ಷರಸ್ಖಾಲಿತ್ಯಗಳನ್ನು ಆರಿಸಿ ಶುದ್ಧಿಪತ್ರವೊಂದನ್ನು ಜೋಡಿಸಿರುವೆನು. ವಾಚಕರು ದಯವಿಟ್ಟು ಮೊದಲು ಅದರಂತೆ ತಿದ್ದಿಕೊಂಡು ಓದಬೇಕೆಂದು ಬೇಡುವೆನು.

ಕೊಲ್ಹಾಪುರ,
ಶ. ೧೮೪೯ ಆಶ್ವೀನ ಶು. ೧೦
ವಿಜಯಾದಶಮಿ.

ಚಿದಂಬರಯ್ಯ,
ಪ್ರಕಾಶಕ.

श्रीः



# ಭಗವದ್ಗೀತಾಸಾರವಿಚಾರ

ವೆಂಬ

# ವ್ಯಾಖ್ಯಾನಮಾಲೆ

## ೧ನೇ ವ್ಯಾಖ್ಯಾನ — ಗೀತೆಯು ಕೃತಕರೂಪಕವೊ?

(ಮಂಗಳಾಚರಣೆ.)

श्रीरामचंद्रचरणौ मनसा स्मरामि ।
श्रीरामचंद्रचरणौ वचसा गृणामि ॥
श्रीरामचंद्रचरणौ शिरसा नमामि ।
श्रीरामचंद्रचरणौ शरणं प्रपद्ये ॥

ಸಭ್ಯರಾದ ಪ್ರಿಯಬಾಂಧವರೆ,

ಇಲ್ಲಿಯ ಕೆಲವು ಸದ್ಗೃಹಸ್ಥರ ಇಚ್ಛೆಯ ಪ್ರಕಾರ ನಾನು ಈಗ ವ್ಯಾಖ್ಯಾನಮಾಲೆಯನ್ನು ಪ್ರಾರಂಭಿಸುವದಕ್ಕೆ ನಿಂತಿದ್ದೇನೆ. ವ್ಯಾಖ್ಯಾನ-

ಮಾಲೆಯ ವಿಷಯವು ಭಗವದ್ಗೀತಾಸಾರವಿಚಾರವೆಂದಿದ್ದು ಇಂದಿನ ವ್ಯಾಖ್ಯಾನದ ವಿಷಯವು "ಗೀತೆಯು ಕೃತಕರೂಪಕವೊ?" ಎಂದು ಇರುವದು ಪ್ರಕಟನಪತ್ರಿಕೆಯಿಂದ ನಿಮಗೆಲ್ಲರಿಗೂ ತಿಳಿದೇ ಇದೆ.

ಈಗ ನಾನು, ಆ ವಿಷಯವನ್ನು ಆರಂಭಿಸುವದಕ್ಕೆ ಮೊದಲು, ನಿಮಗೆಲ್ಲರಿಗೂ ಒಂದು ವಿನಂತಿಯನ್ನು ಮಾಡುತ್ತೇನೆ. ನನಗೆ, ದೇವಾಲಯಗಳಲ್ಲಿ ಕುಳಿತುಕೊಂಡು ಪುರಾಣನಿರೂಪಣಮಾಡುವ ರೂಢಿಯು ಸ್ವಲ್ಪ ಇದೆಯೇ ಹೊರತು, ಹೀಗೆ ಥಿಯೇಟರಿನಲ್ಲಿ ನಿಂತು ಉಪನ್ಯಾಸಮಾಡುವ ಅಭ್ಯಾಸವು ತೀರ ಕಡಮೆ ಅಥವಾ ಏನೂ ಇಲ್ಲವೆಂದರೂ ಸಲ್ಲುವದು. ಶ್ಲೋಕಗಳನ್ನು ಓದಿ ಅರ್ಥವಿಸ್ತಾರವನ್ನು ಮಾಡುವದು ಅಷ್ಟು ಕಠಿನವಲ್ಲ. ಭಗವದ್ಗೀತೆಯಂಥ ಮಹತ್ತಮವಾದ ವಿಷಯದ ಸಾರವನ್ನು ಸಂಗ್ರಹಿಸಿ ಹಿಂದುಮುಂದಿನ ಸಂಬಂಧವನ್ನು ಬಿಡದೆ ಐದಾರುದಿನ ಹೇಳುವದು—

"बह्वपि स्वेच्छया कामं प्रकीर्णमभिधीयते ।
अनुज्झितार्थसंबंधः प्रबंधो दुरुदाहरः ॥"

ಎಂದು ಶ್ರೀಮಾಘಕವಿಗಳು ಬರೆದಿರುವಂತೆ ದುಷ್ಕರವೇ ಸರಿ; ಆದರೂ ಇದು ಸಭೆಯೆಂದು ಭಾವಿಸದೆ, ಮನೆಯಲ್ಲಿ ಪ್ರೀತ್ಯಾಸ್ಪದರಾದ ನಾಲ್ಕುಮಂದಿಯ ಮುಂದೆ ಮನೋಗತವನ್ನು ಪ್ರೇಮದಿಂದ ಹೇಳುವಂತೆ, ನಾನು ಈಗ ನಿಷ್ಕಪಟವಾದ ಪ್ರೀತಿಯಿಂದ ನನ್ನ ವಿಚಾರವನ್ನು ಸರಳವಾಗಿ ನಿಮ್ಮ ಮುಂದೆ ಇಡುವೆನು. ನಾನು ನಗರವಾಸಿಯುಲ್ಲವೆಂಬುದು ನಿಮಗೆ ತಿಳಿದೇ ಇರಬಹುದು. ನಗರವಾಸಿಗಳಾದ ಜನರು ತಮ್ಮ ಎಷ್ಟೋ ನೆರೆಹೊರೆಯವರಲ್ಲಿಯೂ ಕೂಡ ಹೆಚ್ಚು ಪರಿಚಯವನ್ನು ಬೆಳೆಸದೆ ನಿಯಮಿತರಾಗಿ ವರ್ತಿಸುವ ರೂಢಿ ಇರುವದರಿಂದ ನಾಗರಿಕನಾದ ಗೋಪಾಲಕನು ತನ್ನ ಗೋಗಳ ನೆರಳುಕೂಡ ಯಾರಮೇಲೂ ಎಷ್ಟುಮಾತ್ರವೂ ಬೀಳದಂತೆ ಎಚ್ಚರಿಕೆಯಿಂದ ಹೊಡೆದುಕೊಂಡು ಹೋಗುವದುಂಟು; ಆದರೆ ಹಳ್ಳಿಗಳಲ್ಲಿ ಬಹುಶಃ ಎಲ್ಲರೂ—ನಡುವೆ ಒಮ್ಮೊಮ್ಮೆ ಜಗಳವಾಡುತ್ತಿದ್ದರೂ—ಎಲ್ಲರಕೂಡ ಋಣಾನುಬಂಧ-

ವನ್ನಿಟ್ಟುಕೊಂಡಿರುವದರಿಂದ ಅಲ್ಲಿಯ ಗೋಪಾಲಕನು ತನ್ನ ಗೋಗಳನ್ನು ಅಷ್ಟು ನಿರ್ಬಂಧಪಡಿಸದೆ ಸಹಜವಾಗಿ ಹೊಡೆದುಕೊಂಡು ಹೋಗುವನು. ಆದರಂತೆ ಹಳ್ಳಿಯವನಾದ ನನಗೆ ಜನರಕೂಡ ಹೆಚ್ಚುಕಡಮೆ ಆದದ್ದು ತಿಳಿಯುದಷ್ಟು ಅಕೃತ್ರಿಮಪ್ರೇಮದಿಂದ ವರ್ತಿಸುವ ಅಭ್ಯಾಸವೇ ವಿಶೇಷ-ವಾಗಿರುವದರಿಂದ ನಾನು ಈಗ ನನ್ನ "ಗೋ" ಎಂದರೆ ವಾಣಿಯನ್ನು ಅಷ್ಟು ಎಚ್ಚರದಿಂದ ನಿಮ್ಮ ಮುಂದೆ ಸಾಗಿಸಿಕೊಂಡು ಹೋಗಲರಿಯೆನು. ನಾನು, ಸಹಜವಾಗಿ ಆಡುವದು ಕೂಡ, ಈಗ ಎಲ್ಲಿ ಯಾರ ಮನಸ್ಸಿಗೆ ಹತ್ತೀತೋ ಎಂದು ಆದಷ್ಟು ಎಚ್ಚರಿಕೆಯಿಂದಲೇನೋ ಇರುವೆನು; ಆದರೂ ನಿಮಗೆ ನನ್ನ ಮಾತಿನಲ್ಲಿ ನ್ಯೂನಾಧಿಕವೇನಾದರೂ ತೋರಿದರೂ ಅದನ್ನು ಲಕ್ಷ್ಯಮಾಡದೆ ಆದರಿಂದ ಯಾರೂ ಏನೂ ಮನಸ್ಸಿಗೆ ಹಚ್ಚಿಕೊಳ್ಳದಷ್ಟು ನೀವೆಲ್ಲರೂ ಉದಾರ-ಹೃದಯರಾಗಬೇಕು. ಆಲಿವ್ಹರ್ ಗೋಲ್ಡ್‌ಸ್ಮಿತ್ಥ ಸಾಹೇಬರು—

"**Offences are easily pardoned where there is love in the bottom.**"

ಎಂದು ಹೇಳಿರುವಂತೆ ಒಳಗೆ ಪ್ರೀತಿ ಇದ್ದರೆ ಅಪರಾಧವಾವುದೂ ಕಾಣದೆ ಹೋಗುವದು; ಇಲ್ಲದಿದ್ದರೆ ಒಂದೊಂದು ವೇಳೆ ನಿಷ್ಕಾರಣವಾಗಿ ವಿಪರೀತ-ಭಾವನೆಯುಂಟಾಗುವದು.

"अन्यमुखे परिवादो यः प्रियवदने स एव परिहासः ।
इतरेंधनजन्मा यो धूमस्सोऽगरुभवो धूपः ॥"

ಎಂದು ಸುಭಾಷಿತವಿರುವಂತೆ ಬೇರೆ ಕಟ್ಟಿಗೆಯಿಂದ ಹುಟ್ಟಿದ ಹೊಗೆಯು ಧೂಮವೆನಿಸಿಕೊಂಡು ಅಪ್ರಿಯವಾದರೂ ಅಗರುವಿನಿಂದ ಜನಿಸಿದುದು ಧೂಪವೆನಿಸಿಕೊಂಡು ಪ್ರಿಯವಾಗುವ ಹಾಗೆ, ಅನ್ಯರ ಬಾಯಿಂದ ಬಂದು ಪರಿವಾದ ಅಂದರೆ ನಿಂದೆ ಎನಿಸಿಕೊಂಡು ಅಪ್ರಿಯವಾದರೂ ಪ್ರೀತಿಯ ಜನರ ಬಾಯಿಂದ ಬಂದ ಅದೇ ಮಾತು ಪರಿಹಾಸ ಅಂದರೆ ವಿನೋದವೆನಿಸಿಕೊಂಡು ಪ್ರಿಯವಾಗುವದು. ಆದಕಾರಣ ನಾನು ನಿಮ್ಮೆಲ್ಲರನ್ನೂ ಬಂಧುಗಳೆಂದು ತಿಳಿದು ನಿಮ್ಮ ಮುಂದೆ ಪ್ರೇಮದಿಂದ ಭಾಷಣಮಾಡುವದಕ್ಕೆ ನಿಂತಂತೆ

ನೀವೂ ಬಾಂಧವಪ್ರೇಮದಿಂದಲೇ ಕೇಳುತ್ತ ಹೋಗಬೇಕು. ನನಗೆ ಯಾವ ಧರ್ಮದ ವಿಷಯಕ್ಕೂ, ಯಾವ ಜಾತಿಯ ವಿಷಯಕ್ಕೂ, ಯಾವ ಮತದ ವಿಷಯಕ್ಕೂ ಏನೂ ತಿರಸ್ಕಾರ ಅಥವಾ ವಿರೋಧವಿಲ್ಲವೆಂದು ಪ್ರತಿಜ್ಞಾ-ಪೂರ್ವಕವಾಗಿ ಹೇಳುವೆನು. ನನಗೆ ಹಿಂದೂಧರ್ಮ, ಕ್ರಿಸ್ತೀಧರ್ಮ, ಮಹಮ್ಮದೀಯಧರ್ಮ ಮುಂತಾದ ಎಲ್ಲ ಧರ್ಮಗಳೂ ದ್ವೈತಾದ್ವೈತ-ವಿಶಿಷ್ಟಾದ್ವೈತಗಳೂ ಮತ್ತು ಎಲ್ಲ ಪಂಥಗಳೂ ಮಾನ್ಯವೇ ಆಗಿವೆ. ಎಲ್ಲ-ದರಲ್ಲಿಯೂ ತಥ್ಯಾಂಶವಿರುವದರಿಂದಲೇ ಪ್ರತಿಯೊಂದಕ್ಕೂ ಎಷ್ಟೋ ವರ್ಷ-ಗಳಿಂದ ಎಷ್ಟೋ ಜನರು ಅನುಯಾಯಿಗಳಾಗಿರುವರು. ಎಲ್ಲರೂ ತಮ್ಮ ತಮ್ಮ ಧರ್ಮಾದಿಗಳನ್ನು ಪ್ರೀತಿಸುವದೇ ಯುಕ್ತವು. ಯಾರೂ ಯಾರ ಮುಂದೂ ಅವರ ಧರ್ಮಕರ್ಮಾದಿಗಳಲ್ಲಿ ದೋಷವನ್ನು ತೋರಿಸಿ ವಿಶ್ವಾಸ-ವನ್ನು ಕೆಡಿಸುವದಕ್ಕೆ ಹೋಗಕೂಡದು.

“ सर्वारंभा हि दोषेण धूमेनाग्निरिवावृताः ।”

ಎಂದು ಭಗವಂತನು ಹೇಳಿರುವಂತೆ ಯಾವ ಕರ್ಮದಲ್ಲಾದರೂ ಒಂದಿ-ಲ್ಲೊಂದು ದೋಷವನ್ನು ಕಲ್ಪಿಸಬಹುದು. ಹೀಗೆ ದೋಷದೃಷ್ಟಿಯನ್ನಿಡದೆ ಸರ್ವತ್ರ ಸಾಮಾನ್ಯವಾಗಿ ಕಂಡುಬರುವ ಗುಣಗಳ ಕಡೆಗೇ ಲಕ್ಷ್ಯವನ್ನು ಕೊಟ್ಟು ಎಲ್ಲ ಕಡೆಗೂ ಸಮಭಾವನೆಯಿಂದ ಅಮೃತದಂತೆ ಮಧುರವಾದ ಪ್ರೇಮವನ್ನೇ ಬೆಳೆಸಬೇಕೆಂದು ನನ್ನ ನಿಶ್ಚಯಪೂರ್ವಕವಾದ ಗ್ರಹಿಕೆ ಇರು-ವದರಿಂದ ನಾನು ಸರ್ವರೊಡನೆಯೂ ಪ್ರೇಮದಿಂದಲೇ ವರ್ತಿಸುವದಕ್ಕೆ ಉದ್ಯುಕ್ತನಾಗಿದ್ದೇನೆ ಮತ್ತು ನನ್ನೊಡನೆ ಎಲ್ಲರೂ ಪ್ರೀತಿಯಿಂದಲೇ ನಡೆಯ-ಬೇಕೆಂದು ನಾನು ಇಚ್ಛಿಸುತ್ತೇನೆ. ಸಹಜವಾಗಿ ಪ್ರಸಂಗಸಂಗತಿಯಿಂದ ಬಂದ ನನ್ನ ಯಾವದಾದರೂ ಮಾತನ್ನು ಯಾರಾದರೂ ಹಚ್ಚಿಕೊಂಡು ಮನ-ಸ್ತಾಪಪಟ್ಟರೆ ಅದಕ್ಕಾಗಿ ಮೊದಲೇ ನಾನು ಈಗ ಹೇಳಿಕೊಳ್ಳುತ್ತೇನೆ; ಆದು-ದರಿಂದ ಯಾರೂ ನನ್ನೊಡನೆ ವಿಮನಸ್ಕರಾಗಬಾರದು. ನನ್ನಿಂದ ತಮ್ಮ ಮನಸ್ಸಿಗೆ ಉದ್ವೇಗಕರವಾದಂಥ ಭಾಷಣವೇನಾದರೂ ಆಯಿತೆಂದು ತೋರಿ-ದರೆ ಅದಾವುದೆಂಬದನ್ನು ದಯೆಯಿಟ್ಟು ನನಗೆ ಸ್ಪಷ್ಟವಾಗಿ ಹೇಳಬೇಕು;

ಅದಕ್ಕೆ ನಾನು ನನ್ನ ಅಭಿಪ್ರಾಯವನ್ನು ಹೇಳುತ್ತೇನೆ ಮತ್ತು ನನ್ನಿಂದ ಏನಾದರೂ ಪ್ರಮಾದವಾಗಿದ್ದರೆ, ಅದಕ್ಕಾಗಿ ನಿರಭಿಮಾನದಿಂದ ಕ್ಷಮೆಬೇಡು-ವೆನು. ನನಗೆ ಏನೂ ಆಗ್ರಹವಿಲ್ಲ. ನನ್ನಲ್ಲಿ ಯಾರೂ ಅನ್ಯಥಾ ಭಾವ-ವನ್ನು ಕಲ್ಪಿಸಬಾರದು. ನನ್ನ ಭಾಷಣವು ಬಹು ಸರಸವಾಯಿತೆಂದು ಸರ್ವರೂ ಸ್ತುತಿಮಾಡಬೇಕೆಂದು ನಾನು ನಿರೀಕ್ಷಿಸುವದಿಲ್ಲ. ನನ್ನಲ್ಲಿ ಅಜ್ಞಾ-ನವನ್ನು ಕಲ್ಪಿಸಿದರೂ ವಿರೋಧವನ್ನು ಮಾತ್ರ ಯಾರೂ ಶಂಕಿಸಬಾರದೆಂದು ಕೋರುತ್ತೇನೆ. ಹೀಗೆ ನಾನು ಹೇಳಿಕೊಂಡದ್ದರಿಂದಲೂ ದಯೆ ಬಾರದೆ ಯಾರಾದರೂ ಏನಾದರೂ ಕಲ್ಪಿಸಿ ನನ್ನ ಮೇಲೆ ವಿರೋಧವನ್ನು ಮಾಡಿದರೂ "ದೇವನೆ, ಅವರ ವಿಷಯಕ್ಕೆ ನನ್ನ ಮನಸ್ಸಿನಲ್ಲಿ ಮಾತ್ರ ಏನೂ ದ್ವೇಷವನ್ನು ಹುಟ್ಟಿಸದೆ ನಾನು ಎಂದಿನಂತೆ ಪ್ರೀತಿಯಿಂದ ಇರುವ ಹಾಗೆಯೇ ನನ್ನ ಮೇಲೆ ನೀನಾದರೂ ದಯೆಮಾಡು" ಎಂದು ಕರ್ತುಮಕರ್ತುಮನ್ಯಥಾ-ವಾಕರ್ತುಂಶಕ್ತನಾದ ಭಗವಂತನನ್ನು ಬದ್ಧಾಂಜಲಿಪುಟನಾಗಿ ಪ್ರಾರ್ಥಿಸಿ, ಇನ್ನು ಹೆಚ್ಚು ನಿಮ್ಮ ವೇಳೆಯನ್ನು ತೆಗೆದುಕೊಳ್ಳದೆ, ವ್ಯಾಖ್ಯಾನದ ವಿಷಯದ ಕಡೆಗೆ ಹೋಗುತ್ತೇನೆ.

ಈ ನಮ್ಮ ಭರತಖಂಡವು ಧರ್ಮಭೂಮಿ ಎಂದು ಜಗತ್ಪ್ರಸಿದ್ಧವಾಗಿದೆ. ದೇವತೆಗಳು ಸಹ ಇದರ ಮಹಿಮೆಯನ್ನು ಗಾನಮಾಡುತ್ತಿರುವರೆಂಬುದಕ್ಕೆ:—

"गायंति देवाः किल गीतकानि ।
धन्यास्तु ते भारतभूमिभागे ॥
स्वर्गापवर्गस्य च हेतुभूते ।
भवंति भूयः पुरुषाः सुरत्वात् ॥"

ಎಂಬುದೇ ಮುಂತಾದ ಪ್ರಮಾಣಗಳಿವೆ. ಸಾರಾಸಾರವಿಚಾರಶಾಲಿಗಳೂ ನಿಷ್ಪಕ್ಷಪಾತಿಗಳೂ ಆದ ಪಾರದೇಶಿಕಸದ್ಗೃಹಸ್ಥರೂ ಕೂಡ ಧರ್ಮದ

ವಿಷಯದಲ್ಲಿ ಹಿಂದುಸ್ಥಾನವನ್ನು ಶಿರಸಾಶ್ಲಾಘಿಸುತ್ತಿರುವದು ಒಂದಿಲ್ಲೊಂದು ವೃತ್ತಾಂತಪತ್ರಿಕೆಯನ್ನು ಓದುತ್ತಿರುವ ಆಧುನಿಕ ಅಕ್ಷರವಂತರಿಗೆಲ್ಲ ವಿದಿತ-ವಾದ ಅಂಶವೇ ಆಗಿದೆ. ನಾವು ಈ ನಮ್ಮ ಭಾರತದೇಶವನ್ನು ಹೊಗಳು-ವದು ದುರಭಿಮಾನದಿಂದ ದೇಶಾಂತರಗಳನ್ನು ತಿರಸ್ಕರಿಸಲಿಕ್ಕಲ್ಲ; ಆದರೆ ಭಗವಂತನು ನಮಗೆ ಇಂಥ ಪವಿತ್ರಭೂಮಿಯಲ್ಲಿ ಜನ್ಮವನ್ನು ಕೊಟ್ಟನೆಂದು ಅವನ ಉಪಕಾರವನ್ನು ಸ್ಮರಿಸಲಿಕ್ಕೆ ಮತ್ತು ಇಂಥ ದೇಶದಲ್ಲಿ ಆದ ನಮ್ಮ ಜನ್ಮವನ್ನು ಪಾರಮಾರ್ಥಿಕಸುಖದಿಂದ ಸಾರ್ಥಕಮಾಡಿಕೊಳ್ಳುವಂತೆ ಯತ್ನಿ-ಸುವದಕ್ಕೆ.

ಈ ನಮ್ಮ ಭರತಖಂಡವು ಮೊದಲಿನಿಂದಲೂ ಪಾರಮಾರ್ಥಿಕಸುಖದ ಸ್ಥಾನವೇ ಹೊರತು ಲೌಕಿಕಸೌಖ್ಯದ ಸ್ಥಳವಲ್ಲ. ಇಲ್ಲಿ ಸಾಂಸಾರಿಕ-ಸುಖವನ್ನು ಪಡೆಯಹೋದರೆ ಉಸುಬಿನಲ್ಲಿ ಎಣ್ಣೆಯನ್ನು ತೆಗೆಯಲಿಕ್ಕೆ ಹೋದಂತೆ ಆಗುವದು. ಪಾರಮಾರ್ಥಿಕ ಸುಖವೆಂದರೇನೆಂಬುದು ಮುಂದೆ ನನ್ನ ಮಾತಿನಲ್ಲಿ ಹೇಳಲ್ಪಡುವದು.

ಟ್ರ್ಯಾವಲರ್ ಎಂಬ ಇಂಗ್ಲೀಷ ಕಾವ್ಯದಲ್ಲಿ "Nature, a mother, kind alike to all." ಎಂದಿರುವಂತೆ ಸೃಷ್ಟಿಮಾತೆಯು, ತನ್ನ ಮಕ್ಕ-ಳಾದ ನಮ್ಮೆಲ್ಲರ ಮೇಲೂ ಸಮಾನವಾದ ವಾತ್ಸಲ್ಯವಿದ್ದರೂ, ಒಬ್ಬೊಬ್ಬರಿಗೆ ಒಂದೊಂದು ಪ್ರಕಾರವಾದ ಭೂಮಿಯನ್ನು ಕೊಟ್ಟಿದ್ದಾಳೆ. ಭೂಮಿಯಲ್ಲಿ ಎರೆ, ಮಸಾರೆ, ಗದ್ದೆ ಮೊದಲಾದ ವಿವಿಧಭೇದಗಳುಂಟು. ಯಾವ ಯಾವ ಭೂಮಿಯಲ್ಲಿ ಯಾವ ಯಾವ ಧಾನ್ಯ ಮುಂತಾದುದನ್ನು ಬಿತ್ತತಕ್ಕದ್ದೊ ಅದನ್ನೇ ಅಲ್ಲಿ ಬಿತ್ತಿದರೆ ಫಲವು ದೊರೆಯುವದು; ಇಲ್ಲದಿದ್ದರೆ ಏನೂ ಲಾಭವಾಗುವದಿಲ್ಲ; ಇಷ್ಟೇ ಅಲ್ಲ; ಎಷ್ಟೋ ಹಾನಿಯೂ ಕೂಡ ಆಗು-ವದು. ಎರೆಯಲ್ಲಿ ಭತ್ತವನ್ನು ಬಿತ್ತಿದರೆ, ಮಸಾರೆಯಲ್ಲಿ ಗೋದಿಯನ್ನು ಬಿತ್ತಿದರೆ, ಗದ್ದೆಯಲ್ಲಿ ಹತ್ತಿಯನ್ನು ಬಿತ್ತಿದರೆ ಏನು ಉತ್ಪನ್ನವಾದೀತು? ಬಿತ್ತುವವರೂ ಮತ್ತು ಎತ್ತುಗಳೂ ವ್ಯರ್ಥವಾಗಿ ಶ್ರಮಪಟ್ಟು ಭೂಮಿ-ಯೊಳಗೆ ಬೀಜವನ್ನು ಚಲ್ಲಿ ಬರೀಕಯ್ಯಲ್ಲಿ ಮನೆಗೆ ಬಂದು "ಹರಿ, ಹರಿ" ಎಂದು ಕೂತಂತೆ ಮಾತ್ರ ಆಗುವದು. ಅದರಂತೆ ಪಾರಮಾರ್ಥಿಕಸುಖದ

ಭೂಮಿಯಾದ ಈ ನಮ್ಮ ಭರತಖಂಡದಲ್ಲಿ ಲೌಕಿಕಸುಖದ ಅಂಕುರವನ್ನು ಹುಟ್ಟಿಸಿ ಬೆಳೆಸಬೇಕೆಂದು ಎಷ್ಟು ಪ್ರಯಾಸಪಟ್ಟರೂ ಕೂಡ ಏನೂ ಫಲಿಸದೆ "**श्रमस्तस्य श्रमफलः**" ಎಂದಂತೆ ನಿರರ್ಥಕವಾಗುವದು. ಇದನ್ನು ಚನ್ನಾಗಿ ವಿಚಾರಿಸಿಯೇ ನಮ್ಮ ಪೂರ್ವಜರಾದ ಆರ್ಯಮಹರ್ಷಿಗಳು ಬೇಕಾದಷ್ಟು ಹೆಚ್ಚಿನ ಲೌಕಿಕಸುಖವನ್ನು ಹೊಂದುವದಕ್ಕೆ ಶಕ್ತವಾದ ತಮ್ಮ ಬುದ್ಧಿಬಲ-ವನ್ನು ಪಾರಮಾರ್ಥಿಕವಿಷಯದಲ್ಲಿಯೇ ನಿಯೋಗಿಸಿ ಸ್ವಾನಂದವನ್ನು ಅನು-ಭವಿಸುತ್ತ ಸ್ವಸ್ಥರಾಗಿದ್ದರು. ನಮ್ಮ ಹಿರಿಯರು ಲೌಕಿಕವಿಷಯಗಳ ಕಡೆಗೆ ತಿಳಿದೂ ತಿಳಿದೂ ವಿಶೇಷವಾಗಿ ಲಕ್ಷ್ಯವನ್ನು ಕೊಡುತ್ತಿರಲಿಲ್ಲವೆಂಬುದು ಅವರ ಗ್ರಂಥಗಳಿಂದ ಸರ್ವರಿಗೂ ಸ್ಪಷ್ಟವಾಗಿ ಕಂಡುಬರುವದಲ್ಲದೆ ಪಾರಮಾರ್ಥಿಕ ಮತ್ತು ಧಾರ್ಮಿಕ ವಿಷಯಗಳಲ್ಲಿ ಬೇಕಾದಷ್ಟು ಪ್ರವೀಣತೆಯನ್ನು ಹೊಂದ-ಲಿಕ್ಕೆ ಸಮರ್ಥವಾದ ಅವರ ಬುದ್ಧಿಶಕ್ತಿಯು ಭೌತಿಕವಿಷಯಗಳ ಕಡೆಗೆ ವಿಶೇಷವಾಗಿ ಉಪಯೋಗಿಸಲ್ಪಡದಿದ್ದುದಕ್ಕೆ ಈಗಿನಂತೆ ಆಗ ವಿವಿಧಯಂತ್ರಾ-ದಿಗಳು ನಿರ್ಮಿಸಲ್ಪಡಲಿಲ್ಲವೆಂಬುದೂ ಪತಾಕೀಭೂತವಾಗಿದೆ.

ನಮ್ಮ ಪೂರ್ವಜರು ಗಡ್ಡೆಗೆಣಸು ಹಣ್ಣುಹಂಪಲು ಮುಂತಾದವುಗಳನ್ನು ತಿಂದುಕೊಂಡು ವಲ್ಕಲಧಾರಿಗಳಾಗಿ ನಿಜಾನಂದದಿಂದ ಅರಣ್ಯಗಳಲ್ಲಿ ವಾಸ-ಮಾಡಿಕೊಂಡಿದ್ದರು. ಸ್ಥೂಲದೃಷ್ಟಿಯಿಂದ ನೋಡಿದರೆ ಮಾತ್ರ ಸುಖಸಾಧನ-ಗಳಾಗಿ ತೋರುತ್ತ ವಿಚಾರಮಾಡಿ ನೋಡಿದರೆ ದುಃಖಮಯವಾಗಿ ಸಿದ್ಧ-ವಾಗುವ ಕ್ಷಣಭಂಗುರವಾದ ವಿವಿಧವಿಷಯಸುಖಗಳಿಗೆ ಅವರು ಲಕ್ಷ್ಯ-ಕೊಡುತ್ತಿರಲಿಲ್ಲ. ಅವರು ತಪೋಧನರಾಗಿದ್ದರು. ವೈರಾಗ್ಯವೇ ಅವರ ಭಾಗ್ಯವಾಗಿತ್ತು. ಅವರು ಜ್ಞಾನಾಮೃತದಿಂದ ತೃಪ್ತರಾಗಿದ್ದರು. ಭೂತ ದಯೆಯೆಂಬುದೇ ಅವರ ದೀಕ್ಷೆಯಿತ್ತು. ಪರೋಪಕಾರವೇ ಅವರ ವ್ರತ ವಾಗಿತ್ತು. ಸರ್ವಭೂತಗಳಲ್ಲಿಯೂ ಅವರಿಗೆ ಭಗವದ್ಭಾವನೆ ಇತ್ತು "Plain living and high thinking" ಎಂಬ ಸ್ಥಿತಿಯು ಸಹಜ-ವಾಗಿ ಅವರಲ್ಲಿ ಸ್ಥಿರವಾಗಿ ನೆಲೆಗೊಂಡಿತ್ತು.

"मनसि च परितुष्टे कोऽर्थवान् को दरिद्रः"

ಎಂದು ಶ್ರೀಭರ್ತೃಹರಿಕವಿಗಳು ಹೇಳಿರುವಂತೆ, ಅವರ ಮನಸ್ಸು ನಿಜಾನಂದ-ದಿಂದ ತೃಪ್ತಿಹೊಂದಿದ್ದುದರಿಂದ, ಅವರಿಗೆ ಪ್ರಾಕೃತಸಂಪತ್ತಿನ ಬೆಲೆಯೇ ಇರಲಿಲ್ಲ. ಈ ವಿಷಯದಲ್ಲಿ ನಮ್ಮ ಹಿರಿಯರೇ ಬರೆದಿರುವ ಇತಿಹಾಸ ಪುರಾಣಗಳೇ ಅಲ್ಲದೆ ಪಾರದೇಶಿಕಪಂಡಿತರ ವಾಕ್ಯಗಳು ಸಹ ಸಾಕ್ಷ್ಯವನ್ನು ವಹಿಸುತ್ತವೆ. ನಮ್ಮ ಪೂರ್ವಜರ ವಿಷಯಕ್ಕೆ ಪಾಶ್ಚಾತ್ಯವಿದ್ವಾಂಸರ ಅಭಿ-ಪ್ರಾಯವೇನಿದೆಯೆಂಬುದು ಅವರ ಲೇಖನಗಳಿಂದ ಆಂಗ್ಲಭಾಷಾಭಿಜ್ಞರಾದ ನಮ್ಮ ಆಧುನಿಕಜನರಿಗೆ ಸಹಜವಾಗಿ ವಿದಿತವಾಗುವದು. ಬಹಳ ಪ್ರಾಚೀ-ನರಾದ ನಮ್ಮ ಪೂರ್ವಜಮಹರ್ಷಿಗಳ ವಿಷಯವಂತು ಇರಲಿ. ಈಗ ಸುಮಾರು ನೂರೈವತ್ತು ವರ್ಷಗಳ ಹಿಂದಿನ ನಮ್ಮ ಹಿರಿಯರ ಪರಿಸ್ಥಿತಿಯು ಹೇಗಿತ್ತೆಂಬುದನ್ನು ನೋಡಿರಿ. ಆಲಿವ್ಹರ್ ಗೋಲ್ಡಸ್ಮಿತ್ಥಸಾಹೇಬರು ಸಿಟಿ-ಝುನ್ ಆಫ್ ದಿ ವರ್ಲ್ಡ್ ಎಂಬ ಪ್ರಬಂಧದಲ್ಲಿ—

"Hail, O ye simple, honest Brahmins of the east; ye inoffensive friends of all that were born to happiness as well as you; you never sought a short-lived pleasure from the miseries of other creatures; you never studied the tormenting arts of ingenious refinement; you never surfeited up on a guilty meal! How much more purified and refined are all your sensations than ours! You distinguish every element with the utmost pre-cision; a stream untasted before is a new luxury, a change of air is a new banquet, too refined for western imaginations to conceive!"

(ಅಂದರೆ:— ಅಯ್ಯಾ, ಸರಳರೂ ಪ್ರಾಮಾಣಿಕರೂ ಆದಂಥ ಭರತಖಂಡ ನಿವಾಸಿಗಳಾದ ಬ್ರಾಹ್ಮಣರೆ, ನಿಮ್ಮ ಹಾಗೆ ಸುಖಾನುಭವಮಾಡುವದಕ್ಕಾಗಿ ಹುಟ್ಟಿರುವ ಸರ್ವಪ್ರಾಣಿವರ್ಗಕ್ಕೂ ನಿರುಪದ್ರವಮಿತ್ರರಾದವರೆ, ಧನ್ಯರು.

ನೀವೇ ಧನ್ಯರು. ಅನ್ಯಪ್ರಾಣಿಗಳ ಸಂಕಟಗಳ ಮೂಲಕವಾದ ಕ್ಷಣಿ
ಸುಖವನ್ನು ನೀವು ಎಂದೂ ಬಯಸಿದವರಲ್ಲ. ವಿಲಕ್ಷಣಸುಶಿಕ್ಷಣೆಂ
ಹಿಂಸಾತ್ಮಕವಾದ ಕುಶಲವಿದ್ಯೆಯನ್ನು ನೀವು ಎಂದೂ ತಿಳಿಯಲಿಚ್ಛಿಸಲಿ
ಹಿಂಸಾಲಬ್ಧವಾದ ಆಹಾರವನ್ನು ನೀವು ಎಂದೂ ತಿಂದು ತೇಗಿದವರ
ನಿಮ್ಮ ಮನೋಭಾವಗಳು ನಮಗಿಂತ ಎಷ್ಟು ಶುದ್ಧವಾದವು! ಮತ್ತು ಎ
ಸುಶಿಕ್ಷಿತವಾದವು!! ಪಂಚಮಹಾಭೂತಗಳಲ್ಲಿ ಪ್ರತಿಯೊಂದರ ಸೂಕ್ಷ್ಮತತ್ತ್ವ
ನಿಮಗೆ ಚನ್ನಾಗಿ ಗೊತ್ತಿದೆ. ಹಿಂದೆ ಎಂದೂ ಸೇವಿಸದೆ ಇರುವಂಥ ಜುಳ
ಜುಳು ಹರಿಯುವ ನಿರ್ಮಲವಾದ ನೀರಿನ ಪ್ರವಾಹವೇ ನಿಮಗೊಂ
ಭೋಗಾತಿಶಯವು. ಸ್ಥಳಾಂತರವೇ ನಿಮಗೊಂದು ಹೊಸಹಬ್ಬ. ಅಹ
ಏನಿದು, ಸಾಕ್ಷಿಮಾತ್ರರ ಊಹೆಗೂ ಕೂಡ ನಿಲುಕದಂಥ ಪರಿಶುದ್ಧತೆಯು!
ಎಂದು ಬರೆದಿರುವದನ್ನು ಓದುವಾಗ ನಮ್ಮ ಮನಸ್ಸಿನಲ್ಲಿ ನಮ್ಮ ಹಿರಿಯ
ಹೇಗಿದ್ದರೆಂದು ಒಂದು ವಿಧವಾದ ಅಭಿಮಾನವೂ ಮತ್ತು ಅಂಥ ಆಯ
ವಂಶಜರಾದ ನಾವು ಇಂಥವರೆಂದು ನಮ್ಮ ವಿಷಯದಲ್ಲಿ ತಿರಸ್ಕಾರವೂ ಎ
ಸಮಯಾವಚ್ಛೇದೇನ ಜನಿಸದೆ ಹೋದೀತೇ?

ಈಗ ನಮ್ಮಲ್ಲಿ ಅಷ್ಟು ಸಾತ್ವಿಕವರ್ತನವುಳ್ಳವರು ಎಷ್ಟು ಜನರು ಇ
ವರು? "ಅಂಬಲಿ ಕಂಬಳಿ ರಾಸ್ತ, ಉಳಿದದ್ದೆಲ್ಲ ಜಾಸ್ತ" ಎಂಬ ಗಾದೆ
ಮಾತಿನಂತೆ ಉದರನಿರ್ವಾಹಕ್ಕೆ ಸಾಕಾದಷ್ಟು ಎಂಥದ್ದಾದರೂ ಅನ್ನ ಮ
ಆಚ್ಛಾದನೆಗೆ ತಕ್ಕಷ್ಟು ಎಂಥದ್ದಾದರೂ ವಸ್ತ್ರ ಇಷ್ಟರ ಹೊರತು ಹೆಚ್ಚಿ
ವಿಷಯವನ್ನು ಬಯಸಿ ಬಯಸಿ ಇಲ್ಲದ ಕೊರತೆಯಿಂದ ಬೆಂದು ಬೆಂಡಾಗ
ಇರುವವರು ಎಷ್ಟು ಜನರು ಸಿಕ್ಕುವರು? ಎಲ್ಲಿ ನೋಡಿದರೂ ತನ್ನ ಕಯ
ಲ್ಲಿಯ ಗಿಂಡಿಯಲ್ಲಿ ಚಂದ್ರನನ್ನು ಹಿಡಿದು ಹಾಕೆಂದು ಅಳುವ ಕೂಸಿನ
ದುಃಖಮಯವಾದ ಸಂಸಾರದಲ್ಲಿ ಸುಖವನ್ನು ತುಂಬೆಂದು ತಮ್ಮಂತೆಯೆ
ಇರುವ ತಮ್ಮತಮ್ಮ ಜನರನ್ನು ಅಥವಾ ಬಹಳವಾದರೆ ದೇವರನ್ನು ಬೇ
ಕೊಂಡು ನಮ್ಮ ಮನೋರಥವನ್ನು ಪೂರ್ಣಮಾಡಲೊಲ್ಲರೆಂದು ವ್ಯರ್ಥವಾ
ಅವರ ಮೇಲೆ ಆಕ್ರೋಶಮಾಡುತ್ತಿರುವದೇ ಕಾಣುವದಲ್ಲ! ನಿರ್ವಾಹ
ಬೇಕಾದಷ್ಟು ಅನ್ನಾಚ್ಛಾದನೆಯ ವಿಷಯದಲ್ಲಾದರೂ—

"भोजनाच्छादने चिंतां वृथा कुर्वंति मानवाः।
योऽयं विश्वंभरो देवः स भक्तान् किमुपेक्षते ॥"

ಎಂಬುದನ್ನರಿತು ದೇವರ ಮೇಲಣ ವಿಶ್ವಾಸದಿಂದ ತಿಲಪ್ರಾಯವಾದರೂ ಚಿಂತೆಮಾಡದೆ ತಮ್ಮ ಎಲ್ಲ ಉತ್ಸುಕತೆಯನ್ನು ಪಾರಮಾರ್ಥಿಕವಿಚಾರ-ದಲ್ಲಿಯೇ ನಿಯೋಜಿಸಿ ಶಾಂತಚಿತ್ತರಾಗಿರುವವರು ಈಗ ನಮ್ಮ ಕಣ್ಣಿಗೆ ಎಷ್ಟು ಜನರು ಬೀಳುವರು?

ಹೀಗೆ ನಾವು ಅಂಥ ಮಹಾತ್ಮರ ವಂಶದವರೆಂದು ಹೇಳಿಕೊಳ್ಳುವದಕ್ಕೆ ಬಾಯಿ ಬರದಷ್ಟು ಹೀನಸ್ಥಿತಿಗೆ ಇಳಿದಿದ್ದೇವೆ. ಆದರೂ ಆ ಆರ್ಯರ ವಂಶದವರಾದ ನಮ್ಮ ನಾಡಿಗಳಲ್ಲಿ ಅವರ ರಕ್ತವು ಪರಂಪರೆಯಿಂದ ಅಲ್ಪ-ಸ್ವಲ್ಪವಾದರೂ ಬಂದು ಆಡುತ್ತಿರುವದೆಂಬುದನ್ನು ನಾವು ಮರೆಯಬಾರದು. ಹೀಗೆ ನಾವು ಕರ್ತವ್ಯಪರಾಙ್ಮುಖರಾಗಿ ಕಣ್ಣುಮುಚ್ಚಿಕೊಂಡು ಕೂತುಕೊಂ-ಡರೆ ಆರ್ಯವಂಶೀಯರೆಂಬ ನಮ್ಮ ಹೆಸರೂ ಕಿಂಬಹುನಾ—

"धर्मेण हीनाः पशुभिः समानाः।"

ಎಂಬಂತೆ ನಾವು ಮನುಷ್ಯರೆಂಬುದೂ ನಿರರ್ಥಕವಾಗದೆ ಇರಲಾರದೆಂಬದರ ಕಡೆಗೆ ದುರ್ಲಕ್ಷ್ಯಮಾಡದೆ ಆಪ್ತವಾಕ್ಯರೂಪವಾದ ವೇದಾದಿ ಪ್ರಮಾಣಗಳಿಂದ "**द्विविधो हि वेदोक्तो धर्मः प्रवृत्तिलक्षणो निवृत्तिलक्षणश्च**" ಎಂದು ಮುಂ-ತಾಗಿ ಶ್ರೀಶಂಕರಾಚಾರ್ಯರು ಗೀತಾಭಾಷ್ಯದಲ್ಲಿ ಬರೆದಿರುವಂತೆ ಪ್ರವೃತ್ತಿರೂಪ ಮತ್ತು ನಿವೃತ್ತಿರೂಪವೆಂದು ಎರಡು ಬಗೆಯಾದ ನಮ್ಮ ಧರ್ಮವನ್ನರಿತು ಆಚ-ರಿಸತಕ್ಕದ್ದು. ಧರ್ಮವೆಂಬ ರೂಪವು ಧೃ ಎಂಬ ಧಾತುವಿಗೆ "**अर्तिस्तुसुहुसृधृ-क्षिक्षुभायावापदियक्षिनीभ्यो मन्**" ಎಂಬ ಸೂತ್ರದಿಂದ **मन्** ಪ್ರತ್ಯಯವು ಹತ್ತುವದರಿಂದ ಸಿದ್ಧವಾಗಿದೆ. "**ध्रियते लोकोऽनेन, धरति लोकं वा**" ಎಂಬ ಧರ್ಮಶಬದ ವ್ಯುತ್ಪತ್ತಿಯ ಕಡೆಗೆ ಲಕ್ಷ್ಯಕೊಟ್ಟರೆ ಧರ್ಮವು ಜಗತ್ತಿನ ಸ್ಥಿತಿಗೆ ಕಾರಣವಾಗಿದೆಯೆಂಬುದು ಸ್ಪಷ್ಟವಾಗಿ ಕಂಡುಬರುವದು. ಧರ್ಮದ ಲಕ್ಷಣ-

ವನ್ನು "**चोदनालक्षणोऽर्थो धर्मः**" ಎಂಬ ಸೂತ್ರದಲ್ಲಿ ಶ್ರೀಜೈಮಿನಿಮಹರ್ಷಿಗಳು ಹೇಳಿರುವರು; ಶ್ರೀಕಣಾದಮಹರ್ಷಿಗಳು "**यतोऽभ्युदयनिश्श्रेयससिद्धिः स धर्मः**" ಎಂಬ ಸೂತ್ರದಿಂದ ಪ್ರತಿಪಾದಿಸಿರುವರು. ಈ ವಿಷಯವನ್ನು ವಿಸ್ತರಿಸುವದಕ್ಕೆ ಇದು ಸಮಯವಲ್ಲವಾದುದರಿಂದ ಈಗ ಇಷ್ಟಕ್ಕೇ ಬಿಟ್ಟು ಮುಂದೆ ಪ್ರಸಂಗಬಂದರೆ ಆಗ ನೋಡುವೆನು.

ಆಪ್ತವಾಕ್ಯರೂಪವಾದ ಶಬ್ದವು—ಅದು ವೈದಿಕವೇ ಇರಲಿ, ಅಥವಾ ಲೌಕಿಕವೇ ಇರಲಿ—ಪ್ರಮಾಣವೆಂಬ ವಿಷಯದಲ್ಲಿ ಪ್ರಾಮಾಣಿಕರು ಯಾರೂ ಸಂದೇಹಪಡಲಾರರು. ಆಪ್ತವಾಕ್ಯದ ಪ್ರಾಮಾಣ್ಯವನ್ನು ಅಂಗೀಕರಿಸದಿದ್ದರೆ ಲೌಕಿಕವ್ಯವಹಾರವು ಕೂಡ ಸಾಗಲಾರದು. ಪ್ರಮಾಣವೆಂದರೆ ಯಥಾರ್ಥಜ್ಞಾನವು. "**प्रमायाः करणं प्रमाणम्**" ಎಂದು ಪ್ರಮಾಣದ ಲಕ್ಷಣವು ಶಾಸ್ತ್ರದಲ್ಲಿ ಹೇಳಲ್ಪಟ್ಟದೆ. ಅದರ ಅರ್ಥವು "ಪ್ರಮೆಯು ಕರಣವು ಪ್ರಮಾಣವು" ಎಂದಾಗುವದು. ಪ್ರಮೆ ಎಂದರೆ "**तद्वति तत्प्रकारकानुभवो यथार्थः। यथा रजते इदं रजतमिति ज्ञानम्। सैव प्रमेत्युच्यते।**" ಎಂದು ತರ್ಕಸಂಗ್ರಹದಲ್ಲಿ ಹೇಳಿರುವಂತೆ ಯಥಾರ್ಥಜ್ಞಾನವು. "**व्यापारवदसाधारणं कारणं करणम्**" ಎಂದೂ "**तदेतत् त्रिविधकारणमध्ये यदसाधारणं कारणं तदेव करणं**" ಎಂದೂ ಕರಣದ ಲಕ್ಷಣವು ಹೇಳಲ್ಪಟ್ಟದೆ. ಇನ್ನು ವ್ಯಾಪಾರತ್ವವೆಂದರೆ "**तज्जन्यत्वे सति तज्जन्य जनकत्वम्**" ಎಂದು ಹೇಳಿರುವದನ್ನೂ ಮತ್ತು ಕಾರಣವೆಂದರೆ "**अनन्यथासिद्धकार्यनियतपूर्ववृत्ति**" ಎಂದು ಹೇಳಿರುವದನ್ನೂ ಅಥವಾ ಮಿಲ್ ಸಾಹೇಬರು—

**"The antecedent or concurrence of antecedents on which the effect is invariably and unconditionally consequent"**

ಎಂದು ಬರೆದಿರುವದನ್ನೂ ವಿಸ್ತರಿಸಿ ತಿಳಿಸಲಿಕ್ಕೆ ನಾನು ಹೊರಟರೆ ಈಗ ಎಷ್ಟೋ ಜನರಿಗೆ ತಿಳಿದುಕೊಳ್ಳಲಿಕ್ಕೆ ಕಠಿನವಾದೀತು. ತರ್ಕಶಾಸ್ತ್ರವನ್ನು ಓದಿದವರಿಗೇನೋ ಇದು ತಿಳಿದ ವಿಷಯುವೇ; ಆದರೆ ಹೊಸಬರಿಗೆ ಈಗ ಇಂಥ ವಿಷಯುವನ್ನು ತಿಳಿಸಲಿಕ್ಕೆ ಹೋಗುವ ಸಮಯುವಲ್ಲ; ಆದಕಾರಣ

ಪ್ರಮಾಣವೆಂದರೆ "ಇದ್ದದ್ದಿದ್ದಂತೆ ಜ್ಞಾನವನ್ನು ಮಾಡಿಕೊಡುವ ಸಾಧನವು ಎಂದಿಟ್ಟುಕೊಂಡರೆ ಸಾಕು.

ಚಾರ್ವಾಕರು ಪ್ರತ್ಯಕ್ಷವೆನ್ನುವದೊಂದೇ ಪ್ರಮಾಣವೆನ್ನುವರು. ಬೌದ್ಧರು ಪ್ರತ್ಯಕ್ಷ ಮತ್ತು ಅನುಮಾನವೆಂಬ ಎರಡು ಪ್ರಮಾಣಗಳನ್ನು ಅಂಗೀಕರಿಸುವರು. ಸಾಂಖ್ಯರು ಪ್ರತ್ಯಕ್ಷ, ಅನುಮಾನ, ಶಬ್ದವೆಂಬ ಮೂರು ಪ್ರಮಾಣಗಳನ್ನು ಸ್ವೀಕರಿಸುವರು. ನೈಯಾಯಿಕರು ಪ್ರತ್ಯಕ್ಷ, ಅನುಮಾನ, ಶಬ್ದ, ಉಪಮಾನವೆಂಬ ನಾಲ್ಕು ಪ್ರಮಾಣಗಳನ್ನು ಪ್ರತಿಪಾದಿಸುವರು. ಮೀಮಾಂಸಕರು ಮತ್ತು ವೇದಾಂತಿಗಳು "ಅರ್ಥಾಪತ್ತಿ ಮತ್ತು ಅನುಪಲಬ್ಧಿ" ಎಂಬೆರಡು ಪ್ರಮಾಣಗಳನ್ನು ಹೆಚ್ಚು ಕೂಡಿಸುವರು. ಇನ್ನು ಕೆಲವರು "ಸಂಭವ, ಐತಿಹ್ಯ"ವೆಂಬ ಇನ್ನೆರಡು ಹೆಚ್ಚಿನ ಪ್ರಮಾಣಗಳನ್ನು ಸೇರಿಸುವರು. ಮತ್ತೆ ಕೆಲವರು ಚೇಷ್ಟಾ ಎಂಬ ಮತ್ತೊಂದು ಪ್ರಮಾಣವನ್ನೂ ಹೇಳುವರು. ಇವುಗಳನ್ನೆಲ್ಲಾ ವಿಚಾರಿಸುವದಕ್ಕೆ ಬಹಳ ವೇಳೆ ಬೇಕಾಗುವದು. ಈಗ ನಮಗೆ ಪ್ರಕೃತವಾದ ಶಬ್ದಪ್ರಮಾಣವನ್ನು ಕುರಿತು ವಿಚಾರಿಸುವದಕ್ಕೆ ಮೊದಲು ಪ್ರತ್ಯಕ್ಷವೆಂಬುದೊಂದೇ ಪ್ರಮಾಣವು ವ್ಯವಹಾರಕ್ಕೆ ಸಾಕಾಗುವದೊ ಹೇಗೋ ನೋಡೋಣ.

"**इंद्रियार्थसान्निकर्षजन्यं ज्ञानं प्रत्यक्षम्**" ಎಂದು ತರ್ಕಸಂಗ್ರಹದಲ್ಲಿ ಹೇಳಿರುವಂತೆ ಯಾವದಾದರೂ ಪದಾರ್ಥಕ್ಕೆ ಮತ್ತು ಕಣ್ಣು, ಕಿವಿ ಮೊದಲಾದ ಇಂದ್ರಿಯಗಳಿಗೆ ಸಂಬಂಧವಾಗಿ ಅದರಿಂದುಂಟಾಗುವ ಜ್ಞಾನವು ಪ್ರತ್ಯಕ್ಷಜ್ಞಾನವು. ಇಲ್ಲಿ ಎದುರಿಗಿರುವ ದೀಪವನ್ನು ನಾನು ಕಣ್ಣಿನಿಂದ ನೋಡಿ ಇದು ದೀಪವೆಂದು ತಿಳಿದುಕೊಳ್ಳುವದು ಪ್ರತ್ಯಕ್ಷಜ್ಞಾನವು. ಹೊರಗೆ ಘಂಟೆಯು ಬಡಿದುದನ್ನು ಕಿವಿಯಿಂದ ಕೇಳಿ ಇಷ್ಟು ಘಂಟೆಯಾಯಿತೆಂಬುದನ್ನು ತಿಳಿಯುವದು ಪ್ರತ್ಯಕ್ಷಜ್ಞಾನವು. ಇದರಂತೆ ನಾಸಿಕಾ, ತ್ವಚಾ ಮುಂತಾದ ಇಂದ್ರಿಯಗಳಿಗೂ ಮತ್ತು ಆಯಾ ಇಂದ್ರಿಯಗಳಿಗೆ ವಿಷಯಗಳಾದ ವಸ್ತುಗಳಿಗೂ ಸಂಬಂಧವಾಗುವದರಿಂದ ಜನಿಸುವ ಜ್ಞಾನವು ಪ್ರತ್ಯಕ್ಷಜ್ಞಾನವು. "**तत्करणमिंद्रियम् । तस्मादिंद्रियं प्रत्यक्षप्रमाणम्**" ಎಂದು ತರ್ಕಸಂಗ್ರಹದಲ್ಲಿ ಹೇಳಿರುವಂತೆ ಇಂದ್ರಿಯವೇ ಪ್ರತ್ಯಕ್ಷಪ್ರಮಾಣವು. ಅಂದಮೇಲೆ ಪ್ರತ್ಯಕ್ಷ

ಒಂದೇ ಅಂದರೆ ಇಂದ್ರಿಯವೆಂಬುದೊಂದೇ ಪ್ರಮಾಣವೆಂದಿಟ್ಟುಕೊಂಡರೆ ಇಂದ್ರಿಯಕ್ಕೆ ಗೋಚರವಾಗದಿದ್ದ ವಿಷಯವನ್ನು ನಾವು ತಿಳಿಯಲೇ ಬಾರ-ದಾಗುವದು. ಈಗ ನನಗೆ ಗ್ರಾಮಾಂತರದಲ್ಲಿರುವ ನನ್ನವರದು ಯಾರ-ದಾದರೂ ಪತ್ರವು ಬಂದು ಅದರಿಂದ ಅಲ್ಲಿಯ ವೃತ್ತಾಂತವು ನನಗೆ ತಿಳಿಯು-ವದಲ್ಲ! ಅದು ನನಗೆ ಪ್ರತ್ಯಕ್ಷಪ್ರಮಾಣದಿಂದ ತಿಳಿಯಿತೊ? ಅಪರಾಧ-ಮಾಡಿದುದನ್ನು ನಿರ್ಣಯಿಸಿ ಆ ಅಪರಾಧಿಗೆ ಶಿಕ್ಷೆಕೊಡುವಾಗ ಅವನು ಅಪರಾಧಮಾಡಿದುದನ್ನು ನ್ಯಾಯಾಧೀಶರು ಪ್ರತ್ಯಕ್ಷಪ್ರಮಾಣದಿಂದ ತಿಳಿಯು-ವರೊ? ನಾವು ದೂರದಲ್ಲಿ ಹೊಗೆ ಹಾಯುವದನ್ನು ಕಂಡು ಅಲ್ಲಿ ಬೆಂಕಿ ಇದೆ ಎಂದು ನಿಶ್ಚಯಿಸುತ್ತೇವೆ. ಹೊಗೆಯನ್ನು ಕಂಡು ಹೊಗೆ ಇದೆಯೆಂದು ತಿಳಿಯುವದೇನೋ ಪ್ರತ್ಯಕ್ಷಪ್ರಮಾಣದಿಂದಲೇ ಸರಿ; ಆದರೆ ಹೊಗೆಯನ್ನು ನೋಡಿ ನಮಗೆ ಕಣ್ಣಿಗೆ ಕಾಣದಿರುವಂಥ ಬೆಂಕಿಯು ಅಲ್ಲಿದೆ ಎಂದು ತಿಳಿ-ಯುವದು ಪ್ರತ್ಯಕ್ಷಪ್ರಮಾಣದಿಂದ ಹೇಗಾದೀತು? ಹೀಗೆ ಪ್ರತ್ಯಕ್ಷವೆಂಬು-ದೊಂದೇ ವ್ಯವಹಾರಕ್ಕೆ ಸಾಲದು.

ಇನ್ನು ಅನುಮಾನವೂ ಬೇಕಾಯಿತು. "**अनुमितिकरणमनुमानम्**" ಎಂದು ಹೇಳಿರುವಂತೆ ಅನುಮಿತಿಯ ಕರಣವು ಅನುಮಾನವು. ಅನುಮಿತಿ ಎಂದರೆ "**परामर्शजन्यं ज्ञानमनुमितिः**" ಎಂದಂತೆ ಪರಾಮರ್ಶದಿಂದ ಜನಿ-ಸುವ ಜ್ಞಾನವು. ಪರಾಮರ್ಶವೆಂದರೆ "**व्याप्तिविशिष्टपक्षधर्मताज्ञानं परामर्शः । यथावन्हिव्याप्यधूमवानयं पर्वतः इति ज्ञानं परामर्शः ।**" ಎಂದಿರುವಂತೆ "ವಹ್ನಿಯಿಂದ ವ್ಯಾಪ್ಯವಾದ ಧೂಮವುಳ್ಳದ್ದು ಈ ಪರ್ವತವು" ಎಂಬ ಮುಂತಾದ ವ್ಯಾಪ್ತಿವಿಶಿಷ್ಟವಾದ ಪಕ್ಷಧರ್ಮತಾಜ್ಞಾನವು. "**यत्र यत्र धूमस्तत्र तत्राग्निरिति साहचर्यनियमो व्याप्तिः**" ಎಂದಂತೆ "ಎಲ್ಲೆಲ್ಲಿ ಹೊಗೆ ಇರುವದೊ ಅಲ್ಲಲ್ಲಿ ಬೆಂಕಿ ಇರುವದು" ಎಂಬ ಮುಂತಾದ ಸಾಹಚರ್ಯ ನಿಯಮವು ವ್ಯಾಪ್ತಿಯು. ಇನ್ನು ಚಿಂತಾಮಣಿಕಾರರು ಸಿದ್ಧಾಂತಲಕ್ಷಣದಲ್ಲಿ "**प्रतियोग्यसमानाधिकरणयत्समानाधिकरणात्यंताभावप्रतियोगितावच्छेदकावच्छिन्नं यन्नभवति तेन समं तस्य सामानाधिकरण्यं व्याप्तिः**" ಎಂದು ಹೇಳಿರುವದು ಮುಂತಾದುದನ್ನೂ ಮತ್ತು ಪಕ್ಷತೆಯ ಲಕ್ಷಣವನ್ನೂ ಹೇಳಿ

ಿ ಸಮನ್ವಯ ಮಾಡುತ್ತ ಹೋದರೆ ಈ ವಿಷಯವನ್ನರಿಯದವರಿಗೆ
ೂೀ ತೆಗೆದುಕೊಂಡು ಹೋಗಿ ಬಿಟ್ಟಂತಾದೀತು; ಆದಕಾರಣ "ಒಂದು
ರ್ಥವಿದ್ದಕಡೆ ಮತ್ತೊಂದು ಪದಾರ್ಥವು ತಪ್ಪದೆ ಇರುವದೆಂದು ಪ್ರತ್ಯಕ್ಷ-
ಎಷ್ಟೋ ಕಡೆಯಲ್ಲಿ ನೋಡಿ ನೋಡಿ ಅದರಲ್ಲಿಯ ಆ ಒಂದು ಪದಾ-
ನ್ನು ಎಲ್ಲಿಯಾದರೂ ಕಂಡು, ಅದು ಇದ್ದ ಕಡೆ ಮತ್ತೊಂದು ಇರುವ-
ವ್ಯಾಪ್ತಿಯನ್ನು ನೆನಪುಮಾಡಿಕೊಂಡು, ಆ ಮತ್ತೊಂದು ಪದಾರ್ಥವೂ
ಅಲ್ಲಿರುವದೆಂದು ತಿಳಿದುಕೊಳ್ಳುವದು ಅನುಮಿತಿಯು" ಎಂದು ತಿಳಿದು-
ಡರೆ ಸಾಕು. ಹೀಗೆ ಅನುಮಾನಮಾಡುವದು ಕೂಡ ವ್ಯವಹಾರಕ್ಕೆ
ಶ್ಯಕವಾಗಿದೆ.

ಆದರೆ ಇಷ್ಟರಿಂದಲೂ ಸಾಲದು. ಯಥಾರ್ಥವಾಗಿ ಹೇಳುವವರ
ಯದಿಂದಲೂ ನಾವು ಎಷ್ಟೋ ಸಂಗತಿಗಳನ್ನು ತಿಳಿಯುತ್ತೇವೆ; ಇಲ್ಲ-
ರೆ— ಹೆಚ್ಚು ಹೇಳುವದೇನು?— ನಾವು ಇಂಥವರ ಮಕ್ಕಳೆಂದು ಯಾರೂ
ಬಾರದಾದೀತು; ಏಕೆಂದರೆ ಇಂಥವನೇ ನನ್ನ ತಂದೆಯೆಂಬುದು ಪ್ರತ್ಯಕ್ಷ-
ಅಥವಾ ಅನುಮಾನದಿಂದ ನಿಶ್ಚಯಿಸಲಿಕ್ಕೆ ಬರುವ ಮಾತಲ್ಲ; ಕೇವಲ
ವಾಕ್ಯದಿಂದಲೇ ತಿಳಿಯಬೇಕಾದುದು. ಹೀಗೆ ಯಥಾರ್ಥವಾಗಿ ಮಾ-
ವವರ ಮಾತುಗಳು ಎಷ್ಟೋ ಸಂಗತಿಗಳಲ್ಲಿ ನಮಗೆ ಪ್ರಮಾಣವಾಗು-
. "**आप्तस्तु यथार्थवक्ता**" ಎಂಬ ಲಕ್ಷಣಕ್ಕನುಸರಿಸಿ ಯಥಾರ್ಥ-
ರೂಪನಾದ ಯಾವನಾದರೂ ಆಪ್ತನ ಲೌಕಿಕ ವಾಕ್ಯವು ಪ್ರಮಾಣ-
ವಂತೆ ಆಪ್ತೋತ್ತಮನಾದ ಜಗದೀಶ್ವರನ ಅಲೌಕಿಕವಾಕ್ಯರೂಪವಾದ
ಅಥವಾ ಶ್ರುತಿಯೂ ಮತ್ತು ತತ್ಸಮಾನಾರ್ಥಕಗಳಾಗಿರುವ ಮಹರ್ಷಿ-
ಬ ಆಪ್ತರ ವಾಕ್ಯರೂಪವಾದ ಸ್ಮೃತ್ಯಾದಿಗಳೂ ಪ್ರಮಾಣವೆಂದು ಮನ್ನಿ-
ಕ್ಕೆ ಹಿಂದೆ ಮುಂದೆ ನೋಡುವದು ಏನು ಕಾರಣವೊ ನನಗಂತು ತಿಳಿ-
ು. ಶ್ರುತಿಸ್ಮೃತಿಗಳಲ್ಲಿ ಹೇಳಿರುವ ಎಷ್ಟೋ ಮಾತುಗಳ ಸತ್ಯತೆಯು
ಕ್ಷ ಅನುಭವಕ್ಕೆ ಬಂದಿದ್ದರೂ ಕೂಡ ಅವುಗಳ ಆಪ್ತವಾಕ್ಯತ್ವದ ವಿಷಯ-
ಸಂಶಯಪಡುವದು ಆಶ್ಚರ್ಯವೇ ಸರಿ; ಅಥವಾ ಒಂದು ಪ್ರಕಾರವಾಗಿ
ಡಿದರೆ ಅದು ಆಶ್ಚರ್ಯವೇನೂ ಅಲ್ಲ. ಏಕೆಂದರೆ—

“ दुर्जनदूषितमनसां

पुंसां सुजनेऽपि नास्ति विश्वासः ॥

पाणौ पायसदग्धे

तक्रं फूत्कृत्य पामरः पिबति ॥”

ಎಂಬಂತೆ ಬಿಸಿಬಿಸಿಯಾದ ಕ್ಷೀರದಲ್ಲಿ ಕಯ್ಯಿಟ್ಟು ಸುಟ್ಟುಕೊಂಡವನು ಅದ-ರಂತೆ ಬೆಳ್ಳಗಿರುವ ಮಜ್ಜಿಗೆಯನ್ನೂ ಬಿಸಿಯಾರಲೆಂದು ಊದಿ ಕುಡಿಯಲಿಕ್ಕೆ ಹೋಗುವ ಹಾಗೆ ದುರ್ಜನರಿಂದ ಮೋಸಹೋಗಿರುವವರಿಗೆ ಸಜ್ಜನರ ಮೇ-ಲಾದರೂ ಸಹಸಾ ವಿಶ್ವಾಸವಿಡಲಿಕ್ಕೆ ಧೈರ್ಯಬರದೆಹೋಗುವದು. ಈಗಿನ ದಿವಸಗಳಲ್ಲಿ ಬಹುಶಃ ಒಬ್ಬರಮೇಲೊಬ್ಬರು ವಿಶ್ವಾಸವಿಡದ ಹಾಗೆ ಆಗಿದೆ. ದಿನೇದಿನೇ ಶಿಕ್ಷಣವು ಹೆಚ್ಚಾಗುತ್ತ ನಡೆದ ಹಾಗೆಲ್ಲ ಅಸತ್ಯವೂ ಹೆಚ್ಚಾಗುತ್ತಿದೆ. ಕರುಣಾಮಯನಾದ ಜಗದೀಶ್ವರನು ವೇದವನ್ನೂ ಮತ್ತು ಕೃಪಾಸಾಗರರಾದ ಮಹರ್ಷಿಗಳು ಸ್ಮೃತಿಶಾಸ್ತ್ರಾದಿಗಳನ್ನೂ ನಾವು ಧರ್ಮದಿಂದ ನಡೆಯ-ಬೇಕೆಂದು ತೋರಿಸುವದಕ್ಕಾಗಿಯೇ ಆಜ್ಞಾಪಿಸಿರುವರು. ಅದರಂತೆ ದಯಾ-ಳು ಸರಕಾರದವರು ನಾವು ನೀತಿಯಿಂದ ನಡೆಯಬೇಕೆಂತಲೇ ಕಾಯಿದೆ-ಕಾನೂನುಗಳನ್ನು ಮಾಡಿರುವರು; ಆದರೆ ಅದೇ ವೇದಶಾಸ್ತ್ರಾದಿಗಳನ್ನು ಅಧರ್ಮಕ್ಕೂ ಮತ್ತು ಅದೇ ಕಾಯಿದೆಕಾನೂನುಗಳನ್ನು ಅನೀತಿಗೂ ನಾವು ಅನುಕೂಲಮಾಡಿಕೊಂಡು ದುರುಪಯೋಗಮಾಡಿಕೊಳ್ಳಲಾರಂಭಿಸಿರುವೆವು. ಶಾಸ್ತ್ರಗಳನ್ನು ಓದಿದವರು ತಾವು ಮನಸ್ಸಿಗೆ ಬಂದಂತೆ ನಡೆದು ಅದಕ್ಕೆ ಶಾಸ್ತ್ರ-ಗಳ ಆಧಾರಗಳನ್ನು ಹೇಗಾದರೂ ಅರ್ಥಮಾಡಿ ತೋರಿಸಿದರೆ, ಪಾಪ, ಆ ಶಾಸ್ತ್ರವೇನು ಮಾಡೀತು? ಅದರಂತೆ ಕಾಯಿದೆಯ ಜ್ಞಾನವನ್ನು ತಪ್ಪುಮಾ-ಡದೆ ಇರುವದಕ್ಕಲ್ಲದೆ ಶಾಸನಕ್ಕೆ ಗುರಿಯಾಗದಂತೆ ತಪ್ಪುಮಾಡುವದಕ್ಕೆ ಉಪಯೋಗಿಸಿಕೊಂಡರೆ ಆ ಕಾಯಿದೆಯ ಕಡೆಗೆ ಏನು ಮಾತು? ನ್ಯಾಯಾ-ಧೀಶರು ಸಾಕ್ಷಿ ತೆಗೆದುಕೊಳ್ಳುವಾಗ ಬ್ರಾಹ್ಮಣಾದಿಕರಿಗೆ ಹಾಕುವ ಶಪಥದ

ಪ್ರಕಾರವನ್ನು ಮನುಸ್ಮೃತಿಯಲ್ಲಿ ಈಗ ನಾವು ನೋಡಿದರೆ ವಿಸ್ಮಯವಾಗದೆ ಇರಲಾರದು. ನೋಡಿರಿ:—

"ब्रूहीति ब्राह्मणं ब्रूयात्
सत्यं ब्रूहीति पार्थिवम् ॥
गोबीजकांचनैर्वैश्यं
शूद्रं सर्वैस्तु पातकैः ॥"

ಅಂದರೆ:— ಬ್ರಾಹ್ಮಣನನ್ನು "ಹೇಳು" ಎಂದೂ, ಕ್ಷತ್ರಿಯನನ್ನು "ಸತ್ಯವನ್ನು ಹೇಳು" ಎಂದೂ, ವೈಶ್ಯನನ್ನು "ಆಕಳು, ಧಾನ್ಯ ಮತ್ತು ಬಂಗಾರದ ಆಣೆ-ಮಾಡಿ ಹೇಳು" ಎಂದೂ, ಶೂದ್ರನನ್ನು "ನಿನಗೆ ಸರ್ವಪಾತಕಗಳೂ ಬಂದಾವು; ನಿಜವನ್ನು ಹೇಳು" ಎಂದೂ ಕೇಳಬೇಕು.— ಎಂದು ಬರೆದಿರುವರು. ಇದರ ಮೇಲಿಂದ ನಮ್ಮ ಪೂರ್ವಜರಾದ ಬ್ರಾಹ್ಮಣರು "ಹೇಳು ಎಂದು ಕೇಳಿದರೆ ಸಾಕು; ನಿಜವನ್ನೇ ಹೇಳುತ್ತಿದ್ದರು" ಎಂದು ಸ್ಪಷ್ಟವಾಗುತ್ತದೆ; ಆದರೆ ಅಂಥವರ ವಂಶದವರಾದ ನಾವು ದೇವರ ಆಣೆಯನ್ನು ಮಾಡಿಯೂ ಈಗ ಎಷ್ಟು ಅಸತ್ಯವನ್ನು ಮಾತಾಡುತ್ತಿದ್ದೇವೆಂಬುದು ನಮ್ಮ ನಮ್ಮ ಮನಸ್ಸಿಗೇ ಗೊತ್ತು. ಆಣೆಮಾಡಿ ಹೇಳುತ್ತೇನೆಂದು ಕೋರ್ಟುಗಳಲ್ಲಿ ಹೇಳುವದು ಪದ್ಧ-ತಿಯೇ ಹೊರತು ಅದೇನೂ ನಿಜವಾದ ಆಣೆಯೇ ಅಲ್ಲವೆಂದು ತಿಳಿಯುವಷ್ಟು ನಮ್ಮ ಮನೋದೇವತೆಯು ಕಲ್ಲಾಗಿಲ್ಲವೊ? ಹಿಂದಿನ ಕಾಲದಲ್ಲಿ ಅಸತ್ಯವು ಇರಲೇ ಇಲ್ಲವೆಂತ ಅಲ್ಲ; ಆದರೆ ಆಗ ಸತ್ಯವು ಹೆಚ್ಚಾಗಿತ್ತು. ಈಗ ಸತ್ಯ-ವಿಲ್ಲವೆಂತಲೂ ಅಲ್ಲ; ಆದರೆ ಅಸತ್ಯವು ಹೆಚ್ಚಾಗಿದೆಯೆಂಬುದು ಎಲ್ಲರೂ ಒಪ್ಪತಕ್ಕ ಮಾತು. ಹೀಗೆ ಒಬ್ಬರನ್ನೊಬ್ಬರು ಒಂದೇಸಲಕ್ಕೆ ನಂಬದಂತೆ ಆಗಿರುವದರಿಂದ ವಿಚಾರಮಾಡಿ ನಂಬಬೇಕಾಗಿದೆ; ಆದಕಾರಣ ಶ್ರುತಿಸ್ಮೃ-ತ್ಯಾದಿಗಳಲ್ಲಿಯೂ ಕೂಡ ಮೊದಮೊದಲು ನಮ್ಮ ನಂಬಿಕೆಯು ಹುಟ್ಟದಿದ್ದ-ರೂ ಇರಲಿ; ವಿಚಾರಿಸಿ ನೋಡಿಯಾದರೂ ನಾವು ವಿಶ್ವಾಸವನ್ನು ಇಡತಕ್ಕದ್ದು.

ಯಾರ ಎಷ್ಟೋ ಮಾತುಗಳು ಯಥಾರ್ಥವೆಂದು ನಮಗೆ ಅನುಭವಕ್ಕೆ ಬಂದಿವೆಯೋ ಅಂಥವರ ಹೇಳಿಕೆಯಲ್ಲಿ ನಂಬಿಕೆಯನ್ನಿಡುವದಕ್ಕೆ ಏನು ಅಭ್ಯಂತರವು? ವೇದಾಂಗವಾದ ಜ್ಯೋತಿಷಶಾಸ್ತ್ರವು ಸತ್ಯವೆಂದು ನಮಗೆ ಪ್ರತೀತವಾಗುವದಿಲ್ಲವೊ? ಇಂಥದಿನ ಗ್ರಹಣ ಹಿಡಿಯುವದೆಂದು ಮೊದಲೇ ಪಂಚಾಂಗಗಳಲ್ಲಿ ಬರೆದಂತೆ ಸಂಭವಿಸುವದನ್ನು ನಾವು ನೋಡುವದಿಲ್ಲವೊ? ಒಂದು ಸಾರಿ ಒಂದು ತಿಥಿಯ ಕ್ಷಯ ಅಥವಾ ವೃದ್ಧಿ ಇದು ಇಂಥ ದಿನ ಪೂರ್ಣಿಮಾ ಎಂದು ಪಂಚಾಂಗದಲ್ಲಿದ್ದಂತೆ ನಾವು ಪೂರ್ಣಚಂದ್ರನನ್ನು ಕಾಣುವದಿಲ್ಲವೊ? ಇದರಂತೆ ವೈದ್ಯಶಾಸ್ತ್ರದ ಸತ್ಯತೆಯನ್ನು ನಾವು ಮನಗಾಣುವದಿಲ್ಲವೊ? ಒಂದುವೇಳೆ ಪ್ರಯೋಗಮಾಡುವದರಲ್ಲಿ ಯಾವನಾದರೂ ತಪ್ಪಿದರೆ ಅದಕ್ಕಾಗಿ ಆ ಶಾಸ್ತ್ರವನ್ನು ದೂಷಿಸಕೂಡದು. ಮೇಘದಿಂದ ಸೂರ್ಯನು ಆಚ್ಛಾದಿತನಾದರೂ ಸೂರ್ಯನೇ ಇಲ್ಲವೆಂದು ಹೇಗೆ ಹೇಳುವದಕ್ಕೆ ಬರುವದಿಲ್ಲವೊ ಹಾಗೆಯೇ ಯೋಜಕರ ಪ್ರಮಾದದಿಂದ ಶಾಸ್ತ್ರತತ್ತ್ವವು ಮುಚ್ಚಿಹೋದರೂ ತತ್ತ್ವಕ್ಕೇನೂ ಚ್ಯುತಿಬಾರದು. ಇದನ್ನೆಲ್ಲ ಲಕ್ಷ್ಯಕ್ಕೆ ತಂದು ನಾವು ಶ್ರುತಿಸ್ಮೃತ್ಯಾದಿಗಳನ್ನು ನಂಬಬೇಕು.

ನಮಗೆ ತಿಳಿಯದುದಕ್ಕೆ ಎಷ್ಟೋ ಶಾಸ್ತ್ರೀಯಸಂಗತಿಗಳು ಸುಳ್ಳಾಗಿ ಕಾಣುತ್ತವೆ. ಎಂದಿನಿಂದಲೋ ನಮ್ಮ ಶಾಸ್ತ್ರದಲ್ಲಿ ಅಚೇತನಪದಾರ್ಥಗಳಿಗೆ ಕೂಡ ಜೀವವಿರುವದೆಂದು ಹೇಳುತ್ತ ಬಂದ ಮಾತು ಕೇಳಿ ಎಷ್ಟೋ ಜನರು ನಗುತ್ತಿದ್ದರು; ಆದರೆ ಪ್ರೊಫೆಸರ್ ಜಗದೀಶಚಂದ್ರಬೋಸ್ ಮಹಾಶಯರು "Response in the living and the nonliving" ಎಂಬ ಗ್ರಂಥವನ್ನು ಬರೆದು ಪ್ರಯೋಗವನ್ನು ಕೂಡ ಮಾಡಿ ತೋರಿಸಿ ಪಾಶ್ಚಾತ್ಯಶಾಸ್ತ್ರಜ್ಞರಿಗೆ ಸಹ ಈ ಮಾತಿನ ಸತ್ಯತೆಯನ್ನು ಅನುಭವಕ್ಕೆ ತಂದುಕೊಟ್ಟರು. ಈಗ ಮಾತ್ರ ಈ ಮಾತು ಯಾರಿಗೂ ಅಸಂಭಾವ್ಯವಾಗಿ ತೋರಲಾರದು. ಇದರಂತೆ ನಮ್ಮ ಶಾಸ್ತ್ರದಲ್ಲಿ ಸಮೀಪಬಂಧುಗಳು ಹತ್ತುದಿನ ಮರಣಾಶೌಚವನ್ನು ಮಾಡಬೇಕೆಂದು ಬರೆದಿರುವದರ ಮೇಲೆ "ಹತ್ತುದಿನವೇ ಏಕೆ?" ಎಂದು ಮುಂತಾಗಿ ನಾವು ಆಕ್ಷೇಪಕೋಟಿಗಳನ್ನು ಏರಿಸುತ್ತಿದ್ದೆವು; ಆದರೆ ಈಗಿನ ಪ್ಲೇಗಿನ ದಿವಸಗಳಲ್ಲಿ ಸೆಗ್ರೆಗೇಷನ್ ಮಾಡುವದರ ಮೇಲಿಂದ ಹತ್ತು-

ದಿನಗಳ ಮಹತ್ತ್ವವು ನಮಗೆ ತಾನಾಗಿಯೇ ಕಂಡುಬರುತ್ತದೆ. ಸಮೀಪದ ಬಾಂಧವರು ರೋಗಿಯ ಹತ್ತರ ಶುಶ್ರೂಷೆಗಾಗಿ ಕುಳಿತಿರುವ ಸಂಭವವಿದೆ ಮತ್ತು ಕಫಾದ್ಯನೇಕ ರೋಗಗಳು ಸಾಂಸರ್ಗಿಕಗಳಾಗಿರುವವು; ಆದಕಾರಣ ದಶಾಹಪರ್ಯಂತವಾಗಿ ಅವರನ್ನು ಮುಟ್ಟಿಸಿಕೊಳ್ಳಬಾರದೆಂಬುದು ಎಷ್ಟು ಸಯುಕ್ತಿಕವಾಗಿದೆ? ನೋಡಿರಿ. "ಒಳ್ಳೇದು, ರೋಗಿಯ ಹತ್ತರ ಹೋಗುತ್ತಿದ್ದ ಬಾಂಧವರು ದಶಾಹಾಶೌಚಮಾಡಲಿ; ಗ್ರಾಮಾಂತರದಲ್ಲಿರುವವರು ಏಕೆ ಮಾಡಬೇಕು?" ಎಂದು ಆಕ್ಷೇಪವು ಬಂದೀತು; ಆದರೆ ಹತ್ತು ದಿವಸದ ಕಾರಣವು ಈಗ ಹೊರಬಿದ್ದಂತೆ ಇಂಥ ಎಷ್ಟೋ ಆಕ್ಷೇಪಗಳ ಉತ್ತರಗಳನ್ನು ಕಾಲಚಕ್ರವು ತಾನೇ ಇಂದಿಲ್ಲ ನಾಳೆ ನಮ್ಮ ಮುಂದೆ ತಂದು ಇಟ್ಟೀತು. ಹೀಗೆ ಶಾಸ್ತ್ರದ ಎಷ್ಟೋ ಮಾತುಗಳು ಮೊದಲು ನಮಗೆ ನಿಸ್ಸಾರವಾಗಿ ಕಂಡರೂ ಕಾಲಕ್ರಮದಿಂದ ಅನುಭವ ಬಂದ ಹಾಗೆಲ್ಲಾ ಅವುಗಳ ಸಾರವತ್ತ್ವವು ಪ್ರತೀತವಾಗುವದು.

ಗಂಡುಹುಡುಗರಿಗೆ ತಾಯಿಯರು "ಇಷ್ಟು ಹಾಲು ಕುಡಿ; ಚಂಡಿಕೆ ಬೆಳೆಯುತ್ತದೆ." ಎಂದು ಹಾಲು ಕುಡಿಸುವದನ್ನು ನೀವೆಲ್ಲರೂ ನೋಡಿರಬಹುದು ಅಥವಾ ಕೇಳಿರಬಹುದು. ಹಾಲು ಕುಡಿಯುವದರಿಂದ ಆ ಹುಡುಗನಿಗೆ ಚಂಡಿಕೆ ಬೆಳೆಯದಿದ್ದರೂ ಬಲವು ಹೆಚ್ಚಾಗುವದು. ಹಾಗೆಯೇ ಶಾಸ್ತ್ರದಲ್ಲಿ "**रोचानार्था फलश्रुतिः**" ಎಂದಂತೆ ಏನಾದರೂ ಫಲವನ್ನು ಹೇಳಿ ಸತ್ಕರ್ಮಮಾಡಬೇಕೆಂದು ಬೋಧಿಸಿರುವದರಲ್ಲಿ ಆ ಫಲವು ದೊರೆಯದಿದ್ದರೂ ಆ ಕರ್ಮಕ್ಕೆ ಅನುರೂಪವಾದ ಶ್ರೇಯಸ್ಸು ಸಿಕ್ಕುವದೆಂಬುವದೇ ಉದ್ದೇಶವಿರುವದು. ಇದು ಪ್ರತಾರಣೆಯಲ್ಲ.

**"Good actions, done with bad motives are bad and bad actions, done with good motives are good."**
ಎಂದು ಕಾಯಿದೆಯು ಕೂಡ ಇರುವಂತೆ ಕೆಲಸವು ಒಳ್ಳೆಯದು ಅಥವಾ ಕೆಟ್ಟದ್ದೆಂದು ನಿರ್ಣಯಿಸಲಿಕ್ಕೆ ಕರ್ತನ ಉದ್ದೇಶವನ್ನು ನೋಡಬೇಕಾಗುವದು. ಹಾವರ್ಡ್‌ಸ್ ಸೆಕೆಂಡ್‌ಬುಕ್ಕಿನಲ್ಲಿ "A certion husbandman was lying at the point of death" ಎಂದು ಆರಂಭಿಸಿ

ಹೇಳಿರುವ ಕಥೆಯು ನಿಮ್ಮ ನೆನಪಿನಲ್ಲಿರಬಹುದು. ಆ ಮುದುಕನು ತನ್ನ ಮಕ್ಕಳಿಗೆ "ತೋಟದಲ್ಲಿ ನಟ್ಟುಕಡಿಯಿರಿ; ಆದರಿಂದ ನಿಮಗೆ ಲಾಭವಾಗುವದು." ಎಂದು ಹೇಳಿದ್ದರೆ ಅವನ ಮಕ್ಕಳು ಹಾಗೆ ಮಾಡುತ್ತಿದ್ದರೊ ಇಲ್ಲವೊ; ಆದರೆ ಅವನು ಹಂಚಿಕೆಯಿಂದ "ನಾನು ತೋಟದಲ್ಲಿ ನೆಲದೊಳಗೆ ಒಂದು ಪೂಟಿನ ಕೆಳಗೆ ಹಣವನ್ನು ಹುಗಿದಿದ್ದೇನೆ. ಇಂಥ ಕಡೆಯಲ್ಲಿಯೇ ಎಂದು ಈಗ ಬಂದು ತೋರಿಸುವಷ್ಟು ನನ್ನಲ್ಲಿ ಸಾಮರ್ಥ್ಯವಿಲ್ಲ; ಆದರೂ ನೀವು ಹುಡುಕಿ ಆ ದ್ರವ್ಯವನ್ನು ತೆಗೆದುಕೊಂಡು ಸುಖಿಗಳಾಗಿರಿ." ಎಂದು ಹೇಳಿದುದರಿಂದ ಮಕ್ಕಳು ತೋಟವನ್ನೆಲ್ಲಾ ಅಗೆದರು. ದ್ರವ್ಯವೇನೂ ದೊರೆಯದಿದ್ದರೂ, ಭೂಮಿಯು ಅಗೆದು ಹಸನುಮಾಡಲ್ಪಟ್ಟದ್ದರಿಂದ ವಿಪುಲವಾಗಿ ಬೆಳೆದು ಒಂದಿಲ್ಲೊಂದು ರೀತಿಯಿಂದ ಧನವನ್ನೇ ಕೊಟ್ಟಿತು. ಇದರಂತೆ ಕರ್ಮಗಳಿಗೆ ಫಲಶ್ರುತಿ ಹೇಳಿದಂತೆ ಎಷ್ಟೋ ಕಡೆಯಲ್ಲಿ ಆಗದಿದ್ದರೂ ಆ ಕರ್ಮಕ್ಕೆ ಅನುಗುಣವಾದ ಫಲವು, ಇಂದು ಅಥವಾ ನಾಳೆ, ಇಹದಲ್ಲಿ ಅಥವಾ ಪರದಲ್ಲಿ ಎಂದಿಗೂ ಲಭಿಸದೆ ಇರಲಾರದು.

"अवश्यमेव भोक्तव्यं कृतं कर्म शुभाशुभम्"

ಎಂಬ ಮಾತು ಸುಳ್ಳಲ್ಲ. "As we sow, so we reap" ಎಂದಿರುವಂತೆ ಬಿತ್ತಿದಂತೆ ಫಲಿಸುವದು; ಆದರೆ ಭತ್ತ ಮುಂತಾದ ಧಾನ್ಯಬೀಜಗಳು ಕೆಲವು ತಿಂಗಳ ಮೇಲೆ ಮತ್ತು ಮಾವು ಮುಂತಾದ ವೃಕ್ಷಬೀಜಗಳು ಕೆಲವು ವರ್ಷಗಳ ಮೇಲೆ ಫಲಿಸುವಂತೆ ಕೆಲವು ಕರ್ಮಗಳು ಸ್ವಲ್ಪ ದಿನದಲ್ಲಿಯೂ ಕೆಲವು ಕರ್ಮಗಳು ಕಾಲಾಂತರದಲ್ಲಿಯೂ ಫಲಿಸುವವೆಂಬ ಮಾತು ಅಯುಕ್ತವಾಗಲಾರದು. ಈಗ ನಾನು ನನ್ನ ಮುಂದಿರುವ ದೀಪವನ್ನು ಮುಟ್ಟಿದರೆ ಈಗಲೇ ನನ್ನ ಕೈ ಸುಡುವದು. ಇಂದು ನಾನು ಮಿತಿಮೀರಿ ಉಂಡರೆ ನಾಳೆ ಅಜೀರ್ಣವಾಗುವದು. ನಾವು ಬಾಲ್ಯದಿಂದ ವಿದ್ಯಾಭ್ಯಾಸಮಾಡಹತ್ತಿದರೆ—

"विद्या ददाति विनयं विनयाद्याति पात्रताम् ।
पात्रत्वाद्धनमाप्नोति धनाद्धर्मं ततः सुखम् ॥"

ಎಂದಿರುವಂತೆ ಎಷ್ಟೋ ವರ್ಷಗಳ ಮೇಲೆ ಅದರ ಪೂರ್ಣಫಲವು ಲಭಿಸು-ವದು; ಆದಕಾರಣ ಎಲ್ಲ ಕರ್ಮಗಳಿಗೂ ಈಗಲೇ ಫಲಸಿಕ್ಕಬೇಕೆಂದು ಗಡಿ-ಯಾರವನ್ನು ಇಟ್ಟುಕೊಂಡು ಕೂತರೆ ಸಾಗಲಾರದು. "**कालः कश्चित्प्रतीक्ष्यताम्**" ಎಂದಂತೆ ಕುಳಿತು ಮಲಗಬೇಕು. ನಿಂತೇ ಮಲಗಲಿಕ್ಕೆ ಹೋ-ದರೆ ಪೆಟ್ಟು ತಿನ್ನಬೇಕಾದೀತು.

ಹಿರಿಯರು ಏನಾದರೂ ಮಾಡಲಿಕ್ಕೆ ಹೇಳಿದಾಗ ಹುಡುಗರು "ಹೀಗೆ ಏಕೆ ಮಾಡಬೇಕು?" ಎಂಬ ಮುಂತಾದ ಆಕ್ಷೇಪಣೆಗಳನ್ನು ಮಾಡಿದರೆ ಹಿರಿ-ಯರೇನು ಉತ್ತರವನ್ನು ಕೊಟ್ಟು ಏಕೆಂಬುದರ ಕಾರಣವನ್ನು ತಿಳಿಸಲಾ-ರರೊ? ಆದರೆ ಎಷ್ಟೋ ಸಂಗತಿಗಳಲ್ಲಿ ಹುಡುಗರಿಗೆ ಎಷ್ಟು ತಿಳಿಸಿದರೂ ತಿಳಿಯುವಂತೆ ಇರುವದಿಲ್ಲ. ತಿಳಿಯುದಿರುವದಕ್ಕೆ ಕಾರಣವಾವುದೆಂದರೆ ಅವರ ಬಾಲ್ಯವೇ ಸರಿ. ಕಾರಣವು ತಿಳಿಯದಿದ್ದರೂ ಹಿರಿಯರು ಹೇಳಿದಂತೆ ಮಾಡುವದರಿಂದ ಹುಡುಗರಿಗೆ ಕಲ್ಯಾಣವಿರುವದೆಂಬುದು ಸರ್ವರೂ ಒಪ್ಪತಕ್ಕ ಮಾತು. ಅದರಂತೆ ಸೃಷ್ಟಿಕರ್ತನಾದ ಭಗವಂತನು ವೇದದ ಮೂಲಕ ಅಪ್ಪಣೆ-ಮಾಡಿರುವದರ ಮೇಲೆ ನಾವು "ಏಕೆ? ಏನು?" ಎಂದು ಆಕ್ಷೇಪಮಾಡದೆ—

"वचसस्तस्य सपदि क्रिया केवलमुत्तारम्"

ಎಂಬಂತೆ ಆಜ್ಞಾನುಸಾರವಾಗಿ ಆಚರಿಸುತ್ತ ಹೋದರೇನೇ ನಮಗೆ ಭುಕ್ತಿ-ಯೂ ಮತ್ತು ಮುಕ್ತಿಯೂ ಕರತಲಾಮಲಕೀಭೂತವಾಗುವದು ನಿಜವು. ಆದಕಾರಣ ಬೈಬಲಿನಲ್ಲಿಯೂ ಕೂಡ "Verily I say unto you, unless ye be children ye can not enter into the kingdom of God" ಎಂದು ಹೇಳಿರುವದು.

ಹಾಗಾದರೆ ವೇದಾದಿವಾಕ್ಯಗಳನ್ನು ನಾವು ಕಣ್ಣುಮುಚ್ಚಿಕೊಂಡು ನಂಬ-ಬೇಕಾಗಿದ್ದರೆ ದೇವರು ನಮಗೆ ವಿಚಾರಶಕ್ತಿಯನ್ನು ಕೊಟ್ಟಿರುವದೇಕೆ? ಎಂದರೆ ಕೇಳಿರಿ. ದೇವರು ನಮಗೆ ವಿಚಾರಶಕ್ತಿಯನ್ನು ಕೊಟ್ಟಿರುವದು ಪ್ರಮಾಣಗಳಿಂದ ಸತ್ಯವಾದುದನ್ನು ತಿಳಿದು ಭಜಿಸಿ ಮತ್ತು ಅಸತ್ಯವಾದು-ದನ್ನರಿತು ತ್ಯಜಿಸಿ ಸುಖಿಗಳಾಗಿರುವದಕ್ಕೇ ಹೊರತು ಪ್ರಮಾಣಕ್ಕೂ ಪ್ರಮಾ-ಣವನ್ನು ಕೇಳುತ್ತ—

## “अज्ञश्चाश्रद्दधानश्च संशयात्मा विनश्यति”

ಎಂದು ಶ್ರೀಕೃಷ್ಣನು ಹೇಳಿರುವಂತೆ ನಾಶ ಹೊಂದುವದಕ್ಕಲ್ಲ. ತರ್ಕವನ್ನು ಪ್ರಮಾಣಕ್ಕೆ ಹೊಂದಿಸುತ್ತಲೇ ಮಾಡಬೇಕು. “**न हि प्रमाणस्य प्रमाणांतरापेक्षा**” ಎಂದಂತೆ ಪ್ರಮಾಣಕ್ಕೆ ಪ್ರಮಾಣವನ್ನು ಬೇಡಬಾರದು; ಇಲ್ಲದಿದ್ದರೆ ಅನವಸ್ಥೆಯಾಗುವದು. “ನಾನು ಇದ್ದೇನೋ ಇಲ್ಲವೊ? ನಾನು ಇದ್ದೇನೆಂಬುದನ್ನು ಏತರ ಮೇಲಿಂದ ನಂಬಬೇಕು? ಅದಕ್ಕೇನಾದರೂ ಪ್ರಮಾಣವನ್ನು ಹೇಳಿದರೆ ಅದನ್ನಾದರೂ ಏಕೆ ನಂಬಬೇಕು?” ಹೀಗೆ ಕುತರ್ಕವನ್ನು ಮಾಡುತ್ತ ಯಾವನಾದರೂ “ನಾನು ಇದ್ದೇನೋ ಇಲ್ಲವೋ ಎಂಬುದೇ ನಿಶ್ಚಯವಾಗಿಲ್ಲ; ಅಂದಮೇಲೆ ಊಟಉಡಿಗೆಯನ್ನು ಹೇಗೆ ಮಾಡಲಿ?” ಎಂದು ಸುಮ್ಮನೆ ಕೂತರೆ ಅವನಿಗೆ ನೀವೇನೆನ್ನುವಿರಿ? ಅವನು ತನ್ನ ವಿಚಾರದ ದುರುಪಯೋಗವನ್ನು ಮಾಡಿಕೊಂಡಂತೆ ಅಲ್ಲವೊ? ಪ್ರಮಾಣವನ್ನು ಹಿಡಿದು ತರ್ಕಮಾಡಿದರೆ ಮಾತ್ರ ಏನಾದರೂ ಅರ್ಥವು ನಿಷ್ಪನ್ನವಾದೀತು. ಕೇವಲ ಸ್ವತಂತ್ರತರ್ಕವು, ತುಫಾನಗಾಳಿಯು ಹಡಗನ್ನು ಸಮುದ್ರದಲ್ಲಿ ಮುಳುಗಿಸುವಂತೆ, ನಮ್ಮನ್ನು ಅನರ್ಥದಲ್ಲಿ ಮುಳುಗಿಸುವದು. “ನನ್ನ ಮೇಲೆ ಮುಗಿಲು ಬಿದ್ದರೆ ಹೇಗೆ ಮಾಡಲಿ? ನನ್ನ ಮುಂದೆ ಕಾಣುವವರೆಲ್ಲ ಪಿಶಾಚಿಗಳೋ ಏನೊ? ಇವರು ನನ್ನನ್ನು ಕೊಂದು ತಿಂದರೆ ಏನು ಗತಿ?” ಹೀಗೆಲ್ಲ ತರ್ಕಮಾಡುವವನಿಗೆ ದುಃಖದ ಹೊರತು ಮತ್ತೇನು ಲಭಿಸೀತು? ಈ ಪ್ರಕಾರ ತರ್ಕಮಾಡುವದು ಯುಕ್ತವಲ್ಲ; ಮತ್ತು ಕಣ್ಣುಮುಚ್ಚಿಕೊಂಡು ನಂಬಬೇಕೆಂದೂ ನಾವು ಅನ್ನುವದಿಲ್ಲ; ಆದರೆ ಪ್ರಮಾಣವನ್ನು ಹಿಡಿದು ವಿಚಾರಮಾಡುತ್ತ ಹೋಗಬೇಕು. ಕಣ್ಣುಮುಚ್ಚಿಕೊಂಡು ನಂಬಲಿಕ್ಕೆ ಸಿದ್ಧರಾಗದಂತೆ ಕಣ್ಣುಮುಚ್ಚಿಕೊಂಡು ಅಪನಂಬಿಗೆಯನ್ನು ಮಾಡಲಿಕ್ಕೂ ಸಿದ್ಧರಾಗಬಾರದು. ವಿಶ್ವಾಸಮಾಡುವದಕ್ಕೂ ಚೆನ್ನಾಗಿ ವಿಚಾರಮಾಡಬೇಕು, ಅವಿಶ್ವಾಸಮಾಡುವದಕ್ಕೂ ಚೆನ್ನಾಗಿ ವಿಚಾರಮಾಡಬೇಕು; ಆದಕಾರಣ ನಾವು ವೇದಾದಿಗಳನ್ನು ನಂಬುವಷ್ಟು ಉದಾರಹೃದಯರಾಗದಿದ್ದರೂ “ಅದರಲ್ಲೇನರ್ಥವಿದೆ?” ಎಂದು ಸಹಸಾ ನಿರಾಕರಣೆಮಾಡುವಷ್ಟು ಕಠೋರಚಿತ್ತರಾಗುವದನ್ನಾದರೂ ಬಿಡಬೇಕು. ಶ್ರೀವ್ಯಾಸಮಹರ್ಷಿಗಳು—

" नास्ति चेन्नास्ति नो हानिरस्ति चेन्नास्तिको हतः "

**ಅಂದರೆ**— ನಾವು ಇದ್ದಾನೆಂದು ತಿಳಿದ ದೇವರು ಇಲ್ಲದಿದ್ದರೂ ನಮಗೆ ಹಾನಿ ಇಲ್ಲ; ಅವನು ಇದ್ದರೆ ಮಾತ್ರ ನಾಸ್ತಿಕನು ಸತ್ತನು—ಎಂದಿದ್ದಾರೆ. ನಾವು ದೇವರಿದ್ದಾನೆಂದು ನಂಬುವದರಿಂದ ನಮಗೆ ಅಪಾಯವೇನೂ ಇಲ್ಲ. ದೇವರಿಗೆಂದಿಡುವ ನೈವೇದ್ಯವು ಬರೀ ತೋರಿಕೆಗೆ ಮಾತ್ರ; ಅದನ್ನು ತಿನ್ನುವವರು ನಾವೇ. ಇದರಂತೆ ದೇವರಿಗಾಗಿ ನಾವು ಏನು ಮಾಡಿದರೂ ಅದು ನಮ್ಮ ಪ್ರೀತಿಗಾಗಿಯೇ ಇರುವದು. ಅಂದಮೇಲೆ ಅವನು ಇರದಿದ್ದರೆ ನಮ್ಮದೇನು ಹೋಗುವದು? ದೇವರು ಇದ್ದರಂತು, ನಂಬಿಕೆಯಂತೆ ನಮಗೆ ಫಲವಾಗುವದು; ಆದರೆ ಇಲ್ಲವೆನ್ನುವ ನಾಸ್ತಿಕನಿಗೆ ಮಾತ್ರ ಸ್ತಂಭದಿಂದ ಪ್ರಕಟನಾದ ನರಸಿಂಹಮೂರ್ತಿಯಿಂದ ಹಿರಣ್ಯಕಶಿಪುವಿಗೆ ಆದಂತೆ ಅಪಾಯವಾಗುವದು. ಹೀಗೆ ಶ್ರುತಿಸ್ಮೃತ್ಯಾದಿಗಳು ಬೋಧಿಸುವ ಯಾವ ಮಾತಿನಂತೆ ಆದರೂ ವಿಶ್ವಾಸವಿಟ್ಟು ವರ್ತಿಸುವದರಿಂದ ನಮಗೆ ಏನೂ ಅಪಕಾರವಿಲ್ಲ; ಇಷ್ಟೇ ಅಲ್ಲ, ಏನಾದರೂ ಉಪಕಾರವೇ ಆಗುವದು. ವೇದಾದಿಗಳು ಸತ್ಕರ್ಮಗಳನ್ನೇ ಹೇಳುವವು. ಇಂಥವುಗಳನ್ನು ನಂಬಲಿಕ್ಕೆ ಏಕೆ ಸಂದೇಹವು? ನೋಡಿರಿ, ಪಾಶ್ಚಾತ್ಯವಿದ್ವಾಂಸರೂ ಕೂಡ ವೇದವನ್ನು ಹೇಗೆ ಶ್ಲಾಘಿಸಿದ್ದಾರೆ. ಜರ್ಮನೀದೇಶದ ತತ್ತ್ವವೇತ್ತರಾದ **ಶೋಫನ್ಹೇರಸಾಹೇಬರು** ಜರ್ಮನ್ ಭಾಷೆಯಲ್ಲಿ ಬರೆದುದನ್ನು ಇಂಗ್ಲೀಷಿಗೆ ಭಾಷಾಂತರಿಸಿರುವದರಲ್ಲಿ—

"In the whole world there is no study so benificient and so elevating as that of the Upanishads. It has been the solace of my life and it will be the solace of my death."

ಎಂದು ಇರುವದು.

(**ಇದರ ಭಾವಾರ್ಥ**:— ಈ ಜಗತ್ತಿನಲ್ಲೆಲ್ಲ ಉಪನಿಷತ್ತುಗಳ ಅಧ್ಯಯನದಷ್ಟು ಶ್ರೇಯಸ್ಕರವಾದದ್ದು ಮತ್ತು ಹಿತದಾಯಕವಾದದ್ದು ಮತ್ತಾವದೂ ಇಲ್ಲ. ಇದರ ಬಲದಿಂದಲೇ ನಾನು ಸಮಾಧಾನದಿಂದ ಜೀವ-

ಧಾರಣಮಾಡುತ್ತಿದ್ದೇನೆ ಮತ್ತು ಇದರ ಬಲದಿಂದಲೇ ನಾನು ಸಮಾಧಾನ-ದಿಂದ ದೇಹತ್ಯಾಗವನ್ನು ಮಾಡುವೆನು.)

ಹೀಗೆಯೇ ಮೊನ್ನೆ ಮೊನ್ನೆ ಆಗಿಹೋದ ಪ್ರಸಿದ್ಧ ಪಾಶ್ಚಾತ್ಯ ತತ್ತ್ವ-ಜ್ಞಾನಿಗಳಾದ ಪ್ರೊಫೆಸರ್ ಮ್ಯಾಕ್ಸಮುಲ್ಲರ್ ಸಾಹೇಬರು—

"If those words of Schopenhauer required any endorsement, I should willingly give it as the result of my own experience during the long life devoted to the study of many philosophies and religions. If philosophy is meant to be a preparation for death, I know of no better preparation for it than the vedic philosohhy."

ಎಂದು ಅಭಿಪ್ರಾಯಪಟ್ಟಿರುವರು.

(**ಇದರ ಭಾವಾರ್ಥ:—** ಶೋಫನ್ಹೇರಸಾಹೇಬರ ಮೇಲೆ ಕಂಡ ಮಾ-ತುಗಳಿಗೆ ಅನುಮೋದನವೇನಾದರೂ ಬೇಕಾಗಿದ್ದರೆ ಅದನ್ನು ನಾನು, ಎಷ್ಟೋ ತತ್ತ್ವಶಾಸ್ತ್ರಗಳ ಮತ್ತು ಧರ್ಮಗಳ ಅಧ್ಯಯನಕ್ಕಾಗಿಯೇ ಧಾರೆಯೆರೆದ ನನ್ನ ದೀರ್ಘಾಯುಷ್ಯದ ಅನುಭವವೆಂದು ಕೊಡಲು ಸಿದ್ಧನಾಗಿದ್ದೇನೆ. "ತತ್ತ್ವಶಾಸ್ತ್ರವೆಂಬುದು ಮರಣಕ್ಕೆ ಸಂತೋಷದಿಂದ ತಲೆಗೊಡುವದಕ್ಕೆ ಸಿದ್ಧ-ತೆಗಾಗಿಯೇ ಇದೆ" ಎಂದರೆ ಇಂಥ ತತ್ತ್ವಶಾಸ್ತ್ರವು ವೇದಮೂಲಕವಾದುದು ಒಂದೇ ಹೊರತು ಅನ್ಯವಾದುದನ್ನು ನಾನರಿಯೆನು.)

ಮತ್ತು ತತ್ತ್ವಜ್ಞಾನದ ಇತಿಹಾಸಜ್ಞರಲ್ಲಿ ಪ್ರಸಿದ್ಧರಾದ ವಿಕ್ಟರ ಕಝುನ-ರೆಂಬ ಫ್ರೆಂಚ್ ವಿದ್ವಾಂಸರು ಅಸಂಖ್ಯಾಕಜನರು ಕೂಡಿದ ಸಭೆಯ ಮುಂದೆ ಘಂಟಾಘೋಷವಾಗಿ ಫ್ರೆಂಚ್ ಭಾಷೆಯಲ್ಲಿ ಭಾಷಣಮಾಡಿದುದನ್ನು ಇಂಗ್ಲೀ-ಷಿಗೆ ಭಾಷಾಂತರಿಸಿ ಬರೆದಿರುವದೇನೆಂದರೆ:—

"When we read with attention the poetical philosophical monuments of the East, above all, those of India, which are beginning to spread in Europe,

we discover many a truth and truths so profound and which make such a contrast with the meanness of the results at which European genius has sometimes stopped, that we are constrained to bend the knee before the philosophy of the East and to see in the cradle of the human race the native land of the highest philosophy."

(**ಇದರ ಭಾವಾರ್ಥ:**— ಯೂರೋಪದಲ್ಲಿ ಹರಡುವದಕ್ಕೆ ಪ್ರಾರಂಭವಾಗಿರುವ ಪೂರ್ವದೇಶಗಳ— ಮುಖ್ಯವಾಗಿ ಹಿಂದುಸ್ಥಾನದ— ತತ್ತ್ವಶಾಸ್ತ್ರವಿಚಾರಗಳನ್ನು ಗಮನವಿಟ್ಟು ಓದಿದರೆ ಅನೇಕ ತತ್ತ್ವಗಳು ತಿಳಿಯಬರುವವು. ಆ ತತ್ತ್ವಗಳು ಬಹು ಉದಾತ್ತವಾಗಿರುವವಲ್ಲದೆ ಕೆಲವು ವೇಳೆ ಯೂರೋಪಿಯನರ ಬುದ್ಧಿಯು ಮುಂದಕ್ಕೆ ಹಾಯದೆ ನಿಂತಿರುವ ಎಷ್ಟೋ ವಿಚಾರಗಳಿಗಿಂತಲೂ ಮಹತ್ತ್ವದವುಗಳಾಗಿರುವದರಿಂದ ಪೂರ್ವದೇಶದ ತತ್ತ್ವಶಾಸ್ತ್ರಗಳ ಮುಂದೆ ನಾವೆಲ್ಲರೂ ತಲೆಯನ್ನು ಬಗ್ಗಿಸಬೇಕಾಗಿರುವದು. ಪೂರ್ವದೇಶವು ಸಮಸ್ತಜನಾಂಗಗಳಿಗೂ ಮೂಲಸ್ಥಾನವೆಂಬುದಿಷ್ಟೇ ಅಲ್ಲ ನಿರತಿಶಯವಾದ ತತ್ತ್ವಶಾಸ್ತ್ರಕ್ಕೂ ತವರುಮನೆಯಾಗಿರುವದು.)

ಹೀಗೆ ವೇದದ ಪ್ರಾಮಾಣ್ಯವನ್ನು ಸರಳವಿಚಾರಶಾಲಿಗಳಾದ ಪಾರದೇಶಿಕಸದ್ಗೃಹಸ್ಥರು ಕೂಡ ಶಿರಸಾವಹಿಸುತ್ತಿರುವಾಗ ಏತದ್ವಿಷಯದಲ್ಲಿ ಯಾವ ಭಾರತವರ್ಷೀಯನೂ ಸಂದೇಹವನ್ನವಗಾಹಿಸಲಾರನೆಂದು ನಾನಂತು ನಂಬಿದ್ದೇನೆ.

ವೇದದ ಲಕ್ಷಣವನ್ನು "**अपौरुषं वाक्यं वेद:**" ಎಂದು ಮೀಮಾಂಸಕರು ಹೇಳುವರು. ಶ್ರೀಜೈಮಿನಿಮಹರ್ಷಿಗಳು ಪ್ರಥಮಪಾದದಲ್ಲಿ "**वेदांश्चैके सन्निकर्षं पुरुषाख्या**" ಎಂಬ ಮತ್ತು "**अनित्यदर्शनाच्च**" ಎಂಬ ಸೂತ್ರಗಳಿಂದ ಪೌರುಷೇಯತ್ವವನ್ನು ಪೂರ್ವಪಕ್ಷದಿಂದ ಹೇಳಿ "**उक्तं तु शब्दपूर्वत्वम्**" ಮತ್ತು "**परंतु श्रुतिसामान्यमात्रम्**" ಎಂಬ ಸೂತ್ರಗಳಿಂದ ಪರಿಹಾರಮಾಡಿ ಅಪೌರುಷೇಯತ್ವವನ್ನು ಸಿದ್ಧಾಂತಿಸಿರುವದುಂಟು. ಈ ವಿಷಯದಲ್ಲಿ—

"स्यात्पौरुषं न वा वेदवाक्य स्यात्पौरुषेयता
काठकादिसमाख्यानाद्वाक्यत्वाच्चान्यवाक्यवत् ॥
समाख्यानं प्रवचनाद्वाक्यत्वं तु पराहतं
तत्कर्त्रनुपलंभेन स्यात्ततोऽपौरुषेयता ॥"

ಎಂಬ ಸಂಗ್ರಾಹಕಶ್ಲೋಕಗಳುಂಟು.

ಶಬ್ದಚಿಂತಾಮಣಿಯಲ್ಲಿ "**शब्दतदुपजीविप्रमाणातिरिक्तप्रमाणजन्य-प्रमित्यविषयार्थकत्वे सति शब्दजन्यवाक्यार्थज्ञानजन्यप्रमाणशब्दत्वं वे-दत्वम्**" ಎಂದು ವೇದದ ಲಕ್ಷಣವು ಹೇಳಲ್ಪಟ್ಟಿದೆ. ಶ್ರೀಮಥುರಾನಾಥಕೃತ-ವಿವರಣವನ್ನು ಓದಿದರೆ ಈ ವಿಷಯವು ಚನ್ನಾಗಿ ತಿಳಿಯಬರುವದು. ಈ ವೇದದ ಅಪೌರುಷೇಯತ್ವವೆಂಬ ವಿಷಯವನ್ನು ಈಗ ವಿಸ್ತಾರದಿಂದ ತಿಳಿಸ-ಹೋದರೆ ಎಷ್ಟೋ ಜನರಿಗೆ ತಲೆಶೂಲೆಯನ್ನು ಎಬ್ಬಿಸಿದಂತೆ ಆದೀತು. ಯಾವದಾದರೊಂದು ಶಾಸ್ತ್ರದ ವಿಷಯವು ತಿಳಿಯಬೇಕಾದರೆ ಮೊದಲು ಆ ಶಾಸ್ತ್ರದ ಪರಿಭಾಷೆಯ ಜ್ಞಾನವು ಬೇಕಾಗುವದು. ಆಗ್ಝ್ಯುಂ ಮತ್ತು ಪಾಶ್ಚುಲೇಟುಗಳನ್ನು ಅರಿಯದವನಿಗೆ ಯೂಕ್ಲಿಡ್ ಸಾಹೇಬರ ಜಿಯಾಮಿಟ್ರಿ-ಯು ತಿಳಿಯಲಾರದು. ಅಂಥವನ ಮುಂದೆ ಯಾವದಾದರೊಂದು ಎಗ್ಝಾಂ-ಪಲ್ ತಿಳಿಸಿ ಹೇಳಹೋದರೆ ಅವನಿಗೆ ಪ್ರಮೋದವೇನೂ ಆಗದೆ ಖೇದವೇ ಆದೀತು. ಅದರಂತೆ ವೇದದ ಅಪೌರುಷೇಯತ್ವದಂಥ ವಿಷಯವನ್ನು ಈಗ ನಾನು ಪ್ರತಿಪಾದಿಸಹೋದರೆ ಇಲ್ಲಿ ಭಗವದ್ಗೀತೆಯ ಸಾರಾಮೃತವನ್ನು ಸೇವಿಸಬೇಕೆಂದು ಕುತೂಹಲದಿಂದ ನೆರೆದಿರುವ ಎಷ್ಟೋ ತರುಣವಿದ್ಯಾರ್ಥಿ-ಗಳ ಔತ್ಸುಕ್ಯವನ್ನು ಭಂಗಪಡಿಸಿದ ದೋಷಕ್ಕೆ ಪಾತ್ರನಾದೇನು; ಆದಕಾರಣ ವಿದ್ಯಾರ್ಥಿಬಂಧುಗಳೆ, ನಿಮಗೆ ಒಂದೇ ಒಂದು ಮಾತು ಹೇಳಿ ಮುಂದೆ ಸಾಗುತ್ತೇನೆ. ಅದೇನೆಂದರೆ:— ನಾನು ಮೇಲೆ ಸೂತ್ರಾದಿಗಳನ್ನು ಹೇಳಿ-ರುವದು ನಿಮ್ಮ ಕಣ್ಣಿಗೆ ಧೂಳೆರಚಿ ನಿಮಗೆ ಏನೂ ತಿಳಿಯದಂತೆ ಮಾಡಿ ನನ್ನ ಪಾಂಡಿತ್ಯವನ್ನು ತೋರಿಸಲಿಕ್ಕಲ್ಲ; ಆದರೆ "ವೇದವೇನು ದೊಡ್ಡ

ಪ್ರಮಾಣ? ವೇದವು ಅಪೌರುಷೇಯವೇಕೆ?" ಎಂದು ಮುಂತಾದ ಆಕ್ಷೇಪಗಳನ್ನು ತೆಗೆದು "ನಮ್ಮ ಧರ್ಮಮೂಢಜನರು ಸುಮ್ಮನೆ ವೇದಗಳಿಗೆ ಅವುಗಳ ಯೋಗ್ಯತೆಯನ್ನು ಮೀರಿ ಮಹತ್ವವನ್ನು ಕೊಡುತ್ತಾರೆ" ಎಂದು ನೀವು ಏಕಾಏಕಿ ನಿರ್ಣಯಮಾಡುತ್ತಿದ್ದರೆ ಅದನ್ನು ಸ್ವಲ್ಪಮಟ್ಟಿಗೆ ನಿಲ್ಲಿಸಬೇಕೆಂದೂ ನಮ್ಮ ಪೂರ್ವಜರು ಕೇವಲ ಮೂಢವಿಶ್ವಾಸಿಗಳೇ ಆಗಿರದೆ ವಿಚಾರಪರರಾಗಿದ್ದರೆಂದು ನಿಮ್ಮ ಮನಸ್ಸಿನಲ್ಲಿ ಕಲ್ಪನೆಯನ್ನು ಹುಟ್ಟಿಸಬೇಕೆಂದೂ ಅವರ ವಿಚಾರಪ್ರೌಢಿಮೆಯನ್ನು ಸ್ವಲ್ಪ ಉದಾಹರಿಸಿದೆನು. ನಮ್ಮ ಪೂರ್ವಜರಾದ ಮಹರ್ಷಿಗಳು ವೇದಗಳನ್ನು ನಂಬಬೇಕಾದರೆ ಎಷ್ಟೋ ಆಕ್ಷೇಪಗಳನ್ನು ಮಾಡಿ, ಎಷ್ಟೋ ವಿಚಾರಿಸಿ, ಎಷ್ಟೋ ಚರ್ಚೆಯನ್ನು ನಡೆಸಿ ಕೊನೆಗೆ ವೇದಗಳ ಮುಂದೆ ತಮ್ಮ ತಲೆಗಳನ್ನು ಬಗ್ಗಿಸಿದ್ದಾರೆ. ಈ ವಿಷಯದಲ್ಲಿಯ ಅವರ ವಿಚಾರಗಳು ನಮಗೆ ತಿಳಿಯಬೇಕಾದರೆ ನಾವು ಅಲ್ಲಿಯೇ ತಲೆಹಾಕಿಕೊಂಡು ಎಷ್ಟೋ ದಿವಸ ಕೂಡದ ಹೊರತು ಒಮ್ಮೇಲೇ ಗ್ರಹಿಸಲಾರದಷ್ಟು ಯುಕ್ತಿವಿಶೇಷದಿಂದ ಕೂಡಿದವೂ ಗಹನವಾದವೂ ಆಗಿವೆ. ಬೇಕಾದರೆ ಅವುಗಳನ್ನು ನೀವು ಸಮಗ್ರವಾಗಿ ಓದಿನೋಡಬೇಕು. ಅವರಿಗಿಂತಲೂ ನಿಮ್ಮ ವಿಚಾರವು ಮುಂದೆ ಹರಿದರೆ ಆಮೇಲೆ ಅವರಿಗೆ ನೀವು ಬೇಕಾದ್ದು ಅನ್ನಬಹುದು. ಈಗಲೇ ಅವರನ್ನು ವಿಚಾರಮೂಢರೆನ್ನುವ ನಾಲಿಗೆಯನ್ನು ಬಿಗಿಹಿಡಿಯಬೇಕು. ಇಷ್ಟು ನಿಮ್ಮ ಮನಸ್ಸಿನಲ್ಲಿ ಹುಟ್ಟಿದರೆ ಸಾಕು; ನನ್ನ ಶ್ರಮವು ಸಫಲವಾಯಿತೆಂದು ತಿಳಿಯುತ್ತೇನೆ. ಇನ್ನು ಪ್ರಸ್ತುತ ವಿಷಯದ ಕಡೆಗೆ ಹೊರಡುವೆನು.

ಋಗ್ವೇದಭಾಷ್ಯದಲ್ಲಿ ಶ್ರೀಸಾಯಣಾಚಾರ್ಯರು "अलौकिकं पुरुषार्थोपायं वेत्त्यनेनेति वेदशब्दनिर्वचनम् । तथाचोक्तम्—

"प्रत्यक्षेणानुमित्या वा यस्तूपायो न बुध्यते ।
एनं विदंति वेदेन तस्माद्वेदस्य वेदता ॥"

ಎಂದು ಬರೆದಿರುವರು. ಇದು ಪ್ರಕೃತಕ್ಕೆ ಉಪಯುಕ್ತವಾದ ವಿಷಯವಾ-

ಗಿರುವದರಿಂದ ಇದನ್ನು ಸ್ವಲ್ಪ ತಿಳಿಸುವೆನು. ವೇದ ಎಂಬ ಶಬ್ದವು ವಿದ್ ಎಂಬ ಧಾತುವಿನಿಂದಾಗಿದೆ. ವಿದ್ ಎಂದರೆ ತಿಳಿಯೋಣ. ಅಲೌಕಿಕವಾದಂಥ ಪುರುಷಾರ್ಥದ ಉಪಾಯವನ್ನು ಏತರಿಂದ ಮನುಷ್ಯನು ತಿಳಿಯುತ್ತಾನೋ ಅದು ವೇದವು. ಪುರುಷಾರ್ಥವೆಂದರೆ ಪುರುಷನಿಗೆ ಇಷ್ಟವಾದ ವಸ್ತುವು. ಇಲ್ಲಿ ಪುರುಷ ಎಂಬ ಶಬ್ದದಲ್ಲಿ ಸ್ತ್ರೀಯೂ ಅಂತರ್ಭೂತಳಾಗುವಳು. ಸ್ತ್ರೀಪುರುಷರು ಕೆಲಕೆಲವು ವಿಷಯಗಳಲ್ಲಿ ಭಿನ್ನಭಿನ್ನರಾಗಿದ್ದರೂ ಮನುಷ್ಯತ್ವವೆಂಬುದು ಉಭಯರಿಗೂ ಸಾಮಾನ್ಯವಾಗಿದೆ. ಕಾಯಿದೆಯಲ್ಲಿ ಮನುಷ್ಯ ಎಂಬ ಶಬ್ದದೊಳಗೆ ಸ್ತ್ರೀಪುರುಷರಿಬ್ಬರದೂ ಅಂತರ್ಭಾವವಾಗುವದು. ಇಬ್ಬರೂ ಮನುಷ್ಯಪ್ರಾಣಿಗಳಾಗಿರುವದರಿಂದ ವಿಚಾರಶಕ್ತಿಯು ಇಬ್ಬರಿಗೂ ಸಮವಾಗಿರುವದು; ಆದಕಾರಣ ಪುರುಷ ಎಂಬ ಶಬ್ದದಿಂದ ಇಬ್ಬರನ್ನೂ ತೆಗೆದುಕೊಳ್ಳಬೇಕು. ಇನ್ನು ಅರ್ಥವೆಂದರೆ ಪ್ರಯೋಜನವು. ಪ್ರಯೋಜನವೆಂದರೆ ಇಚ್ಛೆಯ ವಿಷಯವು. ಹೀಗೆ ಪುರುಷಾರ್ಥ ಶಬ್ದದಿಂದ ಮನುಷ್ಯರ— ಅಂದರೆ ಸ್ತ್ರೀಪುರುಷರ— ಇಚ್ಛೆಗೆ ವಿಷಯವಾದ ವಸ್ತುವು ಎಂದು ತಿಳಿಯಬೇಕು. ಇನ್ನು ಮನುಷ್ಯರಿಗೆ ಇಷ್ಟವಾದ ಪದಾರ್ಥವು ಯಾವದೆಂಬದನ್ನು ನೋಡೋಣ. ಶ್ರೀಭಗವಂತನು—

"न हि कश्चित् क्षणमपि जातु तिष्ठत्यकर्मकृत्"

ಎಂದು ಹೇಳಿರುವಂತೆ ಈ ಸಂಸಾರದಲ್ಲಿ ಯಾವ ಪ್ರಾಣಿಯೂ ಕ್ಷಣವಾದರೂ ಯಾವದಾದರೊಂದು ಕೆಲಸವನ್ನು ಮಾಡದೆ ಇರುವದಿಲ್ಲ.—

"यद्यद्धि कुरुते जंतुस्तत्तत्कामस्य चेष्टितम्"

ಎಂದು ಶ್ರೀಮನುಸ್ಮೃತಿಯಲ್ಲಿ ಹೇಳಿರುವಂತೆ ಸರ್ವಪ್ರಾಣಿಗಳೂ ಸರ್ವಕಾಲದಲ್ಲಿಯೂ ದೇಹದಿಂದ ಅಥವಾ ಮನಸ್ಸಿನಿಂದ ಮಾಡುತ್ತಿರುವ ಸರ್ವ ಕ್ರಿಯೆಗಳಲ್ಲಿಯೂ ಏನಾದರೂ ಇಚ್ಛೆಯು ಇದ್ದೇ ಇರುವದು. ನಾವು ಯಾವ ಇಚ್ಛೆಯಿಂದ ಇಷ್ಟು ಕೆಲಸಗಳನ್ನು ಮಾಡುತ್ತಿರುವೆವೆಂದು ವಿಚಾರಿಸಿ ನೋಡಲು ನಮ್ಮ ಸರ್ವಕ್ರಿಯೆಗಳಲ್ಲಿಯೂ ಸುಖಪ್ರಾಪ್ತಿ ಅಥವಾ ದುಃಖ-

ನಿವೃತ್ತಿ ಎಂಬುದೇ ಪ್ರಯೋಜನವಿರುವದೆಂದು ಕಂಡುಬರುವದು. ನಾವು ಆಹಾರವಿಹಾರ ಮುಂತಾದುದನ್ನೇನನ್ನೇ ಮಾಡಲಿ ಅದು ಸುಖವನ್ನು ಹೊಂದಲಿಕ್ಕಾಗಿ ಅಥವಾ ದುಃಖವನ್ನು ಕಳೆದುಕೊಳ್ಳಲಿಕ್ಕಾಗಿ ಇರುತ್ತದೆಂಬದು ಸರ್ವಾನುಭವಸಾಕ್ಷಿಕವಾದ ಮಾತು. ಅದರಲ್ಲಾದರೂ ದುಃಖನಿವೃತ್ತಿಗಿಂತಲೂ ಸುಖಪ್ರಾಪ್ತಿಯೇ ಹೆಚ್ಚು ಬೇಕಾಗಿರುವದು; ಏಕೆಂದರೆ ಸ್ವಲ್ಪ ಸುಖಕ್ಕಾಗಿ ನಾವು ಎಷ್ಟೋ ದುಃಖಕ್ಕೆ ಬೇಕಾಗಿಯೇ ತಲೆಗೊಡುತ್ತೇವೆ. ಏನಾದರೂ ಮಧುರವಾದ ಪಕ್ವಾನ್ನವನ್ನು ಮಾಡಿಕೊಂಡು ಒಂದು ಕ್ಷಣ ಜಿಹ್ವಾಸ್ವಾದಸುಖವನ್ನು ಅನುಭವಿಸುವದಕ್ಕಾಗಿ ಹೊಗೆಯನ್ನು ಬಡಿಸಿಕೊಳ್ಳುವದು ಮುಂತಾದ ಎಷ್ಟೋ ದುಃಖಕ್ಕೆ ನಾವು ಗುರಿಯಾಗುತ್ತೇವೆ. ಹೀಗೆ ಎಷ್ಟೋ ದುಃಖವನ್ನು ಪಟ್ಟಾದರೂ ಸ್ವಲ್ಪ ಸುಖವನ್ನು ಪಡೆಯುವದಕ್ಕಾಗಿ ನಮ್ಮ ಪ್ರವೃತ್ತಿಯಾಗುತ್ತಿರುವದರಿಂದ—

"सुखाय कर्माणि करोति लोकः"

ಎಂದು ಶ್ರೀಮದ್ಭಾಗವತಪುರಾಣದಲ್ಲಿ ಬರೆದಿರುವಂತೆ ಸುಖಕ್ಕಾಗಿಯೇ ನಾವೆಲ್ಲರೂ ಯತ್ನಿಸುತ್ತಿದ್ದೇವೆಂದು ಸ್ಪಷ್ಟವಾಗುತ್ತದೆ. ಸುಖವೇ ಸರ್ವಪ್ರಾಣಿಗಳ ಪ್ರಯೋಜನವು. ನಮಗೆ ಸಂಸಾರದಲ್ಲಿ ಸಿಕ್ಕುತ್ತಿರುವ ಆಯಾ ವೈಷಯಿಕಸುಖದಿಂದ ತೃಪ್ತರಾಗದೆ ನಾವು ಮತ್ತೂ ಸುಖ, ಸುಖ ಎಂದು ಹಂಬಲಿಸುತ್ತಿರುವೆವು. ಈ ಹಂಬಲಿಸುತ್ತಿರುವಿಕೆಯು ಯಾರಿಗೂ ಬಿಟ್ಟಿಲ್ಲ. ಎಷ್ಟು ಸಂಪತ್ತಿದ್ದವರೂ ಸುಖ, ಸುಖವೆಂದು ಬಡಬಡಿಸುವದು ತಪ್ಪಿಲ್ಲ. ಎಂಥ ದರಿದ್ರರೂ ಸುಖ, ಸುಖವೆಂದು ಕನವರಿಸುವದು ಬಿಟ್ಟಿಲ್ಲ. ಇದು ಹುಡುಗರಿಗೆ ಬಿಟ್ಟಿಲ್ಲ; ಹಿರಿಯರಿಗೆ ಬಿಟ್ಟಿಲ್ಲ; ಹೆಂಗಸರಿಗೆ ಬಿಟ್ಟಿಲ್ಲ; ಗಂಡಸರಿಗೆ ಬಿಟ್ಟಿಲ್ಲ; ಷಡ್ದರ್ಶನ ನಿಷ್ಣಾತನಿಗೆ ಬಿಟ್ಟಿಲ್ಲ; ನಿರಕ್ಷರಕುಕ್ಷಿಗೆ ಬಿಟ್ಟಿಲ್ಲ. ಹೆಚ್ಚಾಗಿ ಹೇಳುವದೇನು? ಪ್ರಾಣಿಮಾತ್ರಕ್ಕೂ ಸುಖದ ಆಶೆಯು ತೃಪ್ತವಾಗದೆ ಇದೆ. ಇದರ ಮೇಲಿಂದ ಸಾಂಸಾರಿಕಸುಖಕ್ಕಿಂತ ಹೆಚ್ಚಿನದಾದ ಯಾವದೋ ಒಂದು ಬಗೆಯ ಸುಖವನ್ನು ನಾವು ಬೇಡುತ್ತೇವೆಂದು ವ್ಯಕ್ತವಾಗುವದು. ಅದು ಎಂಥದ್ದಿರಬಹುದೆಂದು ನಿಶ್ಚಯಿಸಬೇಕಾದರೆ ಮೊದಲು, ನಮಗೆ ಈ ಪ್ರಪಂಚ-

ದಲ್ಲಿ ಸಿಕ್ಕುವ ಸುಖವು ಹೇಗಿರುವದೆಂಬುದಕ್ಕೆ ಲಕ್ಷ್ಯಕೊಟ್ಟು ನೋಡುವದು ಅವಶ್ಯವಾಗಿದೆ. ಲೌಕಿಕಸುಖದಲ್ಲಿ ಏನಾದರೂ ದೋಷವಿರಬೇಕು ಮತ್ತು ಆ ದೋಷವಿಲ್ಲದ ಸುಖವನ್ನು ನಮ್ಮ ಮನಸ್ಸು ಬೇಡುತ್ತಿರಬೇಕು. ಸಾಂಸಾರಿಕಸುಖದಲ್ಲಿ ಏನು ದೋಷವಿರಬಹುದೆಂಬುವನ್ನು ಗೊತ್ತುಹಚ್ಚುವದು ಶ್ರಮದ ಕೆಲಸವಲ್ಲ. ಪ್ರಾಪಂಚಿಕಸುಖವು ಕ್ಷಣಿಕವಾದುದೂ ಮತ್ತು ದುಃಖಮಿಶ್ರಿತವಾದುದೂ ಆಗಿದೆ ಎಂದು ಸ್ವಾನುಭವದಿಂದ ಸಹಜವಾಗಿ ತಿಳಿಯುವಂತೆ ಇದೆ. ಈ ಕ್ಷಣಿಕತ್ವ ಮತ್ತು ದುಃಖಮಿಶ್ರಿತತ್ವವೆಂಬ ದೋಷದ್ವಯದಿಂದ ರಹಿತವಾದ ಶಾಶ್ವತಪರಮಾನಂದವು ನಮಗೆ ಬೇಕಾದ ಪದಾರ್ಥವೆಂದು ಸಿದ್ಧವಾಗುವದು. ಈ ನಿರಂತರಪರಮಾನಂದವು ಸುಲಭವಲ್ಲ. ಇದನ್ನು ಹೊಂದಬೇಕಾದರೆ ಬಹಳ ಪ್ರಯತ್ನವು ಅವಶ್ಯವಾಗಿರಬೇಕು. ಇಂಥದ್ದನ್ನು ಪುರುಷನು ಸಾಧಿಸಿದರೆ ಸಾಧಿಸಿಯಾನೇ ಹೊರತು ಇತರ ಪ್ರಾಣಿಗಳು ಸಾಧಿಸಲಾರವು; ಆದಕಾರಣ ಇದಕ್ಕೆ ಪುರುಷಾರ್ಥವೆಂದು ಹೆಸರು ಕೊಟ್ಟಿದ್ದಾರೆ. ಈ ಪರಮಾನಂದಕ್ಕೆ ಮೋಕ್ಷ, ಮುಕ್ತಿ ಮೊದಲಾದ ನಾಮಗಳುಂಟು. ಇದು ಮುಖ್ಯವಾದ ಪ್ರಯೋಜನವಾಗಿರುವದರಿಂದ ಇದಕ್ಕೆ ಪರಮಪುರುಷಾರ್ಥವೆನ್ನುವರು. ಇದಕ್ಕೆ ಸಾಧನವಾದ ಧರ್ಮಾದಿಗಳು ಗೌಣವೆನ್ನಿಸುವವು; ಆದಕಾರಣ ವೇದಾಂತಪರಿಭಾಷಾ ಎಂಬ ಗ್ರಂಥದಲ್ಲಿ "इह खलु धर्मार्थकाममोक्षाख्येषु चतुर्विधपुरुषार्थेषु मोक्ष एव परमपुरुषार्थः" ಎಂದು ಬರೆದಿರುವರು. "अत्र त्रिविधदुःखात्यंतनिवृत्तिरत्यंतपुरुषार्थः" ಎಂಬ ಸಾಂಖ್ಯಸೂತ್ರವೂ ಕೂಡ ಏತದರ್ಥಕವಾದದ್ದು. ಏವಂಚ ನಿರಂತರಪರಮಾನಂದವು ಪುರುಷಾರ್ಥವೆಂದು ಗೊತ್ತಾಗುವದು. ಈ ಪುರುಷಾರ್ಥದ ಉಪಾಯವು ಲೋಕದಲ್ಲಿ ಏನೂ ಕಂಡುಬರುವದಿಲ್ಲ; ಏಕೆಂದರೆ ಪ್ರಪಂಚದಲ್ಲಿ ಯಾವನೂ ನಿರಂತರಸುಖಸಂಪನ್ನನಾಗಿಲ್ಲ. ಅಂದಮೇಲೆ ಶಾಶ್ವತಸುಖದ ಉಪಾಯವು ಪ್ರತ್ಯಕ್ಷಪ್ರಮಾಣದಿಂದ ತಿಳಿಯುವಂತೆ ಇಲ್ಲ. ಹೀಗಿದ್ದಮೇಲೆ ಪರಾಮರ್ಶಕ್ಕೆ ಅವಕಾಶವೇ ಇಲ್ಲ. ಪರಾಮರ್ಶವೆಂದರೇನೆಂಬುವನ್ನು ಹಿಂದೆ-

...ನು ಹೇಳಿರುವದರಿಂದ ಮತ್ತೆ ಹೇಳಿದರೆ ಪಿಷ್ಟಪೇಷಣವಾಗುವದು.
...ರ್ಶದ ಹೊರತು ಅನುಮಿತಿಯಾಗಲಾರದು. ಹೀಗೆ ಲೋಕದಲ್ಲಿ

ಪ್ರತ್ಯಕ್ಷ ಅಥವಾ ಅನುಮಿತಿಯಿಂದ ಪುರುಷಾರ್ಥದ ಯಾವ ಉಪಾಯವು ತಿಳಿಯಲಾರದೊ ಅಂಥ ಅಲೌಕಿಕವಾದ ಉಪಾಯವು ಶ್ರುತಿಯಿಂದ ತಿಳಿಯಲ್ಪಡುವದಾದಕಾರಣ ಅದಕ್ಕೆ ವೇದವೆನ್ನುವರು.

ಶ್ರುತಿಗಳರ್ಥವನ್ನು ತಿಳಿದುಕೊಳ್ಳುವದು ಸಾಮಾನ್ಯಜನರಿಗೆ ದುಷ್ಕರವಾದುದೆಂದು ನೋಡಿ ತತ್ಸಮಾನಾರ್ಥಕಗಳಾದ ಸ್ಮೃತಿಗಳನ್ನು ಪರಮಕಾರುಣಿಕರಾದ ಶ್ರೀಮನ್ವಾದಿಗಳು ನಿರ್ಮಿಸಿರುವರು; ಆದಕಾರಣ ಅವಾದರೂ ಪ್ರಮಾಣವಾಗಿರುವದರಿಂದ—

"श्रुतिस्मृती द्विजातीनां पुरुषार्थप्रसाधिके"

ಎಂದು ಹೇಳಲ್ಪಟ್ಟದೆ.

ಇನ್ನೂ ಸುಗಮವಾಗಿ ವೇದಾರ್ಥವನ್ನು ಪ್ರಕಾಶಿಸಬೇಕೆಂದು ಶ್ರೀವೇದವ್ಯಾಸಾದಿ ಮಹರ್ಷಿಗಳು—

"इतिहासपुराणाभ्यां वेदं समुपबृंहयेत्"

ಎಂದಿರುವಂತೆ ಇತಿಹಾಸಪುರಾಣಗಳನ್ನು ರಚಿಸಿರುವರು. ಇತಿಹಾಸ ಪುರಾಣಗಳನ್ನು ಕೆಲವು ಕಡೆಯಲ್ಲಿ ಸ್ಮೃತಿಯೆಂದೂ ಉದಾಹರಿಸಿರುವರು. स्मृ ಎಂಬ ಧಾತುವಿಗೆ क्तिन् ಪ್ರತ್ಯಯವು ಹತ್ತಿ ಸ್ಮೃತಿಯೆಂಬ ಶಬ್ದವಾಗಿದೆ. ಈ क्तिन् ಪ್ರತ್ಯಯವು ಕರಣದಲ್ಲಿ ಎಂದು ಕಲ್ಪಿಸಿ "ಏತರಿಂದ ವೇದಾರ್ಥವು ಸ್ಮರಿಸಲ್ಪಡುವದೊ ಅದು ಸ್ಮೃತಿ" ಎಂದು ಅರ್ಥಮಾಡಲಾಗಿ ಇತಿಹಾಸಾದಿಗಳು ಕೂಡ ಸ್ಮೃತಿಯೆಂಬ ಶಬ್ದದಲ್ಲಿ ಬರುವವು. ಇತಿಹಾಸವೆಂಬ ಶಬ್ದದ ವ್ಯುತ್ಪತ್ತಿಯು "इति ह पारंपर्योपदेशः आस्ते अस्मिन्नाधारे घञ्" ಹೀಗೆ ಇರುವದು ಮತ್ತು ಇತಿಹಾಸದ ಲಕ್ಷಣವು—

"धर्मार्थकाममोक्षाणामुपदेशसमन्वितम् ।
पूर्ववृत्तकथायुक्तमितिहासं प्रचक्षते ॥"

ಎಂದು ಹೇಳಲ್ಪಟ್ಟಿರುವದು. ಇತಿಹಾಸಗಳಲ್ಲಿಯೂ ಭಾರತವೇ ಶ್ರೇಷ್ಠ-ವೆಂಬುದು "इतिहासोत्तमादस्मात्" ಎಂಬ ಮುಂತಾದ ಪ್ರಮಾಣಗಳಿಂದ ನಿಶ್ಚಿತವಾಗುವದು.—

"यदिहास्ति तदन्यत्र यन्नेहास्ति न तत् क्वचित्"

ಎಂಬ ಪ್ರಮಾಣದ ಮೇಲಿಂದ "ಭಾರತದಲ್ಲಿ ಹೇಳಿದುದೇ ಎರಡನೆಯ ಕಡೆ-ಯಲ್ಲಿ ಹೇಳಲ್ಪಟ್ಟದೆ ಮತ್ತು ಭಾರತದಲ್ಲಿ ಇಲ್ಲದ್ದು ಎಲ್ಲಿಯೂ ಇಲ್ಲ." ಎಂದು ತಿಳಿಯುತ್ತದೆ.—

"अष्टादशपुराणानि कृत्वा सत्यवतीसुतः ।
भारताख्यानमखिलं चक्रे तदुपबृंहणम् ।
लक्षेणैकेन यत्प्रोक्तं वेदार्थपरिबृंहणम् ।"

ಎಂಬ ಮತ್ಸ್ಯಪುರಾಣವಚನದಿಂದ ಹದಿನೆಂಟುಪುರಾಣಗಳ ಮತ್ತು ಸರ್ವ-ವೇದಗಳ ಅಭಿಪ್ರಾಯವೆಲ್ಲ ಭಾರತದಲ್ಲಿ ಬಂದಿದೆಯೆಂದು ಸ್ಪಷ್ಟವಾಗುತ್ತದೆ. ಈ ಭಾರತಕ್ಕೆ ಮಹಾಭಾರತವೆಂದೂ ಅನ್ನುವರು.

"एकतश्चतुरो वेदान्भारतं चैतदेकतः ।
पुरा किल सुरैस्सर्वैस्समेत्य तुलया धृतम् ॥
चतुर्भ्यस्सरहस्येभ्यो वेदेभ्योप्याधिकं यदा ।
तदाप्रभृति लोकेऽस्मिन्महाभारतमुच्यते ॥
महत्त्वे च गुरुत्वे च ध्रियमाणं यतोऽधिकम् ।
महत्त्वाद्भारतत्वाच्च महाभारतमुच्यते ॥
निरुक्तमस्य यो वेद सर्वपापैः स मुच्यते ॥"

ಎಂಬ ಮುಂತಾದ ಪ್ರಮಾಣಗಳು ಮಹಾಭಾರತದ ಮಹತ್ತ್ವವನ್ನು ಸ್ಪಷ್ಟ-ವಾಗಿ ಸೂಚಿಸುವವು. ಭಾರತವನ್ನು ಐದನೆಯ ವೇದವೆಂದು ಸಹ ಕರೆ-ಯುವರೆಂದು "भारतं पंचमो वेदः" ಎಂಬ ಮುಂತಾದ ವಾಕ್ಯಗಳಿಂದ ಕಂಡುಬರುವದು. ಉಜ್ಜ್ವಲವಾದ ಪ್ರಭಾವಿಶೇಷದಿಂದ ಸರ್ವದಿಗಂತಗ-ಳಿಗೂ ವ್ಯಾಪಿಸಿ ಸರ್ವರ ದೃಷ್ಟಿಗಳನ್ನೂ ಆಕರ್ಷಣೆಮಾಡುವ ಮಹಿಮಾತಿ-ಶಯದಿಂದ ಕೂಡಿದ ಭಗವದ್ಗೀತೆಯೆಂಬ ರತ್ನವನ್ನು ಗರ್ಭೀಕರಿಸಿಕೊಂಡಿ-ರುವ ಮಹಾಭಾರತದ ವರ್ಣನೆಯನ್ನು ಎಷ್ಟು ಮಾಡಿದರೆ ಸಾಕಾದೀತು? ಈ ಮಹಾಭಾರತದಲ್ಲಿ ಎಷ್ಟೋ ಉಪಯುಕ್ತವಾದ ಸಂಗತಿಗಳಿರುವವು; ಆದರೂ—

"भारतं सर्वशास्त्रेषु भारते गीतिका वरा"

ಎಂದು ಹೇಳಿರುವಂತೆ ಭಗವದ್ಗೀತೆಯೆಂಬುದೇ ಮಹಾಭಾರತವೆಂಬ ತೆಂಗಿನ-ಕಾಯಿಯ ತಿರುಳೆಂದು ಹೇಳಬಹುದು; ಅಥವಾ ಮಹಾಭಾರತದ್ದೇ ಏಕೆ? ವೇದದ ಶಿರೋಭಾಗಗಳಾಗಿರುವ ಸರ್ವೋಪನಿಷತ್ತುಗಳ ಸಾರವೇ ಭಗ-ವದ್ಗೀತೆಯೆಂಬುದನ್ನು—

"सर्वोपनिषदो गावो दोग्धा गोपालनंदनः ।
पार्थो वत्सः सुधीर्भोक्ता दुग्धं गीतामृतं महत् ॥"

ಎಂಬ ವಾಕ್ಯದ ಮೇಲಿಂದ ನಿರ್ಣಯಿಸಲಿಕ್ಕೆ ಅಭ್ಯಂತರವೇನಿದೆ? ಹೀಗೆ ಸಮಸ್ತವಾದ ಉಪನಿಷತ್ತುಗಳೆಂಬ ಗೋಗಳಿಂದ ಶ್ರೀಕೃಷ್ಣಪರಮಾತ್ಮನೆಂಬ ಗೋಪಾಲಕನು ಅರ್ಜುನನನ್ನು ಕರುಮಾಡಿಕೊಂಡು ಕರೆದ ಅಮೃತಾಧಿಕ ಮಧುರವಾದ ಗೀತೆಯೆಂಬ ದುಗ್ಧದ ಭೋಕ್ತನಾಗುವ ಬುದ್ಧಿವಂತನು ಎಷ್ಟು ಭಾಗ್ಯವಂತನು! ಸಾಮಾನ್ಯವಾಗಿ ಯಾವಾಗಲೂ ಕೆಚ್ಚಲನ್ನು ಮುದುರಿ-ಕೊಂಡಿರುವ ಆಕಳು ತನ್ನ ಕರು ಕುಡಿಯುವದಕ್ಕೆ ಬಂದಾಗ ವಾತ್ಸಲ್ಯದಿಂದ

ಹಾಲು ತೊರೆದು, ಅದಕ್ಕೆ ಉಣ್ಣಿಸಿ, ಆ ಪ್ರಸಂಗದಲ್ಲಿ ಇತರರಿಗೂ ಹಾಲು-ಕೊಡುವಂತೆ ಶ್ರೀಕೃಷ್ಣಪರಮಾತ್ಮನೆಂಬ ಕಾಮಧೇನುವು ಅರ್ಜುನನೆಂಬ ಕರು ತನ್ನ ಬಳಿಗೆ ದೀನತೆಯಿಂದ ಬಂದಾಗ ಅತ್ಯಂತ ವಾತ್ಸಲ್ಯದಿಂದ ಮರ್ಮವನ್ನು ತೊರೆದು ಹೃದ್ಗತವಾದ ಗೀತಾಮೃತವನ್ನು ಕೊಟ್ಟು ಅದನ್ನು ತೃಪ್ತಿಪಡಿಸಿ ಆ ಪ್ರಸಂಗದಿಂದ ಜಗತ್ತಿಗೆಲ್ಲ ಅಮೃತಧಾರೆಗಳನ್ನು ಸುರಿಸಿತಲ್ಲ! ಆ ಕಾಲದ ಶ್ರೀಕೃಷ್ಣಪರಮಾತ್ಮನೆಂಬ ಕಾಮಧೇನುವಿನ ಅಪೂರ್ವವಾದ ಪ್ರೇಮದ ಆವಿ-ರ್ಭಾವವಿಶೇಷವನ್ನು ಎಷ್ಟು ಹೊಗಳಿವರೆ ಮುಗಿದೀತು? ಆ ದಿವ್ಯವಾದ ಕಾಮಧೇನುವು ಪ್ರೇಮಾತಿಶಯಪೂರ್ವಕವಾದ ಔದಾರ್ಯದಿಂದ ಸುರಿಸಿದ ಗೀತಾಮೃತದ ಪ್ರಥಮಧಾರೆಗಳನ್ನು ತೃಪ್ತಿಯಾಗುವವರೆಗೂ ಪಾನಮಾಡಿದ ಅರ್ಜುನನೆಂಬ ಕರುವಿನ ಸುಯೋಗವನ್ನು ಎಷ್ಟು ಕೊಂಡಾಡಿದರೆ ತೀರೀತು? ಅಂಥ ಗೀತಾಮೃತದ ರಸಾಸ್ವಾದವನ್ನು ಸೇವಿಸುವಷ್ಟು ಸುದೈವಿಗಳಾದ ಜನರ ಧನ್ಯತೆಯನ್ನು ಎಷ್ಟು ಸ್ತೋತ್ರಮಾಡಿದರೆ ಆದೀತು? ಒಂದು ಪಟ್ಟಣ-ದಲ್ಲಿ ಆಪಟ್ಟಣವಾಸಿಗಳಾದ ಜನರಿಗಾಗಿ ಮಾಡಿದ ನಳದಿಂದ ಆ ಪಟ್ಟಣಕ್ಕೆ ಬಂದ ಎರಡನೆಯ ಊರಿನ ಜನರಿಗೂ ನೀರು ಸುಲಭವಾಗಿ ದೊರೆಯುವಂತೆ ಶ್ರೀಕೃಷ್ಣಪರಮಾತ್ಮನು ಗೀತೋಪದೇಶವನ್ನು ತನ್ನ ಸಖನೂ ಭಕ್ತನೂ ಆದ ಅರ್ಜುನನನ್ನು ಕುರಿತು ಮಾಡಿದ್ದರೂ ಅದು ಈಗ ನಮಗೂ ಅನಾಯಾಸ-ವಾಗಿ ಲಭಿಸಿ ನಮ್ಮ ಧರ್ಮವನ್ನು ತಿಳಿದುಕೊಳ್ಳಲಿಕ್ಕೆ ಸಾಧನವಾಗಿರುವದು. ಶ್ರೀಕೃಷ್ಣನು ಅರ್ಜುನನ ಕಿವಿಯಲ್ಲಿ ಮಾಡಿದ ಗೀತೋಪದೇಶವು ಸರ್ವ-ದಿಗಂತಗಳಿಗೂ ವ್ಯಾಪಿಸಿ ಸರ್ವರ ಕರ್ಣಪುಟಗಳಲ್ಲಿಯೂ ಹಿಂದೆ ತುಂಬಿದ, ಈಗ ತುಂಬುತ್ತಿರುವ ಮತ್ತು ಮುಂದೆ ತುಂಬುವ ದುಂದುಭಿಧ್ವನಿಯಾಗಿದೆ. ಈ ದುಂದುಭಿಧ್ವನಿಯು ನಾವು ಹೇಗೆ ನಮ್ಮ ಧರ್ಮವನ್ನು ಮಾಡಿ ಜನ್ಮ-ವನ್ನು ಸಾರ್ಥಕಮಾಡಿಕೊಳ್ಳಬೇಕು? ಎಂಬುದನ್ನು ಸಾರಿ ಸಾರಿ ಹೇಳು-ತ್ತದೆ; ಆದಕಾರಣ ನಾವು ಇದೇನೋ ಎಂದು ಉಪೇಕ್ಷಿಸದೆ, ಸರ್ವಶ್ರುತಿ-ಸ್ಮೃತಿಗಳ ಸಾರವಾದ ಇದರ ಅರ್ಥವನ್ನು ತಿಳಿದುಕೊಂಡು, ಅದು ಬೋಧಿ-ಸಿದಂತೆ ನಮ್ಮ ಕರ್ತವ್ಯವನ್ನು ಮಾಡಿದರೆ ನಾವು ಆರ್ಯವಂಶೀಯರಾಗಿರು-ವದೂ ಸಫಲವಾಗುವದು; ನಮ್ಮ ಮನುಷ್ಯಜನ್ಮವೂ ಸಾರ್ಥಕವಾಗುವದು.

ಮನುಷ್ಯತ್ವವನ್ನು "ನರತ್ವಂ ದುರ್ಲಭಂ ಲೋಕೇ" ಎಂದು ಮುಂತಾಗಿ ಬಹು-ಪ್ರಕಾರದಿಂದ ವರ್ಣಿಸಿರುವರು. ದೇವರು ನಮಗೆ ಕೊಟ್ಟಿರುವ ಸರ್ವ-ವಸ್ತುಗಳಲ್ಲಿ ಮನುಷ್ಯತ್ವವೆಂಬುದು ಶ್ರೇಷ್ಠವಾದದ್ದಾಗಿದೆ. ಪ್ರಖ್ಯಾತಪಾ-ಶ್ಚಾತ್ಯಪ್ರಾಣಿಶಾಸ್ತ್ರಜ್ಞರಾದ ಡಾರ್ವಿನ್ ಮತ್ತು ಹಕ್ಸ್ಲೀ ಮುಂತಾದವರು ಕೂಡ ಮನುಷ್ಯನ ಶರೀರರಚನೆಯೇ ಮತ್ತು ಮನುಷ್ಯನ ಬುದ್ಧಿಶಕ್ತಿಯೇ ಸರ್ವೋತ್ತಮವಾಗಿರುವವೆಂದು ಒಪ್ಪುತ್ತಾರೆ. ಇತರಪ್ರಾಣಿಗಳಿಗಿಂತ ಮನು-ಷ್ಯನು ಎಷ್ಟೋ ಶ್ರೇಷ್ಠನು. ಮನುಷ್ಯನಿಗಿಂತ ಶ್ರೇಷ್ಠವಾದ ಪ್ರಾಣಿ ಯಾವ-ದೂ ಇಲ್ಲ; ಆದರೆ "ಮನುಷ್ಯನಾಗಿ ಹುಟ್ಟಿದರೆ ತೀರಿತು, ಕೃತಕೃತ್ಯನಾ-ದಂತಾಯಿತು" ಎಂದು ಮಾತ್ರ ತಿಳಿದುಕೊಂಡು ಸುಮ್ಮನೆ ಕೂಡದೆ, ಕೃತಾ-ರ್ಥನಾಗುವಂತೆ ಯತ್ನಿಸಬೇಕೆಂದು ಬೋಧಿಸುವದಕ್ಕಾಗಿ ಬೈಬಲಿನಲ್ಲಿ ಮನು-ಷ್ಯದೇಹದ ಕ್ಷಣಭಂಗುರತ್ವವನ್ನು ಸ್ವಪ್ನ, ಛಾಯಾ ಮುಂತಾದ ಉಪಮೆ-ಗಳಿಂದ ತೋರಿಸಿರುವರು. ಶ್ರೀಗೌತಮಬುದ್ಧರು "ಜನ್ಮವೂ— ಅಂದರೆ ತಾಯಿಯ ಹೊಟ್ಟೆಯಿಂದ ಹೊರಬೀಳುವದೂ— ದುಃಖವೆ. ಮುಂದೆ ಬರುವ ಆದಿವ್ಯಾಧಿಗಳೂ ಮೂರ್ತಿಮಂತ ದುಃಖಗಳೆ. ಇಷ್ಟವಸ್ತುವಿನ ವಿಯೋ-ಗವೂ ದುಃಖವೆ. ಅನಿಷ್ಟವಸ್ತುವಿನ ಯೋಗವೂ ದುಃಖವೆ. ಹೆಚ್ಚಿಗೆ ಹೇಳುವದೇನು? ಇಂದ್ರಿಯಗಳಿಗೂ ವಿಷಯಗಳಿಗೂ ಸಂಬಂಧವಾಗುವದೆಲ್ಲ ದುಃಖವೆ. ಹೀಗೆ ಜೀವಿತವೆಲ್ಲ ದುಃಖಮಯವಾಗಿಯೇ ಇರುವದು." ಎಂದು ಹೇಳಿರುವದು ಕೂಡ ಈ ದೇಹದ ನಶ್ವರತ್ವವನ್ನೂ ದುಃಖಾತ್ಮಕತ್ವವನ್ನೂ ಬೋಧಿಸುವದಕ್ಕೇ ಎಂದು ಸ್ಪಷ್ಟವಾಗಿ ತಿಳಿಯುವ ಹಾಗಿದೆ. ಕೆಲವುಕಡೆ ಮನುಷ್ಯನನ್ನು ನಿಂದಿಸಿರುವದು ಅವನು ಇತರ ಪ್ರಾಣಿಗಳಿಗಿಂತ ಕಡಮೆ ಎಂಬಭಿಪ್ರಾಯದ್ದಲ್ಲ; ಆದರೆ ನಾನು ಶ್ರೇಷ್ಠಪ್ರಾಣಿಯೆಂದು ಅಭಿಮಾನದಿಂದ ಕರ್ತವ್ಯಪರಾಙ್ಮುಖನಾಗಿ ಕೂಡುವಷ್ಟು ಈ ಮನುಷ್ಯದೇಹವು ವಿಶ್ವಸನೀಯ-ವಾದುದಲ್ಲವೆಂದು ಎಚ್ಚರಿಸುವ ಉದ್ದೇಶದಿಂದ ಹೇಳಿದ ಮಾತಾಗಿದೆ. ದೇಹ-ದ ಅನುಕೂಲತೆಯಿಂದ ಮತ್ತು ವಿಚಾರಶಕ್ತಿಯಿಂದ ಮನುಷ್ಯನು ಇತರ ಪ್ರಾಣಿಗಳಿಗಿಂತ ಹೆಚ್ಚಿನವನೆಂಬುದೇನೋ ನಿಜವೆ; ಆದರೆ ಅವನು ತನ್ನ ಹೆಚ್ಚುಗಾರಿಕೆಯ ಉಪಯೋಗವನ್ನು ಮಾಡಿಕೊಳ್ಳದಿದ್ದರೆ—

"अहितहितविचारशून्यबुद्धेः ।
पुरुषपशोश्च पशोश्च को विशेषः ॥"

ಎಂದು ಹೇಳಿರುವಂತೆ ಅವನಿಗೂ ಮತ್ತು ಪಶುಗಳಿಗೂ ಅಂತರವೇನೂ ಇಲ್ಲದಂತಾಗುವದು. ಆಹಾರವಿಹಾರಾದಿಗಳು ಪಶುಗಳಿಗೂ ನಮಗೂ ಸಮಾನವಾಗಿಯೇ ಇವೆ. ಅವೂ ತಿನ್ನುವವು, ಕುಡಿಯುವವು. ನಾವೂ ಅದರಂತೆ ಮಾಡುವೆವು. ಅವೂ ಮಲಗುವವು, ಏಳುವವು. ನಮ್ಮ ಸ್ಥಿತಿ-ಯೂ ಹಾಗೆಯೇ ಇರುವದು. ಅವುಗಳಿಗೂ ಸುಖದುಃಖ ಉಂಟು. ನಮಗಾದರೂ ಈ ದ್ವಂದ್ವವೇನೂ ಬಿಟ್ಟಿಲ್ಲ. ಅವೂ ಹುಟ್ಟುವವು, ಸಾಯು-ವವು. ನಮ್ಮದಾದರೂ ಅದೇ ಗತಿ. ಅಂದಮೇಲೆ ಅವಕ್ಕೂ ನಮಗೂ ಏನು ವಿಶೇಷವು? ವೈಷಯಿಕಸುಖಕ್ಕೆ ನಾವು ಯತ್ನಿಸುವಂತೆ ಅವುಗಳಾ-ದರೂ ಪ್ರಯತ್ನಮಾಡುವವು. ಲೌಕಿಕಸುಖಕ್ಕಾಗಿ ಬುದ್ಧಿಯನ್ನು ನಾವು ನಿಯೋಗಿಸುವಂತೆ ಅವುಗಳಾದರೂ ತಮ್ಮ ಕೈಲಾದಮಟ್ಟಿಗೆ ಮಾಡುವವು. ನಾವು ಮನೆಗಳನ್ನು ಕಟ್ಟಿಕೊಂಡಿರುವಂತೆ ಪಕ್ಷಿಗಳು ಕೂಡ ಗೂಡುಮಾಡಿ-ಕೊಂಡಿರುವವು. ನಾವು ಮನೆಯೊಳಗೆ ರಾತ್ರಿಯಲ್ಲಿ ದೀಪವನ್ನು ಹಚ್ಚಿ-ಕೊಂಡು ಬೆಳಕನ್ನು ಹೊಂದುವಂತೆ ಗೀಜಗವೆಂಬ ಹಕ್ಕಿಯು ಕೂಡ ತನ್ನ ಗೂಡಿನಲ್ಲಿ ಹೊನ್ನೇಹುಳವನ್ನಿಟ್ಟುಕೊಂಡು ರಾತ್ರಿಯಲ್ಲಿ ಬೆಳಕುಮಾಡಿಕೊಳ್ಳು-ವದು. ಪಶ್ವಾದಿಗಳಿಗಿಂತಲೂ ನಮ್ಮ ಬುದ್ಧಿಶಕ್ತಿಯು ಹೆಚ್ಚಾಗಿರುವದರಿಂದ ನಾವು ಹೆಚ್ಚು ವಿಷಯಸುಖವನ್ನು ಸಂಪಾದಿಸಬಹುದು; ಆದರೆ ಅವುಗಳಿಗೆ ಆಗುವಂತೆ ದುಃಖವು ನಮಗೂ ಆಗುತ್ತಿರುವ ವರೆಗೂ ಅವುಗಳಿಗೂ ನಮ-ಗೂ ವಿಶೇಷವಿರುವದೆಂದು ಹೇಳಲಿಕ್ಕಾಗದು. ಪಶ್ವಾದಿಗಳನ್ನು ನಮ್ಮ ಸೌ-ಖ್ಯಕ್ಕಾಗಿ ನಾವು ಉಪಯೋಗಿಸಿಕೊಳ್ಳುತ್ತೇವೆಂದರೆ ಅವುಗಳು ಕೂಡ ನಮ್ಮನ್ನು ಉಪಯೋಗಿಸಿಕೊಳ್ಳದೆ ಎಲ್ಲಿ ಬಿಟ್ಟಿವೆ? ಕುದುರೆಯನ್ನು ಹತ್ತಿ ನಾವು ಸುಖ-ಪಟ್ಟರೆ ನಮ್ಮ ಕಡೆಯಿಂದ ಹುಲ್ಲು, ಕಾಳು ಮುಂತಾದವುಗಳನ್ನು ಹೊಂದಿ ಮತ್ತು ಮೈ ತಿಕ್ಕಿಸಿಕೊಂಡು ಆ ಕುದುರೆಯೂ ಸುಖಪಡುತ್ತದೆ. ನಮ್ಮ ಸುಖಕ್ಕೆ ಅವುಗಳು ಉಪಕರಣವಾದಂತೆ ಅವುಗಳ ಸುಖಕ್ಕೆ ನಾವು ಆಗು-

ವೆವು. ನಾವು ಮೇಲುಪ್ಪರಿಗೆಯ ಮೇಲೆ ಕೂತು ಸಂತೋಷಪಡುವಂತೆ ಅವು ತಮ್ಮ ತಮ್ಮ ಸ್ಥಾನಗಳಲ್ಲಿ ಕೂತು ಸಂತೋಷಪಡುವವು. ನಮಗೆ ನಮ್ಮದು ದೊಡ್ಡದು. ಅವುಗಳಿಗೆ ಅವುಗಳದು ದೊಡ್ಡದು. ಬೇಕು, ಬೇಡ ಎಂಬುದು ನಮಗೂ ಬಿಟ್ಟಿಲ್ಲ; ಅವುಗಳಿಗೂ ತಪ್ಪಿಲ್ಲ. ನಮ್ಮ ಇಷ್ಟವಸ್ತುವಿನ ಯೋಗದಿಂದ ಮತ್ತು ಅನಿಷ್ಟವಸ್ತುವಿನ ವಿಯೋಗದಿಂದ ನಮಗೆ ಸುಖವಾಗುವಂತೆ ಅವುಗಳಿಗೂ ತಮ್ಮ ಇಷ್ಟವಸ್ತುವಿನ ಯೋಗದಿಂದ ಮತ್ತು ಅನಿಷ್ಟವಸ್ತುವಿನ ವಿಯೋಗದಿಂದ ಸೌಖ್ಯವಾಗುವದು. ನಮ್ಮ ಇಷ್ಟವಸ್ತುವಿನ ವಿಯೋಗದಿಂದ ಮತ್ತು ಅನಿಷ್ಟವಸ್ತುವಿನ ಯೋಗದಿಂದ ನಮಗೆ ದುಃಖವಾಗುವಂತೆ ಅವುಗಳಿಗೂ ತಮ್ಮ ಇಷ್ಟವಸ್ತುವಿನ ವಿಯೋಗದಿಂದ ಮತ್ತು ಅನಿಷ್ಟವಸ್ತುವಿನ ಯೋಗದಿಂದ ದುಃಖವಾಗುವದು. ನಮ್ಮ ಯೋಗ್ಯತೆಗನುರೂಪವಾಗಿ ನಾವು ಇಚ್ಛೆಮಾಡುವೆವು. ತಮ್ಮ ಯೋಗ್ಯತೆಗನುಗುಣವಾಗಿ ಅವು ಇಚ್ಛಿಸುವವು. ಮನುಷ್ಯರಲ್ಲಿಯೂ ಕೂಡ ಬಡವರದೂ ಶ್ರೀಮಂತರದೂ ಇದೇ ಸ್ಥಿತಿ. ಶ್ರೀಮಂತನಿಗೆ ಬೆಳ್ಳಿಯ ತಾಟಿನಲ್ಲಿ ಪಕ್ವಾನ್ನಗಳನ್ನು ಬಡಿಸಿದರೆ ಅದರಿಂದ ಅವನಿಗೆ ಆದಷ್ಟು ಸಂತೋಷವು ತಿರುಕರಿಗೆ ಎಂಜಲೆಲೆಗಳಿಂದ ಆಗುವದು. ಶ್ರೀಮಂತನಿಗೆ ಮಹಲಿನ ಮೇಲೆ ಹಸ್ತಿದಂತಿಯ ಪರ್ಯಂಕದಲ್ಲಿ ಹಂಸತೂಲಿಕಾತಲ್ಪದ ಮೇಲೆ ಮಲಗಿಕೊಳ್ಳುವದರಿಂದ ಆಗುವಷ್ಟು ಸುಖವು ಬಡವನಿಗೆ ತನ್ನ ಗುಡಿಸಲಿನಲ್ಲಿ ಒಂದು ಹರಕುಚಾಪೆಯ ಮೇಲೆ ಮಲಗುವದರಿಂದ ಆಗುವದು; ಅಥವಾ ನಿಶ್ಚಿಂತತೆಯಿಂದ ಬಡವನಿಗೇ ಹೆಚ್ಚು ಸುಖವಾಗುವದೆಂದರೂ ಅನ್ನಬಹುದು—

"अर्थानामर्जने क्लेशस्तथैव परिपालने ।
नाशे दुःखं व्यये दुःखं धिगर्थान्क्लेशकारिणः॥"

ಎಂಬ ಶ್ಲೋಕದಲ್ಲಿ ಹೇಳಿರುವಂತೆ ದುಃಖಕರವಾದ ಧನವನ್ನು ಹಚ್ಚಿಕೊಂಡು ಧನಿಕನು ವಿವಿಧಕಷ್ಟಗಳನ್ನು ಪಡಬೇಕಾಗುವದು. ತುಲನಾಮಾಡಿ ನೋಡಿದರೆ ಬಡವನಿಗೆ ಧನವು ಇಲ್ಲವೆಂದು ಆಗುವ ದುಃಖಕ್ಕಿಂತ ಧನಿಕನಿಗೆ ಧನವು ಇದ್ದದ್ದರಿಂದ ಅದರ ರಕ್ಷಣೆ ಮೊದಲಾದ ಯೋಚನೆಯಲ್ಲಿ ಆಗುವ ದುಃಖವು

ಅಧಿಕವಾಗಬಹುದು. ಪಶ್ವಾದಿಗಳಂತು ಧನದ ವಿಷಯದಲ್ಲಿ ಎಷ್ಟೋ ನಿಶ್ಚಿಂತೆಯಿಂದಿರುವವು. ಇದಲ್ಲದೆ ಇಲ್ಲದ ಮಾನಮರ್ಯಾದೆಯನ್ನು ಕಲ್ಪಿಸಿಕೊಂಡು ಮನುಷ್ಯನು ಪಶ್ವಾದಿಪ್ರಾಣಿಗಳಿಗಿಂತ ಎಷ್ಟೋ ಹೆಚ್ಚು ಕಷ್ಟಪಡಬೇಕಾಗುವದು. ಇದನ್ನೆಲ್ಲ ನೋಡಿದರೆ ನಮಗೆ ದೇವರು ವಿಶೇಷವಾಗಿ ಕೊಟ್ಟಿರುವ ವಿಚಾರಶಕ್ತಿಯನ್ನು ನಾವು ಅನಾವಶ್ಯಕವಾದ ಎಷ್ಟೋ ಪದಾರ್ಥಗಳ ಕೊರತೆಯನ್ನು ಹಚ್ಚಿಕೊಳ್ಳುವದರ ಮೂಲಕ ನಮ್ಮ ದುಃಖದ ಗುಣಾಕಾರವನ್ನು ಮಾಡಿಕೊಳ್ಳಲಿಕ್ಕೆ ಉಪಯೋಗಿಸಿಕೊಳ್ಳುವೆವೆಂದು ಕಂಡುಬರದೆ ಇರಲಾರದು. ಬುದ್ಧಿಶಕ್ತಿಯಿಂದ ನಾವು ವಿವಿಧಯಂತ್ರಾದಿಗಳನ್ನು ನಿರ್ಮಿಸಬಹುದು; ತಂತ್ರಿಯಿಂದ ದೂರದ ವೃತ್ತಾಂತವನ್ನು ನಿಮಿಷದಲ್ಲಿ ತಿಳಿದುಕೊಳ್ಳಬಹುದು; ಹೊಗೆಯ ಬಂಡಿಗಳಿಂದ ಕ್ಷಣಮಾತ್ರದಲ್ಲಿ ದೂರ ಪ್ರವಾಸಮಾಡಬಹುದು; ಹಡಗುಗಳಿಂದ ಜಲಪರ್ಯಟನಮಾಡಬಹುದು; ವಿಮಾನಗಳಿಂದ ಆಕಾಶದಲ್ಲಿ ಸಂಚರಿಸಬಹುದು; ಫೋನೋಗ್ರಾಫಿನಿಂದ ಯಾವ ದೇಶದಲ್ಲಾಗಲಿ ಯಾವ ಕಾಲದಲ್ಲಾಗಲಿ ಇದ್ದ ಎಷ್ಟೋ ಜನರ ವಾಙ್ಮಾಧುರ್ಯವನ್ನು ಸೇವಿಸಬಹುದು. ಇದರಂತೆ ಫೋಟೋಗ್ರಾಫಿ ಮುಂತಾದ ವಿಚಿತ್ರವಾದ ಭೌತಿಕಕಲೆಗಳಿಂದ ಆಯಾ ವಿನೋದವನ್ನು ಪಡಬಹುದು; ಆದರೆ ಇಷ್ಟೆಲ್ಲದರಲ್ಲಿಯೂ ನಾವು ಬೇಕಾದಷ್ಟು ಬುದ್ಧಿಶಕ್ತಿಯನ್ನು ಹಾಕಿ ಎಷ್ಟು ಪ್ರವೀಣತೆಯನ್ನು ಹೊಂದಿದರೂ ಒಂದು ಮಾತಿನಲ್ಲಿ ನಾವು ಪಶ್ವಾದಿಗಳಿಗಿಂತ ಹೆಚ್ಚಿಗೆ ಏನೂ ಮಾಡಿದಂತಾಗಲಿಲ್ಲವೆಂದು ಕಂಡುಬರುವದು. ಅದಾವುದೆಂದರೆ—

"सुखस्यानतर दुःख दुःखस्यानतर सुखम् ।
सुखदुःखे हि जंतूनां चक्रवत्परिवार्तिनी ॥"

ಎಂದು ಮಹಾಭಾರತದಲ್ಲಿ ಹೇಳಿರುವಂತೆ ಒಮ್ಮೆ ಸುಖವನ್ನೂ ಮತ್ತೊಮ್ಮೆ ದುಃಖವನ್ನೂ ಅನುಭವಿಸುತ್ತಿರುವದು. ಈ ವಿಷಯದಲ್ಲಿ ನಮಗೂ ಮತ್ತು ಇತರ ಪ್ರಾಣಿಗಳಿಗೂ ಏನೂ ಭೇದವಿಲ್ಲ. ನಮ್ಮ ಸ್ಥಿತಿಯು ಹೀಗೆ ಇರುವ

ವರೆಗೂ ನಮಗೆ ದೇವರು ದಯಪಾಲಿಸಿರುವ ಅನುಪಮಬುದ್ಧಿಶಕ್ತಿಯನ್ನು ಸಾರ್ಥಕಮಾಡಿಕೊಂಡಂತಾಗುವದಿಲ್ಲ. ಕಡಮೆ ಬುದ್ಧಿಯುಳ್ಳ ಪಶ್ವಾದಿಗಳ ಅವಸ್ಥೆಯು ಒಮ್ಮೆ ಸುಖಪಡುವದೂ ಮತ್ತೊಮ್ಮೆ ದುಃಖಪಡುವದೂ ಆಗಿ-ರಲಿ; ಆದರೆ ಸರ್ವಾತಿಶಯಿತಬುದ್ಧಿಮಂತನಾದ ಮನುಷ್ಯನು ದುಃಖದ ಮುಖವನ್ನು ಸ್ವಪ್ನದಲ್ಲಿಯೂ ಕೂಡ ನೋಡದೆ ನಿರಂತರಸುಖವನ್ನನು-ಭವಿಸುತ್ತಿದ್ದರೆ ಮಾತ್ರ ಕೃತಾರ್ಥನಾದಂತಾಯಿತು. ಹೀಗೆ ನಮ್ಮ ಜನ್ಮ-ವನ್ನು ಸಾರ್ಥಕಮಾಡಿಕೊಳ್ಳುವ ಉಪಾಯವನ್ನು ಭಗವದ್ಗೀತೆಯು ಎಷ್ಟು ಸ್ಪಷ್ಟವಾಗಿ ನಮಗೆ ಉಪದೇಶಿಸುತ್ತಿರುವದೆಂಬುದು ಭಗವದ್ಭಕ್ತಾಗ್ರಗಣ್ಯನಾದ ಅರ್ಜುನನಿಗೆ ಮಾತ್ರ ಸಂಪೂರ್ಣವಾಗಿ ಅನುಭೂತವಾಯಿತು ಮತ್ತು ಇತರ ಜಿಜ್ಞಾಸುಗಳಿಗೂ ಅವರವರ ಯೋಗ್ಯತೆಗೆ ಸರಿಯಾಗಿ ತಿಳಿಯುತ್ತಿರಬಹುದು.

ಭಗವದ್ಗೀತೆಯನ್ನು ಎಷ್ಟೋ ಜನರು ಓದುತ್ತಿದ್ದರೂ ಎಷ್ಟೋ ಜನರು ಕೇಳುತ್ತಿದ್ದರೂ ಮತ್ತು ಎಷ್ಟೋ ಜನರು ಮನನಮಾಡುತ್ತಿದ್ದರೂ ಅಪಾರ-ವಾದ ಸಮುದ್ರದ ಉದಕವನ್ನು ಆಯಾ ಪಾತ್ರೆಯು ತನ್ನಲ್ಲಿ ಹಿಡಿಯುವಷ್ಟೆ ಗ್ರಹಿಸುವಂತೆ ತತ್ತ್ವವನ್ನು ಅವರವರ ಬುದ್ಧಿಯು ತನ್ನ ಅಧಿಕಾರಕ್ಕನು-ರೂಪವಾಗಿಯೇ ಗ್ರಹಿಸುವದು; ಆದಕಾರಣ ನಮಗೆ ತಿಳಿದಷ್ಟಕ್ಕೇ ಆಯಿ-ತೆಂದು ಅಭಿಮಾನಪಡದೆ ಮತ್ತು “ನಮಗೇನು ತಿಳಿದೀತು” ಎಂದು ನಿರಾಶೆ-ಹೊಂದದೆ ನಾವೆಲ್ಲರೂ ಭಗವದ್ಗೀತಾಸಾರಾಮೃತವನ್ನು ಸೇವಿಸತಕ್ಕದ್ದು. ಈ ಭಗವದ್ಗೀತೆಯು ನಮಗೆಲ್ಲರಿಗೂ ಉಪಯುಕ್ತವಾದದ್ದು. ವೈದ್ಯ-ಶಾಸ್ತ್ರವು ವೈದ್ಯಕ್ರಿಯೆಯನ್ನು ಮಾಡುವವರಿಗೆ ಮಾತ್ರ ಉಪಯುಕ್ತವಾಗು-ವದು. ಜ್ಯೋತಿಶ್ಶಾಸ್ತ್ರವು ಜ್ಯೌತಿಷಿಕರಾಗಬೇಕೆಂಬುವರಿಗೆ ಮಾತ್ರ ಅವಶ್ಯ-ವಾಗುವದು. ಇದರಂತೆ ಒಂದೊಂದು ಶಾಸ್ತ್ರವು ಒಬ್ಬೊಬ್ಬರಿಗೆ ಮಾತ್ರ ಉಪಯುಕ್ತವಾಗುವದು; ಆದರೆ ಈ ನಮ್ಮ ಭಗವದ್ಗೀತೆಯು ಹಾಗಲ್ಲ. ಸರ್ವರೂ ಸುಖವನ್ನು ಬೇಡುತ್ತಿರುವದರಿಂದ ಮತ್ತು ಶಾಶ್ವತಸುಖದ ಮಾ-ರ್ಗವು ಇದರಲ್ಲಿ ತೋರಿಸಲ್ಪಟ್ಟಿರುವದರಿಂದ ಇದು ಸರ್ವರಿಗೂ ಹಿತಕರ-ವಾಗಿರುವದು. ಓದದವರೂ ಕೇಳದವರೂ ಮಾತ್ರ ಪಾಪಿಗಳು. ಇದರ ಕಡೆಗೇನೂ ಮಾತಿಲ್ಲ. ಇದು ಸರ್ವರಿಗೂ ಹಿತವನ್ನು ಬೋಧಿಸುವದು.

ಇದು ಬ್ರಹ್ಮಚಾರಿಯೇ ಬೇಕು, ಗೃಹಸ್ಥನೇ ಬೇಕು, ವಾನಪ್ರಸ್ಥನೇ ಬೇಕು ಅಥವಾ ಸನ್ಯಾಸಿಯೇ ಬೇಕು ಎನ್ನುವದಿಲ್ಲ; ಬ್ರಾಹ್ಮಣರೇ ಬೇಕು, ಕ್ಷತ್ರಿಯರೇ ಬೇಕು, ವೈಶ್ಯರೇ ಬೇಕು ಅಥವಾ ಶೂದ್ರರೇ ಬೇಕು ಎನ್ನುವದಿಲ್ಲ; ಗಂಡಸರೇ ಬೇಕು ಅಥವಾ ಹೆಂಗಸರೇ ಬೇಕು ಎನ್ನುವದಿಲ್ಲ; ಬಾಲಕನೇ ಬೇಕು, ತರುಣನೇ ಬೇಕು ಅಥವಾ ವೃದ್ಧನೇ ಬೇಕು ಎನ್ನುವದಿಲ್ಲ; ಆದರೆ ಒಂದೇ ಒಂದು ಮಾತನ್ನು ಮಾತ್ರ ಬೇಡುತ್ತದೆ. ಅದೇನೆಂದರೆ ಸುಖೇಚ್ಛೆ. ಯಾವನು ತನಗೆ ಸುಖವು ಬೇಕೆಂದು ಇಚ್ಛಿಸುವನೊ ಅವನೇ ಭಗವದ್ಗೀತೆಗೆ ಅಧಿಕಾರಿ.

ಈ ಸುಖೇಚ್ಛೆಯು ನಮಗೆ ಎಷ್ಟು ಸುಲಭವಾಗಿ ತೋರುತ್ತಿದೆಯೋ ಅಷ್ಟುಸುಲಭವಾಗಿ ಮಾತ್ರ ಇಲ್ಲ. ಹಿಂದೆ ನಾನು ಹೇಳಿದಂತೆ ನಾವೆಲ್ಲರೂ ಸುಖವನ್ನು ಬೇಡುತ್ತಿದ್ದರೂ—

"पुण्यस्य फलमिच्छंति पुण्यं नेच्छंति मानवाः ।
न पापफलमिच्छंति पापं कुर्वंति यत्नतः ॥"

ಎಂದಂತೆ ನಾವು ಪುಣ್ಯದ ಫಲವಾದ ಸುಖವನ್ನು ಇಚ್ಛಿಸಿ ದುಃಖವೆಂಬ ಫಲವನ್ನು ಕೊಡುವ ಪಾಪವನ್ನು ಮಾಡುವದನ್ನು ಎಲ್ಲಿಯು ವರೆಗೆ ಬಿಟ್ಟಿಲ್ಲವೊ ಅಲ್ಲಿಯವರೆಗೂ ನಮ್ಮನ್ನು ನಿಜವಾದ ಸುಖಾರ್ಥಿಗಳೆಂದು ತಿಳಿಯುಕೊಡದು. ಯಾವನು ಯಾವ ಊರಿಗೆ ಹೋಗಬೇಕೆನ್ನುವನೊ ಅವನು ಆ ಊರಿನ ದಾರಿಯನ್ನೇ ಹಿಡಿಯಬೇಕು. ಒಂದೂರಿಗೆ ಹೋಗಬೇಕೆಂದು ಮತ್ತೊಂದೂರಿನ ದಾರಿಯನ್ನು ಹಿಡಿದವನಿಗೆ "ಅವನು ಹೋಗಬೇಕೆಂಬ ಊರಿಗೆ ಹೋಗುವನು" ಎನ್ನದೆ ದಾರಿಹಿಡಿದ ಊರಿಗೆ ಹೋಗುವವನೆಂದು ತಿಳಿಯುವದು ನ್ಯಾಯವಾಗಿರುವದು; ಆದಕಾರಣ ನಾವು ಅಹಿತಕರ ಮತ್ತು ಪಶ್ಚಾತ್ತಾಪಕರವಾದವುಗಳೆಂದು ಎಷ್ಟೋ ಸಾರಿ ಅನುಭವದಿಂದ ತಿಳಿದ ಕರ್ಮಗಳನ್ನು ಮಾಡುತ್ತಿರುವ ವರೆಗೂ ನಮಗೆ ಸುಖಾರ್ಥಿಗಳೆನ್ನುವದಕ್ಕಿಂತಲೂ ದುಃಖಾರ್ಥಿಗಳೆನ್ನುವದೇ ಹೆಚ್ಚು ಶೋಭಿಸುವದು; ಅಥವಾ ಜಾಲಿ-

ಯಗಿಡವನ್ನು ಹಚ್ಚಿ ಬಾಳೆಯಹಣ್ಣನ್ನು ಅಪೇಕ್ಷಿಸುವವರಂತೆ ನಾವು ಭ್ರಾಂತ-ರೆಂದರೂ ಅನ್ನಬಹುದು; ಆದಕಾರಣ ಸರ್ವರೂ ಶುಭವನ್ನೇ ಬಯಸುವ-ವರಾಗಿದ್ದರೂ ನಮ್ಮಂತೆ ಅವಿಚಾರದಿಂದ ದುಃಖಮಯವಾದ ಪ್ರಪಂಚದಲ್ಲಿ ಸುಖವನ್ನು ಬೇಡಹೋಗದೆ ವಿವೇಕದಿಂದ ಸಂಸಾರದ ಅಸಾರತ್ವವನ್ನು ತಿಳಿದು ಶಾಶ್ವತವಾದ ಸುಖವನ್ನು ಹುಡಿಕಿ ಹೊಂದಲಿಚ್ಛಿಸುವವರಿಗೆ ಮಾತ್ರ ಸುಖೇ-ಚ್ಛುಗಳೆಂದು ಅನ್ನುವರು. ಈ ಪ್ರಕಾರವಾದ ಶುಭೇಚ್ಛೆಗೆ ಯೋಗವಾಸಿ-ಷ್ಠದಲ್ಲಿ—

"ज्ञानभूमिश्शुभेच्छाख्या प्रथमा समुदाहृता"

ಎಂಬದಾಗಿ ಜ್ಞಾನದ ಮೊದಲನೆಯ ಭೂಮಿಕೆಯೆಂದು ಹೇಳಿದ್ದಾರೆ. ಸುಖ-ವನ್ನು ಬಯುಸುತ್ತಿರುವದರಿಂದ ಮಾತ್ರ ನಾವು ಸುಖೇಚ್ಛುಗಳಾಗಿದ್ದರೆ ಸುಖೇ ಚ್ಛೆಗೆ "ಜ್ಞಾನದ ಭೂಮಿಕೆ" ಎಂದು ಹೇಳುತ್ತಿರಲಿಲ್ಲ. ಈ ಪ್ರಕಾರವಾದ ಸುಖೇಚ್ಛೆಯು ಸರ್ವಸಾಮಾನ್ಯವಾಗಿದೆ. ಅಂದಮೇಲೆ ಅದಕ್ಕೆ ಭೂಮಿಕೆ ಎಂದು ಕರೆಯುವದೇಕೆ? ಸರ್ವರಲ್ಲಿಯೂ ಇದ್ದ ಮಾತೇ ಆಗಿದೆ. ಅನು-ಭವಶಾಲಿಗಳಾದ ಭರ್ತೃಹರಿಕವಿಗಳು—

"बीभत्सा विषया जुगुप्सिततमः कायो वयो गत्वरं
प्रायो बंधुभिरध्वनीव पथिकैर्योगो वियोगावहः ॥
हातव्योऽयमसार एव विरसः संसार इत्यादिकं
सर्वेषामपि वाचि चेतसि पुनः कस्यापि पुण्यात्मनः॥"

ಎಂದು ಹೇಳಿದ್ದಾರೆ. ಅಂದರೆ:—ವಿಷಯಗಳು ತುಚ್ಛವಾಗಿವೆ; ದೇಹವು ನಿಂದ್ಯವಾಗಿದೆ; ಆಯುಷ್ಯವು ನಶ್ವರವಾಗಿದೆ; ಬಂಧುಗಳ ಸಂಗಡ ಸಂಗ-ತಿಯು ಹಾದಿಕಾರರ ಕೂಡ ಆಗುವಂತೆ ಅಗಲುವಿಕೆಯುಳ್ಳದ್ದಾಗಿಯೇ ಇರು-ತ್ತದೆ; ಈ ಅಸಾರವಾದ ಮತ್ತು ವಿರಸವಾದ ಸಂಸಾರವು ಬಿಡಲ್ಪಡತಕ್ಕದ್ದು

ಎಂದು ಮುಂತಾಗಿ ಬಹುಶಃ ಎಲ್ಲರ ಬಾಯಲ್ಲಿಯೂ ಒಮ್ಮೆಲ್ಲೊಮ್ಮೆ ಬರುವದು; ಆದರೆ ಮನಸ್ಸಿನಲ್ಲಿ ಮಾತ್ರ ಯಾವನೋ ಒಬ್ಬ ಪುಣ್ಯವಂತನಾದ ಮಹಾತ್ಮನಿಗೆ ಜನಿಸುವದು—ಹೀಗೆ ಹೇಳಿರುವದು ಯಥಾರ್ಥವಾದುದೆಂದು ಯಾರು ಒಪ್ಪಲಾರರು? ಎಲ್ಲರೂ ನಿಜವಾದ ಸುಖವನ್ನೇನೋ ಬಯಸುವರು; ಆದರೆ ಅದಕ್ಕೆ ವಿಪರೀತವಾದ ಮಾರ್ಗವನ್ನು ಹಿಡಿಯುವರು. ಇದಕ್ಕೆ ಕಾರಣವೇನೆಂದರೆ: ನಮ್ಮ ಸುಖದ ಇಚ್ಛೆಯು ದೃಢವಾಗಿಲ್ಲದಿರುವದೇ ಎಂದು ಹೇಳಬಹುದು. ಇಚ್ಛೆಯು ದೃಢವಾದರೆ "**देहं वा पातयामि, कार्यं वा साधयामि**" ಎಂದಂತೆ ಅದು ಸಫಲವಾಗುವಂತೆ ನಮ್ಮಿಂದ ಪ್ರಯತ್ನವನ್ನು ಮಾಡಿಸದೆ ಬಿಡಲಾರದು. ಶ್ರೀವಿದ್ಯಾರಣ್ಯರು—

"पुत्रदारगृहादीनां नाशे तात्कालिकी मतिः।
धिक्संसार इतीदृक्स्याद्विरक्तेर्मंदता हि सा॥"

ಎಂದು ಹೇಳಿರುವಂತೆ ಸ್ತ್ರೀಪುತ್ರಾದಿಗಳು ನಾಶವಾದಾಗ ಆಗಿನ ಪೂರ್ತಿ ಈ ಸಂಸಾರಕ್ಕೆ ಧಿಕ್ಕಾರವೆಂದು ಬುದ್ಧಿಯಾಗುವದು. ಆಗ ನಮ್ಮ ಮನಸ್ಸಿನಲ್ಲಿ—

"पुत्रः स्यादिति दुःखितः सति सुते तस्यामये दुःखितः।
तद्दुःखादिकमार्जने तदनये तन्मूर्खतादुःखितः॥
जातश्चेत्सुगुणोऽथ तन्मृतिभयं तस्मिन्मृते दुःखितः।
पुत्रव्याजमुपागतो रिपुरयं माकस्यचिज्जायताम्।"

ಎಂದು ಅಂದರೆ "ಮನುಷ್ಯನು ಮೊದಲು ನನಗೆ ಮಗನಾಗಬೇಕೆಂದು ದುಃಖಿತನಾಗುವನು; ಮಗನಾದ ಮೇಲೆ ಅವನಿಗೆ ರೋಗಬಂದರೆ ದುಃಖಿತನಾಗುವನು; ಮಗನಿಗೇನಾದರೂ ದುಃಖವಾದರೆ ಅವನ ದುಃಖವನ್ನು ಕಳೆಯುವಾಗ ತಾನು ದುಃಖಿಯಾಗುವನು; ಮಗನು ಅನೀತಿವಂತನಾದರೆ ಅವನ

ಮೂರ್ಖತನಕ್ಕಾಗಿ ತಾನು ದುಃಖಿಯಾಗುವನು; ಮಗನು ಗುಣವಂತ-ನಾದರೂ ಅವನಿಗೆ ಮರಣಬರುವದೆಂದು ತಾನು ಭಯಪಡುವನು; ಮಗನು ಸತ್ತರಂತು ತನ್ನ ದುಃಖಕ್ಕೆ ಪಾರವೇ ಇಲ್ಲ; ಹೀಗೆ ಪುತ್ರವೇಷವನ್ನು ಧರಿಸಿದ ಈ ಶತ್ರುವು ಯಾರಿಗೂ ಆಗಬಾರದು" ಎಂದು ನಿರ್ವೇದಯುಕ್ತವಾದ ವಿಚಾ-ರವು ಕೂಡ ಬರುವದು; ಆದರೆ—

"विपदि विरागविशेषः सर्वेषामपि विजायतेऽसुभृताम्।
मोहभवः क्षणिकस्स तु विवेकजन्यस्थिरस्थायी॥"

ಎಂದು ನಾನು ಅಷ್ಟೋತ್ತರಶತಶ್ಲೋಕಿಯಲ್ಲಿ ಹೇಳಿದಂತೆ ಮೋಹದಿಂದ ಜನಿ-ಸಿದ ಆ ವಿರಾಗವು ಸ್ಮಶಾನವೈರಾಗ್ಯದಂತೆ ಕ್ಷಣಿಕವಾಗಿರುವದು. ಅಂಥ ಹೊತ್ತಿ-ನಲ್ಲಿ ಈ ಕಷ್ಟವನ್ನು ಬಿಡಿಸೆಂದು ದೇವರಿಗೆ ನಾವು ಮಾಡುವ ಪ್ರಾರ್ಥನೆಯು ಕೂಡ ಸ್ಥಿರವಾಗಿರುವದಿಲ್ಲ. "ಈ ಮನಸ್ಸೂ ಈ ಇಂದ್ರಿಯಗಳೂ ಮತ್ತು ಈ ವಿಷಯಗಳೂ ನಮಗೆ ಬಹಳ ಕಷ್ಟವನ್ನು ಕೊಡುತ್ತವೆ; ಇವುಗಳ ಪೀಡೆಯನ್ನು ಬಿಡಿಸು." ಎಂದು ಭಗವಂತನನ್ನು ಬೇಡಿಕೊಂಡು ಉತ್ತ-ರಕ್ಷಣದಲ್ಲಿಯೇ ಅದೇ ಮನಸ್ಸನ್ನೇ ಅವೇ ಇಂದ್ರಿಯಗಳನ್ನೇ ಮತ್ತು ಅವೇ ವಿಷಯಗಳನ್ನೇ ನಾವು ಅಪೇಕ್ಷಿಸಿದರೆ ದೇವರು ನಮಗೆ ಅವುಗಳ ಪೀಡೆ-ಯನ್ನು ಬಿಡಿಸುವದು ಹೇಗೆ? ನಾವು ಸಂಸಾರವು ಬೇಡವೆನ್ನಲಿಕ್ಕೂ ಗಟ್ಟಿ ಇಲ್ಲ; ಬೇಕೆನ್ನುವದಕ್ಕೂ ಗಟ್ಟಿ ಇಲ್ಲ. ಒಮ್ಮೆ ಬೇಕು, ಒಮ್ಮೆ ಬೇಡ ಎನ್ನುವವರ ಮಾತಿನ ಕಡೆಗೆ ದೇವರು ಹೇಗೆ ಲಕ್ಷ್ಯಕೊಡಬೇಕು? ನಮಗೆ ಯಾವದೂ ಸ್ಥಿರವಿಲ್ಲ. ನಾವು ಸುಖವನ್ನು ಇಚ್ಛಿಸುವದು ದೃಢವಾಗಿಲ್ಲ. ಇಚ್ಛೆಯ ದಾರ್ಢ್ಯವು ಅದರ ಹಾದಿಯನ್ನು ಹಿಡಿಸದೆ ಬಿಡಲಾರದು; ಆದರೆ ಸುಮ್ಮನೆ ಏನನ್ನಾದರೂ ಇಚ್ಛಿಸುವಮಾತ್ರದಿಂದ ತದರ್ಥಿಗಳೆಂದು ಹೆಸರು ಬರಲಾರದು. ಕಲಿಯಬೇಕೆಂಬುವನಿಗೆ ಕಲಿಯಬೇಕೆಂಬ ಇಚ್ಛಾಮಾತ್ರದಿಂದ ವಿದ್ಯಾರ್ಥಿ ಎಂಬ ಹೆಸರು ಬರದೆ ಕಲಿಯುವದಕ್ಕಾಗಿ ಶ್ರಮೆಪಡುವವನಿಗೆ ಆ ಹೆಸರು ಬರುವದು. ಅದರಂತೆ ಯಾವ ಪ್ರಕಾರದ ಬಂಧನವನ್ನು ಯಾರೂ

ಬೇಡದೆ ಸರ್ವರೂ ಬಂಧನದಿಂದ ಬಿಡುಗಡೆಯನ್ನು ಹೊಂದಲಿಕ್ಕೆ ಇಚ್ಛಿಸುತ್ತಿದ್ದರೂ ವಿವೇಕವೈರಾಗ್ಯಪೂರ್ವಕವಾಗಿ ಸಂಸಾರಬಂಧನದಿಂದ ಪಾರಾಗಲಿಚ್ಛಿಸುವವನಿಗೆ ಮುಮುಕ್ಷುವೆನ್ನುವರು. ನಮಗೆ ಬಂಧನವೇನೂ ಬೇಡವಾಗಿದ್ದರೂ "**प्रकारांतरासंभवाद्‌विवेक एव बंधः**" ಎಂದು ಸಾಂಖ್ಯಸೂತ್ರದಲ್ಲಿ ಹೇಳಿದಂತೆ ನಾವಾಗಿಯೇ ಅವಿಚಾರತನದಿಂದ ವಿಷಯಗಳ ಮುಂದೆ ಕೈಕೊಟ್ಟು ಕಟ್ಟಿಸಿಕೊಳ್ಳುತ್ತಿರುವವರೆಗೂ ಬದ್ಧರೆಂಬ ಹೆಸರು ನಮಗೆ ಬಿಡದು.

ಹಾಗಾದರೆ ಸುಖಾರ್ಥಿಗಳಾಗುವ ವರೆಗೂ ನಾವು ಗೀತೆಯನ್ನು ಮುಟ್ಟಲುಕೂಡಬಾರದೊ? ಎಂದರೆ ಕೇಳಿರಿ. ನಿಜವಾದ ಸುಖೇಚ್ಛುವಿನ ಹೃದಯದಲ್ಲಿ ಭಗವದ್ಗೀತೆಯ ತತ್ತ್ವವು ತಪ್ಪದೆ ಶೀಘ್ರವಾಗಿ ಬಿಂಬಿಸುವಂತೆ ನಮ್ಮಂಥವರ ಎದೆಯಲ್ಲಿ ಬಿಂಬಿಸದಿದ್ದರೂ "ಮೊದಲು ನಾವು ಬೇಡುವದೊಂದು ಮಾಡುವದೊಂದು" ಎಂಬ ನಮ್ಮ ತಪ್ಪನ್ನು ನಮಗೆ ತೋರಿಸಿ ಬಳಿಕ ನಮ್ಮನ್ನು ನಿಜವಾದ ಸುಖಾರ್ಥಿಗಳನ್ನು ಮಾಡಿ ಆ ಮೇಲೆ ನಿಜವಾದ ಸುಖದ ಮಾರ್ಗವನ್ನು ತೋರಿಸುವಷ್ಟು ಕರುಣಾಶಾಲಿಯಾದ ಭಗವದ್ಗೀತೆಯು ನಮ್ಮಂಥವರಿಗೂ ವಿಳಂಬದಿಂದಾದರೂ ಜನ್ಮದ ಸಾರ್ಥಕತೆಯನ್ನು ಮಾಡಿಸದೆ ಬಿಡಲಾರದು; ಆದರೆ ನಾವು ಅಶ್ವತ್ಥವೃಕ್ಷಕ್ಕೆ ಒಂದು ಪ್ರದಕ್ಷಿಣೆಯನ್ನು ಹಾಕಿ "ನಾನು ಎಷ್ಟು ಗರ್ಭಿಣಿಯಾಗಿದ್ದೇನೆ" ಎಂದು ನೋಡಿಕೊಳ್ಳಲಿಕ್ಕೆ ಹೋಗುವ ಸ್ತ್ರೀಯಂತೆ ಗಡಿಬಿಡಿಯನ್ನು ಮಾಡಿದರೆ ತಿಳಿದವರ ಅಪಹಾಸ್ಯಕ್ಕೆ ಮಾತ್ರ ಪಾತ್ರರಾಗುವೆವು ಮತ್ತು ತಿಳಿಯದವರ ಮುಂದೆ ಭಗವದ್ಗೀತೆಯಲ್ಲಿ ಏನೂ ಅರ್ಥವಿಲ್ಲವೆಂದು ಅದರ ಅಪಕೀರ್ತಿಯನ್ನು ಹಬ್ಬಿಸಲಿಕ್ಕೆ ಕಾರಣರಾಗುವೆವು. ಹೀಗೆ ಮಾಡದೆ ನಾವು "ಭಗವದ್ಗೀತೆಯ ಯೋಗ್ಯತೆ ಎಲ್ಲಿ? ಮತ್ತು ನಮ್ಮ ಯೋಗ್ಯತೆ ಎಲ್ಲಿ?" ಎಂಬುದನ್ನು ಚೆನ್ನಾಗಿ ಲಕ್ಷ್ಯದಲ್ಲಿಟ್ಟು ಭಗವದ್ಗೀತೆಯ ಆಶ್ರಯದಿಂದ ಪರಮಾರ್ಥಮಾರ್ಗದಲ್ಲಿ "**शनैः पंथाः**" ಎಂದಿರುವಂತೆ ಮೆಲ್ಲಮೆಲ್ಲನೆ ಗತಿಯನ್ನು ಹೊಂದತಕ್ಕದ್ದು.

ಈ ಭಗವದ್ಗೀತೆಯ ವಿಷಯಕ್ಕೆ ನಾನು ಯಥಾಮತಿ ವ್ಯಾಖ್ಯಾನಮಾಲೆಯನ್ನು ಕೊಡುವದಕ್ಕೆ ಐದು ವಿಷಯಗಳನ್ನು ಆರಿಸಿರುವೆನು. ಅವಾವುವೆಂದರೆ—

**೧ನೇದು— ಗೀತೆಯು ಕೃತಕರೂಪಕವೊ?**

**೨ನೇದು— ಗೀತೆಯ ಕರ್ಮಪ್ರವರ್ತಕತ್ವವು.**

**೩ನೇದು— ಕರ್ತವ್ಯಕ್ಕಾಗಿಯೇ ಕರ್ತವ್ಯವು.**

**೪ನೇದು— ಗೀತೋಪದಿಷ್ಟಯೋಗಗಳು.**

**೫ನೇದು— ಪೃಥ್ವಿಯೊಳಗಣ ಧರ್ಮಗ್ರಂಥಗಳಲ್ಲಿ ಭಗವದ್ಗೀತೆಯ ಸ್ಥಾನವು.**

ಇವುಗಳಲ್ಲಿ ಒಂದೊಂದು ವಿಷಯವನ್ನು ಕುರಿತು ಒಂದೊಂದು ದಿನ ಹೇಳುವೆನು. ೪ನೇ ವಿಷಯವು ಅಂದರೆ ಗೀತೋಪದಿಷ್ಟಯೋಗಗಳು ಎಂಬ ವಿಷಯವು ಒಂದೇ ದಿನದಲ್ಲಿ ಮುಗಿಯುಲಿಕ್ಕಿಲ್ಲ. ಯೋಗಗಳು ಅನೇಕವಾಗಿವೆ. ಏನಿಲ್ಲವೆಂದರೂ ಈ ವಿಷಯುಕ್ಕೆ ಎರಡು ದಿನಗಳಾದರೂ ಬೇಕು. ಇರಲಿ. ಇವತ್ತಿನ ವಿಷಯವನ್ನು ಕೈಕೊಳ್ಳೋಣ.

ಈ ಭಗವದ್ಗೀತೆಯು ಕೃತಕರೂಪಕವೆಂದು ಕೆಲವರು ಕಲ್ಪಿಸುವರು. ಇದರ ಪ್ರಮಾಣತ್ವದ ವಿಷಯುದಲ್ಲಿ ಅವರದೇನೂ ವಿಮತವಿಲ್ಲ. ಆದರೆ “**रूपारोपात्तु रूपकम्**” ಎಂದು ಹೇಳಿರುವಂತೆ ಶ್ರೀವೇದವ್ಯಾಸರು ತಮ್ಮ ಮನಸ್ಸಿನಲ್ಲಿ ಹೇಳಬೇಕೆಂದಿದ್ದ ತತ್ತ್ವಜ್ಞಾನವನ್ನು ಶ್ರೀಕೃಷ್ಣಾರ್ಜುನರ ಸಂವಾದವನ್ನು ಕಲ್ಪಿಸಿ ಅದರ ದ್ವಾರದಿಂದ ಹೇಳಿರುವರು. ಇಷ್ಟೇ ಸರಿ. ಹೀಗೆ ಕಲ್ಪಿಸದಿದ್ದರೆ ಮೊದಲು ಎಷ್ಟೋ ದಿವಸ ಆಲೋಚನೆಮಾಡಿ ಯುದ್ಧಕ್ಕೆ ಸನ್ನದ್ಧನಾದ ಅರ್ಜುನನ ಮನಸ್ಸಿನಲ್ಲಿ ಹೀಗೆ ಮೋಹಬರುವದೂ ಅಂಥ ಯುದ್ಧಪ್ರಸಂಗದಲ್ಲಿ ಇಷ್ಟು ವಿಸ್ತಾರದಿಂದ ಶ್ರೀಕೃಷ್ಣನು ತತ್ತ್ವೋಪದೇಶವನ್ನು ಮಾಡುವದೂ ಮತ್ತು ಇವರಿಬ್ಬರ ಸಂವಾದವು ಮುಗಿಯುವವರೆಗೂ ಕೌರವಸೈನಿಕರು ಕೈಮುದುರಿಕೊಂಡು ಸುಮ್ಮನೆ ಕೂಡುವದೂ ಅಸಂಭಾವ್ಯವಾಗಿಯೇ ಕಾಣುವದು. ಮಹಾಭಾರತವನ್ನು ಮೊದಲಿನಿಂದಲೂ ಓದುತ್ತಬಂದವರಿಗೆ ಭಗವದ್ಗೀತೋಪದೇಶವು ಅಪ್ರಾಸಂಗಿಕವಾದಂತೆ ತೋರದೆ ಇರಲಾರದು.” ಎಂದು ಹೇಳುವರು. ಇವರು ಗೀತೆಯ ಪ್ರಮಾಣತ್ವವನ್ನು ಮನ್ನಿಸುತ್ತಿರುವದರಿಂದ ಶ್ರೀವೇದವ್ಯಾಸರ ಬೋಧನೆಗೆ ಏನೂ ಬಾಧೆ ಇಲ್ಲ.

"ಶ್ರದ್ಧೆಯಿಂದ ದಾನಮಾಡಬೇಕು; ಅಶ್ರದ್ಧೆಯಿಂದ ದಾನಮಾಡಬೇಕು; ನಾಚಿಕೆಯಿಂದ ಕೊಡಬೇಕು; ಅಂಜಿಕೆಯಿಂದ ಕೊಡಬೇಕು" ಎಂದು ಮುಂತಾಗಿ ಶ್ರುತಿಯಲ್ಲಿ ಹೇಳಿದಂತೆ ಹೇಗೇ ಆಗಲಿ ಭಗವದ್ಗೀತೆಯಲ್ಲಿ ಹೇಳಿದಂತೆ ಆಚರಿಸಿದರೆ ಸಾಕು. ಆದರಿಂದ ಶ್ರೀವೇದವ್ಯಾಸರ ಹೇತು ಪೂರ್ಣವಾದಂತಾಯಿತು. ಲೋಕೋದ್ಧಾರಾರ್ಥವಾಗಿ ಅವತರಿಸಿದ ಶ್ರೀವೇದವ್ಯಾಸರಂಥವರಿಗೆ ಜನರು ತಮ್ಮ ಜನ್ಮವನ್ನು ಸಾರ್ಥಕಮಾಡಿಕೊಂಡರೆ ಆಯಿತು. ಸ್ವಂತಕ್ಕಾಗಿ ಯಾವ ಇಚ್ಛೆಯೂ ಇಲ್ಲದೆ ಲೋಕೋದ್ಧಾರವಾಗಬೇಕೆಂಬುವದೊಂದೇ ಇಚ್ಛೆಯಿಂದ—ಆ ಇಚ್ಛೆಗೆ ವಶರಾಗದೆ—ಲೋಕದೃಷ್ಟ್ಯಾ ವ್ಯವಹರಿಸುತ್ತಿರುವಂಥ ಮಹಾತ್ಮರ ಮನೋರಥಪೂರ್ತಿ ಎಂದರೆ ಜನರು ತಮ್ಮ ಉದ್ಧಾರ ಮಾಡಿಕೊಳ್ಳುವದೇ ಆಗಿರುವದು. ಅಂದಮೇಲೆ ಗೀತೆಯಲ್ಲಿ ಹೇಳಿದಂತೆ ಯಾರಾದರೂ ವರ್ತಿಸಿ ಪರಮಪುರುಷಾರ್ಥವನ್ನು ಸಾಧಿಸಿದರಾಯಿತು. ಅದನ್ನು ನೋಡಿ ಶ್ರೀವೇದವ್ಯಾಸರು ನಾವು ಕೃತಾರ್ಥರಾದೆವೆಂದು ತಿಳಿಯುವರು; ಆದಕಾರಣ ಕೃತಕರೂಪಕವೆಂದೇ ತಿಳಿಯಲಿ ಅಥವಾ ಆದ ಸಂಗತಿಯೆಂದೇ ತಿಳಿಯಲಿ. ಅವರು "ಭಗವದ್ಗೀತೆಯು ಹಿತೋಪದೇಶವನ್ನು ಮಾಡುವದು" ಎಂದು ತಿಳಿಯುತ್ತಾರೆ. ಅಷ್ಟು ಸಾಕು. ಈ ವಿಷಯಕ್ಕೆ ಹೆಚ್ಚಿಗೆ ಏಕೆ ಹೇಳಬೇಕೆಂದು ನಾನು ಬಿಟ್ಟರೂ ಬಿಡಬಹುದು. ಈ ಸಮಯದಲ್ಲಿ ನೆನಪಿಗೆ ಬಂದಿರುವ ಇಂಥ ಇನ್ನೊಂದು ಸಂಗತಿಯನ್ನು ಉದಾಹರಿಸುತ್ತೇನೆ. ಕೇಳಿರಿ.

ಕೆಲವರು ಸದ್ಗೃಹಸ್ಥರು ನನಗೆ "ಪರಮಾತ್ಮನು ಈ ದುಃಖಮಯವಾದ ಪ್ರಪಂಚವನ್ನು ನಿರ್ಮಿಸಿ, ಅದರಲ್ಲಿ ನಮ್ಮನ್ನು ಹಾಕಿ, ಅದರಿಂದ ಮುಕ್ತರಾಗಬೇಕೆಂದು ಉಪದೇಶಿಸುತ್ತಿರುವದೇನಿದು? ಸೃಷ್ಟಿಯನ್ನು ಮಾಡುವ ಕಾರಣವೇನಿತ್ತು?" ಎಂದು ಪ್ರಶ್ನೆಯನ್ನು ಹಾಕಿದ್ದರು. ಅವರು ಬಹಳ ಸಾತ್ವಿಕಜನರಾಗಿದ್ದುದರಿಂದ ಅವರಿಗೆ ನಾನು ಹೇಳಿದುದೇನೆಂದರೆ—"ಪರಮಾತ್ಮನು ಸೃಷ್ಟಿಯನ್ನು ಏಕೆ ಮಾಡಿದನೆಂಬುದು ಹೇಳಲಿಕ್ಕೆ ಬರದಂಥ ವಿಷಯವೇನೂ ಅಲ್ಲ. ನಮ್ಮ ಹಿತಕ್ಕೋಸ್ಕರವಾಗಿಯೇ ಸೃಷ್ಟಿಮಾಡಿದನೆಂದು ತೋರಿಸಬಹುದು. ಆದರೆ ಮೊದಲು ನೀವು ಪರಮಾತ್ಮನು ಸೃಷ್ಟಿಯನ್ನು

ಏಕೆ ಮಾಡಿದನೆಂದು ವಿಚಾರಮಾಡುವದು ಆವಶ್ಯಕವೊ ಅಥವಾ ಇದರಿಂದ ನಾವು ಪಾರಾಗುವಂತೆ ಯತ್ನಿಸುವದು ಅವಶ್ಯವಾದುದೊ ನೋಡಿರಿ. ಪರಮಾತ್ಮನು ಸೃಷ್ಟಿಯನ್ನು ಮಾಡುವಾಗ "ಮಾಡಲೇ? ಬಿಡಲೇ?" ಎಂದು ನಿಮ್ಮನ್ನು ಕೇಳಿದ್ದರೆ ಆಗ ನೀವು "ಏಕೆ ಮಾಡುವೆ?" ಎಂದು ಕೇಳಬಹುದಾಗಿತ್ತು. ಆದರೆ ಈಗ ದೇವರು ಸೃಷ್ಟಿಯನ್ನು ಮಾಡುವದೆಲ್ಲ ತೀರಿಹೋದ ಮೇಲೆ ಮತ್ತು ದುಃಖಕರವಾದ ಆ ಸೃಷ್ಟಿಯಲ್ಲಿ ನಾವು ಸಿಕ್ಕು ಹೊರಳಾಡುತ್ತಿರುವಾಗ ಅದರಿಂದ ಪಾರಾಗುವ ಉಪಾಯವನ್ನು ಆಶ್ರಯಿಸುವದು ನಮಗೆ ಹೆಚ್ಚು ಅವಶ್ಯವಾದ ಮಾತು." ಹೀಗೆ ನಾನು ಹೇಳಿದಾಗ ಈ ಉತ್ತರಕ್ಕೆ ಅವರು ಸಂತೋಷದಿಂದ ಒಪ್ಪಿಕೊಂಡರು. ಅದರಂತೆ ಈಗ ನಮ್ಮ ಪ್ರಸ್ತುತವಿಷಯವಾದ ಗೀತೆಯು ಕೃತಕರೂಪಕವೊ ಅಥವಾ ಅಲ್ಲವೊ ಎಂಬ ಪ್ರಶ್ನೆಯನ್ನು ಕುರಿತು ವಿಚಾರಮಾಡುವದಕ್ಕಿಂತಲೂ ಗೀತೆಯಲ್ಲಿ ಹೇಳಿರುವದನ್ನು ತಿಳಿದುಕೊಳ್ಳುವದೂ ಮತ್ತು ಅದರಂತೆ ಆಚರಿಸುವದಕ್ಕೆ ಯತ್ನಿಸುವದೂ ಅವಶ್ಯವಾದ ಮಾತು. ನೀರಡಸಿದವನು "ಮುಂದೆ ಹರಿಯುವ ನದಿಯು ಗುಡ್ಡದಿಂದ ಹುಟ್ಟಿದೆಯೊ? ಅಥವಾ ಎಲ್ಲಿಂದ ಹುಟ್ಟಿದೆ?" ಎಂಬುದನ್ನು ಆಲೋಚಿಸುತ್ತ ಕುಳಿತುಕೊಳ್ಳುವದಕ್ಕಿಂತಲೂ ಆ ನದಿಯ ಅಮೃತೋಪಮವಾದ ನೀರನ್ನು ಕುಡಿದು ತನ್ನ ತೃಷೆಯನ್ನು ಆರಿಸಿಕೊಳ್ಳುವದು ನ್ಯಾಯವಾಗಿರುವಂತೆ ಈ ಶಂಕೆಯನ್ನು ಮಾಡದೆ ಗೀತೆಯ ರಸವನ್ನು ಆಸ್ವಾದಿಸಿ ನಮ್ಮ ಸಾಂಸಾರಿಕ ದುಃಖವನ್ನು ಕಳೆದುಕೊಳ್ಳುವದು ಹೆಚ್ಚು ಶ್ರೇಯಸ್ಕರವಾದ ಮಾತು; ಆದರೂ ನಿರಭಿಮಾನದಿಂದ ಕೆಲವರು ತಮ್ಮ ಅಭಿಪ್ರಾಯವನ್ನು ನನ್ನ ಮುಂದೆ ಸೂಚಿಸಿ "ಈ ವಿಷಯಕ್ಕೆ ನೀವು ಹೇಳಬೇಕು" ಎಂದು ಸರಳತನದಿಂದ ಇಂದು ಕೇಳಿರುವದರಿಂದ ನನಗೆ ತಿಳಿದದ್ದನ್ನು ನಾನು ಹೇಳದಿದ್ದರೆ ಅವರಿಗೆ ಅವಜ್ಞೆಯನ್ನು ಮಾಡಿದಂತಾದೀತೆಂದು ಈಗ ಈ ವಿಷಯವನ್ನು ಇಟ್ಟುಕೊಂಡು ನಾಲ್ಕು ಮಾತಾಡುವೆನು. ಮುಮುಕ್ಷುಗಳಿಗೆ ಇಂಥ ಪ್ರಶ್ನೋತ್ತರದಿಂದ ಏನೂ ಪ್ರಯೋಜನವಿಲ್ಲವೆಂಬುದೇನೋ ನಿಜವೆ. ಅಂಥವರಿಗೆ ಇದು ವೃಥಾಕಾಲಕ್ಷೇಪವಾಗುವದು. ಮುಮುಕ್ಷುತ್ವವು ದೃಢವಾಗಿಲ್ಲದವರಿಗೆ ಮಾತ್ರ ಈ ಮಾತು ರುಚಿಸುವದು. ನಾವೆಲ್ಲರೂ ಅಷ್ಟು

ಸ್ಥಿರವಾದ ಮುಮುಕ್ಷುತ್ವವಿಲ್ಲದವರಾಗಿರುವದರಿಂದ ಈ ವಿಷಯವನ್ನು ವಿಚಾರಿಸಿ ನೋಡೋಣ. ಅಂಥ ಮುಮುಕ್ಷುಗಳು ಇಲ್ಲಿ ಯಾರಾದರೂ ಇದ್ದರೆ ಅವರು ಮಾತ್ರ ಕ್ಷಮಿಸಬೇಕು. ಅವರಿಗೆ ಈ ಮಾತಿನಲ್ಲಿ ಲಾಭವೇನೂ ಆಗದಿದ್ದರೂ ಹಾನಿಯೇನೂ ಆಗಲಾರದು.

ಭಗವದ್ಗೀತೆಯು ಕೃತಕರೂಪಕವಲ್ಲವೆಂಬುದಕ್ಕೆ—

"गीता सुगीता कर्तव्या किमन्यैः शास्त्रसंग्रहैः।
या स्वय पद्मनाभस्य मुखपद्माद्विनिस्सृता॥"

ಎಂಬ ಮುಂತಾದ ವಾಕ್ಯಗಳೂ—

"स्वप्रयोजनाभावेऽपि भूतानुजिघृक्षया वैदिकं हि धर्मद्वयमर्जुनाय शोकमोहमहोदधौ निमग्नायोपदिदेश। गुणाधिकैर्गृहीतेऽनुष्ठीयमानश्च धर्मः प्रचयं गमिष्यतीति। तं धर्मं भगवता यथोपदिष्टं वेदव्यासस्सर्वज्ञो भगवान् गीताख्यैः सप्तभिः श्लोकशतैरुपनिबबंध"

ಎಂದು ಮುಂತಾದ ಶ್ರೀಶಂಕರಾಚಾರ್ಯರ ಭಾಷ್ಯವೂ—

"तत्र च वासुदेवार्जुनसंवादरूपां सर्वभारतार्थसंग्रहां भारतपारिजातमधुभूतां गीतामुपनिबबंध"

ಎಂಬ ಶ್ರೀಮಧ್ವಾಚಾರ್ಯರ ಭಾಷ್ಯವೂ ಇವೇ ಮೊದಲಾದ ಎಷ್ಟೋ ಆಪ್ತವಾಕ್ಯಗಳು ಪ್ರಮಾಣಗಳಾಗಿವೆ.

ಇನ್ನು ತಿಳಿದೂ ತಿಳಿದೂ ತಾನಾಗಿಯೇ ಸಿದ್ಧನಾಗಿ ಯುದ್ಧಕ್ಕೆ ಬಂದ

ಅರ್ಜುನನಿಗೆ ಏಕಾಯೇಕಿ ಮೋಹಬಂತೆಂದು ಹೇಳಿರುವದು ಅಸಂಭವವೆಂದರೆ ಕೇಳಿರಿ. ಪಾಂಡವರು ದುರ್ಯೋಧನನ ಕಡೆಗೆ ಶ್ರೀಕೃಷ್ಣನಂಥ ಮಧ್ಯಸ್ಥನನ್ನು ಕಳುಹಿಸಿ "ಐದು ಗ್ರಾಮುಗಳನ್ನಾದರೂ ಕೊಡು; ಕಡೆಗೆ ಒಂದು ಗ್ರಾಮವನ್ನಾದರೂ ನಮಗೆ ಬಿಡು" ಎಂದು ಮುಂತಾಗಿ ಪರಿಪರಿಯಿಂದ ಹೇಳಿಸಿದರೂ ದುರ್ಯೋಧನನು ಒಂದು ಸೂಜಿಯ ಮೊನೆಯಷ್ಟು ಭೂಮಿಯನ್ನೂ ಕೊಡುವದಿಲ್ಲವೆಂದು ಖಂಡಿತವಾಗಿ ಹೇಳಿದಾಗ ಗತ್ಯಂತರವಿಲ್ಲದೆ ಪಾಂಡವರು ಯುದ್ಧಕ್ಕೆ ಬರಬೇಕಾಯಿತು. ಭೀಷ್ಮಾಚಾರ್ಯರೂ ದ್ರೋಣಾಚಾರ್ಯರೂ ಮುಂತಾದ ಗುರುಗಳೂ ಮತ್ತು ದುರ್ಯೋಧನ ಮೊದಲಾದ ಬಾಂಧವರೂ ಸರ್ವರೂ ಏಕತ್ರ ಎದುರಾಳುಗಳಾಗಿ ನಿಂತಿರುವಾಗ "**मम प्राणा हि पांडवाः**" ಎಂದು ಶ್ರೀಕೃಷ್ಣನಿಂದ ತನ್ನ ಪಂಚಪ್ರಾಣರೆಂದು ಹೇಳಿಸಿಕೊಳ್ಳುವಷ್ಟು ಪರಮಸಾತ್ವಿಕರಾದ ಪಾಂಡವರಲ್ಲಿ ಮಧ್ಯಮಣಿಯೂ, ಶ್ರೀಕೃಷ್ಣನ ಸಖನೂ ಮತ್ತು ಭಕ್ತನೂ ಆದ ಅರ್ಜುನನಿಗೆ ಶ್ರೀಕೃಷ್ಣನ ಆಶ್ರಯದ ಧೈರ್ಯದಿಂದ ಇವರನ್ನು ಜಯಿಸೇನೆಂದು ನಿಶ್ಚಯವಿದ್ದಕಾರಣ

"गुरूनहत्वा हि महानुभावान्
श्रेयो भोक्तुं भैक्षमपीह लोके।"

ಎಂಬ ವಿಚಾರವು ಜನಿಸಿರುವದು ಸಹಜವಾದ ಮಾತಲ್ಲವೆ? ಶ್ರೀಭೀಷ್ಮಾಚಾರ್ಯರು ಮೊದಲಾದವರನ್ನು ಕೊಲ್ಲದೆ ತಿರಿದುಂಡಾದರೂ ಜೀವಿಸಿ ಪಾರತ್ರಿಕಸುಖದ ಸಾಧನೆಯನ್ನಾದರೂ ಮಾಡಬಹುದು; ಆದರೆ ಇಂಥ ಮಹಾನುಭಾವರನ್ನು ಕೊಲ್ಲುವದರಿಂದ ಪರದಲ್ಲಿ ಸುಖ ಸಿಕ್ಕೀತೆಂಬದರ ಆಶೆಯು ಕೂಡ ಇಲ್ಲವೆಂಬುದಿಷ್ಟೇ ಅಲ್ಲ; ಇಹದಲ್ಲಾದರೂ ಅವರ ರಕ್ತದಿಂದ ಮಿಶ್ರಿತವಾದಂತೆ ನಿಂದ್ಯವಾಗಿರುವ ಭೋಗಗಳನ್ನು ಉಪಭೋಗಿಸಬೇಕಾಗುವದೆಂದು—

"हत्वार्थकामांस्तु गुरूनिहैव
भुंजीय भोगान् रुधिरप्रदिग्धान्॥"

ಎಂಬದರಿಂದ ಹೇಳುವ ಅರ್ಜುನನು ಪಾಪಕ್ಕೆ ಎಷ್ಟು ಅಂಜುವವನಾಗಿರಬೇಕು? ಇಂಥ ಪಾಪಭೀರುತ್ವವು ಅವನಿಗೆ ಅನುರೂಪವಾದುದಲ್ಲವೊ? ಇದು ಅಸಂಗತವೊ? ಅರ್ಜುನನಿಗೆ ತಾನು ಸೋತೇನೆಂದು ಅಂಜಿಕೆ ಬಂದಿದ್ದರೆ ತಾನೇ ಯುಧ್ಧಕ್ಕೆ ಸಿದ್ಧನಾಗಿ ಬಂದು ಅಂಜಿರುವದು ಅಯುಕ್ತವೆಂದು ಹೇಳಬಹುದಾಗಿತ್ತು; ಆದರೆ ಅರ್ಜುನನು ತಾನು ಸೋಲುವೆನೆಂದು ಅಂಜಲಿಲ್ಲ.

"अथ व्यवस्थितान् दृष्ट्वा धार्तराष्ट्रान् कपिध्वजः।
प्रवृत्ते शस्त्रसंपाते धनुरुद्यम्य पांडवः।
हृषीकेशं तदा वाक्यमिदमाह महीपते।
सेनयोरुभयोर्मध्ये रथं स्थापय मेऽच्युत।
यावदेतान्निरीक्षेऽहं योद्धुकामानवस्थितान्।
कैर्मया सह योद्धव्यमस्मिन् रणसमुद्यमे।
योत्स्यमानानवेक्षेऽहं य एतेऽत्र समागताः।
धार्तराष्ट्रस्य दुर्बुद्धेः युद्धे प्रियचिकीर्षवः।"

ಎಂಬೀ ಶ್ಲೋಕಗಳಲ್ಲಿ ಹೇಳಿರುವಂತೆ ಮುಂದೆ ನಿಂತವರೆಲ್ಲರನ್ನೂ ಉತ್ಸಾಹದಿಂದ ನೋಡಲಿಕ್ಕೆ ಹೊರಟ ಅರ್ಜುನನು

"तत्रापश्यत्स्थितान्पार्थः पितॄनथ पितामहान्।
आचार्यान् मातुलान् भ्रातॄन् पुत्रान् पौत्रान् सखींस्तथा।
श्वशुरान्सुहृदश्चैव सेनयोरुभयोरपि।
तान्समीक्ष्य स कौंतेयः सर्वान् बंधूनवस्थितान्।
कृपया परयाविष्टो विषीदन्निदमब्रवीत्।"

ಈ ಶ್ಲೋಕಗಳಲ್ಲಿ ಹೇಳಿದಂತೆ ತನ್ನ ಆಚಾರ್‍ಯಾದಿಗಳು ಎದುರಾಳಾಗಿ ನಿಂತದ್ದನ್ನು ನೋಡಿ ಮತ್ತು ಅವರನ್ನು ತಾನು ನಿಜವಾಗಿ ಕೊಲ್ಲುವೆನೆಂದು ನಿಶ್ಚಯಿಸಿ ದಯೆಯಿಂದ ವಿಷಾದ ಹೊಂದಿದನು. ನಿಶ್ಚಯವಾಗಿ ಜಯವು ತನಗೆ ಪ್ರಾಪ್ತವಾಗುವದೆಂದು ತಿಳಿದಿದ್ದರೂ ಅರ್ಜುನನು—

"यद्यप्येते न पश्यंति लोभोपहतचेतसः।
कुलक्षयकृतं दोषं मित्रद्रोहे च पातकम्।
कथं न ज्ञेयमस्माभिः पापादस्मान्निवर्तितुम्।
कुलक्षयकृतं दोषं प्रपश्यद्भिर्जनार्दन।"

ಎಂಬ ಶ್ಲೋಕಗಳಿಂದ "ಕೌರವರಿಗೆ ತಿಳಿಯದಿದ್ದರೂ ನಮಗಾದರೂ ಪಾಪದಿಂದ ವಿಮುಖರಾಗಲಿಕ್ಕೆ ಏಕೆ ತಿಳಿಯಬಾರದು?" ಎಂದು ಹೇಳಿರುವದು ಆಗಿನ ಕಾಲಕ್ಕೆ ಅಂಥ ಸಾತ್ವಿಕನ ಮನಸ್ಸಿನಲ್ಲಿ ಬರತಕ್ಕ ವಿಚಾರವಲ್ಲವೆಂದು ಹೇಗೆ ಅನ್ನಬೇಕು? ಕೌರವರ ಅನ್ಯಾಯಕ್ಕೆ ಎರಡನೆಯ ಉಪಾಯವಿಲ್ಲದೆ ಯುದ್ಧಸನ್ನಾಹಮಾಡಿಕೊಂಡು ಬಂದಿದ್ದರೂ ಇಷ್ಟಜನರು ಒಮ್ಮೆಲೇ ಸಾಯುವರೆಂದು ನೋಡಿ ಸಹೃದಯನಾದ ಅರ್ಜುನನಿಗೆ—

"न च श्रेयोनुपश्यामि हत्वा स्वजनमाहवे।
न कांक्षे विजयं कृष्ण न च राज्यं सुखानि च।
किन्नो राज्येन गोविंद किं भोगैर्जीवितेन वा।
येषामर्थे कांक्षितं नो राज्यं भोगास्सुखानि च।
त इमेवस्थिता युद्धे प्राणांस्त्यक्त्वा धनानि च।
आचार्याः पितरः पुत्रास्तथैव च पितामहाः

मातुलाः श्वशुराः पौत्राश्शालास्संबंधिनस्तथा।
एतान्न हंतुमिच्छामि घ्नतोऽपि मधुसूदन।
अपि त्रैलोक्यराज्यस्य हेतोः किन्नु महीकृते ॥"

ಎಂಬ ವಿಚಾರವು ಹುಟ್ಟಿತು. ಸಾತ್ವಿಕನಾದವನು ತಪ್ಪುಮಾಡಿದವರ ಮೇಲೆ ಸಿಟ್ಟುಬಂದು ಅವರಿಗೆ ತಕ್ಕ ಶಾಸನಮಾಡಬೇಕೆಂದು ಹೊರಟಿದ್ದರೂ ಅವರನ್ನು ಪ್ರತ್ಯಕ್ಷವಾಗಿ ಕಂಡಕೂಡಲೆ ದಯೆಯಿಂದ ಮನಸ್ಸು ಕರಗಿ ಅವನ ಕೋಪವು ಹೊರಟುಹೋಗುವದು. ಈ ಮಾತು ಸ್ವಾನುಭವದಿಂದ ಅಥವಾ ಎರಡನೆಯವರ ಉದಾಹರಣೆಯಿಂದ ಯಾರಿಗೆ ತಿಳಿದಿದೆಯೋ ಅವರಿಗೆ ಅರ್ಜುನನಿಗೆ ಹೀಗಾದದ್ದು ಅಸಂಗತವೆಂದು ತೋರಲಾರದು. ಅರ್ಜುನನೇನು ಹೇಡಿಯೆ? ಭಯಗ್ರಸ್ತನಾದನೇ? "ಆಚಾರ್ಯರೂ ಪಿತೃಪುತ್ರಮುಂತಾದ ಸಂಬಂಧಿಗಳೂ ಆದ ಇಷ್ಟು ಜನರನ್ನು ನಾನು ಕೊಲ್ಲಲಾರೆನು; ಏಕೆಂದರೆ ಯಾರ ಕೂಡ ಸುಖಿಗಳಾಗಿರಬೇಕೆಂದು ವಿವಿಧವಿಷಯಭೋಗಗಳನ್ನು ನಾವು ಬಯಸುವೆವೊ ಆ ಈ ಜನರು ಎದುರಾಗಿ ನಿಂತಿರಲು ಇವರನ್ನು ಕೊಂದು ತ್ರೈಲೋಕ್ಯವನ್ನಾದರೂ ಆಳಲಿಕ್ಕೆ ನಾನು ಒಲ್ಲೆನು; ಈ ಭೂಮಿಯ ಪಾಡೇನು?" ಎಂದು ಅರ್ಜುನನ ಮನಸ್ಸಿನಲ್ಲಿ ವಿಚಾರವೂ ಮತ್ತು ಸ್ವಾರ್ಥತ್ಯಾಗವೂ ಬಂದಂತೆ ಮತ್ತೆ ಯಾರ ಮನಸ್ಸಿನಲ್ಲಿಯಾದರೂ ಬಂದವೊ? ಅಹಹ! ಅರ್ಜುನನೆ, ನೀನೇ ಧನ್ಯನು; ನೀನೇ ಮಾನ್ಯನು; ನಿನ್ನ ನಿಮಿತ್ತದಿಂದ ಭಗವಂತನು ತನ್ನ ಹೃದ್ಗತವಾದ ಉಪದೇಶಾಮೃತವನ್ನು ತೆಗೆದು ನಮ್ಮೆಲ್ಲರಿಗೂ ಈವರೆಗೂ ಆಸ್ವಾದವನ್ನು ತೆಗೆದುಕೊಳ್ಳಲಿಕ್ಕೆ ದೊರಕುವಂತೆ ಇಟ್ಟನಲ್ಲ! ನಿನಗೆ ಆ ಕಾಲದಲ್ಲಿ ಬಂದದ್ದು ಮೋಹವೆನ್ನಲಿಕ್ಕೆ ನಮಗೆ ಬಾಯೇ ಬರವಲ್ಲದು. ಅದನ್ನು ನಾವು ವಿವೇಕವೇ ಎಂದು ಕರೆಯುವದು ಅದು ಯುಕ್ತವಾಗಿದೆ. ಶ್ರೀಕೃಷ್ಣನಂಥವರು ಅದಕ್ಕೆ ಮೋಹವೆನ್ನಲಿ. ನಮಗೆ ಇಷ್ಟು ವಿವೇಕವೂ ಮತ್ತೂ ವೈರಾಗ್ಯವೂ ಹುಟ್ಟುವದು ಯಾವ ಜನ್ಮದಲ್ಲಿಯೊ? ಅದಕ್ಕೂ ಮುಂದಣ ಸ್ಥಿತಿಯಲ್ಲಿದ್ದವರು ಏನಾದರೂ ಅನ್ನಲಿ.

ನಾವು ಮಾತ್ರ ನಿನಗೆ ಆದದ್ದು ವೈರಾಗ್ಯವೆಂದು ಶ್ಲಾಘಿಸಬೇಕು. ಯಾವನು ಪೂರ್ಣಜ್ಞಾನಿಯೂ ಅಲ್ಲವೊ ಮತ್ತು ಪೂರ್ಣ ಅಜ್ಞಾನಿಯೂ ಅಲ್ಲವೊ ಅಂಥವನು ಉಪದೇಶಕ್ಕೆ ಪಾತ್ರನೆಂದು

"नात्यंतमज्ञो नोतज्ज्ञः सोऽस्मिन्शास्त्रेऽधिकारवान्"

ಎಂದು ಶ್ರೀಯೋಗವಾಸಿಷ್ಠದಲ್ಲಿ ಹೇಳಿರುವಂತೆ ನೀನು ಶ್ರೀಕೃಷ್ಣನಷ್ಟು ಜ್ಞಾನಿಯಾಗದಿದ್ದರೂ ನಮ್ಮಷ್ಟು ಅಜ್ಞಾನಿಯಲ್ಲದುದರಿಂದಲೇ ನಿನಗೆ ಉಪದೇಶಾಮೃತವು ಲಭಿಸಿತು.

"देवत्वे देववच्चेष्टा मनुष्यत्वे तु मानुषी"

ಎಂಬ ವಚನದಂತೆ ಮನುಷ್ಯಶರೀರವನ್ನು ಧಾರಣಮಾಡಿದಾಗ ಮನುಷ್ಯರಂತೆ ಪ್ರವರ್ತಿಸಬೇಕೆಂದು ಶ್ರೀರಾಮಪರಮಾತ್ಮನು— ಸರ್ವಜ್ಞನಾಗಿದ್ದರೂ— ವೈರಾಗ್ಯದಿಂದ ಸರ್ವವನ್ನೂ ತ್ಯಜಿಸಿ ಕೂತಾಗ ಶ್ರೀವಸಿಷ್ಠಮಹರ್ಷಿಗಳು ಆ ಪರಮಾತ್ಮನಿಗೆ ಬೋಧಿಸಿರುವದು ಯೋಗವಾಸಿಷ್ಠವೆಂದು ಹೆಸರಾದ ಗ್ರಂಥವಾಗಿ ನಮ್ಮ ಭಾಗ್ಯದಿಂದ ನಮ್ಮನ್ನು ಬೋಧಿಸಿ ಉದ್ಧರಿಸುತ್ತಿರುವಂತೆ ನಿನಗೆ ಶ್ರೀಕೃಷ್ಣನು ಉಪದೇಶಮಾಡಿದ ಗೀತೆಯು ನಮ್ಮನ್ನು ಎಷ್ಟು ಅನುಗ್ರಹಿಸುತ್ತಿದೆ! ನಿನಗೆ ಅಪ್ರಕಾರವಾದ ವಿಷಾದವುಂಟಾಗದಿದ್ದರೆ ಈಗೀತೋಪದೇಶಕ್ಕೆ ಅವಕಾಶವೆಲ್ಲಿರುತ್ತಿತ್ತು!! ಇರಲಿ. ಅರ್ಜುನನ್ನು ನೆನಸಿ ಅವನನ್ನು ಸಂಬೋಧಿಸಿ ಮಾತಾಡಹತ್ತಿದುದನ್ನು ಬಿಟ್ಟು ಪ್ರಿಯಬಂಧುಗಳಾದ ಶ್ರೋತೃಮಹಾಶಯರೆ, ನಿಮ್ಮಕಡೆಗೆ ಬರುವೆನು.

ದುರ್ಯೋಧನಾದಿಗಳು ಸಂಸಾರದಲ್ಲಿ ದ್ರವ್ಯಕ್ಕೋಸ್ಕರ ತಮ್ಮ ಬಂಧುಬಳಗದವರ ಪ್ರಾಣಗಳನ್ನಾದರೂ ತೆಗೆದುಕೊಳ್ಳಲಿಕ್ಕೆ ಸಿದ್ಧರಾದುದನ್ನು ನೋಡಿ ಅರ್ಜುನನು—

"पुत्रादपि धनभाजां भीतिः सर्वत्रैषा विहिता रीतिः।"

ಎಂದು ಆಚಾರ್ಯರು ಹೇಳಿರುವಂತೆ ಆಲೋಚಿಸಿ ವಿಚಾರದಿಂದ

"अहो बत महत्पापं कर्तुं व्यवसिता वयम्।
यद्राज्यसुखलोभेन हंतुं स्वजनमुद्यताः।"

ಎಂಬ ನಿರ್ವೇದಯುಕ್ತವಾದ ಉದ್ಗಾರವನ್ನು ತೆಗೆದನು. ಇಂಥ ಮೋಹಕವಾದ ಸಂಸಾರವನ್ನು ಬಿಟ್ಟು ಸ್ವಸ್ಥವಾಗಿರಬೇಕೆಂದು ಅವನ ಮನಸ್ಸಿನಲ್ಲಿ ಹುಟ್ಟಿತು. ಇದೇನು ಸಣ್ಣಪುಟ್ಟಮಾತಲ್ಲ. ಶ್ರೀಕೃಷ್ಣನಿಗಾದರೂ ಇದನ್ನು ನೋಡಿ ಸಂತೋಷವಾಗಲಿಲ್ಲವೆಂದಲ್ಲ. "ಈವರೆಗೆ ಎಂದೂ ಅರ್ಜುನನಿಗೆ ಬರದೇ ಇದ್ದ ಪಾತ್ರತೆಯು ಈಗ ಬಂತಲ್ಲ!!" ಎಂದು ಶ್ರೀಕೃಷ್ಣನು ಮನಸ್ಸಿನಲ್ಲಿ ಎಷ್ಟು ಸಂತುಷ್ಟನಾಗಿರಬಹುದೆಂಬುದು ಆತನಿಗೇ ಗೊತ್ತು.

ಹಾಗಾದರೆ ಶ್ರೀಕೃಷ್ಣನು ಅರ್ಜುನನಿಗೆ ಅವನು ಒಲ್ಲೆನೆಂಬದನ್ನು ಮಾಡೆಂದು ಏಕೆ ಹೇಳಿದನೆಂದರೆ ಕೇಳಿರಿ. ಶ್ರೀಕೃಷ್ಣನು,

"शिष्यस्तेहं शाधि मां त्वां प्रपन्नं"

ಎಂದು ಶರಣ್ಯಹೋದ ಅರ್ಜುನನಿಗೆ ಯುಕ್ತವಾದುದನ್ನೇ ಉಪದೇಶಮಾಡಬೇಕಾಯಿತು.

"अप्रियस्य च पथ्यस्य वक्ता श्रोता च दुर्लभः"

ಎಂದು ಸುಭಾಷಿತವಿರುವಂತೆ ಅಪ್ರಿಯವಾದರೂ ಹಿತವಾದುದನ್ನು ಹೇಳುವವರೂ ಕೇಳುವವರೂ ದುರ್ಲಭರೆ. ಶ್ರೀಕೃಷ್ಣಾರ್ಜುನರಿಬ್ಬರೂ ಅಂಥವರೆ ಎಂಬುದರಲ್ಲಿ ಯಾರು ತಾನೆ ಸಂದೇಹಪಟ್ಟಾರು? ಅರ್ಜುನನಿಗೆ ಯುದ್ಧಮಾಡುವದು ಅಪ್ರಿಯವಾಗಿದ್ದರೂ "युद्धे चाप्यपलायनम्" ಎಂದು ಮುಂದೆ ಶ್ರೀಕೃಷ್ಣನು ಹೇಳುವಂತೆ ರಣಾಂಗಣದಿಂದ ಹಿಂದಿರುಗಿ ಹೋಗದಿರುವದು ಕ್ಷತ್ರಿಯನ ಕರ್ಮವಾಗಿರುವದರಿಂದಲೂ

"यद्यदाचरति श्रेष्ठस्तत्तदेवेतरो जनः॥
स यत्प्रमाणं कुरुते लोकस्तदनुवर्तते॥"

ಎಂದು ಶ್ರೀಕೃಷ್ಣನು ಮನೋಹರವಾಗಿ ಪ್ರತಿಪಾದಿಸಿರುವಂತೆ ಶ್ರೇಷ್ಠರಾದವ-ರನ್ನು ಸಾಮಾನ್ಯರು ಅನುಕರಿಸುತ್ತಿರುವದು ಲೋಕರೂಢಿಯಾಗಿರುವದರಿಂದ-ಲೂ ಲೋಕಮರ್ಯಾದಾಪರಿಪಾಲನಾರ್ಥವಾಗಿ ಅವತರಿಸಿದ ನಾರಾಯಣ-ನಾದ ಶ್ರೀಕೃಷ್ಣನು ನರನಾದ ಅರ್ಜುನನಿಂದ ಜಗತ್ತಿಗೆ ಪ್ರಮಾಣವಾಗುವಂತೆ ಕರ್ಮವನ್ನು ಮಾಡಿಸಬೇಕಾಗಿರಲಿಲ್ಲವೆ? ವಿವೇಕ ವೈರಾಗ್ಯಗಳಿಂದ ನಿಸ್ಪೃ-ಹನಾದ ಅರ್ಜುನನಿಗೆ ದುರ್ಯೋಧನಾದಿಗಳ ಪರಾಜಯದಿಂದ ಏನೂ ಪ್ರಯೋಜನವಿಲ್ಲದಿದ್ದರೂ ಅಂಥ ದುಷ್ಟರಾದ ಕೌರವರ ನಿಗ್ರಹವು ಪಾಂಡವ-ರಿಂದಲ್ಲದೆ ಮತ್ತಾರಿಂದಲೂ ಶಕ್ಯವಾಗಿರಲಿಲ್ಲವಾದುದರಿಂದ ಮತ್ತು ಸ್ವಜನ-ರಾದ ಪಾಂಡವರನ್ನೇ ನಿಷ್ಕಾರಣವಾಗಿ ಪರಿಪರಿಯಿಂದ ಪೀಡಿಸಲಿಕ್ಕೆ ಹಿಂದು ಮುಂದು ನೋಡದ ಕೌರವರು— ಪಾಂಡವರು ಉಪೇಕ್ಷಿಸಿದ್ದರೆ— ಲೋಕಕ್ಕೇ ಕಂಟಕರಾಗಿ ಪರಿಣಮಿಸುವ ಸಂಭವವಿದ್ದುದರಿಂದ ಸ್ವಾರ್ಥಕ್ಕಾಗದಿದ್ದರೂ ಲೋಕೋಪಕಾರಾರ್ಥವಾಗಿ ಅಂಥ ದುಷ್ಟನಿಗ್ರಹರೂಪವಾದ ಸ್ವಕರ್ಮದಲ್ಲಿ ಅರ್ಜುನನನ್ನು

"सक्ताः कर्मण्यविद्वांसो यथा कुर्वंति भारत॥
कुर्याद्विद्वांस्तथाऽसक्तश्चिकीर्षुर्लोकसंग्रहम्॥"

ಎಂಬ ಮುಂತಾದ ವಿವಿಧ ಸಯುಕ್ತಿಕೋಕ್ತಿಗಳಿಂದ ಧರ್ಮಮರ್ಯಾದಾ ಪರಿಪಾಲಕನಾದ ಶ್ರೀಕೃಷ್ಣಪರಮಾತ್ಮನು ಪ್ರೋತ್ಸಾಹಿಸಿರುವದು ಆಕಾಲಕ್ಕೆ ತಕ್ಕದ್ದೇ ಆಗಿತ್ತು ಮತ್ತು ಹೀಗೆ ಸಂಸಾರವನ್ನು ಬಿಡೋಣವು ಬಿಡೋಣ-ವಲ್ಲವೆಂದೂ—

"इहैव तैर्जितस्सर्गो येषां साम्ये स्थितं मनः"

ಎಂದು ಮುಂತಾಗಿ ಮುಂದೆ ಶ್ರೀಕೃಷ್ಣನು ಹೇಳುವಂತೆ ಸಮತ್ವದಿಂದ ವರ್ತಿ-ಸುವದೇ ಬಿಡೋಣವೆಂದೂ ಅರ್ಜುನನಿಗೆ ಉಪದೇಶಿಸಿ "ಬೇಕೆಂದು ಉಪ-ಭೋಗವಿಲ್ಲ; ಬೇಡವೆಂದು ತ್ಯಾಗವಿಲ್ಲ" ಈಪ್ರಕಾರದ ಯಥಾರ್ಥವಾದ

ತ್ಯಾಗವನ್ನು ಆ ಅರ್ಜುನನಿಗೆ ಹಚ್ಚಲಿಕ್ಕೆ ಶ್ರೀಕೃಷ್ಣನಿಗೆ ಅದು ತಕ್ಕ ಸಮಯು ವಾಗಿತ್ತು. ಇರಲಿ. ಇದನ್ನೆಲ್ಲಾ ಮುಂದೆ ಪ್ರಸಂಗಾನುಸಾರವಾಗಿ ವಿಚಾರಿಸೋಣ.

ಹೀಗೆ ಅರ್ಜುನನಿಗೆ ಬಂದ ವಿಚಾರವೂ ಮತ್ತೂ ಅದರಮೇಲೆ ಶ್ರೀಕೃಷ್ಣನ ಉಪದೇಶವೂ ಆ ಶ್ರೀಕೃಷ್ಣಾರ್ಜುನರಿಗೆ ಮತ್ತು ಆಸಮಯಕ್ಕೆ ಒಪ್ಪುವಂಥದ್ದಾದ್ದರಿಂದ ಶ್ರೀವೇದವ್ಯಾಸರು ತಮ್ಮ ಮನಸ್ಸಿನಲ್ಲಿ ಹೇಳಬೇಕೆಂದಿದ್ದ ತತ್ತ್ವವಿಚಾರವನ್ನು ಬಲಾತ್ಕಾರದಿಂದ ಸುಮ್ಮನೆ ಅಸ್ಥಾನದಲ್ಲಿ ಶ್ರೀಕೃಷ್ಣಾರ್ಜುನರ ಸಂವಾದವನ್ನು ಕಲ್ಪಿಸಿ ಹೇಳಿದರೆಂಬುದು ಅಯುಕ್ತವಾದ ಮಾತು.

ಇನ್ನು ಶ್ರೀಕೃಷ್ಣನು ಅರ್ಜುನನ ಮುಂದೆ ಇಷ್ಟು ಉಪದೇಶಮಾಡುವವರೆಗೂ ಕೌರವಸೈನ್ಯದವರು ಹೇಗೆ ತಡೆದರೆಂದರೆ ಕೇಳಿರಿ. ದರ್ಮಯುದ್ಧ ಮಾಡತಕ್ಕ ವೀರರು, ಎದುರಾಳಿಗಳು ಸಿದ್ಧರಾಗುವವರೆಗೂ ಅವರ ಮೇಲೆ ಶಸ್ತ್ರಾಸ್ತ್ರಗಳನ್ನು ಬಿಡುವದಿಲ್ಲವೆಂಬ ಮಾತು ಪುರಾಣಪ್ರಸಿದ್ಧವಾದುದಲ್ಲವೊ? ಮೂರ್ಛೆಬಂದವರ ಮೇಲೆ ಅಸ್ತ್ರಪ್ರಯೋಗಗಳನ್ನು ಮಾಡದೆ ಹಿಂದಿರುಗಿ ಹೋದ ಎಷ್ಟೋ ಸಂಗತಿಗಳು ನಮಗೆ ಪುರಾಣಗಳಿಂದ ತಿಳಿಯುತ್ತವೆ. ಕೌರವಸೈನ್ಯದಲ್ಲಿ ಪ್ರಮುಖರಾಗಿದ್ದ ಭೀಷ್ಮಾಚಾರ್ಯಪ್ರಭೃತಿಗಳು ಧರ್ಮಕ್ಕನುಸರಿಸಿಯೇ ಯುದ್ಧವನ್ನು ಮಾಡುತ್ತಿದ್ದರೆಂಬ ವಿಷಯದಲ್ಲಿ ಸಂದೇಹವೇಕೆ? ಈಗ ಭಗವದ್ಗೀತೆಯನ್ನು ಓದಬೇಕಾದರೆ ನಮಗೆ ಎರಡುಮೂರು ತಾಸುಗಳು ಬೇಕಾಗುವವು. ಇಷ್ಟು ಉಪದೇಶ ಮಾಡಬೇಕಾದರೂ ಆಗ ಸ್ವಲ್ಪ ಹೆಚ್ಚುಕಡಮೆ ಇಷ್ಟೇ ವೇಳೆ ಹತ್ತಿರಬಹುದು. ಅಷ್ಟು ದೊಡ್ಡ ಭಾರತಯುದ್ಧದ ಸಿದ್ಧತೆಯಲ್ಲಿ ಇಷ್ಟು ವೇಳೆ ತಡೆದಿರುವದು ಆಶ್ಚರ್ಯದ ಮಾತಲ್ಲ; ಆದಕಾರಣ ಭಗವದ್ಗೀತೆಯು ಕೃತಕರೂಪಕವೆಂದು ಕಲ್ಪಿಸುವದು ಅಸಮಂಜಸವಾಗುವದು. ಮೇಲೆ ಹೇಳಿದ ಕಾರಣವಲ್ಲದೆ ಭಗವದ್ಗೀತೆಯು ಕೃತಕರೂಪಕವೆನ್ನಲಿಕ್ಕೆ ಮತ್ತಾರಲ್ಲಿಯಾದರೂ ಏನಾದರೂ ಹೆಚ್ಚಿನ ಕಾರಣವಿದ್ದರೆ ಅವರು ಅವುಗಳನ್ನು ನನಗೆ ತಿಳಿಸಿದಲ್ಲಿ ಆ ವಿಷಯವನ್ನು ವಿಚಾರಿಸಬಹುದು.

ಭಗವದ್ಗೀತೆಯು ಕೃತಕರೂಪಕವಲ್ಲವೆಂಬುದು ಅದರ ಹೆಸರಿನ ವಿಷ-

ಯಕ್ಕೆ ವಿಚಾರಮಾಡಿದರೆ ಸಹಜವಾಗಿ ಕಂಡುಬರುವದು. ಗೀತಾ ಎಂಬ ಶಬ್ದವು "**गै–गाने**" ಎಂಬ ಧಾತುವಿಗೆ **क्त** ಪ್ರತ್ಯಯವು ಹತ್ತಿ ಆಗಿದೆ. "**नपुंसके भावे क्तः**" ಎಂಬ ನಿಯಮದಂತೆ ಭಾವಾರ್ಥದ **क्त** ಪ್ರತ್ಯಯವು ನಪುಂಸಕಲಿಂಗದಲ್ಲಿ ಬರುತ್ತದೆ. ಹಾಗಿದ್ದರೆ **गीतं** ಎಂದು ರೂಪವಾಗಬೇಕಾಗಿತ್ತು; ಅಥವಾ **क्तिन्** ಪ್ರತ್ಯಯದಿಂದ **गीतिः** ಎಂಬ ರೂಪವಾಗಿದ್ದರೂ ಇದೇ ಅರ್ಥವಾಗುತ್ತಿತ್ತು; ಆದರೆ ಹಾಗಾಗದೆ **टाप्** ಪ್ರತ್ಯಯ ಹತ್ತಿ **गीता** ಎಂಬ ರೂಪವಾದಾಗ **क्त** ಪ್ರತ್ಯಯವು ಕರ್ಮಾರ್ಥಕವಾದುದೆಂದೂ ಮತ್ತು ಮುಂದೆ ಏನಾದರೂ ಸ್ತ್ರೀಲಿಂಗದ ವಿಶೇಷ್ಯವಿರಬೇಕೆಂದೂ ಗೊತ್ತಾಗುವದು.

"यल्लिंगं यद्वचनं या च विभक्तिर्विशेष्यस्य।
तल्लिंगं तद्वचनं सा च विभक्तिर्विशेषणस्यापि॥"

ಎಂಬ ನಿಯಮದಂತೆ ಸಂಸ್ಕೃತಭಾಷೆಯಲ್ಲಿ ವಿಶೇಷ್ಯದ ಲಿಂಗವಚನವಿಭಕ್ತಿಗಳು ವಿಶೇಷಣಕ್ಕೂ ಬರುವವು; ಆದಕಾರಣ ಭಗವದ್ಗೀತಾ ಎಂಬ ಸ್ತ್ರೀಲಿಂಗದ ವಿಶೇಷಣದ ಮುಂದೆ ಅದೇ ಲಿಂಗದ ವಿಶೇಷ್ಯವೇನಾದರೂ ಇರಲಿಕ್ಕೇ ಬೇಕು. ಅದಾವುದೆಂಬುದು ನಾವು ಗೀತೆಯ ಪ್ರತ್ಯೇಕ ಅಧ್ಯಾಯದ ಸಮಾಪ್ತಿಯನ್ನು ನೋಡಿದರೆ ಕಂಡುಬರುವದು. "**इति श्रीमद्भगवद्गीतासूपनिषत्सु**" ಎಂದು ಅಧ್ಯಾಯದ ಕೊನೆಗೆ ಬರೆದಿರುವರು. ಅಂದಮೇಲೆ **गीतासु** ಎಂಬದು **उपनिषत्सु** ಎಂಬದಕ್ಕೆ ವಿಶೇಷವಾಗಿರಬೇಕು. ಮುಂದೆ "**ब्रह्मविद्यायां, योगशास्त्रे**" ಎಂದು ಬರೆದಿರುವದು **गीतासु** ಎಂಬ ವಿಶೇಷಣಕ್ಕೆ ವಿಶೇಷ್ಯವಾಗುವದಿಲ್ಲ. **गीतासु** ಎಂಬದು **गीता** ಎಂಬ ಸ್ತ್ರೀಲಿಂಗಶಬ್ದದ ಸಪ್ತಮೀವಿಭಕ್ತಿಯ ಬಹುವಚನದ ರೂಪವಾಗಿದೆ. **उपनिषत्सु** ಎಂಬದೂಕೂಡ **उपनिषद्** ಎಂಬ ಸ್ತ್ರೀಲಿಂಗಶಬ್ದದ ಸಪ್ತಮೀವಿಭಕ್ತಿಯ ಬಹುವಚನದ ರೂಪವಾಗಿದೆ. **ब्रह्मविद्यायां** ಎಂಬದಕ್ಕೆ ಉಳಿದುದೆಲ್ಲಾ ಹೊಂದುತ್ತಿದ್ದರೂ ವಚನವು ಹೊಂದುವದಿಲ್ಲ. ಅದು ಏಕವಚನದ ರೂಪವಾಗಿದೆ. **योगशास्त्रे** ಎಂಬುದಂತು ನಪುಂಸಕಲಿಂಗಶಬ್ದದ ರೂಪವಾಗಿದೆ. ಆದಕಾರಣ **भगवद्गीतासु उपनिषत्सु**

ಎಂಬ ಶಬ್ದಗಳಿಗೆ ವಿಶೇಷಣವಿಶೇಷ್ಯಭಾವವು ಸ್ಪಷ್ಟವಾಗಿ ಹೊಂದುವದು ಅಂದಮೇಲೆ **भगवद्गीतोपनिषद्** ಎಂದು ಪೂರ್ಣ ಹೆಸರಾಯಿತು. ವಿಸ್ತಾರವಾಗುವದೆಂದು ಸಾಮುದ ಏಕದೇಶವನ್ನು ಉಪಯೋಗಿಸಿ ಭಗವದ್ಗೀತಾ ಅಥವಾ ಗೀತಾ ಎಂದು ಮಾತ್ರ ಕರೆದರೂ ಅದರ ಪೂರ ಹೆಸರು ಭಗವದ್ಗೀತೋಪನಿಷದ್ ಎಂತಲೇ. ಇಂಥ ಉಪನಿಷತ್ತು ಕೃತಕರೂಪಕವಾಗಿರಲಾರದೆಂಬದು ವೇದದ ಪ್ರಾಮಾಣ್ಯವನ್ನು ಮನ್ನಿಸುವವರಿಗೆ ವಿದಿತವಾದ ಅಂಶವಾಗಿಯೇ ಇದೆ.

ಇನ್ನು ಭಗವದ್ಗೀತೆಯು ಕೃತಕರೂಪಕವಲ್ಲವೆಂಬುದಕ್ಕೆ ಒಂದು ನಡೆದ ಸಂಗತಿಯನ್ನೂ ಉದಾಹರಿಸುವೆನು. ಇದೇನೂ ಕಲ್ಪಿತಕಥೆಯಲ್ಲ. ಅನೇಕ ಭಕ್ತಶಿಖಾಮಣಿಗಳಿಗೆ ಆವಾಸಸ್ಥಾನವಾಗಿರುವ ಪಂಢರಪುರದಲ್ಲಿ ಉಪಾಧ್ಯಾಯರವಾಡೆ ಎಂಬದಿನ್ನೂ ಇದೆ. ಅದನ್ನು "**पाध्याचावाडा**" ಎಂದು ಅಲ್ಲಿಯ ಜನರು ಈಗಲೂ ಅನ್ನುವರು. ಉಪಾಧ್ಯಾಯರವಾಡೆ ಎಂಬ ಹೆಸರನ್ನು ಸಾರ್ಥಕಮಾಡುವಂತೆ ಅಲ್ಲಿ ವಿಠ್ಠಲೋಪಾಧ್ಯಾಯರೆಂಬ ಒಬ್ಬರು ಇದ್ದರು. ಅವರು ಅತ್ಯುತ್ತಮಪಂಡಿತರು ಮತ್ತು ಪರಮಭಗವದ್ಭಕ್ತರು. ಅವರಲ್ಲಿ ಶಾಸ್ತ್ರಾಭ್ಯಾಸವನ್ನು ಮಾಡುವದಕ್ಕೆ ಎಷ್ಟೋ ಜನರು ಅಲ್ಲಿಗೆ ಬಂದಿರುತ್ತಿದ್ದರು. ವಿಠ್ಠಲೋಪಾಧ್ಯಾಯರು ಅವರೆಲ್ಲರನ್ನೂ ಮನೆಯಲ್ಲಿಟ್ಟುಕೊಂಡು ಊಟ-ಉಪಚಾರಗಳನ್ನು ಮಾಡಿಸಿ ವಿದ್ಯಾದಾನವನ್ನು ಮಾಡುತ್ತಿದ್ದರು. ಇವರಲ್ಲಿ ಶಿಷ್ಯವೃತ್ತಿಯಿಂದ ಇದ್ದು ಅಧ್ಯಯನಮಾಡಿದವರು ಸರ್ವಶಾಸ್ತ್ರಗಳಲ್ಲಿಯೂ ಪ್ರವೀಣರಾಗಿ ಹೋಗುತ್ತಿದ್ದರು. ಇಷ್ಟು ದೊಡ್ಡ ಸಂಸಾರವನ್ನು ಕಟ್ಟಿಕೊಂಡಿದ್ದರೂ ನಮ್ಮ ಉಪಾಧ್ಯಾಯರು ಮನೆಯ ವೆಚ್ಚಕ್ಕೆಂದು ಯಾರೊಬ್ಬರ ಮುಂದೂ ದೇಹಿ ಎಂದು ಹೋಗುತ್ತಿರಲಿಲ್ಲ. ಇನ್ನು ಅಲ್ಲಿಯ ನಿರ್ವಾಹವಾದುದು ಹೇಗೆ? ಎಂದರೆ—

"अनन्याश्चिंतयंतो मां ये जनाः पर्युपासते ।
तेषां नित्याभियुक्तानां योगक्षेमं वहाम्यहम् ॥"

ಎಂಬ ಭಗವದ್ವಾಕ್ಯದ ಮೇಲೆ ಅವರು ದೃಢವಾದ ಭರವಸವನ್ನಿಟ್ಟು ಭಗ-

ವಂತನೇ ತಮ್ಮ ಯೋಗಕ್ಷೇಮವನ್ನು ವಹಿಸುವನೆಂದು ನಿಶ್ಚಿಂತರಾಗಿ ಅನನ್ಯ-ಭಾವದಿಂದ ಭಗವದ್ಭಕ್ತಿಯನ್ನು ಮಾಡುತ್ತಿದ್ದರು. ಸಭ್ಯರೆ, ಭಗವಂತನು "ನನ್ನನ್ನು ಸಂಪೂರ್ಣವಾಗಿ ನಂಬಿದವರ ಯೋಗಕ್ಷೇಮವೇನಿದ್ದರೂ ನನ-ಗಿರಲಿ" ಎಂದು ಎದೆಯನ್ನು ತಟ್ಟಿಕೊಂಡು ಹೇಳಿದನಲ್ಲ! ಹೀಗೆ ನಮ್ಮ ಸರ್ವ-ಭಾರವನ್ನೂ ವಹಿಸುವದಕ್ಕೆ ಸರ್ವಶಕ್ತನಾದ ಪರಮಾತ್ಮನು ಸಿದ್ಧನಾಗಿರು-ವಾಗ ನಾವು ನಮ್ಮ ಯೋಗಕ್ಷೇಮದ ಭಾರವೆಂಬ ಹೊರಲಾರದ ಹೊರೆಯನ್ನು ಹೊತ್ತುಕೊಂಡು ಹಗಲಿರುಳೂ ನಿಟ್ಟುಸುರು ಬಿಡುತ್ತಿರುವದಕ್ಕಿಂತ ಅದನ್ನು ಭಗವಂತನಿಗೆ ಒಪ್ಪಿಸಿಬಿಟ್ಟರೆ ಎಷ್ಟು ಹಾಯಾಗಿದ್ದೀತು? ಹಾಯಾಗಿರಬಹು-ದೆಂಬುದು ನಿಜ. ನಮ್ಮ ಮನಸ್ಸು ಹಾಗೆ ಏಕಪ್ರಕಾರವಾದ ನಂಬಿಕೆಯಿಂದ ಭಗವಂತನಿಗೆ ಶರಣುಹೋಗುವ ಸ್ಥಿತಿಗೆ ಬಂದಿಲ್ಲ. ಆದುದರಿಂದ ಆಕೆಲಸವು ನಮ್ಮಂಥವರಿಗೆ ಸಾಧ್ಯವಲ್ಲ. ವಿಠ್ಠಲೋಪಾಧ್ಯಾಯರು ತಮ್ಮ ಸರ್ವಭಾರ-ವನ್ನು ಪರಮಾತ್ಮನ ಮೇಲೆ ಇಟ್ಟು ತಾವು ಹಾಯಾಗಿ ತಮ್ಮ ಅಧ್ಯಯನ, ಅಧ್ಯಾಪನ ಮತ್ತು ಭಗವಚ್ಚಿಂತನವನ್ನು ಮಾಡಿಕೊಂಡು ನಿಶ್ಚಿಂತೆಯಿಂದಿದ್ದರು. ಅವರ ನಂಬಿಕೆಯ ಬಲದಿಂದಲೇ ಅವರ ಕಾರ್ಯನಿರ್ವಾಹವೆಲ್ಲವೂ ಯಾವ ಕೊರತೆಯೂ ಇಲ್ಲದೆ ಸಾಗುತ್ತಿತ್ತು. ಒಂದುದಿನ ಭಗವಂತನು ಅವರ ನಿಷ್ಠೆಯನ್ನು ಪರೀಕ್ಷಿಸುವದಕ್ಕೆ ಮಾಡಿದನೆಂದು ಹೇಳುವಂತೆ ಒಂದು ಸಂಗತಿ ನಡೆಯಿತು. ಒಂದು ದಿನ ಮಧ್ಯಾಹ್ನ ಉಪಾಧ್ಯಾಯರು ಶಿಷ್ಯರಿಗೆ ಪಾಠ-ವನ್ನು ಹೇಳಿ ಸ್ನಾನಕ್ಕಾಗಿ ಒಳಕ್ಕೆ ಬಂದರು. ಅಡಿಗೆಯ ಮನೆಯಲ್ಲಿ ಪಾಕ-ಕಾರ್ಯದ ಗಡಿಬಿಡಿ ಏನೇನೂ ಇರಲಿಲ್ಲ. ಸಾರಿಸಿದ ಒಲೆ ಸಾರಿಸಿದ ಹಾಗೆ-ಯೇ ಇತ್ತು. ಸಾಧ್ವೀಶಿರೋಮಣಿಯಾದ ಅವರ ಸಹಧರ್ಮಿಣಿಯು ಅಲ್ಲಿ ಸ್ವಸ್ಥವಾಗಿ ಕುಳಿತಿದ್ದಳು. ಉಪಾಧ್ಯಾಯರು "ಅಡಿಗೆಗೆ ಆರಂಭವಾಗದಿರುವ ಕಾರಣವೇನು" ಎಂದು ಹೆಂಡತಿಯನ್ನು ಕೇಳಿದರು. "ಇಂದು ಯಾವ ಪದಾ-ರ್ಥವೂ ಒದಗಿಲ್ಲವಾದುದರಿಂದ ಅಡಿಗೆಗೆ ಆರಂಭವಾಗಿಲ್ಲ" ಎಂದು ಆಕೆಯು ತನ್ನ ಸ್ವಭಾವಸಿದ್ಧವಾದ ಸಮಾಧಾನದಿಂದ ಪತಿಗೆ ವಿನಯಪೂರ್ವಕವಾಗಿ ಉತ್ತರ-ವನ್ನು ಕೊಟ್ಟಳು. ಉಪಾಧ್ಯಾಯರಿಗೆ ಆಗ ಆಶ್ಚರ್ಯವಾಯಿತು. ಆಗ ಅವರು "ಪರಮಾತ್ಮನು ಗೀತೆಯಲ್ಲಿ ತನ್ನ ಸ್ವಕಂಠದಿಂದ ವಾಗ್ದಾನ ಮಾಡಿರುವಂತೆ

ಇದುವರೆಗೂ ನಡೆಸುತ್ತಿದ್ದು ಈದಿನ ಉದಾಸೀನ ಮಾಡಿರುವದಕ್ಕೆ ಯಾವ ಕಾರಣವೂ ಕಾಣುವದಿಲ್ಲ. ಸತ್ಯಸ್ವರೂಪನಾದ ಭಗವಂತನು ಅಸತ್ಯವನ್ನಾಡಿ-ರುವನೆಂದೂಹಿಸುವದಂತು ಪಾಪಕ್ಕೆ ಮೂಲವಾಗುವದು. ಅದೇ ಭಗವ-ದ್ಗೀತೆಯಲ್ಲಿ ಹೇಳಿರುವ ಉಳಿದ ಶ್ಲೋಕಗಳೆಲ್ಲ ಅಕ್ಷರಶಃ ಯಥಾರ್ಥವಾಗಿವೆ. ಆದುದರಿಂದ **अनन्याश्चिंतयंतो मां** ಎಂಬ ಈ ಶ್ಲೋಕವು ಮಾತ್ರ ಶ್ರೀಕೃಷ್ಣನ ಮುಖಕಮಲದಿಂದ ನಿಸ್ಸೃತವಾಗಿರಲಾರದು. ಇದೊಂದು ಶ್ಲೋಕವನ್ನು ಮಧ್ಯದಲ್ಲಿ ಯಾರೋ ಕೂಡಿಸಿರಬೇಕು. ಇದು ಶ್ರೀಕೃಷ್ಣನ ವಾಕ್ಯವಾಗಿದ್ದರೆ ಹೀಗೆಂದಿಗೂ ಸುಳ್ಳಾಗುತ್ತಿರಲಿಲ್ಲ. ಒಳ್ಳೇದು. ಇದನ್ನು ನಂಬಿ ನಾನು ಇತರ ಯೋಚನೆಯನ್ನು ಮಾಡದೆ ನಿಶ್ಚಿಂತನಾಗಿದ್ದೆನು. ನಾವು ಲೌಕಿಕವಿಷಯಕ್ಕಾಗಿ ತನ್ನ ಮೇಲೆ ಇಷ್ಟು ಭಾರವನ್ನು ಹಾಕಲೆಂದು ಭಗವಂತನ ಅಭಿಪ್ರಾಯ-ವಿದ್ದಂತೆ ತೋರುವದಿಲ್ಲ." ಎಂದು ಯೋಚಿಸಿ ಗೀತೆಯನ್ನು ತೆಗೆದು ಆ **अनन्याश्चिंतयंतो मां** ಎಂಬ ಶ್ಲೋಕದ ಮೇಲೆ ಅರಿದಾಳದಿಂದ ಅಡ್ಡಗೀಟೆಳೆದು ತನ್ನ ಹೆಂಡತಿಯನ್ನು ಕುರಿತು "ಇನ್ನು ನಾನು ಯಾರಾದರೂ ಧನಿಕರ ಮನೆಗೆ ಹೋಗಿ ಏನನ್ನಾದರೂ ಯಾಚನೆಮಾಡಿ ತರುವೆನು; ನೀನು ಆಮೇಲೆ ಅಡಿಗೆಮಾಡು" ಎಂದು ಹೇಳಿ ಮನೆಯಿಂದ ಹೊರಟರು. ಅವರು ಎಂದೂ ಯಾರನ್ನೂ ಯಾಚಿಸಿದವರಲ್ಲ. ದೇಹಿ ಎಂಬ ಶಬ್ದದ ಪ್ರಯೋಗವನ್ನೇ ಅರಿ-ಯರು. ಅವರ ನಿಸ್ಪೃಹತೆ ಮತ್ತು ಪಾಂಡಿತ್ಯ ಮೊದಲಾದ ಸದ್ಗುಣಗಳಿಗಾಗಿ ಜನರು ಅವರ ಮೇಲೆ ಬಹು ಪೂಜ್ಯಬುದ್ಧಿಯನ್ನಿಟ್ಟಿದ್ದರು. ಉಪಾಧ್ಯಾಯರು ಬೀದಿಯಲ್ಲಿ ಹೊರಡುತ್ತಲೇ ಕಂಡಕಂಡವರೆಲ್ಲ ಅವರನ್ನು ಆದರದಿಂದ ಕರೆದು ಉಪಚರಿಸಿ "ಏನು ಬೇಕು?" ಎಂದು ಕೇಳುತ್ತಿದ್ದರು. ಇಷ್ಟಾದರೂ ಉಪಾಧ್ಯಾಯರು ಏನೂ ಬೇಡವೆಂದು ಹೇಳಿ ಪ್ರಸಕ್ತವಾದ ಮಾತುಕಥೆಗ-ಳನ್ನು ಮುಗಿಸಿಬಿಡುತ್ತಿದ್ದರೇ ಹೊರತು ಹೊಟ್ಟೆಯಪಾಡಿಗಾಗಿ ದೇಹಿ ಎಂಬ ಮಾತಿನ ವಾಸನೆಯನ್ನು ಕೂಡ ಎಷ್ಟು ಮಾತ್ರವೂ ಹೊರಬೀಳಿಸಲಿಲ್ಲ. ಹೀಗೆ ಒಂದೆರಡು ಕಡೆ ಆದ ಮೇಲೆ ಭಗವಚ್ಚಿಂತನೆಯನ್ನು ಮಾಡುತ್ತಾ ನೆಟ್ಟಗೆ ಮನೆಯ ದಾರಿಯನ್ನು ಹಿಡಿದರು. ಇಷ್ಟರಲ್ಲಿ ಒಂದು ವಿಚಿತ್ರವೃತ್ತಾಂತ ನಡೆಯಿತು. ಒಬ್ಬ ಆಳು ಒಂದು ದೊಡ್ಡ ಮೂಟೆ ಕಾಳನ್ನು ಹೊತ್ತುಕೊಂಡು ಬಂದು

ಉಪಾಧ್ಯಾಯರ ಹೆಂಡತಿಯ ಮುಂದೆ ಇಳಿಸಿದನು. ಆಕೆಯು ಅವನ ಕಡೆಗೆ ತಿರಿಗಿ ನೋಡಿದಾಗ ಅವನ ಬಾಯಿಂದ ರಕ್ತವು ತೊಟ್ಟಿಕ್ಕುತ್ತಿತ್ತು. ಒಡನೆಯೇ ದಿಗಿಲುಬಿದ್ದು ಆಕೆಯು ಮನಸ್ಸಿನಲ್ಲಿ ಅತ್ಯಂತವಾಗಿ ಮರುಗಿ "ಅಪ್ಪ, ನಿನ್ನ ಬಾಯಿಂದ ರಕ್ತವು ತೊಟ್ಟಿಕ್ಕುತ್ತಿರುವದಲ್ಲ! ಏನಾಗಿದೆ?" ಎಂದು ಕೇಳಿದಳು. ಅದಕ್ಕೆ ಆ ಆಳು "ಅವ್ವ, ನನ್ನ ದುರವಸ್ಥೆಯನ್ನು ಏನು ಹೇಳಲಿ, ನಿನ್ನ ಗಂಡನು ಈ ಮೂಟೆಯನ್ನು ಮನೆಗೆ ತೆಗೆದುಕೊಂಡು ಹೋಗಿ ಹಾಕೆಂದು ನನಗೆ ಹೇಳಿದನು. ನಾನು ಹೊರಡುವವಕ್ಕೆ ಸ್ವಲ್ಪ ಆಲಸ್ಯ ಮಾಡಿದೆನು. ಅಷ್ಟಕ್ಕೇ ಆಕ್ರೋಶದಿಂದ ನನ್ನ ನಾಲಿಗೆಯನ್ನೇ ಸೀಳಿಬಿಟ್ಟನು." ಎಂದು ಹೇಳಿ ನಾಲಿಗೆಯನ್ನು ತೋರಿಸಿದನು. ಆ ಸಾಧ್ವೀಶಿರೋಮಣಿಗೆ ದಿಕ್ಕು ತೋಚದಂತಾಯಿತು.

### "यस्मान्नोद्विजते लोको लोकान्नोद्विजते च यः।"

ಎಂಬ ಗೀತಾವಚನದಂತೆ ಎಂದೆಂದೂ ಇತರರ ಮನಸ್ಸನ್ನು ಎಷ್ಟುಮಾತ್ರವೂ ನೋಯಿಸದೆ ಇರುವ ತನ್ನ ಯಜಮಾನರು ಈದಿನ ಅತಿಕ್ಷುದ್ರವಾಗಿರುವ ಕಾರಣದ ಮೇಲೆ ಆ ಕೂಲಿಕಾರನಿಗೆ ಅತಿದಾರುಣವಾದ ಶಿಕ್ಷೆಯನ್ನು ಮಾಡಿರುವದು ಎಷ್ಟರಮಟ್ಟಿಗೆ ಸಂಭವವೆಂದು ಅವಳ ಮನಸ್ಸು ತಲ್ಲಣಿಸುವದಕ್ಕೆ ಮೊದಲಾಯಿತು. ಪಾಪ, ಅವಳು ಆ ಕೂಲಿಕಾರನಿಗೆ ಏನು ಸಮಾಧಾನವನ್ನು ಮಾಡುವದಕ್ಕಾದೀತು? ಪಶ್ಚಾತ್ತಾಪವನ್ನು ಸೂಚಿಸುವ ಮಾತುಗಳಿಂದ ಮಾತ್ರ ಸಂತಯಿಸಿ ಕಳುಹಿಸಿದಳು. ಇತ್ತ ಸ್ವಲ್ಪ ಹೊತ್ತಿನಲ್ಲಿಯೇ ಉಪಾಧ್ಯಾಯರು ಮನೆಗೆ ಬಂದರು. ಯಜಮಾನಿಯು ಅಡಿಗೆಯ ಕೆಲಸವನ್ನು ಆರಂಭಿಸುವ ಸಡಗರದಲ್ಲಿದ್ದಳು. ಉಪಾಧ್ಯಾಯರು ಅದನ್ನು ಕಂಡು "ಈ ಪದಾರ್ಥವು ಹೇಗೆ ಒದಗಿತು" ಎಂದು ಕೇಳಿದರು. ಅದಕ್ಕೆ ಅವಳು " ನೀವು ಕಳುಹಿಸಿದ ಕೂಲಿಕಾರನು ಈಗ ತಾನೆ ತಂದುಕೊಟ್ಟನು" ಎಂದು ಹೇಳಿ ತಲೆಯನ್ನು ಬಗ್ಗಿಸಿಕೊಂಡು ನಿಂತಳು. ಉಪಾಧ್ಯಾಯರು "ಯಾವ ಕೂಲಿಕಾರನು?" ಎಂದು ದಿಗ್ಭ್ರಾಂತರಾಗಿ ನಿಂತರು. ಆಗ ಆಕೆಯು "ಇದೇನು? ಯಾವ ಕೂಲಿಕಾರನೆಂದು ಕೇಳುವಿರಿ? ಪಾಪ, ಅವನು ಆ ಮೂಟೆಯನ್ನು

ಹೊತ್ತುಕೊಂಡು ಹೊರಡುವದು ಸ್ವಲ್ಪ ತಡವಾಯಿತಂತೆ. ಅಷ್ಟಕ್ಕೇ ನೀವು ಅವನ ನಾಲಿಗೆಯನ್ನು ಸೀಳಿಬಿಟ್ಟಿರಂತೆ." ಎಂದು ಅಷ್ಟಕ್ಕೇ ಮಾತು ನಿಲ್ಲಲು ಕಣ್ಣೀರುಹಾಕಿದಳು. ಉಪಾಧ್ಯಾಯರಿಗೆ ಆಶ್ಚರ್ಯದಮೇಲಾಶ್ಚರ್ಯವಾಯಿತು; ಗಲ್ಲದ ಮೇಲೆ ಕೈ ಇಟ್ಟುಕೊಂಡು ಸುಮ್ಮನೆ ತದೇಕಧ್ಯಾನದಲ್ಲಿ ಮಗ್ನರಾದರು. ಹಾಗಿರುತ್ತಿರುವಾಗಲೇ ಅವರ ಕಣ್ಣುಗಳಿಂದ ಸಂತತಧಾರೆ ಸುರಿಯಲಾರಂಭಿಸಿತು. ಕುತ್ತಿಗೆಯು ನರವು ಬಿಗಿಹಿಡಿದಿರಲು ಅವರು ಗದ್ಗದಸ್ವರದಿಂದ "ಹೇ, ದೇವ, ನಾನು ಎಂಥ ಅಪರಾಧಿಯು. ನಿನ್ನ ಬಾಯಿಂದ ಬಂದ ಶ್ಲೋಕಕ್ಕೆ ಅವಿಚಾರದಿಂದ ಅರಿದಾಳದ ಗೀಟೆಳೆದೆನಲ್ಲ! ಅಲ್ಪಜ್ಞನಾದ ನಾನು "ನೀನು ಕಾರಣಾಂತರದಿಂದ ತಡವಾದರೂ ಮರೆಯದೆ ನನ್ನ ಯೋಗಕ್ಷೇಮವನ್ನು ವಹಿಸುವೆ" ಎಂದೂಹಿಸದೆ ಹೋದೆನಲ್ಲ!! ಶ್ಲೋಕದ ಮೇಲೆ ಗೀಟನ್ನೆಳೆದುದರಿಂದ ನಿನ್ನ ನಾಲಿಗೆಯನ್ನು ಸೀಳಿದಂತಾಯಿತಲ್ಲ!!! ಇದಕ್ಕೆ ನನಗೆ ಪ್ರಾಯಶ್ಚಿತ್ತವನ್ನು ನೀನೇ ಹೇಳಿ ನನ್ನನ್ನು ಉದ್ಧಾರಮಾಡು." ಎಂದು ಬೇಡಿಕೊಳ್ಳುತ್ತ ಮೈಮರೆತು ಬಿದ್ದರು. ಆಗ ಭಗವಂತನು ಭಕ್ತನ ಮೇಲಣ ಪ್ರೀತಿಯಿಂದ ಸಾಕ್ಷಾದ್ದರ್ಶನವನ್ನು ಕೊಟ್ಟು ಅವರನ್ನು ಸಮಾಧಾನಪಡಿಸಿದನು.

ಈ ಕಥೆಯನ್ನು ನಂಬುವಷ್ಟು ವಿಶ್ವಾಸವಿದ್ದವರಿಗೆ ಭಗವದ್ಗೀತೆಯು ಕೃತಕರೂಪಕವಾಗದೆ "ಶ್ರೀಕೃಷ್ಣಾರ್ಜುನರ ನಿಜವಾದ ಸಂವಾದವೇ" ಎಂದು ಅನ್ನಿಸದೆ ಇರಲಾರದು.

ಹೀಗೆ ಪ್ರಮಾಣ, ಯುಕ್ತಿ ಮತ್ತು ಉದಾಹರಣೆಗಳಿಂದ ಭಗವದ್ಗೀತೆಯು ಕೃತಕರೂಪಕವಲ್ಲವೆಂಬುದನ್ನು ತಿಳಿದಷ್ಟು ಹೇಳಿದಂತಾಯಿತು. ನೀವೆಲ್ಲರೂ ಹಗಲೆಲ್ಲ ನಿಮ್ಮನಿಮ್ಮ ಉದ್ಯೋಗಗಳನ್ನು ಮಾಡಿ ದಣಿದು ಈಗ ಬಹಳ ಹೊತ್ತಿನಿಂದಲೂ ನನ್ನ ಮಾತಿನ ಕಡೆಗೆ ಉದಾರಹೃದಯದಿಂದ ಲಕ್ಷ್ಯವನ್ನು ಕೊಟ್ಟು ಕುಳಿತು ಬೇಸತ್ತಿರಬಹುದಾದುದರಿಂದ ಇನ್ನು "ಭಗವದ್ಗೀತೆಯು ಮುಖ್ಯವಾಗಿ ಏನನ್ನು ಪ್ರತಿಪಾದಿಸುತ್ತದೆ" ಎಂಬ ವಿಷಯವನ್ನು ನಾಳೆಗೆ ಇಟ್ಟು ಈಗ ವಿರಮಿಸುವೆನು.

श्रीः

## ೨ನೇ ವ್ಯಾಖ್ಯಾನ—ಗೀತೆಯ ಕರ್ಮಪ್ರವರ್ತಕತ್ವವು.

### (ಮಂಗಳಾಚರಣೆ.)

श्रीरामचंद्रचरणौ मनसा स्मरामि ।
श्रीरामचंद्रचरणौ वचसा गृणामि ॥
श्रीरामचंद्रचरणौ शिरसा नमामि ।
श्रीरामचंद्रचरणौ शरणं प्रपद्ये ॥

ಸಭ್ಯರಾದ ಪ್ರಿಯಬಾಂಧವರೆ,

ಭಗವದ್ಗೀತೆಯ ಪ್ರಮಾಣತ್ವದ ವಿಷಯದಲ್ಲಿ ನಿನ್ನಿನ ದಿವಸ ವಿಚಾರವಾಯಿತು. ಈಗ ಗೀತೆಯು ಮುಖ್ಯವಾಗಿ ಏನನ್ನು ಬೋಧಿಸುತ್ತದೆ? ಎಂಬುದನ್ನು ವಿಚಾರಿಸಿ ನೋಡೋಣ.

"ज्ञातार्थं ज्ञातसंबंधं श्रोतुं श्रोता प्रवर्तते।
ग्रंथादौ तेन वक्तव्यः संबंधः सप्रयोजनः"

ಎಂಬ ನಿಯಮಕ್ಕನುಸರಿಸಿ ಶಾಸ್ತ್ರದ ಪ್ರಾರಂಭದಲ್ಲಿ ಪ್ರಯೋಜನಾದಿಗಳನ್ನು ಹೇಳತಕ್ಕದ್ದು. ಯಾವದಾದರೂ ಗ್ರಂಥವನ್ನು ಕಯ್ಯಲ್ಲಿ ಹಿಡಿಯಬೇಕಾದರೆ ಅದರ ವಿಷಯ ಮೊದಲಾದುದನ್ನು ವಿಚಾರಿಸುವದು ಯುಕ್ತವು. ಬುದ್ಧಿಮಂತರಿಗೆ ಅಭಿಧೇಯ, ಪ್ರಯೋಜನ, ಅಧಿಕಾರಿ ಮತ್ತು ಸಂಬಂಧವೆಂಬ ಅನುಬಂಧಚತುಷ್ಟಯವನ್ನು ತಿಳಿದುಕೊಳ್ಳದ ಹೊರತು ಯಾವ ಗ್ರಂಥವನ್ನು ಪರಿಶೀಲನೆ ಮಾಡಲಿಕ್ಕೂ ಪ್ರವೃತ್ತಿಯಾಗಲಾರದು. ಆದಕಾರಣ ಈ ಭಗವದ್ಗೀತೆಯ ಅಭಿಧೇಯಾದಿಗಳನ್ನು ಮೊದಲು ವಿಚಾರಿಸುವದು ಅವಶ್ಯವೆಂದು ತೋರುತ್ತದೆ.

"शास्त्रजप्रमानिवर्त्याज्ञानगोचरोऽभिधेयः"

ಎಂದು ಹೇಳಿದಂತೆ ಯಾವ ಶಾಸ್ತ್ರದಿಂದ ಜನಿಸುವ ಯಥಾರ್ಥಜ್ಞಾನದಿಂದ ನಿವೃತ್ತವಾಗಲಿಕ್ಕೆ ಯೋಗ್ಯವಾದ ಅಜ್ಞಾನಕ್ಕೆ ಯಾವದು ವಿಷಯವೊ ಅದು ಆ ಶಾಸ್ತ್ರದ ಅಭಿಧೇಯುವೆನಿಸುವದು.

"यमर्थमधिकृत्य पुरुषः प्रवर्तते तत्प्रयोजनम्"

ಎಂದಿರುವಂತೆ ಯಾವ ಪದಾರ್ಥದ ಪ್ರಾಪ್ತಿಗೋಸ್ಕರ ಪುರುಷನು ಪ್ರವರ್ತಿಸುವನೊ ಅದು ಪ್ರಯೋಜನವು. ಈ ಪ್ರಯೋಜನವಾದರೊ ಮುಖ್ಯವೆಂದೂ ಗೌಣವೆಂದೂ ಎರಡು ವಿಧವಾಗಿರುತ್ತದೆ.

"इतरेच्छानधीनेच्छाविषयो मुख्यं"

ಎಂಬಂತೆ ಅನ್ಯವಸ್ತುವಿಷಯುಕವಾದ ಇಚ್ಛೆಗೆ ಅಧೀನವಾಗದ ಇಚ್ಛೆಗೆ ಯಾವದು ವಿಷಯವೊ ಅದು ಮುಖ್ಯಪ್ರಯೋಜನವು. ಮತ್ತು

"मुख्यप्रयोजनाधीनेच्छाविषयो गौणं"

ಎಂದಂತೆ ಮುಖ್ಯಪ್ರಯೋಜನವಿಷಯುಕವಾದ ಇಚ್ಛೆಗೆ ಅಧೀನವಾಗಿರುವ ಇಚ್ಛೆಗೆ ಯಾವದು ವಿಷಯವೊ ಅದು ಗೌಣಪ್ರಯೋಜನವು.

"द्विविधप्रयोजनप्राप्तिकामोऽधिकारी"

ಎಂದು ಬರೆದಿರುವಂತೆ ಈ ಮುಖ್ಯ ಮತ್ತು ಗೌಣವೆಂಬ ಎರಡು ಬಗೆಯ ಪ್ರಯೋಜನವನ್ನು ಹೊಂದಲಿಚ್ಛಿಸುವವನು ಅಧಿಕಾರಿಯು.

ಸಂಬಂಧವು ಅನೇಕಪ್ರಕಾರವಾಗಿರುತ್ತದೆ. ಹೇಗೆಂದರೆ ಅಭಿಧೇಯುಕ್ಕೂ ಶಾಸ್ತ್ರಕ್ಕೂ ಪ್ರತಿಪಾದ್ಯಪ್ರತಿಪಾದಕಭಾವಸಂಬಂಧವಿರುವದು. ಪ್ರಯೋಜನಕ್ಕೂ ಅಧಿಕಾರಿಗೂ ಪ್ರಾಪ್ಯಪ್ರಾಪಕಭಾವಸಂಬಂಧವಿರುತ್ತದೆ. ಹೀಗೆ ನಾನಾವಿಧವಾದ ಸಂಬಂಧವು ಶಾಸ್ತ್ರದಲ್ಲಿ ಹೇಳಿರುವದುಂಟು.

ಭಗವದ್ಗೀತೆಯ ಅನುಬಂಧಗಳನ್ನು ಶ್ರೀಶಂಕರಾಚಾರ್ಯರು ಭಾಷ್ಯದಲ್ಲಿ "**तस्यास्य गीताशास्त्रस्य संक्षेपतः प्रयोजनं परं निःश्रेयसं सहेतुकस्य संसारस्यात्यंतोपरमलक्षणं**" ಎಂದು ಮೊದಲುಮಾಡಿ "**विशिष्टप्रयोजनसंबंधाभिधेयवद्गीताशास्त्रं**" ಎಂಬವರೆಗಿನ ವಾಕ್ಯಗಳಲ್ಲಿ ಸ್ಪಷ್ಟವಾಗಿ ಪ್ರತಿಪಾದಿಸಿದ್ದಾರೆ. ಅದರಲ್ಲಿ ನಿಃಶ್ರೇಯಸವೆಂಬುದೇ ಗೀತಾಶಾಸ್ತ್ರದ ಪರಮಪ್ರಯೋಜನವೆಂದು ಹೇಳಲ್ಪಟ್ಟದೆ. ಶ್ರೀಮದಾನಂದಗಿರಿಕೃತಟೀಕೆಯಲ್ಲಿ "**निश्चितं श्रेयः निःश्रेयसं कैवल्यं**" ಎಂದು ಬರೆದಿರುವಂತೆ ನಿಃಶ್ರೇಯಸವೆಂದರೆ ಕೈವಲ್ಯವು. ಇದಕ್ಕೆ ಪರಮ ಅಂದರೆ ಮುಖ್ಯವಾದ ಪ್ರಯೋಜನವೆಂದಿರುವದರಿಂದ "**अवांतरफलं तु तत्र तत्रावांतरवाक्यभेदेन मनोनिग्रहादि विवक्ष्यते**" ಎಂದು ಟೀಕಾಕಾರರು ಬರೆದಂತೆ ಮನೋನಿಗ್ರಹ ಮುಂತಾದುದು ಅವಾಂತರ ಅಂದರೆ ಗೌಣಪ್ರಯೋಜನವೆಂದು ತಿಳಿಯತಕ್ಕದ್ದು. "**निःश्रेयसं च द्विविधं निरतिशयसुखाविर्भावो निश्शेषानर्थोच्छित्तिश्च**" ಎಂದಿರುವಂತೆ ನಿಶ್ಶ್ರೇಯಸವು ನಿರತಿಶಯಪರಮಾನಂದಪ್ರಾಪ್ತಿರೂಪವಾಗಿಯೂ ಮತ್ತು ನಿಶ್ಶೇಷದುಃಖಾತ್ಯಂತನಿವೃತ್ತಿರೂಪವಾಗಿಯೂ ಎರಡುಬಗೆಯಾಗಿರುತ್ತದೆ. ಈ ದ್ವಿವಿಧವಾದ ನಿಶ್ಶ್ರೇಯಸವು ಗೀತಾಶಾಸ್ತ್ರದ ಪ್ರಯೋಜನವೆಂದು ಭಾಷ್ಯಕಾರರು ಹೇಳಿರುವದಾಗಿ ಶಾಂಕರಭಾಷ್ಯಟೀಕೆಯಲ್ಲಿ ತೋರಿಸಲ್ಪಟ್ಟದೆ. "**परमार्थतत्त्वं च वासुदेवाख्यं परं ब्रह्माभिधेयभूतं**" ಎಂಬ ವಾಕ್ಯದಿಂದ ಶ್ರೀಶಂಕರಾಚಾರ್ಯರು ಅಭಿಧೇಯವನ್ನು ಸ್ಫುಟವಾಗಿ ನಿರೂಪಿಸಿದ್ದಾರೆ. "**विशेषतः अभिव्यंजयत्**" ಎಂಬ ಭಾಷ್ಯವಚನದಿಂದ ಸಂಬಂಧವು ಸೂಚಿಸಲ್ಪಟ್ಟಿತೆಂದು **दर्शितेन फलेन शास्त्रस्य निष्ठाद्वयद्वारा साध्यसाधनभावसंबंधः विषयेण विषयविषयित्वमिति विवक्षित्वाऽऽह विशेषत इति**" ಎಂಬ ಟೀಕೆಯು ವಿಶದವಾಗಿ ತೋರಿಸುತ್ತದೆ.

ಹೀಗೆ ಶ್ರೀಮಚ್ಛಂಕರಾಚಾರ್ಯರು ಗೀತೆಯ ಪ್ರಯೋಜನ, ಅಭಿಧೇಯ ಮತ್ತು ಸಂಬಂಧಗಳನ್ನು ಭಾಷ್ಯದ ಪ್ರಾರಂಭದಲ್ಲಿ ಪ್ರತಿಪಾದಿಸಿದ್ದಾರೆ. ಈ ಅರ್ಥವು ಶ್ರೀಮದಾನಂದಗಿರಿಕೃತಟೀಕೆಯಲ್ಲಿ "**एवमनुबंधत्रयविशिष्टं शास्त्रं व्याख्यानार्हमित्युपसंहरति विशिष्टेति**" ಎಂಬ ವಾಕ್ಯದಿಂದ ವಿವರಿಸಲ್ಪಟ್ಟದೆ.

ಶ್ರೀರಾಮಾನುಜಾಚಾರ್ಯರು ಮತ್ತು ಶ್ರೀಮಧ್ವಾಚಾರ್ಯರು ತಮ್ಮ ತಮ್ಮ ಭಾಷ್ಯಗಳಲ್ಲಿ ಅಭಿಧೇಯಾದ್ಯನುಬಂಧಗಳನ್ನು ಸ್ಪಷ್ಟೀಕರಣಮಾಡಿ ಹೇಳಿಯೇ ಇಲ್ಲ. ಇದರ ಮೇಲಿಂದ ಶ್ರೀಶಂಕರಾಚಾರ್ಯರು ವಿಶದೀಕರಿಸಿದ ಅನುಬಂಧಗಳ ವಿಚಾರವು ಆ ಉಭಯ ಆಚಾರ್ಯರಿಗೂ ಸಮ್ಮತವಾಗಿರ-ಬೇಕೆಂದು ವ್ಯಕ್ತವಾಗುತ್ತದೆ.

ಇನ್ನು ನಾಲ್ಕು ಅನುಬಂಧಗಳಲ್ಲಿ ಮೂರನ್ನು ಹೇಳಿ ಅಧಿಕಾರಿಯೆಂಬ-ದನ್ನು ಶ್ರೀಶಂಕರಾಚಾರ್ಯರು ಕೂಡ ಬಿಟ್ಟಿರುವದಕ್ಕೆ ಹಿಂದೆ ನಾವು ಉದ-ಹರಿಸಿದ ಮುಖ್ಯ ಮತ್ತು ಗೌಣವೆಂದು ದ್ವಿವಿಧವಾದ ಪ್ರಯೋಜನವನ್ನು ಹೊಂದಲಿಚ್ಛಿಸುವವನೆ ಅಧಿಕಾರಿಯೆಂಬ ಅಧಿಕಾರಿಯ ಲಕ್ಷಣದಂತೆ ಈ ಗೀತೆಯ ಪ್ರಯೋಜನವನ್ನು ಹೇಳಿದುದರ ಮೇಲಿಂದ ಅದನ್ನು ಬೇಡುವವನೇ ಅಧಿಕಾರಿಯೆಂದು ಸ್ಪಷ್ಟವಾಗುತ್ತದೆಂಬುದೇ ಕಾರಣವಿರಬೇಕು.

ಹೀಗೆ ಶಾಸ್ತ್ರರೀತಿಯಿಂದ ಗೀತಾಶಾಸ್ತ್ರದ ಅನುಬಂಧಗಳನ್ನು ಸಂಕ್ಷೇಪತಃ ತೋರಿಸಿದಂತಾಯಿತು. ಈ ವಿಷಯವನ್ನು ನಾನು ಈ ಪ್ರಕಾರವಾಗಿ ಪ್ರತಿ-ಪಾದಿಸುತ್ತ ಹೋದರೆ ಶಾಸ್ತ್ರಪದ್ಧತಿಯನ್ನರಿಯದವರಿಗೆ ಬೇಸರವಾಗಬಹು-ದಾದುದರಿಂದ ಸರ್ವರಿಗೂ ತಿಳಿಯುವಂತೆ ಈಗ ನಾನು ಈವರೆಗೆ ಹೇಳಿದುದರ ಸಾರಾಂಶವನ್ನೂ ಮತ್ತು ಮುಂದೆ ಹೇಳಬೇಕಾದುವನ್ನೂ ದೃಷ್ಟಾಂತಾದಿಗ-ಳಿಂದ ಸ್ಪಷ್ಟವಾಗಿ ತಿಳಿಯುವಂತೆ ಹೇಳುವೆನು.

ಒಂದು ಕೆಲಸದಲ್ಲಿ ಪ್ರಯೋಜನವನ್ನು ಮನಗಂಡ ಹೊರತು ಯಾರಿಗೂ ಪ್ರವೃತ್ತಿಯುಂಟಾಗುವದಿಲ್ಲ. ಇಂಪಾದ ಗಾನದಿಂದ ಮತ್ತು ರಸಾಭಿ-ವ್ಯಂಜಕವಾದ ಅಭಿನಯ ಮುಂತಾದವುಗಳಿಂದ ಸುಖವು ದೊರೆಯುವದೆಂದು ರಸಿಕನು ನಾಟಕಶಾಲೆಗೆ ತಲೇಹಾಕುವನು. ತನಗಭಿರುಚಿಯುಳ್ಳ ಪಾಠ ಪ್ರವಚನಗಳ ಪ್ರಯೋಜನವಾಗುವದೆಂದು ವಿದ್ಯಾರ್ಥಿಯು ಪಾಠಶಾಲೆಯ ಮೆಟ್ಟಿಲನ್ನು ಹತ್ತುವನು. ತನ್ನ ರೋಗವು ಗುಣಮುಖಕ್ಕೆ ಬಂದೀತೆಂದು ರೋಗಿಯು ಔಷಧವನ್ನು ಸೇವಿಸುವನು. ಒಂದು ವ್ಯಾಪಾರದಲ್ಲಿ ಲಾಭ-ವಾದೀತೆಂದು ಧನಾರ್ಥಿಯಾದವನು ಆ ವ್ಯಾಪಾರವನ್ನು ಕೈಕೊಳ್ಳುವನು. ಹೀಗೆ

"प्रयोजनमनुद्दिश्य न मंदोपि प्रवर्तते"

ಎಂಬ ವಚನದಂತೆ ಯಾರು ಯಾವ ಕೆಲಸಕ್ಕೆ ಕೈಹಾಕಬೇಕಾದರೂ ಅವರು ಅದರಿಂದ ತಮಗೇನು ಪ್ರಯೋಜನವೆಂದು ಮೊದಲು ನೋಡುತ್ತಾರೆ. ಪ್ರಕೃತ ಗೀತಾಶಾಸ್ತ್ರದಲ್ಲಿ ಪ್ರವೃತ್ತಿ ಹುಟ್ಟಬೇಕಾದರೆ ಗೀತಾಶಾಸ್ತ್ರದಿಂದ ಪ್ರಯೋಜನವೇನೆಂಬುದನ್ನು ತಿಳಿಯಬೇಕು. ಗೀತಾಶಾಸ್ತ್ರದ ಮುಖ್ಯಪ್ರಯೋಜನವು ಸಂಪೂರ್ಣವಾಗಿ ದುಃಖನಿವೃತ್ತಿರೂಪವೂ ಮತ್ತು ಸುಖಪ್ರಾಪ್ತಿರೂಪವೂ ಆದ ಮೋಕ್ಷವು. ನಾಟಕಶಾಲೆ ರಸಿಕರಿಗೆ ಇಷ್ಟವಾದುದು; ಪಾಠಪ್ರವಚನಗಳು ವಿದ್ಯಾರ್ಥಿಗೆ ಬೇಕಾದವು; ಔಷಧವು ರೋಗಿಗೆ ಅಗತ್ಯವಾದುದು; ವ್ಯಾಪಾರವು ಧನಾರ್ಥಿಗೆ ಅವಶ್ಯವಾದುದು. ಹೀಗೆ ಲೋಕದಲ್ಲಿ ಸಾಮಾನ್ಯವಾಗಿ ಒಂದೊಂದು ಒಬ್ಬೊಬ್ಬರಿಗೆ ಬೇಕಾದುದಾಗಿರುವದು. ಗೀತಾಶಾಸ್ತ್ರವು ಹಾಗಲ್ಲ. ದುಃಖನಿವೃತ್ತಿರೂಪವೂ ಸುಖಪ್ರಾಪ್ತಿರೂಪವೂ ಆದ ಇದರ ಪ್ರಯೋಜನವನ್ನು ಎಲ್ಲರೂ ಬಯಸುವವರಾದುವರಿಂದ ಇದು ಎಲ್ಲರಿಗೂ ಬೇಕಾದುದು. ಲೋಕದಲ್ಲಿ ಸುಖಪ್ರಾಪ್ತಿಯಾಗಬೇಕೆಂದೂ ದುಃಖನಿವೃತ್ತಿಯಾಗಬೇಕೆಂದೂ ಹರಕೆಯನ್ನು ಹೊರದವರು ಯಾರೂ ಇಲ್ಲ. ಈ ಸಂಸಾರದಲ್ಲಿ ಯಾರ ಮನಸ್ಸು ಚಿಂತೆಯಿಂದ ಹೊಯ್ದಾಡದೆ ಇದೆ? ಯಾರ ಕಣ್ಣುಗಳು ಮಂದೋಷ್ಣವಾದ ಕಂಬನಿಯ ಪ್ರವಾಹವನ್ನು ಸುರಿಸದೆ ಇವೆ? ಯಾರ ದೇಹವು ಸಂಕಟಪರಂಪರೆಗಳಿಂದಾಗುವ ಸಂತಾಪವನ್ನನುಭವಿಸದೆ ಇದೆ? ರೋಗದ ಮತ್ತು ಮರಣದ ಮಾತು ಬಂದಾಗ ಯಾರ ಮುಖವು ವಿವರ್ಣವಾಗದೆ ಉಳಿಯುತ್ತದೆ? ಮನುಷ್ಯನಿಗೊದಗುವ ದುಃಖಸಂತತಿಯು ಎಷ್ಟು ದಾರುಣವಾಗಿರುವದು! ಈ ದುರ್ದಶೆಯನ್ನು ಕಳೆದುಕೊಳ್ಳುವದಕ್ಕಾಗಿ ಪ್ರತಿಯೊಬ್ಬನೂ ಅಷ್ಟಿಷ್ಟಾದರೂ ಪ್ರಯತ್ನವನ್ನು ಮಾಡುತ್ತಲೇ ಇರುವನು. ಕೆಲಸವನ್ನು ಮಾಡಿ ದಣಿದವನು ಅದರ ಆಯಾಸವನ್ನು ಕಳೆದುಕೊಳ್ಳುವದಕ್ಕೆ ನಿದ್ರೆಮಾಡುವನು. ಬಹಳ ಹೊತ್ತು ಮನಸ್ಸಿಗೆ ಶ್ರಮೆಯಾಗುವ ಕೆಲಸವನ್ನು ಮಾಡುತ್ತಿದ್ದವನು ಕೆಲವು ಹೊತ್ತು ಅದಕ್ಕೆ ವಿಶ್ರಾಂತಿಯನ್ನು ಕೊಟ್ಟು ಶಾರೀರವ್ಯಾಯಾಮಕ್ಕೆ ಹೋಗುವನು. ನಿದ್ರೆ

ಮತ್ತು ವ್ಯಾಯಾಮು ಇವುಗಳೇ ಸರ್ವೋತ್ಕೃಷ್ಟಸುಖಸಾಧನಗಳಲ್ಲದಿದ್ದರೂ ಬಾಧಕವಾದವುಗಳೇನೂ ಅಲ್ಲ. ಇನ್ನೂ ಕೆಲವರು—ಕಾಲು ಜಾರಿ ಬಿದ್ದು ನೀರಿನಲ್ಲಿ ಮುಳುಗಿದ ಮನುಷ್ಯನು ತಳದಲ್ಲಿ ಸಿಕ್ಕಿದ ಹುಲ್ಲನ್ನೇ ತನ್ನ ಆಪತ್ಪರಿಹಾರಕವೆಂದು ನಂಬಿ ಅದನ್ನು ಬಲವಾಗಿ ಆಶ್ರಯಿಸಿ ದುರ್ದಶೆಯನ್ನು ಪಡೆಯುವಂತೆ—ಅವಿಚಾರಿಗಳು ಆಯಾಸ ಪರಿಹಾರಕ್ಕಾಗಿ ಮದ್ಯಪಾನಮಾಡುವದು, ವ್ಯಥೆಯನ್ನು ಮರೆಯುವದಕ್ಕಾಗಿ ಅಫೀಮು ಗಾಂಜಾ ಮುಂತಾದವುಗಳನ್ನು ಸೇವಿಸುವದು, ಬೇಸರವನ್ನು ಕಳೆದುಕೊಳ್ಳುವದಕ್ಕಾಗಿ ದ್ಯೂತವನ್ನಾಡುವದು ಹೀಗೆ ಬಗೆಬಗೆಯಾದ ಅವಲಂಬನೆಗಳನ್ನು ನಂಬಿ ಕೆಡುತ್ತಿರುವರು.

ವಿಚಾರಮಾಡಿ ನೋಡಿದರೆ ಯಾವ ಪ್ರಾಪಂಚಿಕವಿಷಯದಲ್ಲಿಯೂ ನಿಜವಾದ ಸುಖವಿಲ್ಲ, ವಿಷಯದಲ್ಲಿ ಸುಖವಿರುವ ಪಕ್ಷದಲ್ಲಿ ಯಾವದಾದರೊಂದು ವಿಷಯವು ನಮಗೆ ಪ್ರಾಪ್ತವಾದಾಗ ನಮಗೆ ಅನುಭವಕ್ಕೆ ಬರುವ ಸಂತೋಷವು ಆ ವಿಷಯವು ನಮ್ಮಲ್ಲಿರುವವರೆಗೂ ತೋರಬೇಕಾಗಿತ್ತು. ಆದರೆ ಅನುಭವದಲ್ಲಿ ಹಾಗೆ ಇಲ್ಲದೆ ವಿಷಯಗಳಿನ್ನೂ ನಮಗೆ ಪ್ರಾಪ್ತವಾಗುವ ಸ್ಥಿತಿಯಲ್ಲಿಯೇ ಇದ್ದಾಗ "ಅವುಗಳು ಬರುತ್ತವೆ ಬರುತ್ತವೆ" ಎಂದು ನಮಗೆ ಆಗುವ ಸುಖದಷ್ಟು ಅದೇ ವಿಷಯಗಳು ನಮ್ಮ ಕೈಗೆ ಬಂದ ಮೇಲೆ ಆಗುವದಿಲ್ಲ ಮತ್ತು ಆ ವಿಷಯಗಳು ನಮ್ಮ ಸ್ವಂತಗಳಾಗಿಹೋದ ಮೇಲಂತು ಅವುಗಳ ಮೇಲೆ ಅನಾದರವು ಹುಟ್ಟುವದೆಂಬುದು ಸರ್ವರಿಗೂ ಅನುಭವದಿಂದ ತಿಳಿದ ಮಾತೇ ಆಗಿದೆ. ಸಣ್ಣ ಹುಡುಗರಿಗೆ ಕೂಡ ತಮ್ಮ ಪಾಠಶಾಲೆಗೆ ರಜೆ ಬರುತ್ತದೆ ಬರುತ್ತದೆ ಎಂಬ ಕಾಲದಲ್ಲಿದ್ದ ಸಂತೋಷವು ಅದೇ ರಜೆ ಬಂದಮೇಲೆ ಇರುವದಿಲ್ಲ. ಹಾಗೆಯೇ ಹಬ್ಬ ಹುಣ್ಣಿಮೆಗಳು ಬರುವದಕ್ಕೆ ಮುಂಚೆ ಇದ್ದ ಉತ್ಸಾಹವು ಅವು ಬಂದ ಮೇಲೆ ತೋರುವದಿಲ್ಲ. ಹೀಗೆ ಯಾವದಾದರೂ ಪದಾರ್ಥವು ಕಣ್ಣ ಮುಂದೆ ಇದ್ದಾಗ ಕೊಡುವಷ್ಟು ಸುಖವನ್ನು ಕೈಸೇರಿದಾಗ ಕೊಡಲಾರದು ಮತ್ತು ಕೈಯಲ್ಲಿದ್ದಾಗ ಉಂಟುಮಾಡುವಷ್ಟು ಆನಂದವನ್ನು ಕಿಸೆ (ಜೇಬು) ಸೇರಿದಾಗ ಉಂಟುಮಾಡಲಾರದು. ಇಷ್ಟೇ ಅಲ್ಲದೆ ಕಣ್ಣ ಮುಂದಿನ ವಸ್ತು ಕೈಗೆ ಬಂದಕೂಡಲೆ ಅನಾದರವೂ

ಮತ್ತು ಕಿಸೆಗೆ ಬಿದ್ದ ಕೂಡಲೆ ಬೇಸರವೂ ಕೂಡ ಆಗುವದುಂಟು. ಹೀಗಿರುವದರಿಂದ ಹೊಸಹೊಸವಸ್ತುಗಳ ರೂಪದಿಂದ ವಿವಿಧವಾದ ಸೌಕರ್ಯವಿಶೇಷಗಳನ್ನು ಒದಗಿಸಿಕೊಡುತ್ತಿರುವ ಭೌತಿಕಶಾಸ್ತ್ರಗಳು ಯಥಾರ್ಥವಾದ ಸುಖಸಾಧನಗಳಾಗಲಾರವು. ಈಗಿನ ದಿವಸಗಳಲ್ಲಿ ಭೌತಿಕಶಾಸ್ತ್ರಪ್ರವೀಣತೆಯು ದಿನದಿನಕ್ಕೆ ಹೆಚ್ಚುತ್ತ ನಾನಾಪ್ರಕಾರವಾದ ಯಂತ್ರಗಳ ಮೂಲಕ ಎಷ್ಟೋ ಚಮತ್ಕಾರಗಳಿಂದ ಜನರ ಮನಸ್ಸನ್ನು ಬೆರಗುಮಾಡುತ್ತ ಬಂದರೂ ನಿಜವಾದ ಸುಖವು ಅವಕ್ಕೆ ಸಾಧ್ಯವಾಗಿಲ್ಲ. ಸುಖವನ್ನು ನಿರ್ಮಿಸುವ ಯಂತ್ರವನ್ನು ಯಾರೂ ಕಂಡೂ ಇಲ್ಲ ಕೇಳಿಯೂ ಇಲ್ಲ. ಎಂಥ ಅದ್ಭುತವಾದ ಆಶ್ಚರ್ಯಕಾರ್ಯವನ್ನು ಮಾಡುವ ವಸ್ತುವಾದರೂ ಸುಖಕ್ಕೆ ಸಾಧನವಾಗಲಾರದು. "ಏಕೆ, ಶಾಶ್ವತವಾದ ಸುಖವಾಗದಿದ್ದರೂ ಅಲ್ಪಸ್ವಲ್ಪ ಸೌಖ್ಯವೂ ಕೂಡ ಈ ಪದಾರ್ಥಗಳಿಂದ ಆಗದೆ? ನಮಗೆಲ್ಲ ಸಂಸಾರದಲ್ಲಿ ಆಯಾ ವಸ್ತುಗಳಿಂದ ಆಗಾಗ ಸುಖವು ಸಿಕ್ಕುತ್ತಿರುವದನ್ನು ಹೀಗೆ ಅಲ್ಲಗಳೆಯುವದು ಹೇಗೆ?" ಎಂದರೆ ಕೇಳಬೇಕು. ಸಂಸಾರದ ಆಯಾ ಪದಾರ್ಥಗಳಿಂದ ಜನಿಸುವದು ಸುಖವಲ್ಲದೆ ದುಃಖದ ಪ್ರತೀಕಾರಮಾತ್ರವಾಗಿರುವದು. ಇದಕ್ಕೆ ನಾವು—

"प्रतीकारं व्याधेः सुखमिति विपर्यस्यति जनः"

ಎಂದು ಶ್ರೀಭರ್ತೃಹರಿಕವಿಗಳು ಅಂದಿರುವಂತೆ ಸುಖವೆಂದು ವಿಪರ್ಯಾಸಮಾಡುವೆವು; ಆದರೆ ಅದಕ್ಕೂ ಮತ್ತು ಸುಖಕ್ಕೂ ಎಷ್ಟೋ ಅಂತರವಿರುವದು. ಹೇಗಾದರೂ ಸಾಲಗಾರನ ಕಾಟವನ್ನು ತಪ್ಪಿಸಿಕೊಂಡ ಮಾತ್ರದಿಂದ ಯಾವನಿಗಾದರೂ ಧನಿಕನೆನ್ನಬಹುದೋ? ಸಾಲವುಳ್ಳವನು ಎಷ್ಟು ಗಳಿಸುತ್ತಿದ್ದರೂ ಅವನನ್ನು ಶ್ರೀಮಂತನೆನ್ನುವದಕ್ಕೆ ಬರುವದಿಲ್ಲ. ಆಯಮಾತ್ರದಿಂದ ಧನಸಂಗ್ರಹವಾಗುವದಿಲ್ಲ; ಆದರೆ ಆಯಕ್ಕಿಂತ ವ್ಯಯವು ಕಡಮೆಯಾಗುವದರಿಂದ ಆಗುವದು. ಋಣಿಯಾಗಿದ್ದವನು ಧನವನ್ನು ಸಂಪಾದಿಸಿ ಅದರಿಂದ ಋಣವಿಮೋಚನೆ ಮಾಡಿಕೊಂಡರೂ ಅವನು ಹಣವುಳ್ಳವನಾಗದಂತೆ ಯಾವದಾದರೂ ವಿಷಯದಿಂದ ದುಃಖದ ಪ್ರತೀಕಾರವನ್ನು ಮಾಡಿಕೊಂಡವನಿಗೆ ಸುಖಿ-

ಯೆನ್ನಕೂಡದು. ಋಣಮುಕ್ತನಾದವನು ಮತ್ತೆ ಸಾಲದಲ್ಲಿ ಬೀಳದಿದ್ದರೆ ಮುಂದೆ ಧನವಂತನಾಗಬಹುದು. ಹಾಗೆಯೇ ದುಃಖನಿವೃತ್ತಿಯನ್ನು ಮಾಡಿಕೊಂಡವನು ಮತ್ತೆ ದುಃಖದ ಹಾದಿಯನ್ನು ಹಿಡಿಯದಿದ್ದರೆ ಮುಂದೆ ಅವನು ಸುಖಿಯಾಗಬಹುದು. ಆದರೆ

"तृषा शुष्यत्यास्ये पिबति सलिलं स्वादु सुरभि।
क्षुधार्थस्सन् शालीन् कवलयति शाकादिवलितान्॥"

ಎಂಬ ಭರ್ತೃಹರಿವಚನದಂತೆ ನಾವು ನೀರಡಿಸಿದಾಗ ನೀರಿನಿಂದ ನೀರಡಿಕೆಯನ್ನೂ ಮತ್ತು ಹಸಿದಾಗ ಅನ್ನದಿಂದ ಹಸಿವೆಯನ್ನೂ ಕಳೆದುಕೊಂಡರೂ ತತ್‌ಕ್ಷಣದಲ್ಲಿ ಮತ್ತೊಂದೇನಾದರೂ ಇಚ್ಛೆಯು ನಮ್ಮಲ್ಲಿ ಹುಟ್ಟಿ ಪುನಃ ನಮ್ಮನ್ನು ದುಃಖಿತರನ್ನು ಮಾಡುವದು. ನನ್ನ ಒಬ್ಬ ಸ್ನೇಹಿತನು ಒಂದು ದಿನ ಅತ್ಯಂತ ಖಿನ್ನನಾಗಿ ಕುಳಿತಿದ್ದನು. ಆಗ ನಾನು "ನಿನ್ನ ಖಿನ್ನತೆಗೆ ಕಾರಣವೇನು?" ಎಂದು ಕೇಳಲು "ನಾನು ತಲೆನೋವಿನಿಂದ ದುಃಖಿತನಾಗಿದ್ದೇನೆ" ಎಂದು ಹೇಳಿದನು. "ನಿನ್ನ ದುಃಖಕ್ಕೆ ತಲೆನೋವು ಕಾರಣವಾಗಿದ್ದರೆ ಈ ತಲೆನೋವು ಬರುವ ಮುಂಚೆ ಎಲ್ಲ ನೀನು ಸುಖವಾಗಿ ಇದ್ದೆಯೊ?" ಎಂದು ನಾನು ಕೇಳಲು ಆತನು "ಆಗ ತಲೆನೋವಲ್ಲದ ಇನ್ನಾವುದೋ ಒಂದು ಕಾರಣದಿಂದ ದುಃಖಿತನಾಗಿರುತ್ತಿದ್ದೆನು" ಎಂದು ಉತ್ತರವನ್ನು ಕೊಟ್ಟನು. "ಹಾಗಾದರೆ ನಿನ್ನ ದುಃಖಕ್ಕೆ ತಲೆನೋವೇ ಕಾರಣವೆಂದು ಹೇಗೆ ಹೇಳುತ್ತಿ?" ಎಂದು ಪ್ರಶ್ನೆಮಾಡಲು ಆತನು ನಕ್ಕನು. ಹೀಗೆ ಚದರಂಗದ ಆಟದಲ್ಲಿ ಬಿದ್ದವನ ಅರಸು ಒಂದು ಶಹಾ ತಪ್ಪಿಸಿಕೊಳ್ಳುವದರಲ್ಲಿ ಇನ್ನೊಂದು ಶಹಾಕ್ಕೆ ಗುರಿಯಾಗುವಂತೆ ಒಂದು ದುಃಖದಿಂದ ಪಾರಾಗುವಷ್ಟರಲ್ಲಿ ಮತ್ತೊಂದು ದುಃಖವು ನಮ್ಮನ್ನು ಬೆನ್ನುಹತ್ತುತ್ತಿರುವದು. ಯಾವದಾದರೂ ಒಂದುವಸ್ತುವಿನ ಇಚ್ಛೆಯಿಂದಲೇ ನಾವು ದುಃಖಿತರಾಗಿರುವೆವು. ಇಷ್ಟವಸ್ತುವು ದೊರೆತಕೂಡಲೆ ತಾತ್ಕಾಲಿಕದುಃಖನಿವೃತ್ತಿಯಾದರೂ ತತ್‌ಕ್ಷಣವೇ ಮತ್ತೊಂದು ವಸ್ತುವಿನ ಇಚ್ಛೆಯು ನಮ್ಮಲ್ಲಿ ಹುಟ್ಟಿ ಮತ್ತೆ ನಮ್ಮನ್ನು ದುಃಖದಲ್ಲಿ ಕೆಡಹುವದು. ಆದುದರಿಂದಲೇ

"न दृष्टात्तत्सिद्धिर्निवृत्तेरनुवृत्तिदर्शनात्"

ಎಂಬ ಸೂತ್ರದಿಂದ ಶ್ರೀಕಪಿಲಮಹರ್ಷಿಗಳು ಹೇಳಿರುವಂತೆ ಸಂಸಾರದಲ್ಲಿ ಯಾವ ವಸ್ತುವಿನಿಂದಲೂ ದುಃಖದ ಆತ್ಯಂತಿಕನಿವೃತ್ತಿಯಾಗುವದಿಲ್ಲ. ಆದಕಾರಣ ಋಣದಿಂದ ಸಂಪೂರ್ಣಮುಕ್ತನಾಗದವನು ಧನವಂತನಾಗದಂತೆ ದುಃಖದಿಂದ ಸಂಪೂರ್ಣವಾಗಿ ಬಿಡುಗಡೆ ಹೊಂದದ ನಾವು ಸುಖಿಗಳಾಗಲಾರೆವು. ಇಂಥ ನಮಗೆ ಸುಖವೆಂಬುದು ಕನಸಿನಲ್ಲಿ ಕೂಡ ಗೊತ್ತಿಲ್ಲ. ಆಯಾ ವಸ್ತುಗಳ ಇಚ್ಛೆಯ ದುಃಖದಿಂದ ಬೆಂದು ಬೆಂಡಾಗಿ ನಡುನಡುವೆ ಇಷ್ಟವಸ್ತುಗಳ ಪ್ರಾಪ್ತಿಯಿಂದಾಗುವ ಕ್ಷಣಿಕ ದುಃಖನಿವೃತ್ತಿಗೆ ಸುಖವೆಂದು ಭ್ರಮಿಸುತ್ತಿರುವೆವು.

ನಮ್ಮ ಮನಸ್ಸನ್ನು ಮೋಹಗೊಳಿಸಿ ಇಚ್ಛೆಯನ್ನು ಹುಟ್ಟಿಸಿ ದುಃಖಕ್ಕೆ ಗುರಿಮಾಡುತ್ತಿರುವ ಪ್ರಾಪಂಚಿಕಪದಾರ್ಥಗಳಿಗೆ ಸುಖಸಾಧನಗಳೆನ್ನುವದಕ್ಕಿಂತಲೂ ದುಃಖಸಾಧನಗಳೆನ್ನುವದು ಹೆಚ್ಚು ಒಪ್ಪುವದು. ಇಂಥ ಹೊಸ ಹೊಸ ಚಮತ್ಕಾರದ ಪದಾರ್ಥಗಳನ್ನು ಹುಟ್ಟಿಸಿಕೊಡುತ್ತಿರುವ ಭೌತಿಕಶಾಸ್ತ್ರಗಳು ನಿಜವಾದ ಸುಖಕ್ಕೆ ವಿಘ್ನಕಾರಿಗಳೆಂದು ಹೇಳಬಹುದು. ಈ ಭೌತಿಕಶಾಸ್ತ್ರಗಳಿಂದ ಮೋಹಕವಾದ ಅನೇಕ ವಸ್ತುಗಳು ಹೆಚ್ಚಾಗಿ ನಾವೆಲ್ಲರೂ ಅವುಗಳ ಮುಂದೆ ಬಾಯಿತೆರೆದುಕೊಂಡು ಕೂಡುತ್ತಿರುವೆವು. ಆಹುತಿಯಿಂದ ಅಗ್ನಿಯು ಶಾಂತವಾಗದೆ ಹೆಚ್ಚು ಹೆಚ್ಚು ಬೆಳೆಯುತ್ತಿರುವ ಹಾಗೆ ಈ ವಸ್ತುಗಳನ್ನು ಉಪಭೋಗಿಸುತ್ತಿರುವವರ ಇಚ್ಛೆಯು ಕೂಡ ಅಧಿಕಾಧಿಕವಾಗಿ ವರ್ಧಿಸುತ್ತಿರುವುದರಿಂದ ಅವರಿಗೆ ತೃಪ್ತಿ ಇಲ್ಲ. ಇವುಗಳನ್ನು ಬಯಸಿ ಹೊಂದದೆ ಇದ್ದವರಿಗಂತು ತೃಪ್ತಿ ಇಲ್ಲವೆಂದು ಹೇಳಬೇಕಾದುದೇ ಇಲ್ಲ. ಹೀಗೆ ಎರಡುಬಗೆಯಿಂದಲೂ ಅತೃಪ್ತಿಯನ್ನೇ ಉಂಟುಮಾಡುತ್ತಿರುವ ಸಾಂಸಾರಿಕವಸ್ತುಗಳಲ್ಲಿ ಕೂಡ ಅವುಗಳಿಂದಾಗುವ ಕ್ಷಣಿಕದುಃಖನಿವೃತ್ತಿಗೆ ಮೆಚ್ಚಿ ನಾವು ಪ್ರವರ್ತಿಸುತ್ತಿರುವದನ್ನೂ ಮತ್ತು ಅಂಥ ದುಃಖನಿವೃತ್ತಿಯಿಂದ ನಾವು ತೃಪ್ತರಾಗದೆ ಮತ್ತೂ ಅತ್ತಿತ್ತ ಹರಿದಾಡುತ್ತಿರುವದನ್ನೂ ಪರೀಕ್ಷಿಸಿ ನೋಡಲಾಗಿ ನಾವು ಯಾವಾಗಲೂ ಸುಖವನ್ನೇ ಹುಡುಕುತ್ತೇವೆಂದು ಸ್ಪಷ್ಟವಾಗು-

ವದು. ಆ ನಿಜವಾದ ಸುಖವು ಒಮ್ಮೆ ನಮಗೆ ಹತ್ತಿತೆಂದರೆ ಸಂಪೂರ್ಣವಾಗಿ ತೃಪ್ತಿಯನ್ನುಂಟುಮಾಡಿ ವಿಷಯಗಳ ಇಚ್ಛೆಯನ್ನು ಎಂದೆಂದಿಗೂ ತಲೆದೋರದಂತೆ ಮಾಡುವಂಥಾದ್ದೇ ಇರಬೇಕೆಂದು ವ್ಯಕ್ತವಾಗುವದು. ಯಾವದಾದರೂ ಸಾಂಸಾರಿಕವಿಷಯವು ನಮಗೆ ಸಾಕಾಗಿ ಬೇಸರವಾಗುವಾಗ ಇನ್ನೂ ಹೆಚ್ಚು ಮೆಚ್ಚಿಕೆಯಾಗುವ ಮತ್ತೊಂದು ಪದಾರ್ಥವನ್ನು ಸಂಪಾದಿಸಬೇಕೆಂಬ ಬಯಕೆಯನ್ನು ಹುಟ್ಟಿಸಿಯೇ ಹೋಗುವದು. ವಿಷಯಗಳಿಂದ ಸಿಕ್ಕದೆ ಇರುವ ಯಾವದೋ ಒಂದು ಆನಂದವನ್ನು ನಾವು ಹುಡುಕುತ್ತಿದ್ದೇವೆಂಬುದಕ್ಕೆ ಈ ಮಾತೇ ಬಲಿಷ್ಠವಾದ ಪ್ರಮಾಣವು. ಈ ಆನಂದವನ್ನು ಹುಡುಕುವದೆಂಬುದು ಎಲ್ಲ ಮನುಷ್ಯರಲ್ಲಿಯೂ ಅವರು ಮಾಡುವ ಎಲ್ಲ ಆಲೋಚನೆಗಳಲ್ಲಿಯೂ ಎಲ್ಲ ಕಾರ್ಯಗಳಲ್ಲಿಯೂ ಇದ್ದೇ ಇರುವದರಿಂದ ಸರ್ವರೂ ಹೀಗೆ ಹುಡುಕುತ್ತಿರುವ ಸುಖದ ಪರಿಚಯವೂ ಮತ್ತು ಅನುಭವವೂ ಪೂರ್ವದಲ್ಲಿ ಅವರವರಿಗೆಲ್ಲ ಇತ್ತೆಂದು ನಾವು ಸಿದ್ಧಮಾಡಿಕೊಳ್ಳಬೇಕಾಗುವದು.

ಇಂಥ ನಿಜವಾದ ಸುಖವು ಈ ಗೀತಾಶಾಸ್ತ್ರದ ಮುಖ್ಯ ಪ್ರಯೋಜನವಾಗಿರುವದರಿಂದ ಈ ಗ್ರಂಥವು ಸರ್ವರಿಗೂ ಉಪಯುಕ್ತವಾಗಿರುವದು; ಆದಕಾರಣ ಈ ಭಗವದ್ಗೀತಾದೇವತೆಗೆ ಶರಣುಹೋಗಲಿಕ್ಕೆ ಮನುಷ್ಯಮಾತ್ರಕ್ಕೆಲ್ಲ ಅಧಿಕಾರವಿದ್ದರೂ ಸುದೈವಶಾಲಿಗಳಾದವರು ಮಾತ್ರ ಇದರ ಸಹಾಯದಿಂದ ತಮ್ಮ ಜನ್ಮದ ಸಾರ್ಥಕತೆಯನ್ನು ಮಾಡಿಕೊಳ್ಳುವರು.

"यावन्नानुग्रहः साक्षाज्जायते परमेश्वरात्।
तावन्न सद्गुरुं कश्चित्सच्छास्त्रमपि विंदति॥"

ಎಂದು ಯೋಗವಾಸಿಷ್ಠದಲ್ಲಿ ಹೇಳಿರುವಂತೆ ಭಗವದನುಗ್ರಹವಾಗುವವರೆಗೂ ಯಾರಿಗೂ ಸಚ್ಛಾಸ್ತ್ರದಲ್ಲಿ ಪ್ರವೃತ್ತಿಯಾಗುವದಿಲ್ಲ; ಆದುದರಿಂದ ಇದನ್ನು ಓದುವದಕ್ಕೆ ಯಾರಿಗೆ ಇಚ್ಛೆ ಹುಟ್ಟುತ್ತದೊ ಅವರೇ ಇದಕ್ಕೆ ಅಧಿಕಾರಿಗಳೆಂದು ಹೇಳಬೇಕಾಗಿರುವದು. ಇಚ್ಛೆಯೆಂಬುದೇ ದೊಡ್ಡ ಅಧಿಕಾರವು.

"मनोरथानामगतिर्न विद्यते"

ಎಂದೂ "Where there is a will there is a way" ಎಂದೂ ಅಂದಿರುವಂತೆ ಇಚ್ಛೆಯಿದ್ದರೆ ಮಾರ್ಗವು ದೊರೆತೇ ದೊರೆಯುವದು. ಇಚ್ಛೆಯಿಲ್ಲದಿದ್ದರೆ ಮುಂದೆ ಅಮೃತದ ಪ್ರವಾಹವು ಹರಿಯುತ್ತಿದ್ದರೆ ತಾನೆ ಏನು? ಆದಕಾರಣ ಆಸ್ಥಾವಂತರಾದ ಮುಮುಕ್ಷುಗಳೇ ಗೀತಾಶಾಸ್ತ್ರಕ್ಕೆ ಯೋಗ್ಯರಾದ ಅಧಿಕಾರಿಗಳು. ಅಂಥವರಿಗೇನೇ ಇದು ಕಾರ್ಯಕಾರಿಯಾಗಿ ಫಲಿಸುವದು. ಇಚ್ಛೆಯು ಬಲವಾಗಿಲ್ಲದ ಹಾಗೆಲ್ಲ ಪ್ರಯೋಜನವು ವಿಲಂಬವಾಗುವದು. ಆದರೂ ಗೀತಾಪರಿಶೀಲನರೂಪವಾದ ಸದ್ವ್ಯಾಸಂಗವು ಎಂದಿಗೂ ಸುಮ್ಮನೆ ಹೋಗಲಾರದು. ಏನೂ ಇಚ್ಛೆಯಿಲ್ಲದ ಪಾಮರನ ಕಿವಿಯ ಮೇಲಾದರೂ ಗೀತೋಪದೇಶದ ಗಾಳಿಯು ಹಾದುಹೋದರೂ ಸಾಕು. ಅಷ್ಟರಿಂದ ಅದರ ವಿಷಯಕ್ಕೆ ಅವನಿಗೆ ಅಲ್ಪಸ್ವಲ್ಪವಾದರೂ ಆಸ್ಥೆಯು ಹುಟ್ಟದೆ ಇರಲಾರದು. ಮುಂದೆ ಅದೇ ಆಸ್ಥೆಯ ಅಂಕುರವು ಮೊಳೆತು ಚಿಗತು ಗಿಡವಾಗಿ ಫಲಿಸುವದು; ಇರಲಿ.

ಈ ಗೀತಾಶಾಸ್ತ್ರವು ಪರಮಾನಂದಪ್ರಾಪ್ತಿಯ ಉಪಾಯವನ್ನು ಬೋಧಿಸುವದೆಂದು ಹಿಂದೆ ಹೇಳಿದೆಯಷ್ಟೆ. ಆ ಉಪಾಯವು ಯಾವದೆಂಬದು ನಾವು ಚನ್ನಾಗಿ ವಿಚಾರಿಸತಕ್ಕ ಅಂಶವಾಗಿದೆ.

"बाह्यस्पर्शेष्वसक्तात्मा विंदत्यात्मनि यत्सुखम् ।
स ब्रह्मयोगयुक्तात्मा सुखमक्षय्यमश्नुते॥"

ಎಂಬೀ ಶ್ಲೋಕದಲ್ಲಿ ಭಗವಂತನು—ವಿಷಯಗಳಲ್ಲಿ ಆಸಕ್ತನಾಗದೆ ಬ್ರಹ್ಮನಿಷ್ಠನಾದವನು ಶಾಶ್ವತವಾದ ಸುಖವನ್ನು ಪಡೆಯುವನು—ಎಂದು ಸ್ಪಷ್ಟವಾಗಿ ಹೇಳಿದಾನೆ; ಮತ್ತು ಅದರ ಮುಂದೆಯೇ ಇರುವ

"ये हि संस्पर्शजा भोगा दुःखयोनय एव ते।
आद्यंतवंतः कौंतेय न तेषु रमते बुधः॥"

ಎಂಬ ಶ್ಲೋಕವನ್ನು ನೋಡಿದರೆ ವಿಷಯೇಂದ್ರಿಯಸಂಸ್ಪರ್ಶದಿಂದ ಜನಿಸುವ ಉಪಭೋಗಗಳು ಆದಿ ಮತ್ತು ಅಂತವುಳ್ಳವುಗಳೂ ದುಃಖಕ್ಕೆ ಕಾರಣವಾದಂಥವುಗಳೂ ಆದುದರಿಂದ ವಿವೇಕಿಯಾದವನು ಅವುಗಳಲ್ಲಿ ಆಸಕ್ತನಾಗುವದಿಲ್ಲವೆಂದು ತಿಳಿದುಬರುತ್ತದೆ. ಈ ವಿಷಯವನ್ನು ವಿಚಾರಿಸೋಣ.

"अनित्यमसुखं लोकमिमं प्राप्य भजस्व माम्"

ಎಂದು ಭಗವಂತನು ಅಂದಿರುವಂತೆ ಈ ಲೋಕವು ಸುಖರಹಿತವಾಗಿರುವದೆಂದು ಎಲ್ಲ ವಿಚಾರಶಾಲಿಗಳೂ ಒಪ್ಪುತ್ತಾರೆ ಮತ್ತು ಸಂಸಾರದಲ್ಲಿ ಸುಖವಿಲ್ಲವೆಂಬುದು ಒಮ್ಮೊಮ್ಮೆ ನಮ್ಮೆಲ್ಲರಿಗೂ ಕೂಡ ಅನುಭವಕ್ಕೆ ಬರುತ್ತದೆ; ಆದರೆ ಈ ನಿಶ್ಚಯವು ದೃಢವಾಗಿ ನಿಲ್ಲುವದಿಲ್ಲ. ಒಂದೊಂದು ಸಲ ನಮ್ಮಷ್ಟಕ್ಕೆ ನಾವೇ "ನಾವು ಎಷ್ಟು ಸುಖಿಗಳಾಗಿದೇವೆ!" ಎಂದು ಆನಂದದಿಂದ ಹಿಗ್ಗುತ್ತೇವೆ. ಒಂದೊಂದು ಸಲ ಅದೇ ನಾವೇ "ಎಷ್ಟು ದುಃಖಿಗಳಾಗಿದೇವೆ!" ಎಂದು ದೈನ್ಯದಿಂದ ಕೊರಗುತ್ತೇವೆ. ಹೀಗಾಗುವದು ಸ್ವಾಭಾವಿಕವಾಗಿದೆ. ಸೃಷ್ಟಿಯ ರಚನೆಯೇ ಹೀಗಿದೆ. ಸಂಸಾರಸ್ಥಿತಿಯನ್ನು ವಿಚಾರಿಸಹೋದರೆ—

"न जाने संसारः किममृतमयः किमु विषमयः"

ಎಂದು ಶ್ರೀಭರ್ತೃಹರಿಮುಖದಿಂದ ಹೊರಟಂತೆ ನಮ್ಮ ಬಾಯಿಂದಲೂ ಉದ್ಗಾರವು ಹೊರಬೀಳಬಹುದು. ಶೋಧಿಸಿದರೆ ಇದರ ಕಾರಣವು ಕಂಡುಬರುವದು.

"श्रद्धातुं सुखदुःखयोरनुचितं द्वंद्वं यदेतत्त्वया।
निश्चेतव्यमिदं तया ननु मनो भोग्यार्थसंबंधतः॥
यातारो विकृतिं सदैव विषयास्त्वंच प्रकृत्याचलं।
यस्मात्स्यादधुना सुखं निमिषतो जायेत दुःखं ततः॥"

ಎಂದು ನಾನು ಮನೋವಿಜ್ಞಪ್ತಿಮಾಲಿಕೆಯಲ್ಲಿ ಅಂದಿರುವಂತೆ ನಮಗೆ ಇಷ್ಟ-

ವಾದ ವಸ್ತುವಿನ ಸಂಯೋಗಕ್ಕೆ ಮತ್ತು ಅನಿಷ್ಟವಾದ ವಸ್ತುವಿನ ವಿಯೋಗಕ್ಕೆ ನಾವು ಸುಖವೆನ್ನುತ್ತೇವೆ; ಅಲ್ಲದೆ ಅನಿಷ್ಟವಾದ ವಸ್ತುವಿನ ಸಂಯೋಗಕ್ಕೆ ಮತ್ತು ಇಷ್ಟವಾದ ವಸ್ತುವಿನ ವಿಯೋಗಕ್ಕೆ ದುಃಖವೆನ್ನುತ್ತೇವೆ; ಆದರೆ ಒಂದು ವಸ್ತುವು ನಮಗೆ ಯಾವಾಗಲೂ ಇಷ್ಟವಾಗಿಯೇ ಅಥವಾ ಅನಿಷ್ಟವಾಗಿಯೇ ಉಳಿದೀತೆಂದು ನಿಯಮವಿಲ್ಲ. ಈಗ ನಮಗೆ ಇಷ್ಟವಾದುದು ಇನ್ನೊಂದು ಕ್ಷಣದಲ್ಲಿಯೇ ಅನಿಷ್ಟವಾಗಬಹುದು. ಅಥವಾ ಈ ವೇಳೆಯಲ್ಲಿ ಅನಿಷ್ಟವಾದುದು ಇನ್ನೊಂದು ನಿಮಿಷದಲ್ಲಿಯೇ ಇಷ್ಟವಾಗಬಹುದು. ಪದಾರ್ಥವು ಇಷ್ಟ ಮತ್ತು ಅನಿಷ್ಟವಾಗುವದಕ್ಕೆ ಅದಕ್ಕೂ ನಮ್ಮ ಮನಸ್ಸಿಗೂ ಆಗುವ ಸಂಬಂಧವೇ ಕಾರಣವು. ಸಂಸಾರದಲ್ಲಿ ಪ್ರತಿಯೊಂದು ವಸ್ತುವೂ ನಿರಂತರವಾಗಿ ವಿಕಾರವನ್ನು ಹೊಂದುತ್ತಿರುವದರಿಂದ ಮತ್ತು ನಮ್ಮ ಮನಸ್ಸು ಚಂಚಲಾತ್ಮಕವಾಗಿರುವದರಿಂದ ಈ ಎರಡು ಪದಾರ್ಥಗಳ ಸಂಬಂಧವು ಏಕರೂಪವಾಗಿರಲಾರದು. ನಮ್ಮ ಮನಸ್ಸು ಇರುವಂತೆ ಇದ್ದು ಅಷ್ಟರಲ್ಲಿ ಆ ಪದಾರ್ಥಕ್ಕೇನಾದರೂ ವಿಕಾರವಾಗಿ ಅದರಿಂದ ಅದು ನಮಗೆ ಅಪ್ರಿಯವಾಗಬಹುದು; ಅಥವಾ ಆ ಪದಾರ್ಥವು ಇದ್ದಂತೆ ಇರುವಷ್ಟರಲ್ಲಿಯೇ ನಮ್ಮ ಮನಸ್ಸು ಬದಲಾಗಿ ಆ ವಸ್ತು ನಮಗೆ ಅಪ್ರಿಯವಾಗಬಹುದು; ಹೀಗೆ ಅಪ್ರಿಯವಾದುದು ಪ್ರಿಯವಾದರೂ ಆಗಬಹುದು. ಆದುದರಿಂದ ಇದು ಸುಖಕರವಾದುದು ಇದು ದುಃಖಕರವಾದುದು ಎಂದು ಬೆಟ್ಟಿಟ್ಟು ತೋರಿಸುವಂತೆ ಯಾವದೂ ಇಲ್ಲ. ಹೇಗೇ ಇರಲಿ ಸಂಸಾರದಲ್ಲಿ ಸುಖವುಂಟೊ ಇಲ್ಲವೊ ನೋಡುವ. ನಾವೆಲ್ಲರೂ ನೋಡುತ್ತಿರುವಂತೆ ಪ್ರತಿಯೊಂದು ಪ್ರಾಣಿಯೂ ಸಂಸಾರದಲ್ಲಿ ಸುಖಕ್ಕಾಗಿ ಯಾವಾಗಲೂ ಪ್ರವರ್ತಿಸುತ್ತಿರುವದರಿಂದ ಸಂಸಾರದಿಂದ ಅಷ್ಟಿಷ್ಟಾದರೂ ಸುಖವಾಗುತ್ತಿರಬೇಕೆಂದು ಒಪ್ಪಬೇಕಾಗುವದು. ಯಾರೋ ಕೇವಲ ಕ್ಷುಲ್ಲಕರಾದವರು ಮಾತ್ರ ಸಂಸಾರದಲ್ಲಿ ಪ್ರವರ್ತಿಸುತ್ತಿದ್ದರೆ ಆಗ ಮಾತ್ರ ಸಂಸಾರದಲ್ಲಿ ಸುಖವಿಲ್ಲವೆಂದರೂ ಅನ್ನಬಹುದಾಗಿತ್ತು. ಸರ್ವವಿದ್ಯಾವಿಶಾರದರೂ, ಗಜಾಂತೈಶ್ವರ್ಯಶಾಲಿಗಳೂ, ವಿಸ್ತಾರವಾದ ರಾಜ್ಯದ ಆಗುಹೋಗುಗಳಿಗೆಲ್ಲ ಎದೆಗೊಟ್ಟು ನಿಲ್ಲುವ ಚಾತುರ್ಯವುಳ್ಳ ರಾಜಕಾರ್ಯಧುರಂಧರರೂ,—ಹೆಚ್ಚು ಹೇಳುವ-

ದೇನು?—ರಾಜನನ್ನು ಮೊದಲು ಮಾಡಿಕೊಂಡು ಭಿಕ್ಷುಕನವರೆಗೆ, ಪಂಡಿತನನ್ನು ಮೊದಲುಮಾಡಿಕೊಂಡು ಮೂರ್ಖನವರೆಗೆ ಮತ್ತು ವೃದ್ಧನನ್ನು ಮೊದಲುಮಾಡಿಕೊಂಡು ಶಿಶುವಿನವರೆಗೆ ಯಾರು ನೋಡಿದರೂ ಸಂಸಾರದಲ್ಲಿ ಪ್ರವರ್ತಿಸುತ್ತಿರುವದರಿಂದ ಸಂಸಾರದಲ್ಲಿ ಸುಖವೇ ಇಲ್ಲದಿದ್ದರೆ ಹೀಗೆ ಸರ್ವರಿಗೂ ಅದರಲ್ಲಿ ಪ್ರವೃತ್ತಿಯೇ ಆಗುತ್ತಿರಲಿಲ್ಲ. ಬರೀ ಈ ಅನುಮಾನವೇ ಏಕೆ? ಸಂಸಾರದಲ್ಲಿ ಅಷ್ಟಿಷ್ಟು ಸುಖವು ಸಿಕ್ಕುತ್ತಿರುವದು ನಮ್ಮೆಲ್ಲರಿಗೂ ಅನುಭವಕ್ಕೆ ಬಂದೇ ಬರುತ್ತದೆ. ಸಂಸಾರದಲ್ಲಿ ಸುಖಾನುಭವವಾಗದಿದ್ದರೆ ಸಾಂಸಾರಿಕರಿಗೆ ಸುಖವೆಂಬುದರ ಸ್ವಭಾವವೇ ತಿಳಿಯದೆ ಹೋಗುತ್ತಿತ್ತು. ಹೀಗಿದ್ದರೆ ನಾವು ಸುಖಕ್ಕೆಂದು ಪ್ರಯತ್ನಮಾಡುವ ಅವಕಾಶವೂ ಸಿಕ್ಕುತ್ತಿರಲಿಲ್ಲ. ಇದನ್ನೆಲ್ಲ ಸಮಾಲೋಚನೆ ಮಾಡಿ ನೋಡಿದರೆ ಸಂಸಾರದಲ್ಲಿಯೂ ಎಂಥದ್ದಾದರೂ ಸುಖವುಂಟೆಂದು ಒಡಂಬಡಬೇಕಾಗುವದು. ಆದರೆ ಪ್ರತಿಯೊಂದು ಪ್ರಾಣಿಯೂ ಸುಖಸುಖವೆಂದು ಮತ್ತೂ ಹಂಬಲಿಸುತ್ತ ಪ್ರವರ್ತಿಸುತ್ತಿರುವದನ್ನು ನೋಡಿದರೆ ಸಂಸಾರದಲ್ಲಿ ಅನುಭವಕ್ಕೆ ಬರುವ ಸುಖವು ಮೂಗಿಗೆ ಹಚ್ಚಿದ ತುಪ್ಪದ ಹಾಗೆ ಕೇವಲ ವಾಸನಾಮಾತ್ರವಾಗಿರುವದೆಂದು ತಿಳಿಯಬೇಕಾಗುತ್ತದೆ. ನಮಗೆ ಸಿಕ್ಕುವದು ನಿಜವಾದ ಸುಖವಾಗಿದ್ದರೆ ಮತ್ತೂ ಸುಖಸಾಧನಗಳನ್ನು ಹುಡುಕುವ ಅವಶ್ಯಕತೆಯೇ ಬೀಳುತ್ತಿರಲಿಲ್ಲ. ಇದರ ಮೇಲಿಂದ ಸಿದ್ಧವಾಗುವದೇನಂದರೆ ರಕ್ತಮಾಂಸಗಳ ನಾತದಿಂದ ಮಾತ್ರ ಕೂಡಿರುವ ಒಣ ಎಲುಬನ್ನು ಕಚ್ಚಿಕೊಂಡು ಅದರಿಂದ ರಕ್ತಮಾಂಸಗಳನ್ನು ಪಡೆಯುತ್ತೇನೆಂಬ ಆಶೆಯಿಂದ ನಾಯಿಯು ಅದನ್ನು ಕಟಕಟ ಕಡಿಯುತ್ತ ಅದರದೆಸೆಯಿಂದ ಪೆಟ್ಟಾಗಿ ತನ್ನ ಬಾಯಿಂದಲೇ ರಕ್ತವು ಸೋರಲು ಅದು ಅದೇ ಎಲುಬಿನಿಂದ ಬಂದದ್ದೆಂದು ಭ್ರಮಿಸಿ ಮತ್ತಷ್ಟು ಬಾಯಿನೀರು ಸುರಿಸುತ್ತ ಆ ಎಲುಬನ್ನು ಕಡಿಯುತ್ತಿರುವಂತೆ ವಿಷಯಗಳಿಂದ ಸುಖವಾಗುವದೆಂಬ ಆಶೆಯಿಂದ ನಾವು ಅವುಗಳನ್ನು ಉಪಭೋಗಮಾಡುವದರಿಂದ ಆಶೆಯ ಪ್ರತೀಕಾರವಾಗಿ ನಮ್ಮ ಮನಸ್ಸಿನಲ್ಲಿ ಸುಖವು ತೋರಲು ಅದು ವಿಷಯಗಳಿಂದಲೇ ಆದುದೆಂದು ಭ್ರಮಿಸಿ ಮತ್ತೆಮತ್ತೆ ವಿಷಯಗಳ ಮೇಲೆ ಹೆಚ್ಚು ಪ್ರೇಮದಿಂದ ಹರಿದುಹೊಗುತ್ತಿರುವೆವು.

"ಆಗಲಿ. ಇಚ್ಛೆಯ ಪ್ರತೀಕಾರದ್ವಾರದಿಂದಾದರೂ ವಿಷಯುಗಳು ಸುಖಕ್ಕೆ ಸಾಧನವಾಗುತ್ತಿರುವದರಿಂದ ಸಂಸಾರದಲ್ಲಿ ಸುಖವಿಲ್ಲವೆನ್ನುವದು ಹೇಗೆ?" ಎಂದರೆ ಕೇಳಬೇಕು. ಕಪ್ಪು ಮೋಡಗಳಿಂದ ಕಗ್ಗತ್ತಲೆಯಾಗಿ ಮೇಘಮಂಡಲದ ಗುಡುಗುಡುಧ್ವನಿಯೊಡನೆ ಕೂಡಿ ಮಳೆಯು ಸಂತತಧಾರೆಯಾಗಿ ಸುರಿಯುತ್ತಿರುವ ಒಂದಮಾವಾಸ್ಯೆಯ ರಾತ್ರಿಯಲ್ಲಿ ಹಾದಿಯನ್ನು ಹಿಡಿದುಹೋಗುತ್ತಿರುವ ಒಬ್ಬ ದಾರಿಕಾರನ ಮುಂದೆ ಮಿಂಚುವ ಮಿಂಚನ್ನು ಬೆಳಕೆಂದು ಹೇಳಬಹುದಾದರೂ ಅದು ದಾರಿಕಾರನಿಗೆ ಬೆಳಕುಕೊಟ್ಟು ದಾರಿಯನ್ನು ತೋರಿಸುವದಕ್ಕೆ ಬದಲಾಗಿ ಮೊದಲು ಕಾಣಿಸುತ್ತಿದ್ದ ದಾರಿಯು ಕೂಡ ಕಾಣಿಸದಂತೆ ಮತ್ತಷ್ಟು ಮಬ್ಬುಮಾಡುವದರಿಂದ ಅದು ಅನರ್ಥಕರವಾಗಿ ಪರಿಣಮಿಸುವಂತೆ ಸಂಸಾರದಲ್ಲಿ ವಿಷಯುಗಳಿಂದ ಇಚ್ಛೆಯ ಪ್ರತೀಕಾರವಾಗಿ ಕ್ಷಣಮಾತ್ರ ಸ್ಫುರಿಸುವ ಸುಖಕ್ಕೆ ಸುಖವೆಂದು ಒಪ್ಪಬಹುದಾದರೂ ಅದು ಮತ್ತಷ್ಟು ಸಮಾಧಾನಭಂಗವನ್ನು ಮಾಡುತ್ತಿರುವದರಿಂದ ಅಂಥ ಸುಖವನ್ನು ವಿವೇಕಿಗಳಾದವರು ತುಚ್ಛಮಾಡುವರು.

"यद्यत्प्रियतमं लोके वस्तु मैत्रेय जायते।
तदेव दुःखवृक्षस्य बीजत्वमुपगच्छति"

ಎಂದು ಶ್ರೀವಿಷ್ಣುಪುರಾಣದಲ್ಲಿ ಹೇಳಿರುವಂತೆ ದುಃಖವೃಕ್ಷದ ಬೀಜರೂಪವಾಗಿರುವ ಈ ಸಂಸಾರಸುಖಕ್ಕೆ ಸುಖವೆನ್ನುವದಕ್ಕಿಂತಲೂ ದುಃಖವೆನ್ನುವದೇ ಹೆಚ್ಚು ಶೋಭಿಸುವದು. ಏಕೆಂದರೆ ವೃಕ್ಷವು ಯಾವ ಹೆಸರಿನದೊ ಬೀಜಕ್ಕೂ ಅದೇ ಹೆಸರಿರುವದು. ಆದಕಾರಣ ಸಂಸಾರದ ದುಃಖವೂ ದುಃಖವೆ ಮತ್ತು ಆ ದುಃಖಕ್ಕೆ ಬೀಜರೂಪವಾದ—ನಾವು ಸುಖವೆಂದು ತಪ್ಪಿ ಕರೆಯುತ್ತಿರುವ—ಪದಾರ್ಥವೂ ದುಃಖವೇ ಸರಿ. ಈಪ್ರಕಾರ ದುಃಖಕ್ಕೆ ಕಾರಣವಾಗುತ್ತಿರುವ ಮತ್ತು ಆದಿಯೂ ಅಂತವೂ ಉಳ್ಳ ವಿಷಯೇಂದ್ರಿಯಸಂಯೋಗಜನ್ಯವಾದ ಭೋಗಗಳ ತುಚ್ಛತ್ವವನ್ನು "ये हि संस्पर्शजा भोगा" ಎಂದು ಮೇಲೆ ಬರೆದ ಶ್ಲೋಕದಿಂದ ಭಗವಂತನು ಸ್ಪಷ್ಟೀಕರಿಸಿದ್ದಾನೆ. ಆದಕಾರಣ ನಿಜಾ-

ನಂದರೂಪವಾದ ಪರಮಪುರುಷಾರ್ಥವನ್ನು ಅಪೇಕ್ಷಿಸುವ ವಿವೇಕಿಯಾದ ಪುರುಷನು ಮೊದಲು ಈ ವಿಷಯಗಳಲ್ಲಿ ಮನಸ್ಸು ಹೋಗದಂತೆ ಬಿಗಿಹಿಡಿ-ಯಬೇಕು. ಅಂತಃಕರಣವು ನಿರ್ವಿಷಯಕವಾಗದ ಹೊರತು ನಿಜಸುಖ-ಪ್ರಾಪ್ತಿಯು ಆಗಲಾರದು. ಹೊಲದಲ್ಲಿ ಯಾವದಾದರೂ ಧಾನ್ಯವನ್ನು ಬಿತ್ತಿ ಬೆಳೆದುಕೊಳ್ಳಬೇಕೆಂಬುವನು ಮೊದಲು ಅಲ್ಲಿ ಬೆಳೆದ ಕರಿಕೆ ಮುಂತಾದ್ದನ್ನು ಕಿತ್ತುಹಾಕುವದು ಅಗತ್ಯವಾಗಿರುವಂತೆ ನಿಜಸುಖವನ್ನು ಬೇಡುವವನು ಮೊದಲು ಮನಸ್ಸಿನಿಂದ ವಿಷಯಗಳನ್ನು ಕಿತ್ತುಹಾಕುವದು ಅವಶ್ಯವಾಗಿರು-ವದು. ಮೇಲಕ್ಕೇರಬೇಕೆಂಬ ಮನುಷ್ಯನು ಕೆಳಕ್ಕೆ ಜಾರುವದನ್ನು ಬಿಡ-ಬೇಕು. ಹೆಚ್ಚಿಗೆ ಏನಾದರೂ ಗಳಿಸಬೇಕೆಂಬುವನು ಇದ್ದದ್ದನ್ನು ಕಳೆದು-ಕೊಳ್ಳದೆ ಇರಬೇಕು. ನಾವು ಆಯಾ ವಿಷಯಗಳಿಗೆ ಮೋಹಿತರಾಗಿ ಅವಕ್ಕೆ ಪರವಶರಾಗುವಾಗ ಹೆಚ್ಚಿನ ಸುಖವನ್ನು ಗಳಿಸುವದು ಒಂದು ಕಡೆ ಇರಲಿ; ಇದ್ದ ಸುಖವನ್ನು ಕಳೆದುಕೊಂಡಂತಾಗುವದು. ಏಕೆಂದರೆ ಅವಕ್ಕೆ ಪರವಶ-ರಾಗಿ ವಿಷಯಗಳನ್ನು ಉಪಭೋಗಿಸುವಾಗ "ನಾವು ಅವುಗಳನ್ನು ಉಪ-ಭೋಗಿಸುತ್ತೇವೆ" ಎನ್ನುವದಕ್ಕಿಂತಲೂ "ಅವು ನಮ್ಮನ್ನು ಉಪಭೋಗಿಸು-ತ್ತವೆ" ಎಂಬುದು ಹೆಚ್ಚು ಒಪ್ಪುವದು. ಆದಕಾರಣ ಶ್ರೀಭರ್ತೃಹರಿಕವಿಗಳು "**भोगा न भुक्ता वयमेव भुक्ताः**" ಎಂದಿರುವರು. ಮನೆಯಲ್ಲಿ ಪಕ್ವಾನ್ನ-ವಿಶೇಷಗಳನ್ನು ಮಾಡಿದ ದಿವಸ ನಾವು "ಅಡಿಗೆ ಎಷ್ಟು ಹೊತ್ತಿಗೆ ಸಿದ್ಧವಾ-ಗುವದೊ; ಎಷ್ಟು ಹೊತ್ತಿಗೆ ಪಕ್ವಾನ್ನವು ನಮ್ಮ ಮುಂದೆ ಬಂದು ಬೀಳುವದೊ" ಎಂದು ಬಾಯನೀರು ಕರೆಯುತ್ತ ಅದನ್ನೇ ಹಂಬಲಿಸುತ್ತಿರುವದನ್ನು ನೆನಸಿಕೊಂಡರೆ ಕ್ಷಣಕಾಲ ನಾಲಿಗೆಗೆ ಸವಿಯನ್ನು ಕೊಟ್ಟು ಹೋಗುವ ಪಕ್ವಾನ್ನವನ್ನು ನಾವು ತಿಂದ ಹಾಗಾಯಿತೊ ಅಥವಾ ಎಷ್ಟೋ ದೀರ್ಘಕಾಲ-ದಿಂದ ನಮ್ಮನ್ನು ತಮ್ಮಕಡೆಗೆ ಆಕರ್ಷಣೆಮಾಡಿಕೊಂಡಿದ್ದ ಆ ಪಕ್ವಾನ್ನವೇ ನಮ್ಮನ್ನು ತಿಂದ ಹಾಗಾಯಿತೊ ತಿಳಿಯಬರುವದು. ಹೀಗೆ ಯಾವದಾದರೂ ವಿಷಯದಿಂದ ಸುಖವನ್ನು ತೆಗೆದುಕೊಳ್ಳಲಿಕ್ಕಾಗಿ ಅದರ ಕಡೆಗೆ ಹೋಗೋ-ಣವೇ ಅದಕ್ಕೆ ನಾವು ವಶವಾದಂತಾಗುವದು. ಪೃಥ್ವೀಪತಿಯಾದರೂ ತನ್ನ ಸುಖಕ್ಕಾಗಿ ಶಬ್ದಸ್ಪರ್ಶ ರೂಪರಸಗಂಧಗಳೆಂಬ ಪಂಚವಿಷಯಗಳನ್ನು ಆಶ್ರ-

ಯಿಸಿದರೆ ಅವನು ಐದುಮನೆಗಳಿಗೆ "भवती भिक्षां ददातु" ಎಂದು ಜೋಳಿಗೆಯನ್ನು ಹಿಡಿದುಕೊಂಡು ಹೋಗುವ ಮಾಧುಕರೀವೃತ್ತಿಯವನಂತೆ ಆಗುವನು. ನಮ್ಮ ಕಣ್ಣಿಗೆ ಅವನು ಅರಸನಾದರೂ ವಿಷಯಗಳಿಗೆ ಅವನು ದಾಸನೆ. ನಮ್ಮ ದೃಷ್ಟಿಗೆ ಅವನು ಸುಖಿಯೆಂದು ಕಂಡರೂ ವಿಷಯಪರಾಧೀನತೆಯಿಂದ ನಿಟ್ಟುಸಿರುಹಾಕುವದು ಅವನಿಗೇನೂ ಬಿಟ್ಟದ್ದಲ್ಲ. ಆದಕಾರಣ ಸುಖಕ್ಕಾಗಿ ವಿಷಯಗಳನ್ನು ಆಶ್ರಯಿಸುವದೇ ದುಃಖವೆಂಬುದನ್ನರಿತು ನಾವು ನಮ್ಮ ಸ್ಥಾನವನ್ನು ಬಿಟ್ಟು ವಿಷಯಗಳ ಕಡೆಗೆ ಜಾರಿಹೋಗಬಾರದು. ವಿಷಯಗಳಲ್ಲಿ ಸುಖಲೇಶವಾದರೂ ಇಲ್ಲವೆಂಬುದನ್ನು ಮರೆಯದೆ ಯಾವಾಗಲೂ ನೆನಪಿನಲ್ಲಿಟ್ಟುಕೊಂಡಿರಬೇಕು. ವಿಷಯಗಳು ಸುಖದ ಕಾರಣವಲ್ಲವೆಂಬುದನ್ನು ಶಾಸ್ತ್ರಗಳು ಪುನಃ ಪುನಃ ಸಾರಿ ಸಾರಿ ಹೇಳುತ್ತವೆ. ಸುಖಕ್ಕೆ ವಿಷಯಗಳು ಕಾರಣವಾಗಿದ್ದ ಪಕ್ಷದಲ್ಲಿ ವಿಷಯಗಳಿಲ್ಲದಿದ್ದರೆ ಸುಖವಾಗಲೇ ಬಾರದಾಗಿತ್ತು ಮತ್ತು ವಿಷಯಗಳಿದ್ದರೆ ಸುಖವಾಗಿಯೇ ತೀರಬೇಕಾಗಿತ್ತು. ಆದರೆ ನಮ್ಮ ಅನುಭವವನ್ನು ನೋಡಿದರೆ ಗಾಢನಿದ್ರೆಯಲ್ಲಿ ಯಾವವಿಷಯದ ಸಂಬಂಧವೂ ನಮಗೆ ಇಲ್ಲದಿದ್ದರೂ ಸುಖವು ಆಗಿಯೇ ಆಗುವದು ಮತ್ತು ಯಾವದಾದರೂ ಕಾರಣಾಂತರದಿಂದ ನಮ್ಮ ಮನಸ್ಸು ಶಾಂತವಾಗಿಲ್ಲದಾಗ ನಾವು ಎಷ್ಟೋ ಕಾಲದಿಂದ ಬಯಸುತ್ತಿದ್ದ ವಿಷಯವು ಕೂಡ ಸುಖವನ್ನು ಕೊಡಲಾರದು. ಇದರ ಮೇಲಿಂದ ವಿಷಯಗಳು ಸುಖಸಾಧನವಲ್ಲವೆಂಬುದು ಸ್ಪಷ್ಟವಾಗುವದು. ಆದರೂ ನಾವು ಬಯಸಿದ ವಿಷಯವು ಪ್ರಾಪ್ತವಾದಾಗ ಕ್ಷಣಮಾತ್ರ ನಮ್ಮ ಬಯಕೆಯು ತೃಪ್ತವಾಗುವದರಿಂದ ಸುಖದ ಆಭಾಸವಾಗುವದೆಂಬ ಮಾತು ನಿರ್ವಿವಾದವಾಗಿದೆ. ನಮ್ಮ ಮನಸ್ಸು ಸುಖ ಸುಖವೆಂದು ಯಾವದಾದರೂ ವಿಷಯದ ಬೆನ್ನು ಹತ್ತಿ ಓಡಿ ಓಡಿ ದಣಿದಿರುವಾಗ ಆ ವಿಷಯವು ಸಿಕ್ಕಿದಕೂಡಲೆ ಹಿಂದಿರುಗಿ ಬಂದು ಕ್ಷಣಕಾಲ ಸ್ವಸ್ಥಾನದಲ್ಲಿ ವಿಶ್ರಾಂತಿಯನ್ನು ಹೊಂದುತ್ತದೆ. ಹೀಗೆ ಮನಸ್ಸು ಎಷ್ಟು ಹೊತ್ತು ವಿಶ್ರಾಂತಿಯನ್ನು ಹೊಂದುತ್ತದೆಯೊ ಅಷ್ಟು ಹೊತ್ತು ಅದಕ್ಕೆ ಸುಖದ ಭಾಸವಾಗುವದು. ಇದರಿಂದ ತಿಳಿಯಬೇಕಾದ ಸಾರಾಂಶವೇನೆಂದರೆ, ಸುಖವನ್ನು ಕೊಟ್ಟದ್ದು ಆ ವಿಷಯವಲ್ಲ; ಆದರೆ ಆ ಇಚ್ಛೆಯ ನಿವೃತ್ತಿಯು. ಹುರುಕಾದಾಗ

ತುರಿಸಿದರೆ ಸಂತೋಷವಾಗುವಂತೆ ಇಚ್ಛೆಯಾದಾಗ ಇಷ್ಟವಿಷಯದ ಪ್ರಾಪ್ತಿ-ಯಾದರೆ ಸಮಾಧಾನವೆನಿಸುವದು. ಈ ವಿಧದ ಸಮಾಧಾನಕ್ಕಾಗಿ ನಾವಾ-ಗಿಯೇ ನೂರಾರು ಇಚ್ಛೆಗಳನ್ನು ಮಾಡಿಕೊಂಡು ಮತ್ತು ಎಷ್ಟೋ ಪ್ರಯತ್ನ-ಗಳಿಂದ ಆ ಇಚ್ಛೆಗಳನ್ನು ಕಳೆದುಕೊಂಡು "ನಾವು ಸುಖಿಗಳು; ನಾವು ಸುಖಿಗಳು" ಎಂದು ಸುಮ್ಮನೆ ತೋರ್ಪಡಿಸಿಕೊಳ್ಳುತ್ತೇವೆ. ನಮಗೆ ಸುಖದ ಮಾರ್ಗವೆಂದರೆ ಇಚ್ಛೆಯನ್ನು ಬೆಳಸಿಕೊಳ್ಳುವದು ಮತ್ತು ಅದನ್ನು ಕಳೆದು-ಕೊಳ್ಳುವದು ಇದರ ಹೊರತು ಮತ್ತೇನೂ ಗೊತ್ತಿಲ್ಲ. ಯಾವದಾದರೂ ಪಕ್ವಾನ್ನದ ಊಟ ದೊರೆಯುವ ದಿವಸ ನಾವು ಶುಂಠಿಬೆಲ್ಲವನ್ನು ತಿಂದು ಮತ್ತು ಬಹಳ ಹೊತ್ತಿನವರೆಗೂ ನಾಲಿಗೆಯನ್ನು ತಡೆದುಕೊಂಡಿದ್ದು ಹಸಿವೆ-ಯನ್ನು ಹೆಚ್ಚಿಸಿಕೊಂಡು ಅದನ್ನು ಶಾಂತಮಾಡಿಕೊಳ್ಳುತ್ತೇವೆ. ಅಂಥ ಪಕ್ವಾನ್ನವು ನಮಗೆ ಸಿಕ್ಕುವದು ಆದಿನ ತಡವಾಗಿದ್ದ ಸಂದರ್ಭದಲ್ಲಿ ಯಾರಾ-ದರೂ ಏನಾದರೂ ಸಾಮಾನ್ಯವಾದ ಉಪಾಹಾರವನ್ನು ಕೊಡುವದಕ್ಕೆ ಬಂದ-ರೂ ಪಕ್ವಾನ್ನ ದೊರೆಯುವ ಸಮಯಕ್ಕೆ ಎಲ್ಲಿ ಹಸಿವೆಯುಡಗೀತೋ ಎಂದು ಏನನ್ನೂ ತೆಗೆದುಕೊಳ್ಳದೆ ಪಕ್ವಾನ್ನವನ್ನೇ ಹಾರೈಸಿಕೊಂಡಿರುವದು ಎಲ್ಲರಿಗೂ ಅನುಭವಕ್ಕೆ ಬಂದಿರಬಹುದು. ತಿನ್ನುವದರ ಮುಖ್ಯೋದ್ದೇಶವು ಹಸಿವೆ-ಯುಡಗುವದಾದರೆ ಸಾಮಾನ್ಯವಾದ ಉಪಾಹಾರವಾದರೇನು? ಪಕ್ವಾನ್ನವಾದ-ರೇನು? ಹಸಿವೆಯುಡಗಿದರೆ ಸರಿಯಲ್ಲವೆ? ಪಕ್ವಾನ್ನದಿಂದಲೇ ಹಸಿವೆಯನ್ನು ಅಡಗಿಸಬೇಕೆಂಬುದೇನು? ಕೆಲವು ವರ್ತಮಾನಪತ್ರಗಳಲ್ಲಿ ವೀರ್ಯಸ್ತಂಭಕ-ಕಾಮೋದ್ದೀಪಕಗುಳಿಗೆಗಳೆಂದು ಬೇಕಾದಷ್ಟು ಹೊಗಳಿ ಬರೆದಿರುವದನ್ನು ನೋಡುತ್ತೇವೆ. ಇಲ್ಲದ ಕಾಮವನ್ನು ಉದ್ದೀಪನಮಾಡಿ ಆಮೇಲೆ ಅದನ್ನು ತೃಪ್ತಿಮಾಡುವದು ಎಂಥ ಹುಚ್ಚುತನ! ಕಾಮವಿಲ್ಲದೆ ಇರುವಾಗ ಕಾಮವನ್ನು ಹುಟ್ಟಿಸಿ ಅದನ್ನು ಶಾಂತಿಗೊಳಿಸುವ ಸಾಧನವು ದುಃಖಕರವಲ್ಲದೆ ಸುಖಕರ-ವೆಂದು ಹೇಗೆ ಹೇಳಲಾದೀತು? ಹೀಗೆ ನಾವು ಆಶೆಯನ್ನು ಬೆಳಸಿಕೊಂಡು ಅದನ್ನು ಕಳೆದುಕೊಳ್ಳುವದರಲ್ಲಿ ಸುಖವನ್ನು ತೆಗೆದುಕೊಳ್ಳುವದು ಭ್ರಾಂತಿಯೇ ಸರಿ. ವಿಷಯಗಳಿಂದ ಆಶೆಯನ್ನು ತೃಪ್ತಿಪಡಿಸುವದಕ್ಕೆ ಹೋದರೆ ಅದು ಆಗದ ಮಾತು. ಒಬ್ಬ ಕವಿಯು "ಆಶೆಯನ್ನು ಪೂರ್ಣಮಾಡಿ ಹಂಬಲಿಕೆ-

ಯನ್ನು ನಿಲ್ಲಿಸುತ್ತೇನೆಂದು ಯತ್ನಿಸುವದು ತುಪ್ಪವನ್ನು ಸುರಿಯುತ್ತ ಅಗ್ನಿಯನ್ನು ಆರಿಸಹೋದಹಾಗೆ" ಎಂದು ಹೇಳಿದಾನೆ. ಇನ್ನೊಬ್ಬ ಕವಿಯು

"गिरिर्महान् गिरेरब्धिर्महानब्धेर्नभोमहत्।
नभसोपि महद्ब्रह्म ततोप्याशा गरीयसी॥"

ಎಂಬ ಶ್ಲೋಕದ ಮೂಲಕ "ಎಲ್ಲಕ್ಕಿಂತಲೂ ಪರ್ವತವು ದೊಡ್ಡದು; ಅದಕ್ಕಿಂತಲೂ ಸಾಗರವು ದೊಡ್ಡದು; ಅದಕ್ಕಿಂತಲೂ ಆಕಾಶವು ದೊಡ್ಡದು; ಅದಕ್ಕಿಂತಲೂ ಬ್ರಹ್ಮವು ದೊಡ್ಡದು; ಆಶೆಯು ಅದಕ್ಕಿಂತಲೂ ದೊಡ್ಡದು." ಎಂದು ಹೇಳಿದ್ದಾನೆ. ಆದುದರಿಂದ ದುಷ್ಪೂರವಾದ ಆಶೆಯನ್ನು ಪೂರೈಸುತ್ತೇನೆಂಬುದು ಅಸಾಧ್ಯವಾದ ಮಾತು.

"ಹಾಗಾದರೆ ಆಶೆಯನ್ನು ಪೂರ್ಣಮಾಡುವದೂ ಅಸಾಧ್ಯ; ಮತ್ತು ಆಶೆಯನ್ನು ಮಾಡದಿರುವದಂತು ಅಸಾಧ್ಯವೆ. ಹೀಗಾಗಿ ಉಭಯತಸ್ಪಾಶರಜ್ಜುನ್ಯಾಯದಂತೆ ದುಃಖವು ನಮ್ಮನ್ನೇನೂ ಬಿಟ್ಟದ್ದಲ್ಲ" ಎಂದರೆ ಕೇಳಬೇಕು. ಇಚ್ಛೆಯನ್ನು ಶಾಂತಮಾಡುವದಕ್ಕೆ ಇಷ್ಟವಾದ ವಿಷಯಗಳನ್ನು ಆಶ್ರಯಿಸುವದಕ್ಕಿಂತಲೂ ಇನ್ನೊಂದು ಶ್ರೇಯಸ್ಕರವಾದ ಮಾರ್ಗವಿದೆ. ಅದೇನೆಂದರೆ,

"सुखमात्यंतिकं यत्तद्बुद्धिग्राह्यमतींद्रियम्"

ಎಂಬ ವಾಕ್ಯದಿಂದ ಭಗವಂತನು ಅತೀಂದ್ರಿಯವಾದ ಮತ್ತು ಬುದ್ಧಿಗ್ರಾಹ್ಯವಾದ ಸುಖವು ಆತ್ಯಂತಿಕವೆಂದು ಹೇಳಿದಂತೆ ಬುದ್ಧಿಯನ್ನು ಆಶ್ರಯಿಸುವದು. ಹೀಗೆ ಇಂದ್ರಿಯಗಳಿಂದ ಸುಖವನ್ನು ಹೊಂದದೆ ಬುದ್ಧಿಯಿಂದ ಸುಖವನ್ನು ಹೊಂದುವದು ಶಾಶ್ವತಸುಖದ ದಾರಿಯು. ಆದಕಾರಣ ಭಗವಂತನು

"मात्रास्पर्शास्तु कौंतेय शीतोष्णसुखदुःखदाः।
आगमापायिनोऽनित्यास्तांस्तितिक्षस्व भारत॥"

ಎಂಬ ಶ್ಲೋಕದಲ್ಲಿ ಅರ್ಜುನನಿಗೆ "ವಿಷಯೇಂದ್ರಿಯಸಂಯೋಗಗಳು ಶೀತೋಷ್ಣಸುಖದುಃಖಗಳನ್ನು ಕೊಡುವಂಥವೂ, ಬರುವಿಕೆಯೂ ಹೋಗುವಿಕೆ-

ಯೂ ಉಳ್ಳಂಥವೂ ಮತ್ತು ಅನಿತ್ಯವಾದಂಥವೂ ಆಗಿವೆ. ಆದಕಾರಣ ಅವುಗಳನ್ನು ಸಹಿಸು" ಎಂದು ಹೇಳಿ ಮುಂದೆ

"यं हि न व्यथयंत्येते पुरुषं पुरुषर्षभ।
समदुःखसुखं धीरं सोऽमृतत्वाय कल्पते॥"

ಎಂಬ ಶ್ಲೋಕದಿಂದ "ಯಾವ ಮನುಷ್ಯನು ವೈಷಯಿಕಸುಖದುಃಖಗಳನ್ನು ಸಮವಾಗಿ ತಿಳಿಯುತ್ತ ಮತ್ತು ಧೀರನಾಗಿ ಈ ವಿಷಯೇಂದ್ರಿಯಸಂಯೋಗಗಳಿಂದ ಚಂಚಲಪಡುವದಿಲ್ಲವೊ ಅವನು, ಮೋಕ್ಷಕ್ಕೆ ಸಮರ್ಥನಾಗುತ್ತಾನೆ" ಎಂದು ಹೇಳಿದ್ದಾನೆ. ಇದರ ಮೇಲಿಂದ ನಮ್ಮ ಮನಸ್ಸು ವಿಷಯಜನಿತವಾದ ಸುಖದಿಂದ ಅಥವಾ ದುಃಖದಿಂದ ಎಳೆಯಲ್ಪಡದೆ ಸಮತೋಲವಾಗಿ ಹಿಡಿಯಲ್ಪಟ್ಟರೆ ನಾವು ಶಾಶ್ವತಪರಮಾನಂದರೂಪವಾದ ಮೋಕ್ಷವನ್ನು ಹೊಂದಲಿಕ್ಕೆ ಯೋಗ್ಯರಾಗುವೆವೆಂದು ಸ್ಪಷ್ಟವಾಗಿ ವ್ಯಕ್ತವಾಗುವದು. ಏನೇ ಬರಲಿ; ಅಥವಾ ಏನೇ ಹೋಗಲಿ; ಅದರಿಂದ ಹಿಗ್ಗದೆ ಅಥವಾ ಕುಗ್ಗದೆ ಮನಸ್ಸನ್ನು ಸಮತೋಲವಾಗಿ ಇಟ್ಟುಕೊಂಡರೆ ಆಗುವ ಸಮಾಧಾನಕ್ಕೆ ಎಣೆಯುಂಟೆ? ವಿಷಯಗಳ ಬೆನ್ನುಹತ್ತಿ ಹೋಗಿ ಅವುಗಳಿಗೆ ವಶರಾಗಿ ಅದರಿಂದ ಇಚ್ಛೆಯನ್ನು ಕಳೆದುಕೊಳ್ಳುವದಕ್ಕೂ ಮತ್ತು ಹೀಗೆ ಇಚ್ಛೆಯು ಹರಿದುಹೋಗದಂತೆ ಮನಸ್ಸನ್ನು ಸಮತೋಲವಾಗಿ ಹಿಡಿಯುವದರಿಂದ ಇಚ್ಛೆಯನ್ನು ಕಳೆದುಕೊಳ್ಳುವದಕ್ಕೂ ತುಲನಾಮಾಡಿ ನೋಡಿದರೆ ಭೂಮಿಗೂ ಆಕಾಶಕ್ಕೂ ಇರುವಷ್ಟು ಅಂತರವು ಕಂಡುಬರದೆ ಇರಲಾರದು. ಸುಖದುಃಖವೊದಲಾದ ದ್ವಂದ್ವಗಳ ಸೆಳೆತಕ್ಕೆ ದಕ್ಕಗೊಡದೆ ಮನಸ್ಸನ್ನು ಏಕಪ್ರಕಾರವಾಗಿ ಸಮತ್ವದಲ್ಲಿಟ್ಟುಕೊಂಡಿರಬಲ್ಲ ಮಹನೀಯರಿಗಾಗುವ ಸುಖವಿನ್ನೆಂಥದ್ದೊ! ಅದು ನಮ್ಮ ತಿಳುವಳಿಕೆಗೆ ಬಹುದೂರವಾಗಿರುವದು. ಅದರ ತನಕ ಏಕೆ? ವಿಷಯಗಳ ಮೇಲೆ ಇಚ್ಛೆಯಾದಾಗ ಆ ವಿಷಯಗಳನ್ನು ಉಪಭೋಗ ಮಾಡಿ ಪಡೆಯುವ ಆನಂದಕ್ಕೂ ಆ ಇಚ್ಛೆಯನ್ನೇ ವಿಚಾರದಿಂದ ಹೊಡೆದುಹಾಕಿ ಆ ಮೂಲಕ ಪಡೆಯುವ ಆನಂದಕ್ಕೂ ನಮ್ಮ ಅನುಭವದಲ್ಲಿ ತೋರುವ ವ್ಯತ್ಯಾಸದ ಕಡೆಗೇ ಲಕ್ಷ್ಯಕೊಟ್ಟು ನೋಡೋಣ. ಒಂದುಕಡೆ ನಾಟಕ ನಡೆಯುತ್ತಿರುವಾಗ

ಒಬ್ಬನಿಗೆ ಅದನ್ನು ನೋಡಬೇಕೆಂಬ ಇಚ್ಛೆ ಹುಟ್ಟಿದರೆ ಆಗ ಅವನು ಆ ಆಶೆಗೆ ಒಳಗಾಗದೆ ತನ್ನಲ್ಲಿ ತಾನು "ಈ ನಾಟಕವಾದರೊ ಕೃತಕವಾದುದು; ಇದನ್ನು ನೋಡುವ ಕ್ಷಣಿಕಸುಖಕ್ಕಾಗಿ ನಾನು ನನಗೆಷ್ಟೋ ಮಹತ್ತ್ವದ ಕಾರ್ಯಕ್ಕೆ ಉಪಯೋಗಬೀಳುವ ದುಡ್ಡನ್ನು ಕಳೆದುಕೊಂಡು ನಾಟಕಶಾಲೆಯಲ್ಲಿ ನಿರ್ಬಂಧದಿಂದ ಕುಳಿತು ರಾತ್ರಿಯೆಲ್ಲ ನಿದ್ರೆಗೆಡುವದಕ್ಕಿಂತಲೂ ಸ್ವಸ್ಥವಾಗಿ ಮಲಗುವದರಿಂದ ದುಡ್ಡೂ ಉಳಿಯುವದು; ಆರೋಗ್ಯವೂ ನೆಟ್ಟಗಿರುವದು" ಎಂದು ಮುಂತಾಗಿ ವಿಚಾರಮಾಡಿ ಮಲಗಿದರೆ ಆಗ ಆಗುವ ಸುಖವು ಹಿಂದೆ ತಾನು ಎಂದಾದರೂ ನಾಟಕವನ್ನು ನೋಡಿದಾಗ ಆದ ಸುಖಕ್ಕಿಂತ ಎಷ್ಟು ಹೆಚ್ಚಿನದೆಂಬುದು ಅವನಿಗೆ ತನಗೆ ತಾನೇ ಅನುಭವಕ್ಕೆ ಬರುವದು. ಹೀಗೆ ಇಷ್ಟವಾದ ವಿಷಯಗಳನ್ನು ಕಷ್ಟಪಟ್ಟು ಕೊಟ್ಟು ಇಚ್ಛೆಯ ನಿವಾರಣೆಯನ್ನು ಮಾಡುವದರಿಂದ ಆಗುವ ಸುಖಕ್ಕಿಂತಲೂ ಇಚ್ಛೆಯನ್ನು ಕಿತ್ತುಹಾಕುವದರಿಂದಾಗುವ ಸುಖವು ಹೆಚ್ಚುಕಾಲ ನಿಲ್ಲುವಂಥದ್ದಾಗಿರುವದು. "ಆಗಲಿ, ಈ ಸುಖವು ಹೆಚ್ಚು ಹೊತ್ತು ಬಾಳಿದರೂ ಇದಕ್ಕೆ ಆ ಸುಖದ ರಸವು ಬರಲಾರದು; ಏಕೆಂದರೆ ಎದುರಿಗೆ ಇಟ್ಟ ಯಾವದಾದರೂ ಪಕ್ವಾನ್ನವನ್ನು ಇದಕ್ಕೆ ಮೋಹಿಸಿ ನಾನು ಏಕೆ ತಿನ್ನಬೇಕೆಂದು ಬಿಡುವವನಿಗೆ ಆಗುವ ಸುಖಕ್ಕಿಂತಲೂ ಅದನ್ನು ಸವಿಮಾಡಿಕೊಂಡು ತಿನ್ನುವವನಿಗೆ ಆಗುವ ಸುಖದಲ್ಲಿ ಏನೋ ಒಂದು ಪ್ರಕಾರದ ವಿಶೇಷವಿರುವದು" ಎಂದರೆ ಅಹುದು; ಅದಕ್ಕೆ ಮೋಹಿಸಿ ವಶನಾದವನು ಆಶೆಯಿಂದ ದುಃಖಿತನಾಗಿರುವ ಕಾರಣ

"यदेवोपनतं दुःखात्सुखं तद्रसवत्तरम्
निर्वाणाय तरुच्छाया तप्तस्य हि विशेषतः॥"

ಎಂದು ವಿಕ್ರಮೋರ್ವಶೀಯ ನಾಟಕದಲ್ಲಿ ಮತ್ತು

"सुखं हि दुःखान्यनुभूय शोभते।
घनांधकारेष्विव दीपदर्शनम्॥"

ಎಂದು ಮೃಚ್ಛಕಟಿಕನಾಟಕದಲ್ಲಿ ಹೇಳಿರುವಂತೆ ದುಃಖದ ಮೇಲೆ ಬಂದ ಆ

ಸುಖವು ಕಗ್ಗತ್ತಲೆಯಲ್ಲಿ ತಂದ ದೀಪದಂತೆ ಒಮ್ಮೆಲೇ ಎದ್ದು ಕಾಣಿಸುವದು. ಆದರೂ ವಿಚಾರಮಾಡಿ ನೋಡಿದರೆ ಅದರಲ್ಲೇನೂ ವಿಶೇಷವಿಲ್ಲ. ಈಗ ಈ ಮನೆಯಲ್ಲಿರುವ ನಾವು ಹೊರಗೆ ಮಳೆಯಲ್ಲಿ ಹೋಗಿ ತೋಯಿಸಿಕೊಂಡು ಪುನಃ ಈ ಮನೆಯಲ್ಲಿ ಪ್ರವೇಶಿಸಿದ ಕೂಡಲೆ ಈ ಮನೆಯ ಮಹತ್ತ್ವವು ಮೊದಲು ನಮಗೆ ತಿಳಿಯುತ್ತಿದ್ದುದಕ್ಕಿಂತಲೂ ಹೆಚ್ಚಾಗಿ ತೋರುವದು. ಇದಕ್ಕೆ ಕಾರಣವು ನಾವು ನಡುವೆ ತೋಯಿಸಿಕೊಂಡಿರುವದೇ ಹೊರತು ಮತ್ತೇನೂ ಅಲ್ಲ. ಆದರೆ ವಸ್ತುತಃ ಈಗಿಗಿಂತಲೂ ಆಗ ಈ ಮನೆಯಲ್ಲಿ ಏನೂ ಬಂದಿರುವದಿಲ್ಲ ಅಥವಾ ಏನೂ ಹೋಗಿರುವದಿಲ್ಲ. ನಮ್ಮ ಸ್ಥಿತ್ಯಂತರವೇ ಹೀಗೆ ಮಹತ್ತ್ವವನ್ನು ತಂದುಕೊಡುವದು. ನಾವು ಕಳೆದುಕೊಂಡ ಯಾವದಾದರೂ ಪದಾರ್ಥವು ಸಿಕ್ಕಿದಾಗ ಅದು ಮುಂಚೆ ನಮ್ಮಲ್ಲಿ ಇದ್ದಾಗಿನಕ್ಕಿಂತಲೂ ಅಧಿಕ ಸ್ವಾರಸ್ಯವುಳ್ಳದ್ದಾಗಿ ತೋರುವದು. ವಿಚಾರಿಸಿ ನೋಡಲು ಅದರಲ್ಲಿ ಏನೂ ಹೆಚ್ಚಿನದಾಗಿಲ್ಲ. ಒಮ್ಮೆಲೇ ಆಗುವ ಬದಲಾವಣೆಯಿಂದ ಹೀಗೆ ಕಂಡುಬರುವ ವಿಶೇಷಕ್ಕೆ ಭ್ರಮಿಸಿ ನಾವು ನಡುವೆ ದುಃಖಪಡುವದು ಉಚಿತವಲ್ಲ. ಏಕಪ್ರಕಾರವಾದ ಸಮಾಧಾನವು ನಿರಂತರವಾಗಿ ನೆಲೆಗೊಳ್ಳುವಂತೆ ಮಾಡಿಕೊಳ್ಳುವದೇ ಪ್ರಶಸ್ತವಾದುದು. ಸುಖವು ಮಹತ್ತ್ವವುಳ್ಳದ್ದಾಗಿ ಕಾಣಲೆಂದು ದುಃಖಕ್ಕೂ ಒಳಗಾಗುವ ನಾವು ಪಶ್ವಾದಿಗಳಿಗಿಂತ ಏನು ಹೆಚ್ಚಿನವರು? ಒಮ್ಮೆ ಸುಖವೂ ಒಮ್ಮೆ ದುಃಖವೂ ಅವುಗಳಿಗೂ ಆಗುವದುಂಟು. ಆದರೆ ಅವುಗಳಿಗಿಂತ ಹೆಚ್ಚಿನ ಬುದ್ಧಿಯನ್ನು ಭಗವತ್ಕೃಪೆಯಿಂದ ಪಡೆದ ನಾವು ವಿಚಾರದಿಂದ ನಿರಂತರವಾಗಿ ಸುಖಸಂಪನ್ನರಾದರೇನೇ ಪರಮಪುರುಷಾರ್ಥವನ್ನು ಸಾಧಿಸಿ ಪುರುಷರೆಂಬ ನಮ್ಮ ಹೆಸರನ್ನು ಸಾರ್ಥಕಪಡಿಸಿಕೊಂಡಂತಾಗುವದು. ನಾವು ನಿರಂತರ ಸುಖಿಗಳಾಗಿರಬೇಕೆಂದು "**बुद्धौ शरणमन्विच्छ**" ಎಂದು ಭಗವಂತನು ಅಂದಿರುವಂತೆ ಬುದ್ಧಿಗೆ ಶರಣು ಹೋಗಬೇಕು. ಸುಖಕ್ಕಾಗಿ ವಿಷಯುಗಳನ್ನೂ ಇಂದ್ರಿಯಗಳನ್ನೂ ಆಶ್ರಯಿಸಬಾರದು. ನಾವು ಸಂಸಾರದಲ್ಲಿ ಯಾವದಾದರೊಂದು ವಿಷಯದ ಮೇಲ್ಬಣ್ಣಕ್ಕೆ ಮೋಹಿಸಿ ನಮ್ಮ ನಿಜಸ್ಥಿತಿಯನ್ನು ಬಿಟ್ಟು ಅದರ ಬೆನ್ನುಹತ್ತಿ ಕೆಳಗೆ ಇಳಿಯುವದೂ ಅದನ್ನು ಹೊಂದಿದ ಕ್ಷಣಮಾತ್ರ ನಮ್ಮ ನಿಜಸ್ಥಿತಿಗೆ ಬರುವದೂ ಅಷ್ಟರಲ್ಲಿ ಇನ್ನೊಂದು

ವಿಷಯದಿಂದ ಆಕೃಷ್ಟರಾಗಿ ಕೆಳಕ್ಕೆ ಹೋಗುವದೂ ಪುನಃ ನಿಮಿಷಮಾತ್ರ ಸ್ವಸ್ಥಿತಿಗೆ ಬರುವದೂ ಹೀಗೆಯೇ ಸರ್ವದಾ ಕೆಳಗೆ ಇಳಿಯುವದೂ ಇದ್ದಲ್ಲಿಗೆ ಬರುವದೂ ಮಾಡುತ್ತ ವ್ಯರ್ಥವಾಗಿ ಈ ಸರ್ವೋತ್ಕೃಷ್ಟವಾದ ಮನುಷ್ಯ-ಜನ್ಮವನ್ನು ಹಾಳುಮಾಡಿಕೊಳ್ಳುತ್ತೇವೆ.

"प्रक्षाळनाद्धि पंकस्य दूरादस्पर्शनं वरम्"

ಎಂಬ ನ್ಯಾಯದಂತೆ ಕೆಳಗೆಹೋಗಿ ತಿರುಗಿ ಇದ್ದಲ್ಲಿಗೆ ಬರುವದಕ್ಕಿಂತಲೂ ಇದ್ದಲ್ಲಿಯೇ ಇರುವದು ಮೇಲು. ಕೆಳಗೆ ಜಾರುವದು ತಪ್ಪದ ಹೊರತು ಮೇಲಕ್ಕೆ ಏರುವದು ಅಶಕ್ಯವೇ ಸರಿ. ಆದಕಾರಣ ವಿಷಯಗಳಿಂದ ಆಕೃಷ್ಟ-ರಾಗದೆ ನಮ್ಮ ಆತ್ಮಸ್ಥಿತಿಯಲ್ಲಿರಲಿಕ್ಕೆ ಬಂದ ಹೊರತು ಪರಮಾತ್ಮನ ಕಡೆಗೆ ಹೋಗುವದು ನಮಗೆ ಆಗದು. ಆದುದರಿಂದಲೇ ಭಗವಂತನು

"यस्त्वात्मरतिरेव स्यादात्मतृप्तश्च मानवः।
आत्मन्येव च संतुष्टस्तस्य कार्यं न विद्यते॥"

ಎಂದು ಆತ್ಮರತಿಯನ್ನೂ ಆತ್ಮತೃಪ್ತಿಯನ್ನೂ ಆತ್ಮಸಂತುಷ್ಟಿಯನ್ನೂ ಶ್ಲಾಘಿಸಿ-ದ್ದಾನೆ. ನಮ್ಮ ವ್ಯವಹಾರದ ಕೆಲವು ಮಾತಿನ ಕಡೆಗೆ ಚೆನ್ನಾಗಿ ಲಕ್ಷ್ಯಕೊಟ್ಟು ವಿಚಾರಿಸಿದರೂ ಈ ವಿಷಯವು ಸ್ಪಷ್ಟವಾಗುವದು. "ಸ್ವಸ್ಥರಾಗಿರುವಿರೊ?" ಎಂಬ ಪ್ರಯೋಗವನ್ನು ಕುಶಲಪ್ರಶ್ನೆಯ ಪ್ರಸಂಗದಲ್ಲಿ ಮಾಡುವ ವಾಡಿಕೆ-ಯುಂಟು. **स्वस्मिन् तिष्ठतीति स्वस्थः** ಅಂದರೆ ತನ್ನಲ್ಲಿ ತಾನಿರುವವನು ಸ್ವಸ್ಥನು. ಇದರ ಮೇಲಿಂದ ತನ್ನಲ್ಲಿ ತಾನು ಇರುವದು ಎಷ್ಟು ಮಹತ್ತ್ವ-ದ್ದೆಂದು ಕಂಡುಬರುವದು. ಸಾವಿರಾರು ವಿಷಯಗಳಿಗೆ ವಶರಾಗಿ ದಾಸರಂತೆ ಕುಣಿಯುತ್ತಿರುವ ನಾವು ಸ್ವಸ್ಥತೆಯನ್ನು ಸ್ವಪ್ನದಲ್ಲಾದರೂ ಕಂಡಿರುವೆವೊ? ನಾವು ಸ್ವಸ್ಥರಲ್ಲ; ವಿಷಯಸ್ಥರು.

"परायत्तः प्रीतेः कथमिव रसं वेत्तु पुरुषः"

ಎಂದು ಮುದ್ರಾರಾಕ್ಷಸನಾಟಕದಲ್ಲಿ ಅಂದಿರುವಂತೆ ವಿಷಯಗಳಿಗೂ ಇಂದ್ರಿ-ಯಗಳಿಗೂ ಪರಾಧೀನರಾಗಿರುವ ನಮಗೆ ಸುಖದ ಆಸ್ವಾದವು ಹೇಗೆ ತಾನೆ

ದೊರೆತೀತು? ಆಯಾ ವಿಷಯಗಳ ಮುಂದೆ ದೇಹಿಯೆಂದು ಕಯ್ಯೊಡ್ಡುತ್ತ ತಿರುಗಾಡುತ್ತಿರುವ ತಿರುಕರಾದ ನಮಗೆ ಸ್ವಾನಂದ ಸಾಮ್ರಾಜ್ಯವು ಏಕೆ ಸಿಕ್ಕೀತು? ನಮ್ಮ ಮೇಲೆ ಹಗಲಿರುಳೂ ಬಲಾತ್ಕಾರಮಾಡುತ್ತಿರುವ ಕಾಮಕ್ರೋಧಾದಿ ಷಡ್ರಿಪುಗಳಿಗೆ ವಿವೇಕಬಲದಿಂದ ಬಗ್ಗದೆ ಇರುವದೊಂದು ಹೊರತು ನಿಜಸುಖವೆಂಬ ಧನವನ್ನು ಇಟ್ಟುಕೊಂಡಿರುವ ಉಪಾಯವು ಮತ್ತಾವುದು? ಕಾಮಾದಿ ವಿಕಾರಗಳು ನಮ್ಮ ಮನಸ್ಸಿನಲ್ಲಿ ಉದಯಿಸಿ ನಮ್ಮನ್ನು ಬಾಧೆಪಡಿಸುತ್ತಿರುವದರಿಂದ ಇವುಗಳಿಗೆ ವೈರಿಗಳೆನ್ನುತ್ತಿರುವರು. ಇವುಗಳನ್ನು ನಾವು ವೈರಿಗಳೆಂದು ತಿಳಿಯದೆ ಇವಕ್ಕೆ ಅನುಕೂಲರಾಗುತ್ತ ಹೋಗುತ್ತೇವಾದುದರಿಂದ

"काम एष क्रोध एष रजोगुणसमुद्भवः।
महाशनो महापाप्मा विद्ध्येनमिह वैरिणम्॥"

ಎಂಬ ಶ್ಲೋಕದಲ್ಲಿ ಭಗವಂತನು ಈ ಕಾಮಾದಿಗಳನ್ನು ವೈರಿಗಳೆಂದು ತಿಳಿಯೆಂದು ಅರ್ಜುನನಿಗೆ ಹೇಳಿದ್ದಾನೆ. ಈ ಶತ್ರುಗಳಿಗೆ ನಾವು ಕಯ್ಯಲ್ಲಿ ಸಿಕ್ಕಿ ಹೇಳಿದಂತೆ ಕುಣಿದಾಡುತ್ತ ಹೋದರೆ ಎಂದಿಗಾದರೂ ತೃಪ್ತಿಯಾದೀತೆ? ನಮ್ಮ ಹೃದಯವನ್ನು ಸೇರಿಕೊಂಡು ಸ್ವಾನಂದರೂಪವಾದ ಜೀವನದ ಮೇಲೆ ಹಲ್ಲಾಮಾಡಲಿಕ್ಕೆ ಎದ್ದಿರುವ ಮತ್ತು ಏನು ಮಾಡಿದರೂ ಕರುಣೆ ಬಾರದಿರುವ ಈ ಕಾಮಾದ್ಯರಿವರ್ಗವನ್ನು ವಿವೇಕಬಲದಿಂದ ಬೆದರಿಸಿಯೇ ಶಾಂತಿಪಡಿಸಬೇಕು. ಈ ಕಾಮವನ್ನು ಶಾಂತಮಾಡುವದಕ್ಕಾಗಿ

"चुंबनं देहि मे भार्ये कामचांडालतृप्तये"

ಎಂದು ಒಬ್ಬ ಕವಿಯು ಬರೆದಿರುವಂತೆ ಸ್ತ್ರೀಯ ಮುಂದೆ ದೇಹಿ ಎನ್ನುತ್ತ ದೈನ್ಯದಿಂದ ಹೋದರೆ ನಾವು ಕಾಮಕ್ಕೂ ಸ್ತ್ರೀಗೂ ಮತ್ತು ಆಕೆಗೋಸ್ಕರ ನೂರಾರುವಿಷಯುಗಳಿಗೂ ಕೂಡ ವಶರಾಗಿ ಸಂಪಾದಿಸುವ ಶಾಂತಿಯು ಕೇವಲ ಕ್ಷಣಿಕವಾಗಿರುವದಷ್ಟೇ ಅಲ್ಲದೆ ಇಂಥ ಕಾಮವು ಮತ್ತೆಮತ್ತೆ ಬಂದು ನಮ್ಮನ್ನು ಬಾಧಿಸುವದಕ್ಕೆ ದಾರಿಯನ್ನು ಕೊಟ್ಟಹಾಗಾಗುತ್ತದೆ. ಹಾಗೆಯೇ ನಮಗೆ ಸಿಟ್ಟುಬಂದಾಗಲಾದರೂ ಆ ಸಿಟ್ಟಿಗೆ ನಾವು ವಶರಾಗಿ ಕಂಡಕಂಡವರ ಮೇಲೆ

ನಮ್ಮ ಬಾಯ ತೀಟೆಯನ್ನು ತೀರಿಸಿಕೊಳ್ಳುತ್ತ ಆ ಕೋಪವನ್ನು ಶಾಂತಿಮಾಡ-ಹೋದರೆ ಆ ಶಾಂತಿಯು ಕ್ಷಣಿಕವಾಗಿರುವದಲ್ಲದೆ ಬೈಸಿಕೊಂಡವರು ಆ ಬೈಗುಳಗಳನ್ನು ನಮಗೆ ತಿರಿಗಿಸುವದೇ ಮೊದಲಾದ ಕಾರಣಗಳಿಂದ ಈ ಬಗೆಯ ಕ್ರೋಧದ ಉಪಟಳವು ನಮ್ಮನ್ನು ಮೇಲೆ ಮೇಲೆ ಸೂರೆ ಮಾಡು-ವದಕ್ಕೆ ಅವಕಾಶವಾಗುತ್ತದೆ. ಈ ಕಾಮಕ್ರೋಧಾದಿಗಳನ್ನು ಶಾಂತಿಮಾಡು-ವದಕ್ಕೆ ಎರಡು ಉಪಾಯಗಳುಂಟು. ಒಂದು ಅವು ಹಾಡಿದಂತೆ ನಾವು ಕುಣಿಯುವದು, ಇನ್ನೊಂದು ವಿಚಾರಬಲದಿಂದ ಅವುಗಳನ್ನು ಸಂತಯಿಸುವದು. ಈ ಎರಡನೆಯ ಉಪಾಯವೇ ಹಿತಕಾರವಾದುದು. ಆದುದರಿಂದಲೇ

"शक्नोतीहैव यः सोढुं प्राक्शरीरविमोक्षणात्।
कामक्रोधोद्भवं वेगं स युक्तः स सुखी नरः॥"

ಎಂಬ ಶ್ಲೋಕದಲ್ಲಿ ಭಗವಂತನು "ಯಾವನು ಬದುಕಿರುವಾಗಲೇ ಕಾಮ-ಕ್ರೋಧಾದಿಗಳ ವೇಗವನ್ನು ಸಹಿಸಲಿಕ್ಕೆ ಶಕ್ತನಾಗುವನೊ ಆ ಮನುಷ್ಯನೇ ಸುಖಿ" ಎಂದು ಹೇಳಿದ್ದಾನೆ. ಇಲ್ಲಿ "ಬದುಕಿರುವಾಗಲೇ" ಎಂದು ಭಗ-ವಂತನು ಅಂದಿರುವದು ವಿಚಾರಿಸಿ ನೋಡತಕ್ಕ ವಿಷಯವಾಗಿದೆ. ದೇಹಾಂತ ಸಮಯದಲ್ಲಿ ಕಾಮಾದಿಗಳ ವೇಗವು ಯಾರಲ್ಲಿಯೂ ಕಂಡುಬರುವದಿಲ್ಲ; ಆದರೆ ಇಷ್ಟುಮಾತ್ರದಿಂದ ಅವರು ಸುಖಿಗಳೆಂದು ಹೇಳಲಿಕ್ಕೆ ಬರುವದಿಲ್ಲ. ಏಕೆಂದರೆ—

"अवश्यं यातारश्चिरतरमुषित्वापि विषया
वियोगे को भेदस्त्यजति न जनो यत्स्वयममून्॥
व्रजंतः स्वातंत्र्याद्तुलपरितापाय मनसः
स्वयं त्यक्ता ह्येते शमसुखमनंतं विदधति॥"

ಎಂದು ಶ್ರೀಭರ್ತೃಹರಿಕವಿಗಳು ಅಂದಿರುವಂತೆ ಸರ್ವವಿಷಯಗಳೂ ಎಷ್ಟು-ದಿನವಿದ್ದರೂ ಇಂದು ಅಥವಾ ನಾಳೆ ಎಂದಾದರೂ ಅವಶ್ಯವಾಗಿ ಹೋಗತಕ್ಕವೆ.

ನಮ್ಮಮುಂದೆ ಅವು ಹೋಗಲಿ ಅಥವಾ ಅವುಗಳ ಮುಂದೆ ನಾವು ಹೋಗಲಿ ಹೇಗಾದರೂ ಅವಕ್ಕೂ ನಮಗೂ ತಪ್ಪಗಂಟಾಗುವದು ಬಿಟ್ಟದ್ದಲ್ಲ. ಆದ-ಕಾರಣ ಅವು ಹೀಗೆ ನಶ್ವರವಾದವುಗಳೆಂಬುದನ್ನು ಚೆನ್ನಾಗಿ ಅರಿತು ನಾವು ವಿಷಯುಗಳನ್ನು ಬಿಡತಕ್ಕದ್ದು. "ಅದೇಕೆ ಹೇಗಾದರೂ ಅವು ಹೋಗುವ-ವೆಂದಮೇಲೆ ಅವುಗಳನ್ನು ಬಿಡುವ ಶ್ರಮವನ್ನು ನಾವೇಕೆ ತೆಗೆದುಕೊಳ್ಳ-ಬೇಕು?" ಎಂದರೆ ಹಾಗಲ್ಲ. ನಾವು ಇನ್ನೂ "ಅವು ಬೇಕುಬೇಕು" ಅನ್ನು-ತ್ತಿರುವಾಗ ಅವಾಗಿಯೇ ನಮ್ಮನ್ನು ಬಿಟ್ಟುಹೋದರೆ ನಮಗೆ ಬಹುದುಃಖ-ವಾಗುವದು; ಆದರೆ ನಾವಾಗಿಯೇ ಅವುಗಳ ಸ್ವರೂಪವನ್ನು ತಿಳಿದು ಅವುಗಳನ್ನು ಬಿಟ್ಟರೆ ನಮಗೆ ಅನಂತಶಾಂತಿಸುಖವು ದೊರೆಯುವದು.

"इंद्रियाणां हि चरतां यन्मनोऽनुविधीयते।
तदस्य हरति प्रज्ञां वायुर्नावमिवांभसि॥"

ಎಂಬ ಶ್ಲೋಕದಲ್ಲಿ ಭಗವಂತನು ಹೇಳಿದಂತೆ ತಮ್ಮತಮ್ಮ ವಿಷಯಗಳಲ್ಲಿ ಪ್ರವರ್ತಿಸುತ್ತಿರುವ ಇಂದ್ರಿಯಗಳನ್ನು ಹಿಂಬಾಲಿಸುತ್ತಿರುವ ಮನಸ್ಸು— ಬಿರುಗಾಳಿಯು ಸಮುದ್ರದಲ್ಲಿ ಹಡಗನ್ನು ನಾಶಪಡಿಸುವಂತೆ— ನಮ್ಮ ಪ್ರಜ್ಞೆ-ಯನ್ನು ನಾಶಪಡಿಸುವದು. ಆದಕಾರಣ ಸ್ವೇಚ್ಛಾನುಸಾರವಾಗಿ ಇಂದ್ರಿಯ-ಗಳನ್ನು ವಿಷಯಗಳ ಬೆನ್ನುಹತ್ತಿ ಹೋಗಗೊಡಬಾರದು. ಇಂದ್ರಿಯಗಳ ನಿಯಮನವನ್ನು ಏತರಿಂದ ಮಾಡಬೇಕೆಂದರೆ "**इंद्रियेभ्यः परं मनः**" ಎಂಬು-ದರಿಂದ ಭಗವಂತನು ಇಂದ್ರಿಯಗಳಿಗಿಂತ ಮನಸ್ಸು ಮೇಲಿನದೆಂದೂ ಮತ್ತು

"मनसैवेंद्रियग्रामं विनियम्य समंततः"

ಎಂಬುದರಿಂದ ಮನಸ್ಸಿನಿಂದಲೇ ಇಂದ್ರಿಯಸಮುದಾಯದ ನಿಯಮನವನ್ನು ಮಾಡಬೇಕೆಂದೂ ಹೇಳಿದ್ದಾನೆ. "ಇನ್ನು ಮನಸ್ಸಿನ ನಿಯಮನವನ್ನು ಏತರಿಂದ ಮಾಡಬೇಕು? ಮನಸ್ಸೇ ಅಲ್ಲವೆ ಎಲ್ಲವನ್ನೂ ಮಾಡುವದು?" ಎಂದರೆ "**मनसस्तु पराबुद्धिः**" ಎಂಬುದರಿಂದ ಭಗವಂತನು ಮನಸ್ಸಿಗಿಂತ-ಲೂ ಬುದ್ಧಿಯು ಶ್ರೇಷ್ಠವಾದುದೆಂದೂ ಮತ್ತು

"शनैः शनैरुपरमेद्बुध्या धृतिगृहीतया।
आत्मसंस्थं मनः कृत्वा न किंचिदपि चिंतयेत्॥"

ಎಂಬುದರಿಂದ "ಧೈರ್ಯದಿಂದ ಯುಕ್ತವಾದ ಬುದ್ಧಿಯಿಂದ ಮೆಲ್ಲಮೆಲ್ಲನೆ ಉಪರತಿಯನ್ನು ಮಾಡಬೇಕು; ಮತ್ತು ಮನಸ್ಸನ್ನು ಆತ್ಮನಿಷ್ಠವಾದುದನ್ನು ಮಾಡಿ ಏನೂ ಚಿಂತಿಸಬಾರದು" ಎಂದೂ ಹೇಳಿದ್ದಾನೆ. ಆದಕಾರಣ ಹೀಗೆ ಸ್ವಸ್ಥನಾಗಿದ್ದು ಏನೂ ಚಿಂತಿಸದ ಶಾಂತಿಸುಖವನ್ನನುಭವಿಸಬೇಕು.

"यद्भावि न तद्भावि भावि चेन्न तदन्यथा।
इति चिंताविषघ्नोयमगदः किं न पीयते॥"

ಎಂಬ ಸುಭಾಷಿತಶ್ಲೋಕದಲ್ಲಿ ಹೇಳಿದಂತೆ "ಆಗದುದು ಆಗುವದಿಲ್ಲ ಮತ್ತು ಆಗುವದು ಆಗದೆ ಇರುವದಿಲ್ಲ" ಎಂಬ ವಿಚಾರವೇ ಚಿಂತೆಯೆಂಬ ವಿಷವನ್ನು ಇಳಿಸುವ ಔಷಧವು. ಈ ಔಷಧವನ್ನು ನಾವು ನಿರಂತರವಾಗಿ ಸೇವಿಸುತ್ತಿರಬೇಕು. ಅನಿಷ್ಟಪ್ರಸಂಗವು ನಮಗೆ ಬರಲೇಬಾರದೆಂದು ನಾವು ಆಗ್ರಹಮಾಡಬಾರದು. ಬರುವದನ್ನು ತಪ್ಪಿಸುವದು ಆಗದ ಮಾತು. ಏಕೆಂದರೆ—

"कांश्चित्तुच्छयति प्रपूरयति वा कांश्चिन्नयत्युन्नतिं
कांश्चित्पातविधौ करोति च पुनः कांश्चिन्नयत्याकुलान्॥
अन्योन्यप्रतिपक्षसंहतिमिमां लोकस्थितिं बोधय
न्नेष क्रीडति कूपयंत्रघटिकान्यायप्रसक्तो विधिः॥"

ಎಂದು ಮೃಚ್ಛಕಟಿಕನಾಟಕದಲ್ಲಿ ಹೇಳಿರುವಂತೆ ಮತ್ತು "The wheel of fortune is turning incessantly round and who can say within himself I shall be the uppermost today?" ಎಂದು ಆಲಿವ್ಹರಗೋಲ್ಡಸ್ಮಿತ್ಥ ಸಾಹೇಬರು ಬರೆದಿರುವಂತೆ ಕಾಲಚಕ್ರದ ಗತಿಯಿಂದ ನಮಗೆ ಒಂದೇ ವಿಧದ ಸ್ಥಿತಿಯು ಇರಲಾರದು.

ಏರುವಿಕೆಯೂ ಮತ್ತು ಇಳಿಯುವಿಕೆಯೂ ಅನಿವಾರ್ಯವಾಗಿರುವವು. ಆದುದರಿಂದ ದುರ್ದಶೆಯು ಬರಲೇಬಾರದೆನ್ನುವದು ಮಳೆಗಾಲದಲ್ಲಿ ಮಳೆಯು ಬೀಳಲೇ ಬಾರದೆಂದಂತೆ ಆಗುವದು. ಆದರೆ ಮಳೆಯು ನಮ್ಮನ್ನು ಬಾಧಿಸ-ಬಾರದೆಂದು ಕೊಡೆ ಮುಂತಾದವುಗಳಿಂದ ನಮ್ಮ ರಕ್ಷಣೆಯನ್ನು ನಾವು ಮಾಡಿಕೊಳ್ಳುವಂತೆ ಬಂದ ದುರವಸ್ಥೆಯಿಂದ ನಮಗೆ ದುಃಖವಾಗಬಾರದೆಂದು ನಾವು ವಿವೇಕದಿಂದ ನಮ್ಮನ್ನು ಕಾಯ್ದುಕೊಳ್ಳತಕ್ಕದ್ದು.

"दुःखेष्वनुद्विग्नमनाः सुखेषु विगतस्पृहः"

ಎಂದು ಭಗವಂತನು ಹೇಳಿದಂತೆ ನಮ್ಮ ಸ್ಥಿತಿಯು ಆದರೆ ನಮ್ಮ ಸ್ವಾನಂದಕ್ಕೆ ಪಾರವುಂಟೆ? ಹೀಗೆ ಮನಸ್ಸನ್ನು ಸಮತೋಲವಾಗಿ ಹಿಡಿಯಬೇಕಾದರೆ ನಮ್ಮಲ್ಲಿ ವಿವೇಕವು ಸರ್ವದಾ ಜಾಗೃತವಾಗಿರಬೇಕು. ವಿವೇಕವು ಸ್ವಲ್ಪ ತಪ್ಪಿದರಾಯಿತು

"विवेकभ्रष्टानां भवति विनिपातः शतमुखः"

ಎಂದು ಶ್ರೀಭರ್ತೃಹರಿಕವಿಗಳು ಅಂದಂತೆ ನಾವು ನೂರಾರುಬಗೆಯಿಂದ ಗಾಸಿಪಡಬೇಕಾಗುವದು. ಅವಿವೇಕವೆಂಬ ಪಾಶವು ನಮಗೆ ಬಲಾಢ್ಯವಾದ ಬಂಧನವಾಗಿ ಸಂಸಾರದ ಆಯಾ ದುಃಖಗಳಿಗೆ ನಮ್ಮನ್ನು ಗುರಿಮಾಡುವದು. ನಮಗೂ ಮತ್ತು ಯಾವ ವಿಷಯಕ್ಕೂ ಹಗ್ಗದಿಂದೇನೂ ಕಟ್ಟಿಲ್ಲ. ಆದರೂ ಆಯಾವಿಷಯಗಳು ನಮ್ಮ ಮನಸ್ಸನ್ನು ಬಲಾತ್ಕಾರದಿಂದ ಜಗ್ಗುತ್ತಲಿವೆ. ನಮ್ಮ ಕಣ್ಣಿಗೆ ಯಾವದಾದರೂ ಸುಂದರಪದಾರ್ಥವು ಬಿದ್ದರೆ, ನಮ್ಮ ಕಿವಿಗೆ ಏನಾದರೂ ಮಧುರಧ್ವನಿಯು ಕೇಳಬಂದರೆ, ನಮ್ಮ ಮೂಗಿಗೆ ಎಂಥದ್ದಾದರೂ ಸುಗಂಧವು ಬಡಿದರೆ ಹೀಗೆ ಆಯಾ ಇಂದ್ರಿಯಕ್ಕೆ ಅದರದರ ವಿಷಯವು ಗೋಚರವಾದರೆ ನಮ್ಮನ್ನು ಮೋಹಗೊಳಿಸಿ ಗಟ್ಟಿಯಾಗಿ ಕಟ್ಟಿಹಾಕಿದಂತೆ ವಶಮಾಡಿಕೊಂಡು ಬಾಯಿಬಿಡುತ್ತ ಕೂಡಲಿಕ್ಕೆ ಹಚ್ಚುವವು. ಹೀಗೆ ಅವಿ-ವೇಕಪಾಶದಿಂದ ನಾವು ಬದ್ಧರಾಗಿರುವೆವು.

"लोहदारुमयैः पाशैर्दृढबद्धोपि मुच्यते"

ಎಂದು ಶ್ರೀವ್ಯಾಸಮಹರ್ಷಿಗಳು ಅಂದಿರುವಂತೆ ಕಟ್ಟಿಗೆ ಕಬ್ಬಿಣ ಮೊದಲಾದ ಧಾತುಗಳ ಪಾಶಗಳಿಂದ ಗಟ್ಟಿಯಾಗಿ ಕಟ್ಟಲ್ಪಟ್ಟವನು ಕೂಡ ಬಿಡುಗಡೆ ಹೊಂದುವನು. ಆದರೆ ಈ ಅವಿವೇಕಪಾಶದಿಂದ ಬದ್ಧನಾದವನು ಮುಕ್ತ-ನಾಗುವದು ದುಷ್ಕರವು. ಇಂಥ ಅವಿವೇಕವು ಸುಮ್ಮನೆ ನಮ್ಮನ್ನು ಮೋಹ-ಗೊಳಿಸಿ ಬಂಧಕ್ಕೆ ಗುರಿಮಾಡುತ್ತಿರುವದು. ಆದಕಾರಣ "**प्रकारांतरा-संभवादविवेक एव बंधः**" ಎಂಬ ಸಾಂಖ್ಯಸೂತ್ರದಿಂದ ಶ್ರೀಕಪಿಲಮಹರ್ಷಿ-ಗಳು ಅವಿವೇಕವೇ ಬಂಧನವೆಂದು ಹೇಳಿದ್ದಾರೆ. ಸರ್ವದುಃಖಗಳಿಗೂ ಕಾರಣವು ಈ ಅವಿವೇಕವೇ. "**अविद्याक्षेत्रमुत्तरेषां प्रसुप्ततनुविच्छिन्नो-दाराणां**" ಎಂಬ ಯೋಗಸೂತ್ರವೂ ಪ್ರಸುಪ್ತತನುವಿಚ್ಛಿನ್ನೋದಾರಭೇದದಿಂದ ನಾಲ್ಕು ಅವಸ್ಥೆಗಳನ್ನು ಹೊಂದಿದ ಅಸ್ಮಿತಾದಿಕ್ಲೇಶಗಳಿಗೆ ಅವಿದ್ಯೆಯೇ ಉತ್ಪತ್ತಿಸ್ಥಾನವೆಂದು ಹೇಳುವದು. "**दुःखजन्मप्रवृत्तिदोषमिथ्याज्ञाना-नामुत्तरोत्तरापाये तदनंतरापायादपवर्गः**" ಎಂಬ ನ್ಯಾಯಸೂತ್ರವಾದರೂ ಮಿಥ್ಯಾಜ್ಞಾನವೇ ದುಃಖದ ಕಾರಣವೆಂದು ವ್ಯಕ್ತಪಡಿಸುವದು. "**अनृतेन हि प्रत्यूढाः**" "**अन्यद्युष्माकमंतरं बभूव**" ಇತ್ಯಾದಿ ಶ್ರುತ್ಯಾದಿಗಳಿಂದಲೂ ಇದೇ ಅಭಿಪ್ರಾಯವು ಸ್ಪಷ್ಟವಾಗುವದು. ಆದಕಾರಣ

"अज्ञानेनावृतं ज्ञानं तेन मुह्यंति जंतवः"

ಎಂದು ಭಗವಂತನು ಅಂದಿದಾನೆ. ಅಜ್ಞಾನದಿಂದಲೇ ನಾವೆಲ್ಲರೂ ಮೋಹಿಸಿ ದುಃಖಪಡುತ್ತಿದ್ದೇವೆ. ಈ ವಿಷಯಕ್ಕೆ ಹೆಚ್ಚಿಗೆ ಹೇಳತಕ್ಕದ್ದನ್ನು ಜ್ಞಾನ-ಯೋಗದ ವಿಷಯಕ್ಕೆ ಹೇಳುವಾಗ ಹೇಳುವೆನು.

"ज्ञानं लब्ध्वा परां शांतिमचिरेणाधिगच्छति"

ಎಂದು ಭಗವಂತನು ಅಂದಂತೆ ಜ್ಞಾನೋದಯವಾದ ಕೂಡಲೆ ತತ್ಕ್ಷಣದಲ್ಲಿ ಮುಕ್ತಿರೂಪವಾದ ನಿರತಿಶಯಶಾಂತಿಯು ನಮಗೆ ಸಿಕ್ಕುವದು. ಹೀಗೆ ಜ್ಞಾನದಿಂದ

"यतो वाचो निवर्तंते अप्राप्य मनसा सह।
आनंदं ब्रह्मणो विद्वान्न बिभेति कुतश्चन ॥"

ಎಂದು ಉಪನಿಷತ್ತಿನಲ್ಲಿ ಹೇಳಿದಂತೆ ಮನಸ್ಸಿಗೂ ವಾಣಿಗೂ ಅಗೋಚರವಾದ ಬ್ರಹ್ಮಾನಂದವನ್ನು ಹೊಂದಿ ಅಕುತೋಭಯರಾದಾಗ ಮಾತ್ರ

"नैव तस्य कृतेनार्थो नाकृतेनेह कश्चन।
नचास्य सर्वभूतेषु कश्चिदर्थव्यपाश्रयः॥"

ಎಂದು ಭಗವಂತನು ಶ್ಲಾಘಿಸಿದಂತೆ ನಾವು ಕೃತಕೃತ್ಯರಾಗುವೆವು. ಆಗ ಮಾತ್ರ ಪರಮಪುರುಷಾರ್ಥಪ್ರಾಪ್ತಿಯಿಂದ ನಮ್ಮ ಪುರುಷತ್ವವು ಸಾರ್ಥಕವಾದಂತಾಗುವದು. ಹೀಗೆ ಕೃತಕೃತ್ಯನಾದ ಮಹಾತ್ಮನ ಭಾಗ್ಯವನ್ನು ಎಷ್ಟೆಂತ ವರ್ಣಿಸಬೇಕು.

"नैव धर्मी न चाधर्मी न चैवहि शुभाशुभी"

ಎಂದು ಅನುಗೀತೆಯಲ್ಲಿ ಅಂದಿರುವಂತೆ ಆ ಮಹಾತ್ಮನಿಗೆ ಧರ್ಮವೂ ಇಲ್ಲ; ಅಧರ್ಮವೂ ಇಲ್ಲ; ಶುಭವೂ ಇಲ್ಲ; ಅಶುಭವೂ ಇಲ್ಲ; ರಾಗವೂ ಇಲ್ಲ; ದ್ವೇಷವೂ ಇಲ್ಲ; ಶತ್ರುವೂ ಇಲ್ಲ; ಮಿತ್ರನೂ ಇಲ್ಲ; ಸುಖವೂ ಇಲ್ಲ; ದುಃಖವೂ ಇಲ್ಲ. ಹೀಗೆ ಯಾವ ದ್ವಂದ್ವವೂ ಇಲ್ಲದೆ—ಏನೂ ಇಲ್ಲವೆಂಬುದು ಕೂಡ ಇಲ್ಲದೆ—ವರ್ಣನೆಗೆ ಅತೀತನೂ "**ज्ञानीत्वात्मैव मे मतं**" ಎಂದು ಭಗವಂತನ ವರ್ಣನೆಗೆ ಪಾತ್ರನಾದವನೂ ನಿಜಾನಂದಮಯನೂ ಆಗಿ ಬೆಳಗುತ್ತಿರುವ ಆ ಪರಮಾತ್ಮೈಕನಿಷ್ಠನು ಧನ್ಯನು; ಅಥವಾ ಆತನು ಧನ್ಯನೆಂದು ಹೇಳುವದೇನು? ಆತನನ್ನು ನೋಡಿದವರ ಕಣ್ಣುಗಳು ಧನ್ಯವಾಗುವವು; ಆತನ ವಿದ್ಯಮಾನವನ್ನು ಕೇಳಿದವರ ಕಿವಿಗಳೂ ಧನ್ಯವಾಗುವವು; ಆತನನ್ನು ಸತ್ಕಾರಮಾಡಿದವರ ಅವಯವಗಳೂ ಧನ್ಯವಾಗುವವು. ಆತನ ಕೃಪಾಕಟಾಕ್ಷಕ್ಕೆ ಪಾತ್ರರಾದವರೆಲ್ಲರೂ ಧನ್ಯರಾಗುವರು. ಆತನ ಪಾದಸ್ಪರ್ಶದಿಂದ ಕಾಡುಹಳ್ಳಗಳೂ ತೀರ್ಥಗಳಾಗುವವು. ಆತನ ಸಂಚಾರಮಹಿಮೆಯಿಂದ ಮರುಭೂಮಿಯಾದರೂ ಪುಣ್ಯಕ್ಷೇತ್ರವೆನಿಸುವದು. ಆತನನ್ನು ಸ್ಪರ್ಶಮಾಡಿದ ಗಾಳಿಗಾದರೂ ಪಾಪಪರಿಹಾರಕ ಶಕ್ತಿಬರುವದು. ತಾನು ನೋಡಿದ ಕಡೆಯನ್ನೆಲ್ಲ ಪಾವನವಾಗಿ ಮಾಡುವಂಥ ಆ ಮಹಾತ್ಮನ

ದೆಸೆಯಿಂದಲೇ ಭೂದೇವಿಯ ದೇವತ್ವವು ಸಾರ್ಥಕವಾಗುವದು. ಈ ಪ್ರಕಾರವಾಗಿ

"तद्बुद्धयस्तदात्मानस्तन्निष्ठास्तत्परायणाः
गच्छंत्यपुनरावृत्तिं ज्ञाननिर्धूतकल्मषाः ॥"

ಎಂದು ಭಗವಂತನು ಅಂದಂತೆ ಪರಮಪುರುಷಾರ್ಥದಿಂದ ಕೃತಕೃತ್ಯರಾಗಬೇಕೆಂದು ಬೋಧಿಸುವದೇ ಈ ಗೀತಾಶಾಸ್ತ್ರದ ಮುಖ್ಯ ಪ್ರಯೋಜನವು. ಆದರೆ ಯಥಾರ್ಥಹಿತಕಾರಿಯಾದ ಈ ಗೀತಾಶಾಸ್ತ್ರವು ಕೈಹಿಡಿದೆಳೆದರೆ ಮೈ ತಾನೇ ಬರುವದೆಂಬ ಗಾದೆಯ ಮಾತಿನಂತೆ ಕರ್ಮಕ್ಕೆ ಮಹತ್ತ್ವವನ್ನು ಕೊಟ್ಟು ಈ ಅರ್ಥವನ್ನು ಪ್ರತಿಪಾದಿಸುತ್ತದೆ. ಕರ್ಮವನ್ನು ಹೇಳದೆ ಬರೀ ಸಿದ್ಧಾಂತವನ್ನು ಹೇಳಿರುವ ವೇದಾಂತಗ್ರಂಥಗಳನ್ನು ಓದಿ ಜನರು ಅಡ್ಡದಾರಿಗೆ ಬೀಳುವ ಸಂಭವವುಂಟು. ಈ ಸಂದರ್ಭಕ್ಕೆ ಉಪಯೋಗ ಬೀಳುವ ಒಂದು ಕಥೆಯನ್ನು ಹೇಳುತ್ತೇನೆ, ಕೇಳಿರಿ. ಒಂದೂರಲ್ಲಿ ಒಬ್ಬ ಗೃಹಸ್ಥನಿದ್ದನು. ಅವನು ಎಷ್ಟೋ ಗ್ರಂಥಗಳನ್ನು ಓದಿದ್ದುದರಿಂದ ಅವನ ಮಾತುಕಥೆಗಳಲ್ಲೆಲ್ಲ ವೇದಾಂತದ ಮಾತುಗಳೇ ಸೂರೆಯಾಗುತ್ತಿದ್ದವು. ಅವನು ಇಷ್ಟು ಓದಿದವನಾಗಿದ್ದರೂ ವಿಷಯಲಂಪಟನಾಗಿ ಪ್ರತಿನಿತ್ಯವೂ ವೇಶ್ಯಾಗೃಹಕ್ಕೆ ಹೋಗುತ್ತಿದ್ದನು. ಶ್ರೀರಾಮನವಮಿಯಾಗಿದ್ದ ಒಂದುದಿನ ಅವನು ತನ್ನ ಪ್ರೀತಿಪಾತ್ರಳಾಗಿದ್ದ ವೇಶ್ಯೆಯ ಮನೆಗೆ ಹೊರಡಲು ಸಾತ್ವಿಕಸ್ವಭಾವವುಳ್ಳ ಅವನ ಧರ್ಮಪತ್ನಿಯು ಅವನಿಗೆ ಅಡ್ಡಬಂದು ಅವನನ್ನು ಕುರಿತು "ಶ್ರೀರಾಮಮೂರ್ತಿಯನ್ನು ಸಾಕ್ಷಾತ್ತಾಗಿ ನೋಡುವ ಪುಣ್ಯವಂತೂ ನಮಗೆ ಲಭಿಸಲಿಲ್ಲ. ಆದರೂ ವರ್ಷಕ್ಕೊಂದು ಸಲ ಮಾತ್ರ ಬರುವ ಇಂದಿನ ಪರ್ವಕಾಲವು ನಮಗೆ ಶ್ರೀರಾಮಚಂದ್ರನ ಅವತಾರಮಹಿಮೆಯನ್ನು ನೆನಪುಗೊಡುತ್ತಿರುವದು. ಪುಣ್ಯಶಾಲಿಗಳಾದವರು ಆತನ ಪವಿತ್ರವಾದ ಕೀರ್ತಿಯನ್ನು ನಿರಂತರವೂ ಗಾನಮಾಡುತ್ತ ತಮ್ಮ ಜನ್ಮವನ್ನು ಸಾರ್ಥಕಮಾಡಿಕೊಳ್ಳುವರು. ನಾವು ಪಾಪವಿಶೇಷದಿಂದ ಯಾವಾಗಲೂ ವಿಷಯಾಸಕ್ತರಾಗಿದ್ದರೂ ಇಂಥದ್ದೊಂದು ಅಪೂರ್ವಯೋಗ ಬಂದಾಗಲಾದರೂ ನಮ್ಮ ಮನಸ್ಸನ್ನು ಸ್ವಲ್ಪ-

ಭಗವದ್ವಿಚಾರದ ಕಡೆಗೆ ತಿರಿಗಿಸದಿದ್ದರೆ ನಮಗೆ ಮುಂದೆ ಗತಿಯೇನು?
ಂದ ಈ ದಿನವಾದರೂ ನೀವು ಹೇಗಾದರೂ ಮಾಡಿ ವೇಶ್ಯಾಗೃಹಕ್ಕೆ
ರ ಮನಸ್ಸನ್ನು ಬಿಗಿ ಹಿಡಿದು ಸರ್ವಪ್ರಯತ್ನದಿಂದಲೂ ಶ್ರೀರಾಮ-
ಚಂದ್ರನ ಸ್ಮರಣೆಯಲ್ಲಿ ಕಾಲವನ್ನು ಕಳೆಯುವ ಪ್ರಯತ್ನವನ್ನು ಮಾಡಿರಿ." ಎಂದು ನಾನಾಬಗೆಯಿಂದ ಸಮಾಧಾನವನ್ನು ಹೇಳುವದಕ್ಕೆ ಹೋದಳು. ಆಗ ಆ ಗೃಹಸ್ಥನು ಆಕೆಯನ್ನು ಕುರಿತು "ನಿನಗೆ ಶಾಸ್ತ್ರಪರಿಚಯದಿಂದ ಆಗುವ ತತ್ತ್ವಾರ್ಥವು ತಿಳಿಯದೆ ಇರುವದರಿಂದ ಹೀಗೆ ಹೇಳುತ್ತಿ.

"ईश्वरस्सर्वभूतानां हृद्देशेऽर्जुन तिष्ठति।
भ्रामयन् सर्वभूतानि यंत्रारूढानि मायया॥"

ಎಂದು ಭಗವಂತನು ತಾನೇ ಹೇಳಿರುವಂತೆ "ನಾವು ಮಾಡುವ ಯಾವ ಕಾರ್ಯಕ್ಕೂ ನಾವು ಹೊಣೆಯಲ್ಲ. ನಮಗೆ ಯಾವ ಸ್ವತಂತ್ರತೆಯೂ ಇಲ್ಲ. ಪರಮಾತ್ಮನು ಅಂತರ್ಯಾಮಿಯಾಗಿ ಇದ್ದು ನಮಗೆ ಏನೇನನ್ನು ಪ್ರೇರಿಸುತ್ತಾನೊ ಅದದನ್ನು ನಾವು ಮಾಡುತ್ತೇವೆ. ಮಾಡುವದು, ಮಾಡಿಸುವದು, ಬಿಡುವದು, ಬಿಡಿಸುವದು, ಎಲ್ಲವೂ ಭಗವಂತನದೇ; ನಮ್ಮದೇನೇನೂ ಇಲ್ಲ. ಆದುದರಿಂದ ನೀನು ನನ್ನನ್ನು ನಿರೋಧಿಸಬೇಡ" ಎಂದು ಈ ಅರ್ಥಕ್ಕೆ ಬೇಕಾದಷ್ಟು ವೇದಾಂತವಾಕ್ಯಗಳನ್ನು ಉದಾಹರಿಸಿ ಆಕೆ ಎಷ್ಟು ಹೇಳಿಕೊಂಡರೂ ಕಿವಿಗೊಡದೆ ತನ್ನ ದಾರಿಯನ್ನೇ ಹಿಡಿದನು. ಇತ್ತ ಆ ಸಾಧ್ವಿಯು ತನ್ನ ಪತಿಗೆ ತಕ್ಕ ಬುದ್ಧಿಯನ್ನು ಕಲಿಸಬೇಕೆಂದು ಆ ರಾತ್ರೆ ತನ್ನ ಮಂಚವನ್ನು ಒಂದು ಕಿಟಕಿಯ ಮಗ್ಗಲಿಗೆ ಎಳೆದುಕೊಂಡು, ತನ್ನ ಪಾರ್ಶ್ವದಲ್ಲಿ ಒಬ್ಬ ಪುರುಷನು ಮಲಗಿರುವ ಹಾಗೆ ಕಾಣುವಂತೆ ಉದ್ದವಾದ ಒಂದು ದಿಂಬನ್ನು ಇಟ್ಟು, ಮೇಲೆ ಸಕಲಾತಿಯನ್ನು ಹೊದ್ದಿಸಿ, ಕಿಟಕಿಯ ಬಾಗಿಲು ಹೊರಗಣವರು ನೂಕಿದರೂ ತೆರೆದುಕೊಳ್ಳುವಂತೆ ಸುಮ್ಮನೆ ಮುಂದಕ್ಕೆ ಮಾಡಿ, ಕದವನ್ನು ಮುಚ್ಚಿಕೊಂಡು ಮಲಗಿದಳು. ಆ ಪುರುಷನು ಆ ರಾತ್ರೆಯೆಲ್ಲ ವೇಶ್ಯಾಗೃಹದಲ್ಲಿದ್ದು ಬೆಳಗಾಗುತ್ತಲೇ ಮನೆಗೆ ಬಂದು ಬಾಗಿಲನ್ನು ತಟ್ಟಿದನು. ಆಕೆ ಎಚ್ಚತ್ತಿದ್ದರೂ ಬೇಕೆಂತಲೇ ಸುಮ್ಮನಿದ್ದಳು. ಆಗ

ಅವನು ತನ್ನ ಕೈಯಲ್ಲಿದ್ದ ಬೆತ್ತದಿಂದ ಕಿಟಕಿಯ ಬಾಗಿಲನ್ನು ನೂಕಿದನು. ಒಡನೆಯೆ ಅದು ತೆರೆದುಕೊಂಡಿತು. ಅವನು ಅದರೊಳಗೆ ತಲೆಯನ್ನು ಹಾಕಿ ಹಣಿಕಿ ನೋಡಲಾಗಿ ತನ್ನ ಹೆಂಡತಿಯು ಆ ರಾತ್ರೆ ಇನ್ನೊಬ್ಬ ಪುರುಷನ ಸ್ನೇಹವನ್ನು ಮಾಡಿರುವಳೆಂಬ ಸಂಶಯವು ಅವನ ಮನಸ್ಸಿಗೆ ಬಲವತ್ತರವಾದ ವ್ಯಥೆಯನ್ನು ಕೊಟ್ಟಿತು. ಆಗ ಅವನ ಮನಸ್ಸಿನ ತಳಮಳವು ಕ್ಷಣಕ್ಷಣಕ್ಕೆ ಹೆಚ್ಚುತ್ತಿರಲು ಅವನು ಸಿಟ್ಟಿಗೆದ್ದು ಗಟ್ಟಿಯಾಗಿ ಗಜರಿದನು. ಆ ಗದ್ದಲದಿಂದ ಆಗತಾನೆ ಎಚ್ಚರಗೊಂಡವಳಂತೆ ಆ ಸ್ತ್ರೀಯು ಮಂಚದ ಮೇಲೆಯೇ ಎದ್ದು ಕುಳಿತುಕೊಂಡಳು. ತಾನು ನೋಡುತ್ತಿದ್ದರೂ ಆಕೆಯು ಇನ್ನೂ ಆ ಪುರುಷನ ಸಮೀಪದಲ್ಲಿಯೇ ಧೈರ್ಯದಿಂದ ಕುಳಿತಿರುವದನ್ನು ನೋಡಿ ಅವನು ಕಣ್ಣುಗಳಲ್ಲಿ ಕೆಂಡವನ್ನು ಸುರಿಸುತ್ತ, ಹುಬ್ಬುಗಳನ್ನು ಕುಣಿಸುತ್ತ, ತುಟಿಗಳನ್ನು ಕಡಿಯುತ್ತ, ಮೈಮೇಲೆ ಎಚ್ಚರವಿಲ್ಲದೆ "ಇದೇನು ನಿನ್ನತ್ಯಾಚಾರ?" ಎಂದು ಕೂಗಾಡುವದಕ್ಕೆ ಮೊದಲುಮಾಡಿದನು. ಆಗಲೂ ಆಕೆಯು ಯಾವ ಗಾಬರಿಯನ್ನೂ ತೋರಿಸದೆ ಸಹಜವಾದ ಸಮಾಧಾನದಿಂದ ಕಣ್ಣುಗಳನ್ನೊರಸಿಕೊಳ್ಳುತ್ತ "ನನ್ನ ಕೈಯಲ್ಲೇನಿದೆ? ದೇವರ ಇಚ್ಛೆಯಲ್ಲಿದ್ದದ್ದು ನಡೆಯುತ್ತದೆ." ಎಂದು ಉತ್ತರವನ್ನು ಕೊಟ್ಟಳು. "ಆಗಲಿ, ನಿನ್ನ ದೇವರನ್ನು ನಾನು ನೋಡುತ್ತೇನೆ. ಉಸಿರೆತ್ತದೆ ಬಾಗಿಲು ತೆಗೆ" ಎಂದು ಗರ್ಜಿಸಲು ಆಕೆಯು ಮೆಲ್ಲಗೆ ಬಂದು ಬಾಗಿಲು ತೆಗೆದಳು. ಒಡನೆಯೆ ಅವನು ಒಳಕ್ಕೆ ನುಗ್ಗಿ ತನ್ನ ಪತ್ನಿಯ ಕೈಯನ್ನು ಎಡಗೈಯಿಂದ ಗಟ್ಟಿಯಾಗಿ ಹಿಡಿದು ಬಲಗೈಯಲ್ಲಿ ಒಂದು ದೊಣ್ಣೆಯನ್ನು ತೆಗೆದುಕೊಂಡು ಮಂಚದ ಮೇಲೆ ಇದ್ದ ಪುರುಷಾಕೃತಿಯ ಮೇಲೆ ಬಲವಾಗಿ ಹೇರಿದನು. ಆಗ ಹೊರಟ ಶಬ್ದವು ಧಪ್ಪೆಂದು ದಿಂಬಿನ ಮೇಲೆ ಬಿದ್ದಂತೆ ಕೇಳಿಸಿದುದರಿಂದ ಪರಿಶೀಲನೆ ಮಾಡಲಾಗಿ ಆ ಪುರುಷಾಕೃತಿಯು ಕೃತ್ರಿಮವಾಗಿತ್ತೆಂದೂ ತನ್ನ ಮಾತನ್ನು ತನಗೆ ತಿರಿಗಿಸುವದಕ್ಕಾಗಿ ತನ್ನ ಹೆಂಡತಿಯೇ ಈ ಉಪಾಯವನ್ನು ಹೂಡಿದ್ದಳೆಂದೂ ಅವನಿಗೆ ತಿಳಿಯಿತು. ಈ ಕಥೆಯ ವಿದ್ಯಮಾನದಿಂದ ನಾವು ತಿಳಿದುಕೊಳ್ಳಬೇಕಾದುದೇನಂದರೆ "ನಮಗೇನೂ ಸ್ವಾತಂತ್ರ್ಯವಿಲ್ಲವೆಂದೂ ಸರ್ವವೂ ಭಗವಂತನ ಅಧೀನವೆಂದೂ ವೇದಾಂತದಲ್ಲಿ ಹೇಳುವ ಮಾತು ಯಥಾರ್ಥವೇ. ಆ ಗೃಹ-

ಸ್ಥನು ತಾನು ವೇಶ್ಯಾಗೃಹಕ್ಕೆ ಹೋಗುವದು ಭಗವತ್ಪ್ರೇರಣೆಯೆಂದಂತೆ ತನ್ನ ಪತ್ನಿ ಒಂದು ಪಕ್ಷ ಪರಪುರುಷನ ಗೆಳೆತನವನ್ನು ಮಾಡಿದ್ದರೂ ಅದೂ ಕೂಡ ಭಗವತ್ಪ್ರೇರಣೆಯಿಂದಲೇ ಆಯಿತೆಂದು ಮನಸ್ಸಿಗೆ ಸಮಾಧಾನವನ್ನು ಮಾಡಿ-ಕೊಂಡಿದ್ದರೆ ಅವನ ಮಾತಿಗೇನಾದರೂ ಬೆಲೆಯು ಬರುತ್ತಿತ್ತು.

"लोकां सांगे ब्रह्मज्ञान आपण कोरडा पाषाण."

ಎಂದು ತುಕಾರಾಮಸಾಧುಗಳು ಹೇಳಿರುವಂತೆ ಅಥವಾ "ಆಚಾರ ಹೇಳಲಿಕ್ಕೆ ಬದನೇಕಾಯಿ ತಿನ್ನಲಿಕ್ಕೆ" ಎಂಬ ಗಾದೆಯ ಮಾತಿನಂತೆ ವೇದಶಾಸ್ತ್ರಗಳ ನಾಲ್ಕುಮಾತುಗಳಿಂದ ಮಂದಿಯ ಬಾಯನ್ನು ಕಟ್ಟುತ್ತ ತಾವು ಮನಬಂದಂತೆ ನಡೆಯುವವರ ಹೃದಯದಲ್ಲಿ ತತ್ತ್ವಜ್ಞಾನವು ನಾಟಿರುವದೆಂದು ಹೇಗೆ ಅನ್ನ-ಲಾದೀತು? ವೇದಾಂತಗ್ರಂಥಗಳಲ್ಲಿ "ಆತ್ಮನು ಜನನಾದಿ ಷಡ್ವಿಕಾರ ರಹಿತನು" ಮುಂತಾದ ಸಿದ್ಧಾಂತಗಳನ್ನು ಓದಿದ ಕೂಡಲೆ

"नैव किंचित्करोमीति युक्तो मन्येत तत्त्ववित्"

ಎಂದು ಭಗವಂತನು ಉಪದೇಶಿಸಿದಂತೆ ನಿಷ್ಕರ್ಮತ್ವವು ಸಾಧಿಸಬಹುದೆ? ಜ್ಞಾನವೆಂಬುದೇನು ಹಾದಿಯ ಮೇಲೆ ಬಿದ್ದಿದೆಯೆ? ಆದುದರಿಂದಲೇ ಭಗವಂತನು

"आश्चर्यवत्पश्यति कश्चिदेन-
माश्चर्यवद्वदति तथैवचान्यः।
आश्चर्यवच्चैनमन्यश्शृणोति
शृत्वाप्येनं वेद न चैवकश्चित्॥

ಎಂದಿರುವನು. ಎಷ್ಟೋ ಸಾಧನಗಳಿಂದ ಸಾಧ್ಯವಾದ ಜ್ಞಾನದ ಮಹಿಮೆ-ಯನ್ನು ಗ್ರಂಥಮಾತ್ರದಿಂದ ತಿಳಿದು ಕರ್ಮಾದಿಸಾಧನಗಳಲ್ಲಿ ಅನಾದರವನ್ನು ಮಾಡಿದರೆ "अतो भ्रष्टस्ततो भ्रष्टः" ಎಂಬಂತೆ ನಾವು ತ್ರಿಶಂಕುವಿನ ಗತಿ-

ಯನ್ನು ಹೊಂದುವೆವು. ಆದಕಾರಣ ಭಗವಂತನು

"न कर्मणामनारंभान्नैष्कर्म्यं पुरुषोऽश्नुते"

ಎಂದು ಹೇಳಿದ್ದಾನೆ. ಕರ್ಮವು, ಅಂದರೆ ಯಾವದಾವರೊಂದು ಕೆಲಸವನ್ನು ಮಾಡೋಣವು ಒಂದಿಲ್ಲೊಂದು ಬಗೆಯಿಂದ ದುಃಖವನ್ನು ಕೊಡುವದು. ಏನೂ ಕೆಲಸವಿಲ್ಲವೆ ಸ್ವಸ್ಥವಾಗಿ ಇದ್ದಾಗ ನಮಗೆ ಸುಖವಾಗುವದೆಂಬುದಕ್ಕೆ ನಮ್ಮ ಗಾಢನಿದ್ರೆಯೇ ಸಾಕ್ಷಿ. ಕೆಲಸಮಾಡಿ ಶ್ರಮಪಟ್ಟಾಗ ವಿಶ್ರಾಂತಿಗಾಗಿ ನಾವು ಸುಮ್ಮನೆ ಕೂಡುವದು ಈ ವಿಷಯಕ್ಕೆ ನಿದರ್ಶನವಾಗಿದೆ. ಹೀಗೆ ನಿಮಿಷಮಾತ್ರವಾದರೂ ಏನೂ ಕೆಲಸವಿಲ್ಲದೆ ಇರುವದರಿಂದ ಆಗುವ ಸುಖದ ಅನುಭವದ ಮೇಲಿಂದ ನಿರಂತರವಾಗಿ ನಿಷ್ಕರ್ಮನಾಗಿರುವದು ನಿರಂತರ ಸುಖದ ಸಾಧನವಾಗಿರಬೇಕೆಂದು ಯಾರು ಒಪ್ಪಲಾರರು? ಆದರೆ ಹೀಗೆ ಕೆಲಸವಿಲ್ಲದೆ ಇರೋಣವನ್ನು—ಅಂದರೆ ನೈಷ್ಕರ್ಮ್ಯವನ್ನು—ಹೊಂದಬೇಕೆಂದು ಯಾವನಾದರೂ ತಾನು ಮಾಡತಕ್ಕ ಕೆಲಸಗಳನ್ನು ಬಿಟ್ಟು ಸುಮ್ಮನೆ ಕೂಡ ಹೋದರೆ ಅವನು ಹಾದಿ ತಪ್ಪಿದಂತಾಯಿತು. ಅವನು ಬಹಳ ಕಷ್ಟಪಟ್ಟರೆ ಬಾಹ್ಯೇಂದ್ರಿಯವ್ಯಾಪಾರಗಳನ್ನು ತಡೆದುಕೊಂಡು ಕೂಡಬಹುದು. ಆದರೆ ಹೀಗೆ ಮಾಡುವದರಿಂದ ಮನೋವ್ಯಾಪಾರವು ಎಂದಿಗೂ ನಿಲ್ಲಲಾರದು. ಈ ಪ್ರಕಾರವಾಗಿ ಕರ್ಮೇಂದ್ರಿಯಗಳ ಸಂಯಮನವನ್ನು ಮಾಡಿ ಮನಸ್ಸಿನಿಂದ ವಿಷಯಸ್ಮರಣೆಯನ್ನು ಮಾಡುತ್ತ ಕುಳಿತಿರುವವನು ಮಿಥ್ಯಾಚಾರನೆಂದು

"कर्मेंद्रियाणि संयम्य य आस्ते मनसा स्मरन्।
इंद्रियार्थान् विमूढात्मा मिथ्याचारः स उच्यते॥"

ಎಂಬ ಶ್ಲೋಕದಲ್ಲಿ ಭಗವಂತನು ಹೇಳಿದ್ದಾನೆ. ತಿಲಮಾತ್ರವಾದರೂ ಅನ್ನವು ಹೊಟ್ಟೆಯಲ್ಲಿ ಹೋದರೆ ದುಃಖವಾಗುವಷ್ಟು ರೋಗಪೀಡಿತನಾದವನು ಅನ್ನದ ಮೇಲೆ ಏನೂ ಇಚ್ಛೆ ಇಲ್ಲದಿದ್ದರೂ ಔಷಧರೂಪವಾದ ಅನ್ನವನ್ನು ಸೇವಿಸಿ ತನ್ನ ರೋಗವನ್ನು ಕಳೆದುಕೊಂಡು ಆರೋಗ್ಯವನ್ನು ಹೊಂದುವಂತೆ

ಕರ್ಮವು ಅಂದರೆ ಕೆಲಸವು ಏನೂ ಬೇಡವೆಂಬುವನು ಎಲ್ಲ ಕರ್ಮವನ್ನೂ ಬಿಡಿಸತಕ್ಕ ಕರ್ಮವನ್ನು ಆಶ್ರಯಿಸಿ ನೈಷ್ಕರ್ಮ್ಯವನ್ನು ಹೊಂದುವದು ಯುಕ್ತ-ವಾಗಿರುವದು. ಇಂಥ ಕರ್ಮಕ್ಕೇನೇ ಕರ್ಮವೆನ್ನಬೇಕು. ಆದುದರಿಂದ "**तत्कर्म यन्न बंधाय**" ಎಂದು ಅಂದಿದ್ದಾರೆ. "**कर्मबंधं प्रहास्यसि**" ಎಂಬು-ದರಲ್ಲಿ ಭಗವಂತನು ಹೇಳಿದಂತೆ ಬಂಧರೂಪವಾಗಿ ಪರಿಣಮಿಸುವ ಕರ್ಮಕ್ಕೆ ಕರ್ಮವೆಂಬ ಹೆಸರು ಒಪ್ಪಲಾರದು. ಬಂಧನವನ್ನು ಬಿಡಿಸುವದಕ್ಕೆ ಸಾಧ-ನವಾಗುತ್ತಿರುವ ಕರ್ತವ್ಯಕರ್ಮವನ್ನು ಮಾಡದಹೊರತು ನೈಷ್ಕರ್ಮ್ಯವು ದೊರೆಯುವದು ಅಸಂಭವವು. ಕರ್ತವ್ಯಕರ್ಮವನ್ನು ಮಾಡುವದರಿಂದ ಚಿತ್ತವು ಶುದ್ಧವಾಗಿ ತತ್ತ್ವಜ್ಞಾನದ ಅಧಿಕಾರವು ಬರುವದು. ತತ್ತ್ವವನ್ನು ತಿಳಿದವನಿಗೆ

"तत्त्ववित्तु महाबाहो गुणकर्मविभागयोः।
गुणा गुणेषु वर्तंत इति मत्वा न सज्जते॥"

ಎಂದು ಭಗವಂತನು ಅಂದಿರುವಂತೆ ಇಂದ್ರಿಯಗಳ ವ್ಯಾಪಾರಗಳಲ್ಲಿ ಕರ್ತೃ-ತ್ವಾಭಿಮಾನವಿಲ್ಲದಿರುವದರಿಂದ "**कुर्वन्नपि न लिप्यते**" ಎಂಬಂತೆ ಕರ್ಮದ ಲೇಪವೇನೂ ಆಗಲಾರದು. ಆದರೂ ಅವನು ಕೂಡ ಲೋಕಸಂಗ್ರಹಾರ್ಥ-ವಾಗಿ ಕರ್ತವ್ಯಕರ್ಮವನ್ನು— ಅದರಲ್ಲಿ ಸಕ್ತನಾಗದೆ— ಮಾಡುತ್ತಿರುವ ನೆಂಬುದು

"सक्ताः कर्मण्यविद्वांसो यथा कुर्वंति भारत।
कुर्याद्विद्वांस्तथासक्तश्चिकीर्षुर्लोकसंग्रहम्॥"

ಎಂಬ ಭಗವದ್ವಾಕ್ಯದಿಂದ ವ್ಯಕ್ತವಾಗುವದು. ಲೋಕಸಂಗ್ರಹವೆಂದರೇನೆಂ-ಬುದು "**लोकस्योन्मार्गप्रवृत्तिनिवारणं लोकसंग्रहः**" ಎಂದು ಶ್ರೀಶಂಕರಾ-ಚಾರ್ಯರು ತಮ್ಮ ಭಾಷ್ಯದಲ್ಲಿ ಬರೆದಿರುವದರಿಂದ ಸ್ಪಷ್ಟವಾಗುವದು. ಹೀಗೆ ಕರ್ತೃತ್ವಾಭಿಮಾನವಿಲ್ಲದೆ ಲೋಕಸಂಗ್ರಹವನ್ನು ಮಾಡಲಿಚ್ಛಿಸುವವನು

"न बुद्धिभेदं जनयेदज्ञानां कर्मसंगिनाम्।
जोषयेत्सर्वकर्माणि विद्वान् युक्तः समाचरन्॥"

ಎಂಬ ಭಗವದುಕ್ತಿಯಂತೆ ಕರ್ಮದಲ್ಲಿ ಆಸಕ್ತಿಯುಳ್ಳ ಅಜ್ಞರ ಬುದ್ಧಿಭೇದವನ್ನು ಮಾಡದೆ ಅವರಂತೆ ತಾನು ವರ್ತಿಸಿ ಕರ್ತವ್ಯಕರ್ಮವನ್ನು ಅವರಿಂದ ಮಾಡಿಸುವನು. ಏಕೆಂದರೆ

"यद्यदाचरति श्रेष्ठस्तत्तदेवेतरो जनः।
स यत्प्रमाणं कुरुते लोकस्तदनुवर्तते॥"

ಎಂದು ಭಗವಂತನು ಅಂದಂತೆ ಶ್ರೇಷ್ಠರನ್ನು ಜನರು ಅನುಸರಿಸುತ್ತಿರುವ ವಾಡಿಕೆ ಇರುವದರಿಂದ ಅವರು ಕರ್ತವ್ಯಕರ್ಮವನ್ನು ಮಾಡುತ್ತಿದ್ದರೆ ಅವರನ್ನು ನೋಡಿ ಪ್ರಾಕೃತಜನರಾದರೂ ಕರ್ತವ್ಯಕರ್ಮದಲ್ಲಿ ಆಸಕ್ತರಾಗಿ ಮತ್ತು ಅದರಿಂದ ಚಿತ್ತಶುದ್ಧಿಯನ್ನೂ ತತ್ತ್ವಜ್ಞಾನವನ್ನೂ ಹೊಂದಿ ನೈಷ್ಕರ್ಮ್ಯದಿಂದ ನಿಜಸುಖವನ್ನು ಪಡೆಯುವರು. ಈ ವಿಷಯದಲ್ಲಿ ತನ್ನ ಸ್ವಂತ ಉದಾಹರಣೆಯನ್ನು ಕೊಟ್ಟು

"न मे पार्थास्ति कर्तव्यं त्रिषु लोकेषु किंचन।
नानवाप्तमवाप्तव्यं वर्त एव च कर्मणि॥"

ಎಂದು ಭಗವಂತನು ತನಗೆ ಮೂರುಲೋಕಗಳಲ್ಲಿ ಏನೂ ಕರ್ತವ್ಯವೂ ಮತ್ತು ಏನೂ ಅಪ್ರಾಪ್ತವಾದುದೂ ಅಥವಾ ಪ್ರಾಪ್ತವ್ಯವಾದುದೂ ಇಲ್ಲದಿದ್ದರೂ ತಾನು ಸಹ ಕರ್ತವ್ಯಕರ್ಮವನ್ನು ಮಾಡುತ್ತಲೇ ಇರುವದರಿಂದ ಇತರರ ಪಾಡೇನೆಂಬದನ್ನು ಸೂಚಿಸಿದ್ದಾನೆ. ಇದರ ಕಡೆಗೆ ನಾವು ಚೆನ್ನಾಗಿ ಲಕ್ಷ್ಯವನ್ನು ಕೊಡಬೇಕು; ಮತ್ತು "ಸಾಧುಗಳಿಗೆ ಅದು ಏಕೆ ಬೇಕು? ಇದು ಏಕೆ ಬೇಕು?" ಎಂದು ಆಕ್ಷೇಪಣೆ ತೆಗೆಯುವದನ್ನು ಬಿಡಬೇಕು. ಸ್ವಂತಕ್ಕಾಗಿ ಸಾಧುಗಳಿಗೆ ಏನೂ ಬೇಡವಾಗಿದ್ದರೂ ಏನೂ ಕರ್ತೃತ್ವಾಭಿಮಾನವಿಲ್ಲದೆ ಜನರಿ-

ಗಾಗಿ ಅವರು ಜನರಂತೆ ವರ್ತಿಸುತ್ತಿರುವರು. ಎಲ್ಲವನ್ನೂ ಬಿಟ್ಟಿರುವವರೇ ಸಾಧುಗಳೆಂದು ಇಟ್ಟುಕೊಂಡರೆ ಪ್ರೇತಗಳಿಗೆ ನಾವು ಸಾಧುಗಳೆನ್ನಬೇಕಾಗುವದು. ಹೊರಗಿನ ಕೃತಿಗಳನ್ನು ಮಾತ್ರ ಬಿಟ್ಟರೆ ಅಲ್ಲ. ಆದರೆ ಕರ್ತೃತ್ವಾಭಿಮಾನವೊಂದನ್ನು ಬಿಟ್ಟರೆ ಎಲ್ಲವನ್ನೂ ಬಿಟ್ಟಂತಾಯಿತು. ಅವನು "**पश्यन् शृण्वन्**" ಇತ್ಯಾದಿ ಶ್ಲೋಕಗಳಲ್ಲಿ ಭಗವಂತನು ಹೇಳಿದಂತೆ ಯಾವ ಕೆಲಸವನ್ನು ಮಾಡುತ್ತಿದ್ದರೂ ಏನೂ ಮಾಡಿದಂತೆ ಅಲ್ಲ. ನಮ್ಮಂಥವರ ಸಲುವಾಗಿ ಅವರು ಕರ್ತವ್ಯಕರ್ಮವನ್ನು ಮಾಡುತ್ತಿರುವರು. ನಾವು ಅವರ ಸಹವಾಸವನ್ನು ಮಾಡಿ ಅವರ ವರ್ತನವನ್ನೆಲ್ಲ ಪರೀಕ್ಷಿಸಿ ನೋಡಿದರೆ ಅವರಿಗೆ ಏತರಲ್ಲಿಯೂ ಆಸಕ್ತಿ ಇರುವದಿಲ್ಲವೆಂಬುದು ಬಹು ಸ್ಪಷ್ಟವಾಗಿ ಕಂಡುಬರದೆ ಇರಲಾರದು.

ಹೀಗೆ ನೈಷ್ಕರ್ಮ್ಯವನ್ನು ಹೊಂದಿದ ಜ್ಞಾನಿಗಳು ಕೂಡ ಕರ್ತವ್ಯಕರ್ಮವನ್ನು ಮಾಡುತ್ತಿರುವಾಗ ನೈಷ್ಕರ್ಮ್ಯವನ್ನು ಹೊಂದಲಿಚ್ಛಿಸುವ ಜಿಜ್ಞಾಸುವು ಕರ್ತವ್ಯಕರ್ಮವನ್ನು ಮಾಡಬೇಕೆಂಬುವದನ್ನು ಹೇಳುವದೇನು! ಆದುದರಿಂದಲೇ

## "कर्मणैव हि संसिद्धिमास्थिता जनकादयः"

ಎಂದು ಭಗವಂತನು ಅಂದಿದಾನೆ. ಈ ಶ್ಲೋಕದ ಭಾಷ್ಯದಲ್ಲಿ ಶ್ರೀಶಂಕರಾಚಾರ್ಯರು "**यदि ते प्राप्तसम्यग्दर्शनास्ततो लोकसंग्रहार्थं कर्मणा सहैवासन्यस्यैव कर्म संसिद्धिमास्थिता इत्यर्थः । अथाप्राप्तसम्यग्दर्शना जनकादयस्तदा कर्मणा सत्वशुद्धिसाधनभूतेन क्रमेण संसिद्धिमास्थिता इति व्याख्येयः श्लोकः॥**" ಎಂದು ಬರೆದಿದ್ದಾರೆ. ಶ್ರೀರಾಮಾನುಜಾಚಾರ್ಯರು "**यतो ज्ञानयोगाधिकारिणोऽपि कर्मयोग एवात्मदर्शने श्रेयान् अत एव हि जनकादयो राजर्षयो ज्ञानिनामग्रेसराः कर्मयोगेनैव संसिद्धिमास्थिता आत्मानं प्राप्तवंतः**" ಎಂದು ಬರೆದಿದ್ದಾರೆ. ಮತ್ತು ಶ್ರೀಮಧ್ವಾಚಾರ್ಯರು* "**कर्मणा सह कर्म कुर्वंत एवेत्यर्थः कर्म कृत्वैव ततो ज्ञानं प्राप्य वा**" ಎಂದು ಮುಂತಾಗಿ ಬರೆದಿದ್ದಾರೆ. ಸರ್ವರ ಅಭಿಪ್ರಾಯದಿಂದಲೂ ಜನಕಾದಿಗಳು

ಜ್ಞಾನಪ್ರಾಪ್ತಿಯಾಗುವದಕ್ಕಿಂತ ಮೊದಲು ಮತ್ತು ಜ್ಞಾನಪ್ರಾಪ್ತಿಯಾದ ಮೇಲೆ ಕರ್ತವ್ಯಕರ್ಮವನ್ನು ಮಾಡುತ್ತಲೇ ಇದ್ದರೆಂದು ವ್ಯಕ್ತವಾಗುವದು. ಆದುದರಿಂದ ನಾವು ಜ್ಞಾನವಾಗುವ ಮೊದಲು ಅಥವಾ ಜ್ಞಾನವಾದ ಬಳಿಕ ಕರ್ತವ್ಯಕರ್ಮವನ್ನು ಮಾಡುತ್ತಲೇ ಇರಬೇಕು.

"ಜ್ಞಾನವಾದ ಮೇಲೂ ಕರ್ಮವು ಬೇಕೆಂದರೆ ಸಮುಚ್ಚಯವಾದವಾಯಿತಲ್ಲ? ಮತ್ತು ಈ ಸಮುಚ್ಚಯವಾದವನ್ನು ಶ್ರೀಶಂಕರಾಚಾರ್ಯರು ಗೀತೆಯಲ್ಲಿ ಸವಿಸ್ತಾರವಾಗಿ ನಿರಾಕರಿಸಿದ್ದಾರೆ" ಎಂದರೆ ಕೇಳಬೇಕು. ಜ್ಞಾನದ ಪೂರ್ವದಲ್ಲಿ ಇರುವಂತೆ ಅನಂತರದಲ್ಲಿ ಕರ್ಮದ ಅವಶ್ಯಕತೆಯನ್ನು ಹೇಳಿದ್ದರೆ ಸಮುಚ್ಚಯವಾದವಾಗುತ್ತಿತ್ತು. ಆದರೆ ಜ್ಞಾನವಾದಮೇಲೆ ಕರ್ಮಸನ್ಯಾಸವು ಪ್ರಾಪ್ತವಾದರೂ ಲೋಕಸಂಗ್ರಹಾರ್ಥವಾಗಿ ಕರ್ತವ್ಯಾಭಿಮಾನವಿಲ್ಲದಿದ್ದರೂ ಲೋಕದೃಷ್ಟಿಯಿಂದ ಕರ್ಮವನ್ನು ಮಾಡುತ್ತಿರಬೇಕೆನ್ನುವದರಲ್ಲಿ ಸಮುಚ್ಚಯವನ್ನೆಲ್ಲಿ ಹೇಳಿದಂತಾಯಿತು? ಸಮುಚ್ಚಯವಾದದ ನಿರಾಕರಣವನ್ನು ಮಾಡುತ್ತಿರುವ ಶಾಂಕರಭಾಷ್ಯದಲ್ಲಿಯೂ

"कर्मण्यभिप्रवृत्तोपि नैव किंचित्करोति सः"

ಎಂಬ ಶ್ಲೋಕದ ಕೆಳಗೆ "**विदुषा क्रियमाणं कर्म परमार्थतोऽकर्मैव तस्य निष्क्रियात्मदर्शनसंपन्नत्वात् तेनैवं भूतेन प्रयोजनाभावात्ससाधनं कर्म परित्यक्तव्यमेवेति प्राप्ते ततो निर्गमासंभवाल्लोकसंग्रहचिकीर्षया शिष्टविगर्हणापरिजिहीर्षया वा पूर्ववत्कर्मण्यभिप्रवृत्तोपि निष्क्रियात्मदर्शनसंपन्नत्वान्नैव किंचित्करोति सः**" ಎಂದು ಬರೆದಿರುವದರಲ್ಲಿಯೂ ಮತ್ತು ಅನೇಕ ಸ್ಥಳಗಳಲ್ಲಿಯೂ ಜ್ಞಾನಿಯು ಲೋಕಸಂಗ್ರಹಾರ್ಥವಾಗಿ ಕರ್ಮವನ್ನು ಮಾಡುತ್ತಿರುವನೆಂಬರ್ಥವು ಪ್ರತಿಪಾದಿಸಲ್ಪಟ್ಟೇ ಇದೆ. ಯೋಗವಾಸಿಷ್ಠದಲ್ಲಿ

"मोक्षस्य कारणं कर्म ज्ञानं वा मोक्षसाधनम्।
उभयं वा विनिश्चित्य एकं कथय कारणम्॥"

ಎಂಬ ಸುತೀಕ್ಷ್ಣಮುನಿಗಳ ಪ್ರಶ್ನೆಗೆ ಅಗಸ್ತ್ಯಮಹರ್ಷಿಗಳು

"उभाभ्यामेव पक्षाभ्यां यथा खे पक्षिणां गतिः।
तथैव ज्ञानकर्मभ्यां जायते परमं पदम्।
केवलात्कर्मणो ज्ञानान्न हि मोक्षोभिजायते।
किंतूभाभ्यां भवेन्मोक्षं साधनं तूभयं विदुः"

ಎಂದು ಕೊಟ್ಟ ಉತ್ತರದ ಭಾವವನ್ನು ನೋಡಿದರೂ ಕರ್ಮವಿಲ್ಲದೆ ಜ್ಞಾನವು ಹುಟ್ಟುವದಿಲ್ಲವಾದಕಾರಣ ಕರ್ಮವೂ ಮತ್ತು ಜ್ಞಾನವಿಲ್ಲದೆ ಕೇವಲ ಕರ್ಮದಿಂದ ಮೋಕ್ಷವಿಲ್ಲವಾದುದರಿಂದ ಜ್ಞಾನವೂ ಈ ಎರಡೂ ಮೋಕ್ಷಸಾಧನಗಳೆಂದು ಕಂಡುಬರುವದು. ಈ ಪ್ರಕಾರ ಮೊದಲು ಕರ್ಮವು ಆ ಮೇಲೆ ಜ್ಞಾನವು ಹೀಗೆ ಎರಡೂ ಬೇಕಾಗಿರುವವಲ್ಲದೆ ಇವೆರಡೂ ಒಂದೇ ಕಾಲಕ್ಕೆ ಬೇಕೆಂದು ಹೇಳಿದರೆ ಅದೇ ಗ್ರಂಥದ ಮುಂದಿನ ಸಿದ್ಧಾಂತಕ್ಕೂ ಮತ್ತು ಇತರ ಗ್ರಂಥಗಳಿಗೂ ವಿರೋಧವಾಗುವದರಿಂದ ಮೊದಲು ಕರ್ಮವನ್ನು ಮಾಡಿ ಆ ಮೇಲೆ ಜ್ಞಾನವನ್ನು ಹೊಂದಿದವನಿಗೆ ಮೋಕ್ಷವಾಗುವದೆಂಬ ತಾತ್ಪರ್ಯವು ವ್ಯಾಖ್ಯಾನದಲ್ಲಿ ನಿರ್ಣಯಿಸಲ್ಪಟ್ಟಿದೆ. ಹಾಗಾದರೆ ಮೊದಲು ಕರ್ಮ ಆ ಮೇಲೆ ಜ್ಞಾನವೆಂದು ಶಾಸ್ತ್ರವಿದ್ದಮೇಲೆ ಜ್ಞಾನವಾದ ಬಳಿಕ ಕರ್ಮವನ್ನು ಮಾಡಬೇಕೆಂದು ಹೇಳುವದೇಕೆ? ಏಕೆಂದರೆ ಲೋಕಸಂಗ್ರಹಾರ್ಥವಾಗಿ ಎಂಬುದೇ ಉತ್ತರವು. ಅದಾದರೂ ಏಕೆ? ಎಂದರೆ—ಜ್ಞಾನಿಯು ಕರ್ತೃತ್ವಾಭಿಮಾನವಿಲ್ಲದೆ ಶ್ವಾಸೋಚ್ಛ್ವಾಸಕ್ರಿಯೆಗಳನ್ನು ಮಾಡುತ್ತಿರುವಂತೆ ಕರ್ತವ್ಯಕರ್ಮವನ್ನು ಮಾಡುತ್ತಿರುವದರಿಂದ ತನಗೇನೂ ಬಾಧೆ ಇಲ್ಲದೆ ಪ್ರಾಕೃತಜನರಿಗೆ ಅದರಿಂದ ಉಪಯೋಗವಾಗುವದಿಲ್ಲವೆ? ಜ್ಞಾನವನ್ನುಂಟುಮಾಡಿಕೊಡುವದಕ್ಕೆ ಮೊದಲು ಯಾವದು ಉಪಾಯವಾಯಿತೊ ಅಂಥ ಕರ್ತವ್ಯಕರ್ಮದಿಂದ ಜ್ಞಾನವಾದಮೇಲೆ ಅಪಾಯವಾದರೂ ಏನಾಗುವದು? ಯಾವ ವಿದ್ಯೆಯಿಂದ ಒಬ್ಬನು ಧನವನ್ನು ಗಳಿಸಿ ಶ್ರೀಮಂತನಾಗುವನೊ ಅವನಿಗೆ ಆ ವಿದ್ಯೆಯು ಶ್ರೀಮಂತನಾದ ಮೇಲೆ ತ್ಯಾಜ್ಯವಾಗಲಾರದು. ಒಂದೂರಿನಲ್ಲಿ ಒಬ್ಬ ಬಣಜಿಗನಿದ್ದನು. ಅವನು ಮೊದಲು ಸಣ್ಣಸಣ್ಣ ವ್ಯಾ-

ಪಾರಗಳನ್ನು ಮಾಡಿಮಾಡಿ ಬೇಕಾದಷ್ಟು ಹಣವನ್ನು ಗಂಟುಹಾಕಿದನು. ಇದನ್ನು ನೋಡಿ ಅವನಿಗೆ ದೊಡ್ಡದೊಡ್ಡ ವ್ಯಾಪಾರಕ್ಕೆ ಸಾಕಾಗುವಷ್ಟು ಹಣವನ್ನು ಇತರ ವರ್ತಕರು ಸಾಲವಾಗಿ ಕೊಟ್ಟರು. ಬಣಜಿಗನು ಆ ಹಣದ ಸಹಾಯದಿಂದ ಕಂಡಕಂಡ ವ್ಯಾಪಾರಗಳಿಗೆಲ್ಲ ಕೈಹಾಕಿದನು. ದುರ್ದೈವದಿಂದ ಅವನ ಹಣವೆಲ್ಲ ನಷ್ಟವಾಯಿತು. ಹೀಗೆ ಅವನು ದಿವಾಳಿಯಾದುವನ್ನು ನೋಡಿ ಸಾಲವನ್ನು ಕೊಟ್ಟಿದ್ದ ವರ್ತಕರೆಲ್ಲರೂ ಸೇರಿ ಅವನ ಮೇಲೆ ನ್ಯಾಯಸ್ಥಾನದಲ್ಲಿ ದಾವೆಯನ್ನು ತಂದರು. ನ್ಯಾಯಾಧೀಶನು ನಡೆದ ವಿದ್ಯಮಾನವನ್ನೆಲ್ಲ ವಿಚಾರಿಸಿ ಕೊನೆಗೆ ಆ ಬಣಜಿಗನನ್ನು ಕುರಿತು "ನಿನ್ನ ಸರ್ವಸ್ವವೂ ಸಾಲಗಾರರಿಗೆ ಹಂಚಲ್ಪಡತಕ್ಕದ್ದೆಂದು ನಾನು ತೀರ್ಮಾನಿಸಿದ್ದೇನೆ" ಎಂದು ಹೇಳಿದನು. ಆ ಬಣಜಿಗನು "ಸ್ವಾಮಿ, ನ್ಯಾಯಾಧೀಶರೆ, ಅಗತ್ಯವಾಗಿ ಹಾಗೆ ಆಗಬಹುದು. ಆದರಿಂದ ನನಗೇನೂ ಅಪಾಯವಿಲ್ಲ. ನಾನು ಬರಿಗಯ್ಯಾಗಿದ್ದಾಗಲೂ ನನ್ನಲ್ಲಿ ಇದೊಂದು ತಕ್ಕಡಿಯಿತ್ತು. ಈಗಲೂ ಇದೊಂದು ತಕ್ಕಡಿ ನನ್ನ ಕೈಯಲ್ಲುಳಿದುಕೊಂಡರೆ ಸಾಕು. ಮತ್ತೆ ನಾನು ಹಣಗಾರನಾಗಬಹುದು. ಆದುದರಿಂದ ಮಧ್ಯಕಾಲದಲ್ಲಿ ಬಂದಿರುವ ಈ ಹಣವನ್ನು ನೀವು ಇತರರಿಗೆ ಕೊಡಿಸುವದರಿಂದ ನಾನು ಎದೆಗೆಡುವ ಕಾರಣವಿಲ್ಲ" ಎಂದುತ್ತರವನ್ನು ಕೊಟ್ಟನು. ಹೀಗೆ ಯಾವ ಕರ್ಮದಿಂದ ನಾವು ಜ್ಞಾನವನ್ನು ಗಳಿಸುವೆವೊ ಆ ಕರ್ಮವನ್ನು ಜ್ಞಾನವಾದ ಮೇಲೂ ಬಿಡದೆ ಹಿಡಿದಿರಬೇಕು. ಜ್ಞಾನವಾಗುವದಕ್ಕೆ ಮೊದಲು ಕರ್ತೃತ್ವಾಭಿಮಾನವಿದ್ದಂತೆ ಜ್ಞಾನವಾದ ಮೇಲೆ ಮಾತ್ರ ಇರಲಾರದು. ಇಷ್ಟೇ ಮೊದಲಿಗೂ ಹಿಂದುಗಡೆಗೂ ಅಂತರವಿರುವದು. ಈ ಪ್ರಕಾರ ಕರ್ತವ್ಯಕರ್ಮವನ್ನು ದೃಢವಾಗಿ ಹಿಡಿಸಬೇಕೆಂದು ಭಗವಂತನು "**कुरु कर्मैव तस्मात्त्वं**" ಎಂದು ಮುಂತಾಗಿ ಉಪದೇಶಿಸಿದ್ದಾನೆ. ಅರ್ಜುನನು

> "ज्यायसी चेत्कर्मणस्ते मता बुद्धिर्जनार्दन।
> तत्किं कर्मणि घोरे मां नियोजयसि केशव॥"

ಎಂದು ಅಂದರೆ "ಹೆ, ಕೃಷ್ಣ, ಕರ್ಮಕ್ಕಿಂತಲೂ ಜ್ಞಾನವು ಹೆಚ್ಚಿನದೆಂದು ನಿನ್ನ

ಅಭಿಪ್ರಾಯವಿದ್ದರೆ ಮತ್ತೇಕೆ ಘೋರವಾದ ಕರ್ಮದಲ್ಲಿ ನನ್ನನ್ನು ನಿಯೋಗಿಸುವಿ?" ಎಂದು ಹೇಳಿಕೊಂಡರೂ ಭಗವಂತನು "**नियतं कुरु कर्म त्वं**" ಎಂದು ಮುಂತಾಗಿ ಕರ್ತವ್ಯಕರ್ಮವನ್ನು ಮಾಡಲೇ ಬೇಕೆಂದು ಅವನಿಗೆ ಆಜ್ಞಾಪಿಸಿರುವನು. ಏನೂ ಕೆಲಸವನ್ನು ಮಾಡದೆ ನಿಷ್ಕರ್ಮನಾಗಿ ನಿಜಸುಖದಿಂದಿರುವದು ಕರ್ತವ್ಯಕರ್ಮವನ್ನು ಬಿಟ್ಟುಕೊಡುವದರಿಂದ ಸಾಧಿಸುವಷ್ಟು ಸುಲಭವಾಗಿದ್ದರೆ ಭಗವಂತನು ಅರ್ಜುನನಿಗೆ ಹೀಗೆ ಹೇಳುತ್ತಲೇ ಇರಲಿಲ್ಲ.

"यदहंकारमाश्रित्य न योत्स्य इति मन्यसे।
मिथ्यैष व्यवसायस्ते प्रकृतिस्त्वां नियोक्ष्यति ॥
स्वभावजेन कौंतेय निबद्धः स्वेन कर्मणा।
कर्तुं नेच्छसि यन्मोहात्करिष्यस्यवशोपि तत् ॥"

ಎಂಬ ಶ್ಲೋಕಗಳಲ್ಲಿ ಭಗವಂತನು ಅರ್ಜುನನಿಗೆ "ನೀನು ಹೀಗೆ ಅಭಿಮಾನದಿಂದ ಕರ್ಮವನ್ನು ಮಾಡುವದಿಲ್ಲವೆಂದು ಮಾಡಿಕೊಂಡಿರುವ ನಿಶ್ಚಯವು ಮಿಥ್ಯವಾದುದೇ ಸರಿ. ನಿನ್ನ ಪ್ರಕೃತಿಯು ನಿನ್ನಿಂದ ಕರ್ಮವನ್ನು ಮಾಡಿಸಿಯೇ ಬಿಡುವದು. ನೀನು ಯಾವದನ್ನು ಈಗ ಮಾಡಲಿಚ್ಛಿಸುವದಿಲ್ಲವೊ ಅದನ್ನು ಸ್ವಭಾವಜನಿತವಾದ ಗುಣದಿಂದ ಮೋಹಿತನಾಗಿ ಪರವಶನಾಗಿಯಾದರೂ ಮಾಡಿಯೇ ಮಾಡುವಿ" ಎಂದು ಸ್ಪಷ್ಟವಾಗಿ ಹೇಳಿದ್ದಾನೆ. ಅರ್ಜುನನು ಯುದ್ಧರೂಪವಾದ ತನ್ನ ಕರ್ತವ್ಯಕರ್ಮಕ್ಕೆ ಸಿದ್ಧನಾಗಿ ನಿಂತಿದ್ದು ಒಮ್ಮೆಲೇ ಅದನ್ನು ಒಲ್ಲೆನೆಂದು ಮೇಲೆ ಬಿಟ್ಟಿದ್ದರೂ ಕೂಡ ಕನಸಿನಲ್ಲಾಗಲಿ ಮನಸ್ಸಿನಲ್ಲಾಗಲಿ ಅದನ್ನು ಮಾಡುವದು ಅವನಿಗೇನೂ ತಪ್ಪುತ್ತಿರಲಿಲ್ಲ. ಬಲಾತ್ಕಾರದಿಂದ ಕರ್ಮವನ್ನು ಬಿಡಲಿಕ್ಕೆ ಹೋದರೆ ಅದು ಬಿಟ್ಟೀತೆ? ಎಷ್ಟು ಬಲವಾಗಿ ನಾವು ಅದನ್ನು ಬಿಡುವೆವೊ ಅದರ ಇಮ್ಮಡಿಯಾದ ಬಲದಿಂದ ಅದು ನಮ್ಮನ್ನು ಮಾಡಲಿಕ್ಕೆ ಹಚ್ಚದೆ ಬಿಡಲಾರದು. ಆದುದರಿಂದಲೇ ಭಗವಂತನು

"कार्यतेह्यवशः कर्म सर्वः प्रकृतिजैर्गुणैः"

ಎಂದು ಅಂದಿದ್ದಾನೆ. ಆದಕಾರಣ ಕರ್ತವ್ಯಕರ್ಮವನ್ನು ಮಾಡುವದರಿಂದಲೇ ನಾವು ನೈಷ್ಕರ್ಮ್ಯವನ್ನು ಪಡೆಯಬೇಕು. ಯಾವ ಉದ್ಯೋಗವನ್ನೂ ಮಾಡದೆ ಸುಖದಿಂದ ಜೀವಿಸುತ್ತಿರಬೇಕೆಂದು ಇಚ್ಛಿಸುವವನು ಮೊದಲು ಏನಾದರೂ ಉದ್ಯೋಗವನ್ನು ಮಾಡಿ ಕಷ್ಟದಿಂದ ಧನವನ್ನು ಗಳಿಸುವದು ಅಗತ್ಯವಿದ್ದಂತೆ ನಿಷ್ಕರ್ಮನಾಗಿರಬೇಕೆಂಬುವನು ಮೊದಲು ಕರ್ಮವನ್ನು ಮಾಡಬೇಕೆಂಬುದವಶ್ಯವಿರುವದು. ಆದುದರಿಂದಲೇ ಭಗವಂತನು ಗೀತಾಶಾಸ್ತ್ರದಲ್ಲಿ "तस्माद्युद्धस्व भारत" "ततो युद्धाय युज्यस्व" ಎಂದು ಮುಂತಾಗಿ ಮೇಲಿಂದ ಮೇಲೆ ಅರ್ಜುನನಿಗೆ ಯುದ್ಧರೂಪವಾದ ತನ್ನ ಕರ್ತವ್ಯವನ್ನು ಮಾಡಲಿಕ್ಕೆ ಬೋಧಿಸಿರುವನು. ಅರ್ಜುನನು ಕರ್ತವ್ಯಮೂಢನಾಗಿದ್ದನು. ಕುರುಕ್ಷೇತ್ರದಲ್ಲಿ ಪಾಂಡವರೂ ಮತ್ತು ಕೌರವರೂ ಯುದ್ಧವನ್ನು ಮಾಡುವದಕ್ಕೋಸ್ಕರ ಎದುರಾಳುಗಳಾಗಿ ನಿಂತಿರಲು ರಥಾರೂಢನಾದ ಅರ್ಜುನನು ತನ್ನ ಸಾರಥ್ಯವನ್ನು ಕೈಕೊಂಡ ಭಕ್ತವತ್ಸಲನಾದ ಶ್ರೀಕೃಷ್ಣಭಗವಂತನನ್ನು ಕುರಿತು ರಣಾಂಗಣದಲ್ಲಿ ಯುದ್ಧವನ್ನು ಮಾಡುವದಕ್ಕೆ ಯಾವ ಯಾವ ವೀರರು ಸಿದ್ಧರಾಗಿ ಬಂದಿದ್ದಾರೆಂಬದನ್ನು ನೋಡುವದಕ್ಕಾಗಿ ಉಭಯ ಸೇನೆಗಳ ಮಧ್ಯದಲ್ಲಿ ರಥವನ್ನು ನಿಲ್ಲಿಸಬೇಕೆಂದು ಪ್ರಾರ್ಥಿಸಿದನು. ಶ್ರೀಕೃಷ್ಣನು ಹಾಗೆ ಮಾಡಿದಮೇಲೆ ಅರ್ಜುನನು ಕೌರವರ ಸೈನ್ಯದ ಮೇಲೆ ತನ್ನ ದೃಷ್ಟಿಯನ್ನು ಪ್ರಸರಿಸಿದನು. ಆಗ ನೋಡಲಾಗಿ ಅಲ್ಲಿದ್ದವರೆಲ್ಲರೂ ಪಿತೃವರ್ಗದವರೂ ಪಿತಾಮಹವರ್ಗದವರೂ ಗುರುಗಳೂ ಮಾವಂದಿರೂ ಭಾವಂದಿರೂ ಅಣ್ಣತಮ್ಮಂದಿರೂ ಮಕ್ಕಳೂ ಮೊಮ್ಮಕ್ಕಳೂ ಸ್ನೇಹಿತರೂ ಹೀಗೆ ಒಂದಿಲ್ಲೊಂದು ರೀತಿಯಿಂದ ಬಂಧುಗಳಾಗಿದ್ದರು. ಆ ಬಂಧುಬಳಗದವರನ್ನೆಲ್ಲ ನೋಡುತ್ತಲೇ ಅರ್ಜುನನ ಹೃದಯವು ದಾಕ್ಷಿಣ್ಯದಿಂದ ಬದ್ಧವಾಯಿತು. ಒಡನೆಯೇ ಅವನು ದಯಾರಸವನ್ನು ಸೂಚಿಸುವ ಮುಖವುಳ್ಳವನಾಗಿ ಶ್ರೀಕೃಷ್ಣನನ್ನು ಕುರಿತು "ಹೆ, ಕೃಷ್ಣ, ನನ್ನ ಸಂಗಡ ಕಾದಬೇಕೆಂದು ಬಂದಿರುವ ಈ ಸ್ವಜನರನ್ನೆಲ್ಲ ನೋಡಿ ನನಗೆ ಬಹು ಸಂಕೋಚವಾಗುತ್ತದೆ. ನನ್ನ

ಮುಖವು ನಿರುತ್ಸಾಹದಿಂದ ಬಾಡುತ್ತಿದೆ. "ಇಂಥದೊಂದು ಕೆಲಸವು ನನ್ನ ಭಾಗಕ್ಕೆ ಬಂದಿದೆಯಲ್ಲ" ಎಂದು ನನಗೆ ಶರೀರವೆಲ್ಲ ನಡುಗುತ್ತದೆ; ರೋಮಗಳೆಲ್ಲ ಎದ್ದು ನಿಲ್ಲುತ್ತಿವೆ; ಗಾಂಡಿವವು ಕೈಯಿಂದ ಜಾರುತ್ತಿದೆ; ಮೈ ಎಲ್ಲ ಸುಡುತ್ತಿದೆ. ಈ ದುಸ್ಥಿತಿಯನ್ನು ನಾನು ಸಹಿಸಲಾರೆನು. ನನ್ನ ಮನಸ್ಸು ಒಂದುಕಡೆ ನಿಲ್ಲದೆ ಸುಮ್ಮನೆ ಸುತ್ತುತ್ತಿದೆ. ಇವರ ಜೊತೆಗೆ ಅನೇಕ ಅಪಶಕುನಗಳೂ ನನಗೆ ಕಾಣುತ್ತಿವೆ. ಯುದ್ಧದಲ್ಲಿ ಈ ಸ್ವಜನರನ್ನೆಲ್ಲ ಕೊಲ್ಲುವದರಿಂದ ಯಾವ ಪುರುಷಾರ್ಥಸಾಧನೆಯಾಗುವದೊ ನಾನು ಕಾಣೆ. ಹೆ, ಕೃಷ್ಣ, ನನಗೆ ಈ ಜಯವೂ ಬೇಡ; ಈ ರಾಜ್ಯವೂ ಬೇಡ; ಈ ಸುಖವೂ ಬೇಡ. ಹೇ ಗೋವಿಂದ, ಈ ಸ್ವಜನರೆಲ್ಲರೂ ಇದ್ದರೆ ಇವರ ಸಂಗಡ ಬಾಳಿಕೊಂಡಿರುವದಕ್ಕೆ ರಾಜ್ಯ, ಸುಖ ಮೊದಲಾದುವು ಉಪಯೋಗಕ್ಕೆ ಬರುವವು. ಪಿತೃಪಿತಾಮಹರೂ ಗುರುಗಳೂ, ಮಾವ, ಭಾವ, ಅಣ್ಣ, ತಮ್ಮ, ಮಕ್ಕಳು, ಸ್ನೇಹಿತರು ಮೊದಲಾದವರೆಲ್ಲರೂ ಈಗ ನನ್ನೊಡನೆ ಕಾದಬೇಕೆಂದು ನಿಂತಿದ್ದಾರಲ್ಲ! ಇವರನ್ನೆಲ್ಲ ಕೊಂದ ಮೇಲೆ ರಾಜ್ಯವೇತಕ್ಕೆ? ಭೋಗವೇತಕ್ಕೆ? ನಾನು ಬದುಕಿರುವದು ತಾನೆ ಏತಕ್ಕೆ? ಹೆ ಮಧುಸೂದನ, ಇವರನ್ನೆಲ್ಲ ಕೊಲ್ಲುವದು ನನ್ನ ಮನಸ್ಸಿಗೆ ಎಷ್ಟುಮಾತ್ರವೂ ಬರುವದಿಲ್ಲ. ಮೂರು ಲೋಕವೇ ನನ್ನ ಕೈ ಸೇರುವದಾದರೂ ಈ ಉದ್ಯೋಗವು ನನಗೆ ಬೇಡ. ಇನ್ನು ಈ ಕ್ಷುದ್ರಭೂಮಿಯ ಪಾಡೇನು? ಹೆ ಜನಾರ್ದನ, ಈ ಕೌರವ ಪಕ್ಷದವರನ್ನು ಕೊಲ್ಲುವದರಿಂದ ನಮಗೇನು ಹಿತವಾದೀತು? ಹಿಂದುಮುಂದು ನೋಡದೆ ಯುದ್ಧಕ್ಕೆ ಬಂದು ನಿಂತಿರುವ ಇವರನ್ನು ಕೊಲ್ಲುವದರಿಂದ ನಮಗೆ ಪಾಪವೇ ಬಂದೀತೆಂದು ನಾನು ಯೋಚಿಸುತ್ತೇನೆ. ಸ್ವಜನರಾದ ಧಾರ್ತರಾಷ್ಟ್ರರ ಮೇಲೆ ಕೈಮಾಡುವದು ನಮಗೆಂದಿಗೂ ಯೋಗ್ಯವಲ್ಲ. ಹೆ ಮಾಧವ, ಸ್ವಜನರನ್ನು ಕೊಲ್ಲುವವರು ಹೇಗೆ ಸುಖಿಗಳಾದಾರು? ದುರಾಶೆಯಿಂದ ಮೋಹಿತರಾಗಿ ಈ ಕೌರವರು ಯುಕ್ತಾಯುಕ್ತವನ್ನರಿಯದಿದ್ದರೂ ಕುಲಕ್ಷಯದಿಂದಾಗುವ ದೋಷವನ್ನೂ ಮಿತ್ರವಧೆಯಿಂದಾಗುವ ಪಾತಕವನ್ನೂ ನಾವಾದರೂ ತಿಳಿದು ಏಕೆ ಇದಕ್ಕೆ ಹಿಂದೆಗೆಯಬಾರದು. ಹೆ ಜನಾರ್ದನ, ಕುಲಕ್ಷಯವಾಗುವದರಿಂದ ಸನಾತನವಾದ ಕುಲಧರ್ಮಗಳು ನಾಶವಾಗುವವು.

ಧರ್ಮವು ನಾಶವಾಗಲಾಗಿ ಜನರಲ್ಲಿ ಅಧರ್ಮವು ಬೆಳೆಯುವದು. ಅಧರ್ಮದಿಂದ ಕುಲಸ್ತ್ರೀಯರು ದೂಷಿತರಾಗುವರು. ಸ್ತ್ರೀಯರ ದೋಷದಿಂದ ವರ್ಣಸಂಕರವೇ ಆಗುವದು. ಆ ಸಂಕರವು ನರಕಕ್ಕೆ ದಾರಿ. ಅಹಾ! ನಾವು ಎಂಥ ಮಹತ್ಪಾಪವನ್ನು ಮಾಡುವದಕ್ಕೆ ಹೊರಟಿದ್ದೇವೆ! ರಾಜ್ಯಸುಖಲೋಭದಿಂದ ಸ್ವಜನರನ್ನೆಲ್ಲ ಕೊಲ್ಲುವದಕ್ಕೆ ಉದ್ಯುಕ್ತರಾಗಿದ್ದೇವಲ್ಲ! ಇವರ ಮೇಲೆ ನಾನು ಕೈ ಎತ್ತುವದಕ್ಕಿಂತಲೂ ಶಸ್ತ್ರಪಾಣಿಗಳಾದ ಈ ಧಾರ್ತರಾಷ್ಟ್ರರೇ ಇಗೊ ಶಸ್ತ್ರಸನ್ಯಾಸವನ್ನು ಮಾಡಿ ಕುಳಿತಿರುವ ನನ್ನನ್ನೇ ಕೊಂದರೂ ಅದೇ ನನಗೆ ಹೆಚ್ಚು ಹಿತಕರವೆಂದು ತಿಳಿಯುತ್ತೇನೆ." ಎಂದು ಧನುರ್ಬಾಣಗಳನ್ನು ಕೆಳಗಿಟ್ಟು ದುಃಖಾಕುಲನಾಗಿ ಕುಳಿತುಕೊಂಡನು. ಹೀಗೆ ಕಣ್ಣೀರಿಡುತ್ತ ದೈನ್ಯತೆಯನ್ನು ಹೊಂದಿರುವ ಅರ್ಜುನನನ್ನು ನೋಡಿ ಶ್ರೀಕೃಷ್ಣನು "ಹೆ ಅರ್ಜುನ, ಯುದ್ಧಕ್ಕೆ ಹಿಂದೆಗೆಯುವಂಥ ಈ ಭಯಸೂಚಕವಾದ ದುರವಸ್ಥೆಯು ಸರ್ವಕ್ಷತ್ರಿಯಶ್ರೇಷ್ಠನಾದ ನಿನಗೆ ಎಲ್ಲಿಂದ ಬಂತು? ಇದು ಪೂರ್ವಾಚಾರಕ್ಕೆ ವಿರುದ್ಧವಾದುದು. ಶಾಸ್ತ್ರಾರ್ಥಗಳನ್ನು ತಿಳಿಯದ ಮೂಢರಿಗೆ ಮಾತ್ರ ಇದು ಒಪ್ಪೀತು. ಈ ನಿನ್ನ ಯೋಚನೆಯು ಸ್ವರ್ಗಸುಖಕ್ಕೆ ಪ್ರತ್ಯವಾಯಕಾರಣವಾದುದು ಮತ್ತು ಅರ್ಜುನನೆಂಬ ಹೆಸರಿನಿಂದ ಪ್ರಖ್ಯಾತನಾದ ನಿನಗೆ ಇದು ಎಷ್ಟುಮಾತ್ರವೂ ಒಪ್ಪುವದಿಲ್ಲ. ಹೆ ಪಾರ್ಥ, ಅಧೈರ್ಯಕ್ಕೆ ಎಡೆಗೊಡಬೇಡ. ಮಹೇಶ್ವರನೊಡನೆ ಕೂಡ ಯುದ್ಧವನ್ನು ಮಾಡಿದ ಪ್ರಖ್ಯಾತಪುರುಷನಾದ ನಿನ್ನಂಥ ಮಹಾಮಹಿಮನಿಗೆ ಇದು ಸರಿಯಲ್ಲ. ಕ್ಷುದ್ರವಾದ ಈ ಅಧೈರ್ಯವನ್ನು ಬಿಟ್ಟು ಯುದ್ಧವನ್ನು ಉಪಕ್ರಮಿಸು" ಎಂದು ಭುಜವನ್ನು ತಟ್ಟಿ ಉತ್ತೇಜನವನ್ನು ಕೊಟ್ಟನು. ಇಷ್ಟು ಮಾತಿನಿಂದಲೇ ಅರ್ಜುನನಿಗೇನೂ ಸಮಾಧಾನವಾಗಲಿಲ್ಲ. ಆಗ ಅವನು "ಹೆ ಮಧುಸೂದನ, ಏನು ಹೇಳುತ್ತಿ, ಭೀಷ್ಮನೂ ದ್ರೋಣನೂ ನನಗೆ ಗುರುಗಳು. ನಾನು ಅವರನ್ನು ಪೂಜೆ ಮಾಡಬೇಕಾದುದು ನ್ಯಾಯವಾಗಿರುವಾಗ ಅವರ ಮೇಲೆ ಬಾಣಪ್ರಯೋಗವನ್ನು ಹೇಗೆ ಮಾಡಲಿ? ಮಹಾನುಭಾವರಾದ ಗುರುಗಳ ಮೇಲೆ ಕೈಮಾಡುವದನ್ನು ಬಿಟ್ಟು ಈ ಲೋಕದಲ್ಲಿ ತಿರಿದುಂಡಾದರೂ ಬಾಳಬಹುದು. ಗುರುವಧೆಯನ್ನು ಮಾಡುವದರಿಂದ ಒಂದು ಪಕ್ಷ ರಕ್ತಪಾತದಿಂದ ಲಭ್ಯವಾದಂಥ

ಅತ್ಯಂತ ನಿಂದ್ಯವಾದ ಐಹಿಕಾರ್ಥ ಕಾಮುಗಳನ್ನು ಮಾತ್ರ ಪಡೆಯಬಹುದೇ ಹೊರತು ಈ ನಡವಳಿಕೆಯಿಂದ ಮೋಕ್ಷವು—ಕೊನೆಗೆ ಸ್ವರ್ಗಸುಖವೂ ಕೂಡ—ದೂರವಾಗುವದೇ ಸರಿ. ಹಿಂಸಾಶೂನ್ಯವಾದ ಭಿಕ್ಷಾಟನವೃತ್ತಿಯುತ್ತಮವೊ ಅಥವಾ ಸ್ವವೃತ್ತಿಯಾದ ಯುದ್ಧವು ಉತ್ತಮವೊ ನನಗೆ ಯಾವದೂ ತಿಳಿಯದೆ ಇದೆ. ಅಥವಾ ಸ್ವವೃತ್ತಿಯೆಂಬ ಅಭಿಮಾನದಿಂದ ನಾನು ಯುದ್ಧವನ್ನು ಮಾಡಿದರೂ ಧಾರ್ತರಾಷ್ಟ್ರರಿಗೆ ಜಯವಾದರಂತು ಸರಿ. ನಮಗೆ ಜಯವಾದರೆ ತಾನೆ ಏನು ಪ್ರಯೋಜನ? ಏಕೆಂದರೆ ಯಾವ ಬಂಧುವರ್ಗವನ್ನು ಬಿಟ್ಟು ಇರುವದಕ್ಕೆ ನಮ್ಮಿಂದಾಗುವದಿಲ್ಲವೊ ಅಂಥವರೆಲ್ಲರೂ ಯುದ್ಧಕ್ಕೆ ನಿಂತಿರುವಾಗ ಅವರನ್ನು ಕೊಂದಮೇಲಾದರೂ ನಾವು ಬದುಕುವ ಮಾತು ಎಲ್ಲಿಯದು? ಆದುದರಿಂದ ವಿಚಾರಮಾಡಿದರೆ ಯುದ್ಧಮಾಡುವದು ಭಿಕ್ಷಾಟನೆಯಷ್ಟು ಪ್ರಶಸ್ತವಾಗಿ ಕಾಣುವದಿಲ್ಲ. ಆದರೂ ಈಗ ನನ್ನ ಮನಸ್ಸು ದೈನ್ಯದಿಂದ ಕಲುಷಿತವಾಗಿರುವದರಿಂದ ನನ್ನ ತಿಳುವಳಿಕೆಯು ನಿರ್ದುಷ್ಟವಾಗಿರಲಾರದು. ಯಾವದು ಧರ್ಮ ಮತ್ತು ಯಾವದು ಅಧರ್ಮವೆಂಬುದನ್ನು ನನ್ನಲ್ಲಿ ನಾನೇ ನಿಶ್ಚಯಿಸಲಾರದೆ ನಿನ್ನನ್ನು ಕೇಳುತ್ತೇನೆ. ನನಗೆ ಹಿತಕರವಾವುದೊ ಅದನ್ನು ನಿನಗೆ ಶರಣುಬಂದಿರುವ ಈ ದೀನನಾದ ನನಗೆ ಉಪದೇಶಮಾಡು" ಎಂದು ಕೇಳಿಕೊಂಡನು. ಹೀಗೆ ಕರ್ತವ್ಯವಾವುದು? ಮತ್ತು ಅಕರ್ತವ್ಯವಾವುದು? ಎಂಬ ವಿಷಯದಲ್ಲಿ ಮೂಢನಾಗಿ ಶೋಕಮಾಡುತ್ತಿರುವ ಅರ್ಜುನನ ಮೋಹವನ್ನು ಕಳೆದು ಅವನಿಗೆ ಸಮಾಧಾನವನ್ನು ಉಂಟುಮಾಡುವದಕ್ಕಾಗಿ ಶ್ರೀಕೃಷ್ಣನು ಉಪದೇಶಮಾಡಲಿಕ್ಕಾರಂಭಿಸಿದನು. ಭಗವಂತನ ಉಪದೇಶವು

"अशोच्यानन्वशोचस्त्वं प्रज्ञावादांश्च भाषसे"

ಎಂಬ ಶ್ಲೋಕದಿಂದ ಪ್ರಾರಂಭಿಸಿ

"कच्चिदज्ञानसम्मोहः प्रणष्टस्ते धनंजय"

ಎಂಬಲ್ಲಿಗೆ ಸಮಾಪ್ತವಾಗಿರುವದು. ಶ್ರೀಕೃಷ್ಣನು ಅರ್ಜುನನಿಗೆ ಮೊದಲು ಆತ್ಮನೂ ಮತ್ತು ದೇಹವೂ ಭಿನ್ನಭಿನ್ನಸ್ವಭಾವವುಳ್ಳವುಗಳಾಗಿರುವದರಿಂದ ಆ

ಉಭಯ ವಸ್ತುಗಳ ಧರ್ಮಗಳು ಕೂಡ ಭಿನ್ನಭಿನ್ನವಾಗಿವೆ. ಆದರೂ ಮೋಹದಿಂದ ಆ ಎರಡು ವಸ್ತುಗಳ ಪರಸ್ಪರ ತಾದಾತ್ಮ್ಯವನ್ನೂ ಮತ್ತು ಒಂದರಲ್ಲಿ ಇನ್ನೊಂದರ ಧರ್ಮಗಳನ್ನೂ ಕಲ್ಪಿಸಿ ಜೀವನು ಸುಮ್ಮನೆ ದುಃಖಿಸುತ್ತಿದ್ದಾನೆ. ಆದಕಾರಣ ವಿವೇಕಶಾಲಿಯಾದ ಪುರುಷನು ಅವುಗಳ ಯಥಾರ್ಥಜ್ಞಾನವನ್ನು ಮಾಡಿಕೊಳ್ಳಬೇಕೆ"ಂದು ತತ್ತ್ವಜ್ಞಾನವನ್ನು ಹೇಳಿದ್ದಾನೆ.

"अंतवंत इमे देहा नित्यस्योक्ताश्शरीरिणः।
अनाशिनोऽप्रमेयस्य तस्माद्युद्धस्व भारत ॥"

ಎಂಬ ಶ್ಲೋಕದಲ್ಲಿ ಭಗವಂತನು ಅರ್ಜುನನಿಗೆ "ಆತ್ಮನು ನಿತ್ಯನು, ಅವಿಕ್ರಿಯನು. ಆದುದರಿಂದ ಯುದ್ಧರೂಪವಾದ ನಿನ್ನ ಕರ್ತವ್ಯಕರ್ಮವನ್ನು ಮಾಡೆಂದು ಉಪದೇಶಿಸಿರುವನು. ಈ ಶ್ಲೋಕದ ಭಾಷ್ಯದಲ್ಲಿ ಶ್ರೀಶಂಕರಾಚಾರ್ಯರು "**न ह्यत्र युद्धकर्तव्यता विधीयते युद्धे प्रवृत्त एवह्यसौ शोकमोह प्रतिबद्धस्तूष्णीमास्ते तस्य कर्तव्यप्रतिबंधापनयनमात्रं भगवता क्रियते तस्माद्युद्धस्वेत्यनुवादमात्रं न विधिः**" (ಅಂದರೆ ಈ ಶ್ಲೋಕದಲ್ಲಿ ಯುದ್ಧದ ಕರ್ತವ್ಯತೆಯು ವಿಧಾನಮಾಡಲ್ಪಡುವದಿಲ್ಲ. ಏಕೆಂದರೆ ಯುದ್ಧದಲ್ಲಿ ಪ್ರವೃತ್ತನಾದ ಅರ್ಜುನನು ಶೋಕಮೋಹಗಳಿಂದ ಪ್ರತಿಬದ್ಧನಾಗಿ ಸುಮ್ಮನೆ ಕೂತಿರುವನು. ಅವನ ಕರ್ತವ್ಯದ ಪ್ರತಿಬಂಧವನ್ನು ಹೋಗಲಾಡಿಸುವದನ್ನು ಮಾತ್ರ ಭಗವಂತನು ಮಾಡುತ್ತಾನೆ. ಆದುದರಿಂದ ಯುದ್ಧವನ್ನು ಮಾಡು ಎಂಬುವದು ಅನುವಾದ ಮಾತ್ರವೇ ಹೊರತು ವಿಧಾನವಲ್ಲ) ಎಂದು ಬರೆದಿದ್ದಾರೆ. ಅನುವಾದವೇ ಇರಲಿ ಅಥವಾ ವಿಧಿಯೇ ಇರಲಿ ಕರ್ತವ್ಯಕರ್ಮವನ್ನು ಮಾಡೆಂದು ಭಗವಂತನು ಅರ್ಜುನನಿಗೆ ಹೇಳಿರುವನಷ್ಟೆ. ಹೀಗೆ ಆತ್ಮತತ್ತ್ವವನ್ನರಿತು ಕರ್ತೃತ್ವಾಭಿಮಾನವಿಲ್ಲದೆ ಲೋಕಸಂಗ್ರಹಾರ್ಥವಾಗಿ ತನ್ನಂತೆ ಅರ್ಜುನನು ಕರ್ಮದಲ್ಲಿ ಪ್ರವರ್ತಿಸಬೇಕೆಂದು ಭಗವಂತನು ಉಪದೇಶಿಸಿದ್ದಾನೆ. ತತ್ತ್ವಜ್ಞಾನವನ್ನು ಒಂದುಕಡೆ ಕಟ್ಟಿಟ್ಟು ವರ್ಣಾಶ್ರಮಧರ್ಮದೃಷ್ಟಿಯಿಂದ ನೋಡಿದರೂ ಕ್ಷತ್ರಿಯನಾದ ಅರ್ಜುನನು "**युद्धे चाप्यपलायनं**" ಎಂದು ಮುಂದೆ ಹೇಳುವಂತೆ ಸ್ವಧರ್ಮವಾದ ಯುದ್ಧವನ್ನು ಮಾಡಬೇಕೆಂದು

"स्वधर्ममपि चावेक्ष्य न विकंपितुमर्हसि"

ಎಂದು ಬೋಧಿಸಿದ್ದಾನೆ. ಅರ್ಜುನನು ಬಂಧುವಧೆಯನ್ನೂ ಗುರುವಧೆಯನ್ನೂ ಮಾಡಲಾರದೆ ಧರ್ಮಭೀರುವಾಗಿ ಹಿಂಸೆಗೆ ಹೇಸಿ ಕ್ಷುದ್ರವಾದ ಐಹಿಕಸುಖವನ್ನು ತುಚ್ಛವಾಗಿ ಭಾವಿಸಿ ಉತ್ತಮವಾದ ವಿವೇಕ ವೈರಾಗ್ಯಗಳನ್ನು ಪ್ರದರ್ಶನಮಾಡಿದರೂ ಕೂಡ ಶ್ರೀಕೃಷ್ಣಪರಮಾತ್ಮನು ಅವನ ಕರ್ತವ್ಯಪರಾಙ್ಮುಖತೆಗೆ ಒತ್ತಾಸೆಯನ್ನು ಕೊಡದೆ "ಎಲೆ ಅರ್ಜುನನೆ, ಕೌರವರು ಎಂಥ ದುಷ್ಟರೆಂಬುದನ್ನು ನಿನ್ನಲ್ಲಿ ನೀನೇ ತಿಳಿದು ನೋಡು. ಜ್ಞಾತಿಗಳೆಂಬ ದಾಕ್ಷಿಣ್ಯವನ್ನೆಳ್ಳಷ್ಟೂ ಇಡದೆ ಅಸಹಾಯಶೂರರಾದ ನಿಮ್ಮ ಮೇಲೇ ಆ ಕೌರವರು ತಮ್ಮ ಧೂರ್ತತನವನ್ನು ನಡೆಸುವದಕ್ಕೆ ಹಿಂದುಮುಂದು ನೋಡತಕ್ಕವರಾಗಲಿಲ್ಲವೆಂದ ಮೇಲೆ ಇನ್ನು ಅವರ ದೆಸೆಯಿಂದ ಇತರರ ಪಾಡೇನೆಂಬುದನ್ನು ಯೋಚಿಸು. ಕೌರವರನ್ನು ಕೊಲ್ಲುವದರಿಂದ ನಿನಗೇನೂ ಲಾಭವಿಲ್ಲದಿದ್ದರೂ ಇತರ ಜನಮಂಡಲಿಗೆ ಕ್ಷೇಮವಾಗಲೆಂದಾದರೂ ನೀನು ಈ ಕೆಲಸಕ್ಕೆ ಕೈಹಾಕು. ಕೌರವರಂಥ ಧೂರ್ತರ ಮುಂದೆ ಎದೆಗೊಟ್ಟು ನಿಂತು ಅವರ ಸೊಕ್ಕನ್ನು ಮುರಿಯುವ ಕೆಲಸವು ನಿನಗೆ ಸಾಧ್ಯವಾದ ಹಾಗೆ ಇತರರಿಗೆ ಸುಲಭವಲ್ಲ. ಆದುದರಿಂದ ನೀನು ಈ ಯುದ್ಧರೂಪವಾದ ನಿನ್ನ ಕರ್ತವ್ಯಕರ್ಮದಲ್ಲಿ ಪ್ರವರ್ತಿಸಲೇ ಬೇಕು ಎಂದು ಅಭಿಪ್ರಾಯಪಟ್ಟಿರುವನು. ಹೀಗೆ ತನ್ನ ಕರ್ಮವನ್ನು ಮಾಡಲಿಕ್ಕೆ ಒಲ್ಲೆನೆಂದು ಕೈಮುದುರಿಕೊಂಡು ಕುಳಿತಿದ್ದ ಅರ್ಜುನನಿಗೆ ಬೋಧಿಸಲಿಕ್ಕೆ ಪ್ರಾರಂಭಿಸಿ

"नष्टो मोहः स्मृतिर्लब्धा त्वत्प्रसान्मयाऽच्युत।
स्थितोस्मि गतसंदेहः करिष्ये वचनं तव॥"

ಎಂದು ಅರ್ಜುನನು ನುಡಿದು ಏಳುವವರೆಗೂ ಭಗವಂತನು ಮಾಡಿದ ವಿವಿಧ ಸಯುಕ್ತಿಕೋಪದೇಶರೂಪವಾಗಿರುವ ಈ ಗೀತಾಶಾಸ್ತ್ರದ ಕರ್ಮಪ್ರವರ್ತಕತ್ವವು ಅದರ ಸ್ವರೂಪದ ಮೇಲಿಂದಲೇ ಸುಸ್ಪಷ್ಟವಾಗುವದು. ಕರ್ಮಪ್ರವರ್ತಕವೆಂಬುದರಲ್ಲಿಯು ಕರ್ಮವೆಂಬ ಶಬ್ದದ ಅರ್ಥವನ್ನು ಏನು ಮಾಡ-

ಬೇಕೆಂದು ಆಕ್ಷೇಪಣೆಯುಂಟಾಗಬಹುದು. ಏಕೆಂದರೆ ಗೀತೆಯಲ್ಲಿ ಕರ್ಮ-ವೆಂಬ ಶಬ್ದವು ಕರ್ತವ್ಯವೆಂಬರ್ಥದಲ್ಲಿಯೂ ಕ್ರಿಯಾಮಾತ್ರವೆಂಬರ್ಥದಲ್ಲಿಯೂ ಪ್ರಯೋಗಿಸಲ್ಪಟ್ಟಿದೆ. "कुरु कर्मैव तस्मात्त्वं" ಎಂಬ ಮುಂತಾದ ಕಡೆಗ-ಳಲ್ಲಿ ಕರ್ಮವೆಂಬ ಶಬ್ದವು ಕರ್ತವ್ಯಕರ್ಮದ ವಾಚಕವಾಗಿರುತ್ತದೆ. "कर्म-ण्यकर्म यः पश्येत्" ಎಂಬ ಮುಂತಾದ ಸ್ಥಳಗಳಲ್ಲಿ ಕರ್ಮವೆಂಬ ಶಬ್ದವು ಕೆಲ-ಸವು ಎಂಬರ್ಥವುಳ್ಳದ್ದಾಗಿದೆ. ಈಗ ನಮಗೆ ಪ್ರಕೃತವಾದ "ಗೀತಾಶಾಸ್ತ್ರವು ಕರ್ಮಪ್ರವರ್ತಕವಾಗಿದೆ" ಎಂಬ ವಾಕ್ಯದಲ್ಲಿಯು ಕರ್ಮವೆಂಬ ಶಬ್ದದ ಅರ್ಥವು ಕರ್ತವ್ಯಕರ್ಮವೆಂಬ ಅರ್ಥವುಳ್ಳದ್ದು. ಹಾಗಲ್ಲದೆ ಅದರ ಅರ್ಥವು ಕ್ರಿಯಾ-ಮಾತ್ರವೆಂದು ಕಲ್ಪಿಸಿದರೆ

"न हि कश्चित्क्षणमपि जातु तिष्ठत्यकर्मकृत्"

ಎಂದು ಭಗವಂತನು ಅಂದಿರುವಂತೆ ಯಾವನೂ ಕ್ಷಣಮಾತ್ರವಾದರೂ ಬಹಿ-ರಂಗದಲ್ಲಾಗಲಿ ಅಥವಾ ಅಂತರಂಗದಲ್ಲಾಗಲಿ ಏನೂ ಕೆಲಸವನ್ನು ಮಾಡದೆ ಇರುವದಿಲ್ಲ.

"शरीरयात्रापि च ते न प्रसिध्येदकर्मणः"

ಎಂಬ ಭಗವದುಕ್ತಿಯಂತೆ ನಾವು ಏನೂ ಕೆಲಸ ಮಾಡದಿದ್ದರೆ ಶರೀರಸ್ಥಿತಿಯು ಕೂಡ ಸಂಭವಿಸುತ್ತಿರಲಿಲ್ಲ. ಶ್ವಾಸೋಚ್ಛ್ವಾಸರೂಪವಾದ ಕ್ರಿಯೆಯಂತು ನಮಗೆ ಯಾವಾಗಲೂ ತಪ್ಪಿಯೇ ಇಲ್ಲ. ಅಂದಮೇಲೆ ಏನಾದರೂ ಕೆಲಸ-ವನ್ನು ಮಾಡಬೇಕೆಂದು ಗೀತೆಯು ಬೋಧಿಸುವದೇಕೆ ಬೇಕು? ಆದಕಾರಣ ಗೀತಾಶಾಸ್ತ್ರವು ಕರ್ತವ್ಯಕರ್ಮವನ್ನು ಮಾಡಬೇಕೆಂದು ಉಪದೇಶಿಸುತ್ತದೆ ಎಂದು ನಿರ್ಣಯಿಸತಕ್ಕದ್ದು.

ಇನ್ನು ಕರ್ತವ್ಯವನ್ನು ಹೇಗೆ ಮಾಡಬೇಕು? ಎಂಬ ವಿಷಯವನ್ನು ನಾಳೆ ವಿಚಾರಿಸಿ ನೋಡೋಣ.

श्रीः

## ೩ನೇ ವ್ಯಾಖ್ಯಾನ — ಕರ್ತವ್ಯಕ್ಕಾಗಿ ಕರ್ತವ್ಯವು.

(ಮಂಗಳಾಚರಣೆ.)

**श्रीरामचंद्रचरणौ मनसा स्मरामि।**
**श्रीरामचंद्रचरणौ वचसा गृणामि॥**
**श्रीरामचंद्रचरणौ शिरसा नमामि।**
**श्रीरामचंद्रचरणौ शरणं प्रपद्ये॥**

ಸಭ್ಯರಾದ ಪ್ರಿಯಬಾಂಧವರೆ,

ನಾವೆಲ್ಲರೂ ನಮ್ಮ ನಮ್ಮ ಕರ್ತವ್ಯಕರ್ಮವನ್ನು ಅಗತ್ಯವಾಗಿ ಮಾಡಲೇಬೇಕೆಂದು ಭಗವಂತನ ಅಭಿಪ್ರಾಯವಿರುವದೆಂದು ನಿನ್ನೆ ನಿರ್ಣಯಿಸಲ್ಪಟ್ಟಿತಷ್ಟೆ. ಆದರೆ ಇಷ್ಟರಿಂದಲೇ ಸಾಲದು. ನಮ್ಮ ಕರ್ತವ್ಯವನ್ನು ನಾವು ಹೇಗೆ ಮಾಡಬೇಕು? ಎಂಬ ಪ್ರಶ್ನೆಯು ಸಹಜವಾಗಿ ಮುಂದೆ ಬಂದು ನಿಲ್ಲುವದು. ಈ ವಿಷಯವನ್ನು ಈಗ ವಿಚಾರಿಸೋಣ.

ಸರ್ವಪ್ರಾಣಿಗಳಲ್ಲಿಯೂ ಮನುಷ್ಯನೇ ಶ್ರೇಷ್ಠನೆಂಬುದು ನಿರ್ವಿವಾದವಾದ ಮಾತು. ಈ ವಿಷಯದಲ್ಲಿ "**दुर्लभो मानुषो देहः**" ಎಂಬ ಮುಂತಾದ ಶ್ರೀವೇದವ್ಯಾಸ ಮೊದಲಾದ ನಮ್ಮ ಪೂರ್ವಜಜ್ಞಾನಿಗಳ ಉಕ್ತಿಗಳಿಷ್ಟೇ ಅಲ್ಲ; ಪ್ರತ್ಯಕ್ಷವು ಕೂಡ ಪ್ರಮಾಣವಾಗಿದೆ. ಪ್ರಾಣಿವರ್ಗದಲ್ಲೆಲ್ಲ ಅತಿಭಯಂಕರಪ್ರಾಣಿಯಾಗಿ ಮೃಗರಾಜನೆಂದು ಹೆಸರುಗೊಂಡ ಸಿಂಹವು ಕೂಡ ಮನುಷ್ಯರಿಗೊಳಗಾಗಿ ಹೇಳಿದ ಹಾಗೆ ಕೇಳುತ್ತಿರುವದನ್ನು ಸರ್ಕಸ್ ಮೊದಲಾದ ಆಟಗಳಲ್ಲಿ ನಾವು ಕಣ್ಣಾರೆ ನೋಡುತ್ತಿರುವೆವು. ಮದ್ದಾನೆಯಂಥ ದೊಡ್ಡಜೀವಿಗಳು ಮನುಷ್ಯನಿಗೆ ಆಳಾಗಿ ದುಡಿಯುತ್ತಿರುವವು. ಒಂದುಗಳಿಗೆಯೊಳಗೆ ಮನುಷ್ಯನನ್ನು ಕೊಲ್ಲುವಂಥ ವಿಷವನ್ನು ಬಾಯಲ್ಲಿಯೇ ಸಿದ್ಧ-

ವಾಗಿಟ್ಟುಕೊಂಡಿರುವ ಹಾವುಗಳು— ತಮಗೆ ಮನಸ್ಸಿಲ್ಲದಿದ್ದರೂ— ಹಾವಾಡಿಗನ ನಿರ್ಬಂಧಕ್ಕೊಳಪಟ್ಟು ಅವನ ಜೀವನಕ್ಕಾಗಿ ತಾವು ಹೆಡೆಯನ್ನು ಬಿಟ್ಟುಕೊಂಡು ಆಡುವವು. ಬಲಶಾಲಿಗಳಾದ ಕುದುರೆಗಳೂ ಎತ್ತುಗಳೂ ತಮಗಿಂತ ಎಷ್ಟೋ ಕಡಮೆ ಬಲವುಳ್ಳ ಮನುಷ್ಯನಿಗೆ ವಾಹನವಾಗಿ ಅವನ ಮನೋವೃತ್ತಿಯನ್ನು ಅನುಸರಿಸಿ ನಡೆಯುವವು. ಹೀಗೆ ಲೋಕದಲ್ಲಿ ಯಾವ ಪ್ರಾಣಿಯನ್ನು ನೋಡಿದರೂ ತನ್ನ ತನ್ನ ಹೆಚ್ಚುಗಾರಿಕೆಯನ್ನೆಲ್ಲ ಎಲ್ಲಿಯೋ ಅಡಗಿಸಿಕೊಂಡು ಮನುಷ್ಯನಿಗೆ ಶರಣುಹೊಕ್ಕಿರುವ ಉದಾಹರಣೆಗಳು ಬೇಕಾದಷ್ಟು ಸಿಕ್ಕುವವು. ಕೆಲವು ಪ್ರಾಣಿಗಳು ಶಕ್ತಿ ಮತ್ತು ದೇಹಪುಷ್ಟಿಗಳಲ್ಲಿ ಮನುಷ್ಯನಿಗಿಂತ ಎಷ್ಟೇ ಹೆಚ್ಚಾಗಿದ್ದರೂ ಅವೆಲ್ಲವೂ ಮನುಷ್ಯನ ಆಳಿಕೆಗೆ ಒಳಗಾಗಿಯೇ ಬಾಳುತ್ತಿರುವವು.

ಶರೀರದೃಷ್ಟಿಯಿಂದ ನೋಡಿದರೆ ಮನುಷ್ಯನೆಂಬುವನು ನಮಗೆ ತೋರುವ ಪ್ರಪಂಚಭಾಗದಲ್ಲಿ ಲೆಕ್ಕಕ್ಕೆ ಹತ್ತದಷ್ಟು ಸಣ್ಣ ಅಂಶವಾಗಿರುತ್ತಾನೆ. ಚೆನ್ನಾಗಿ ಪರೀಕ್ಷಿಸಿದರೆ ಮನುಷ್ಯನು ಇತರ ಅನೇಕಪ್ರಾಣಿಗಳಿಗಿಂತಲೂ ಎಷ್ಟೋ ವಿಷಯಗಳಲ್ಲಿ ಕಡಮೆಯ ತರದವನಾಗಿದ್ದಾನೆಂದು ಕಂಡುಬರುವದು. ಭೂಮಿಯ ಮೇಲೆಯೂ ಜಲದಲ್ಲಿಯೂ ವಾಸವಾಡುತ್ತಿರುವ ಮಹಾಪ್ರಾಣಿಗಳಿಗೆ ಹೋಲಿಸಿದರೆ ಅವನು ಕೇವಲ ಒಂದಣುವಾಗಿರುವನು. ಶಾರೀರಬಲದಲ್ಲಿ ಸಿಂಹ, ಹುಲಿ, ಆನೆ ಮತ್ತು ಇತರ ಅಸಂಖ್ಯಾಕಚತುಷ್ಪಾದಜಂತುಗಳು ಅವನನ್ನು ಎಷ್ಟೋ ಮೀರಿರುವವು. ವೇಗದಲ್ಲಿಯೂ ಚಟುವಟಿಕೆಯಲ್ಲಿಯೂ ಕುದುರೆ, ನಾಯಿ, ಮೊಲ ಮತ್ತು ಮಂಗ ಮೊದಲಾದವುಗಳು ಅವನಿಗಿಂತ ಉತ್ತಮವಾಗಿರುವವು. ಇತರ ಪ್ರಾಣಿಗಳಂತೆ ಇವನಿಗೆ ಪಂಚೇಂದ್ರಿಯಗಳಿರುವದೇನೋ ನಿಜ; ಆದರೆ ಅನೇಕ ಪ್ರಾಣಿಗಳಲ್ಲಿರುವವಕ್ಕಿಂತ ಅಪೂರ್ಣಸ್ಥಿತಿಯಲ್ಲಿಯೂ ಹೀನಶಕ್ತಿಯುಳ್ಳವುಗಳಾಗಿಯೂ ಇವೆ. ಹೇಗೆಂದರೆ, ಹುಲಿ, ಬೆಕ್ಕು ಮತ್ತು ಗೂಬೆ ಮೊದಲಾದವುಗಳಿಗೆ ಕತ್ತಲೆಯಲ್ಲಿ ಚದರಿರುವ ಬೆಳಕನ್ನು ಕೂಡಿಸುವದಕ್ಕಾಗಿ ಕಣ್ಣುಗುಡ್ಡೆಯನ್ನು ಅರಳಿಸಿಕೊಳ್ಳುವ ಶಕ್ತಿಯುಂಟು; ಆದರೆ ಮನುಷ್ಯನ ಕಣ್ಣುಗಳು ಇಂಥ ಸಂದರ್ಭಗಳಲ್ಲಿ ಶುದ್ಧ ಅನುಪಯೋಗವಾಗಿರುವವು. ನಾಯಿಗಳಿಗೆ ಸೂಕ್ಷ್ಮವಾದ ವಾಸನಾಗ್ರಹಣಶಕ್ತಿಯೂ ಹಾ-

ವುಗಳಿಗೆ ಸೂಕ್ಷ್ಮಶಬ್ದಗ್ರಹಣಶಕ್ತಿಯೂ ಇರುವದು. ಬೆಟ್ಟಬೆನಕ ಮೊದಲಾದ ಬಹುಪಾದಜಂತುಗಳಿಗೆ ಭೂಮಿಯ ಮೇಲಣ ಎಲ್ಲ ಪ್ರಾಣಿಗಳಿಗಿಂತ ಸೂಕ್ಷ್ಮವಾದ ಸ್ಪರ್ಶಶಕ್ತಿ ಇರುವದು. ಹೀಗಿರುವದರಿಂದ ಇಂದ್ರಿಯಗಳ ವಿಷಯದಲ್ಲಿ ಮನುಷ್ಯನು ಇತರಪ್ರಾಣಿಗಳಿಗಿಂತ ಕಡಮೆ ಎಂಬುದನ್ನು ಒಪ್ಪಿಕೊಳ್ಳಲೇಬೇಕು. ಇನ್ನೊಂದು ವಿಷಯವನ್ನು ನೋಡೋಣ. ನವಿಲಿನ ಸುಂದರವಾದ ಗರಿಗಳನ್ನು ನೋಡಿರಿ; ಮಾನುಷಸೌಂದರ್ಯಕ್ಕಿಂತ ಎಷ್ಟು ಹೆಚ್ಚಾಗಿದೆ! ಮೊಲ ಮೊದಲಾದ ಪ್ರಾಣಿಗಳ ಚರ್ಮವನ್ನು ಮುಟ್ಟಿನೋಡಿರಿ; ಎಷ್ಟು ಮೃದುವಾಗಿದೆ! ಮನುಷ್ಯನು ವಾಯುಸಾಗರದಲ್ಲಿ ಈಸಾಡುತ್ತಿರುವ ಪ್ರಾಣಿಗಳಂತೆ ವಾಯುಮಂಡಲದಲ್ಲಿ ತೇಲಾಡಬಲ್ಲನೆ? ಜಲಚರಗಳಂತೆ ನೀರಿನಲ್ಲಿ ವಾಸಮಾಡಬಲ್ಲನೆ? ಹಾವುಗಳಂತೆ ಸಹಜವಾಗಿ ವಾಯುಭಕ್ಷಣದಿಂದ ಜೀವಿಸಬಲ್ಲನೆ? ಕೋಕಿಲ ಮೊದಲಾದ ಪಕ್ಷಿಗಳ ಮೃದುಮಧುರವಾದ ಧ್ವನಿಗಳಿಗಿಂತ ಮನೋಹರವಾಗಿ ಧ್ವನಿಮಾಡಬಲ್ಲನೆ? ಜೇಡಹುಳುವಿನಂತೆ ನೇಯಬಲ್ಲನೆ? ಮುಂಗುಲಿ(ಮುಂಗಸಿ)ಯಂತೆ ವಿಷವನ್ನು ಸಹಿಸಬಲ್ಲನೆ? ನಿಜವಾಗಿ ನೋಡಿದರೆ ತನ್ನಧೀನವನ್ನು ಮಾಡಿಕೊಂಡಿದ್ದೇನೆಂದು ತಾನು ಕೊಚ್ಚಿಕೊಳ್ಳುವ ಮೂಕಪ್ರಾಣಿಗಳಿಗಿಂತ ಸ್ವತಂತ್ರನೆ? ಎಂದಿಗೂ ಅಲ್ಲ. ಈಗ ನಾವು ವಿಚಾರಿಸಿದ ವಿಷಯದಲ್ಲಿ ಮನುಷ್ಯನು ಅನೇಕಪ್ರಾಣಿಗಳಿಗಿಂತ ಎಷ್ಟೋ ವಿಷಯಗಳಲ್ಲಿ ಕಡಮೆಯವನಾಗಿರುವನು. ಹಾಗಾದರೆ ಇವನ ಹೆಚ್ಚುಗಾರಿಕೆಯೂ ಇವನ ನಾಯಕತ್ವವೂ ಏತರಿಂದ? ಚೆನ್ನಾಗಿನೋಡಿದರೆ—ಹೆಚ್ಚು ಗಮನವಿಟ್ಟು ವಿಚಾರಮಾಡಿದರೆ— ಅವನಿಗೆ ಘನತೆಯನ್ನು ಉಂಟುಮಾಡಿ ಮಹೋನ್ನತಿಯನ್ನು ತಂದುಕೊಟ್ಟಿರುವ ಪದಾರ್ಥವು ಕಾಣಿಸುವದು. ವಿಚಾರಿಸಿ ನೋಡಿದರೆ ಮನುಷ್ಯನು ಸಮಷ್ಟಿಬ್ರಹ್ಮಾಂಡಪ್ರಪಂಚದಲ್ಲಿರುವ ವ್ಯಷ್ಟಿಪಿಂಡಾಂಡಪ್ರಪಂಚವಾಗಿರುವನು. ಒಂದೇ ಮಾತಿನಲ್ಲಿ ಹೇಳುವದಾದರೆ ಅವನೇ ಒಂದು ಸಣ್ಣ ಪ್ರಪಂಚವಾಗಿರುವನು. ಪ್ರಪಂಚದಲ್ಲಿ ಏನೇನು ಇದೆಯೊ ಅದೆಲ್ಲವೂ ಅಲ್ಪಪ್ರಮಾಣದಲ್ಲಿ ಅವನಲ್ಲಿರುವದು. ಕೆಲವು ಪ್ರಾಣಿಗಳಿಗೆ ಸ್ವಭಾವಸಿದ್ಧವಾಗಿರುವ ಕೆಲವು ಗುಣಗಳು ಮನುಷ್ಯನಲ್ಲಿ ಹೆಚ್ಚಾಗಿಲ್ಲದಿದ್ದರೂ ಅವನಲ್ಲಿರುವ ವಾಕ್ಕು ಮತ್ತು ಬುದ್ಧಿಶಕ್ತಿ ಇವು ಅವನನ್ನು ಸೃಷ್ಟಿಗೊಡೆಯನನ್ನಾಗಿ ಮಾಡಿ-

ರುವವು. ಇದಲ್ಲದೆ ವಾಕ್ಛಕ್ತಿ ಮತ್ತು ಬುದ್ಧಿಶಕ್ತಿಗಳಿಂದ ಅವನಲ್ಲಿ ವಿಚಿತ್ರ-ವಾದ ಶಕ್ತಿವಿಶೇಷಗಳು ಉತ್ಪನ್ನವಾಗಿರುವದರಿಂದ ಇತರ ಪ್ರಾಣಿಗಳು ಅವನ ಸರಿಹತ್ತದೆ ಅವನಿಗೇ ಜಯಭೇರಿಯನ್ನು ಹೊಡೆಸಿಕೊಳ್ಳುವದಕ್ಕೆ ಅವಕಾಶ-ವನ್ನು ಕೊಟ್ಟಿರುವವು. ಬುದ್ಧಿಯಿಂದ ಆತನು ಮನೋರಥಗಳನ್ನು ಪೂರ್ಣ-ಮಾಡಿಕೊಳ್ಳಲಿಕ್ಕೆ ಮತ್ತು ತನಗಿರುವ ಸಂಕಟಗಳಿಂದ ಪಾರಾಗುವದಕ್ಕೆ ಉಪಾಯವನ್ನು ಹುಡುಕಿಕೊಳ್ಳುವನು; ವಾಕ್ಛಕ್ತಿಯನ್ನು ಪರಸ್ಪರ ಸಹಾ-ಯಕ್ಕೆ ಉಪಯೋಗಿಸಿಕೊಳ್ಳುವನು. ಅವನು ಗಾತ್ರದಲ್ಲಿ ಸಣ್ಣವನಾಗಿರುವದು ಅವನ ಶರೀರಶಕ್ತಿಗೆ ಮೀರಿದ ಕಾರ್ಯಗಳನ್ನು ಮಾಡುವದಕ್ಕೆ ಅಡ್ಡಿಯಾಗು-ವದಿಲ್ಲ. ಅವನು ಹುಲಿಯನ್ನು ಅಥವಾ ಸಿಂಹವನ್ನು ನೋಡಿ ಅನಾಥನಂತೆ ಗದಗದನೆ ನಡುಗುತ್ತಾನಾದರೂ ಬುದ್ಧಿಶಕ್ತಿಯಿಂದ ಆ ಪ್ರಾಣಿಯನ್ನು ಪಂಜರ-ದಲ್ಲಿ ಹಾಕಿ ಆಡಿಸುವನು. ಹೀಗೆ ಅವನ ಬುದ್ಧಿಶಕ್ತಿಯು ಅವನ ಕಾರ್ಯಕ್ಕೆ ಉಪಯೋಗವಾಗುವಂತೆ ಎಷ್ಟೋ ಕ್ರೂರಪ್ರಾಣಿಗಳನ್ನು ಪಳಗಿಸುವದು. ಬುದ್ಧಿಶಕ್ತಿಯಿಂದಲೇ ಅವನಿಗೆ ನಿಮಿಷಕ್ಕೊಂದು ಮೈಲಿಯಷ್ಟು ಅಸಾಧಾರಣ-ವೇಗದಿಂದ ಸಂಚಾರಮಾಡುವ ಸಾಧನವು ದೊರೆತಿರುವದು. ಹಡಗದಿಂದ ಅವನು ಸಮುದ್ರದಲ್ಲಿಯೂ ಸಂಚರಿಸಬಲ್ಲನು. ಮನುಷ್ಯನಿಗೆ ಪಂಚೇಂದ್ರಿಯ ಶಕ್ತಿಯು ಕಡಮೆಯಾಗಿದರೂ ಅವನಿಗೆ ಇಚ್ಛಾಪೂರ್ತಿಮಾಡಿಕೊಳ್ಳುವದಕ್ಕೂ ಬೇಕುಬೇಕಾದುದನ್ನು ಪಡೆಯುವದಕ್ಕೂ ಇದೆಂದಿಗಾದರೂ ಅಡ್ಡಿಯಾಗಿರು-ವದೆ? ದುರ್ಬೀನುಗಳು ಅವನ ದೂರದೃಷ್ಟಿಯಲ್ಲವೆ? ಗ್ಯಾಸಲೈಟ ಮೊದ-ಲಾದವುಗಳು ಅವನ ಕಣ್ಣಿನ ತೇಜವಲ್ಲವೆ? ಟೆಲಿಫೋನ್ ಮೊದಲಾದುವೆ ಅವನ ತೀಕ್ಷ್ಣವಾದ ಕಿವಿಯಲ್ಲವೆ? ವಿಮಾನವೆ ಅವನ ರೆಕ್ಕೆಯಲ್ಲವೆ? ವೀಣಾ ಮೊದ-ಲಾದವುಗಳೇ ಅವನ ಮಧುರಧ್ವನಿಯಲ್ಲವೆ? ಹೀಗೆ ಮನುಷ್ಯನು ತನ್ನ ಬುದ್ಧಿ-ಶಕ್ತಿಯಿಂದ ಯಾವಪ್ರಾಣಿಗೂ ಜಯಪತ್ರವನ್ನು ಕೊಡದೆ ಎಲ್ಲವನ್ನೂ ಮೀರಿ ಬೆಳಗುತ್ತಿರುವನು. ಒಂದೇ ಮಾತಿನಲ್ಲಿ ಹೇಳಬೇಕಾದರೆ ಮನುಷ್ಯನೊಬ್ಬನ ತೂಕಕ್ಕೆ ಉಳಿದ ಸೃಷ್ಟಿಯನ್ನೆಲ್ಲ ಸೇರಿಸಿದರೂ ಸಮತೂಕವಾಗಲಾರದು. ಏಕೆಂ-ದರೆ ಈ ಸೃಷ್ಟಿಯಲ್ಲಿ ಮನುಷ್ಯನಿಗೆ ವಶವಾಗದೆ ಇರುವ ವಿಷಯವೇ ಇಲ್ಲ.

ಇಂಥ ಮನುಷ್ಯರಿಂದ ನಮಗೂ ಮತ್ತು ಇತರ ಪ್ರಾಣಿಗಳಿಗೂ ತಿನ್ನು-

ವದು, ಮಲಗುವದು ಮೊದಲಾದ ವಿಷಯಗಳಲ್ಲಿ ವಿಶೇಷವೇನೂ ಇಲ್ಲ. ನಾವು ಸಾಧ್ಯವಾದ ಮಟ್ಟಿಗೆ ನಮಗೆ ಇಷ್ಟವಾದ ಅನ್ನವನ್ನು ಭಕ್ಷಿಸಿ ನಮ್ಮ ಕ್ಷುಧೆಯನ್ನು ಶಾಂತಪಡಿಸುತ್ತೇವೆ. ಅವುಗಳಾದರೂ ತಮಗೆ ಸಿಕ್ಕಿದಷ್ಟು ಪ್ರಿಯಪದಾರ್ಥಗಳನ್ನು ಸೇವಿಸಿ ಹಸಿವೆಯನ್ನು ಕಳೆದುಕೊಳ್ಳುವವು. ನಾವೂ ಮತ್ತು ಅವುಗಳೂ ನೀರಿನಿಂದಲೇ ನೀರಡಿಕೆಯನ್ನೂ ನಿದ್ರೆಯಿಂದಲೇ ದಣು-ವನ್ನೂ ಆರಿಸಿಕೊಳ್ಳುವೆವು. ಹಾಗಾದರೆ ನಮಗೂ ಅವುಗಳಿಗೂ ಅಂತರ ವೇನು? ಎಂದರೆ **"धर्मो हि तेषामधिको विशेषः"** ಎಂದಿರುವಂತೆ ಧರ್ಮ-ವೆಂಬುದೇ ನಮಗೆ—ಮನುಷ್ಯರಿಗೆ—ವಿಶೇಷವು. ಧರ್ಮವನ್ನು ಇತರ ಪಶುಪ್ರಾಣಿಗಳು ಆಚರಿಸಲಾರವು. ಶಕ್ತರಾದ ನಾವು ಧರ್ಮವನ್ನು ಬಿಟ್ಟರೆ **"धर्मेण हीनाः पशुभिः समानाः"** ಎಂದಂತೆ ನಮಗೆ ಪಶುಗಳ ಸಾಮ್ಯವು ಬರುವದು. ಆದುದರಿಂದ ನಾವು ಧರ್ಮವನ್ನು ಅವಶ್ಯವಾಗಿ ಆಶ್ರಯಿಸ-ತಕ್ಕದ್ದು. ಧರ್ಮವೆಂಬ ಶಬ್ದವು ಧೃ ಅಂದರೆ ಧಾರಣ ಮಾಡೋಣ ಎಂಬ ಧಾತುವಿನಿಂದ ಆಗಿರುವಕಾರಣ ಅದರ ಅರ್ಥವು "ಏತರಿಂದ ಜಗತ್ತು ಧಾರಣ-ಮಾಡಲ್ಪಡುವದೊ ಅದು" ಎಂದಾಗುವದೆಂಬುದನ್ನು ನಾನು ಮೊದಲನೇ ವ್ಯಾಖ್ಯಾನದಲ್ಲಿ ಹೇಳಿದುದು ನಿಮ್ಮ ನೆನಪಿನಲ್ಲಿರಬಹುದಷ್ಟೆ. ಧರ್ಮದಿಂದಲೇ ನಮ್ಮ ಜಗತ್ತಿನ ವ್ಯವಹಾರವು ಸಾಗಿದೆ. ನಾವೆಲ್ಲರೂ ಧರ್ಮವನ್ನು ಬಿಟ್ಟರೆ ಜಗತ್ತು ಉಳಿಯುವಂತೆಯೇ ಇಲ್ಲ. ಆದುದರಿಂದ **"धर्मो विश्वस्य जगतः प्रतिष्ठा"** ಎಂದು ಮುಂತಾಗಿ ಶ್ರುತಿಯೂ

"धर्म एव हतो हंति धर्मो रक्षति रक्षितः"

ಎಂದು ಮೊದಲಾಗಿ ಸ್ಮೃತಿಯೂ ಘೋಷಿಸುತ್ತವೆ. ನಮ್ಮ ವ್ಯವಹಾರಕ್ಕೆಲ್ಲ ಧರ್ಮವೇ ಕಾರಣವೆಂದು ನಮಗೆ ಪ್ರತ್ಯಕ್ಷವಾಗಿಯೇ ಕಾಣುವದು. ನೋ-ಡಿರಿ. ನಾವು ಅಂಗಡಿಗೆ ಹೋಗಿ ಒಂದು ಪದಾರ್ಥದ ವ್ಯಾಪಾರವನ್ನು ಮಾಡುತ್ತೇವೆ. ಆಗ ಅಂಗಡಿಕಾರನು ಮೊದಲು ಆ ಪದಾರ್ಥವನ್ನು ನಮ್ಮ ಕೈಗೆ ಕೊಡುತ್ತಾನೆ; ಆಮೇಲೆ ನಾವು ಅದರ ಕ್ರಯವನ್ನು ಅವನ ಕೈಗೆ ಕೊಡುತ್ತೇವೆ. ಅಥವಾ ಮೊದಲು ನಾವು ಅದರ ಕ್ರಯವನ್ನು ಅಂಗಡಿಕಾ-

ರನ ಕೈಗೆ ಕೊಡುತ್ತೇವೆ; ಆಮೇಲೆ ಅವನು ಆ ಪದಾರ್ಥವನ್ನು ನಮ್ಮ ಕೈಗೆ ಕೊಡುತ್ತಾನೆ. ಹೀಗೆ ನಾವು ಕ್ರಯವನ್ನಾದರೂ ಮುಂದಾಗಿ ಕೊಡಬೇಕು; ಅಥವಾ ಅವನು ಪದಾರ್ಥವನ್ನಾದರೂ ಮೊದಲು ಕೊಡಬೇಕು. ನಾವು ಮೊದಲು ಕ್ರಯವನ್ನು ಕೊಟ್ಟಮೇಲೆ ಅವನು ಆ ಪದಾರ್ಥವನ್ನು ನಮಗೆ ಕೊಡದಿದ್ದರೆ ಅಥವಾ ಆ ಪದಾರ್ಥವನ್ನು ಅವನು ಮೊದಲು ಕೊಟ್ಟಮೇಲೆ ನಾವು ಅವನಿಗೆ ಕ್ರಯವನ್ನು ಕೊಡದಿದ್ದರೆ ಜಗಳಹುಟ್ಟದೆ ಹೇಗೆ ಬಿಟ್ಟೀತು? ಹೀಗೆ ವ್ಯವಹಾರವು ಸುರಕ್ಷಿತವಾಗಿ ಸಾಗಬೇಕಾದರೆ ಧರ್ಮವು ಬೇಕೇ ಬೇಕು. ನಮ್ಮಲ್ಲಿ ಧರ್ಮವು ಹೆಚ್ಚು ಹೆಚ್ಚು ಇದ್ದಹಾಗೆಲ್ಲ ನಮಗೆ ಸುಖವು ಅಧಿಕಾಧಿಕವಾಗುವದು. ಅಧರ್ಮದಿಂದ

"अधर्मेणैधते तावन्नरो भद्राणि पश्यति"

ಎಂದಿರುವಂತೆ ಕೆಲವರಲ್ಲಿ ಮೊದಲು ಕೆಲವು ಹೊತ್ತು ಊರ್ಜಿತ ಸ್ಥಿತಿಯು ಬಂದಂತೆ ಕಾಣುವದು. ಆದರೆ ಮಾಡಿದುದೊಂದೂ ಎಂದಿಗೂ ವ್ಯರ್ಥ ಹೋಗುವದಿಲ್ಲ. ಒಳ್ಳೇಕೆಲಸವಾಗಲಿ, ಕೆಟ್ಟಕೆಲಸವಾಗಲಿ ಅದರದರ ಫಲವನ್ನು ಅದದು ಕೊಟ್ಟೇ ಕೊಡುವದು. ಪರಂತು ಆಯಾ ಕೆಲಸಗಳನ್ನು ಮಾಡಿದೊಡನೆಯೆ ಅದರದರ ಫಲವಾಗಿಯೇ ಆಗುವದೆಂಬ ನಿಯಮವಿಲ್ಲ. ಕೆಲವು ತತ್ಕಾಲದಲ್ಲಿಯೇ ಫಲಿಸಬಹುದು; ಕೆಲವು ಕಾಲಾಂತರದಲ್ಲಿ ಫಲಿಸಬಹುದು. ನಾನು ಕೈಯನ್ನು ನೆಲಕ್ಕೆ ಗುದ್ದಿದರೆ ಈಗಲೇ ಪೆಟ್ಟು ಹತ್ತುವದು. ನಾನು ಇಂದು ನಾಟಕವನ್ನು ನೋಡುತ್ತ ನಿದ್ರೆಗೆಟ್ಟು ಕೂತರೆ ನಾಳೆ ನನ್ನ ಪ್ರಕೃತಿ ಕೆಡುವದು. ನಾನು ಈಗ ಕೈಯಲ್ಲಿರುವ ಹಣವನ್ನು ವ್ಯರ್ಥವಾಗಿ ಹಾಳುಮಾಡುತ್ತ ಹೋದರೆ ಮುಂದೆ ದಾರಿದ್ರ್ಯದುಃಖವನ್ನು ಅನುಭವಿಸಬೇಕಾಗುವದು. ಹೀಗೆ ಕಜ್ಜಿಯನ್ನು ತುರಿಸುವಾಗ ಹಿತವಾದರೂ ಆಮೇಲೆ ಅದು ಉರಿಯುವಂತೆ ಅಧರ್ಮವನ್ನು ಮಾಡುವ ಕಾಲಕ್ಕೆ ಸುಖವಾದರೂ ಮುಂದೆ ದುಃಖವಾಗದೆ ಇರಲಾರದು. ಆದಕಾರಣ ಮನುಸ್ಮೃತಿಯಲ್ಲಿ

"नाधर्मश्चरितः कश्चित्सद्यः फलति गौरिव।
शनैरावर्तमानस्तु कर्तुर्मूलानि कृंतति ॥"

ಎಂದು ಹೇಳಿದೆ. ಅಧರ್ಮದ ಮನುಷ್ಯನು "**समूलश्च विनश्यति**" ಎಂದಿರುವಂತೆ ಕೊನೆಯಲ್ಲಿ ಬೇರುಸಹಿತವಾಗಿ ನಾಶಹೊಂದುವನು. ಆದಕಾರಣ ಬುದ್ಧಿಯಿಂದ ಎಲ್ಲ ಪ್ರಾಣಿಗಳಿಗಿಂತ ಹೆಚ್ಚಿನವನಾದ ಮನುಷ್ಯನು

"न सीदन्नपि धर्मेण मनो धर्मे निवेशयेत्।
अधार्मिकाणां पापानामाशु पश्यन् विपर्ययम्॥"

ಎಂಬ ಶ್ರೀಮನುವಚನದಂತೆ ಅಧಾರ್ಮಿಕರಿಗೆ ಆಗುವ ದುಷ್ಪರಿಣಾಮವನ್ನು ಲಕ್ಷ್ಯದಲ್ಲಿಟ್ಟು ಧರ್ಮದಲ್ಲಿ ಎಷ್ಟು ಕಷ್ಟವಾದರೂ ಅಧರ್ಮದ ಕಡೆಗೆ ಮನಸ್ಸು ಹಾಕಬಾರದು. ಆದುದರಿಂದಲೇ ವೇದವು "**धर्मं चर, धर्मान्नप्रमदितव्यं** ಎಂದು ಡಂಗುರವನ್ನು ಹೊಡೆಯುತ್ತದೆ. ಇದರಂತೆ ಕೊರಾನ್, ಬೈಬಲ್ ಮುಂತಾದ ಇತರ ಧರ್ಮಗ್ರಂಥಗಳು ಕೂಡ ಧರ್ಮವನ್ನು ಅವಶ್ಯವಾಗಿ ಮಾಡಬೇಕೆಂದು ಬೋಧಿಸುತ್ತವೆ. ಧರ್ಮಗ್ರಂಥಗಳಾಧಾರದ ಮೇಲೆ ಧರ್ಮವನ್ನಾಚರಿಸುವವರ ಮಾತಂತಿರಲಿ. ಯಾವದೊಂದು ಧರ್ಮಗ್ರಂಥವೂ ಇಲ್ಲದ ಕಾಡುಜನರು ಕೂಡ ಬಹುಕಾಲದಿಂದ ನಡೆಯುತ್ತ ಬಂದಿರುವಂಥ— ಧರ್ಮವೆಂದು ತಿಳಿದುಕೊಂಡಿರುವಂಥ— ಯೋಗ್ಯವಾದ ಅಥವಾ ಅಯೋಗ್ಯವಾದ— ಕೆಲವು ಆಚರಣೆಗಳಿಗೆ ಕಟ್ಟುಬಿದ್ದೇ ಇರುವರು. ಹೀಗಿರುವದಾದರೂ "Even a bad religion is better than no religion" ಎಂಬಂತೆ ಧರ್ಮಲಂಡರಾಗಿರುವದಕ್ಕಿಂತ ಲೇಸು. ಏನೂ ಧರ್ಮವಿಲ್ಲದೆ ಇರುವವನು ತನ್ನ ಹಾನಿಯನ್ನು ಮಾಡಿಕೊಳ್ಳುವದೂ ಅಲ್ಲದೆ ಇತರರಿಗೆ ಕೂಡ ಹಾನಿಯನ್ನು ಮಾಡುವ ಸಂಭವವುಂಟು.

"मन्यंते वै पापकृतो न कश्चित्पश्यतीह नः।
तांस्तु देवा प्रपश्यंति स्वस्यैवांतरपूरुषः॥"

ಎಂದು ಮನುಸ್ಮೃತಿಯಲ್ಲಿ ಹೇಳಿದಂತೆ ಪಾಪಗಳನ್ನು ಮಾಡುವವರು ತಮ್ಮನ್ನು

ಯಾರೂ ನೋಡುವದಿಲ್ಲವೆಂದು ತಿಳಿದಿರುತ್ತಾರೆ; ಆದರೆ ಹೃದಯಸ್ಥನಾದ ಪರಮಾತ್ಮನೂ ಇತರದೇವತೆಗಳೂ ನೋಡುವರೆಂಬುದನ್ನು ದೃಢವಾಗಿ ನಂಬಿದ ಧಾರ್ಮಿಕಮನುಷ್ಯನು ಪಾಪಕಾರ್ಯವನ್ನು ಮಾಡುವದಕ್ಕೆ ಹೇಗೆ ಪ್ರವೃತ್ತ-ನಾದಾನು? ಈ ಸಂದರ್ಭದಲ್ಲಿ ಒಂದು ಕಥೆಯನ್ನು ಹೇಳುತ್ತೇನೆ ಕೇಳಿರಿ. ಒಬ್ಬ ಸಾಧುಗಳಲ್ಲಿ ಕೆಲವರು ಶಿಷ್ಯರು ಗುರುಕುಲವಾಸಮಾಡಿಕೊಂಡಿದ್ದರು. ಗುರುಗಳು ಅವರಿಗೆ ಪಾಠಪ್ರವಚನಗಳ ಮೂಲಕ ಬೋಧಿಸುತ್ತಿದ್ದುದಲ್ಲದೆ ತಮ್ಮ ವರ್ತನದಿಂದಲೇ ಹೆಚ್ಚಿನ ಶಿಕ್ಷಣವನ್ನು ಕೊಡುತ್ತಿದ್ದರು. ಒಂದುದಿನ ಶಿಷ್ಯರ ಯೋಗ್ಯತೆಯನ್ನು ಪರೀಕ್ಷೆಮಾಡಬೇಕೆಂದು ಅವರಿಗೆ ಮನಸ್ಸು ಹುಟ್ಟಿತು. ಅವರು ಆಗ ತಮ್ಮ ಶಿಷ್ಯರಿಗೆ ಪ್ರತಿಯೊಬ್ಬರಿಗೂ ಒಂದೊಂದು ಬಾಳೆಯ ಹಣ್ಣನ್ನು ಕೊಟ್ಟು ಒಂದು ತಾಸಿನೊಳಗಾಗಿ ಅದನ್ನು ಯಾರೂ ಕಾಣದಂತೆ ತಿಂದು ಬರಬೇಕೆಂದು ಆಜ್ಞಾಪಿಸಿದರು. ಶಿಷ್ಯರೆಲ್ಲರೂ ಅದನ್ನು ಶಿರಸಾವಹಿಸಿ ಹೊರಕ್ಕೆ ಬಂದಮೇಲೆ ಒಬ್ಬನು ಒಂದು ಗುಡ್ಡವನ್ನು ಹತ್ತಿದನು; ಒಬ್ಬನು ಒಂದು ಪೊದೆಯನ್ನು ಹೊಕ್ಕನು; ಒಬ್ಬನು ಒಂದು ಗುಡಿಯೊಳಕ್ಕೆ ನುಗ್ಗಿದನು; ಒಬ್ಬನು ಒಂದು ಹಾಳುಮನೆಯೊಳಗೆ ಅಡಗಿದನು; ಒಬ್ಬನು ಮಲಗಿ ತುಂಬ ಮುಸುಕುಹಾಕಿಕೊಂಡನು. ಹೀಗೆ ಒಬ್ಬೊಬ್ಬರು ತಮತಮಗೆ ತೋರಿದಂತೆ ಏಕಾಂತವನ್ನು ಮಾಡಿಕೊಂಡು ಅಲ್ಲಿ ಹಣ್ಣನ್ನು ತಿಂದು ಗುರ್ವಾ-ಜ್ಞೆಯನ್ನು ಅಕ್ಷರಶಃ ಪಾಲಿಸಿದೆವೆಂದು ಸಂತೋಷದಿಂದ ಉಬ್ಬುತ್ತ ಗುರುಗಳ ಸನ್ನಿಧಾನಕ್ಕೆ ಒಬ್ಬೊಬ್ಬರಾಗಿ ಮುಂದೆಬಂದು ಯಾರೂ ಕಾಣದಹಾಗೆ ಉಪಾ-ಯವನ್ನು ಕಂಡುಕೊಂಡು ಬಾಳೆಯ ಹಣ್ಣನ್ನು ತಿಂದ ರೀತಿಯನ್ನು ಹೊಗಳಿ-ಕೊಂಡರು. ಕೊನೆಯಲ್ಲಿ ಒಬ್ಬ ಶಿಷ್ಯನು ತನ್ನ ಪಾಲಿಗೆ ಬಂದಿದ್ದ ಹಣ್ಣನ್ನು ಗುರುಗಳ ಮುಂದೆ ಇಟ್ಟು ಅಡ್ಡಬಿದ್ದು “ಮಹಾಸ್ವಾಮಿ, ಯಾರೂ ಕಾಣದಂತೆ ಈ ಹಣ್ಣನ್ನು ತಿನ್ನಬೇಕೆಂದು ನನಗೆ ತಿಳಿದ ಯೋಚನೆಯನ್ನೆಲ್ಲ ಮಾಡಿದೆನು. ಎಲ್ಲಿಗೆ ಹೋದರೂ ಸರ್ವವ್ಯಾಪಿಯಾದ ಪರಮಾತ್ಮನೊಬ್ಬನು ಅಲ್ಲಿ ಸಾಕ್ಷಿ-ಯಾಗಿ ಇದ್ದೇ ಇರುವಂತೆ ನನಗೆ ತೋರುತ್ತ ಬಂದುದರಿಂದ ನಾನು ಅದನ್ನು ತಿನ್ನದೆ ಹಿಂದಕ್ಕೆ ತಂದಿರುವೆನು” ಎಂದು ವಿಜ್ಞಾಪನೆ ಮಾಡಿದನು. ಇದನ್ನು ನೋಡುತ್ತಲೇ ಗುರುಗಳು ಅತ್ಯಂತಪ್ರಸನ್ನರಾಗಿ ಅವನ ತಲೆಯ ಮೇಲೆ

ತಮ್ಮ ವರದಹಸ್ತವನ್ನಿಟ್ಟು "ಇಷ್ಟು ಜನ ಶಿಷ್ಯರಲ್ಲಿ ನನ್ನ ಬೋಧನೆಯನ್ನು ನೀನೊಬ್ಬನು ಯಥಾರ್ಥರೀತಿಯಲ್ಲಿ ಗ್ರಹಿಸಿರುತ್ತಿ" ಎಂದು ಆನಂದಪ್ರದರ್ಶನ ಮಾಡಿದರು. ಆ ಸಚ್ಛಿಷ್ಯನಂತೆ ನಾವಾದರೂ ಸರ್ವಸಾಕ್ಷಿಯಾದ ಭಗವಂತನು ನಮ್ಮ ಎಲ್ಲಕರ್ಮಗಳನ್ನೂ ನೋಡುತ್ತಿರುವನೆಂಬ ಭಾವನೆಯಿಂದ ವರ್ತಿಸುತ್ತ ಹೋದರೆ ನಮ್ಮ ಕೈಯಿಂದ ಪಾಪಕಾರ್ಯವು ಹೇಗೆ ಆದೀತು? "ಏಕೆ, ದೇವರ ಭಾವನೆ ಏಕೆ ಬೇಕು? ನಾಸ್ತಿಕನು ನೀತಿಯಿಂದ ನಡೆದು ತಾನೂ ಸುಖಿಯಾಗಿ ತನ್ನಿಂದ ಇತರರಿಗೂ ಸುಖವನ್ನುಂಟುಮಾಡುವದು ಶಕ್ಯವಿಲ್ಲವೊ?" ಎಂದರೆ ಆಗಲಿ; ನಮ್ಮದೇನೂ ಅಡ್ಡಿ ಇಲ್ಲ. ಯಾವ ಮಗ್ಗಲಲ್ಲಿ ಮಲಗಿದರೇನು? ನಿದ್ರೆ ಬಂದರೆ ಸರಿಯಷ್ಟೆ. ಹಾಗೆಯೇ ನೀತಿಮರ್ಯಾದೆಯಿಂದ ತಾನೂ ಸುಖಿಯಾಗಿ ಇತರರನ್ನೂ ಸುಖಿಗಳನ್ನಾಗಿ ಮಾಡಿದರೆ

"यस्मान्नोद्विजते लोको लोकान्नोद्विजते च यः।
हर्षामर्षभयोद्वेगैर्मुक्तो यः स च मे प्रियः॥"

ಎಂಬ ಭಗವದುಕ್ತಿಯಂತೆ ಅವನು ಭಗವಂತನಿಗೆ ಪ್ರಿಯಭಕ್ತನೇ ಆಗಿರುವನು. ಅವನು ನಂಬದಿದ್ದರೂ ಭಗವಂತನು ಅವನನ್ನು ಬಿಡಲಾರನು. ಅವನು ನೋಡದಿದ್ದರೂ ಭಗವಂತನು ಅವನಿಗೆ ತಾನೇ ಕಾಣಿಸಿಕೊಳ್ಳುವನು. ಹೇಗಾದರೂ ಸದಾಚಾರವನ್ನು ಮಾಡಿದರೆ ಆಯಿತು. "आचारप्रभवो धर्मः" ಎಂದು ಶ್ರೀವೇದವ್ಯಾಸರು ಹೇಳಿದಂತೆ ಧರ್ಮವು ಅವನಿಗೆ ದೂರವಿಲ್ಲ. ಆದರೆ

"ದಂಡಿಸದೆ ದೇಹವನು ಖಂಡಿಸದೆ ಕರಣವನು
ಉಂಡುಂಡು ಸ್ವರ್ಗವನ್ನೈದಲಿಕ್ಕದನೇನು ರಂಡೆಯಾಳುವಳೆ ಸರ್ವಜ್ಞ ||"

ಎಂಬಂತೆ ದೇಹದಂಡನೆಯನ್ನೂ ಮನೋನಿಗ್ರಹವನ್ನೂ ಮಾಡದೆ ಮನಬಂದಂತೆ ಶರೀರಪೋಷಣೆಯನ್ನೂ ಇಂದ್ರಿಯಲಾಲನೆಯನ್ನೂ ಮಾಡುತ್ತ ನೀತಿಯಿಂದ ನಡೆಯುತ್ತೇನೆನ್ನಲಿಕ್ಕೆ ನೀತಿಯೆಂಬುದೇನು ಹಾದಿಯ ಮೇಲೆ ಬಿದ್ದಿದೆಯೆ? ಇಂದ್ರಿಯನಿಗ್ರಹವನ್ನು ಮಾಡಬೇಕೆಂದು ಆಲೋಚನೆಮಾಡುವದೂ ಮಾತಾಡುವದೂ ಸುಲಭವೆ. ಬೆಕ್ಕಿನ ಹಾವಳಿಯನ್ನು ತಪ್ಪಿಸಿಕ್ಕೊಳ್ಳುವದಕ್ಕೆ ಏನು ಮಾಡಬೇಕೆಂದು ಇಲಿಗಳೆಲ್ಲ ಸೇರಿ ಸಭೆಮಾಡಿದವಂತೆ. ಆಗ ಒಂದು

ಸಣ್ಣ ಇಲಿಯು ಮರಿಯು ಮುಂದೆ ನಿಂತು ಸಭಿಕರನ್ನು ತನ್ನ ವಾಗ್ಧೋರಣೆ-ಯಿಂದ ಬೆರಗುಮಾಡಿ ಬೆಕ್ಕಿನ ಕೊರಳಿಗೆ ಗಂಟೆಯನ್ನು ಕಟ್ಟಿದರೆ ಅದು ಬಂದ ಕೂಡಲೆ ಸದ್ದಾಗುವದರಿಂದ ತಾವು ಅದರ ಕೈಗೆ ಸಿಕ್ಕದ ಹಾಗೆ ತಪ್ಪಿಸಿಕೊಂಡು ಓಡಬಹುದೆಂದು ಸೂಚನೆಮಾಡಿತಂತೆ. ಒಡನೆಯೆ ಅಲ್ಲಿದ್ದ ಇಲಿಗಳೆಲ್ಲ ಅದು ಬಹುಸಮರ್ಪಕವಾದ ಯುಕ್ತಿಯೆಂದು ಆ ಅಭಿಪ್ರಾಯವನ್ನು ಅತ್ಯಾದರದಿಂದ ಅನುಮೋದಿಸಿದವಂತೆ. ಆಹೊತ್ತಿಗೆ ಒಂದು ಮುದಿ ಇಲಿಯು ಮುಂದೆ ಬಂದು "ಸಭಿಕರೆ, ನಿಮ್ಮ ಜಾಣತನವನ್ನು ನಾನು ಏನೆಂದು ಹೊಗಳಲಿ. ಬೆಕ್ಕಿನ ಕೊರಳಿಗೆ ಗಂಟೆಯನ್ನು ಕಟ್ಟಿದರೆ ನಾವು ಅದರ ಬಾಧೆಯನ್ನು ತಪ್ಪಿಸಿ-ಕೊಳ್ಳಬಹುದು. ನಿಜ. ಆದರೆ ಮುಂದೆ ಹೋಗಿ ನಿಂತು ಗಂಟೆಯನ್ನು ಕಟ್ಟುವವರು ಯಾರು? ಆ ವಿಚಾರ ಬೇಡವೆ?" ಎಂದು ಹೇಳಲು ಆಗ ಎಲ್ಲ ಇಲಿಗಳೂ ಮುಂದುಗಾಣದೆ ಒಂದನ್ನೊಂದು ನೋಡುತ್ತ ಜೋಲುಮುಖವನ್ನು ಹಾಕಿಕೊಂಡು ಕುಳಿತವಂತೆ. ಹೀಗೆ ಈಸಾಪನೀತಿಯ ಕಥೆಯಲ್ಲಿ ಇಲಿಗಳು ಬೆಕ್ಕಿನ ಕೊರಳಿಗೆ ಗಂಟೆಯನ್ನು ಕಟ್ಟಿ ಅದರ ಕಾಟವನ್ನು ತಪ್ಪಿಸಿಕೊಳ್ಳಬೇ-ಕೆಂದು ನಿರ್ಣಯಮಾಡಿದಂತೆ ನೀತಿಯಿಂದ ನಡೆದು ಇಂದ್ರಿಯಗಳ ಬಲೆಗೆ ಬೀಳದೆ ಪಾರಾಗಬೇಕೆಂದು ಯಾರಾದರೂ ಯೋಚಿಸಬಹುದು. ಆದರೆ ಮನಸ್ಸಿನಲ್ಲಿ ಮಂಡಿಗೆಯನ್ನು ತಿಂದರೆ ಗೋಧಿಯ ರೊಕ್ಕವನ್ನು ಯಾರು ಕೊಡಬೇಕು? ನೀತಿಯಿಂದ ನಡೆಯುವದಕ್ಕೇನಾದರೂ ಬೆಂಬಲಬೇಕು. ಆದಕಾರಣ **"ಧರ್ಮಸ್ಯ ಪ್ರಭುರಚ್ಯುತಃ"** ಎಂದು ಶ್ರೀವ್ಯಾಸಮಹರ್ಷಿಗಳು ಹೇಳಿದ್ದಾರೆ. ದೇವರಲ್ಲಿಯೂ ಜನ್ಮಾಂತರಗಳಲ್ಲಿಯೂ ನಂಬಿಕೆ ಇಲ್ಲದಿದ್ದರೆ ದೃಢವಾಗಿ ನೀತಿಯಿಂದ ವರ್ತಿಸುವದು ಹೇಗೆ ತಾನೆ ಸುಲಭವಾದೀತು? ಸಾಧಾರಣಪ್ರಸಂಗದಲ್ಲೇನೋ ಮನುಷ್ಯನು ನೀತಿಯಿಂದ ನಡೆಯಬಹುದು. ಆದರೆ ಕೇವಲ ಐಹಿಕಸುಖವನ್ನೇ ನೋಡುತ್ತಿರುವ ಮನುಷ್ಯನು ದೇವರ ಮತ್ತು ಜನ್ಮಾಂತರದ ಕಲ್ಪನೆ ಇಲ್ಲದೆ ಇದ್ದರೆ ವಿಷಯಗಳ ಕಡೆಗೆ ಸ್ವಚ್ಛಂದ-ವಾಗಿ ಹರಿದು ಹೋಗುವ ಇಂದ್ರಿಯಗಳನ್ನು ತಡೆದು ನಿಲ್ಲಿಸಲಿಕ್ಕೆ ಏನು ಕಾರಣವಾದೀತು? ಇಂದ್ರಿಯಗಳಿಗೆ ಅಧೀನನಾಗಿ ಚೌರ್ಯಾದಿಗಳನ್ನು ಮಾಡಿದರೆ ಇಹದಲ್ಲಿಯೇ ದುಃಖವಾಗುವದೆಂಬ ವಿಚಾರವು ಅಡ್ಡಬಂದು

ನಿಲ್ಲುವದಾದರೂ ಸಣ್ಣಮಾತಲ್ಲ. ಇಂಥ ವಿಚಾರವು ನಿರಂತರ ಜಾಗ್ರತವಾಗಿರುವ ಯಾವನಾದರೊಬ್ಬನು ದೇವರ ಕಲ್ಪನೆಯನ್ನು ಕೂಡ ಮಾಡದವನಾಗಿದ್ದರೂ ಅವನು ಪೂರ್ವಜನ್ಮದಲ್ಲಾದರೂ ದೇವರ ಕೃಪೆಯನ್ನು ಸಂಪಾದಿಸಿದವನು ಆಗಿಯೇ ಇರಬೇಕು. ಒಬ್ಬ ವಿದ್ಯಾರ್ಥಿಯು ಪಾಠಶಾಲೆಯಲ್ಲಿ ಅಂಕೆಗಳನ್ನೂ ಮಗ್ಗಿಗಳನ್ನೂ ಕಲಿಯದೆ ಲೆಕ್ಕಮಾಡಿದರೆ ಅವನು ಅವುಗಳನ್ನು ಮನೆಯಲ್ಲಾದರೂ ಕಲ್ತಿರಲಿಕ್ಕೇ ಬೇಕು. ಹೇಗೇ ಆಗಲಿ ಲೆಕ್ಕವನ್ನು ಮಾಡಲಿಕ್ಕೆ ಅವನಿಗೆ ಬಂದರೆ ಲಾಭವಾಗುವದು. ಅದರಂತೆ ಯಾವ ಪ್ರಕಾರದಿಂದಾದರೂ ಆಗಲಿ ನೀತಿಯಿಂದ ನಡೆಯುವವನಿಗೆ ಸುಖವಾಗುವದು. ನೀತಿಯಿಂದ ವರ್ತಿಸಬೇಕಾದರೆ ಸುವಿಚಾರ ಬೇಕು. ಸುವಿಚಾರಕ್ಕಾಗಿ ಅವನಿಗೇನಾದರೂ ಸಾಧನವು ಬೇಕು. ಈ ಜನ್ಮದಲ್ಲಿ ಏನೂ ಸಾಧನಮಾಡದೆ ಸಹಜವಾಗಿ ಸುವಿಚಾರಶಾಲಿಯಾದ ಮಹಾತ್ಮನು

"यदा यदा हि धर्मस्य ग्लानिर्भवति भारत।
अभ्युत्थानमधर्मस्य तदात्मानं सृजाम्यहम्॥"

ಎಂದು ಸ್ವಕಂಠದಿಂದ ಅಂದ ಶ್ರೀಭಗವಂತನ ಅವತಾರವಾಗಲಿ ಅಥವಾ

"तत्र तं बुद्धिसंयोगं लभते पौर्वदेहिकम्"

ಎಂದು ಮುಂತಾಗಿ ಭಗವಂತನು ಅಂದಂತೆ ಪೂರ್ವಜನ್ಮದಲ್ಲಿ ಯೋಗಭ್ರಷ್ಟನಾದವನಾಗಲಿ ಆಗಿರಲೇ ಬೇಕು, ಇರಲಿ. ನಮ್ಮಂಥ ಸಾಧಾರಣ ಮನುಷ್ಯರಿಗೆ ಧರ್ಮದ ಆಶ್ರಯವನ್ನು ಬಿಟ್ಟರೆ ಜನ್ಮವನ್ನು ಸಾರ್ಥಕಮಾಡಿಕೊಳ್ಳುವದಕ್ಕೆ ಬೇರೆ ಮಾರ್ಗವೇ ಇಲ್ಲ. ಆದುದರಿಂದಲೇ

"धर्मे सर्वं प्रतिष्ठितं; तस्माद्धर्मं परमं वदंति"

ಎಂಬ ಮುಂತಾದ ಶ್ರುತಿವಾಕ್ಯಗಳೂ

"सुखार्थाः सर्वलोकानां मताः सर्वाः प्रवृत्तयः।
सुखं तु न विना धर्मात्तस्माद्धर्मपरो भवेत्॥"

ಎಂಬ ಮುಂತಾದ ಸ್ಮೃತಿವಾಕ್ಯಗಳೂ ಧರ್ಮವನ್ನು ಬೋಧಿಸುತ್ತವೆ.

"एक एव सुहृद्धर्मो निधनेप्यनुयाति यः।
शरीरेण समं नाशं सर्वमन्यत्तु गच्छति॥"

ಎಂಬ ಮತ್ತು

"मृतं शरीरमुत्सृज्य काष्ठलोष्ठसमं क्षितौ।
विमुखा बांधवा यांति धर्मस्तमनुगच्छति॥"

ಎಂಬ ಶ್ರೀಮನೂಕ್ತಿಗಳ ಕಡೆಗೆ ಲಕ್ಷ್ಯವನ್ನು ಕೊಟ್ಟರೆ ಧರ್ಮದ ಶ್ರೇಷ್ಠತೆ-ಯು ವ್ಯಕ್ತವಾಗುವದು. ನಾವು ನಮ್ಮ ಸಂಕಟಕಾಲಕ್ಕೆ ಒದಗುವರೆಂದು ಅನೇಕ ಬಂಧುಗಳನ್ನೂ ಅನೇಕಮಿತ್ರರನ್ನೂ ಸಂಪಾದಿಸಿಕೊಂಡು ಎಷ್ಟೋ ಧನಧಾನ್ಯಗಳನ್ನು ಕೂಡಿಹಾಕಿಕೊಂಡಿರುವೆವು. ಮರಣದಂಥ ಭಯಂಕರ-ವಾದ ಸಂಕಟವು ಆವರಿಸಿಕೊಂಡಾಗ ನಮ್ಮನ್ನು ಸಂತಯಿಸುವದಕ್ಕೆ ಬಂಧು-ಗಳೂ ಆಗುವದಿಲ್ಲ; ಮಿತ್ರರೂ ಆಗುವದಿಲ್ಲ. ಬಹುಕಾಲದಿಂದ ಬಂಧುಗಳೆಂದೂ ಮಿತ್ರರೆಂದೂ ಹೇಳಿಸಿಕೊಳ್ಳುತ್ತ ನಮ್ಮಿಂದ ಎಷ್ಟೋ ಉಪಕಾರವನ್ನು ಹೊಂದಿ-ದವರು ಬಹಳವಾಗಿ ಮನಸ್ಸು ಮಾಡಿದರೆ ಸ್ಮಶಾನದ ವರೆಗೆ ಮಾತ್ರ ನಮ್ಮನ್ನು ಹಿಂಬಾಲಿಸುವರು. ಅಲ್ಲಿ ನಮ್ಮ ದೇಹವನ್ನು ಸುಟ್ಟು ಅಥವಾ ಹುಗಿದು ತಮ್ಮ ದಾರಿಯನ್ನು ಹಿಡಿದು ತಾವು ಹಿಂದಕ್ಕೆ ತೆರಳುವರು. ಬಂಧುಗಳೂ ಮಿತ್ರರೂ ಇಷ್ಟಾದರೂ ಮಾಡುವರು. ನಾವು ಗಳಿಸಿದ ಧನಧಾನ್ಯಗಳು ನಮಗಾಗಿ ಇದ್ದ ಡೆಯನ್ನು ಬಿಟ್ಟು ಅಲ್ಲಾಡುವದು ಕೂಡ ಇಲ್ಲ. ಆದುದ-ರಿಂದ ಬಂಧುಗಳಾಗಲಿ ಮಿತ್ರರಾಗಲಿ ಧನಧಾನ್ಯಗಳಾಗಲಿ ನಮ್ಮ ಸಂಕಟ-ಕಾಲಕ್ಕೆ ಆಗಲಾರವು. ಧರ್ಮವೊಂದು ಮಾತ್ರ ನಾವು ಎಲ್ಲಿ ಹೋದರೂ ಬೆನ್ನು ಬಿಡದೆ ನಮಗೆ ಹತ್ತಿಕೊಂಡೇ ಇರುವದು. ಮರಣಾನಂತರದಲ್ಲಿ ನಮ್ಮ ಗತಿ ಏನಾಗುವದೆಂದು ವಿಚಾರವನ್ನು ಕೂಡ ನಮ್ಮ ಬಂಧುಬಳಗದ-ವರು ಮಾಡುವದಿಲ್ಲ. ನಮ್ಮ ಹೆಂಡರುಮಕ್ಕಳು ಮುಂದೆ ತಮಗೇನು ಗತಿ? ಎಂದು ಮಾತ್ರ ಅಳುವರೇ ಹೊರತು ನಮ್ಮ ಗತಿಯ ವಿಷಯಕ್ಕೆ ಆಲೋ-

ಚನೆಯನ್ನು ಕೂಡ ಮಾಡುವದಿಲ್ಲ. ಹೀಗೆ ನಾವು ಸತ್ತು ಹೋದ ಬಳಿಕ ಧರ್ಮವೆಂಬುದೊಂದೇ ಸಹಾಯವಾಗುವದೆಂಬುದನ್ನು ತಿಳಿದು ನಾವು

"तस्माद्धर्मं सहायार्थं नित्यं संचिनुयाच्छनैः"

ಎಂದಂತೆ ಮೆಲ್ಲಮೆಲ್ಲನೆ ಆದಷ್ಟು ಧರ್ಮವನ್ನು ಈಗಿನಿಂದಲೆ ಸಂಗ್ರಹಮಾಡುತ್ತ ಹೋಗಬೇಕು. ನಮಗೆ ಯಾವಾಗ ಮೃತ್ಯು ಬಂದೀತೆಂಬುವದು ನಿಯಮವಿಲ್ಲ.

"अहन्यहनि भूतानि गच्छंतीह यमालयं।
शेषा स्थावरमिच्छंति किमाश्चर्यमतः परं॥"

ಎಂದು ಶ್ರೀಮಹಾಭಾರತದಲ್ಲಿ ಧರ್ಮರಾಜನು ಅಂದಂತೆ ದಿನದಿನವೂ ಎಷ್ಟೋ ಜೀವರು ಮರಣಾಧೀನರಾಗುತ್ತಿರುವದನ್ನು ನಾವು ನೋಡುತ್ತಿರುತ್ತೇವೆ. ಆದರೂ ನಾವು ಮಾತ್ರ ಚಿರಕಾಲವಿರುವವರಂತೆ ಎಷ್ಟೋ ಮುಂದಣ ಯೋಚನೆಗಳನ್ನೆಲ್ಲ ಹಚ್ಚಿಕೊಂಡು ಸುಮ್ಮನೆ ತೊಳಲುತ್ತೇವೆ. ಜೀವದ ಈ ಕ್ಷಣಿಕತ್ವವು ಪ್ಲೇಗಿನ ದಿವಸಗಳಲ್ಲಂತು ಹೆಚ್ಚು ಸ್ಪಷ್ಟವಾಗಿ ಕಾಣಿಸಿಕೊಳ್ಳುವದು. ಒಬ್ಬ ಮನುಷ್ಯನು ಬೆಳಿಗ್ಯೆ ಆರೋಗಿಯಾಗಿದ್ದುದನ್ನು ನಾವೇ ನೋಡಿರುತ್ತೇವೆ. ಒಂದೆರಡು ತಾಸುಗಳಲ್ಲಿಯೇ ಅವನು ರೋಗಗ್ರಸ್ತನಾದುದನ್ನೂ ಮತ್ತೊಂದೆರಡು ತಾಸುಗಳಲ್ಲಿಯೇ ಅವನು ಮರಣವನ್ನೇ ಹೊಂದಿದುದನ್ನೂ ನಾವೇ ನೋಡುತ್ತೇವೆ, ಅಥವಾ ಕೇಳುತ್ತೇವೆ. ಹೀಗಿದ್ದೂ ಇನ್ನೂ ೧೦ ವರ್ಷಗಳ ಮುಂದಿನ ಕಾರ್ಯವನ್ನು ನಾವು ಈಗಲೇ ಯೋಚಿಸುವದಕ್ಕೆ ಹೋಗುತ್ತೇವೆ. ಆದರೆ ನಾವು ವಿಚಾರಿಸಿ ನೋಡಿ ಹೀಗೆ ಮಾಡದೆ

"गृहीत इव केशेशु मृत्युना धर्ममाचरेत्"

ಎಂಬಂತೆ ಮೃತ್ಯುವು ಯಾವಾಗಲೂ ನಮ್ಮ ಮುಂದೆ ಬಂದು ನಿಂತಿರುವದೆಂದು ತಿಳಿದುಕೊಂಡೇ ಮರಣಾನಂತರದಲ್ಲಿ ನಮಗೆ ಸದ್ಗತಿಯಾಗುವಂತೆ ಧರ್ಮವನ್ನು ಆಚರಿಸಬೇಕು.

ಮರಣಾನಂತರದಲ್ಲಿ ಏನು ಗತಿಯಾಗುವದೆಂಬುದು ವಿಚಾರಿಸಿ ನೋಡ-ತಕ್ಕ ವಿಷಯವಾಗಿದೆ. ಇದರ ವಿಷಯಕ್ಕೆ ಎಲ್ಲ ಧರ್ಮಗಳ ಗ್ರಂಥಗಳೂ ಅನೇಕ ಪ್ರಕಾರವಾದ ವಿಚಾರಗಳನ್ನು ಮಾಡಿರುವವು. ಮನುಷ್ಯನು ಎಲ್ಲಿ-ಯವರೆಗೆ ಕೇವಲ ಐಹಿಕಸುಖದ ಕಡೆಗೇ ಲಕ್ಷ್ಯವನ್ನು ಕೊಟ್ಟಿರುವನೊ ಅಲ್ಲಿಯವರೆಗೆ ಅವನ ಮನಸ್ಸ್ಥಿತಿಯು ಒಂದು ಬಗೆಯಾಗಿರುವದು. ಆದರೆ ಹೀಗೆಯೇ ಇರುತ್ತಿರುವಾಗ ಕಾರಣಾಂತರದಿಂದ ಎಂದಾದರೂ ಮುಂದೆ ನನ್ನ ಗತಿ ಏನು? ಎಂಬ ವಿಚಾರವೇನಾದರೂ ಮನಸ್ಸಿಗೆ ಹತ್ತಿದರೆ ಆಗ ಅವನ ಎದೆಯೊಡೆಯುವ ಪ್ರಸಂಗ ಬಂದೀತು.

ಕೆಲವು ವರ್ಷಗಳ ಹಿಂದೆ ಹಿಂದುಸ್ಥಾನದ ಒಬ್ಬ ತರುಣನು ವ್ಯವಹಾರ-ಶಾಸ್ತ್ರ(ಕಾನೂನ)ವನ್ನು ಕಲಿಯುವದಕ್ಕಾಗಿ ಯೂರೋಪಖಂಡದಲ್ಲಿ ಪ್ರಸಿದ್ಧ-ವಾದ ಒಂದು ವಿಶ್ವವಿದ್ಯಾಲಯಕ್ಕೆ ಹೋಗಿ ಅಲ್ಲಿ ಬಹು ಅಕ್ಕರೆಯಿಂದ ತನ್ನ ಬುದ್ಧಿಸಾಮರ್ಥ್ಯವನ್ನೆಲ್ಲ ಉಪಯೋಗಿಸಿ ಅಭ್ಯಾಸವನ್ನು ಮಾಡುತ್ತಿದ್ದನು. ಒಂದುದಿನ ಅಲ್ಲಿಯೇ ಪರಹಿತಕ್ಕಾಗಿ ತನ್ನ ಜೀವಮಾನವನ್ನೆಲ್ಲ ಕಳೆಯುತ್ತಿದ್ದ ಒಬ್ಬ ವೃದ್ಧಗೃಹಸ್ಥನಿಂದ ಅವನಿಗೆ ಆಮಂತ್ರಣವು ಬಂತು. ಅದರಂತೆ ಅವನು ಅಲ್ಲಿಗೆ ಹೋದಾಗ ಉಭಯರಿಗೂ ಕುಶಲಪ್ರಶ್ನೆಗಳಾದವು. ಆ ಸಂದರ್ಭ-ದಲ್ಲಿ ಆ ತರುಣನು ತಾನು ಆ ವಿಶ್ವವಿದ್ಯಾಲಯದ ಮಹತ್ಖ್ಯಾತಿಯನ್ನು ಕೇಳಿ ಅಲ್ಲಿಗೆ ಬಂದೆನೆಂದೂ ಆದಷ್ಟು ಕ್ಷಿಪ್ರದಲ್ಲಿಯೇ ತನ್ನ ಅಭ್ಯಾಸದಲ್ಲಿ ತೇರ್ಗಡೆ-ಯಾಗುವದಕ್ಕೆ ಸರ್ವಪ್ರಯತ್ನವನ್ನೂ ಮಾಡುತ್ತಿದ್ದೇನೆಂದೂ ಹೇಳಿದನು. ಈ ಮಾತನ್ನು ಕಿವಿಗೊಟ್ಟು ಕೇಳಿ ಆ ವೃದ್ಧನು ಆ ಪ್ರಸ್ತಾಪನ್ನೇ ಮುಂದೆ ಹೇಳುವಂತೆ ಬೆಳಸಿದನು.

**ವೃದ್ಧ** — ಒಳ್ಳೇದು. ನೀವು ನಿಮ್ಮ ಪಾರಪ್ರವಚನಗಳ ಅಭ್ಯಾಸದಲ್ಲಿ ತೇರ್ಗಡೆಯಾದರೆ ನಿಮಗೇನು ಲಾಭವಾಗುವದು?

**ತರುಣ** — ನಾನು ಆಪದವಿ(ಡಿಗ್ರಿ)ಯನ್ನು ಪಡೆಯುತ್ತೇನೆ.

**ವೃದ್ಧ** — ಆಮೇಲೆ ಏನು ಮಾಡಬೇಕೆಂದಿರುವಿರಿ?

**ತರುಣ** — ಆಮೇಲೆ ನಾನು ನಿರ್ವಾಹವಮಾಡತಕ್ಕ ಮಹತ್ಕಾರ್ಯಗ-ಳೆಷ್ಟೋ ಇರುತ್ತವೆ. ನನ್ನ ವಾಗ್ವೈಖರಿಯಿಂದಲೂ ನನ್ನ ಚಟುವಟಿಕೆಯಿಂ-

ದಲೂ ನನ್ನ ಪಾಂಡಿತ್ಯದಿಂದಲೂ ನನ್ನ ಸೂಕ್ಷ್ಮವಿಚಾರದಿಂದಲೂ ಜನರ ಮನಸ್ಸನ್ನು ಆಕರ್ಷಣೆಮಾಡಿ ಪ್ರಖ್ಯಾತನಾಗುವೆನು.

**ವೃದ್ಧ**— ಆಮೇಲೆ?

**ತರುಣ**— ಆಮೇಲಿನ್ನೇನು? ನನಗೊಂದು ದೊಡ್ಡ ಅಧಿಕಾರವು ಸಿಕ್ಕುವದೆಂಬುದರಲ್ಲಿ ಸಂದೇಹವೇ ಇಲ್ಲ. ಆಗ ನಾನು ಬೇಕಾದಷ್ಟು ಹಣವನ್ನು ಗಳಿಸಿ ಶ್ರೀಮಂತನಾಗುವೆನು.

**ವೃದ್ಧ**— ಆಮೇಲೆ?

**ತರುಣ**— ಆಮೇಲೆ ನಾನು ಸಮೃದ್ಧವಾದ ಸುಖಸಾಧನಗಳನ್ನು ಹೊಂದಿ ಭಾಗ್ಯದಲ್ಲಿಯೂ ಗೌರವದಲ್ಲಿಯೂ ಘನತೆಯನ್ನು ಹೊಂದಿ ಬಾಳುವೆನು.

**ವೃದ್ಧ**— ಆಮೇಲೆ?

**ತರುಣ**— ಆಮೇಲೆ— ಆಮೇಲೆ— ಆಮೇಲೆ ಸಾಯುವೆನು.

ಇಷ್ಟು ಮಾತಾದ ಮೇಲೆ ಆ ವೃದ್ಧನು ಮತ್ತಷ್ಟು ಉಚ್ಚಸ್ವರದಿಂದ "ಆಮೇಲೆ?" ಎಂದು ಕೂಗಿದನು. ಆಗ ಉತ್ತರವನ್ನು ಕೊಡುವದಕ್ಕೆ ಆ ತರುಣನಿಗೇನೂ ತೋಚಲಿಲ್ಲ. ಅವನು ಸುಮ್ಮನೆ ತಲೆಯನ್ನು ಬೊಗ್ಗಿಸಿಕೊಂಡನು. ಆ ವೃದ್ಧನು ಕೊನೆಯ ಸಲ "ಆಮೇಲೆ?" ಎಂದ ಮಾತು ವಿದ್ಯುಚ್ಛಕ್ತಿಯಂತೆ ಅವನ ಹೃದಯವನ್ನು ಭೇದಿಸಿತು. ಅದನ್ನು ಸಹಿಸುವದು ಅವನಿಗೆ ಆಗಲಿಲ್ಲ. ಆಗ ಆ ತರುಣನು ಕ್ಷುದ್ರವಾದ ಐಹಿಕಸುಖಕ್ಕಾಗಿಯೂ ಮತ್ತು ಘನತೆಗಾಗಿಯೂ ಮಾಡುವ ಉದ್ಯೋಗಕ್ಕೆ ಬದಲಾಗಿ ಭಗವದ್ವಿಚಾರವನ್ನು ಮನಗಾಣುವ ಪ್ರಯತ್ನವನ್ನು ಕೈಕೊಂಡನು.

ಹೀಗೆಯೇ Louis Figuier ಎಂಬ ಫ್ರೆಂಚಗ್ರಂಥಕಾರರು ಸತ್ತು ಹೋದ ಮೇಲೆ ಏನಾಗುವದೆಂಬ ವಿಷಯದಲ್ಲಿ ತಮ್ಮ ಅನುಭವವನ್ನೂ ಅದರ ಮೇಲೆ ತಾವು ಬೆಳಸಿದ ವಿಚಾರವನ್ನೂ ಪ್ರಕಾಶಮಾಡುವದಕ್ಕಾಗಿ "The Day After Death" ಎಂಬದೊಂದು ಗ್ರಂಥವನ್ನೇ ಬರೆದಿರುತ್ತಾರೆ. ಅವರ ಜೀವಮಾನದಲ್ಲಿ ಎಷ್ಟೋ ದೀರ್ಘಕಾಲವು ಕಳೆದರೂ ಅವರು ಇತರ ಸಾಮಾನ್ಯ ಜನರಂತೆ ಮನುಷ್ಯನ ಪುನರ್ಜನ್ಮವಿಷಯವು ವಿಚಾರಕ್ಕೆ ನಿಲುಕ-

ತಕ್ಕದ್ದಲ್ಲವಾದುದರಿಂದ ಮನಸ್ಸನ್ನು ಅದರ ಗೋಜಿಗೆ ಹೋಗಗೊಡದಿರುವದೇ ಜಾಣತನವೆಂತಲೇ ನಂಬಿದ್ದರು. ಅವರಿಗೆ ಒಂದು ದುಃಖಮಯವಾದ ದಿನವು ಪ್ರಾಪ್ತವಾಯಿತು. ತನ್ನ ಪ್ರೀತಿಮಯಮೂರ್ತಿಯೂ ತನ್ನ ಸರ್ವಸ್ವವೂ ಆಗಿದ್ದ ಮುದ್ದುಮಗನು ಆದಿನ ಮರಣಾಧೀನನಾದನು. ಆ ವ್ಯಸನದ ತೊಳಲಿಕೆಯಲ್ಲಿ ಅವರು "ಮನುಷ್ಯನು ಇಂದಿಲ್ಲ ನಾಳೆ ಒಂದಿಲ್ಲೊಂದು ದಿನ ಸತ್ತೇಸಾಯುವನಷ್ಟೆ. ಆಮೇಲೆ ಅವನ ಗತಿ ಏನಾಗುವದು? ಅವನ ದೇಹದ ವಿಷಯವಾಗಿ ನಾನು ಯೋಚಿಸುವದಿಲ್ಲ. ಅದೂ ಒಂದು ಹೆಣದ ಮೇಲಣ ಅರಿವೆಯಂತೆಯೇ ಹೊರತು ಹೆಚ್ಚಿನದೇನೂ ಅಲ್ಲ. ಅರಿವೆಯು ಹೇಗೆ ಮಣ್ಣಿನಲ್ಲಿ ಬೆರೆತು ಹೋಗುತ್ತದೊ ದೇಹವೂ ಹಾಗೆಯೇ ಅದರ ಕಾರಣಗಳಾದ ಪಂಚಭೂತಗಳಲ್ಲಿ ಸೇರಿಹೋಗುತ್ತದೆ. ಆದರೆ ನಮ್ಮ ಬಗೆ-ಬಗೆಯಾದ ಆಲೋಚನೆಗಳಿಗೂ ರಾಗದ್ವೇಷಗಳಿಗೂ ಸುಖದುಃಖಗಳಿಗೂ ಆಧಾರವಾದ ಜೀವಚೇತನವು ಎಲ್ಲಿಗೆ ಹೋಗುತ್ತದೆ?" ಎಂದು ವಿಚಾರ-ಮಾಡುವದಕ್ಕೆ ಮೊದಲುಮಾಡಿ ತದೇಕಮನಸ್ಕರಾಗಿ ಬಹುಕಾಲ ಅದನ್ನೇ ಯೋಚಿಸಿ ಯೋಚಿಸಿ ಆ ವಿಷಯದಲ್ಲಿ ಭೌತಿಕಶಾಸ್ತ್ರಗಳಿಂದ ದೊರೆಯಬಹು-ದಾದ ಸಂಗತಿಗಳನ್ನೂ ನಗರಗಳಲ್ಲಿಯೂ ಗ್ರಾಮಗಳಲ್ಲಿಯೂ ಇರುವ ವಯೋ-ವೃದ್ಧರಿಂದ ಸಂಗ್ರಹಿಸಬಹುದಾದ ಸಂಗತಿಗಳನ್ನೂ ಒದಗಿಸಿಕೊಂಡು ಎಲ್ಲ-ವನ್ನೂ ಸಮಾಲೋಚನೆಮಾಡಿ ಜನ್ಮಾಂತರವುಂಟೆಂಬುದನ್ನು ಸಿದ್ಧಾಂತಮಾಡಿ-ರುತ್ತಾರೆ. ಇದರಂತೆ "Death and After" ಮೊದಲಾದ ಇಂಗ್ಲಿಷು ಗ್ರಂಥಗಳಲ್ಲಿ ಜನ್ಮಾಂತರದ ಸಿದ್ಧಾಂತವು ಪ್ರತಿಪಾದಿಸಲ್ಪಟ್ಟಿದೆ. ಮರಣಾ-ನಂತರದಲ್ಲಿ ಮನುಷ್ಯನ ಗತಿ ಏನಾಗುವದೆಂಬ ವಿಷಯವು ಕಠೋಪನಿಷತ್ತಿನಲ್ಲಿ ಯಮ ಮತ್ತು ನಾಚಿಕೇತ ಇವರ ಸಂವಾದದಲ್ಲಿ ಚೆನ್ನಾಗಿ ವಿವರಿಸಲ್ಪಟ್ಟಿದೆ. ಇದಲ್ಲದೆ ಆಯಾ ಉಪನಿಷತ್ತುಗಳಲ್ಲಿ ಜನ್ಮಾಂತರವು ನಿರ್ಣಯಿಸಲ್ಪಟ್ಟಿದೆ. ಗೀತೆಯಲ್ಲಿಯ

"न त्वेवाहं जातु नासं न त्वं नेमे जनाधिपाः ।
न चैव न भविष्यामः सर्वे वयमतः परम् ॥"

ಎಂಬ ಭಗವಂತನ ಉಕ್ತಿಯು ನಾವೆಲ್ಲರೂ ಹಿಂದೆ ಇದ್ದೆವೆಂತಲೂ ಮತ್ತು ಮುಂದೆ ಇರುವೆವೆಂತಲೂ ಸ್ಪಷ್ಟವಾಗಿ ಬೋಧಿಸುತ್ತದೆ.

"जातस्य हि ध्रुवो मृत्युर्ध्रुवं जन्म मृतस्य च"

ಎಂದು ಭಗವಂತನೂ ಮತ್ತು "पुनरपि जननं पुनरपि मरणं" ಎಂದು ಶ್ರೀಶಂಕರಾಚಾರ್ಯರೂ ಸುಸ್ಪಷ್ಟವಾಗಿ ಹೇಳಿರುವಂತೆ ನಮಗೆ ಪುನರ್ಜನ್ಮವು ಬಿಟ್ಟದ್ದಲ್ಲ. ಪುನರ್ಜನ್ಮವೆಂದರೆ ಮರಣವಾದ ಮೇಲೆ ಮತ್ತೂ ಸಶರೀರಿಗಳಾಗಿ ಹುಟ್ಟುವದು. ಈ ನಮ್ಮ ದೇಹದೊಳಗಿರುವ ಮನಸ್ಸು ಪ್ರಾಣ ಮೊದಲಾದ ಸೂಕ್ಷ್ಮವಸ್ತುಗಳ ಸಮೂಹರೂಪವಾದ ಸೂಕ್ಷ್ಮಶರೀರವು ಈ ಸ್ಥೂಲಶರೀರವನ್ನು ಬಿಟ್ಟುಹೋಗುವದೇ ಮರಣವು.

"यं यं वापि स्मरन् भावं त्यजत्यंते कळेवरं।
तं तमेवैति कौंतेय सदा तद्भावभावितः॥"

ಎಂದು ಭಗವಂತನು ಅಂದಂತೆ ಈ ಮರಣಕಾಲದಲ್ಲಿ ಯಾವ ಯೋಚನೆಯು ಬಲವಾಗಿರುವದೊ ಅದರ ಮೇಲಿಂದ ಸೂಕ್ಷ್ಮಶರೀರವು ದೇಹದಿಂದ ಎಲ್ಲಿಗೆ ಹೋಗುವದೆಂಬುದು ಗೊತ್ತಾಗುವದು.

"अंतकाले च मामेव स्मरन्मुक्त्वा कळेवरं।
यः प्रयाति स मद्भावं याति नास्त्यत्र संशयः॥"

ಎಂಬ ಭಗವದುಕ್ತಿಯಂತೆ ಭಗವಂತನನ್ನೇ ಸ್ಮರಿಸುತ್ತ ದೇಹವನ್ನು ಬಿಟ್ಟವನು ಭಗವಂತನನ್ನೇ ಹೊಂದುವನು. ಮರಣಸಮಯದಲ್ಲಿ ಭೂಲೋಕದಲ್ಲಿ ದೊರೆಯುವದಕ್ಕಿಂತ ಹೆಚ್ಚಾದ ವಿಷಯಸುಖವನ್ನು ಅನುಭವಿಸಬೇಕೆಂದು ಇಚ್ಛಿಸಿದವನು ಊರ್ಧ್ವಲೋಕಕ್ಕೆ ಹೋಗುವನು. ಹಾಗಿಲ್ಲದೆ ಈ ಭೂಲೋಕದ ವಿಷಯುಗಳಲ್ಲಿಯೇ ಮನಸ್ಸಿದ್ದು ಇವುಗಳನ್ನು ಬಿಟ್ಟು ಹೋಗಬೇಕಲ್ಲ ಎಂದು ವ್ಯಸನಪಡುತ್ತಿದ್ದವನು ಪುನಃ ಭೂಲೋಕಕ್ಕೇ ಬರುವನು.

ಪ್ರಾಪಂಚಿಕಜೀವವು ಮರಣಸಮಯದಲ್ಲಿ ಕೊನೆಯ ಸಂಕಟದ ಜೋರಿ-

ನಿಂದಲೂ ಆ ಸ್ಥೂಲಶರೀರವನ್ನು ಬಿಡಬೇಕಾಗಿರುವದರಿಂದಲೂ ಮೂರ್ಛೆ- ಯನ್ನು ಹೊಂದಿ ಸ್ವಲ್ಪ ಹೊತ್ತು ಸುಮ್ಮನಿರುವದು. ಮರಣವಾದ ಮೇಲೆ ಮೊದಲಿಗಿಂತ ಹೆಚ್ಚಾದ ದುರವಸ್ಥೆ ಬಂದಿದೆಯೆಂಬುದು ಅದಕ್ಕೆ ಗೊತ್ತಾಗು- ವದು. ಮೊದಲಿನಂತೆ ನೋಡಬೇಕು, ಕೇಳಬೇಕು, ಮೂಸಿನೋಡಬೇಕು, ಮುಟ್ಟಬೇಕು, ರುಚಿನೋಡಬೇಕು ಎಂಬ ಆಶೆ ಬಲವಾಗಿದ್ದರೂ ಆ ಕೆಲಸ- ಗಳನ್ನು ಮಾಡುವದಕ್ಕಾಗದೆ ಹೋಗುವದು. ಆಗ ತನ್ನ ಪ್ರಿಯವಾದ ಸ್ಥೂಲ- ಶರೀರವು ಹೋಯಿತಲ್ಲ ಎಂದು ಪಶ್ಚಾತ್ತಾಪ ಹುಟ್ಟುವದು. ಆದುದರಿಂದ ಆದು ಬಹುವ್ಯಸನದಿಂದ ತಳಮಳಿಸುವದು. ಹಸಿವೂ ತೃಷೆಯೂ— ತೀರಿಸಿ- ಕೊಳ್ಳುವದಕ್ಕೆ ಉಪಾಯವಿಲ್ಲದುದರಿಂದ— ಮತ್ತಷ್ಟು ಬಲವಾಗಿರುವವು. ಆಗ ಸೂಕ್ಷ್ಮಶರೀರದಲ್ಲಿ ಸ್ಥೂಲಶರೀರಕ್ಕಿಂತ ಹೆಚ್ಚು ಬಾಧೆಯಾಗಿ ಮತ್ತೊಂದು ಮಾಂಸಮಯಶರೀರದ ಬಯಕೆಯಾಗಿ ಸ್ಥೂಲೇಂದ್ರಿಯಾದಿಗಳು ಸಿಕ್ಕದುದ- ರಿಂದ ಹುಚ್ಚುಹಿಡಿದಂತೆ ತಲ್ಲಣಿಸುವದು. ಕೊನೆಗೆ ಅದರ ಉದ್ದೇಶವು ನೆರ- ವೇರುವದು. ಯಾವನೋ ಒಬ್ಬ ಪುರುಷನ ವೀರ್ಯದ ಮೂಲಕ ಒಬ್ಬ ಹೆಂಗಸಿನ ಹೊಟ್ಟೆಯನ್ನು ಪ್ರವೇಶಿಸುವದು. ಇದರಿಂದ ಗರ್ಭವಾಗುವದು. ಶರೀರವಿಲ್ಲದ ಜೀವವೊಂದು ಪ್ರವೇಶಿಸಿದ ಹೊರತು ಗರ್ಭವಾಗುವದಿಲ್ಲ. ತಂ- ದೆಯ ವೀರ್ಯವೂ ತಾಯಿಯ ಶೋಣಿತವೂ ಸೇರಿದರೆ ಸ್ಥೂಲಶರೀರವಾಗು- ವದೇ ಹೊರತು ಜೀವನಪ್ರದವಾಗುವ ಸೂಕ್ಷ್ಮಶರೀರವಾಗಲಾರದು. ಇಂಥ ಸೂಕ್ಷ್ಮಶರೀರದೊಡನೆ ಜೀವನು ಪ್ರವೇಶಿಸಿದಾಗ ಮಾತ್ರ ಗರ್ಭವಾಗುವದು. ಒಳಗೆ ಬಂದ ಜೀವಕ್ಕೆ ಬಂಧನದಲ್ಲಿ ಸಿಕ್ಕಿದಂತಾಗಿ ತಾನೇ ಮುಂದಕ್ಕೆ ಹೋ- ಗಲಾರೆನೆಂದು ಗೊತ್ತಾಗುವದು.

ಶರೀರವನ್ನು ಬಿಟ್ಟಕೂಡಲೆ ಇದೇ ರೀತಿಯಲ್ಲಿ ಎಲ್ಲ ಜೀವರೂ ಪುನರ್ಜ- ನ್ಮವನ್ನು ಪಡೆಯುತ್ತಾರೆಂಬ ನಿಯಮವಿಲ್ಲ. ಕೆಲವರು ಮರಣಾನಂತರದಲ್ಲಿ ಆತಿವಾಹಿಕ ಶರೀರದಿಂದ ಸ್ವರ್ಗಕ್ಕೆ ಅಥವಾ ನರಕಕ್ಕೆ ಹೋಗುವರು. ಸ್ವರ್ಗ- ಕ್ಕಾಗಲಿ ನರಕಕ್ಕಾಗಲಿ ಹೋಗುವದು ಆಯಾಜೀವರ ಕರ್ಮಾನುಸಾರವಾಗಿ- ರುತ್ತದೆ. ಪುಣ್ಯಕರ್ಮಕ್ಕೆ ಫಲವಾಗಿ ಸ್ವರ್ಗವು ಲಭಿಸುವದು. ಆದರೆ ಸ್ವರ್ಗಲೋಕದ ಸುಖಗಳು ಕೂಡ ಭೂಲೋಕದ ಸುಖಕ್ಕಿಂತಲೂ ಉತ್ತಮ-

ರೂಪದಲ್ಲಿರುವ ವಿಷಯಸುಖಗಳೆ. ಇವುಗಳು ಭೂಲೋಕದಲ್ಲಿ ಮಾಡಿದ ಪುಣ್ಯಕರ್ಮಕ್ಕೆ ಪ್ರತಿಯಾಗಿ ತಕ್ಕಷ್ಟು ಮಾತ್ರ ಇರುವವು. ಈ ಸ್ವರ್ಗವಾಸಿಗಳು ಸಂಕಲ್ಪಮಾತ್ರದಿಂದ ಈ ದಿವ್ಯಸುಖಗಳನ್ನು ಮನಸ್ಸಿನಲ್ಲಿ ಅನುಭವಿಸಿ ತಮ್ಮ ಪುಣ್ಯದ ಅವಧಿ ತೀರುವವರೆಗೆ ದೇವತೆಗಳಂತೆಯೇ ಸುಖದಿಂದಿರುವರು. ಈ ಅವಧಿಮೀರಿದ ಒಡನೆಯೆ "**क्षीणे पुण्ये मर्त्यलोकं विशंति**" ಎಂದು ಭಗವಂತನು ಅಂದಂತೆ ಭೂಲೋಕಕ್ಕೆ ಬಂದು ಪುನರ್ಜನ್ಮವನ್ನು ಪಡೆಯುವರು. ಅತಿಪಾಪಕರ್ಮಗಳಿಗೆ ನರಕದಲ್ಲಿ ಶಿಕ್ಷೆಯಾಗುವದು. ಆಮೇಲೆ ಶುದ್ಧರಾದ ಈ ಜೀವರು ಈ ಪ್ರಾಯಶ್ಚಿತ್ತಾನಂತರ ಅವರ ಪುಣ್ಯಕರ್ಮವೇನಾದರೂ ಇದ್ದರೆ ಸ್ವರ್ಗಕ್ಕೆ ಹೋಗುವರು; ಇಲ್ಲದಿದ್ದರೆ ಭೂಲೋಕದಲ್ಲಿ ಪುನರ್ಜನ್ಮವನ್ನು ಪಡೆಯುವರು. ವಿಷಯವಾಸನೆ ಇಲ್ಲದವರಿಗೆ ಸ್ವರ್ಗವೂ ಇಲ್ಲ; ನರಕವೂ ಇಲ್ಲ, ಅವರು ಧರ್ಮಕ್ಕಾಗಿಯೇ ಧರ್ಮವನ್ನು ಮಾಡುತ್ತಿರುವರು. ಇಂಥ ಮಹಾತ್ಮರ ವೀರ್ಯದಲ್ಲಿ ಪಾಪಿಯಾದ ಜೀವನ ಸೂಕ್ಷ್ಮಶರೀರವು ಸೇರಲಾರದು. ಇಂಥ ಜೀವರನ್ನು ಅವರ ವೀರ್ಯದ ಪರಿಶುದ್ಧತೆಯು ದೂರಕ್ಕೆ ಓಡಿಸಿ ಕರ್ಮದಿಂದಲೂ ಯೋಗ್ಯತೆಯಿಂದಲೂ ತನಗೆ ತಕ್ಕ ಜೀವನನ್ನೇ ಒಳಗೆ ಬಿಡುವದು.

"अथवा योगिनामेव कुले भवति धीमतां।
एतद्धि दुर्लभतरं लोके जन्म यदीदृशं॥

ಎಂದು ಭಗವಂತನು ಇಂಥವರ ಹೊಟ್ಟೆಯಲ್ಲಿ ಹುಟ್ಟುವದು ದುರ್ಲಭವೆಂದು ಅಂದಿದ್ದಾನೆ.

ಸಾಮಾನ್ಯವಾಗಿ ಜೀವವು ಗರ್ಭದಲ್ಲಿ ಬೆಳೆಯುತ್ತಿರುವಾಗ ಬುದ್ಧಿವೃತ್ತಿ ಪ್ರಸಾರಕ್ಕೆ ಅವಕಾಶವಿಲ್ಲದಿರುವದರಿಂದಲೂ ಒಂದುಕಡೆ ನಿರ್ಬಂಧವಾಗಿರಬೇಕಾಗಿ ಬಂದಿರುವದರಿಂದಲೂ ಬಹು ಸಂಕಟವಾಗುವದು. ಆರನೆಯ ತಿಂಗಳಾದ ಮೇಲೆ ಒಂದು ಆಶ್ಚರ್ಯಕರವಾದ ಅನುಭವವಾಗುವದು. ತನ್ನ ಪೂರ್ವಜನ್ಮವಿಚಾರವಾಗಿ ಇದ್ದ ಅಜ್ಞಾನವು ಇದ್ದಕ್ಕಿದ್ದ ಹಾಗೆ ಹೋಗಿ ಎಲ್ಲ

ಪೂರ್ವಜನ್ಮಗಳ ಸ್ಮರಣೆಯೂ ಏಕಕಾಲಕ್ಕೆ ಮನಸ್ಸಿನಲ್ಲಿ ಬರುವದು. ಸಾವಿರಾರು ಪೂರ್ವಜನ್ಮಗಳಲ್ಲಿ ನಡೆದ ಸಂಗತಿಗಳು ಆಗ ಕಣ್ಣ ಮುಂದೆ ಆದಂತೆ ತೋರಿ ಈ ಜನ್ಮದಲ್ಲೆಲ್ಲ ಪಟ್ಟ ನಾನಾವಿಧವಾದ ಕ್ಲೇಶಗಳಿಗೆಲ್ಲ ತಾನು ವಿಷಯಾಸಕ್ತನಾಗಿದ್ದುಕೊಂಡು ಧರ್ಮದ ಕಡೆಗೆ ಲಕ್ಷ್ಯವನ್ನು ಕೊಡದೆ ಪರಮಾತ್ಮನ ವಿಷಯಕ್ಕೂ ಮತ್ತು ತನ್ನ ಸಹಚರರಾದ ಇತರ ಮನುಷ್ಯರ ವಿಚಾರಕ್ಕೂ ತನ್ನ ಕರ್ತವ್ಯವೇನೆಂಬ ವಿಷಯದಲ್ಲಿ ಪರಾಙ್ಮುಖನಾಗಿದ್ದುದೇ ಕಾರಣವೆಂದು ಚೆನ್ನಾಗಿ ಮಂದಟ್ಟಾಗುವದು. ಈ ಅನುಭವದಿಂದ ಪಶ್ಚಾತ್ತಾಪ ಹುಟ್ಟಿ

"यन्मया परिजनस्यार्थं कृतं कर्म शुभाशुभं।
एकाकी तेन दह्येहं गतास्ते फलभागिनः॥"

ಎಂದು ಮುಂತಾಗಿ ಶೋಕಿಸುತ್ತ ಪರಮಾತ್ಮನನ್ನು ಸ್ತೋತ್ರಮಾಡಿ ಹಿಂದಣ ಪಾಪಗಳನ್ನೆಲ್ಲ ಕ್ಷಮಿಸಬೇಕೆಂದು ಪ್ರಾರ್ಥಿಸುವದೂ ಇನ್ನು ಮುಂದೆ ಭಕ್ತಿಯಿಂದ ನಡೆದುಕೊಳ್ಳುವೆನೆಂದು ಪ್ರತಿಜ್ಞೆಮಾಡುವದೂ ಈ ರೀತಿಯಲ್ಲಿ ಮೂರು ತಿಂಗಳ ವರೆಗೆ ನಡೆದ ಮೇಲೆ ಆ ಮಗು ಹುಟ್ಟುವದು. "**जातमात्रस्तु वैष्णवेन वायुना संस्पृष्टस्तदा न स्मरति जन्ममरणानि**" ಎಂದು ಮುಂತಾಗಿ ಗರ್ಭೋಪನಿಷತ್ತಿನಲ್ಲಿ ಹೇಳಿರುವಂತೆ ಭೂಸ್ಪರ್ಶವಾದ ಕೂಡಲೆ ಈ ಸ್ಮರಣೆಯೆಲ್ಲ ಅದೃಶ್ಯವಾಗಿ ಅಜ್ಞಾನಸಾಗರದಲ್ಲಿ ಮತ್ತೆ ಮುಳುಗುವದು. ಆದುದರಿಂದಲೇ ಗಾಬರಿಯಾಗಿ ಮಗು ಹುಟ್ಟಿದಾಗ ಅಳುತ್ತದೆ.

ಮನುಷ್ಯನು ತಾನು ಸಂಪಾದಿಸಿದ ಅಪಾರವಾದ ಧನರಾಶಿಯನ್ನು ಒಂದೇ ದಿನದಲ್ಲಿ ತಿಂದು ಅಥವಾ ತಾನು ಮಾಡಿದ ಋಣರಾಶಿಯನ್ನು ಒಂದೇ ದಿನದಲ್ಲಿ ತೀರಿಸಿ ಮುಗಿಸುವದು ಹೇಗೆ ಅಸಂಭವವೊ ಹಾಗೆಯೇ ತಾನು ಮಾಡಿದ ಧರ್ಮಾಧರ್ಮಗಳ ಸಂಚಯವನ್ನು ಒಂದೇ ಜನ್ಮದಲ್ಲಿ ಅನುಭವಿಸಿ ಮುಗಿಸುವದಕ್ಕಾಗುವದಿಲ್ಲ. ಆದುದರಿಂದ ಅದನ್ನೆಲ್ಲ ಉಪಭೋಗಮಾಡುವದಕ್ಕಾಗಿ ಜೀವನು ಜನ್ಮವನ್ನೆತ್ತಲೇಬೇಕಾಗಿರುವದು. ಮೋಕ್ಷವನ್ನು ಹೊಂದಿದವನೊಬ್ಬನು ಈ ಪುನರ್ಜನ್ಮವೆಂಬ ಸುಳಿಗೆ ಸಿಕ್ಕದೆ ಇರಬಹುದೇ ಹೊರತು

ಉಳಿದ ಯಾರಿಗೂ ಇದು ತಪ್ಪಿದ್ದಲ್ಲ. ಜೀವನು ಒಂದು ದೇಹವನ್ನು ಬಿಟ್ಟು ಹೊರಡುವಾಗ ತನ್ನ ಧರ್ಮಾಧರ್ಮಗಳ ವಾಸನೆಯೊಂದಿಗೆ ಹೊರಟು ಮತ್ತೊಂದು ದೇಹವನ್ನು ಪ್ರವೇಶಿಸಿ ಅದಕ್ಕನುಗುಣವಾದ ಸ್ಥಿತಿಗತಿಯನ್ನು ಹೊಂದುವನು. ಭೌತಿಕಶಾಸ್ತ್ರಜ್ಞರು ಈ ಪುನರ್ಜನ್ಮದ ಮಾತು ಬಂದಾಗ ಮನುಷ್ಯನ ಸ್ಥಿತಿಗತಿಗಳಿಗೆ ಅವನವನ ತಂದೆತಾಯಿಗಳೇ ಕಾರಣರಲ್ಲದೆ ಯಾವದೊಂದು ವಾಸನೆ ಮುಂತಾದುದೇನೂ ಇಲ್ಲವೆನ್ನುವರು. ಮನುಷ್ಯನ ಸಮಸ್ತಸ್ಥಿತಿಗತಿಗಳಿಗೂ ತಾಯಿತಂದೆಗಳೇ ಕಾರಣರಾಗಿದ್ದರೆ ಬುದ್ಧಿವಂತರಾದ ಮತ್ತು ಸದಾಚಾರಸಂಪನ್ನರಾದ ತಂದೆತಾಯಿಗಳಿಗೆ ದಡ್ಡರಾದ ಮತ್ತು ದುರಾಚಾರಿಗಳಾದ ಮಕ್ಕಳೂ, ದಡ್ಡರಾದ ಮತ್ತು ದುರಾಚಾರಿಗಳಾದ ತಂದೆತಾಯಿಗಳಿಗೆ ಬುದ್ಧಿವಂತರಾದ ಮತ್ತು ಸದಾಚಾರಸಂಪನ್ನರಾದ ಮಕ್ಕಳೂ ಆಗುವದಕ್ಕೂ ಒಬ್ಬ ತಂದೆತಾಯಿಯ ಮಕ್ಕಳಲ್ಲಿಯೇ ಒಬ್ಬನು ಲಕ್ಷಾಧಿಪತಿಯೂ ಒಬ್ಬನು ಭಿಕ್ಷಾಧಿಪತಿಯೂ ಒಬ್ಬನು ಬುದ್ಧಿವಂತನೂ ಒಬ್ಬನು ಮೂರ್ಖನೂ ಒಬ್ಬನು ಸದಾಚಾರಸಂಪನ್ನನೂ ಒಬ್ಬನು ದುರಾಚಾರನಿರತನೂ ಒಬ್ಬನು ವಿದ್ಯಾವಂತನೂ ಒಬ್ಬನು ವ್ಯಾಪಾರಿಯೂ ಒಬ್ಬನು ಕೈಗಾರಿಕೆಯವನೂ ಆಗುವದಕ್ಕೂ ಸಮಾಧಾನವೇನು? ತಾಯಿತಂದೆಗಳು ಮನುಷ್ಯನ ಶರೀರಸ್ಥಿತಿಗತಿಗಳಿಗೆ ಕಾರಣರೇ ಹೊರತು ಮನಸ್ಸಿನ ಸ್ಥಿತಿಗತಿಗಳಿಗೆ ಅವರನ್ನು ಹೊಣೆಗಾರರನ್ನಾಗಿ ಮಾಡುವದಕ್ಕಾಗುವದಿಲ್ಲ. ಶರೀರವು ತಂದೆತಾಯಿಗಳನ್ನು ಹೋಲಬಹುದು; ಶರೀರಧರ್ಮವು ತಂದೆತಾಯಿಗಳನ್ನು ಹೋಲಬಹುದು; ಮನಸ್ಸು ತಂದೆತಾಯಿಗಳನ್ನು ಹೋಲುವದೆಂದು ಹೇಳಲಾಗದು. ಇನ್ನು ಭಿನ್ನಭಿನ್ನವಾದ ಮಾನಸಿಕಸ್ಥಿತಿಗತಿಗಳಿಗೆ ಭಗವದಿಚ್ಛೆಯೇ ಕಾರಣವೆಂದು ಹೇಳಿ ಜನ್ಮಾಂತರದ ವಾಸನೆಯೆಂಬಭಿಪ್ರಾಯವನ್ನು ಯಾರಾದರೂ ನಿರಸನ ಮಾಡಬಹುದು. ಸರ್ವತ್ರ ಸಮದೃಷ್ಟಿಯುಳ್ಳವನಾಗಿ ನಿರ್ಲಿಪ್ತನಾಗಿ ಕೇವಲ ವ್ಯವಸ್ಥಾಮಾತ್ರವನ್ನು ಕೈಕೊಂಡಿರುವ ಪರಮಾತ್ಮನು ಒಬ್ಬರ ಕಣ್ಣಿಗೆ ಸುಣ್ಣ ಒಬ್ಬರ ಕಣ್ಣಿಗೆ ಬೆಣ್ಣೆ ಇಟ್ಟಂತೆ ಏಕೆ ಪಕ್ಷಪಾತವನ್ನು ಮಾಡುವನು? ಆದುದರಿಂದ ಪ್ರತಿಯೊಬ್ಬನ ಮಾನಸಿಕಸ್ಥಿತಿಗತಿಗೂ ಅವನವನ ಜನ್ಮಾಂತರವಾಸನೆಯನ್ನು ಬಿಟ್ಟರೆ ಬೇರೆ ಯಾವ ಕಾರಣವೂ ಹೊಂದುವದಿಲ್ಲ.

ಪುನರ್ಜನ್ಮವುಂಟೆಂಬುದನ್ನು ತೋರಿಸುವದಕ್ಕೆ ಗ್ರಂಥಗಳಲ್ಲಿ ಬೇಕಾದಷ್ಟು ಆಧಾರವನ್ನು ತೋರಿಸಬಹುದು. ಆದರೆ ಇದರ ಪೂರ್ವಸ್ಮರಣೆ ಇಲ್ಲವೆಂಬ ಕಾರಣದಿಂದ ಭೌತಿಕಶಾಸ್ತ್ರಜ್ಞರು ಈ ಅಭಿಪ್ರಾಯವನ್ನು ಮೂಲೆಗೊತ್ತುವರು. ಪೂರ್ವಜನ್ಮವಿಚಾರವು ನಮ್ಮ ಯಾರ ನೆನಪಿನಲ್ಲಿಯೂ ಇಲ್ಲದೆ ಇರಬಹುದು. ಒಂದುಕ್ಷಣದ ಹಿಂದೆ ಆಡಿದ ಮಾತನ್ನು ಅಥವಾ ಮಾಡಿದ ಕೆಲಸವನ್ನು ಇನ್ನೊಂದುಕ್ಷಣದಲ್ಲಿ ಮರೆಯುತ್ತಿರುವ ನಮಗೆ ಜನ್ಮಾಂತರದ ನೆನಪು ಬರುವದು ಹೇಗೆ? ಜನ್ಮಾಂತರದ ವಾಸನೆಯೆಂಬುದಿಲ್ಲದಿದ್ದರೆ ಶ್ರೀಶಂಕರಾಚಾರ್ಯರು ಮೊದಲಾದವರು ಕೇವಲ ಬಾಲ್ಯದಲ್ಲಿಯೇ ಶಾಸ್ತ್ರಜಲಧಿಯನ್ನು ಹೇಗೆ ಆಪೋಶನ ತೆಗೆದುಕೊಂಡರು? ಲಗ್ನಕಾಲದಲ್ಲಿ "**सुमुहूर्ते सावधानम्**" ಎಂಬ ಬ್ರಾಹ್ಮಣರ ಘೋಷವು ಎಲ್ಲರ ಕಿವಿಯನ್ನೂ ಹಾದುಹೋಗುತ್ತಿರುವದಾದರೂ ಅದನ್ನು ಕೇಳಿದ ಕೂಡಲೆ ಸರ್ವಾಂಗಸುಂದರಿಯಾದ ಕನ್ಯೆಯನ್ನು ಬಿಟ್ಟು "**जय सीताराम**" ಎಂದು ಹೊರಕ್ಕೆ ಹೊರಡುವ ವೈರಾಗ್ಯವು ರಾಮದಾಸರಿಗೆ ಹೇಗೆ ಬಂತು? ಪುನರ್ಜನ್ಮವುಂಟೆಂಬುದು ಜನಸಾಮಾನ್ಯದ ಯಾರ ಸ್ಮರಣೆಯಲ್ಲಿಯೂ ಇಲ್ಲದಿರುವಂತೆ ಭೌತಿಕಶಾಸ್ತ್ರಜ್ಞರ ಸ್ಮರಣೆಯಲ್ಲಿಯೂ ಇರಲಾರದು. ಆದ ಮಾತ್ರಕ್ಕೆ ಪುನರ್ಜನ್ಮವಿಷಯಕ್ಕೆ ಪೂರ್ವಸ್ಮರಣೆಯ ಪ್ರಮಾಣವು ಸಂಪೂರ್ಣಶೂನ್ಯವೆಂದು ಹೇಳುವ ಹಾಗಿಲ್ಲ. ವಿವಿಧವಾದ ಯೋಗಸಾಧನೆಗಳನ್ನು ಮಾಡಿ ಸಿದ್ಧರಾಗಿರುವವರು ಪುನರ್ಜನ್ಮವುಂಟೆಂದು ಸ್ವಾನುಭವದಿಂದ ಹೇಳುತ್ತಾರೆ. ತಮಗೆ ಯಾವ ಸ್ವಾರ್ಥವೂ ಇಲ್ಲದೆ ಜನರ ಅಭ್ಯುದಯವನ್ನು ಬಯಸುತ್ತಿರುವ ಆ ಸಿದ್ಧಪುರುಷರ ಹಿತೋಪದೇಶವನ್ನು ಅಲ್ಲಗಳೆಯುವದು ಅನುಚಿತವು. ನಾವು ಆಪ್ತವಾಕ್ಯದ ಮೇಲೆ ಭರವಸವನ್ನಿಡಬೇಕಾದ ಎಷ್ಟೋ ಸಂದರ್ಭಗಳು ಬರುವವು. ಪುನರ್ಜನ್ಮದಲ್ಲಿ ನಂಬಿಕೆಯನ್ನಿಡುವದು ಸನ್ಮಾರ್ಗಪ್ರವರ್ತನೆಗೆ ಉತ್ತಮ ಸಹಕಾರಿಯಾಗುವದು. ಪೂರ್ವಪುಣ್ಯದಿಂದ ನಾನು ಈಗ ಸುಖಿಯಾಗಿದ್ದೇನೆಂದು ತಿಳಿಯುವ ಮನುಷ್ಯನಿಗೆ ತಾನು ಮತ್ತಷ್ಟು ಸುಖಿಯಾಗಬೇಕೆಂದು ಹೆಚ್ಚು ಪುಣ್ಯವನ್ನು ಮಾಡುವದರಲ್ಲಿಯೇ ಪ್ರವೃತ್ತಿಯಾಗುತ್ತದೆ. ತಾನು ಈಗ ಅನುಭವಿಸುತ್ತಿರುವ ದುಃಖಕ್ಕೆ ತನ್ನ ಪೂರ್ವಜನ್ಮಪಾಪವೇ ಕಾರಣವೆಂದು ಭಾವಿಸುವವನಿಗೆ ಮುಂದಾದರೂ ಅಂಥ

ದುಃಖವನ್ನು ಬರಗೊಡಬಾರದೆಂದು ದುಷ್ಕರ್ಮದಲ್ಲಿ ನಿವೃತ್ತಿಯುಂಟಾಗುತ್ತದೆ. ಪುನರ್ಜನ್ಮವೆಂಬುದೊಂದಿರುವದರಿಂದಲೇ ನಾವು ಈ ಜನ್ಮದಲ್ಲಿಯೇ ನಮ್ಮ ಪರಮಪುರುಷಾರ್ಥವಾದ ನಿಜಾನಂದದ ಪ್ರಾಪ್ತಿಗೆ ಬೇಕಾಗುವಷ್ಟೆಲ್ಲ ಸಾಧನಗಳನ್ನು ಮಾಡುವದು ಒಂದುವೇಳೆ ಅಶಕ್ಯವೆಂದು ಕಂಡರೂ ನಿರಾಶರಾಗದೆ

"अनेकजन्मसंसिद्धस्ततो याति परां गतिम्"

ಎಂಬ ಭಗವದುಕ್ತಿಯಂತೆ ಈಗ ನಾವು ಮಾಡುವದು ಮುಂದಣ ಜನ್ಮಕ್ಕೆ ಉಪಯೋಗಬೀಳುವದೆಂಬ ನಿರೀಕ್ಷಣೆಯಿಂದ ಅದಷ್ಟು ಸಾಧನಗಳನ್ನು ಮಾಡುವದಕ್ಕೆ ನಮಗೆ ಆಸ್ಪದವಾಗುವದು. ಪುನರ್ಜನ್ಮದ ಸಿದ್ಧಾಂತವನ್ನು ನಂಬುವದರಿಂದ ಮನುಷ್ಯಸ್ವಭಾವದ ಮೇಲೆ ಇನ್ನೂ ಒಂದು ಬಗೆಯಿಂದ ಸುಪರಿಣಾಮವಾಗುವದು. ನಮ್ಮ ಕೈಯಿಂದ ಈ ಜನ್ಮದಲ್ಲಿ ಅಂಥ ಪಾಪಗಳೇನೂ ಆಗದಿದ್ದರೂ ಕೆಲವು ಕಷ್ಟಗಳನ್ನು ನಾವು ತಪ್ಪದೆ ಭೋಗಿಸುವ ಪ್ರಸಂಗ ಬಂದಾಗ "ನಾವು ಪೂರ್ವಜನ್ಮದಲ್ಲಿ ಎಂದಾದರೂ ಪಾಪವನ್ನು ಮಾಡಿರಬಹುದು. ಇದು ಅದರ ಫಲವಾಗಿರಬಹುದು" ಎಂಬ ಗ್ರಹಿಕೆಯು ಬಂದ ಕಷ್ಟವನ್ನು ಶಾಂತತೆಯಿಂದ ಸಹಿಸುವದಕ್ಕೆ ಎಷ್ಟೋ ಸಾಹಾಯ್ಯಕಾರಿಯಾಗುವದು. ಜನ್ಮಾಂತರದ ಸಿದ್ಧಾಂತವು ನಮಗೆ ಬಂದ ಎಷ್ಟೋ ದುಃಖಗಳನ್ನು ಶಾಂತತನದಿಂದ ಭೋಗಿಸಲಿಕ್ಕೆ ಸಹಾಯವಾಗಿ ಮುಂದಿನ ಸ್ಥಿತಿಯನ್ನು ಸುಧಾರಿಸುವಂತೆ ಪ್ರಯತ್ನಮಾಡುವದಕ್ಕೆ ಪ್ರೋತ್ಸಾಹಕವಾಗುವದೆಂಬುದು ಜನ್ಮಾಂತರಗಳಿರುವವೊ ಇಲ್ಲವೊ ಎಂಬ ವಿಷಯದಲ್ಲಿ ಎಷ್ಟೋ ಸಂಶಯವುಳ್ಳವರು ಕೂಡ ನಿರ್ವಿವಾದವಾಗಿ ಒಪ್ಪತಕ್ಕ ಮಾತೇ ಆಗಿದೆ. ನಮ್ಮ ಶ್ರುತಿ ಸ್ಮೃತಿ ಪುರಾಣೇತಿಹಾಸ ಮೊದಲಾದ ಗ್ರಂಥಗಳಲ್ಲಂತು ಜನ್ಮಾಂತರದ ವಿಷಯಕ್ಕೆ ಎಷ್ಟೋ ಪ್ರಮಾಣಗಳುಂಟು. ನಮಗೆ ಈಗ ಪ್ರಸ್ತುತವಾದ ಭಗವದ್ಗೀತೆಯಂತು

"वासांसि जीर्णानि यथा विहाय
नवानि गृह्णाति नरोऽपराणि॥

तथा शरीराणि विहाय जीर्णा-
न्यन्यानि संयाति नवानि देही॥"

ಎಂಬ ಮುಂತಾದ ಉಕ್ತಿಗಳ ಮೂಲಕ ಈ ವಿಷಯದಲ್ಲಿ ಪ್ರಬಲವಾದ ಸಾಕ್ಷ್ಯವನ್ನು ವಹಿಸುತ್ತದೆ.

ಇರಲಿ. ಜನ್ಮಾಂತರದ ಮತ್ತು ದೇವರ ನಂಬಿಕೆಯು ಧರ್ಮಕ್ಕೆ ಬಹಳ ಅನುಕೂಲವಾಗುವದು. ಸರ್ವಸಾಕ್ಷಿಯಾದ ದೇವಾಧಿದೇವನು ನಾವು ಮಾಡುವ ಧರ್ಮ ಅಥವಾ ಅಧರ್ಮಗಳಿಗೆ ಅನುಸರಿಸಿ ಮುಂದಿನ ಜನ್ಮದಲ್ಲಿ ನಮ್ಮ ಸುಖದುಃಖಗಳ ವ್ಯವಸ್ಥೆಯನ್ನು ಮಾಡುವನು ಎಂಬ ಭಾವನೆಯು ನಾವು ಧರ್ಮವನ್ನು ಭಜಿಸಲಿಕ್ಕೂ ಮತ್ತು ಅಧರ್ಮವನ್ನು ತ್ಯಜಿಸಲಿಕ್ಕೂ ಎಷ್ಟು ಉಪಯುಕ್ತವಾಗುವದು? ಧರ್ಮದಿಂದ ಮುಂದಿನ ಜನ್ಮದಲ್ಲಿ ನಮಗೆ ಎಂಥ ಸುಖವಾಗುವದೆಂಬುದಂತು ಈಗ ನಮಗೆ ಕಾಣದ ವಿಷಯವು. ಅದು ಇರಲಿ. ಇದೇ ಜನ್ಮದಲ್ಲಿಯೇ ನಮಗೆ ಎಷ್ಟು ಸುಖವಾಗುವದೆಂಬುದನ್ನು ಲಕ್ಷ್ಯಕೊಟ್ಟು ನೋಡಿದರೂ ನಮಗೆ ಧರ್ಮದ ಮಹತ್ತ್ವವು ಕಂಡುಬರುವದು. ಧರ್ಮಶಾಸ್ತ್ರದಲ್ಲಿ ಯುಕ್ತವೆಂದು ಹೇಳಿದ ಕರ್ಮವನ್ನು ಮಾಡುವದರಿಂದ ಮತ್ತು ಅಯುಕ್ತವೆಂದು ಹೇಳಿದ ಕರ್ಮವನ್ನು ಬಿಡುವದರಿಂದ ನಮ್ಮ ಶಾರೀರಿಕ ಮತ್ತು ಮಾನಸಿಕ ಸ್ಥಿತಿಯು ನೆಟ್ಟಗಿದ್ದು ನಮಗೆ ಎಷ್ಟೋ ಸುಖವಾಗುವದೆಂಬುದು ಪ್ರತ್ಯಕ್ಷಪ್ರಮಾಣದಿಂದ ತಿಳಿದು ಬರುವ ಮಾತೇ ಇದೆ. ಯಾವ ಕಾರ್ಯವನ್ನು ಮಾಡುವದರಿಂದ ಮೊದಲು ಸ್ವಲ್ಪಕಾಲ ಸುಖವೆನಿಸಿದರೂ ಮುಂದೆ ಪಶ್ಚಾತ್ತಾಪವಾಗುವದೊ ಅಂಥದ್ದು ಶಾಸ್ತ್ರದಲ್ಲಿ ನಿಷಿದ್ಧವೆಂದು ನಿರ್ಣಯಿಸಲ್ಪಟ್ಟಿದೆ. ಅದನ್ನು ಬಿಟ್ಟು ವಿಹಿತವೆಂದು ಎಣಿಸಲ್ಪಟ್ಟ ಕರ್ಮವನ್ನು ಮಾಡಬೇಕು. ನಮ್ಮ ಬುದ್ಧಿಯಿಂದಲೇ ನಾವು ಯುಕ್ತವಾವುದು ಮತ್ತು ಅಯುಕ್ತವಾವುದು ಎಂಬುದನ್ನು ನಿಶ್ಚಯಿಸುವದು ಯೋಗ್ಯವಲ್ಲ. ಮೊದಲು ನಮಗೆ ಹಿತಕರವೆಂದು ತೋರಿದ ಎಷ್ಟೋ ಸಂಗತಿಗಳು ಮುಂದೆ ಅಹಿತಕರವಾದವುಗಳೆಂದೂ ಮತ್ತು ಮೊದಲು ಅಹಿತಕರವಾದವುಗಳೆಂದು ತೋರಿದ ಎಷ್ಟೋ ಸಂಗತಿಗಳು ಮುಂದೆ ಹಿತಕರವಾದವು-

ಗಳಿಂದೂ ತಮ್ಮತಮ್ಮ ಅನುಭವದಿಂದ ಎಲ್ಲರಿಗೂ ತಿಳಿದಿರಬಹುದು. ಬಾಲ್ಯದಲ್ಲಿ ತಾಯಿತಂದೆಗಳ ನಿರ್ಬಂಧದಿಂದ ಪಾಠಶಾಲೆಗೆ ಹೋಗುವಾಗ ಮಕ್ಕಳಿಗೆ ಅದು ಅಹಿತಕರವಾಗಿರುತ್ತದೆ; ಆದರೆ ಮುಂದೆ ಅದರ ಪ್ರಯೋಜನವನ್ನು ಅನುಭವಿಸುವಾಗ ಅದೇ ಹಿತಕರವಾಗಿ ತೋರುತ್ತದೆ. ನಾವು ಸಣ್ಣವರಾಗಿರುವಾಗ ಓದುಬರಹಕ್ಕೆ ಮನಸ್ಸುಹಾಕದೆ ಸ್ವೇಚ್ಛೆಯಾಗಿ ಆಡ್ಡಾಡುವದು ಹಿತಕರವೆಂದು ಕಂಡರೂ ನಾವು ದೊಡ್ಡವರಾದ ಮೇಲೆ ನಮ್ಮ ವಿದ್ಯೆಯ ಕೊರತೆಯು ತಿಳಿಯುತ್ತ ಬಂದಹಾಗೆಲ್ಲ ಅದೇ ನಮಗೆ ಅಹಿತಕರವಾಗಿ ವ್ಯಕ್ತವಾಗುತ್ತದೆ. ಆದಕಾರಣ ಏನು ಮಾಡಬೇಕು? ಏನು ಮಾಡಬಾರದು? ಎಂಬುದನ್ನು ನಾವು ನಮ್ಮ ಬುದ್ಧಿಯಿಂದ ನಿಶ್ಚಯಿಸದೆ ಅನುಭವಶಾಲಿಗಳೂ ನಮ್ಮ ಹಿತಚಿಂತಕರೂ ಆದ ನಮ್ಮ ಹಿರಿಯರ ಆಜ್ಞೆಯಿಂದ ನಿರ್ಣಯಿಸಬೇಕು. ಆದುದರಿಂದಲೇ ಭಗವಂತನು

"तस्माच्छास्त्रं प्रमाणं ते कार्याकार्यव्यवस्थितौ।
ज्ञात्वा शास्त्रविधानोक्तं कर्म कर्तुमिहार्हसि॥"

ಎಂಬ ಶ್ಲೋಕದಿಂದ ಆಪ್ತವಾಕ್ಯರೂಪವಾದ ಶ್ರುತಿ ಸ್ಮೃತಿ ಎಂಬ ಶಾಸ್ತ್ರವು ಕಾರ್ಯದ ಮತ್ತು ಅಕಾರ್ಯದ ವ್ಯವಸ್ಥೆಯಲ್ಲಿ ಪ್ರಮಾಣವೆಂದು ಸ್ಪಷ್ಟವಾಗಿ ಹೇಳಿದ್ದಾನೆ. ಈ ವಿಷಯದಲ್ಲಿ ಶಾಸ್ತ್ರವೆಂಬುದು ಶ್ರುತಿರೂಪವಾದುದೆಂಬುದನ್ನು ಶ್ರೀಶಂಕರಾಚಾರ್ಯರು ಆ ಶ್ಲೋಕದ ಮುಂದಿನ "**यः शास्त्रविधिमुत्सृज्य**" ಎಂಬ ಶ್ಲೋಕದ ಭಾಷ್ಯದಲ್ಲಿ "**शास्त्रविधानं श्रुतिस्मृति चोदनां**" ಎಂದು ಬರೆದು ಸ್ಪಷ್ಟೀಕರಿಸಿದ್ದಾರೆ. ನಮ್ಮ—ಆರ್ಯರ—ಧರ್ಮವು ವೇದಮೂಲಕವಾಗಿರುವದರಿಂದ ಈ ವೇದವೂ ಮತ್ತು ಇದರಿಂದಾದ ಸ್ಮೃತ್ಯಾದಿಗಳೂ ನಮಗೆ ಪ್ರಮಾಣವಾಗಿರುವದು ಸ್ವಾಭಾವಿಕವೇ ಸರಿ. ಆದುದರಿಂದಲೇ ಜೈಮಿನಿಸೂತ್ರದಲ್ಲಿ "**चोदनालक्षणोऽर्थो धर्मः**" ಎಂದು ಹೇಳಿದೆ. **लिङ्, लोट्, तव्य** ಪ್ರತ್ಯಯಾದಿಗಳಿಂದ ವೇದವು ಬೋಧಿಸುವ ಅರ್ಥವೇ ಧರ್ಮವು. ಯಾಜ್ಞವಲ್ಕ್ಯಸ್ಮೃತಿಯಲ್ಲಿ

"श्रुतिः स्मृतिः सदाचारः स्वस्य च प्रियमात्मनः।
सम्यक्संकल्पजः कामो धर्ममूलमिदं स्मृतम्॥"

ಎಂದು ಹೇಳಲ್ಪಟ್ಟಿದೆ. ಶ್ರುತಿಯೂ, ಸ್ಮೃತಿಯೂ, ಸದಾಚಾರವೆಂದರೆ

"साधवः क्षीणदोषाः स्युः सच्छब्दः साधुवाचकः।
तेषामाचरणम् यत्तु सदाचारः स उच्यते॥"

ಎಂದು ಶ್ರೀವಿಷ್ಣುಪುರಾಣದಲ್ಲಿ ಹೇಳಿದಂತೆ ನಿರ್ದೋಷರಾದ ಸಾಧುಗಳ ಆಚ-ರಣವೂ, ಶಾಸ್ತ್ರಗಳಲ್ಲಿ ಅನೇಕ ಪಕ್ಷಗಳಿದ್ದ ಪ್ರಸಂಗದಲ್ಲಿ ತನಗೆ ಪ್ರಿಯವಾದ ಪಕ್ಷವೂ ಮತ್ತು ದೃಢವಾದ ಸಂಕಲ್ಪದಿಂದ ಮಾಡಿದ ಕಾಮವು ಎಂದರೆ

"धर्माविरुद्धो भूतेषु कामोस्मि भरतर्षभ"

ಎಂದು ಭಗವಂತನು ಗೀತೆಯಲ್ಲಿ ಹೇಳಿದಂತೆ ಮತ್ತು ಶ್ರೀಶಂಕರಾಚಾರ್ಯರು ಆ ಶ್ಲೋಕದ ಭಾಷ್ಯದಲ್ಲಿ "**कामस्तृष्णा**" ಎಂದು ಕಾಮಶಬ್ದದ ಅರ್ಥವನ್ನು ವ್ಯಕ್ತಪಡಿಸಿದಂತೆ ಧರ್ಮಕ್ಕೆ ವಿರುದ್ಧವಾಗದ ಇಚ್ಛೆಯೂ ಇವೈದೂ ಧರ್ಮಕ್ಕೆ ಕಾರಣವಾಗಿವೆ.

ಈ ಧರ್ಮವು ಪ್ರವೃತ್ತಿರೂಪವೆಂದೂ ನಿವೃತ್ತಿರೂಪವೆಂದೂ ಎರಡು ವಿಧವಾಗಿದೆ. ಈ ವಿಷಯವನ್ನು ಶ್ರೀಶಂಕರಾಚಾರ್ಯರು ಗೀತಾಭಾಷ್ಯದಲ್ಲಿ "**स भगवान् सृष्ट्वेदं जगत्तस्य च स्थितिं चिकीर्षुः मरीच्यादीनग्रे सृष्ट्वा प्रजापतीन् प्रवृत्तिलक्षणं धर्मं ग्राहयामास वेदोक्तं। ततोन्यांश्च सनकसनंदनादीनुत्पाद्य निवृत्तिलक्षणं धर्मं ज्ञानवैराग्यलक्षणं ग्राहयामास।**" ಎಂದು ಮುಂತಾಗಿ ವಿಶದೀಕರಿಸಿದ್ದಾರೆ. ಭಗವಂತನು ಮರೀಚ್ಯಾದಿಪ್ರಜಾಪತಿಗಳನ್ನು ಹುಟ್ಟಿಸಿ ಅವರಿಂದ ಪ್ರವೃತ್ತಿರೂಪವಾದ ಧರ್ಮವನ್ನೂ ಮತ್ತು ಸನಕಸನಂದ-ನಾದಿಗಳನ್ನು ಹುಟ್ಟಿಸಿ ಅವರಿಂದ ನಿವೃತ್ತಿರೂಪವಾದ ಧರ್ಮವನ್ನೂ ಗ್ರಹಣ-ಮಾಡಿಸಿದನು. "**स पूर्वेषामपि गुरुः कालेनानवच्छेदात्**" ಎಂದು ಯೋಗ-

ಸೂತ್ರದಲ್ಲಿ ಹೇಳಿದಂತೆ ಅನಾದಿಸಿದ್ಧನಾದ ಆ ಪರಮಾತ್ಮನ ಹೊರತು ಪೂರ್ವಿಕರಿಗಾದರೂ ಗುರುವಿನ್ನಾರು? ಭಗವಂತನು ತೋರಿಸಿದಂತೆ ಪ್ರವೃತ್ತಿಮಾರ್ಗವೂ ಮತ್ತು ನಿವೃತ್ತಿಮಾರ್ಗವೂ ಎರಡೂ ಸುಖದ ಸಾಧನಗಳಾಗಿರಲಿಕ್ಕೇ ಬೇಕು. ಆದುದರಿಂದಲೇ ಗೀತೆಯಲ್ಲಿ ಭಗವಂತನು

"सन्यासः कर्मयोगश्च निःश्रेयसकरावुभौ"

ಎಂಬದಾಗಿ ಹೇಳಿದ್ದಾನೆ. ಕರ್ಮದ ಅನುಷ್ಠಾನವು ಪ್ರವೃತ್ತಿಯು ಮತ್ತು ಕರ್ಮದ ಸನ್ಯಾಸವು ನಿವೃತ್ತಿಯು. ಅನುಷ್ಠಾನಕ್ಕೇ ಆಗಲಿ ಸನ್ಯಾಸಕ್ಕೇ ಆಗಲಿ

"यः शास्त्रविधिमुत्सृज्य वर्तते कामकारतः।
न स सिद्धिमवाप्नोति न सुखं न परांगतिं॥"

ಎಂದು ಮುಂತಾಗಿ ಭಗವಂತನು ಗೀತೆಯಲ್ಲಿ ಹೇಳಿದಂತೆ ಶಾಸ್ತ್ರವನ್ನೇ ಪ್ರಮಾಣೀಕರಿಸಬೇಕು. ಅನುಷ್ಠಾನವನ್ನು ಮಾಡುವದಕ್ಕೆ ಶಾಸ್ತ್ರಾಧಾರವನ್ನು ನೋಡುವಂತೆ ಸನ್ಯಾಸಕ್ಕೂ ನಾವು ನೋಡಬೇಕು. ನಾನು ಸುಮಾರು ೧೪–೧೫ ವರ್ಷದವನಾಗಿದ್ದಾಗ ಕೆಲಕೆಲವು ಗ್ರಂಥಗಳಲ್ಲಿ ಸನ್ಯಾಸಪ್ರಶಂಸೆಯನ್ನು ಓದಿದುದರಿಂದಲೂ ಮತ್ತು ಅದಕ್ಕೆ ಅನುಗುಣವಾದ ಅರ್ಥವನ್ನೇ ಬೇರೆ ಜನರ ಬಾಯಿಂದ ಕೇಳಿದುದರಿಂದಲೂ ನನಗೆ ಸನ್ಯಾಸದ ಮೇಲೆ ಕುತೂಹಲವು ಹುಟ್ಟಿ ನಾನು ಒಬ್ಬ ಪರಮಹಂಸರ ಬಳಿಗೆ ಹೋದೆನು. ಅವರು ಸನ್ಯಾಸಧರ್ಮವನ್ನು ಬಹುಚೆನ್ನಾಗಿ ನಡೆಸುತ್ತ ಬಹಳ ದೊಡ್ಡ ಮಹಾತ್ಮರೆಂದು ಹೆಸರುಗೊಂಡಿದ್ದರು. ನಾನು ಹೋಗಿ ಅಡ್ಡಬಿದ್ದು ನನ್ನ ಅಂತರಂಗವನ್ನು ಅವರ ಮುಂದೆ ಬಿಚ್ಚಿದೆನು. ಅದನ್ನೆಲ್ಲ ಅವರು ಸವಿಸ್ತಾರವಾಗಿ ಕೇಳಿ ನನ್ನ ಸ್ಥಿತಿಗತಿಯನ್ನೆಲ್ಲ ವಿಚಾರಿಸಿದರು. ನನಗೆ ತಂದೆ, ತಾಯಿ, ಹೆಂಡತಿ ಮೊದಲಾದವರೆಲ್ಲ ಇದ್ದರೂ ನಾನು ಸನ್ಯಾಸವನ್ನು ಮಾಡಿ ಕೃತಾರ್ಥನಾಗಲು ಬಂದಿರುವೆನೆಂದು ಹೇಳಿದ ನನ್ನ ಮಾತನ್ನು ಕೇಳಿ ಆ ಯತಿಗಳು "ಸನ್ಯಾಸಕ್ಕೆ ಇಷ್ಟು ಕುತೂಹಲಪಡಬೇಡ. ನಾನು ನಿನಗೆ ಸನ್ಯಾಸಧರ್ಮ-

ವನ್ನೆಲ್ಲ ತಿಳಿಸಿಕೊಡುತ್ತೇನೆ. ಜುಟ್ಟುಜನಿವಾರಗಳನ್ನು ತೆಗೆದ ಮಾತ್ರದಿಂದಲೇ ಸನ್ಯಾಸವಾಗುವದೆಂದು ತಿಳಿಯಬೇಡ. ಈಗ ನಾನು ಸನ್ಯಾಸಿಯಾಗಿಯೇ ಇದ್ದೇನೆಂದು ಮನಸ್ಸಿನಲ್ಲಿ ತಿಳಿ. ಮನಸ್ಸಿಗೆ ವಿಕಾರವನ್ನುಂಟುಮಾಡುವ ವಿಷಯಗಳು ಸಮೀಪದಲ್ಲಿದ್ದರೂ ಮನಸ್ಸು ವಿಕಾರವನ್ನು ಹೊಂದಬಾರದು. ಹೀಗಿರುವದಕ್ಕೆ ನಿನಗೆ ಸಾಧ್ಯವಾಗುವದೊ ಹೇಗೆ? ಗೃಹಸ್ಥಾಶ್ರಮದಲ್ಲಿದ್ದು-ಕೊಂಡೇ ಮೊದಲು ಪರೀಕ್ಷೆಮಾಡಿ ನೋಡಿಕೊ ಮತ್ತು ಅಭ್ಯಾಸಮಾಡು. ಗೃಹಸ್ಥಾಶ್ರಮವು ಅಭ್ಯಾಸಕ್ಕೆ ಗರಡಿಮನೆ ಇದ್ದಂತೆ ಇದೆ. ಯಾವ ವಿಷಯ-ಕ್ಕೂ ಮನಸ್ಸು ಪರವಶವಾಗದಂತೆ ಸ್ಥಿತಪ್ರಜ್ಞನಾಗಿರುವದು ಸಹಸಾಶಕ್ಯವಲ್ಲ.

"यततोह्यपि कौंतेय पुरुषस्य विपश्चितः।
इंद्रियाणि प्रमाथीनि हरंति प्रसभं मनः॥"

ಎಂದು ಗೀತೆಯಲ್ಲಿ ಭಗವಂತನು ಅಂದಂತೆ ಪ್ರಯತ್ನಮಾಡುತ್ತಿರುವಂಥ ವಿಚಾರಶಾಲಿಯ ಮನಸ್ಸನ್ನಾದರೂ ಬಲಾಢ್ಯವಾದ ಇಂದ್ರಿಯಗಳು ಬಲಾತ್ಕಾ-ರದಿಂದ ಆಕರ್ಷಿಸುವವು. ಹೀಗಾದ ಸಮಯದಲ್ಲಿ ಧರ್ಮಕ್ಕೆ ವಿರುದ್ಧವಾ-ಗದೆ ವಿಷಯೋಪಭೋಗವನ್ನು ಹೊಂದುವದಕ್ಕೆ ಗೃಹಸ್ಥಾಶ್ರಮವು ಅನುಕೂ-ಲವಾಗಿರುವದು. ಅದೇ ಮನಶ್ಚಾಂಚಲ್ಯವು ಸರ್ವವನ್ನೂ ಪರಿತ್ಯಾಗಮಾಡಿದ ಸಾಧಕನಿಗೆ ಆದರೆ ಎಷ್ಟು ಹಾನಿಯಾದೀತು ನೋಡು. ನೀನು ಇನ್ನೂ ಬಾಲ್ಯವಯಸ್ಸಿನವನಾಗಿದ್ದಿ. ಈ ವಿಷಯವನ್ನು ನನಗೆ ತಿಳಿಸಿದುದೇ ಉತ್ತ-ಮವಾಯಿತು. ಪೂರ್ವಾಪರವಿಚಾರವಿಲ್ಲದೆ ನೀನು ಮುಂದೆ ಬಿದ್ದು ಆಶ್ರ-ಮಾಂತರವನ್ನು ಸ್ವೀಕರಿಸಿಯೇ ಬಿಟ್ಟಿದ್ದರೆ ಅನರ್ಥವಾಗುವ ಸಂಭವವಿತ್ತು" ಎಂದು ಬುದ್ಧಿವಾದವನ್ನು ಹೇಳಿ ಕಳುಹಿಸಿದರು.

ನಮ್ಮ ಶಾಸ್ತ್ರಕಾರರು ನಮಗೆ ಯಾವದೊಂದು ಸಾಧನೆಯನ್ನು ಹೇಳ-ಬೇಕಾದರೂ ಪೂರ್ವಾಪರವಿಚಾರ ಮಾಡಿಯೇ ಹೇಳಿರುತ್ತಾರೆ. ನಿಜ. ಆದರೂ ಅವುಗಳು ಹುಟ್ಟಿ ಹೆಚ್ಚುಕಾಲವಾಗುತ್ತ ಬಂದ ಹಾಗೆಲ್ಲ ಕಾಲಚಕ್ರದ ಮಹ-ತ್ತರವಾದ ವೈಪರೀತ್ಯದ ದೆಸೆಯಿಂದ ಅವುಗಳಿಗೆ ಉತ್ಪತ್ತಿಕಾಲದಲ್ಲಿದ್ದಷ್ಟು

ಪ್ರಾಶಸ್ತ್ಯವಿರುವದಿಲ್ಲ. ಈ ಅಭಿಪ್ರಾಯವು ಕೇವಲ ಸ್ವಕಪೋಲಕಲ್ಪಿತವಾದ ಊಹೆಯಲ್ಲ. ಕಾಲಕಾಲಕ್ಕೂ, ಅಷ್ಟೇ ಏಕೆ, ದೇಶದೇಶಕ್ಕೂ ಧರ್ಮ-ನಿರ್ಣಯಗಳು ಬೇರೆಬೇರೆಯಾಗಿರುವ ದೃಷ್ಟಾಂತಗಳು ನಮ್ಮ ಶಾಸ್ತ್ರಗಳಲ್ಲಿಯೇ ನಮ್ಮ ಕಣ್ಣೆದುರಿಗೇ ಇರುವವು. ಹೀಗೆ ಒಂದುಕಾಲದಲ್ಲಿ ಆದ ಧರ್ಮನಿರ್ಣ-ಯಗಳು ಕೆಲಕಾಲದ ಮೇಲೆ ಆಗಿನ ಸ್ಥಿತಿಯನ್ನನುಸರಿಸಿ ಸಮಯೋಚಿತವಾಗಿ ತತ್ಕಾಲದ ಧರ್ಮಜ್ಞರಿಂದ ಪುನರ್ವಿಮರ್ಶೆಮಾಡಲ್ಪಡುವವು. ಆದುದರಿಂ-ದಲೇ "**कलौ पंच विवर्जयेत्**" ಎಂದು ಮುಂತಾಗಿ ಹೇಳಲ್ಪಟ್ಟಿದೆ.

ಪರಮಪುರುಷಾರ್ಥಸಾಧನೆಗೆ ಸನ್ಯಾಸಾಶ್ರಮವೇ ಆಗಬೇಕೆಂಬರ್ಥವ-ನ್ನು ಬೋಧಿಸುವ ವಚನಗಳು ಈಗ ಅಕ್ಷರಶಃ ನಡೆಸಬೇಕೆಂಬಷ್ಟು ಗೌರ-ವಿಸತಕ್ಕವುಗಳಾಗಿಲ್ಲ. ಯಾವ ಕಾಲದಲ್ಲಿ ಜನರೆಲ್ಲರೂ ಬಹುಮಟ್ಟಿಗೆ ತಮ್ಮ ತಮ್ಮ ಕರ್ಮಗಳನ್ನು ಸಾಂಗವಾಗಿ ಆಚರಿಸಿ ಚಿತ್ತಶುದ್ಧಿಯನ್ನು ಹೊಂದಿ ಪರಾಪೇಕ್ಷೆಯನ್ನು ಮಾಡದೆ ಇರುವ ಸ್ಥಿತಿಯನ್ನು ಪಡೆದುಕೊಂಡಿದ್ದರೊ ಆ ಕಾಲಕ್ಕೆ ಸನ್ಯಾಸಾಶ್ರಮವು ಅತಿಪ್ರಶಸ್ತವಾಗಿತ್ತು ಮತ್ತು ಜನರಲ್ಲಿ ಭೂತ ದಯಾದಿಗುಣಗಳು ತುಂಬಿದ್ದುದರಿಂದ ಅವರೆಲ್ಲರೂ ಚತುರ್ಥಾಶ್ರಮದವರ ಪೋಷಣೆಯ ಭಾರವು ತಮ್ಮದೆಂದು ತಿಳಿದು ತಾವಾಗಿಯೇ ಅವರ ಯೋಗ-ಕ್ಷೇಮವನ್ನು ನೋಡಿಕೊಳ್ಳುತ್ತಿದ್ದರು. ದೃಢಾಂಗರಾದವರು ವ್ಯವಹಾರದಲ್ಲಿ ತತ್ಪರರಾಗದೆ ಮೂಗುಹಿಡಿದುಕೊಂಡು ಕುಳಿತುಕೊಳ್ಳುವದರಿಂದಲೇ ದೇಶಕ್ಕೆ ದರಿದ್ರಾವಸ್ಥೆಯೆಂದು ಸಿದ್ಧಾಂತವನ್ನು ಹೇಳುತ್ತ ಭಿಕ್ಷಕ್ಕೆ ಬಂದ ಮುಮುಕ್ಷು-ಗಳಿಗೆ ಕೂಡ ಕೂಲಿಗೆ ಹೋಗೆಂದು ಬುದ್ಧಿವಾದವನ್ನು ಹೇಳುವ ಈ ಕಾಲಕ್ಕೆ ಸನ್ಯಾಸವು ಅಷ್ಟು ಪ್ರಶಸ್ತವಲ್ಲ. ಜನರ ನಿಂದೆಗೂ ಅವಕಾಶವನ್ನು ಕೊಡದೆ ಸರ್ವವ್ಯವಹಾರವನ್ನೂ ಭಗವತ್ಸೇವೆಯೆಂಬ ಭಾವನೆಯಿಂದ ನಡೆಸಿಕೊಂಡಿ-ರುವದೇ ಉತ್ತಮ. ಇದರ ಮೇಲೆ ವಾನಪ್ರಸ್ಥಾಶ್ರಮದ ಹೆಸರೇ ಅಡಗಿ ಹೋಗಿದೆ ಮತ್ತು ಬ್ರಹ್ಮಚರ್ಯವು ಕೂಡ ಹೆಸರಿಗೆ ಮಾತ್ರ ಇದೆ. "ಅಟ್ಟಕ್ಕೆ ಹಾರದವನು ಬೆಟ್ಟಕ್ಕೆ ಹಾರುವನೆ?" ಎಂಬಂತೆ ವಾನಪ್ರಸ್ಥಾಶ್ರಮದಲ್ಲಿ ದೇಹ-ದಂಡನೆ ಮುಂತಾದವುಗಳನ್ನು ಮಾಡಿಕೊಂಡರಿಯದ ನಮಗೆ ಸನ್ಯಾಸವು ಹೇಗೆ ಶೋಭಿಸೀತು? ಈ ಕಾರಣಗಳಿಂದಲೇ ಕಲಿಯುಗದಲ್ಲಿ ಸನ್ಯಾಸವು

ನಿಷೇಧವೆಂಬ ವಚನವು ಹುಟ್ಟಿರುವದು. ಸನ್ಯಾಸವನ್ನು ಸ್ವೀಕರಿಸಿದರೆ ಮೋಕ್ಷವು ಸಿಕ್ಕಿಯೇ ಸಿಕ್ಕುವದೆಂದು ಭರವಸವಿದ್ದರೆ ಯಾವ ಅಭ್ಯಂತರವನ್ನೂ ನೋಡದೆ ಸನ್ಯಾಸವನ್ನು ತೆಗೆದುಕೊಳ್ಳುವದೇ ಅವಶ್ಯಕವಾಗುವದು. ಆದರೆ ಸನ್ಯಾಸಕ್ಕೆ ಮೋಕ್ಷವೇ ಸಾಕ್ಷಾತ್ಫಲವೆಂದು ಎಲ್ಲಿಯೂ ಹೇಳಿಲ್ಲ. ಇನ್ನು ದೇಶಕಾಲಸ್ಥಿತಿಗಳು ಹೇಗಿದ್ದರೂ ಸನ್ಯಾಸಧರ್ಮವನ್ನು ಕಾಪಾಡಿಕೊಂಡು ಪರಮಾರ್ಥವನ್ನು ಸಾಧಿಸುತ್ತೇನೆಂದು ಎದೆಯ ಮೇಲೆ ಕೈ ಇಟ್ಟುಕೊಂಡು ಧೈರ್ಯದಿಂದ ಮುಂದಾಗುವವರ ಭಾಗಕ್ಕೆ ಶ್ರುತಿಸ್ಮೃತಿಗಳು ಹೆಬ್ಬಾಗಿಲು ತೆರೆದುಕೊಂಡೇ ಇವೆ. ಅವರ ದೃಢನಿಶ್ಚಯವೂ ಶ್ಲಾಘಾಸ್ಪದವಾಗಿಯೇ ಇರುವದು. ಸಾಮಾನ್ಯದೃಷ್ಟಿಯಿಂದ ನೋಡಿದರೆ ದೇಶಕಾಲಸ್ಥಿತಿಗಳು ಸನ್ಯಾಸಕ್ಕೆ ಬೆಂಬಲವಾಗಿಲ್ಲದುದರಿಂದ ಎಷ್ಟೇ ಧೈರ್ಯಶಾಲಿಗಳಾದರೂ ಆಶ್ರಮಾಂತರವನ್ನು ಸ್ವೀಕರಿಸುವಾಗ ಚೆನ್ನಾಗಿ ಹಿಂದುಮುಂದು ನೋಡಬೇಕೆಂದು ಮತ್ತೊಮ್ಮೆ ಹೇಳುವ ಹಾಗಿರುವದು. ಏಕೆಂದರೆ ಕಲಿಪ್ರಾಬಲ್ಯವು ಅತಿದಾರುಣವಾಗಿರುವದರಿಂದ ನಮಗೆ ಈಗ ಇರುವ ಆಶ್ರಮದ ಧರ್ಮಗಳೇ ಸರಿಯಾಗಿ ನಡೆಯುವದಿಲ್ಲ. ಒಂದೊಂದಾಶ್ರಮವನ್ನಾಗಿ ಕೆಡಿಸುವದಕ್ಕೆ ದೀಕ್ಷೆಯನ್ನು ವಹಿಸಿದವರಂತೆ ನಾವು ಸನ್ಯಾಸಾಶ್ರಮದ ಗೌರವವನ್ನೂ ಹಾಳುಮಾಡದೆ ಅದು ನಾಮಮಾತ್ರವಾಗಿದ್ದರೂ ಚಿಂತೆ ಇಲ್ಲ. ಅದರ ಪೂಜ್ಯತೆಗೆ ಭಂಗವನ್ನು ತರದಿದ್ದರೆ ಮಹದುಪಕಾರವನ್ನು ಮಾಡಿದಂತಾದೀತು.

ಸನ್ಯಾಸವನ್ನು ಮಾಡಿ ಪರಮಾರ್ಥವಿಚಾರವನ್ನು ಮಾಡಬೇಕೆಂಬ ವಚನಗಳಲ್ಲೆಲ್ಲ ಸನ್ಯಾಸಶಬ್ದಕ್ಕೆ ಕಾಷಾಯದಂಡಗಳನ್ನು ಧಾರಣಮಾಡಿ ಪ್ರಪಂಚವನ್ನು ಬಿಟ್ಟುಹೋಗಬೇಕೆಂಬರ್ಥವೊಂದನ್ನೇ ಮಾಡಬೇಕಾದುದಿಲ್ಲ. ಏಕೆಂದರೆ ಪ್ರಪಂಚವನ್ನು ಬಿಟ್ಟು ಅವನು ಎಲ್ಲಿಗೆ ಹೋಗುತ್ತಾನೆ? ಎಲ್ಲಿಗೆ ಹೋದರೂ ಪ್ರಪಂಚವಿದ್ದೇ ಇರುತ್ತದೆ. ಒಂದೂರು ಬಿಟ್ಟರೆ ಇನ್ನೊಂದೂರಿಗೆ ಹೋಗುತ್ತಾನೆ. ಅಥವಾ ಊರುಬಿಟ್ಟರೆ ಕಾಡಿಗೆ ಹೋಗುತ್ತಾನೆ. ಮನೆ ಬಿಟ್ಟರೆ ಗುಹೆಗೆ ಹೋಗುತ್ತಾನೆ. ಅನ್ನವನ್ನು ಬಿಟ್ಟರೆ ಹಣ್ಣುಹಂಪಲ ಗಡ್ಡೆಗೆಣಸುಗಳನ್ನಾದರೂ ತಿನ್ನುತ್ತಾನೆ ಅಥವಾ ಏನಿಲ್ಲವೆಂದರೂ ಗಾಳಿಯನ್ನಾದರೂ ಸೇವಿಸುತ್ತಾನೆ. ಊರು, ಗುಹೆ, ಹಣ್ಣುಹಂಪಲ, ಗಾಳಿ ಇವೆಲ್ಲ

ಪ್ರಪಂಚವಲ್ಲವೇನು? ಎಲ್ಲಿಯವರೆಗೆ ದೇಹವೆಂಬ ಉಪಾಧಿಯನ್ನು ತೊರೆ-ಯುವದಕ್ಕೆ ಆಗುವದಿಲ್ಲವೊ ಅಲ್ಲಿಯವರೆಗೆ ಪ್ರಪಂಚವನ್ನು ಬಿಟ್ಟುಹೋಗುವ-ದಕ್ಕೆ ಆಗುವದಿಲ್ಲ. ಹಾಗಾದರೆ ಸನ್ಯಾಸಶಬ್ದಕ್ಕೆ ಸಾರ್ಥಕವೇನೆಂದರೆ, ವಿಷ-ಯಗಳು ನಮ್ಮ ಕಣ್ಣೆದುರಿಗೆ ಇದ್ದರೆ ಇರಲಿ; ಅವುಗಳ ಮೇಲಣ ಅಭಿಮಾನ-ವನ್ನು ಮಾತ್ರ ತೊರೆದರೆ ಸರಿ. ಅಭಿಮಾನವನ್ನು ತೊರೆದ ಮೇಲೆ ಯಾವ ವಿಷಯವೂ ನಮಗೆ ಯಾವ ಬಾಧೆಯನ್ನೂ ಮಾಡುವದಿಲ್ಲ. ವಿಷಯಗಳು ಪರಮಾರ್ಥಸಾಧನೆಗೆ ಕಂಟಕಗಳೆಂಬ ಮಾತು ನಿಜ. ಆದರೆ ವಿಷಯಗಳ ವಶಕ್ಕೆ ನಮ್ಮ ಮನಸ್ಸನ್ನು ಕೊಟ್ಟಾಗ ಮಾತ್ರ ಅವು ನಮಗೆ ಕಂಟಕಗಳೇ ಹೊರತು ನಾವು ಅವುಗಳ ವಶರಾಗದಿರುವಾಗ ಅವು ನಮಗೇನನ್ನೂ ಮಾಡ-ಲಾರವು. ವಿಷಯಗಳನ್ನು ದೂರದಲ್ಲಿ ಬಿಟ್ಟುಹೋಗುತ್ತೇನೆಂಬ ಧೀರನು ವಿಷಯಗಳೇ ಇಲ್ಲದಂತೆ ಮಾಡುವೆನೆಂದು ಯತ್ನಿಸುವದಕ್ಕೂ ಹಿಂಜರಿಯಲಾ-ರನು. ವಿಷಯಗಳೇ ಸಂಪೂರ್ಣವಾಗಿ ಇಲ್ಲದಂತೆ ಮಾಡುವದಕ್ಕೆ ಯಾರಿಗೆ ತಾನೆ ಸಾಧ್ಯ? ಹಾಗೆಯೇ ವಿಷಯಗಳಿಗೆ ದೂರನಾಗಿರುತ್ತೇನೆಂದರೂ ಸಾ-ಧ್ಯವಲ್ಲ. ವಿಷಯಗಳು ತಮ್ಮಷ್ಟಕ್ಕೆ ತಾವಿರಲಿ. ನಾವು ಅವುಗಳಲ್ಲಿ ಆಸಕ್ತ-ರಾಗದಿದ್ದರೆ ಸರಿ. ನಮ್ಮ ಪರಮಾರ್ಥಸಾಧನೆಗೆ ಕುಂದಕವಾಗಿರುವದು ಕೇವಲ ಅವುಗಳ ಇರುವಿಕೆಯಲ್ಲ; ಅವುಗಳ ಮೇಲಣ ಆಸಕ್ತಿ. ವಿಷಯ-ಗಳ ಇರುವಿಕೆಯೇ ನಮಗೆ ಕಂಟಕವಾಗಿದ್ದರೆ ಅದಕ್ಕೆ ಪರಿಹಾರವೇ ಇಲ್ಲದು-ದರಿಂದ ನಮಗೆ ಪರಮಪುರುಷಾರ್ಥದ ಆಶೆಯೇ ಇರುತ್ತಿರಲಿಲ್ಲ. ದೇವರು ಸೃಷ್ಟಿಮಾಡಿರುವ ಯಾವ ವಿಷಯವೂ ನಮಗೆ ಕಂಟಕವಲ್ಲ. ಕಂಟಕವಾದ ಸೃಷ್ಟಿಯನ್ನು ನಾವೇ ಮಾಡಿಕೊಳ್ಳುತ್ತೇವೆ. ಯಾವದಾದರೊಂದು ವಸ್ತು-ವನ್ನು ನಮ್ಮದೆಂದು ಹಚ್ಚಿಕೊಂಡು ನಾವು ಅದಕ್ಕೆ ಕೃತಕಸೌಂದರ್ಯವನ್ನು ಕೊಟ್ಟು ಅದನ್ನೇ ಧ್ಯಾನಿಸುತ್ತ ನಮಗೆ ಬಂಧನವನ್ನಾಗಿ ಮಾಡಿಕೊಳ್ಳುತ್ತೇವೆ. ದೇವರು ಸೃಷ್ಟಿಮಾಡಿರುವ ವಸ್ತುಗಳು ಹೇಗಾದರೂ ಇದ್ದುಕೊಳ್ಳಲಿ; ಅವುಗ-ಳಾಧಾರದಿಂದ ನಾವು ಮನೋಮಯ ಪ್ರಪಂಚವನ್ನು ಬೆಳೆಸದೆ ಬಿಟ್ಟರೆ ಸಾಕಾಗಿದೆ.

ಸನ್ಯಾಸಶಬ್ದಕ್ಕೆ ಮನೋಮಯಪ್ರಪಂಚವನ್ನು ತೊರೆಯುವದೆಂಬರ್ಥವನ್ನಿಟ್ಟುಕೊಳ್ಳುವದೇ ಪ್ರಶಸ್ತವು. ಈಚೀಚಿನ ಧರ್ಮೋದ್ಧಾರಕರೆಲ್ಲರೂ ಈ ಅಭಿಪ್ರಾಯವನ್ನೇ ಉಪದೇಶಿಸುತ್ತಿರುವರು. ಬಹುತರವಾಗಿ ಈಚೀಚಿನವರಲ್ಲಿ ಪರಮಾರ್ಥಸಿದ್ಧಿಯನ್ನು ಹೊಂದಿರುವ ಅನೇಕರು ಪ್ರಪಂಚದೊಳಗಿದ್ದುಕೊಂಡೇ ಪರಮಾರ್ಥವನ್ನು ಸಾಧಿಸಿದವರಾಗಿದ್ದಾರೆ. ಇದಕ್ಕೆ ಉದಾಹರಣೆಗಳಾಗಿ ಏಕನಾಥಸ್ವಾಮಿಗಳು, ತುಕಾರಾಮಸ್ವಾಮಿಗಳು, ಕಬೀರದಾಸರು ಮೊದಲಾದ ಅನೇಕ ಮಹನೀಯರಿರುವರು. ಪ್ರಪಂಚವನ್ನು ತೊರೆದಿರುವಷ್ಟು ದೃಢವೈರಾಗ್ಯವು ಈಗಿನಕಾಲದಲ್ಲಿ ಬಲಿತಿರುವ ಸಂಭವವಿಲ್ಲವಾದುದರಿಂದ ಪ್ರಪಂಚವನ್ನು ಕೈಬಿಡುವ ಹಾಗಿಲ್ಲ; ಪರಮಾರ್ಥದಲ್ಲಿ ನಿತ್ಯಸುಖವಿರುವದರಿಂದ ಅದನ್ನು ಉಪೇಕ್ಷೆಮಾಡುವ ಹಾಗಿಲ್ಲ. ಆದುದರಿಂದ ಪ್ರಪಂಚದಲ್ಲಿದ್ದೂ ಇಲ್ಲದಂತೆ ಇರಲೇ ಬೇಕಾಯಿತು. ಪರಮಾರ್ಥಸಿದ್ಧಿಗಾಗಿ ಕೆಲಕಾಲವಾದರೂ ವಿಷಯಗಳನ್ನು ಬಿಟ್ಟಿರುವದನ್ನು ಅಭ್ಯಾಸಮಾಡಬೇಕಾದುದೇನೋ ಅಗತ್ಯವೆ. ಆದರೆ ಇನ್ನೆಂದೆಂದೂ ಪ್ರಪಂಚವ್ಯವಹಾರಕ್ಕೆ ತಲೇಹಾಕುವದಿಲ್ಲವೆಂದು ಅದನ್ನು ಸರ್ವಥಾ ತ್ಯಜಿಸಿ ಆ ಶಪಥಕ್ಕೆ ಧ್ವಜಪಠವಾಗಿ ಕಾವಿಯಶಾಟಿಯನ್ನು ಧರಿಸಬೇಕೆಂಬ ಹಠವೇಕೆ? ಅಗತ್ಯವಿದ್ದಷ್ಟು ಕಾಲ ಬೇಕಾದರೆ ಒಂಟಿಯಾಗಿದ್ದು ನಿರಪೇಕ್ಷನಾಗಿರುವದನ್ನು ಅಭ್ಯಾಸ ಮಾಡಿಕೊಳ್ಳಲಿ. ಪ್ರಪಂಚವ್ಯವಹಾರವನ್ನು ದೂಷಿಸುವದು ಬೇಡ. ಶಾಸ್ತ್ರಗಳಲ್ಲಿ ಎಷ್ಟೋ ಕಡೆ ಪ್ರಪಂಚವನ್ನು ತುಚ್ಛಮಾಡಿರುವದು ಅದನ್ನು ನಂಬಿಕೊಂಡು ಕೂಡದೆ ಇರಲೆಂದೇ ಹೊರತು ದೂಷಿಸಲೆಂದಲ್ಲ. ಪ್ರಪಂಚವೂ ಭಗವಂತನ ಸತ್ತಾವಿಶೇಷವಲ್ಲದೆ ಬೇರೆ ಅಲ್ಲ. ಪ್ರಪಂಚವನ್ನು ದೂಷಿಸಿದರೆ ಪ್ರಕಾರಾಂತರದಿಂದ ಭಗವಂತನನ್ನೇ ದೂಷಿಸಿದ ಹಾಗೆ ಆಗುವದು. ದೂಷಿಸುವದು ಎಂಥ ಪರಮಾರ್ಥ! ಪ್ರಪಂಚವ್ಯವಹಾರವೆಂಬುದು ಪರಮಾರ್ಥವನ್ನು ಕಲಿಯುವದಕ್ಕೆ ಪಾಠಶಾಲೆಯಹಾಗಿದೆ. ಪ್ರಪಂಚವ್ಯವಹಾರಗಳನ್ನು ನಡೆಸುತ್ತಿರುವಾಗ ಕಾಮಕ್ರೋಧಾದಿಗಳಿಗೊಳಗಾಗದೆ ಲಾಭಾಲಾಭಗಳನ್ನೂ ಜಯಾಪಜಯಗಳನ್ನೂ ಮಾನಾಪಮಾನಗಳನ್ನೂ ಸಮವಾಗಿ ಭಾವಿಸುತ್ತ ಸರ್ವತ್ರ ಭಗವದ್ಭಾವವನ್ನು ಅನುಸಂಧಾನ ಮಾಡುತ್ತ ಇರುವದಕ್ಕೆ ಬೇಕಾದಷ್ಟು ಅವ-

ಕಾಶಗಳು ಸಿಕ್ಕುತ್ತವೆ. ಎಲ್ಲವನ್ನೂ ಬಿಟ್ಟು ಗುಹೆಗೆ ಹೋಗಿ ಏನು ಸಾಧನ ಮಾಡಬೇಕಾಗಿದೆ? ಶ್ವಾಸಧಾರಣೆಯೆಂದು ಯಾರಾದರೂ ಹೇಳಬಹುದು. ಹೆಗ್ಗಣವನ್ನಿಟ್ಟು ಹೋರನ್ನು ಮುಚ್ಚಿದ ಹಾಗೆ ಕಾಮಕ್ರೋಧಾದಿಗಳನ್ನು ಇಟ್ಟುಕೊಂಡು ಎಷ್ಟು ಉಸುರು ಕಟ್ಟಿದರೇನು? ಉಸಿರು ತುಂಬಿ ಬಾಯಿ-ಕಟ್ಟಿದ ಫುಟ್‌ಬಾಲ್ ಕೂಡ ಶ್ವಾಸಧಾರಣೆ ಮಾಡಿರುತ್ತದೆ. ಅದಕ್ಕೂ ಪರಮಾರ್ಥಸಿದ್ಧಿಯಾಗಬೇಕಾಯಿತಲ್ಲ! ಪರಮಾರ್ಥಸಿದ್ಧಿಗೆ ಶ್ವಾಸಧಾರಣೆಯೇ ಮುಖ್ಯಸಾಧನವಲ್ಲ; ಕಾಮಕ್ರೋಧಾದಿಗಳ ಜಯ ಮತ್ತು ಸರ್ವತ್ರ ಸಮ-ಬುದ್ಧಿ ಮೊದಲಾದವುಗಳು ಅತ್ಯಗತ್ಯವು. ಇವುಗಳ ಸಾಧನೆಗೆ ಗುಹೆಯೇನೂ ಪ್ರಶಸ್ತವಾದ ಸ್ಥಳವಲ್ಲ. ಗುಹೆಯಲ್ಲಿದ್ದು ಕಾಮಕ್ರೋಧಾದಿಗಳನ್ನು ಜಯಿ-ಸಿದೇನೆಂದು ತಿಳಿಯುವದು ಆಹಾರಪದಾರ್ಥಗಳೇನೂ ಸಿಕ್ಕದಿರುವಾಗ ಯಾವ ಆಹಾರವೂ ಬೇಕಿಲ್ಲವೆಂದು ಹೇಳಿದ ಹಾಗೆ ಆಗುತ್ತದೆ. ಉತ್ತಮವಾದ ಪಕ್ವಾನ್ನವನ್ನು ಮುಂದಿಟ್ಟರೂ ಕೂಡ ಅದನ್ನು ಬಯಸದಿದ್ದರಲ್ಲವೆ ಅವನು ರಸನೇಂದ್ರಿಯವನ್ನು ಗೆದ್ದನೆಂದು ಹೇಳಬಹುದು. ಪ್ರಪಂಚದಲ್ಲಿದ್ದೂ ಅದ-ರಲ್ಲಿ ಆಸಕ್ತನಾಗದಿದ್ದರೆ ಮಾತ್ರ ಇವನು ಪ್ರಪಂಚವನ್ನು ಗೆದ್ದು ಪರಮಾರ್ಥ-ವನ್ನು ಪಡೆದನೆಂದು ಹೇಳಬಹುದು. ಪ್ರಪಂಚದ ಉಪಟಳವನ್ನು ತಡೆದು-ಕೊಳ್ಳಲಾರದೆ ಪರಮಾರ್ಥವನ್ನು ಸಾಧಿಸುತ್ತೇನೆಂದು ಓಡಿಹೋಗುವದು ಕಳ್ಳ-ತನವಲ್ಲವೆ? ಹಗೆಗಳ ದೆಸೆಯಿಂದ ತಲೆತಪ್ಪಿಸಿಕೊಂಡು ಹೋಗಿ ಬದುಕಿ-ಕೊಳ್ಳುವವನಿಗೆ ಜೀವವುಳಿಯುವದು ನಿಜ. ಆದರೆ ಜಯಪತ್ರಿಕೆ ಹೇಗೆ ಒಪ್ಪೀತು? ಹಗೆಗಳ ಮುಂದೆ ಎದೆಗೊಟ್ಟು ನಿಲ್ಲಬೇಕು. ಅವರನ್ನು ಗೆದ್ದು ಜಯಭೇರಿಯನ್ನು ಹೊಡೆಸಬೇಕು. ಹಾಗೆಯೇ ಪ್ರಪಂಚದಲ್ಲಿದ್ದು ವಿಷಯ-ಗಳಿಗೆ ಎದೆಗೊಟ್ಟು ಅವುಗಳನ್ನು ಗೆಲ್ಲಬೇಕು. ಆಮೇಲೆ ಪರಮಾರ್ಥಸುಖ-ವನ್ನು ಸೂರೆಮಾಡಬೇಕು. ಅವನಲ್ಲವೆ ಧೀರ! ನಿದ್ರೆಯ ಸುಖವು ಚೆನ್ನಾಗಿ ತೋರ ಬೇಕಾದರೆ ಹಗಲು ಮೈ ಮುರಿಯುವಂಥ ಉದ್ಯೋಗವು ಹೇಗೆ ಅವ-ಶ್ಯಕವೊ ಹಾಗೆ ಪರಮಾರ್ಥಸುಖವು ಹೆಚ್ಚಾಗಿ ತೋರಬೇಕಾದರೆ ಪ್ರಪಂಚ-ವ್ಯವಹಾರವು ಚೆನ್ನಾಗಿರಬೇಕು.

ಪ್ರಪಂಚದಲ್ಲಿದ್ದೂ ಇಲ್ಲದ ಹಾಗೆ ಇರಬೇಕೆಂಬ ಪರಸ್ಪರ ವಿರೋಧೋಕ್ತಿಯು ಹೇಗೆ ಆಚರಣೆಗೆ ಸಾಧ್ಯವೆಂದು ಯಾರಾದರೂ ಯೋಚಿಸಬಹುದು. ಪರಮಾರ್ಥಕ್ಕೆ ಕಂಟಕವಾಗಿರುವದು ವಿಷಯಗಳ ಮೇಲಣ ಆಸಕ್ತಿಯೇ ಹೊರತು ವಿಷಯಗಳ ಇರುವಿಕೆಯಲ್ಲವಾದುದರಿಂದ ನಾವು ಅದರಲ್ಲಿ ಆಸಕ್ತಿಯನ್ನು ಬಿಟ್ಟುಬಿಟ್ಟರೆ ಇದ್ದೂ ಇಲ್ಲದಹಾಗೆಯೇ ಆಗುವದು. ಆದುದರಿಂದಲೇ ಭಗವಂತನು

"रागद्वेषवियुक्तैस्तु विषयानिंद्रियैश्चरन्।
आत्मवश्यैर्विधेयात्मा प्रसादमधिगच्छति॥"

ಎಂದು ಅಂದಿದ್ದಾನೆ. ಇದೇನೂ ಅಸಾಧ್ಯವಾದ ಮಾತಲ್ಲ. ಉದಾಹರಣೆಗೆ ಒಬ್ಬ ಕವಿಯು ಊಟಕ್ಕೆ ಕುಳಿತಿರುವಾಗ ಅವನಿಗೆ ಒಂದು ಮಹತ್ತ್ವದ ಸಮಸ್ಯೆಯು ಪೂರ್ಣವಾಗುವಂತೆ ತೋರಲಿ. ಆಗ ನೋಡಿರಿ. ಅವನಿಗೆ ಯಾವ ಪಕ್ವಾನ್ನಗಳ ರುಚಿಯೂ ಗೊತ್ತಾಗುವದಿಲ್ಲ. ಅಲ್ಲಿ ನಡೆಯುವ ಮಾತುಕಥೆಗಳ ಮೇಲೂ ಲಕ್ಷ್ಯವಿರುವದಿಲ್ಲ. ಒಂದೊಂದುಸಲ ಊಟವನ್ನೇ ಮರೆತು ಎದ್ದು ಆ ಸಮಸ್ಯಾಪೂರ್ತಿಯನ್ನು ಬರೆದಿಡುವದಕ್ಕೆ ಹೋಗುವನು. ಹಾಗೆಯೇ ಪರಮಾರ್ಥವನ್ನು ಸಾಧಿಸಬೇಕೆನ್ನುವವರು ವಿಷಯಗಳ ಸಾನ್ನಿಧ್ಯದಲ್ಲಿದ್ದರೂ ತಮ್ಮ ಸರ್ವಾಸಕ್ತಿಯನ್ನೂ ಪರಮಾತ್ಮನಲ್ಲಿಟ್ಟುಬಿಟ್ಟರೆ ಅವರು ಪ್ರಪಂಚದಲ್ಲಿದ್ದೂ ಇಲ್ಲದಂತಾಗುವದು. ಅವರಿಗೆ ಪರಮಾರ್ಥಸಿದ್ಧಿಯು ಕರತಲಾಮಲಕವಾಗುವದು. ಹೀಗೆ ಪ್ರಪಂಚದಲ್ಲಿದ್ದೂ ಪರಮಾರ್ಥವನ್ನು ಸಾಧಿಸುವದು ಎರಡು ಕೈಯಲ್ಲಿಯೂ ಕತ್ತಿಯನ್ನು ತಿರಿಗಿಸುವಷ್ಟು ಕಷ್ಟವೇ ಸರಿ. ಆದರೆ ಮಾಡುವದೇನು? ಗತ್ಯಂತರವೇ ಇಲ್ಲ. ಪ್ರಪಂಚವನ್ನು ಬಿಟ್ಟು ಪರಮಾರ್ಥವನ್ನು ಸಾಧಿಸದೆ "**अतो भ्रष्ट इतो भ्रष्ट**" ಆಗುವದಕ್ಕಿಂತಲೂ ಪ್ರಪಂಚದಲ್ಲಿಯೇ ಇದ್ದು ಆದಷ್ಟು ಪರಮಾರ್ಥಸಾಧನವನ್ನು ಮಾಡುವದು ಶ್ರೇಯಸ್ಕರವು.—**ಗೋಡೆಯನ್ನು ಕಟ್ಟಿದ ಮೇಲೆ ತಟ್ಟಿಯನ್ನು ತೆಗೆಯಬೇಕೆಂದಂತೆ ಪರಮಾರ್ಥವು ಸಾಧಿಸಿದ ಹಾಗೆಲ್ಲ ಪ್ರಪಂಚವನ್ನು ಬಿಡ-**

ಬೇಕು. ಅಥವಾ ಅದನ್ನು ಬಿಡಬೇಕೆನ್ನುವದೇನು? ಅಮೃತವು ಸಿಕ್ಕಿದ ಮೇಲೆ ನುಚ್ಚನ್ನು ಮೂಸಿಯಾದರೂ ಯಾರು ನೋಡುವರು? ನಿಜಾನಂದವು ಸಿಕ್ಕಿದ ಮೇಲೆ ವಿಷಯಾನಂದದ ಪಾಡೇನು? ತಾನೇ ಬಿಟ್ಟು ಹೋಗುವದು. ಮೊದಲೇ ಗಡಿಬಿಡಿಯಿಂದ ಪ್ರಪಂಚವನ್ನು ಬಿಟ್ಟರೆ ಅದೂ ಇಲ್ಲ ಇದೂ ಇಲ್ಲ ಹೀಗಾಗಿ ಕೊಡಬೇಕಾಗುವ ಸಂಭವವಿದೆ. ಪ್ರಪಂಚದಲ್ಲಿದ್ದವನು ಮನೋ-ದಾರ್ಢ್ಯವಾದರೆ ಹತ್ತರ ಇದ್ದ ವಿಷಯುಗಳನ್ನು ಬಿಡಬಹುದು. ಇಲ್ಲದಿದ್ದರೆ ವಿಧಿಪ್ರಕಾರವಾಗಿ ಯಾವ ವಿಷಯುವನ್ನಾದರೂ ಉಪಭೋಗಿಸಬಹುದು. ಕ್ರಮದಿಂದ ಅಭ್ಯಾಸಮಾಡಿ ಮನೋನಿಶ್ಚಯವನ್ನು ಮಾಡಿಕೊಳ್ಳಬಹುದು. ಯಾವದಾದರೂ ಮನಸ್ತಾಪದಿಂದ ಹುಟ್ಟಿದಂತೆ ತೋರುವ ವೈರಾಗ್ಯವು ದೃಢ-ವಾಗಿ ನಿಲ್ಲಲಾರದು. ವಿವೇಕದಿಂದ ಹುಟ್ಟಿರುವದೇ ಸ್ಥಿರವಾಗುವದು. ಆದ-ಕಾರಣ ನಮ್ಮಲ್ಲಿ ಹುಟ್ಟಿದ ಹಾಗೆ ತೋರುವ ವೈರಾಗ್ಯವನ್ನು ನಂಬಿ ಒಮ್ಮೆಲೇ ಸನ್ಯಾಸವನ್ನು ಮಾಡದೆ ಮನಸ್ಸು ದೃಢವಾಗುವಂತೆ ಸಾಧನೆಮಾಡಬೇಕು. ಆದುದರಿಂದಲೇ ಭಗವಂತನು ಗೀತೆಯಲ್ಲಿ

"सन्यासस्तु महाबाहो दुःखमाप्तुमयोगतः"

ಎಂದು ಅಂದಿದ್ದಾನೆ. ನಮ್ಮಂಥ ಸಾಧಾರಣಜನರು ಭುಕ್ತಿಗೂ ಮತ್ತು ಮುಕ್ತಿಗೂ ಸಾಧನವಾಗಿರುವ ಪ್ರವೃತ್ತಿರೂಪಧರ್ಮವನ್ನೇ ಅವಲಂಬಿಸು-ವದು ಉಚಿತವು. ಶ್ರೀ ಕಣಾದಮುನಿಗಳು "यतोभ्युदयनिःश्रेयससिद्धिस्स धर्मः" ಎಂಬ ವೈಶೇಷಿಕಸೂತ್ರದಿಂದ ಧರ್ಮದ ಲಕ್ಷಣವನ್ನು ಹೇಳಿದಂತೆ ಶ್ರೀ ಶಂಕರಾಚಾರ್ಯರು ಗೀತೆಯ ಭಾಷ್ಯದಲ್ಲಿ "प्राणिनां साक्षादभ्युदय निःश्रेयस हेतुर्यस्स धर्मः" ಎಂದು ಬರೆದುದರ ಕೆಳಗೆ ಆನಂದಗಿರಿಸ್ವಾಮಿಗಳು ಟೀಕೆಯಲ್ಲಿ "प्रवृत्तिलक्षणो धर्मोऽभ्युदयार्थिनां साक्षादभ्युदयहेतुः निःश्रेयसार्थिनां परंपरया निःश्रेयस हेतुः। निवृत्तिलक्षणस्स धर्मः साक्षादेव निःश्रेयसहेतुरिति विभागः।" ಎಂದು ವಿವೇಚನೆ ಮಾಡಿದುದನ್ನು ನೋಡಿ-ದರೆ ಪ್ರವೃತ್ತಿಲಕ್ಷಣಧರ್ಮವು ಸಾಕ್ಷಾತ್ತಾಗಿ ಅಭ್ಯುದಯಕ್ಕೆ ಹೇತುವೂ ಮತ್ತು ಪರಂಪರೆಯಿಂದ ನಿಃಶ್ರೇಯಸಕ್ಕೆ ಅಂದರೆ ಮೋಕ್ಷಕ್ಕೆ ಹೇತುವೂ ಎಂಬದಾಗಿ

ತಿಳಿದು ಬರುವದು. ಮುಂದೆ ಗೀತಾಭಾಷ್ಯದಲ್ಲಿ ಶ್ರೀ ಶಂಕರಾಚಾರ್ಯರು ಈ ಅರ್ಥವನ್ನು "अभ्युदयार्थोऽपि यः प्रवृत्तिलक्षणो धर्मो वर्णाश्रमांश्चोद्दिश्य विहितः स देवादिस्थानप्राप्तिहेतुरपि सन्नीश्वरार्पणबुध्यानुष्ठीयमानः सत्वशुद्धये भवति। शुद्धसत्वस्य च ज्ञाननिष्टायोग्यताप्राप्तिद्वारेण ज्ञानोत्पत्तिहेतुत्वेन च निःश्रेयसहेतुत्वमपि प्रतिपद्यते।" ಎಂದು ಅಂದರೆ ವರ್ಣಾಶ್ರಮಗಳನ್ನು ಕುರಿತು ಹೇಳಲ್ಪಟ್ಟಂಥ ಅಭ್ಯುದಯಾರ್ಥಕವಾದ ಪ್ರವೃತ್ತಿರೂಪಧರ್ಮವು ಸ್ವರ್ಗಾದಿಗಳ ಪ್ರಾಪ್ತಿಗೆ ಹೇತುಭೂತವಾಗಿದ್ದರೂ ಈಶ್ವರಾರ್ಪಣಬುದ್ಧಿಯಿಂದ ಅನುಷ್ಠಾನಮಾಡಲ್ಪಟ್ಟರೆ ಚಿತ್ತಶುದ್ಧಿಗೆ ಕಾರಣವಾಗುವದು. ಚಿತ್ತಶುದ್ಧಿಯಿಂದ ಜ್ಞಾನನಿಷ್ಠಾಯೋಗ್ಯತೆಯು ಬಂದು ಜ್ಞಾನವಾಗಿ ಅದರಿಂದ ಮೋಕ್ಷವಾಗುವದರಿಂದ ಆ ಪ್ರವೃತ್ತಿರೂಪಧರ್ಮವು ಪರಂಪರೆಯಿಂದ ಮೋಕ್ಷಕ್ಕೆ ಕಾರಣವೆನಿಸುವದು" ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಆದುದರಿಂದ ಎಲ್ಲ ವರ್ಣಾಶ್ರಮದವರೂ ಪ್ರವೃತ್ತಿರೂಪಧರ್ಮವನ್ನು ಆಶ್ರಯಿಸಿದರೆ ಅವರಿಗೆ ಇಚ್ಛೆ ಇದ್ದರೆ ಸಂಸಾರದಲ್ಲಿ ಅಭ್ಯುದಯವೂ ಅಥವಾ ನಿರಿಚ್ಛೆಯಾದರೆ ನಿರತಿಶಯಪರಮಾನಂದರೂಪವಾದ ನಿಃಶ್ರೇಯಸವೂ ಲಭಿಸುವದು.

ಎಲ್ಲ ವರ್ಣದವರೂ ಮತ್ತು ಎಲ್ಲ ಆಶ್ರಮದವರೂ ತಮ್ಮ ತಮ್ಮ ಧರ್ಮವೇನೆಂಬುದನ್ನು ತಿಳಿದುಕೊಳ್ಳಬೇಕಾದರೆ ಧರ್ಮಶಾಸ್ತ್ರವನ್ನು ನೋಡಬೇಕು. ಅದನ್ನೆಲ್ಲ ಈಗ ಇಲ್ಲಿ ಹೇಳಲಿಕ್ಕೆ ಸಮಯವಲ್ಲ. ತಮ್ಮ ಧರ್ಮಕ್ಕಿಂತಲೂ ಪರಧರ್ಮವು ಶ್ರೇಷ್ಠವೆಂದು ಮಾತ್ರ ಯಾರೂ ತಿಳಿಯಬಾರದು. ಆದುದರಿಂದ ಭಗವಂತನು ಗೀತೆಯಲ್ಲಿ

"श्रेयान् स्वधर्मो विगुणः परधर्मात्स्वनुष्ठितात्।
स्वधर्मे निधनं श्रेयः परधर्मो भयावहः॥"

ಎಂದು ಹೇಳಿದ್ದಾನೆ. ಎಲ್ಲರಿಗೂ ತಮ್ಮ ತಮ್ಮ ಧರ್ಮವೇ ಹೆಚ್ಚಿನದು. ತಮ್ಮದು ಹೆಚ್ಚಿನದೆಂದು ತಾವು ತಿಳಿದುಕೊಳ್ಳಬೇಕಾಗಿದ್ದರೂ ಎರಡನೆಯವರದು ಕಡಮೆಯದೆಂದು ಮಾತ್ರ ಹೀಯಾಳಿಸಬಾರದು.

"दृष्टं किमपि लोकेऽस्मिन् न निर्दोषं न निर्गुणम्"

ಎಂಬಂತೆ ಈ ಜಗತ್ತಿನಲ್ಲಿ ಏನೂ ದೋಷವಿಲ್ಲದ ವಸ್ತುವೂ ಯಾವದೂ ಇಲ್ಲ; ಅಥವಾ ಏನೂ ಗುಣವಿಲ್ಲದ್ದೂ ಯಾವದೂ ಇಲ್ಲ. ಎಲ್ಲ ವಸ್ತುವೂ ಕೆಲವು ದೋಷಗಳಿಂದಲೂ ಕೆಲವು ಗುಣಗಳಿಂದಲೂ ಕೂಡಿಯೇ ಇರುವದುಂಟು. ದೋಷಗಳಿಗಿಂತ ಗುಣಗಳು ಹೆಚ್ಚಾಗಿದ್ದರೆ ಅದು ಗುಣಿಯೆಂದೂ ಮತ್ತು ಗುಣಗಳಿಗಿಂತ ದೋಷಗಳು ಹೆಚ್ಚಾಗಿದ್ದರೆ ಅದು ದೋಷಿಯೆಂದೂ ಹೇಳಲ್ಪಡುವದು.

"कस्यापि कोऽप्यतिशयो यदि तेन सोऽर्थः
ख्यातिं प्रयाति न हि सर्वगुणास्तु सर्वे।
किं मल्लिका फलति किं पनसः सपुष्पः
किं नागवल्यपि च पुष्पफलैरुपेता॥"

ಎಂದಿರುವಂತೆ ಯಾವದಾದರೊಂದು ಪದಾರ್ಥದಲ್ಲಿ ಏನಾದರೊಂದು ಅತಿಶಯುವಿದ್ದರೆ ಅದು ಅದರಿಂದ ಪ್ರಸಿದ್ಧಿಗೆ ಬಂದಿರುತ್ತದೆ. ಎಲ್ಲ ಪದಾರ್ಥಗಳಲ್ಲಿಯೂ ಎಲ್ಲ ಗುಣಗಳೂ ಇರುವದಿಲ್ಲ. ಮಲ್ಲಿಗೆಯ ಬಳ್ಳಿಯು ಹಣ್ಣುಗಳನ್ನು ಬಿಡುವದೇನು? ಹಲಸಿನ ಮರಕ್ಕೆ ಹೂವಿರುವದೇನು? ವೀಳೆಯದೆಲೆಯ ಬಳ್ಳಿಗೆ ಹೂ ಮತ್ತು ಹಣ್ಣುಗಳೇನಾದರೂ ಇರುವವೇನು? ಹೀಗೆಯೇ ಎಲ್ಲ ಧರ್ಮಗಳಲ್ಲಿಯೂ ಕೆಲವು ಬಗೆಯ ದೋಷಗಳೂ ಕೆಲವು ತರದ ಗುಣಗಳೂ ಇರುವದು ಸ್ವಾಭಾವಿಕವೆ. ಆದರೂ ಆಯಾ ಜನರಿಗೆ ಅದದು ಉಪಯುಕ್ತವಾದುದೆಂಬುದನ್ನು ತಿಳಿದು ನಾವು ಯಾವ ಧರ್ಮವನ್ನೂ ದ್ವೇಷಿಸಬಾರದು; ಅಥವಾ ದೂಷಿಸಬಾರದು.

"चातुर्वर्ण्यं मया सृष्टं गुणकर्मविभागशः"

ಎಂದು ಭಗವಂತನು ಗೀತೆಯಲ್ಲಿ ಹೇಳಿರುವಂತೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ,

ಶೂದ್ರರೆಂಬ ನಾಲ್ಕು ವರ್ಣಗಳನ್ನೂ ಭಗವಂತನೇ ನಿರ್ಮಾಣ ಮಾಡಿದ್ದಾನೆ ಮತ್ತು ಆಯಾ ಬ್ರಾಹ್ಮಣಾದಿಗಳಿಗೆ ಅವರವರ ಗುಣಕ್ಕೆ ಅನುಸರಿಸಿ,

"ब्राह्मणक्षत्रियविशां शूद्राणां च परंतप।
कर्माणि प्रविभक्तानि स्वभावप्रभवैर्गुणैः॥"

ಎಂದು ಮುಂದೆ ಗೀತೆಯಲ್ಲಿ ತಾನು ಹೇಳಿರುವಂತೆ ಕರ್ಮಗಳನ್ನೂ ಅವನೇ ಗೊತ್ತುಮಾಡಿಕೊಟ್ಟಿದ್ದಾನೆ. ಹೀಗಿರುವಾಗ ಯಾವದಾದರೂ ವರ್ಣದವರನ್ನು ಅಥವಾ ಅವರ ಕರ್ಮಗಳನ್ನು ನಾವು ಧಿಕ್ಕರಿಸಿದರೆ ಭಗವಂತನನ್ನೆ ಅವಮಾನ ಮಾಡಿದಂತೆ ಆಗುವದು. ನಮ್ಮ ದೇಹಸ್ಥಿತಿಗೆ ಕೈ, ಕಾಲು, ಕಿವಿ, ಕಣ್ಣು, ಮೂಗು ಮೊದಲಾದ ಇಂದ್ರಿಯಗಳೆಲ್ಲ ಹೇಗೆ ಬೇಕಾಗಿರುವವೊ ಹಾಗೆಯೇ ಜಗತ್ತಿನ ಸ್ಥಿತಿಗೆ ಎಲ್ಲವರ್ಣಗಳೂ ಬೇಕಾಗಿರುವವು. ಎಲ್ಲರೂ ಬೇಕಾಗಿರುವಾಗ ಇಂಥವರು ಹೆಚ್ಚು ಇಂಥವರು ಕಡಮೆ ಎನ್ನುವದು ಏತರ ಮೇಲಿಂದ? ಯಾರು ಇಲ್ಲದಿದ್ದರೂ ಸಾಗಬಹುದೊ ಅವರಿಗೆ ಕಡಮೆಯುವರೆಂದು ಹೇಳಬಹುದು. ಆದರೆ ಹಾಗೆ ಯಾರು ಇದ್ದಾರೆ? ನಮಗೆ ಶ್ರಾದ್ಧಕ್ಕಾಗಿ ಬ್ರಾಹ್ಮಣರ ಅವಶ್ಯಕತೆಯು ಎಷ್ಟು ಇರುವದೊ ಅಷ್ಟೇ ಅಂಗಳದ ಕಸವನ್ನು ಹೊಡೆಯುವದಕ್ಕಾಗಿ ಹೊಲೆಯರದೂ ಇರುವದು. ಅಂದಮೇಲೆ ಎಲ್ಲರನ್ನೂ ಆದರಿಸಲೇ ಬೇಕು. ನಮ್ಮ ಪೂರ್ವಜರು ಹೀಗೆ ಒಬ್ಬರನ್ನೊಬ್ಬರು ಆದರಿಸುತ್ತಿದ್ದುದರಿಂದ ಆಗ ಈಗಿನ ಹಾಗೆ ನಾನು ಹೆಚ್ಚು ನೀನು ಹೆಚ್ಚು ಎಂದು ಜಗಳವಾಗುತ್ತಿರಲಿಲ್ಲ. ಆದರೆ ಈಗ ನಾವೇ ಎಲ್ಲರಿಗಿಂತಲೂ ಹೆಚ್ಚೆಂದು ಇತರರ ಮುಂದೆ ನಮಸ್ಕಾರ ಮಾಡಿರೆಂದು ಕಾಲುಗಳನ್ನು ಇಟ್ಟರೆ ಅವರು ತಮ್ಮ ಕಾಲುಗಳನ್ನು ನಮ್ಮ ತಲೆಯ ಮೇಲೆ ಇಡಲಿಕ್ಕೆ ಬಾರದೆ ಏಕೆ ಬಿಟ್ಟಾರು? ದೊಡ್ಡವರು ಎರಡನೆಯವರು ತಮಗೆ ಹೆಚ್ಚಿನವರೆಂದರೂ ತಾವು ಅವರಿಗೂ ಮಹತ್ತ್ವವನ್ನು ಕೊಟ್ಟು ಅವರನ್ನು ಪ್ರೀತಿಸುವರು. ಆದರೆ ತಮ್ಮಷ್ಟಕ್ಕೆ ತಾವೇ ಶ್ರೇಷ್ಠರೆಂದು ಹೇಳಿಕೊಳ್ಳುತ್ತ ಇತರರನ್ನು ತುಚ್ಛಮಾಡುವವರು ಹೇಗೆ ದೊಡ್ಡವರಾದಾರು? ಎರಡನೆಯವರ ಮನಸ್ಸನ್ನು ನೋಯಿ-

ಸದೆ ತನ್ನ ಧರ್ಮವನ್ನು ಕಾಪಾಡುವದೇ ದೊಡ್ಡಸ್ತಿಕೆಯು. ಈಗ ಸು-ಮಾರು ಮುನ್ನೂರು ವರ್ಷಗಳ ಹಿಂದೆ ಗೋದಾವರೀತೀರದಲ್ಲಿರುವ ಪೈಠಣ-ವೆಂಬ ನಗರದಲ್ಲಿ ಏಕನಾಥಸ್ವಾಮಿಗಳೆಂಬ ಒಬ್ಬ ಸಾಧುಶ್ರೇಷ್ಠರಿದ್ದರು. ಅವರು ಎಂದಿನಂತೆ ಒಂದುದಿನ ಮಧ್ಯಾನ್ಹಕಾಲದಲ್ಲಿ ನದಿಗೆ ಹೋಗಿ ಸ್ನಾನ ಮತ್ತು ಆನ್ಹಿಕಗಳನ್ನೆಲ್ಲ ತೀರಿಸಿಕೊಂಡು ಮಡಿಯಲ್ಲಿ ಮನೆಗೆ ಬರುತ್ತಿದ್ದರು. ದಾರಿಯಲ್ಲಿ ಒಂದು ಮರದ ಬುಡದಲ್ಲಿ ಒಬ್ಬನು ತಂಬಾಕನ್ನು ಹಾಕಿಕೊಳ್ಳುತ್ತ ಕುಳಿತಿದ್ದನು. ಏಕನಾಥಸ್ವಾಮಿಗಳು ಅಲ್ಲಿ ಹಾದು ಹೋಗುವ ಹೊತ್ತಿಗೆ ಸರಿಯಾಗಿ ಅವನು ಮುಂದುಗಾಣದೆ ಉಗುಳಿದನು. ಅದು ಏಕನಾಥ-ಸ್ವಾಮಿಗಳಿಗೆ ಸಿಡಿಯಿತು. ಇನ್ನೊಬ್ಬರಾಗಿದ್ದರೆ ಅವನ ಮೇಲೆ ಕಣ್ಣುಕೆಂಪಗೆ ಮಾಡಿ ಬೇಕಾದಷ್ಟು ಜಗಳವನ್ನು ಮಾಡುತ್ತಿದ್ದರು. ಏಕನಾಥಸ್ವಾಮಿಗಳು ಉಸಿರೆತ್ತದೆ ಸುಮ್ಮನೆ ಹಿಂದಿರುಗಿ ನದಿಗೆ ಹೋಗಿ ಮುಳುಗುಹಾಕಿದರು. ಕ್ಷುದ್ರಬುದ್ಧಿಯುಳ್ಳ ಆ ದಾರಿಕಾರನು ಏಕನಾಥಸ್ವಾಮಿಗಳಲ್ಲಿ ಗುಣಗ್ರಹಣ-ಮಾಡಿ ತನ್ನ ತಪ್ಪಿಗೆ ಪಶ್ಚಾತ್ತಾಪವನ್ನು ಹೊಂದುವದಕ್ಕೆ ಬದಲಾಗಿ "ನಾನು ಮತ್ತೆ ಮತ್ತೆ ಹೀಗೆಯೇ ಮಾಡುತ್ತೇನೆ. ಇವರು ಹೇಗೆ ಮಡಿಯನ್ನು ಉ-ಳಿಸಿಕೊಳ್ಳುತ್ತಾರೊ ನೋಡೋಣ" ಎಂದು ಕುಹಕವನ್ನು ಯೋಚಿಸಿಕೊಂಡು ಕುಳಿತು ಆಸಲ ಏಕನಾಥಸ್ವಾಮಿಗಳು ಬಂದ ಹೊತ್ತಿಗೆ ಸರಿಯಾಗಿ ಪ್ರಯತ್ನ-ಪೂರ್ವಕವಾಗಿ ಅವರ ಮೇಲೆ ಉಗುಳಿದನು. ಆ ಸ್ವಾಮಿಗಳು ಆಗಲೂ ಏನನ್ನೂ ಆಡದೆ ಮುಖದಲ್ಲಿ ಕೂಡ ಸಂಕೋಚವನ್ನು ತೋರಿಸದೆ ಮತ್ತೆ ನದಿಗೆ ಹೋಗಿ ಮುಳುಗಿ ಬಂದರು. ಅವರ ಸಮಾಧಾನಗುಣದ ಪ್ರಭಾವ-ವನ್ನು ಆ ನೀಚನು ತನ್ನ ಕುಚೇಷ್ಟೆಗೆ ಉಪಯೋಗ ಮಾಡಿಕೊಂಡು ಅವರು ಸ್ನಾನ ಮಾಡಿ ಮಾಡಿ ಬಂದ ಹಾಗೆಲ್ಲ ಅವರ ಮೇಲೆ ಉಗುಳುತ್ತಲೇ ಬಂದನು. ಅವರು ಪ್ರತಿಯಾಗಿ ಮಾತನ್ನು ಕೂಡ ಆಡದೆ ತಮಗೆ ಯಾವದೊಂದು ಅಪ-ಚಾರವೂ ಆಗದೆ ಇದ್ದರೆ ಹೇಗೋ ಹಾಗೆಯೇ ಮತ್ತೆ ಮತ್ತೆ ನದಿಗೆ ಹೋಗಿ ಮುಳುಗುಹಾಕಿ ಬರುತ್ತಿದ್ದರು. ಸಾಮಾನ್ಯ ಜನರಾದರೆ ಆ ಕುಹಕಿಯ ಮೇಲೆ ಸಿಟ್ಟು ಮಾಡುತ್ತಿದ್ದುದಿಷ್ಟೇ ಅಲ್ಲ; ಹೊಡೆದು ದೂರಕ್ಕೆ ಅಟ್ಟುತ್ತಿದ್ದರು. ನಮ್ಮ ಏಕನಾಥಸ್ವಾಮಿಗಳು ಹಾಗೆ ಎಷ್ಟುಮಾತ್ರವೂ ಮಾಡದೆ ತಮ್ಮ ಮಡಿ-

ಯನ್ನು ತಾವು ಕಾಪಾಡಿಕೊಳ್ಳುವ ಪ್ರಯತ್ನವೆಷ್ಟೋ ಅಷ್ಟನ್ನು ಮಾತ್ರ ಮಾಡುತ್ತಿದ್ದರು. ಸಾಯಂಕಾಲದವರೆಗೂ ಹೀಗೆಯೇ ನಡೆಯಿತು. ಸ್ನಾನಮಾಡಿ ಏಕನಾಥಸ್ವಾಮಿಗಳು ಬೇರೆ ಸೋಲಲಿಲ್ಲ; ಉಗುಳಿ ಉಗುಳಿ ಆ ನೀಚನು ಬೇಸರಪಟ್ಟು ಇವರ ಸಂಗಡ ಇನ್ನೆಷ್ಟುಮಾತ್ರವೂ ಈಪರಿಯ ಹಾಸ್ಯವು ಸಲ್ಲದೆಂದು ತನ್ನಲ್ಲಿ ತಾನೇ ಯೋಚಿಸಿ ಕೊನೆಗೆ ಏಕನಾಥಸ್ವಾಮಿಗಳ ಮುಂದೆ ಬಂದು ನಿಂತು "ಮಹಾರಾಜ, ತಿಳಿಯದೆ ನಾನು ಸುಮ್ಮನೆ ತಮಗೆ ತೊಂದರೆಯನ್ನು ಕೊಟ್ಟೆನು; ನನ್ನ ತಪ್ಪನ್ನು ಮನ್ನಿಸಬೇಕು" ಎಂದು ಶರಣು ಬಂದನು. ಆಗ ಕೂಡ ಏಕನಾಥಸ್ವಾಮಿಗಳು ಒಂದಾದರೂ ಬಿರುಮಾತಾಡದೆ "ಅಯ್ಯ, ನೀವು ನನಗೆ ಕೊಟ್ಟದ್ದು ಎಷ್ಟುಮಾತ್ರವೂ ತೊಂದರೆಯಲ್ಲ; ನಿತ್ಯವೂ ನಾನು ಒಂದುಸಲ ಮಾತ್ರ ಸ್ನಾನಮಾಡುತ್ತಿದ್ದೆನು. ನಿಮ್ಮ ದೆಸೆಯಿಂದ ಈ ದಿನ ನನಗೆ ಲೆಕ್ಕವಿಲ್ಲದಷ್ಟು ಗೋದಾವರೀ ಸ್ನಾನವಾಯಿತು" ಎಂದು ಹೇಳಿ ತಮ್ಮ ಸರಿಯಾದ ಮಡಿಯನ್ನು ತಾವು ಕಾದುಕೊಂಡು ಮನೆಗೆ ಬಂದರು. ಹೀಗೆ ನಾವು ನಡೆದರೆ ಎಷ್ಟು ಸೌಖ್ಯವಾದೀತು! ನಮ್ಮೆಲ್ಲರನ್ನೂ ಒಬ್ಬನೇ ಪರಮಾತ್ಮನು ನಿರ್ಮಾಣಮಾಡಿರುವದರಿಂದ ನಾವೆಲ್ಲರೂ ಅವನ ಮಕ್ಕಳಂತೆ ನಮ್ಮನಮ್ಮೊಳಗೆ ಪರಸ್ಪರವಾಗಿ ಬಂಧುಪ್ರೇಮದಿಂದ ವರ್ತಿಸಬೇಕು. "ಹಾಗಾದರೆ ಬ್ರಾಹ್ಮಣರು ಮುಂತಾದ ಭೇದವೇಕೆ? ಇತರ ದೇಶಗಳಲ್ಲಿ ಹೀಗೆ ಭೇದವೆಲ್ಲಿದೆ?" ಎಂದರೆ ಎಲ್ಲಿಯಾದರೂ ಒಂದುಬಗೆಯಲ್ಲದಿದ್ದರೆ ಮತ್ತೊಂದು ಬಗೆಯ ಭೇದವು ವ್ಯವಹಾರದಲ್ಲಿ ಉಂಟೇ ಉಂಟು. ಕ್ರಿಸ್ತೀಜನರಲ್ಲಿ ಪ್ರಾಟೆಸ್ಟಂಟ ಮೊದಲಾಗಿಯೂ ಮಹಮ್ಮದೀಯರಲ್ಲಿ ಶೇಕ, ಸಯ್ಯದ ಮೊದಲಾಗಿಯೂ ಭೇದಗಳಿಲ್ಲವೊ? "ಆ ಭೇದಗಳು ಅವರವರ ಅನ್ನಾದಿ ವ್ಯವಹಾರಕ್ಕೆಲ್ಲಿ ಅಡ್ಡಬರುತ್ತವೆ?" ಎಂದರೆ ನಿಜ. ನಮ್ಮ ಧರ್ಮಶಾಸ್ತ್ರಕಾರರು ಸತ್ವಾದಿಗುಣಗಳ ಕಡೆಗೆ ಹೆಚ್ಚು ಲಕ್ಷ್ಯವನ್ನು ಕೊಟ್ಟು ಹೀಗೆ ಭೇದ ಮಾಡಿದ್ದಾರೆ. ಅನ್ಯದೇಶದವರು ತಮ್ಮ ಧರ್ಮದಂತೆ ನಡೆಯಲಿ. ನಾವು ನಮ್ಮ ಧರ್ಮದಂತೆ ನಡೆಯುವ. ನಮ್ಮಲ್ಲಿಯೂ ಚಾತುರ್ವರ್ಣ್ಯದಿಂದ ಪರಸ್ಪರ ಪ್ರೇಮಕ್ಕೆ ಏನು ಭಂಗವೂ ಬರಲಾರದು. ನಮ್ಮೆಲ್ಲರಲ್ಲಿಯೂ ಸತ್ವಗುಣವೂ, ರಜೋಗುಣವೂ ಮತ್ತು ತಮೋಗುಣವೂ ಇರುವವು. ಒಬ್ಬರಲ್ಲಿ

ಸತ್ವಗುಣವು ಹೆಚ್ಚಾಗಿರುವದು. ಒಬ್ಬರಲ್ಲಿ ರಜೋಗುಣವು ಹೆಚ್ಚಾಗಿರುವದು. ಒಬ್ಬರಲ್ಲಿ ತಮೋಗುಣವು ಹೆಚ್ಚಾಗಿರುವದು.

"सत्वं सुखे संजयति रजः कर्मणि भारत।
ज्ञानमावृत्य तु तमः प्रमादे संजयत्युत॥"

ಎಂದು ಭಗವಂತನು ಗೀತೆಯಲ್ಲಿ ಈ ಮೂರುಗುಣಗಳ ವ್ಯಾಪಾರಗಳನ್ನೂ ಹೇಳಿದ್ದಾನೆ. ನಮ್ಮ ಮನಸ್ಸು ಪ್ರಸನ್ನವಾಗಿದ್ದು ಅದರಿಂದ ನಮಗೆ ಸುಖವಾಗುವದೇ ಸತ್ವಗುಣದ ವ್ಯಾಪಾರವು. ನಾವು ಆಯಾ ಕೆಲಸಗಳನ್ನು ಮಾಡುವ ಗಡಿಬಿಡಿಯಲ್ಲಿರುವದೇ ರಜೋಗುಣದ ವ್ಯಾಪಾರವು ಮತ್ತು ಪ್ರಮಾದದಿಂದ ಮೋಹಿತರಾಗಿ ಆಲಸ್ಯದಲ್ಲಿರುವದೇ ತಮೋಗುಣದ ವ್ಯಾಪಾರವು. ಈಪ್ರಕಾರ ನಾವು ಒಮ್ಮೆ ಹಾಗೆ ಒಮ್ಮೆ ಹೀಗೆ ಇರುವದೆಲ್ಲರಿಗೂ ಅನುಭೂತವಾದ ಮಾತೇ ಸರಿ. ಆದುದರಿಂದ ನಮ್ಮಲ್ಲಿ ಮೂರುಗುಣಗಳೂ ಇರುವವೆಂಬುದರಲ್ಲಿ ಸಂದೇಹವಿಲ್ಲ. ಒಬ್ಬರಲ್ಲಿ ಒಂದು ಗುಣವು ಹೆಚ್ಚು. ಮತ್ತೊಬ್ಬರಲ್ಲಿ ಮತ್ತೊಂದು ಗುಣವು ಹೆಚ್ಚು. ಹೀಗಿರುವದು ಕೂಡ ನಾವು ಸೂಕ್ಷ್ಮವಾಗಿ ನೋಡಿದರೆ ತಿಳಿದು ಬರುವದು. ಹೀಗೆ ಸ್ವಭಾವತಃ ಭೇದವಿರುವದರಿಂದಲೇ ಬ್ರಾಹ್ಮಣಾದಿವರ್ಣಭೇದವು ಮಾಡಲ್ಪಟ್ಟದೆ. ಈ ವರ್ಣಭೇದವು ಅವರವರ ವ್ಯವಹಾರದಲ್ಲಿಯೇ ಹೊರತು ಮುಕ್ತಿಸ್ಥಿತಿಯಲ್ಲಿ ಇಲ್ಲ. ಮುಕ್ತರಿಗೆ ವರ್ಣಾದಿಗಳ ಸಂಬಂಧವೆ ಇಲ್ಲ. ಅವರು,

"त्रैगुण्यविषया वेदा निस्त्रैगुण्यो भवार्जुन"

ಎಂದು ಭಗವಂತನು ಅರ್ಜುನನಿಗೆ ಉಪದೇಶಿಸಿದಂತೆ ತ್ರಿಗುಣಾತೀತರಾಗಿರುವದರಿಂದ ಅವರಿಗೆ ಏತರದೂ ಬಂಧನವಿಲ್ಲ. ಆದುದರಿಂದ ಬ್ರಾಹ್ಮಣಾದಿ ವರ್ಣಭೇದವು ಪರಮಾರ್ಥಸಾಧನೆಗೆ ಪ್ರತಿಬಂಧವಾಗಲಾರದು ಮತ್ತು ವ್ಯವಹಾರದಲ್ಲಿಯೂ ಆವರವರ ಪ್ರಕೃತಿಗೆ ಅನುಸಾರವಾಗಿ ವಿಧಿಸಲ್ಪಟ್ಟ ಅವರವರ ಧರ್ಮವು ಅವರಿಗೂ ಮತ್ತು ಪರರಿಗೂ ಹಿತವನ್ನು ಮಾಡುವಂತೆಯೇ ಇರುವದರಿಂದ ಬ್ರಾಹ್ಮಣಾದಿ ವರ್ಣವಿಭಾಗವು ಯಾವ ಪ್ರಕಾರದಿಂದಲೂ ಕೇಡು

ಮಾಡುವದಿಲ್ಲವೆಂಬುದಿಷ್ಟೇ ಅಲ್ಲ; ಒಳಿತನ್ನೇ ಮಾಡುವದು. ಜಗತ್ತಿನ ವ್ಯವ-ಹಾರಕ್ಕೆ ನಾಲ್ಕೂ ತರದ ಜನರು ಬೇಕು. ತಪಶ್ಚರ್ಯಾದಿಗಳನ್ನು ಮಾಡುತ್ತ ಜಗತ್ತಿನ ಹಿತವನ್ನೇ ಚಿಂತಿಸುವ ಬ್ರಾಹ್ಮಣರು ಬೇಕು; ದುಷ್ಟನಿಗ್ರಹ ಮತ್ತು ಶಿಷ್ಟಪರಿಪಾಲನೆ ಮಾಡುತ್ತ ಎಲ್ಲರನ್ನೂ ರಕ್ಷಿಸುವ ರಾಜರೂ ಬೇಕು; ಆಯಾ ದೇಶಗಳಿಂದ ಅಲ್ಲಲ್ಲಿಯ ಪದಾರ್ಥಗಳನ್ನು ತಂದು ವ್ಯಾಪಾರವನ್ನು ಬೆಳಸಿ ಜನರಿಗೆ ನಾನಾವಿಧವಸ್ತುಗಳನ್ನು ಪೂರೈಸಿಕೊಡುವ ವೈಶ್ಯರೂ ಬೇಕು; ಮತ್ತು ಹೊಲಮನೆಕೆಲಸಮುಂತಾದುವನ್ನು ಮಾಡುವ ಶೂದ್ರರೂ ಬೇಕು. "ಇದೆಲ್ಲ ನಿಜ. ಆದರೆ ಸರ್ವರಿಗೂ ತಮ್ಮ ತಮ್ಮ ಮನಸ್ಸಿಗೆ ಬಂದುದನ್ನು ಮಾಡಲಿಕ್ಕೆ ಸ್ವಾತಂತ್ರ್ಯವಿರಲಿ; ಬ್ರಾಹ್ಮಣಾದಿವರ್ಣಭೇದದಿಂದ ಕರ್ಮಗಳ ನಿರ್ಬಂಧವೇಕೆ?" ಎಂದರೆ ಈ ನಿರ್ಬಂಧದಿಂದಲೂ ಪ್ರಯೋಜನವುಂಟು. ಹೇಗೆಂದರೆ ವೈದ್ಯವಿದ್ಯೆಯು ಬಹುಕಾಲದಿಂದ ವೈದ್ಯವೃತ್ತಿಯಲ್ಲಿರುವವರ ಹುಡು-ಗರಿಗೆ ಹತ್ತುವದಕ್ಕೂ ಅದರ ಗಂಧವನ್ನೇ ಅರಿಯದವರ ಹುಡುಗರಿಗೆ ಹತ್ತುವ-ದಕ್ಕೂ ಎಷ್ಟು ಅಂತರವಿರುವದು! ಯೋಚಿಸಿರಿ. ಬಹುಕಾಲದಿಂದ ನಡೆದು-ಕೊಂಡು ಬಂದಿರುವ ವೈದ್ಯರ ಮನೆತನದವರ ಹುಡುಗರಿಗೆ ಸಹಜವಾಗಿ ಅದರಲ್ಲಿ ಪ್ರವೃತ್ತಿ ಇರುವದರಿಂದ ಯಾರೂ ಏನೂ ಹೇಳಿಕೊಡದಿದ್ದರೂ ಮನೆಯಲ್ಲಿ ಯಾ-ವಾಗಲೂ ನಡೆಯುತ್ತಿರುವ ವಿದ್ಯಮಾನವನ್ನು ನೋಡಿನೋಡಿಯೇ ಎಷ್ಟೋ ಬಂದಿರುತ್ತದೆ. ಇನ್ನು ಹೇಳಿಕೊಟ್ಟರಂತು ಬೆರಳು ತೋರಿಸಿದರೆ ಹಸ್ತವನ್ನು ನುಂಗುವಂತೆ ಸ್ವಲ್ಪ ಸೂಚನೆಯನ್ನು ಕೊಟ್ಟರೂ ಅದನ್ನು ಆಮೂಲಾಗ್ರವಾಗಿ ಗ್ರಹಿಸಿಬಿಡುತ್ತಾರೆ. ಎಂದೆಂದೂ ವೈದ್ಯವನ್ನು ಮಾಡಿ ಅರಿಯದ ಮನೆತನದ ಹುಡುಗರಿಗೆ ಎಷ್ಟು ಹೇಳಿಕೊಟ್ಟರೆ ತಾನೆ ಅಷ್ಟು ಸುಲಭವಾಗಿ ಬಂದೀತು! ಅವರ ಮನೋವ್ಯಾಪಾರವು ವೈದ್ಯದ ವಿಷಯವನ್ನು ಎಂದೂ ಕಂಡದ್ದಲ್ಲವಾದು-ದರಿಂದ ಅವರಿಗೆ ಅದರಲ್ಲಿ ಪ್ರವೃತ್ತಿಯೇ ಬಹುಮಟ್ಟಿಗೆ ಕಡಮೆ. ಒಂದು-ಪಕ್ಷ ಪ್ರವೃತ್ತಿಯಾದರೂ ಅವರಹಾಗೆ ಅನಾಯಾಸದಿಂದ ಇವರಿಗೆ ಗತಿಯಾ-ಗಲಾರದು. ಇದರಂತೆ ಗಾಯಕರ ಹುಡುಗರಿಗೂ ಚಿಕ್ಕಂದಿನಿಂದ ಮನೆಯಲ್ಲಿ ಗಾಯನವನ್ನು ಕೇಳಿಕೇಳಿ ಸಹಜವಾಗಿ ಅದರಲ್ಲಿ ಪ್ರವೃತ್ತಿಯುಂಟಾಗಿ ಅವರಿಗೆ ಗಾಯನವು ಸುಲಭವಾಗಿ ಸಾಧ್ಯವಾಗುವದು. ಒಂದೊಂದು ವೃತ್ತಿಯನ್ನು

ಒಂದೊಂದು ವರ್ಣದವರೇ ಅವಲಂಬಿಸಬೇಕೆಂದು ನಿರ್ಬಂಧಮಾಡುವದರಿಂದ ಆ ವೃತ್ತಿಯು ಆ ಮನೆತನದಲ್ಲಿ ವಂಶಪರಂಪರೆಯಿಂದ ನಡೆಯುತ್ತ ಬಂದು ಅಲ್ಲಿ ಹುಟ್ಟುವವರಿಗೆಲ್ಲ ಸಹಜವಾಗಿ ಅದರಲ್ಲಿ ಪ್ರವೃತ್ತಿಯನ್ನು ಹುಟ್ಟಿಸಿ ಅದ-ರಲ್ಲಿ ನಿಪುಣತೆಯನ್ನು ಪಡೆಯುವದಕ್ಕೂ ಮತ್ತು ಆ ವೃತ್ತಿಯನ್ನು ಹೆಚ್ಚು ಬೆಳಿಸುವದಕ್ಕೂ ಸಹಾಯಕಾರಿಯಾಗುವದು. ಆದುದರಿಂದ ವರ್ಣವಿಭಾ-ಗವು ಹಿತಕರವಾಗಿಯೇ ಇದೆ. ಅವರವರ ಗುಣಕ್ಕೆ ಅನುಸರಿಸಿ ಅವರವರ ವರ್ಣವನ್ನು ತಿಳಿಯಬೇಕೆಂದು ಕೆಲವರು ಅನ್ನುತ್ತಾರೆ. ಆದರೆ ಇದಕ್ಕೆ ಅನುಪಪತ್ತಿಯು ಬರುವದು. ಮನುಷ್ಯನ ಗುಣವು ಅವನು ಪ್ರೌಢವಯ-ಸ್ಸಿನವನಾಗುವವರೆಗೂ ನಿಶ್ಚಯಿಸಲಿಕ್ಕೆ ಬರಲಾರದು. ಆವರೆಗೂ ಅವನು ಯಾವ ವರ್ಣದವನೆಂದು ತಿಳಿದು ಅವನಿಗೆ ಸಂಸ್ಕಾರಗಳನ್ನು ಮಾಡಬೇಕು? ಈಗ ಒಬ್ಬ ಹುಡುಗನಿದ್ದಾನೆ. ಅವನ ನಿಜವಾದ ಗುಣವು ಪ್ರಕಾಶಕ್ಕೆ ಬರ-ಬೇಕಾದರೆ ಅವನು ದೊಡ್ಡವನಾಗಬೇಕು. ಅಲ್ಲಿಯವರೆಗೂ ನಾವು ಅವನಿಗೆ ಯಾವ ಸಂಸ್ಕಾರವನ್ನೂ ಮಾಡದೆ ಇರುವೆವೆಂದು ಭಾವಿಸುವ. ಅವನು ದೊಡ್ಡವನಾದಮೇಲೆ ಅವನಲ್ಲಿ ಹೆಚ್ಚು ಸತ್ವಗುಣವು ವ್ಯಕ್ತವಾಗಿ ಆಗ ಅವ-ನನ್ನು ಬ್ರಾಹ್ಮಣನೆಂದು ಕರೆಯಬೇಕಾದರೆ ಅವನಿಗೆ ಬ್ರಾಹ್ಮಣಿಕೆಯ ಸಂಬಂಧ-ವಾದ ಯಾವ ಸಂಸ್ಕಾರವೂ ಆಗಿರುವದಿಲ್ಲ. ಉಪನಯನಾದಿ ಸಂಸ್ಕಾರಗ-ಳಾದ ಹೊರತು ಬ್ರಾಹ್ಮಣನೆನ್ನುವದಕ್ಕೆ ಶಾಸ್ತ್ರವು ಅವಕಾಶವನ್ನು ಕೊಡುವ-ದಿಲ್ಲ. ಈಗ ಅಂಥ ಸಂಸ್ಕಾರಗಳನ್ನು ಮಾಡಬೇಕೆಂದರೆ ಕಾಲಾತೀತವಾಗಿ-ರುತ್ತದೆ. ಆದುದರಿಂದ ಜನ್ಮತಃ ಬಂದ ವರ್ಣವೆಂಬುದೊಂದು ಇರಲೇ ಬೇಕು. ಆಯಾ ವರ್ಣದ ಪದ್ಧತಿಯಂತೆ ಎಲ್ಲ ಸಂಸ್ಕಾರಗಳೂ ನಡೆಯಬೇಕು. ಇನ್ನು ಪ್ರೌಢ ವಯಸ್ಸಿಗೆ ಬಂದಮೇಲೆ ಅವನಲ್ಲಿ ಉತ್ತಮವರ್ಣದ ಗುಣಗಳು ಕಂಡುಬಂದರೆ ಅವನನ್ನು ಉತ್ತಮವರ್ಣಕ್ಕೆ ಸಮಾನನ್ನಾಗಿ ಭಾವಿಸಬಹುದು. ತನ್ನ ಜನ್ಮವನ್ನು ಸಾರ್ಥಕಮಾಡಿಕೊಳ್ಳಬೇಕೆಂಬುವನಿಗೆ ತಾನು ಯಾವ ವರ್ಣ-ದಲ್ಲಿ ಹುಟ್ಟಿರುವನೊ ಆ ವರ್ಣದ ಧರ್ಮವೇ ಸಾಕು. ತುಕಾರಾಮ ಎಂಬ ಪ್ರಸಿದ್ಧ ಸಾಧುಗಳು,

"बरा देवा कुणबी झालो नहीं तर दंभीं असतो मेलो"

"ನಾನು ಶೂದ್ರನಾದುದೇ ಉತ್ತಮವಾಯಿತು. ಇಲ್ಲದಿದ್ದರೆ ಒಣ [illegible] ಬಿದ್ದು ಸಾಯುತ್ತಿದ್ದೆನು" ಎಂದು ಅಂದಿದ್ದಾರೆ. ಹೀಗೆ ನಿರಭಿ- [illegible]ಳಾಗಿರುವದೇ ಇಂಥ ಮಹಾತ್ಮರ ಸ್ವಭಾವ. ಆಗರ್ಭಶ್ರೀಮಂತ- [illegible] ಮನುಷ್ಯನು ಉಡಿಗೆತೊಡಿಗೆಗಳಿಂದ ಬೆಡಗುಮಾಡಿಕೊಳ್ಳಬೇಕಾದಗ- [illegible]ೇನು? ಅವನೊಂದು ಸಣ್ಣ ಹರಕು ಪಂಚೆಯನ್ನುಟ್ಟರೆತಾನೆ ಅವನನ್ನು ಬಡವನೆಂದು ಯಾರು ಹೇಳುತ್ತಾರೆ? ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ತಾನು ಹಣಗಾರನೆನಿಸಿಕೊಳ್ಳಬೇಕೆಂಬ ದುರಭಿಮಾನಕ್ಕೆ ಬಿದ್ದವನಲ್ಲವೆ ಇಲ್ಲದ ಸೊಗ-ಸನ್ನು ಮಾಡಿಕೊಳ್ಳಬೇಕು. ಶೂದ್ರರೆಂದರೇನು ಸಾಮಾನ್ಯರೆ? ವಿಷ್ಣು-ಪುರಾಣದಲ್ಲಿ ನೋಡಿರಿ. ಒಂದುಕಾಲದಲ್ಲಿ ಋಷಿಗಳೆಲ್ಲರೂ ಸೇರಿ ಅಲ್ಪವಾಗಿ ಮಾಡಿದ ಧರ್ಮದಿಂದ ಮಹತ್ತಾದ ಫಲವು ಬರುವ ಕಾಲವಾವುದೆಂಬ ವಿಷ-ಯವಾಗಿ ಪರಸ್ಪರ ವಿಚಾರ ಮಾಡಿದರು. ತಮ್ಮ ತಮ್ಮಲ್ಲಿಯೇ ಇದರ ನೆಲೆ ಸಿಕ್ಕಲಿಲ್ಲ. ಆಗ ಎಲ್ಲರೂ ಗುಂಪು ಕೂಡಿ ವೇದವ್ಯಾಸರ ಬಳಿಗೆ ಈ ಶಂಕಾ-ಪರಿಹಾರವನ್ನು ಬಯಸಿ ಹೊರಟರು. ಇವರು ಬರುವ ಹೊತ್ತಿಗೆ ವೇದ-ವ್ಯಾಸರು ಗಂಗಾನದಿಯಲ್ಲಿಳಿದಿದ್ದರು; ಅರ್ಧ ಸ್ನಾನವಾಗಿತ್ತು. ಅವರು ಸ್ನಾನವನ್ನು ತೀರಿಸಿಕೊಂಡು ಬರಲೆಂದು ಇವರೆಲ್ಲರೂ ಅಲ್ಲಿ ಮರದ ಕೆಳಗೆ ವಿಶ್ರಮಿಸಿಕೊಂಡರು. ಆಗ ವೇದವ್ಯಾಸರು ಒಂದುಸಲ ಮುಳುಗಿ ಎದ್ದು "ಕಲಿಕಾಲವೇ ಶ್ರೇಷ್ಠ, ಕಲಿಕಾಲವೇ ಶ್ರೇಷ್ಠ, ಕಲಿಕಾಲವೇ ಶ್ರೇಷ್ಠ," ಎಂದು ಕೂಗಿದರು; ಇನ್ನೊಂದುಸಲ ಮುಳುಗಿ ಎದ್ದು "ಶೂದ್ರರು ಧನ್ಯರು, ಶೂದ್ರರು ಧನ್ಯರು, ಶೂದ್ರರು ಧನ್ಯರು" ಎಂದು ಉದ್ಘೋಷಿಸಿದರು; ಮತ್ತೊಂದು ಸಲ ಮುಳುಗಿ ಎದ್ದು "ಸ್ತ್ರೀಯರು ಭಾಗ್ಯಶಾಲಿಗಳು, ಸ್ತ್ರೀಯರು ಭಾಗ್ಯಶಾಲಿಗಳು, ಸ್ತ್ರೀಯರು ಭಾಗ್ಯಶಾಲಿಗಳು" ಎಂದು ಗಟ್ಟಿಯಾಗಿ ಹೇಳಿ ಆಮೇಲೆ ಯಥಾವಿಧಿ-ಯಾಗಿ ಸ್ನಾನವನ್ನು ತೀರಿಸಿಕೊಂಡು ತೀರಕ್ಕೆ ಬಂದರು. ಆಗ ಪರಸ್ಪರ ಕು-ಶಲಪ್ರಶ್ನೆಗಳಾದ ಮೇಲೆ ಋಷಿಗಳೆಲ್ಲರೂ "ಮಹರ್ಷಿಗಳಾದ ವೇದವ್ಯಾಸರೆ, ನಾವು ಒಂದಾನೊಂದು ಸಂಶಯವನ್ನು ಪರಿಹಾರಮಾಡಿಕೊಳ್ಳುವದಕ್ಕಾಗಿ ನಿಮ್ಮ ಬಳಿಗೆ ಬಂದೆವು. ಸದ್ಯ, ಆ ಸಂಶಯವೊಂದುಕಡೆ ಇರಲಿ; ಈಗ-ತಾನೆ ಇಲ್ಲಿಯೇ ಹೊಸ ಸಂಶಯವೊಂದು ಬಂದಿದೆ. ದಯವಿಟ್ಟು ಅದನ್ನು

ಮೊದಲು ಪರಿಹಾರಮಾಡಬೇಕು. ಅದೇನೆಂದರೆ—ತಾವು, ಕಲಿಕಾಲವು ಶ್ರೇಷ್ಠ, ಶೂದ್ರರು ಧನ್ಯರು, ಸ್ತ್ರೀಯರು ಭಾಗ್ಯಶಾಲಿಗಳು ಎಂದು ಸಾರಿ ಸಾರಿ ಹೇಳಿದಿರಲ್ಲ! ಅದು ಹೇಗೆ?" ಎನಲು ಆಗ ವೇದವ್ಯಾಸರು ಹೇಳುತ್ತಾರೆ. "ಮುನಿಶ್ರೇಷ್ಠರೆ, ಕೇಳಿರಿ. ಕೃತಯುಗದಲ್ಲಿ ಹತ್ತುವರ್ಷ ತಪಶ್ಚರ್ಯೆಯನ್ನು ಮಾಡಿದ ಫಲವು ತ್ರೇತಾಯುಗದಲ್ಲಿ ಹತ್ತು ತಿಂಗಳಲ್ಲಿಯೂ ದ್ವಾಪರದಲ್ಲಿ ಒಂದು ತಿಂಗಳಲ್ಲಿಯೂ ಕಲಿಯುಗದಲ್ಲಿ ಒಂದು ದಿನದಲ್ಲಿಯೂ ಲಭ್ಯವಾಗುತ್ತದೆ. ಕೃತಯುಗದಲ್ಲಿ ಧ್ಯಾನದಿಂದಲೂ, ತ್ರೇತಾಯುಗದಲ್ಲಿ ಯಜ್ಞದಿಂದಲೂ, ದ್ವಾಪರಯುಗದಲ್ಲಿ ಪೂಜೆಯಿಂದಲೂ ಬರುವ ಫಲವು ಕಲಿಯುಗದಲ್ಲಿ ನಾಮಸ್ಮರಣೆಯಿಂದ ಬರುತ್ತದೆ. ಗ್ರಾಹಕರಿಲ್ಲದಿರುವಾಗ ಯಾವದಾದರೂ ಅಮೌಲ್ಯವಾದ ವಸ್ತು ಅಗ್ಗವಾಗಿ ದೊರಕುವಂತೆ ಕಲಿಯುಗದಲ್ಲಿ ಸಾಧಕರು ವಿರಳವಾಗಿರುವಾಗ ಧರ್ಮವು ಸ್ವಲ್ಪವಾದ ಆಯಾಸದಿಂದಲೇ ಲಭಿಸುವದು. ಆದುದರಿಂದಲೇ ಕಲಿಕಾಲವೇ ಶ್ರೇಷ್ಠವೆಂದು ಹೇಳಿದೆನು. ಬ್ರಾಹ್ಮಣರು ವ್ರತಾಚರಣೆಗಳನ್ನು ಮಾಡಬೇಕು; ವೇದಾಧ್ಯಯನಗಳನ್ನು ಮಾಡಬೇಕು; ವಿಧ್ಯುಕ್ತವಾಗಿ ಯಾಗಮಾಡಬೇಕು. ಈ ಸಂದರ್ಭಗಳಲ್ಲೆಲ್ಲ ಬ್ರಾಹ್ಮಣರಿಗೆ ವ್ಯರ್ಥವಾದ ಕಥೆಗಳು, ವ್ಯರ್ಥವಾದ ಭೋಜನ, ವ್ಯರ್ಥವಾದ ಯಾತ್ರೆಗಳು ಮೊದಲಾದುವೆಲ್ಲ ಘಟಿಸುವವು; ಯಾವದೊಂದು ಕರ್ಮದಲ್ಲಿ ನ್ಯೂನತೆಯಾದರೂ ದೋಷಪ್ರಾಪ್ತಿಯಾಗುವದು; ತನಗಾಗಿ ಪಾಕವನ್ನು ಕೂಡ ಮಾಡುವ ಸ್ವಾತಂತ್ರ್ಯವಿಲ್ಲ;

"भुंजते तेत्वघं पापा ये पचंत्यात्मकारणात्"

ಎಂಬ ಗೀತೋಕ್ತಿಯಂತೆ ತನ್ನ ಹೊಟ್ಟೆಗೆಂದು ಅಡಿಗೆಮಾಡಿದರೆ ಕೂಡ ಪಾಪವು ಸಿದ್ಧವಾಗುವದು; ಮನಸ್ವಿಯಾಗಿ ಉಣ್ಣುವದಕ್ಕಿಲ್ಲ; ಮನಸ್ವಿಯಾಗಿ ವಿಹರಿಸುವದಕ್ಕಿಲ್ಲ. ಶೂದ್ರರಿಗೆ ಈ ನಿಯಮ ಯಾವದೂ ಇಲ್ಲ; ಬೇಕಾದ್ದು ತಿನ್ನಬಹುದು; ಬೇಕಾದ್ದು ಕುಡಿಯಬಹುದು; ಅದರಿಂದ ಅವರೇನೂ ಭ್ರಷ್ಟರಾಗುವದಿಲ್ಲ; ದೇವಬ್ರಾಹ್ಮಣರಲ್ಲಿ ವಿಶ್ವಾಸವನ್ನಿಟ್ಟುಕೊಂಡಿದ್ದರೆ ಸಾಕು; ಅವರು ಕೃತಾರ್ಥರಾಗುವರು. ಆದುದರಿಂದ ಶೂದ್ರರು ಧನ್ಯರೆಂದು ಹೇಳಿ-

ದೆನು. ಇನ್ನು ಸ್ತ್ರೀಯರ ವಿಷಯವಾದರೊ, ಪುರುಷರು ಹೊರಗೆ ಹೋಗಿ ದುಡಿಯಬೇಕು; ಸ್ವಧರ್ಮವನ್ನು ಕಾದುಕೊಂಡು ಧನವನ್ನು ಸಂಪಾದಿಸಬೇಕು; ಆದನ್ನು ವಿಚಾರಪೂರ್ವಕವಾಗಿ ಸದ್ವಿನಿಯೋಗ ಮಾಡಬೇಕು. ಸ್ತ್ರೀಯರು ಮನೆಯಲ್ಲಿ ಸುಖವಾಗಿ ಇದ್ದುಕೊಂಡು ಯಾವ ಕಷ್ಟ ಕಾರ್ಪಣ್ಯಗಳನ್ನೂ ಅನುಭವಿಸದೆ ತ್ರಿಕರಣಪೂರ್ವಕವಾಗಿ ಪತಿಶುಶ್ರೂಷೆಯೊಂದನ್ನು ಮಾಡಿಕೊಂಡಿದ್ದರೆ ಸಾಕು. ಅವರಿಗೆ ಉತ್ತಮಗತಿ ದಕ್ಕುವದು. ಆದುದರಿಂದ ಸ್ತ್ರೀಯರು ಭಾಗ್ಯಶಾಲಿಗಳೆಂದು ಹೇಳಿದೆನು." ಹೀಗೆ ವ್ಯಾಸರು ತಮ್ಮಭಿಪ್ರಾಯವನ್ನು ವಿವರಿಸಿ "ಇನ್ನು ನಿಮಗೆ ಪರಿಹಾರವಾಗಬೇಕಾಗಿರುವ ಸಂಶಯವು ಯಾವದು?" ಎಂದು ಋಷಿಗಳನ್ನು ಕೇಳಿದರು. ಆಗ ಋಷಿಗಳೆಲ್ಲರೂ ಅವರಿಗೆ ವಂದಿಸಿ "ಮಹರ್ಷಿಗಳೆ, ನಾವು ಪ್ರಶ್ನೆಯನ್ನು ಕೇಳುವದಕ್ಕೆ ಮೊದಲೆ ನಮಗೆ ಉತ್ತರವು ಸಿಕ್ಕಿಯೇ ಬಿಟ್ಟಿದೆ" ಎಂದು ಹೇಳಿ ಎಲ್ಲರೂ ಸಂತುಷ್ಟಾಂತರಂಗವನ್ನು ತೋರಿಸಿದರು. ಆಗ ವ್ಯಾಸರು "ಮುನಿಗಳಿರಾ, ಯುಗಗಳಲ್ಲಿ ಕಲಿಯುಗವು ಹೀನವೆಂದೂ ವರ್ಣಗಳಲ್ಲಿ ಶೂದ್ರವರ್ಣವು ಕೀಳೆಂದೂ ಸ್ತ್ರೀಪುರುಷರಲ್ಲಿ ಸ್ತ್ರೀಯರು ಕಡಮೆಯವರೆಂದೂ ಅನೇಕರು ದೂಷಿಸುತ್ತಾರೆ. ಅದು ಪ್ರಯೋಜನವಿಲ್ಲ. ಕಲಿಯುಗವೂ, ಶೂದ್ರರೂ, ಸ್ತ್ರೀಯರೂ ಹೇಗೆ ಧನ್ಯರೆಂಬ ವಿಷಯವನ್ನು ಮೇಲಣ ಅಭಿಪ್ರಾಯದಿಂದ ತಿಳಿಯಿರಿ. ಕಲಿಕಾಲದಲ್ಲಿ ಮತ್ತು ಸ್ತ್ರೀ ಶೂದ್ರರ ಸ್ವಧರ್ಮದಲ್ಲಿ ಅಲ್ಪವಾಗಿ ಮಾಡಿದ ಧರ್ಮದಿಂದ ಮಹತ್ತಾದ ಫಲವು ಬರುವದು" ಎಂದು ಮತ್ತೆ ತಿಳಿಯ ಹೇಳಿದರು. ಇರಲಿ. ಹೀಗೆ ಚೆನ್ನಾಗಿ ವಿಚಾರಮಾಡಿ ನೋಡಿದರೆ ಶೂದ್ರರ ಯೋಗ್ಯತೆಯು ತಿಳಿದು ಬರುವದು. ಹೆಸರಿಗೆ ಮಾತ್ರ ಬ್ರಾಹ್ಮಣರೆನಿಸುವ ನಮ್ಮಂಥವರಿಗಿಂತಲೂ ಶೂದ್ರರೇ ಶ್ರೇಷ್ಠರು. ಬ್ರಾಹ್ಮಣರೇನು? ಶೂದ್ರರೇನು? ಯಾರೇನು? ಆದಷ್ಟು ತಮ್ಮ ತಮ್ಮ ಧರ್ಮದಿಂದ ನಡೆದು ಜನ್ಮವನ್ನು ಸಾರ್ಥಕಮಾಡಿಕೊಂಡರಾಯಿತು. ಯಾವ ಧರ್ಮವೂ ಅನ್ಯರ ಕೂಡ ದ್ವೇಷಿಸಬೇಕೆಂದು ಹೇಳುವದಿಲ್ಲ. ದ್ವೇಷಮಾಡುವದು ಧರ್ಮವು ಹೇಗಾದೀತು? ದ್ವೇಷವು ಹೋಗಬೇಕಾದರೆ ವರ್ಣಭೇದಗಳನ್ನು ತೆಗೆದು ಹಾಕಬೇಕೆನ್ನುವದೂ ಯುಕ್ತವಲ್ಲ. ನಮ್ಮ ನಮ್ಮ ರೂಪಗಳಲ್ಲಿಯ ಭೇದವು

ಪ್ರೀತಿಗೆ ಪ್ರತಿಬಂಧವಾಗಲಾರದಂತೆ ವರ್ಣಗಳಲ್ಲಿಯು ಭೇದವೂ ಆಗಲಾರದು, ಕರ್ಮಗಳಲ್ಲಿಯು ಭೇದವೂ ಆಗಲಾರದು.

"व्यतिषजाति पदार्थानांतरः कोपि हेतुः
न खलु बहिरुपाधीन् प्रीतयः संश्रयंते॥"

ಎಂದು ಭವಭೂತಿಕವಿಗಳು ಅಂದಿರುವಂತೆ ಪ್ರೀತಿಯು ಹೊರಗಿನ ಉಪಾಧಿಗಳನ್ನು ಆಶ್ರಯಿಸುವದಿಲ್ಲ. ಆದರೆ ಒಳಗಿನದೊಂದು ಏನೋ ಮನಸ್ಸನ್ನು ಆಕರ್ಷಿಸುತ್ತದೆ. "Love begets love" ಎಂಬ ಆಂಗ್ಲೋಕ್ತಿಯಂತೆ ಪ್ರೀತಿಯು ಪ್ರೀತಿಯನ್ನು ಹುಟ್ಟಿಸುತ್ತದೆ. ಕೂಡಿ ಅನ್ನೋದಕವ್ಯವಹಾರವನ್ನು ಮಾಡಿದರೇನೇ ಪ್ರೀತಿ ಇರುವದೆಂದರೆ ಒಂದೇ ಮನೆಯಲ್ಲಿ ಒಂದೇ ಪಙ್ತಿಯಲ್ಲಿ ಒಂದೇ ಆಹಾರವನ್ನು ಅಥವಾ ಅಷ್ಟೇಕೆ ಒಬ್ಬ ತಾಯಿಯ ಹಾಲನ್ನೇ ಸೇವಿಸಿದರೂ ತಮ್ಮ ತಮ್ಮೊಳಗೇ ಬಡಿದಾಡುವವರು ಇಲ್ಲವೊ? ಕುದುರೆ ಮುಂತಾದವುಗಳು ಹುಲ್ಲು ಮುಂತಾದವುಗಳನ್ನು ತಿನ್ನುತ್ತಿದ್ದರೂ ನಾವು ಅನ್ನವನ್ನು ತಿನ್ನುತ್ತಿದ್ದರೂ ಅವು ನಮ್ಮ ಮೇಲೆ ಮತ್ತು ನಾವು ಅವುಗಳ ಮೇಲೆ ಪ್ರೀತಿಯನ್ನು ಮಾಡುವದಿಲ್ಲವೊ? ಆದುದರಿಂದ ನಾವು ಎಲ್ಲರೊಡನೆಯೂ ಪ್ರೀತಿಯಿಂದ ನಡೆಯುವದನ್ನು ಬಿಡದೆ ನಮ್ಮ ನಮ್ಮ ವರ್ಣಾಶ್ರಮಧರ್ಮದಂತೆ ನಡೆದು ಅದರಿಂದ ಭಗವಂತನನ್ನು ಸಂತೋಷಪಡಿಸಿ,

"स्वकर्मणा तमभ्यर्च्य सिद्धिं विंदति मानवः"

ಎಂದು ಭಗವಂತನು ಅಂದಂತೆ ಅವನ ಕೃಪೆಯಿಂದ ನಮ್ಮ ಜನ್ಮದ ಸಾರ್ಥಕತೆಯನ್ನು ಪಡೆಯಬೇಕು.

"वर्णाश्रमाचारवताः पुरुषेण परः पुमान्।
विष्णुराराध्यते पंथा नान्यत्तत्तोषकारणम्॥"

ಎಂದು ವಿಷ್ಣುಪುರಾಣದಲ್ಲಿ ಸ್ಪಷ್ಟವಾಗಿ ಹೇಳಿದಂತೆ ನಾವು ನಮ್ಮ ವರ್ಣಾಶ್ರಮ ಧರ್ಮದಿಂದಲೇ ಭಗವಂತನನ್ನು ಆರಾಧಿಸಬೇಕಲ್ಲದೆ ಅವನ ಪ್ರಸನ್ನತೆಗೆ

ಬೇರೆ ಯಾವದೂ ಮಾರ್ಗವಿಲ್ಲ. ಬ್ರಾಹ್ಮಣಾದಿವರ್ಣದವರ ಕರ್ಮಗಳನ್ನು ಭಗವಂತನು ಗೀತೆಯಲ್ಲಿ ಹದಿನೆಂಟನೆಯ ಅಧ್ಯಾಯದಲ್ಲಿ **"शमोदमस्तपशौचं"** ಎಂಬ ಮುಂತಾದ ಶ್ಲೋಕಗಳಲ್ಲಿ ಸ್ಪಷ್ಟವಾಗಿ ಹೇಳಿದ್ದಾನೆ. ವಿಷ್ಣುಪುರಾಣದಲ್ಲಿಯೂ ಮೂರನೆ ಅಂಶದ ಎಂಟನೆಯಧ್ಯಾಯದಲ್ಲಿ ಸರ್ವವರ್ಣಗಳ ಧರ್ಮಗಳೂ ಹೇಳಲ್ಪಟ್ಟಿವೆ; ಅಲ್ಲದೆ ಸರ್ವವರ್ಣಾಶ್ರಮಗಳಿಗೂ ಸಾಮಾನ್ಯವಾದ ಧರ್ಮಗಳೂ ತಿಳಿಸಲ್ಪಟ್ಟಿವೆ. ಹೇಗೆಂದರೆ,

"भृत्यादिभरणार्थाय सर्वेषां च परिग्रहः।
ऋतुकालाभिगमनं स्वदारेषु महीपते।
दया समस्तभूतेषु तितिक्षा नाभिमानिता।
सत्यं शौचमनायासो मंगलं प्रियवादिता।
मैत्र्यस्पृहा तथा तद्वदकार्पण्यं नरेश्वर।
अनसूया च सामान्या वर्णानां कथिता गुणाः।
आश्रमाणां च सर्वेषामेते सामान्यलक्षणाः॥"

ಅಂದರೆ—"ಅಯ್ಯ ಸಗರರಾಜನೆ ಕೇಳು. ತಮ್ಮ ಸೇವಕಾದಿಗಳ ಪೋಷಣಾರ್ಥವಾಗಿ ನ್ಯಾಯದಿಂದಲೇ ಧನವನ್ನು ಪರಿಗ್ರಹಮಾಡುವದು, ತಮ್ಮ ಸಹಧರ್ಮಿಣಿಯರಲ್ಲಿಯೇ ಋತುಕಾಲದಲ್ಲಿ ಮಾತ್ರ ರತಿಯೂ, ಎಲ್ಲ ಪ್ರಾಣಿಗಳಲ್ಲಿಯೂ ದಯೆಯೂ, ಸಹನಶೀಲತೆಯೂ, ನಿರಭಿಮಾನವೂ, ಸತ್ಯವೂ, ಪವಿತ್ರತೆಯೂ, ವ್ಯರ್ಥವಾಗಿ ಕಷ್ಟಪಡದೆ ಇರುವದೂ, ಕಲ್ಯಾಣಕರವಾದ ವರ್ತನವೂ, ಸರ್ವರ ಕೂಡ ಹಿತಕರವಾದ ಮಾತನ್ನಾಡುವದೂ, ಸರ್ವರ ಕೂಡ ಸ್ನೇಹವೂ, ಕಂಡಕಂಡದ್ದನ್ನು ಬಯಸದೆ ಇರುವದೂ, ಕೃಪಣತನವಿಲ್ಲದಿರುವದೂ ಮತ್ತು ಯಾರೊಡನೆಯೂ ಅಸೂಯೆಯನ್ನು ಮಾಡದಿರುವ-

ದೂ ಇವೇ ಎಲ್ಲ ವರ್ಣಗಳಿಗೂ ಮತ್ತು ಎಲ್ಲ ಆಶ್ರಮಗಳಿಗೂ ಸಾಮಾನ್ಯ-ವಾದ ಧರ್ಮಗಳು.

"अहिंसा सत्यमस्तेयं शौचमिंद्रियनिग्रहः।
एतं सामासिकं धर्मं चातुर्वर्ण्येऽब्रवीन्मनुः॥"

ಎಂದು ಮನುಸ್ಮೃತಿಯಲ್ಲಿ ನಾಲ್ಕುವರ್ಣಗಳ ಸಾಮಾನ್ಯಧರ್ಮವು ಹೇಳ-ಲ್ಪಟ್ಟಿದೆ. ಇನ್ನು

"अहिंसा सत्यमस्तेयमकामक्रोधलोभता।
भूतप्रियहितेहाच धर्मोऽयं सार्ववर्णिकः॥"

ಎಂದೂ ಮತ್ತು

"सत्यमस्तेयमक्रोधो ह्रीः शौचं धीर्धृतिर्दमः।
संयतेंद्रियता विद्या धर्मः सर्व उदाहृतः"

ಎಂಬದಾಗಿಯೂ ಆಯಾಸ್ಮೃತಿಯಲ್ಲಿ ಸರ್ವವರ್ಣಗಳ ಸಾಮಾನ್ಯಧರ್ಮದ ಲಕ್ಷಣವು ಕಂಡುಬರುವದು. ನಾವು ಸರ್ವವರ್ಣದವರೂ ಇದನ್ನರಿತು ಎಲ್ಲರೂ ಪರಸ್ಪರಪ್ರೀತಿಯಿಂದಿದ್ದು ನಮ್ಮ ನಮ್ಮ ಶಕ್ತ್ಯನುಸಾರವಾಗಿ ಪ್ರವೃತ್ತಿ-ರೂಪವಾದ ಅಥವಾ ನಿವೃತ್ತಿರೂಪವಾದ ಧರ್ಮವನ್ನು ಆಚರಿಸಿ ಸುಖದಿಂದಿ-ರುವದೇ ನಮ್ಮ ಕರ್ತವ್ಯವು.

ಈ ನಮ್ಮ ಕರ್ತವ್ಯರೂಪವಾದ ಧರ್ಮವು ಕಲ್ಪವೃಕ್ಷದಂತೆ ಇದೆ. ನಾವು ಏನಾದರೂ ಇಚ್ಛೆಯಿಂದ ಯಾವದಾದರೂ ಕರ್ಮವನ್ನು ಯಥಾವಿಧಿಯಾಗಿ ಮಾಡಿದರೆ ಅದರಿಂದ ನಮ್ಮ ಮನೋರಥವೇನೋ ಪೂರ್ಣವಾಗುವದು. ಆದರೆ ಇಂಥ ಕರ್ಮವೇ ನಮಗೆ ಬಂಧನವಾಗುವದು. ನೋಡಿರಿ. ಪ್ಲೇಗಿನ ದಿವಸಗಳಲ್ಲಿ ಊರ ಹೊರಗೆ ಗುಡಿಸಲಿನಲ್ಲಿ ವಾಸಮಾಡುವ ಸಮಯಬಂದಾಗ ನಾವು ಮನೆಯನ್ನು ಬಿಟ್ಟು ಹೊರಡುವದಕ್ಕೆ ಸ್ಥಿರಮುಹೂರ್ತವನ್ನು ಹುಡು-

ಕುತ್ತೇವೆ. ಏಕೆಂದರೆ ನಾವು ಮೊದಲು ಒಂದು ಗುಡಿಸಲಿಗೆ ಹೋದರೆ ಅಲ್ಲಿಗೂ ಸೋಂಕು ತಗಲಿ ಮತ್ತೆ ನಾವು ಅಲ್ಲಿಂದ ಇನ್ನೊಂದುಕಡೆ ಬಿಡಾರವನ್ನು ಎತ್ತಬೇಕಾದ ಪ್ರಸಂಗವು ಬರಬಾರದೆಂದು ನಮ್ಮ ಉದ್ದೇಶವಿರುತ್ತದೆ. ಆದರೆ ನಾವು ಸರ್ವಪ್ರಯತ್ನದಿಂದಲೂ ನಿಜವಾಗಿಯೇ ಆ ಸ್ಥಿರಮುಹೂರ್ತವನ್ನು ಸಾಧಿಸಿ ಮನೆಯಿಂದ ಹೊರಟರೆ ಗುಡಿಸಲಿನ ವಾಸವೇ ಸ್ಥಿರವಾಗಿ ಊರಲ್ಲಿ ಪ್ಲೇಗು ಬಹುಕಾಲ ನೆಲಸಿರುವದನ್ನು ನಾವು ಬಯಸಿದಂತೆ ಪರಿಣಮಿಸುತ್ತದೆ. ಹೀಗೆ ಯಾವದಾದರೊಂದು ಹೇತುವಿನಿಂದ ಮಾಡುವ ಕರ್ಮವು ತನ್ನ ಫಲವನ್ನು ಅನುಭವಕ್ಕೆ ತಂದು ಕೊಡುವದಕ್ಕೆ ನಮಗೆ ಜನ್ಮಜನ್ಮಾಂತರಗಳನ್ನು ಕೊಡಲಿಕ್ಕೆ ಕಾರಣವಾಗಿ ಬಂಧನವಾಗುವದು. ಆದುದರಿಂದ ಭಗವತ್ಪ್ರೀತ್ಯರ್ಥವಾಗಿ ನಿಷ್ಕಾಮಕರ್ಮವನ್ನು ಮಾಡಬೇಕು. ಹಾಗಾದರೆ ನಮ್ಮ ಯೋಗಕ್ಷೇಮವು ಹೇಗೆ ಸಾಗಬೇಕೆಂದರೆ ಭಗವಂತನೇನು ಕಣ್ಣು ಮುಚ್ಚಿಕೊಂಡು ಕುಳಿತಿರುವನೊ? ತನ್ನನ್ನೇ ನಂಬಿದ ನಮ್ಮನ್ನು ಉಪೇಕ್ಷಿಸಿಯಾನೆ?

"अनन्याश्चिंतयंतो मां ये जनाः पर्युपासते।
तेषां नित्याभियुक्तानां योगक्षेमं वहाम्यहं॥

ಎಂದು ಭಗವಂತನು ತನ್ನ ಮುಖದಿಂದಲೇ ಹೇಳಿಲ್ಲವೆ? ಜಗತ್ತನ್ನೇ ಸಂರಕ್ಷಿಸುವ ಭಗವಂತನಿಗೆ ನಾವೇನು ಭಾರವೆ? "ಹುಟ್ಟಿಸಿದ ದೇವ ಕೂಳನು ಬೆಟ್ಟದ ಮೇಲಿರಲು ಕೊಟ್ಟು ಸಲಹುತ್ತಿರ್ಪಂ" ಎಂಬ ಮಾತಿನ ಸತ್ಯತೆಯು ನಮಗೆ ಎಷ್ಟೋ ವೇಳೆ ವ್ಯಕ್ತವಾಗುವದು. ಶಿವಾಜಿರಾಜನು ಒಂದು ಬೆಟ್ಟದ ಮೇಲೆ ಒಂದು ಸಾರ್ವಜನಿಕಧರ್ಮಕಾರ್ಯವನ್ನು ಕೈಕೊಂಡು ಆ ಕೆಲಸವನ್ನು ಸಾವಿರಾರು ಕೂಲಿಜನರಿಂದ ಸಾಗಿಸುತ್ತಿದ್ದನು. ಆ ಕಾರ್ಯವು ಮುಂದೆ ಜನಗಳಿಗೆ ಹಿತಕರವಾಗುವ ಮಾತೊಂದುಕಡೆ ಇರಲಿ. ಸದ್ಯದಲ್ಲಿಯೇ ಬಡಬಗ್ಗರಾದ ಸಾವಿರಾರು ಜನರು ಅಲ್ಲಿ ದುಡಿದು ತಮ್ಮ ಹೊಟ್ಟೆಯನ್ನು ಹೊರೆದುಕೊಳ್ಳುವದಕ್ಕೆ ಇದೊಂದು ದೊಡ್ಡ ಆಶ್ರಯವಾಗಿತ್ತು. ಹೀಗೆ ಆ ಕೆಲಸವು ನಡೆಯುತ್ತಿರುವಾಗ ಅದರ ಸಮೀಪಸ್ರಾಂತಕ್ಕೆ ಆ ರಾಜನ

ಗುರುಗಳಾದ ಶ್ರೀರಾಮದಾಸಸ್ವಾಮಿಗಳ ಸವಾರಿಯು ಬಂದಿತ್ತು. ಇಂಥ ಮಹತ್ಕಾರ್ಯವನ್ನು ಕೈಕೊಂಡು ಅನೇಕರ ಯೋಗಕ್ಷೇಮದ ಭಾರವನ್ನು ನಿರ್ವಹಿಸುತ್ತಿರುವ ತನ್ನ ಪ್ರತಿಷ್ಠೆಯನ್ನು ತನ್ನ ಗುರುಗಳಿಗೆ ತೋರಿಸಬೇಕೆಂದು ಆರಾಜನು ತಾನೇಹೋಗಿ ತನ್ನ ಗುರುಗಳನ್ನು ಕರೆದುಕೊಂಡು ಬಂದು ಅಲ್ಲಿನ ವಿದ್ಯಮಾನವನ್ನೆಲ್ಲ ತೋರಿಸಿದನು. ಶಿಷ್ಯನ ಮನಸ್ಸಿನಲ್ಲಿ ಅಭಿಮಾನವು ಅಂಕುರಿಸಿರುವ ವಿಚಾರವು ಸರ್ವಜ್ಞರಾದ ಆ ಗುರುಗಳಿಗೆ ತಿಳಿಯಿತು. ಆಗ ಅವರು ಅದನ್ನು ಕಳೆಯಬೇಕೆಂದು ತಮ್ಮ ಮನಸ್ಸಿನಲ್ಲಿಯೇ ಯೋಚಿಸಿ "ರಾಜನೆ, ನೀನು ಎಂಥ ಧರ್ಮಿಷ್ಠನು! ಎಷ್ಟು ಮಹತ್ತ್ವದ ಧರ್ಮಕಾರ್ಯವನ್ನು ಕೈಕೊಂಡಿರುವೆ! ಎಷ್ಟು ಜನ ಅನಾಥರಿಗೆ ಜೀವನದಾತನಾಗಿರುತ್ತಿ! ನೀನು ಧನ್ಯನು, ಧನ್ಯನು." ಎಂದು ಮಾತಾಡುತ್ತ ಆಡುತ್ತ "ಎಲ್ಲಿ ನಿನ್ನ ಆಳುಗಳಿಂದ ಇಲ್ಲಿ ಕಾಣುವ ಬಂಡೆಯನ್ನು ಮೆಲ್ಲಗೆ ಸೀಳಿಸು" ಎಂದು ಹೇಳಿದರು. ರಾಜನು ಆಪ್ರಕಾರ ಮಾಡಿಸಿದನು. ಬಂಡೆಯನ್ನು ಸೀಳುತ್ತಿರುವಾಗ ಆದರ ಮಧ್ಯದಿಂದ ಒಂದು ಕಪ್ಪೆಯು ಟಣಕ್ಕನೆ ಕುಪ್ಪಳಿಸುತ್ತ ಮುಂದೆ ಬಂತು. ಆದು ಇದ್ದ ಸ್ಥಳವನ್ನು ಹುಡುಕಲಾಗಿ ಬಂಡೆಯ ಗರ್ಭದಲ್ಲೊಂದು ಸಣ್ಣ ಪೊಳ್ಳಿನಲ್ಲಿ ಆ ಕಪ್ಪೆಗೆ ಆಧಾರವಾಗಿ ನೀರು ಕೂಡ ನಿಂತಿತ್ತು. ಆಗ ಗುರುಗಳು ಅದನ್ನು ತಮ್ಮ ಶಿಷ್ಯನಿಗೆ ತೋರಿಸಿ "ರಾಜನೆ, ಈ ಕಪ್ಪೆಗೆ ಈ ಬಂಡೆಯ ಗರ್ಭದಲ್ಲಿ ಜೀವನವನ್ನು ಕಲ್ಪಿಸಿದವನೂ ನೀನೇನೊ?" ಎಂದು ಪ್ರಶ್ನೆ ಮಾಡಿದರು. ಆಗ ಆ ರಾಜನು ಅದು ತನ್ನ ಅಭಿಮಾನವನ್ನು ನಿರಸನ ಮಾಡುವದಕ್ಕೆ ನಡೆಸಿದ ಕಾರ್ಯವೆಂದು ತಿಳಿದು ಗುರುಗಳಿಗೆ ಅಡ್ಡಬಿದ್ದನು. ಆಗ ಶ್ರೀರಾಮದಾಸಸ್ವಾಮಿಗಳು,

"अम्हि काय कुणाचें खातो रे श्रीराम अम्हालां देतो रे"

ಎಂದು ಮುಂತಾಗಿ ಶ್ರೀರಾಮನೇ ನಮ್ಮನ್ನು ರಕ್ಷಿಸುತ್ತಾನೆಂಬ ಅರ್ಥದ ಹಾಡನ್ನು ರಚಿಸಿದರು. ಈ ಸಂಗತಿಯ ಮೇಲಿಂದ ಹೇಗಾದರೂ ದೇವರು ನಮ್ಮನ್ನು ರಕ್ಷಿಸುವನೆಂಬುದೇ ತಿಳಿದುಕೊಳ್ಳತಕ್ಕ ಅಂಶವಾಗಿದೆ. ನಾವು ಸೋಮಾರಿಗಳಾಗಿ ಕೂಡಬೇಕೆಂದು ನನ್ನ ಅಭಿಪ್ರಾಯವಲ್ಲ. ಪರಮಾರ್ಥ-

ವೂ ಇಲ್ಲ, ಪ್ರಪಂಚವೂ ಇಲ್ಲ, ಹೀಗೆ ಆಲಸ್ಯದಿಂದ ಹೇಗಾದರೂ ಹೊಟ್ಟೆ-ಯನ್ನು ಹೊರೆಯುವದು ಮನುಷ್ಯರಿಗೆ ಲಾಂಛನವು. ನಾವು ಅವಶ್ಯವಾಗಿ ನಮ್ಮ ಚರಿತಾರ್ಥಕ್ಕೋಸ್ಕರ ಉದ್ಯೋಗವನ್ನು ಮಾಡಲೇಬೇಕು. ಕೆಲವು ಜನರು ಭಿಕ್ಷವೇ ತಮಗೆ ವಂಶಪರಂಪರೆಯಿಂದ ಬಂದ ವೃತ್ತಿಯೆಂದೂ ತಾವು ಯಾವ ಕೆಲಸಕ್ಕೂ ಕೈಹಾಕತಕ್ಕದ್ದಿಲ್ಲವೆಂದೂ ಹೇಳುತ್ತ ಕೈಕಾಲುಮೊದಲಾದ ಅವಯುವಗಳೆಲ್ಲ ದೃಢವಾಗಿ ನೆಟ್ಟಗಿದ್ದರೂ ಇತರ ಗೃಹಸ್ಥರಿಗೆ ಭಾರವಾಗಿ, ತಮ್ಮ ಸೋಮಾರಿತನವನ್ನೇ ಘನತೆಯಾಗಿ ಭಾವಿಸಿ, ಭಿಕ್ಷೆಯನ್ನು ನೀಡದವ-ರನ್ನು ದೂರುತ್ತ ತಿರುಪವನ್ನು ಮಾಡುತ್ತಿರುವರು. ಇಂಥ ಸೋಮಾರಿಜನ-ಗಳು ಹೆಚ್ಚುವದರಿಂದ ದೇಶಕ್ಕೊಂದು ಹಾನಿಯೇ ಸರಿ. ತಿರುಪಕ್ಕೆ ಬಂದವ-ರಿಗೆ ಭಿಕ್ಷೆಯನ್ನು ನೀಡುವದು ಪ್ರತಿಯೊಬ್ಬ ಗೃಹಸ್ಥನ ಧರ್ಮವಾದರೂ ಆಲಸ್ಯದಿಂದ ಕಾಲವನ್ನು ಕಳೆಯುತ್ತ ಹೊಟ್ಟೆಯನ್ನು ತುಂಬಿಕೊಳ್ಳುವವರು ಭಿಕ್ಷೆಗೆ ಪಾತ್ರರೆನಿಸಿಕೊಳ್ಳಲಾರರು. ಭಿಕ್ಷೆಗೆ ಮೂರು ಬಗೆಯ ಜನರು ಸತ್ಪಾ-ತ್ರರೆಂದು ಹೇಳಬಹುದು. ಒಂದನೆಯವರು ವಿದ್ಯಾಭ್ಯಾಸಂಗದಲ್ಲಿರುವವರು. ಎರಡನೆಯವರು ಸ್ವಾರ್ಥವಿಲ್ಲದೆ ತಪಶ್ಚರ್ಯೆಯನ್ನು ಮಾಡಿಕೊಂಡಿರುವವರು. ಮೂರನೆಯವರು ಅಂಗಹೀನರು. ಈ ಮೂರು ತರದ ಜನರು ತಮ್ಮ ಶರೀರಪೋಷಣೆಗೆ ಸಾಕಾದಷ್ಟು ಮಾತ್ರ ಎಂಥದ್ದಾದರೂ ಅನ್ನವನ್ನು ತಿರಿದು-ಣ್ಣಲಿಕ್ಕೆ ಅಧಿಕಾರಿಗಳು. ಉಳಿದವರು ತಮ್ಮ ತಮ್ಮ ಹೊಟ್ಟೆಯ ಸಲುವಾಗಿ ತಾವು ದುಡಿಯಲೇ ಬೇಕು. "He that does not work has no right to eat" ಎಂಬ 'ಆಂಗ್ಲೋಕ್ತಿಯಂತೆ ದುಡಿಯದಿದ್ದವನಿಗೆ ತಿನ್ನಲಿಕ್ಕೆ ಅಧಿಕಾರವೇ ಇಲ್ಲ. ನಾವು ಎರಡನೆಯವರ ಮೇಲೆ ಸುಮ್ಮನೆ ನಮ್ಮ ಭಾರವನ್ನು ಹಾಕಬಾರದು. ನಮ್ಮ ಚರಿತಾರ್ಥದ ಮಾರ್ಗವನ್ನು ನಾವೇ ಹಿಡಿಯಬೇಕು. ಆದರೆ ನಾವೇ ನಮ್ಮದನ್ನು ಮಾಡಿಕೊಳ್ಳುತ್ತೇ-ವೆಂದು ಅಭಿಮಾನವನ್ನು ಮಾತ್ರ ಮಾಡಬಾರದು. ಭಗವಂತನೇ ಎಲ್ಲವನ್ನೂ ಮಾಡಿಸುವನೆಂಬದನ್ನು ಯಾವಾಗಲೂ ನೆನಪಿನಲ್ಲಿಟ್ಟಿರಬೇಕು. ಒಬ್ಬ ಯೋ-ಗಾಭ್ಯಾಸಮಾಡುವ ಬ್ರಹ್ಮಚಾರಿಯು ಪ್ರತಿದಿನವೂ ಮಾಧುಕರಿಗೆ ಹೋಗು-ತ್ತಿದ್ದನು. ಅವನು ಒಂದುದಿನ ಹೋದಾಗ ಒಂದುಮನೆಯಲ್ಲಿ ಇಬ್ಬರು

ತರುಣಸ್ತ್ರೀಯರ ಸಂಭಾಷಣವು ನಡೆದಿತ್ತು. ಅವರಲ್ಲಿ ಒಬ್ಬಳು ಇನ್ನೊಬ್ಬ-ಳಾದ ತನ್ನ ಗೆಳತಿಯನ್ನು ಕುರಿತು ವಿನೋದದಿಂದ "ನಿನ್ನ ಎದೆಯ ಮೇಲೆ ದುಂಡಗೆ ಕಟ್ಟಿಕೊಂಡಿರುವವೇನು?" ಎಂದು ಕೇಳಿದಳು. ಆಕೆಯು "ಗೆಳತಿ, ಇವು ಮುಂದೆ ನನ್ನ ಹೊಟ್ಟೆಯಲ್ಲಿ ಹುಟ್ಟುವ ಮಕ್ಕಳಿಗಾಗಿ ದೇವರು ಕೊಟ್ಟಿ-ರುವ ಹಾಲಿನ ಬಟ್ಟಲುಗಳು" ಎಂದು ಉತ್ತರವನ್ನು ಕೊಟ್ಟಳು. ಈ ಮಾತು ಆ ಬ್ರಹ್ಮಚಾರಿಯ ಕಿವಿಗೆ ಬೀಳುತ್ತಲೇ ಅವನು "ಆಹಾ, ದೇವರು ಮುಂದೆ ಹುಟ್ಟುವ ಮಗುವಿಗಾಗಲೇ ಹಾಲಿನ ಬಟ್ಟಲನ್ನು ಸಿದ್ಧಮಾಡಿರುವನೆ? ಅವನು ಇಷ್ಟು ಜಾಗರೂಕನಾಗಿ ನಮ್ಮ ಯೋಗಕ್ಷೇಮವನ್ನು ನೋಡಿಕೊಳ್ಳುತ್ತಿರು-ವಾಗ ನಮ್ಮ ಆಹಾರವನ್ನು ನಾವು ಹುಟ್ಟಿಸಿಕೊಳ್ಳುತ್ತೇವೆಂದು ಹೋಗುವದು ಎಂಥ ದಡ್ಡತನ!" ಎಂದು ಯೋಚಿಸಿ ಅಂದಿನಿಂದ ಮಾಧುಕರಿಗೆ ಹೋಗುವ-ದನ್ನು ಕೂಡ ಬಿಟ್ಟನು. ಅವನು ನಿಜವಾಗಿ ನಿಷ್ಠಾವಂತನಾಗಿದ್ದುದರಿಂದ ಅವನು ಇದ್ದ ಕಡೆಗೇ ಜನರು ತಾವಾಗಿಯೇ ತಮ್ಮ ತಮ್ಮ ಮನೆಯಿಂದ ಅನ್ನವನ್ನು ತೆಗೆದುಕೊಂಡುಹೋಗಿ ಕೊಡುತ್ತ ಬಂದರು. ನಮಗೂ ಹಾಗೆ ದೇವರಲ್ಲಿ ಪೂರ್ಣನಿಷ್ಠೆ ಇದ್ದರೆ ಅನ್ನಚಿಂತೆಯನ್ನು ಮಾಡುವ ಕಾರಣವೇ ಇಲ್ಲ. ಇರಲಿ. ನಾವು ಭಗವಂತನನ್ನು ದೃಢವಾಗಿ ನಂಬಿ ಅವನ ಪ್ರೀತ್ಯರ್ಥವಾಗಿ ನಿಷ್ಕಾಮಕರ್ಮವನ್ನು ಮಾಡಹತ್ತಿದರೆ ನಮಗೆ ಏನೂ ತೊಂದರೆ ಬಾರದೆ ನಾವು ಕರ್ಮಬಂಧನದಿಂದ ಪಾರಾಗುವೆವು. ಆದುದರಿಂದಲೇ ಭಗವಂತನು

"यज्ञार्थात्कर्मणोऽन्यत्र लोकोऽयं कर्मबंधनः।"
तदर्थं कर्म कौंतेय मुक्तसंगः समाचर॥"

ಎಂದು ಗೀತೆಯಲ್ಲಿ ಉಪದೇಶಿಸಿದ್ದಾನೆ. ನಾವು ಏನಾದರೂ ಸತ್ಕರ್ಮವನ್ನು ಯಾವದಾದರೂ ಫಲದ ಇಚ್ಛೆಯಿಂದ ಮಾಡಿದರೆ ಭಗವಂತನು ಆ ಫಲವನ್ನೇ-ನೋ ನಮಗೆ ಕೊಡುತ್ತಾನೆ. ಆದರೆ ಯಾವ ಫಲವನ್ನೂ ಇಚ್ಛಿಸದೆ ಭಗ-ವತ್ಪ್ರೀತ್ಯರ್ಥವಾಗಿ ಸತ್ಕರ್ಮವನ್ನು ಮಾಡಿದರೆ ಭಗವಂತನು ಸಂತುಷ್ಟನಾಗಿ ನಾವು ಏನೂ ಬೇಡದಿದ್ದರೂ ತನಗೆ ಉತ್ತಮವೆಂದು ಕಂಡ ಪದಾರ್ಥವನ್ನು

ನಮಗೆ ಕೊಟ್ಟೇ ಕೊಡುವನು. ಸಕಾಮವಾಗಿ ಮಾಡಲಿ ಅಥವಾ ನಿಷ್ಕಾ-ಮವಾಗಿ ಮಾಡಲಿ; ಹೇಗಾದರೂ ಕರ್ಮದ ಫಲವು ದೊರೆತೇ ದೊರೆಯುವದು. ಆದರೆ ನಾವು ಸಕಾಮವಾಗಿ ಮಾಡಿ ನಮ್ಮ ಬುದ್ಧಿಯಿಂದ ಆರಿಸಿಕೊಂಡ ಕ್ಷುದ್ರಪದಾರ್ಥಗಳನ್ನು ಹೊಂದುವದಕ್ಕಿಂತಲೂ ನಿಷ್ಕಾಮವಾಗಿ ಮಾಡಿ ಭಗ-ವಂತನು ತಾನಾಗಿ ಪ್ರಸನ್ನನಾಗಿ ಆರಿಸಿಕೊಡುವ ಉತ್ತಮೋತ್ತಮವಾದ ವಸ್ತುವನ್ನು ಪಡೆಯುವದು ಎಷ್ಟು ಶ್ರೇಷ್ಠವೆಂಬುದನ್ನು ಹೇಳಲಾದೀತೆ? ಆದುದರಿಂದಲೇ ಭಗವಂತನು,

"सुखदुःखे समे कृत्वा लाभालाभौ जयाजयौ।
ततो युद्धाय युज्यस्व नैवं पापमवाप्स्यसि॥"

ಎಂದರೆ "ಸುಖದುಃಖಗಳನ್ನೂ ಲಾಭಹಾನಿಗಳನ್ನೂ ಜಯಾಪಜಯಗಳನ್ನೂ ಸಮವಾಗಿ ಭಾವಿಸಿ ನೀನು ಕ್ಷತ್ರಿಯನಾದ ನಿನ್ನ ಯುದ್ಧರೂಪವಾದ ಕರ್ತವ್ಯ-ವನ್ನು ಮಾಡು; ಅಂದರೆ ನಿನಗೆ ಪಾಪವಿಲ್ಲ" ಎಂದು ಅರ್ಜುನನನ್ನು ಕುರಿತು ಉಪದೇಶಿಸಿದ್ದಾನೆ. ಈ ಶ್ಲೋಕವು ಚೆನ್ನಾಗಿ ವಿಚಾರಿಸಿ ನೋಡತಕ್ಕದ್ದಾಗಿದೆ. ನೋಡಿರಿ. ತನ್ನ ಕರ್ತವ್ಯವನ್ನು ಸುಖದುಃಖಾದಿಗಳು ಸಮವೆಂದು ಭಾವಿಸಿ ಮಾಡುವವನಿಗೆ ಪಾಪವಿಲ್ಲವೆಂದ ಮೇಲೆ ಹಾಗೆ ಭಾವಿಸದೆ ಮಾಡಿದರೆ ಪಾಪವು ಎಂದು ಹೇಳಿದಂತೆಯೇ ಆಯಿತು. ಇದು ಸಮಂಜಸವಾಗುವದಿಲ್ಲ. ಏಕೆಂದರೆ,

"स्वधर्ममपि चावेक्ष्य न विकंपितुमर्हसि।
धर्म्याद्धि युद्धाच्छ्रेयोऽन्यत्क्षत्रियस्य न विद्यते॥"

ಎಂಬುದರಿಂದ ಭಗವಂತನು "ಧರ್ಮ್ಯವಾದ ಯುದ್ಧಕ್ಕಿಂತಲೂ ಕ್ಷತ್ರಿಯನಿಗೆ ಹೆಚ್ಚು ಶ್ರೇಯಸ್ಕರವಾದುದು ಯಾವದೂ ಇಲ್ಲದಿರುವದರಿಂದ ಅರ್ಜುನನೆ, ಸ್ವಧರ್ಮದ ಕಡೆಗಾದರೂ ಲಕ್ಷ್ಯವನ್ನು ಕೊಟ್ಟು ನೀನು ಹೀಗೆ ನಡುಗುವ ದನ್ನು ಬಿಡು" ಎಂದು ಹೇಳಿಲ್ಲವೆ? ಸ್ವಧರ್ಮವೆಂದ ಮೇಲೆ ಅದನ್ನು ಸುಖ-ದುಃಖಾದಿಗಳಲ್ಲಿ ಸಮತ್ವ ಬುದ್ಧಿಯನ್ನಿಟ್ಟು ಮಾಡಲಿ ಅಥವಾ ದುಃಖಾದಿಗಳಿ-

ಗಿಂತ ಸುಖಾದಿಗಳು ಹೆಚ್ಚೆಂದು ತಿಳಿದು ಮಾಡಲಿ ಅದರಿಂದ ಪಾಪವು ಬರಲೇ ಕೂಡದು.

"स्वभावनियतं कर्म कुर्वन्नाप्नोति किल्बिषम्"

ಎಂದು ಮುಂತಾಗಿ ಭಗವಂತನು ಸ್ಪಷ್ಟವಾಗಿ ಸ್ವಕರ್ಮವನ್ನು ಮಾಡುವದರಿಂದ ಪಾಪವಿಲ್ಲವೆಂದು ಹೇಳಿಯೇ ಇದ್ದಾನೆ. ಹೀಗಿದ್ದೂ "ಸುಖದುಃಖಾದಿಗಳನ್ನು ಸಮಾನವೆಂದು ತಿಳಿದು ನಿನ್ನ ಕರ್ತವ್ಯವನ್ನು ಮಾಡು. ಹೀಗಾದರೆ ಪಾಪವಿಲ್ಲ" ಎಂದು ಹೇಳುವದು ಪೂರ್ವಾಪರವಿರೋಧವಲ್ಲವೆ? ಆದುದರಿಂದ ಇಲ್ಲಿ ಪಾಪವೆಂಬ ಶಬ್ದದಿಂದ ಪುಣ್ಯದಿಂದ ಭಿನ್ನವಾದ ಪಾಪವೆಂದು ಅರ್ಥ ಮಾಡಬಾರದು. ಬ್ರಹ್ಮಸೂತ್ರದ ನಾಲ್ಕನೇ ಅಧ್ಯಾಯದಲ್ಲಿ ಒಂದನೇ ಪಾದದಲ್ಲಿ "तदधिगम उत्तरपूर्वाघयोरश्लेषविनाशौ तद्व्यपदेशात्" ಎಂಬ ಮತ್ತು "इतरस्याप्येवमसंश्लेषः पातेतु" ಎಂಬ ಈ ಎರಡೂ ಸೂತ್ರಗಳ ಭಾಷ್ಯದಲ್ಲಿ ಶ್ರೀಶಂಕರಾಚಾರ್ಯರು ಸಪ್ರಮಾಣವಾಗಿ ಸಿದ್ಧಮಾಡಿದಂತೆ ಇಲ್ಲಿಯು ಕೂಡ ಪಾಪಶಬ್ದದಿಂದ ಪುಣ್ಯಪಾಪಗಳೆರಡು ವಿವಕ್ಷಿತವಾಗಿರುವವು. ಯಾವನಾದರೊಬ್ಬ ಅರಸನಿಗೆ ವೈರಾಗ್ಯವು ಉತ್ಪನ್ನವಾದರೆ ಅವನು ಈ ರಾಜ್ಯವೆಂಬ ಬೇಡಿಯನ್ನು ನಾನೊಲ್ಲೆನೆಂದು ಅನ್ನುವಂತೆ ವಿರಕ್ತನಾದ ಮನುಷ್ಯನಿಗೆ ಪುಣ್ಯವಾದರೂ ಬಂಧನಕ್ಕೆ ಕಾರಣವಾಗುವದರಿಂದ ಪಾಪರೂಪವೆಂದು ಕಾಣಿಸುವದೇನೂ ಅಯುಕ್ತವಲ್ಲ. ಆದಕಾರಣ ದುಃಖಕ್ಕಿಂತ ಸುಖವೂ, ಹಾನಿಗಿಂತ ಲಾಭವೂ, ಅಪಜಯಕ್ಕಿಂತ ಜಯವೂ ಹೆಚ್ಚೆಂದು ತಿಳಿದು ತನ್ನ ಕರ್ತವ್ಯವನ್ನು ಮಾಡುವವನಿಗೆ ಪುಣ್ಯವು ಬರುತ್ತಿದ್ದರೂ ಆ ಸುಖದುಃಖಾದಿ ದ್ವಂದ್ವಗಳನ್ನು ಸಮಾನವೆಂದು ಎಣಿಸಿ,

"कार्यमित्येव यत्कर्म नियतं क्रियतेऽर्जुन।
संगं त्यक्त्वा फलं चैव स त्यागः सात्विको मतः॥"

ಎಂಬ ಶ್ಲೋಕದಲ್ಲಿ ಭಗವಂತನು ಹೇಳಿದಂತೆ ಕರ್ತವ್ಯವೆಂದೇ ತನ್ನ ಕರ್ತವ್ಯವನ್ನು ಮಾಡುವವನಿಗೆ ಆ ಕೆಲಸವನ್ನು ಮಾಡಿಯೂ ಮಾಡಿದಂತಾಗುವದಿಲ್ಲವೆಂಬುದಿಷ್ಟೇ ಅಲ್ಲ. ಪುಣ್ಯಪಾಪಗಳಿಗಿಂತಲೂ ಎಷ್ಟೋ ಹೆಚ್ಚಿನದಾದ ಭಗ-

ವತ್ಪ್ರಾಪ್ತಿಯೆಂಬ ಫಲವು ಕೂಡ ಸಿಕ್ಕುವದು. ಒಬ್ಬ ಮನುಷ್ಯನು ಒಬ್ಬ ಅರಸ-ನನ್ನು ಸೇವೆಮಾಡಿ ಪ್ರಸನ್ನನಾಗಿ ಮಾಡಿಕೊಂಡಾಗ ಯಾವದಾದರೊಂದು ಹೆಚ್ಚಿನ ಬಯಕೆಯನ್ನು ತೋರಿಸಿಕೊಂಡರೆ ಅದೊಂದಿಷ್ಟಾರ್ಥವು ಕೈಸೇರುವದು. ಏನನ್ನೂ ಬಯಸದೆ ಅರಸನಲ್ಲಿ ಪ್ರೇಮವನ್ನು ಬೆಳಸಿದರೆ ಆ ಅರಸನೇ ತನ್ನ ವಶನಾಗುವನು. ಹಾಗೆಯೇ ಭಗವತ್ಪ್ರೀತ್ಯರ್ಥವಾಗಿ ನಿಷ್ಕಾಮಕರ್ಮವನ್ನು ಮಾಡಿದರೆ ಭಗವಂತನೇ ಪ್ರಾಪ್ತನಾಗಿ ಪರಮಪುರುಷಾರ್ಥವನ್ನು ಸಾಧಿಸಿ-ಕೊಡುವನು. ತಾಯಿಯಾದವಳು ತನ್ನ ಕೂಸಿಗೆ ಮೊಲೆಯನ್ನು ಕೊಟ್ಟರೆ ತಾನು ತನ್ನ ಕರ್ತವ್ಯವನ್ನು ಮಾಡಿದೆನೆಂದು ತಿಳಿಯುವಳೇ ಹೊರತು ಹೆಚ್ಚಿನ-ದೊಂದನ್ನು ಮಾಡಿದೆನೆಂಬ ಅಭಿಮಾನವನ್ನು ಹೇಗೆ ಹೊಂದುವದಿಲ್ಲವೊ ಹಾಗೆ ತನ್ನ ಕರ್ತವ್ಯವನ್ನು ಕರ್ತವ್ಯವೆಂದು ತಿಳಿದು ಮಾಡುವ ಮನುಷ್ಯನು ಅಹಂ-ಕಾರವನ್ನು ಪಡೆಯುವದಿಲ್ಲ. ಆದರಿಂದ ಭಗವಂತನು ಪ್ರಸನ್ನನಾಗಿ ಅವ-ನನ್ನು ಕೃತಾರ್ಥನನ್ನು ಮಾಡುವನು. ಅದು ತನ್ನ ಕರ್ತವ್ಯವೆಂದು ಕರ್ತ-ವ್ಯವನ್ನು ಮಾಡುವ ಮನುಷ್ಯನಿಗೆ ಒಂದುಪಕ್ಷ ಆ ಕೆಲಸದಿಂದ ಹಾನಿಯಾದ-ರೂ ಅವನು ತನ್ನ ಕರ್ತವ್ಯವನ್ನು ತಾನು ಮಾಡಿದೆನೆಂದು ತನ್ನ ಮನಸ್ಸನ್ನು ಸಮಾಧಾನವಾಗಿ ಇಟ್ಟುಕೊಳ್ಳುವನು. ಆದುದರಿಂದಲೇ,

"इहैव तैर्जितः सर्गो येषां साम्ये स्थितं मनः"

ಎಂಬುದರಿಂದ ಭಗವಂತನು "ಯಾರ ಮನಸ್ಸು ಸುಖದುಃಖಾದಿದ್ವಂದ್ವಗಳಿಂದ ಪ್ರಚಲಿತವಾಗದೆ ಸಾಮ್ಯದಲ್ಲಿರುವದೊ ಅವರು ಸೃಷ್ಟಿಯನ್ನೇ ಜಯಿಸಿದಂತಾ-ಯಿತು" ಎಂದು ಹೇಳಿದ್ದಾನೆ. ಆದಕಾರಣ ನಾವು ಲಾಭಾದಿಗಳ ಕಡೆಗೆ ಲಕ್ಷ್ಯವನ್ನು ಕೊಡದೆ ಭಗವತ್ಪ್ರೀತ್ಯರ್ಥವಾಗಿ ನಮ್ಮ ಕರ್ತವ್ಯವನ್ನು ಇದು ನಮ್ಮ ಕರ್ತವ್ಯವೆಂದೇ ಮಾಡುತ್ತ ಹೋಗಬೇಕು.

ಇನ್ನು ಕರ್ತವ್ಯವೆಂದೇ ಕರ್ತವ್ಯವನ್ನು ಮಾಡುವದು ಸುಕರವಲ್ಲ. ಅದಕ್ಕೆ ಕೆಲವು ಸಾಧನಗಳು ಬೇಕಾಗುತ್ತವೆ. ಆದುದರಿಂದಲೇ ಭಗವಂತನು "योगस्थः कुरु कर्माणि" ಎಂದು ಅರ್ಜುನನಿಗೆ ಉಪದೇಶಿಸಿದ್ದಾನೆ. ಈ ಯೋಗದ ವಿಷಯವನ್ನು ನಾಳೆ ವಿಚಾರಿಸುವ.

# श्रीः

## ೪ನೇ ವ್ಯಾಖ್ಯಾನ—ಗೀತೋಪದಿಷ್ಟಯೋಗಗಳು.

**श्रीरामचंद्रचरणौ मनसा स्मरामि ।**
**श्रीरामचंद्रचरणौ वचसा गृणामि ॥**
**श्रीरामचंद्रचरणौ शिरसा नमामि ।**
**श्रीरामचंद्रचरणौ शरणं प्रपद्ये ॥**

ಸಭ್ಯರಾದ ಪ್ರಿಯಬಾಂಧವರೆ,

ನಿನ್ನಿನ ಉಪನ್ಯಾಸದ ಉಪಸಂಹಾರಕಾಲದಲ್ಲಿ ಕರ್ತವ್ಯಕ್ಕಾಗಿ ಕರ್ತವ್ಯವನ್ನು ಮಾಡುವದಕ್ಕೆ ಏನಾದರೂ ಸಾಧನವು ಬೇಕೆಂದು ಹೇಳಿ **"योगस्थः कुरु कर्माणि"** ಎಂದು ಭಗವಂತನು ಹೇಳಿರುವಂತೆ ಯೋಗದ ವಿಷಯವನ್ನು ವಿಚಾರಿಸಬೇಕೆಂದು ನಿಲ್ಲಿಸಿದ್ದೆನಷ್ಟೆ. ಈಗ ಈ ವಿಷಯವನ್ನು ಕುರಿತು ವಿಚಾರಿಸೋಣ.

ಲೋಕದಲ್ಲಿ ಯಾರು ಯಾವ ಕೆಲಸವನ್ನು ಮಾಡಬೇಕಾದರೂ ಅವರಿಗೆ ಏನಾದರೊಂದುದ್ದೇಶವಿದ್ದೇ ಇರುತ್ತದೆ. ಯಾವ ಉದ್ದೇಶವೂ ಇಲ್ಲದವನು ಯಾವ ಕೆಲಸವನ್ನೂ ಮಾಡುವದಕ್ಕೆ ಆಗುವದಿಲ್ಲ. ಆದರೆ ಪ್ರತಿಫಲವನ್ನು ಅಪೇಕ್ಷೆಮಾಡುವ ಉದ್ದೇಶವು ಮಾತ್ರ ಮನುಷ್ಯನಿಗೆ ಪ್ರಬಲವಾದ ಬಂಧನವು. ಯಾವ ಗೀತೆಯು ಕರ್ಮಜನ್ಯವಾದ ಬಂಧನದಿಂದ ಬಿಡುಗಡೆಯಾಗಬೇಕೆಂದು ಬೋಧಿಸುತ್ತದೊ ಅದೇ ಗೀತೆಯೇ ಮನುಷ್ಯನು ಕರ್ಮದಲ್ಲಿ ಪ್ರವರ್ತಿಸಬೇಕೆಂದು ಹೇಳಿರುವದರಿಂದ ಬಂಧನವಾಗದಂತೆ ಕರ್ಮವನ್ನು ಸಾಗಿಸುವ ಉಪಾಯವೊಂದಿರಬೇಕಾಯಿತು. ಆ ಉಪಾಯವೇ ಯೋಗ. ಆ ಯೋಗವು ಜ್ಞಾನಯೋಗ, ಕರ್ಮಯೋಗ, ರಾಜಯೋಗ ಮತ್ತು ಭಕ್ತಿಯೋಗವೆಂದು ಮುಖ್ಯವಾದ ನಾಲ್ಕುವಿಧವಾಗಿದೆ. ಚೆನ್ನಾಗಿ ವಿಚಾರಮಾಡಿ

---

* ಜ್ಞಾನಯೋಗ, ಕರ್ಮಯೋಗ ಮತ್ತು ರಾಜಯೋಗಗಳ ವಿಚಾರವು ಒಂದು ದಿನವೂ ಭಕ್ತಿಯೋಗದ ವಿಚಾರವು ಮತ್ತೊಂದುದಿನವೂ ನಡೆದಿದ್ದರೂ, ಈ ನಾಲ್ಕುಯೋಗಗಳೂ ಗೀತೋಪದಿಷ್ಟಯೋಗಗಳೆಂಬ ಶಿರೋಲೇಖನದಲ್ಲಿ ಅಂತರ್ಭೂತಗಳಾಗುವದರಿಂದ ಇಲ್ಲಿ ಒಂದೇ ವ್ಯಾಖ್ಯಾನದಂತೆ ಮುದ್ರಿತವಾಗಿರುವವು.

ನೋಡಿದರೆ, ಜ್ಞಾನಯೋಗಿಯು ನಡೆಸುವ ಕರ್ಮಕ್ಕೆ ಮಾತ್ರ ಯಾವದೊಂದು ಫಲಾಭಿಸಂಧಿಯೂ ಇರುವದಿಲ್ಲ. ಕರ್ತವ್ಯಕ್ಕಾಗಿ ಕರ್ತವ್ಯವನ್ನು ಮಾಡುವದೆಂಬರ್ಥವು ಜ್ಞಾನಿಯ ಕರ್ಮಕ್ಕೆ ಬಹು ಚೆನ್ನಾಗಿ ಅನ್ವಯಿಸುತ್ತದೆ. ಏಕೆಂದರೆ ಜ್ಞಾನಿಗೆ ತನಗಾಗಿ ಪಡೆದುಕೊಳ್ಳಬೇಕಾದುದೇನೇನೂ ಇರುವದಿಲ್ಲ. ಅವನು ಕೇವಲ ಲೋಕಸಂಗ್ರಹಾರ್ಥವಾಗಿ ಕರ್ಮದಲ್ಲಿ ಪ್ರವರ್ತಿಸಿರುವನು. ಆದುದರಿಂದ ಅವನ ಕರ್ಮವು ಕರ್ತವ್ಯವೆಂದು ಮಾತ್ರ ಮಾಡಿದುದೆಂದೆನಿಸಿಕೊಳ್ಳುವದು. ಇನ್ನು ಕರ್ಮಯೋಗಿಗಳೂ, ರಾಜಯೋಗಿಗಳೂ ಮತ್ತು ಗೌಣಭಕ್ತಿಯೋಗಿಗಳೂ ಸಾಗಿಸುವ ಕರ್ಮಗಳ ವಿಚಾರವನ್ನು ಮಾಡಿದರೆ ಅವರಲ್ಲಿ ಒಂದು ಫಲಾಪೇಕ್ಷೆ ತೋರುತ್ತದೆ. ಅದಾವುದೆಂದರೆ ಕರ್ಮಯೋಗಿಗೆ ಚಿತ್ತಶುದ್ಧಿ, ಮತ್ತು ಇತರರಿಗೆ ಚಿತ್ತಸ್ಥೈರ್ಯ. ಆದರೂ ಈ ಫಲಾಭಿಸಂಧಿಯು ಎಂದಿಗೂ ಬಾಧಕವಲ್ಲ. ವ್ಯಾವಹಾರಿಕಸುಖಾಭಿಲಾಷೆಯನ್ನು ಮಾಡುವದು ಬಾಧಕವು. ಪುರುಷರನ್ನು ಕಂಡರೆ ಸ್ತ್ರೀಯರು ನಾಚಿಕೊಳ್ಳಬೇಕಾದುದೇ ಸರಿ. ಆದರೆ ಅವರು ತಮ್ಮ ತಮ್ಮ ಪತಿಗಳೆದುರಿಗೆ ಏಕಾಂತದಲ್ಲಿ ನಾಚಿಕೊಳ್ಳಬೇಕೇನು? ವಿಚಾರಮಾಡಿ ನೋಡಿದರೆ ಪತಿಯು ಅವರಿಗೆ ಪುರುಷನೇ ಸರಿ. ಆದರೂ ಅವರು ಪರಪುರುಷರನ್ನು ಕಂಡಾಗ ಮಾತ್ರ ನಾಚಿಕೊಳ್ಳಬೇಕಾದುದು ಯುಕ್ತವು. ಹಾಗೆಯೇ ಬಂಧನದ ಬಿಡುಗಡೆಯನ್ನು ಬಯಸುವವರೆಲ್ಲರೂ ಫಲಾಭಿಸಂಧಿ ಇಲ್ಲದೆ ಕೆಲಸಮಾಡಬೇಕು; ನಿಜ. ಆದರೆ ಅವರು ಅದರ ದ್ವಾರವಾದ ಚಿತ್ತಶುದ್ಧಿಯನ್ನು ಬಯಸಿದರೆ ಅದೇನೂ ಬಾಧಕವಲ್ಲ. ವ್ಯಾವಹಾರಿಕಸುಖಾಭಿಲಾಷೆ ಮಾತ್ರ ಎಂದಿಗೂ ಬಾಧಕವು. ಆದುದರಿಂದ ವ್ಯಾವಹಾರಿಕಸುಖಾಭಿಲಾಷೆಯ ಲೇಶವೂ ಇಲ್ಲದೆ ಕೇವಲ ಚಿತ್ತಶುದ್ಧಿಯನ್ನು ಪಡೆಯಬೇಕೆಂದು ಕರ್ಮಯೋಗಿಗಳೂ, ರಾಜಯೋಗಿಗಳೂ ಮತ್ತು ಗೌಣಭಕ್ತಿಯೋಗಿಗಳೂ ಸಾಗಿಸುವ ಕರ್ಮವು ಕೂಡ ಕೇವಲ ಕರ್ತವ್ಯ ದೃಷ್ಟಿಯಿಂದಲೇ ಮಾಡಿದುದೆನಿಸಿಕೊಳ್ಳುವದು.

ಈ ಯೋಗಗಳ ಭೇದವಿಶೇಷಗಳನ್ನು ಒಂದೊಂದನ್ನಾಗಿ ತೆಗೆದುಕೊಂಡು ಹೇಳುವದಕ್ಕೆ ಮೊದಲು ಯೋಗಶಬ್ದಾರ್ಥವನ್ನು ಸ್ವಲ್ಪದೂರ ವಿಚಾರಮಾಡುವದೊಳ್ಳೆಯದು. ಬೇರೆಬೇರೆ ಶಾಸ್ತ್ರೀಯವಿಚಾರಗಳ ಸಂಬಂಧವಾಗಿಯೂ

ಮತ್ತು ಬಗೆಬಗೆಯಾದ ವ್ಯವಹಾರವಿಚಾರಗಳ ಸಂಬಂಧವಾಗಿಯೂ ಉಪ-ಯೋಗಿಸುವಾಗ ಯೋಗಶಬ್ದವು ಇತರ ಶಬ್ದಗಳೊಂದಿಗೆ ಸೇರಿ ಅಥವಾ ಸೇರದೆ ಅನೇಕಾರ್ಥಗಳನ್ನು ಕೊಡುತ್ತಿದೆ. ಅಮರಕೋಶವು ಇದಕ್ಕೆ ಸನ್ನ-ಹನ, ಉಪಾಯ, ಧ್ಯಾನ, ಸಂಗತಿ ಮತ್ತು ಯುಕ್ತಿ ಎಂಬ ಐದರ್ಥಗಳನ್ನೂ ಇತರ ಮೇದಿನ್ಯಾದಿ ಕೋಶಗಳು ಇವಲ್ಲದೆ ದೇಹಸ್ಥೈರ್ಯಪ್ರಯೋಗ ಮುಂ-ತಾದ ಅರ್ಥಗಳನ್ನೂ ಹೇಳುತ್ತವೆ. ನ್ಯಾಯಶಾಸ್ತ್ರದಲ್ಲಿ ಯೋಗವೆಂದರೆ ಅವ-ಯವಶಕ್ತಿ. ಮೀಮಾಂಸದಲ್ಲಿ ಯೋಗವೆಂದರೆ ಅರ್ಥಶಕ್ತಿ. ಪತಂಜಲಿಋಷಿ-ಗಳ ಅಭಿಪ್ರಾಯದಂತೆ ಯೋಗವೆಂದರೆ ಚಿತ್ತವೃತ್ತಿನಿರೋಧ. ಶ್ರೀಶಂಕರಾ-ಚಾರ್ಯರ ಅಭಿಪ್ರಾಯದಲ್ಲಿ ಯೋಗವೆಂದರೆ ಜೀವಾತ್ಮಪರಮಾತ್ಮರ ಐಕ್ಯ. ಶ್ರೀರಾಮಾನುಜಾಚಾರ್ಯರ ಅಭಿಪ್ರಾಯದಂತೆ ನೋಡಿದರೆ "**स्वस्वदेवतानु-संधानमितिरामानुजाः**" ಎಂಬಂತೆ ಯೋಗವೆಂದರೆ ತಮ್ಮ ತಮ್ಮ ಇಷ್ಟದೇವ-ತೆಯನ್ನು ಅನುಸಂಧಾನಮಾಡುವದು. ಹೀಗೆಯೆ "**युज्**" ಎಂಬ ಧಾತುವಿ-ನಿಂದ ಹುಟ್ಟಿದ ಈ ಯೋಗಶಬ್ದವು ಬೇರೆಬೇರೆ ಅನೇಕಾರ್ಥಗಳನ್ನು ಕೊಡು-ತ್ತದೆ. ಈ ನಮ್ಮ ಪ್ರಸ್ತುತವಾದ ಗೀತೆಯಲ್ಲಿ ಹಿಂದೆ ಹೇಳಿದ ಮುಖ್ಯವಾದ ಜ್ಞಾನಯೋಗ ಮೊದಲಾದ ನಾಲ್ಕು ಯೋಗಗಳೂ ಹೇಳಲ್ಪಟ್ಟಿವೆ.

"ज्ञानयोगेन सांख्यानां कर्मयोगेन योगिनाम्"

ಎಂಬ ಗೀತಾಶ್ಲೋಕಾರ್ಥದಲ್ಲಿ ವಿಚಾರಶೀಲರಾದವರು ಜ್ಞಾನಯೋಗನಿಷ್ಠ-ರಾಗಿರಬೇಕೆಂದೂ, ಕರ್ಮಶೀಲರಾದವರು ಕರ್ಮಯೋಗನಿಷ್ಠರಾಗಿರಬೇಕೆಂದೂ ಹೇಳಿರುವದರಲ್ಲಿ ಜ್ಞಾನಯೋಗ ಮತ್ತು ಕರ್ಮಯೋಗ ಎಂಬ ಶಬ್ದಗಳೇ ಸಾಕ್ಷಾತ್ತಾಗಿ ಉಕ್ತವಾಗಿವೆ. ಇನ್ನು ರಾಜಯೋಗವೆಂಬ ಮಾತಿನ ಪ್ರಯೋಗವು ಮೂಲದಲ್ಲಿಲ್ಲದಿದ್ದರೂ

"तत्रैकाग्रं मनः कृत्वा यतचित्तेंद्रिय क्रियः ।
उपविश्यासने युंज्याद्योगमात्मविशुद्धये ॥"

ಎಂಬ ಶ್ಲೋಕದಂತೆ ಆಸನದಲ್ಲಿ ಕುಳಿತು ಇಂದ್ರಿಯವ್ಯಾಪಾರಗಳನ್ನೂ ಚಿತ್ತ-

ವೃತ್ತಿಯನ್ನೂ ನಿರೋಧಿಸಿ ಚಿತ್ತಶುದ್ಧಿಗಾಗಿ ಯೋಗವನ್ನು ಮಾಡಬೇಕೆಂಬ ಮಾತಿನಲ್ಲಿರುವ ಯೋಗಶಬ್ದವು ಪತಂಜಲಿಋಷಿಗಳ ಅಷ್ಟಾಂಗಯೋಗವನ್ನು ಸೂಚಿಸುತ್ತದೆ.

"मां च योऽव्यभिचारेण भक्तियोगेन सेवते ।
स गुणान्समतीत्यैतान्ब्रह्मभूयाय कल्पते ॥"

ಎಂಬ ಶ್ಲೋಕದಲ್ಲಿ ಅನನ್ಯಭಾವಾತ್ಮಕವಾದ ಭಕ್ತಿಯೋಗದಿಂದ ಸೇವಿಸುವವನು ತ್ರಿಗುಣಾತೀತನಾಗಿ ಬ್ರಹ್ಮಪದವಿಯನ್ನು ಪಡೆಯುವನೆಂದು ಹೇಳಿರುವದರಲ್ಲಿ ಭಕ್ತಿಯೋಗವೆಂಬ ಶಬ್ದವೇ ಉಪಯೋಗಿಸಲ್ಪಟ್ಟಿದೆ. ಹೀಗೆ ನಾಲ್ಕು ಯೋಗಗಳೂ ಭಗವಂತನಿಂದ ಗೀತೆಯಲ್ಲಿ ಉಪದಿಷ್ಟವಾಗಿವೆ. ಯೋಗಶಬ್ದಾರ್ಥದ ವಿಷಯದಲ್ಲಿ ಮೇಲೆ ಹೇಳಿದಂತೆ ಬೇರೆಬೇರೆ ಶಾಸ್ತ್ರಕಾರರ ಅಭಿಪ್ರಾಯವು ಬೇರೆಬೇರೆ ಇದ್ದರೂ ಶ್ರೀಕೃಷ್ಣಪರಮಾತ್ಮನು ತಾನು ಉಪಯೋಗಿಸಿರುವ ಯೋಗಶಬ್ದಕ್ಕೆ ಗೀತೆಯಲ್ಲಿಯೇ ತಕ್ಕ ಲಕ್ಷಣವು ವ್ಯಕ್ತವಾಗುವಂತೆ "समत्वं योग उच्यते" ಎಂದು ತಾನೇ ಹೇಳಿರುತ್ತಾನೆ. ಈ ಲಕ್ಷಣವು ಗೀತೋಪದಿಷ್ಟವಾದ ನಾಲ್ಕು ಯೋಗಗಳಿಗೂ ಬಹು ಸಮಂಜಸವಾಗಿ ಅನ್ವಯಿಸುತ್ತದೆ. ನೋಡಿರಿ. ಶ್ರೀಕೃಷ್ಣನು

"विद्याविनयसंपन्ने ब्राह्मणे गवि हस्तिनि ।
शुनि चैव श्वपाके च पंडिताः समदर्शिनः ॥"

ಎಂಬ ಶ್ಲೋಕದಲ್ಲಿ ಜ್ಞಾನಿಯಾದವನು ವಿಚಾರಬಲದಿಂದ ವಿದ್ಯಾವಿನಯಸಂಪನ್ನನಾದ ಬ್ರಾಹ್ಮಣನಲ್ಲಿಯೂ, ಗೋವಿನಲ್ಲಿಯೂ, ಆನೆಯಲ್ಲಿಯೂ, ನಾಯಿಯಲ್ಲಿಯೂ ಮತ್ತು ಚಂಡಾಲನಲ್ಲಿಯೂ ಸಮದರ್ಶಿಯಾಗಿರುವನೆಂದೂ

"योगस्थः कुरु कर्माणि संगं त्यक्त्वा धनंजय ।
सिध्यसिध्योस्समो भूत्वा ... ... ...

ಎಂಬ ಶ್ಲೋಕದಲ್ಲಿ ಹೆ, ಪಾರ್ಥ, ಕರ್ಮಗಳಲ್ಲಿ ಆಸಕ್ತಿಯನ್ನು ಬಿಟ್ಟು ಕರ್ಮಯೋಗವನ್ನಾಶ್ರಯಿಸಿ ಫಲದ ಪ್ರಾಪ್ತಿ ಅಥವಾ ಅಪ್ರಾಪ್ತಿಗಳಲ್ಲಿ ಏಕಪ್ರಕಾರವಾಗಿರಬೇಕೆಂದೂ

"प्राणापानौ समौ कृत्वा नासाभ्यंतरचारिणौ"

ಎಂದು ರಾಜಯೋಗದ ಅಪರಾಭಿಧಾನವಾದ ಧ್ಯಾನಯೋಗಕ್ಕೆ ಸೂತ್ರಭೂತವಾಗಿ ಅವತಾರಿಕೆಯನ್ನು ಹೇಳುವಾಗ ಪತಂಜಲಿಋಷಿಗಳ ಅಷ್ಟಾಂಗಯೋಗದ ಅಂಗಭೂತವಾದ ಪ್ರಾಣಾಯಾಮರೂಪದಿಂದ ನಾಸಾಭ್ಯಂತರಚಾರಿಗಳಾದ ಪ್ರಾಣಾಪಾನಗಳನ್ನು ಸಮವಾಗಿ ಮಾಡಿಕೊಳ್ಳಬೇಕೆಂದೂ

"समः शत्रौ च मित्रे च तथा मानापमानयोः ।
शीतोष्णसुखदुःखेषु समः संगविवर्जितः ॥
तुल्यनिंदास्तुतिर्मौनी संतुष्टो येन केनचित् ।
अनिकेतः स्थिरमतिर्भक्तिमान्मे प्रियो नरः ॥"

ಎಂಬ ಕಡೆ ಸ್ಥಿರಬುದ್ಧಿಮುಂತಾದ ಲಕ್ಷಣಗಳೊಡನೆ ಸ್ತುತಿನಿಂದೆಗಳನ್ನೂ, ಸುಖದುಃಖಗಳನ್ನೂ, ಶೀತೋಷ್ಣಗಳನ್ನೂ, ಮಾನಾಪಮಾನಗಳನ್ನೂ, ಶತ್ರುಮಿತ್ರರನ್ನೂ ಸಮವಾಗಿ ಭಾವಿಸುವ ಭಕ್ತನೇ ತನಗೆ ಪ್ರಿಯನೆಂದೂ ಹೇಳಿರುವದರಿಂದ ಯೋಗಶಬ್ದಕ್ಕೆ ಸಮತ್ವವೆಂಬರ್ಥವು ನಾಲ್ಕು ಯೋಗಗಳಿಗೂ ಬಹುಸರಸವಾಗಿ ಹೊಂದುತ್ತದೆ.

ಇವುಗಳಲ್ಲಿ ಈಗ ಒಂದೊಂದು ಯೋಗದ ವಿಷಯವನ್ನು ಬೇರೆಬೇರೆ ವಿಚಾರಮಾಡೋಣ.—

# ಜ್ಞಾನಯೋಗ.

**"ज्ञानादेव तु कैवल्यम्"** ಮತ್ತು **"तत्त्वज्ञानेन मोक्षः स्यात्"** ಮೊದಲಾದ ಉಕ್ತಿಗಳು ಜ್ಞಾನಕ್ಕೆ ಮೋಕ್ಷವನ್ನು ಸಾಕ್ಷಾತ್ಫಲವಾಗಿ ಹೇಳುತ್ತವಷ್ಟೆ. ಮೋಕ್ಷವೆಂದರೇನು? ಸತ್ತ ಮೇಲೆ ವೈಕುಂಠಕ್ಕೋ ಕೈಲಾಸಕ್ಕೋ ಹೋಗುವದೇ ಮೋಕ್ಷವೆಂದು ಕೆಲವರು ತಿಳಿದಿರಬಹುದು. ಅದೇನೂ ತಪ್ಪಲ್ಲ. ಸತ್ತ ಮೇಲೆ ಆಲೋಕಗಳು ಲಭ್ಯವಾಗಬಹುದು. ಕನ್ನಡಿಯೊಳಗಿನ ಗಂಟಿನಂತೆ ಇರುವ ಆ ವೈಕುಂಠಾದಿಪ್ರಾಪ್ತಿರೂಪವಾದ ಮೋಕ್ಷವು ಗೌಣಮೋಕ್ಷ. ಈಗ ನಾನು ಹೇಳಹೋಗುವ ಸಾಧನಗಳಿಗೆ ಆಮೋಕ್ಷವು ಪ್ರಧಾನಫಲವಲ್ಲ. ಈಜನ್ಮದಲ್ಲಿಯೇ ಈಗಲೇ ನಮಗೆ ಆನಿರತಿಶಯ ಸುಖಸ್ವರೂಪವು ಅನುಭವಕ್ಕೆ ಬರಬೇಕು. ಅದನ್ನೇ ನಾನು ಮೋಕ್ಷವೆಂದು ಕರೆಯುವುದು. ಮೋಕ್ಷವೆಂಬುದು ಬಿಡುಗಡೆಯೆಂಬರ್ಥವುಳ್ಳ "**मुच्**" ಧಾತುವಿನಿಂದ ಆಗಿದೆ. ಆದುದರಿಂದ ನಮಗೆ ಮೋಕ್ಷವಾಗಬೇಕೆಂದರೆ ಬಿಡುಗಡೆಯಾಗಬೇಕೆಂದಂತಾಯಿತು. ಹಾಗಾದರೆ ನಾವು ಯಾರ ಸೆರೆಗೆ ಸಿಕ್ಕಿದ್ದೇವೆ? ಎಂದರೆ ನಿನ್ನೆ ಮತ್ತು ಮೊನ್ನೆ ಪ್ರಸ್ತಾಪಿಸಿದಂತೆ ನಾವು ಸುಖಕ್ಕಾಗಿ ವಿಷಯಗಳಿಗೆ ದಾಸರಾಗಿದ್ದೇವೆ.

## "सर्वं परवशं दुःखं सर्वमात्मवशं सुखम्"

ಎಂಬಂತೆ ಪರಾಧೀನದ ಬಾಳೆಲ್ಲವೂ ದುಃಖ; ಸ್ವತಂತ್ರವಾದ ಬಾಳೆಲ್ಲವೂ ಸುಖ. ನಾವು ವಿಷಯಚಿಂತನೆ ಮಾಡುತ್ತ ಹೋದಷ್ಟೂ ಅವು ಸುಖದಾಯಕವಾಗಿ ತೋರಿದಾಗ ಅವುಗಳ ಮೇಲೆ ಪ್ರೀತಿಯೂ ದುಃಖಕಾರಕವಾಗಿ ತೋರಿದಾಗ ಅವುಗಳ ಮೇಲೆ ದ್ವೇಷವೂ ಹುಟ್ಟಿ ಕೆಲವುವಿಷಯುಗಳನ್ನು ದೂರಮಾಡಿಕೊಳ್ಳುವದಕ್ಕೂ ಕೆಲವುವಿಷಯುಗಳನ್ನು ಬರಮಾಡಿಕೊಳ್ಳುವದಕ್ಕೂ ನಾವು ಎಡೆಬಿಡದೆ ಹೋರಾಡುತ್ತಿರುವೆವು. ನೆಲವನ್ನು ಗುದ್ದಿ ಮೈನೋಯಿಸಿಕೊಂಡಂತೆ ವಿಷಯುಗಳೊಡನೆ ಮಾಡುವ ದ್ವಂದ್ವಯುದ್ಧದಿಂದ ನಮಗೆ ವ್ಯರ್ಥಪ್ರಯಾಸದ ಹೊರತು ಮತ್ತೇನೂ ಫಲವಿಲ್ಲ. ವಿಷಯಚಿಂತನೆಯೇ ದೋಷದ

ತವರ್ಮನೆಯಾದುದರಿಂದ ಇನ್ನು ಪ್ರಪಂಚವ್ಯವಹಾರವನ್ನೆಲ್ಲ ಬಿಟ್ಟು ಕೊಡಬೇಕಾಗುವದೆಂದರೆ ಹಾಗಲ್ಲ.

"नमे पार्थास्ति कर्तव्यं त्रिषु लोकेषु किंचन ।
नानवाप्तमवाप्तव्यं वर्त एव च कर्मणि ॥"

ಎಂದು ಶ್ರೀಕೃಷ್ಣನು ಆಡಿ ಮತ್ತು ಮಾಡಿ ತೋರಿಸಿರುವಂತೆ ಸರ್ವರೂ ವಿಷಯಗಳೊಡನೆ ವ್ಯವಹಾರಮಾಡಲೇ ಬೇಕು. ಕೇವಲ ಅದರಿಂದ ಯಾವ ಬಂಧನವೂ ಇಲ್ಲ. ಜಡವಾದ ಆವಿಷಯುಗಳು ನಮ್ಮನ್ನೇನೂ ಮಾಡಲಾರವು. ವಿಷಯುಗಳ ದೆಸೆಯಿಂದ ನಮಗೆ ಆಗುವ ಸುಖದುಃಖಗಳಿಗೆಲ್ಲ ಆಯಾವಿಷಯುಗಳ ಮೇಲಿನ ನಮ್ಮ ಪ್ರೀತಿ ಅಥವಾ ದ್ವೇಷವೇ ಕಾರಣವಾಗಿರುವದು. ಆದುದರಿಂದ,

"रागद्वेषवियुक्तैस्तु विषयानींद्रियैश्चरन् ।
आत्मवश्यैर्विधेयात्मा प्रसादमधिगच्छति ॥"

ಎಂಬ ಗೀತೋಕ್ತಿಯುಂತೆ ವಿಷಯುಗಳು ಜಗ್ಗಿದ ಹಾಗೆಲ್ಲ ಮನಸ್ಸನ್ನು ಸಡಿಲ ಬಿಡದೆ ಮನಸ್ಸನ್ನು ಹಿಡಿತದಲ್ಲಿಟ್ಟುಕೊಂಡಿದ್ದರೆ ಸರಿ. ಅದರಿಂದ ಮನಸ್ಸು ಪ್ರಸನ್ನವಾಗುವದು. ಮನಸ್ಸಿನ ಪ್ರಸನ್ನತೆಯೆಂಬ ಯೋಗ್ಯತೆಯೇನೂ ಸಾಧಾರಣವಲ್ಲ.

"मनःप्रसादस्सौम्यत्वं मौनमात्मविनिग्रहः ।
भावसंशुद्धिरित्येतत्तपो मानसमुच्यते ॥"

ಎಂಬಂತೆ ಮನಸ್ಸಿನ ಪ್ರಸನ್ನತೆಯು ಮಾನಸಿಕತಪಸ್ಸಿನ ಪ್ರಥಮಲಕ್ಷಣವಾಗಿದೆ. ಕಾಯು, ವಾಕ್ ಮತ್ತು ಮನಸ್ಸು ಎಂಬ ತ್ರಿಕರಣಗಳಲ್ಲಿ ಮನಸ್ಸು ಹೆಚ್ಚಿನದು. ಆದುದರಿಂದ ದೇವತಾದಿಪೂಜೆ, ಶೌಚ, ಆರ್ಜವ, ಬ್ರಹ್ಮಚರ್ಯ ಮತ್ತು ಅಹಿಂಸಾದಿರೂಪವಾದ ಶಾರೀರಕತಪಸ್ಸಿಗಿಂತಲೂ ಇತರರ ಮನಸ್ಸ-

ನ್ನು ನೋಯಿಸದಂಥ ನುಡಿ, ಸತ್ಯವೂ, ಪ್ರಿಯವೂ, ಹಿತವೂ ಆದ ವಾಕ್ ಮತ್ತು ವೇದಾಧ್ಯಯನ ಮೊದಲಾದ ವಾಚನಿಕತಪಸ್ಸು ಮೇಲಾದುದು. ಇವೆರಡಕ್ಕಿಂತಲೂ ಮನಸ್ಸಿನ ಪ್ರಸನ್ನತೆ, ಸೌಮ್ಯತ್ವ, ಮೌನ, ಮನೋ-ನಿಗ್ರಹ ಮತ್ತು ಭಾವಶುದ್ಧಿಮೊದಲಾದ ಲಕ್ಷಣಗಳುಳ್ಳ ಮಾನಸಿಕತಪಸ್ಸು ಸರ್ವೋತ್ಕೃಷ್ಟವಾದುದು. ಹೀಗೆ ಮನುಷ್ಯನು ವಿಷಯಗಳಲ್ಲಿ ಅನಾಸಕ್ತ-ನಾಗುವದೇ ಒಂದು ಮಹತ್ತ್ವದ ತಪಸ್ಸಾಗಿರುವದು. ಯಾವನು ತಾನೇ ತಿರುಕನಾಗಿ ವಿಷಯಗಳ ಮುಂದೆ ದೇಹಿಯೆಂದು ಜೋಳಿಗೆಯನ್ನು ಒಡ್ಡು-ವನೊ ಅವನಿಂದ ಇತರರಿಗೇನು ಸಹಾಯವಾದೀತು! ಯಾವನು ಸರ್ವ ಸುಖವೂ ತನ್ನಲ್ಲಿಯೇ ಇರುವದೆಂದು ನಂಬಿ ಧೈರ್ಯದಿಂದ ಇರುವನೊ ಆ ಪುಣ್ಯಪುರುಷನಿಗೆ ತನಗಾಗಿ ಮಾಡಿಕೊಳ್ಳಬೇಕಾದುದೇನೂ ಇರುವದಿಲ್ಲವಾದು-ದರಿಂದ ಅವನು ನಾಲ್ಕುಮಂದಿಯ ಹಿತಕ್ಕಾಗಿ ಸೊಂಟವನ್ನು ಕಟ್ಟಿಕೊಳ್ಳು-ವದಕ್ಕೆ ತಕ್ಕವನಾಗಿರುವನು. ಮರುಭೂಮಿಯ ಬಿಸಿಲಗುದುರೆಯನ್ನು ಜಲಾ-ಶಯವೆಂದು ಭ್ರಮಿಸಿ ಅದು ನಮ್ಮ ಬಾಯಾರಿಕೆಯನ್ನು ಕಳೆಯುವದೆಂದು ಅದರ ಬೆನ್ನು ಹಿಡಿದು ಓಡುವವರಂತೆ ನಾವು ವಿಷಯಗಳಿಂದ ವಂಚಿತರಾಗಿ ಸುಮ್ಮನೆ ಬಾಯಿನೀರು ಸುರಿಸುತ್ತೇವೆ.

"आशाया ये दासास्ते दासास्सर्वलोकस्य"

ಎಂಬಂತೆ ಆಶೆಗೆ ದಾಸರಾದವರನ್ನು ಸಮಸ್ತಲೋಕಕ್ಕೂ ದಾಸರೆನ್ನಬೇಕು. ಹೀಗೆ ನಾವು ವಿಷಯಗಳಿಗೆ ಏಕೆ ಮೋಸಹೋಗಿದ್ದೇವೆಂದು ವಿಚಾರಮಾಡಿದರೆ ಮೊನ್ನೆ ನಾನು ಹೇಳಿದಂತೆ

"अज्ञानेनावृतं ज्ञानं तेन मुह्यति जंतवः"

ಎಂಬ ಶ್ಲೋಕಾನುಗುಣವಾಗಿ ನಾವೆಲ್ಲರೂ ಅಜ್ಞಾನದಿಂದಲೇ ಮೋಹಿಸಿ ದುಃಖಪಡುತ್ತಿದ್ದೇವೆ. ಇಲ್ಲಿ ಅಜ್ಞಾನವೆಂದರೆ ಜ್ಞಾನದ ಅಭಾವವಲ್ಲ. ಏಕೆಂ-ದರೆ "ನನಗೆ ತಿಳಿಯದು" ಎಂದು ಹೇಳುವಾಗಲೂ ನನಗೆ ತಿಳಿಯದೆಂಬದರ ಜ್ಞಾನವಿದ್ದೇ ಇರುತ್ತದೆ. ಆದುದರಿಂದ ಅದು ಜ್ಞಾನದ ಅಭಾವವಲ್ಲ. ಇದು

ಎಲ್ಲರಿಗೂ ತಿಳಿದವಾತು. ಇದ್ದದ್ದಿದ್ದಂತೆ ತಿಳಿದುಕೊಳ್ಳದೆ ಇರುವದು ಅಜ್ಞಾನ. ಇಂಥವರಿಗೇ ಗೀತಾದಿಶಾಸ್ತ್ರಗಳ ಉಪಯೋಗ, ಏಕೆಂದರೆ

"नात्यंतमज्ञो नो तज्ञः सोऽस्मिन्छास्त्रेधिकारवान्"

ಎಂದು ಮೊದಲನೇ ದಿನದ ವ್ಯಾಖ್ಯಾನದಲ್ಲಿ ನಾನು ಉದಾಹರಿಸಿದಂತೆ ಕೇವಲ ಅಜ್ಞನಿಗೂ ಮತ್ತು ಪೂರ್ಣಜ್ಞನಿಗೂ ಶಾಸ್ತ್ರಾಭ್ಯಾಸಕ್ಕೆ ಅಧಿಕಾರವೇ ಇಲ್ಲ. ವೇದಾಂತಶಾಸ್ತ್ರಕ್ಕೆ ಅಧಿಕಾರಿಯಾರೆಂದರೆ ನಿತ್ಯಾನಿತ್ಯವಸ್ತುವಿವೇಕ, ಶಮಾದಿ-ಷಟ್ಕಸಂಪತ್ತಿ, ಇಹಾಮುತ್ರಫಲಭೋಗವಿರಾಗ ಮತ್ತು ಮುಮುಕ್ಷುತ್ವವೆಂಬ ಸಾಧನಚತುಷ್ಟಯಗಳಿಂದ ಕೂಡಿದವನೆಂದು ಶಾಸ್ತ್ರದಲ್ಲಿ ಉಕ್ತವಾಗಿದೆ. ಈ ಸಾಧನಚತುಷ್ಟಯವಿವರಣೆಯ ಗೋಜಿಗೆ ಹೋಗದೆ ಸಂಕ್ಷೇಪವಾಗಿ ಹೇಳಬೇಕೆಂದರೆ ಮುಖ್ಯವಾಗಿ "ज्ञानभूमिश्शुभेच्छाख्या" ಎಂಬಂತೆ ತನಗೆ ಶುಭ-ವಾಗಬೇಕೆಂಬ ಬಯಕೆಯುಳ್ಳವನೇ ಇದಕ್ಕೆ ಅಧಿಕಾರಿ. ಶುಭವನ್ನು ಬಯಸಿ ವಿಷಯಗಳನ್ನು ದಾಟಿ ಮುಂದೆಮುಂದೆ ಬರುವವನಿಗೆ ವಿಷಯಗಳು ವಿರಸ-ವಾಗಿರಬೇಕೆಂಬುದು ಸ್ಪಷ್ಟವೇ ಆಗುವದು. ನಿಜವಾದ ಶುಭವನ್ನು ಬಯಸು-ವವನು ವಿಷಯಗಳಿಗೆ ಹೆಚ್ಚು ಬೆಲೆಯನ್ನು ಕಟ್ಟುವದನ್ನು ಬಿಡಬೇಕು. ವಿಷ-ಯಗಳ ಸಹವಾಸವನ್ನೇ ಬಿಡಬೇಕಾದ ನಿರ್ಬಂಧವಿಲ್ಲ. ಆದರೆ ಪ್ರಸಂಗ-ಬಂದರೆ ಅವುಗಳನ್ನು ಬಿಟ್ಟುಬರುವದಕ್ಕೂ ಅವನು ಸಿದ್ಧನಾಗಿರಬೇಕು. ವಿಷ-ಯಗಳ ಯೋಗ್ಯತೆ ಇಷ್ಟೇ ಎಂದು ಗೊತ್ತುಮಾಡಿಕೊಂಡು ವಿಷಯಗಳೊಡನೆ ವ್ಯಾಪಾರವನ್ನು ನಡೆಸುತ್ತಿದ್ದರೂ ಅಪಾಯವಿಲ್ಲ. ನಡವಳಿಕೆಯಲ್ಲಿ ನೋಡಿರಿ. ಕಳ್ಳನೆಂಬುದನ್ನು ತಿಳಿಯದೆ ಅವನೊಡನೆ ವ್ಯವಹಾರವನ್ನು ನಡೆಸಿದರೆ ಮೋ-ಸವು ತಪ್ಪಿದ್ದೇ ಅಲ್ಲ. ಅದೇ ಮನುಷ್ಯನನ್ನೇ ಕಳ್ಳನೆಂದು ತಿಳಿದು ಅವನಲ್ಲಿ ನಂಬಿಕೆಯನ್ನಿಟ್ಟರೂ ಕೇಡಾಗುವದಿಲ್ಲ. ಯೋಗ್ಯತೆಯನ್ನು ಗೊತ್ತುಮಾಡಿ-ಕೊಂಡು ನಡೆಯುವದರಲ್ಲಿ ಇಷ್ಟು ಗುಣವಿದೆ. ಈ ಸ್ಥಿತಿಯು ಒಮ್ಮೆಗೇ ಸಾಧ್ಯ-ವಾಗಲಾರದಾದರೂ "शनः पंथाः शनैः कंथाः" ಎಂಬಂತೆ ಎಂದರೆ ಗೇಣು-ಹೆಜ್ಜೆಯಿಂದ ಎಷ್ಟೋಗಾವುದ ದಾರಿಯನ್ನಾದರೂ ನಡೆಯುವಂತೆ ಅಥವಾ ಸಣ್ಣ ಸೂಜಿಯಿಂದ ದೊಡ್ಡ ಅಂಗಿಯನ್ನು ಹೊಲಿಯುವಂತೆ ಏಕಪ್ರಕಾರವಾದ

ಪ್ರಯತ್ನದಿಂದ ಅದನ್ನು ಬರಮಾಡಿಕೊಳ್ಳಬೇಕು. ತಮಗೆ ಶುಭವಾಗಬೇಕೆಂಬ ಬಯಕೆ ಎಲ್ಲರಿಗೂ ಸಾಮಾನ್ಯವಾಗಿ ಇದ್ದೇ ಇರುವದು. ಅದು ಜ್ಞಾನಭೂಮಿ ಎನಿಸಿಕೊಳ್ಳುವದಿಲ್ಲ. ಶುಭವನ್ನು ಬಯಸುವವನು ಅಶುಭವನ್ನು ಬಿಡುವದಗತ್ಯವು. ಯಾವನು ಅಶುಭವಾದ ವಿಷಯವ್ಯಾಮೋಹವನ್ನು ದೂರಮಾಡಿಕೊಳ್ಳುತ್ತ ಶುಭವನ್ನು ಬಯಸುವನೊ ಅವನ ಶುಭೇಚ್ಛೆಯೇ ನಿಜವಾದ ಜ್ಞಾನಭೂಮಿ. ಜ್ಞಾನಭೂಮಿಯಾಗಬೇಕಾದ ಶುಭೇಚ್ಛೆಯು ಅತಿಬಲವತ್ತರವಾಗಿರಬೇಕು. ಆಪುರುಷನು ಆಇಚ್ಛಾಮಯನೇ ಆಗಿಹೋಗಿರಬೇಕು. "ಅದೂ ಸಿಕ್ಕಿದರೂ ಸಿಕ್ಕಲಿ" ಎಂಬಂಥ ಶಿಥಿಲವಾದ ಇಚ್ಛೆಯುಳ್ಳವನಿಗೆ ಅದು ಸಿಕ್ಕಲಾರದು. "ಇನ್ನೇನೂ ಬೇಡ, ಅದೊಂದೇ ಬೇಕು" ಎಂಬ ದೃಢಭಾವನೆಯೇ ನಿಜವಾದ ಶುಭೇಚ್ಛೆ.

"अनिच्छन्नपि वार्ष्णेय बलादिव नियोजितः"

ಎಂಬಂತೆ ಮನಸ್ಸು ವಿಷಯಗಳ ಕಡೆಗೆ ಧಾವಿಸಿದರೂ,

"अभ्यास योगेन ततो मामिच्छाप्तुं धनंजय"

ಎಂದು ಗೀತೆಯಲ್ಲಿ ಹೇಳಿರುವಂತೆ ಶುಭೇಚ್ಛೆಯನ್ನು ಪಡೆಯುವದಕ್ಕೆ ಪ್ರಯತ್ನಿಸಬೇಕು. ತನ್ನ ಪ್ರಯತ್ನವನ್ನು ತಾನು ಮಾಡುವ ಭಾರವು ತನಗೆಂದಿಗೂ ತಪ್ಪಿದ್ದಲ್ಲ. ರೋಗಿಯಾದವನು ಔಷಧವನ್ನು ತಾನೇ ಕುಡಿಯಬೇಕಷ್ಟೆ. ಹಾಗೆಯೇ,

"उद्धरेदात्मनात्मानं नात्मानमवसादयेत्"

ಎಂಬಂತೆ ತನ್ನ ಆತ್ಮೋನ್ನತಿಯ ಸಾಧನವನ್ನು ತಾನೇ ಮಾಡಿಕೊಳ್ಳಬೇಕು. "**शिष्यप्रज्ञैव केवलं**" ಎಂಬಂತೆ ಮುಮುಕ್ಷುವಿನ ಬುದ್ಧಿಶಕ್ತಿಯೇ ಕಾರ್ಯಕಾರಿಯಾಗುವದು. ದೂರ ಓಡಿಹೋದವನು ತಾನೇ ಹಿಂದಿರುಗಿ ಬರಬೇಕು. ಅವನು ಒಂದುಪಕ್ಷ ಗಾಡಿಮುಂತಾದವುಗಳನ್ನು ಹತ್ತಿಕೊಂಡು ಬಂದರೂ ಹೋದವನೇ ಬಂದನೆಂಬ ಮಾತಿಗೇನೂ ನ್ಯೂನತೆ ಬರಲಾರದು. ಬೇಗ ಹಿಂದಿರುಗಿ ಬರುವದಕ್ಕೆ ಸಾಧಕವಾಗಿ ಗಾಡಿಮುಂತಾದವುಗಳನ್ನು ಆಶ್ರಯಿಸಿದಂತೆ

ಸಚ್ಛಾಸ್ತ್ರವನ್ನೂ ಸದ್ಗುರುವನ್ನೂ ಮರೆಹೊಕ್ಕರೂ ಶಿಷ್ಯನಿಗೆ ಸಾಧನಗಳನ್ನು ನಡೆಸುವ ಭಾರವು ತಪ್ಪಿದ್ದಲ್ಲ. ನಾಟಕದಲ್ಲಿ ಮತ್ತು ಹರಿಕಥೆಯಲ್ಲಿ ನಾವು ಕುಳಿತಿರುವಾಗ ನಮಗೆ ಅರಿವಿಲ್ಲದಂತೆ ಯಾವಾಗಲೂ ನಿದ್ರೆಯು ನಮ್ಮನ್ನು ಪರವಶಮಾಡುವದಕ್ಕೆಂದು ತಲೆಹಾಕುತ್ತಿರುವಂತೆ ವಿಷಯಗಳೊಡನೆ ವ್ಯವ-ಹಾರಮಾಡುವಾಗಲೆಲ್ಲ ಮಾಯೆಯು ನಮ್ಮನ್ನು ಆವರಿಸುವದಕ್ಕೆ ಬರುತ್ತಲೇ ಇರುವದು. ಜ್ಞಾನಯೋಗಬಲದಿಂದ ಅದನ್ನು ದೂರೀಕರಿಸುವದಕ್ಕೆ ಸಮ-ರ್ಥನಾಗಬೇಕು. ಮುಖ್ಯವಾಗಿ ಇದ್ದದ್ದನ್ನು ಇದ್ದ ಹಾಗೆ ತಿಳಿದುಕೊಳ್ಳದೆ ಇರುವದೇ ಅಜ್ಞಾನ; ಅದೇ ಬಂಧ. ಇದರ ಬಿಡುಗಡೆಗೆ ಕಾರಣವಾದ ಯೋಗರಹಸ್ಯಗಳನ್ನು ತಿಳಿಯಬೇಕೆಂಬುವನಿಗೆ ಗುರುಕುಲವಾಸವು ಅಗತ್ಯವು. ಶ್ರೀಶಂಕರಾಚಾರ್ಯರು "**कुत्र विधेयो वासः**" ಎಂದು ಪ್ರಶ್ನೆಯನ್ನು ಹಾಕಿ-ಕೊಂಡು "**सज्जननिकटेऽथवा काश्याम्**" ಎಂದು ಉತ್ತರವನ್ನು ಹೇಳಿ-ದ್ದಾರೆ. ನಿವಾಸಕ್ಕೆ ತಕ್ಕಸ್ಥಳವಾವುದೆಂದರೆ ಸಜ್ಜನಸಾನ್ನಿಧ್ಯ ಅಥವಾ ಕಾಶಿ. ಈ ಮಾತಿನಲ್ಲಿ ಸಜ್ಜನರ ಸಾನ್ನಿಧ್ಯವನ್ನು ಕಾಶಿಗಿಂತ ಹೆಚ್ಚಿನದೆಂದು ತೋರಿಸು-ವಂತೆ ಮೊದಲು ಹೇಳಿರುವದರಲ್ಲಿಯೂ ಎಷ್ಟೋ ಅರ್ಥಗಾಂಭೀರ್ಯವಿದೆ. ಶಾಸ್ತ್ರಗಳಲ್ಲಿ ಕಾಶೀರಾಮೇಶ್ವರಾದಿಕ್ಷೇತ್ರಗಳ ಯಾತ್ರೆಯನ್ನು ಮಾಡಬೇಕೆಂ-ದು ಹೇಳಿರುವದು ಆಯಾಪ್ರದೇಶಗಳ ಬೇರೆಬೇರೆ ನೋಟಗಳಿಂದ ಕಣ್ಣಿಗೆ ಹಬ್ಬವನ್ನು ಮಾಡಿಕೊಳ್ಳಲೆಂದಲ್ಲ. ತಾವು ಇದ್ದ ಸ್ಥಳದಲ್ಲಿ ತಮಗೆ ಸಾಧುಗಳು ದೊರೆಯದೆ ಇದ್ದ ಪಕ್ಷದಲ್ಲಿ ಅಂಥವರನ್ನು ಹುಡುಕಿಕೊಂಡು ಕಾಶೀರಾಮೇ-ಶ್ವರಾದಿಕ್ಷೇತ್ರಗಳನ್ನು ತಿರುಗಿದರೆ ಆ ಪುಣ್ಯಸ್ಥಳಗಳಲ್ಲಿ ಅವರ ದರ್ಶನವಾಗಿ ಜನ್ಮಸಾರ್ಥಕತೆಗೆ ಮಾರ್ಗವಾದೀತೆಂದು ಯೋಚಿಸಿ ಪೂರ್ವೀಕರು ಯಾತ್ರಾ-ವಿಧಿಯನ್ನು ಮಾಡಿರುತ್ತಾರೆ. ಈಕಾರಣದಿಂದಲೇ ವಾಸಯೋಗ್ಯವಾದ ಸ್ಥಳವು ಸಜ್ಜನಸಾನ್ನಿಧ್ಯವೆಂದು ಮೊದಲು ಹೇಳಿ ಅದರ ಅಭಾವದಲ್ಲಿ ಎರ-ಡನೆಯ ಪಕ್ಷವಾಗಿ ಕಾಶಿಯೆಂದು ಹೇಳಿರುತ್ತಾರೆ. ರತ್ನಗಳು ಕಾಡುಗಲ್ಲಿನಷ್ಟು ಅಗ್ಗವಾಗಿ ಹೇಗೆ ಸಿಕ್ಕುವದಿಲ್ಲವೊ ಹಾಗೆ ನಿಜವಾದ ಸಾಧುಗಳು ಎಲ್ಲ ಕಡೆ-ಯಲ್ಲಿಯೂ ಸಿಕ್ಕುವದಿಲ್ಲ. ಜನರನ್ನು ಮರುಳುಮಾಡುವಂಥ ಕೇವಲವೇಷ-ಧಾರಿಗಳಾದ ಸಾಧುಗಳೂ ಬಹಳವಾಗಿರುವದರಿಂದ ಯಥಾರ್ಥರಾದ ಸಾಧು-

ಗಳನ್ನು ಕಂಡುಹಿಡಿಯುವದು ಕೂಡ ಕಷ್ಟಸಾಧ್ಯವಾಗಿದೆ. ಆದರೂ ಭವಸಮುದ್ರದಿಂದ ಉದ್ಧಾರವಾಗಬೇಕೆಂಬುವರು. ಸರ್ವಪ್ರಯತ್ನದಿಂದಲೂ ಅಂಥ ಮಹಾಪುರುಷರನ್ನು ಆಶ್ರಯಿಸಬೇಕು. ಶ್ರೀಶಂಕರಾಚಾರ್ಯರು ವಿವೇಕಚೂಡಾಮಣಿ ಎಂಬ ಗ್ರಂಥದಲ್ಲಿ

"दुर्लभं त्रयमेवैतद्दैवानुग्रहहेतुकम् ।
मनुष्यत्वं मुमुक्षुत्वं माहापुरुषसंश्रयः ॥"

ಎಂದು ಹೇಳಿರುತ್ತಾರೆ. ಪರಮಾತ್ಮನ ಅನುಗ್ರಹವೇ ಕಾರಣವಾಗಿ ಉಳ್ಳ ಮನುಷ್ಯತ್ವ, ಮುಮುಕ್ಷುತ್ವ ಮತ್ತು ಮಹಾಪುರುಷಸಂಶ್ರಯ ಎಂಬ ಈ ಮೂರೂ ದುರ್ಲಭವಾದವುಗಳೆ. ಇವುಗಳಲ್ಲಿ ಮೊದಲನೆಯದಾದ ಮನುಷ್ಯತ್ವವು ನಮಗೆ ಸಿಕ್ಕಿರುವಾಗ ಅಷ್ಟಕ್ಕೇ ತೃಪ್ತರಾಗದೆ ನಾವು ಇನ್ನೂ ದೇವರಿಗೆ ಮರೆಬಿದ್ದು ಶುಭೇಚ್ಛಾರೂಪವಾದ ಮುಮುಕ್ಷುತ್ವವನ್ನು ಪಡೆದು ಮಹಾಪುರುಷ ಸಂಶ್ರಯಕ್ಕೂ ಸರ್ವಸನ್ನಾಹವನ್ನು ಮಾಡಬೇಕು. ಮಹಾಪುರುಷರ ಸಾನ್ನಿಧ್ಯವಿಲ್ಲದೆ ಕಾಶಿಯಲ್ಲಿ ವಾಸಮಾಡುವದಕ್ಕಿಂತಲೂ ಅವರ ಗ್ರಂಥಗಳನ್ನೇ ಕಾಶಿಯಾಗಿ ಭಾವಿಸಿ ಅವುಗಳ ವ್ಯಾಸಂಗದಿಂದ ಕಾಲವನ್ನು ಕಳೆಯುತ್ತಿರುವದುತ್ತಮ. ಮಹನೀಯರು ತಾವು ಪಾರ್ಥಿವಶರೀರದಲ್ಲಿದ್ದಾಗ ಯಾವ ತತ್ತ್ವಾಮೃತವನ್ನು ಜನರ ಕರ್ಣಪುಟಗಳೊಳಗೆ ಸೂಸಿ ಅವರಿಗೆ ಮರಣದ ಭಯವನ್ನು ತಪ್ಪಿಸಿದರೊ ಅದರ ಸಾರವನ್ನೇ ಘನೀಕರಿಸಿ ಗ್ರಂಥಗಳಲ್ಲಿ ಕೂಡಿಟ್ಟಿರುವರು. ಈಗ ನಾವು ಅದನ್ನು ಸೇವಿಸುವದರಿಂದ ಅದರ ರಸವೇಗವು ನಮ್ಮ ರಕ್ತನಾಡಿಗಳಲ್ಲಿ ಪ್ರಸರಿಸದೆ ಇರುವದಿಲ್ಲ. ಈ ಕಾಲದಲ್ಲಿ ಸಾಧುಗಳನ್ನು ಸಾಕ್ಷಾತ್ತಾಗಿ ಆಶ್ರಯಿಸುವದರಲ್ಲಿ ಅವರ ವ್ಯವಹಾರದ ವಿಷಯವಾಗಿ ಒಂದೊಂದು ಸಂದರ್ಭದಲ್ಲಿ ಮನಸ್ಸಿನಲ್ಲಿ ಭಿನ್ನಭಾವನೆಗಳು ಉತ್ಪನ್ನವಾಗಿ ಅವರ ಉಪದೇಶದಲ್ಲಿ ಗೌರವವು ನೆಲೆಗೊಳ್ಳದೆ ಹೋಗುವ ಸಂಭವವುಂಟಾದರೂ ಆಗಬಹುದು. ಲೋಕವಿಖ್ಯಾತರಾದ ಮಹಾಪುರುಷರ ಗ್ರಂಥಗಳನ್ನು ಆಶ್ರಯಿಸುವದರಲ್ಲಿ ಯಾವ ಬಾಧಕವೂ ಇಲ್ಲ. ಆದರೂ "महत्सेवां द्वार

माहुर्विमुक्तेः" ಎಂಬಂತೆ ಮತ್ತು

"न साधयति मां योगो न सांख्यो न व्रतादिकं ।
यथावरुंधे सत्संगः ... ... ..."

ಎಂದು ಪರಮಾತ್ಮನು ತಾನೇ ಹೇಳಿರುವಂತೆ ಪರಮಾತ್ಮನ ಪೂರ್ಣಾನುಗ್ರಹವಾಗಬೇಕಾದರೆ—ಸೂರ್ಯೋದಯಕ್ಕೆ ಮೊದಲು ಅರುಣೋದಯವು ಹೇಗೋ ಹಾಗೆ-ಮೊದಲು ಗುರುವಿನ ಅನುಗ್ರಹವು ಬೇಕೇಬೇಕಾಗುವದು. ಗುರು ಸಿಕ್ಕುವದಕ್ಕಾದರೂ ಮೊದಲು ಪರಮಾತ್ಮನ ಅನುಗ್ರಹವು ಬೇಕು. ನಮ್ಮನ್ನು ಪರಮಾತ್ಮನ ಅನುಗ್ರಹಕ್ಕೆ ಪಾತ್ರರನ್ನಾಗಿ ಮಾಡುವಂಥ ಗುರು ನಮಗೆ ಎಲ್ಲಿಯವರೆಗೆ ಸಿಕ್ಕಿಲ್ಲವೊ ಅಲ್ಲಿಯವರೆಗೆ ನಮ್ಮ ಇಚ್ಛಾವೇಗವಿನ್ನೂ ಪರಮಾತ್ಮನನ್ನು ಮುಟ್ಟಿಲ್ಲವೆಂದು ತಿಳಿಯಬೇಕು. ಏಕೆಂದರೆ,

"यावन्नानुग्रहः साक्षाज्जायते परमेश्वरात् ।
तावन्न सद्गुरुं कश्चित्सच्छास्त्रमपि विंदति ॥"

ಎಂಬಂತೆ ಎಲ್ಲಿಯವರೆಗೆ ಪರಮಾತ್ಮನ ಅನುಗ್ರಹವಾಗುವದಿಲ್ಲವೊ ಅಲ್ಲಿಯವರೆಗೆ ನಮಗೆ ಸದ್ಗುರು ಸಿಕ್ಕುವದೂ ಇಲ್ಲ; ಸಚ್ಛಾಸ್ತ್ರದಲ್ಲಿ ಪ್ರವೃತ್ತಿಯೂ ಆಗುವದಿಲ್ಲ. ಆದುದರಿಂದ ಪರಮಾತ್ಮನಿಗೆ ಶರಣುಹೊಕ್ಕು ಅವನ ಕೃಪೆಯಿಂದ ಸಚ್ಛಾಸ್ತ್ರಗಳನ್ನು ವ್ಯಾಸಂಗಮಾಡಿ ಸದ್ಗುರುವನ್ನು ಆಶ್ರಯಿಸಿ ತತ್ತ್ವಜ್ಞಾನವನ್ನು ಪಡೆದು ಅಜ್ಞಾನದಿಂದ ಮುಕ್ತರಾಗಬೇಕು.

"ज्ञानेन तु तदज्ञानं येषां नाशितमात्मनः ।
तेषामादित्यवज्ज्ञानं प्रकाशयति तत्परम् ॥"

ಎಂಬ ಗೀತೋಕ್ತಿಯಂತೆ ಯಾರ ಅಜ್ಞಾನವು ಜ್ಞಾನದಿಂದ ನಾಶಹೊಂದುವದೊ ಅವರಿಗೆ ಸೂರ್ಯನಂತೆ ಪ್ರಕಾಶಿಸುವ ಜ್ಞಾನವಾಗುವದು. ಅಜ್ಞಾನವೆಂದರೇನೆಂಬುದನ್ನು ಹಿಂದೆ ಹೇಳಿದ್ದೇನೆ.

"त्रिभिर्गुणमयैर्भावैरेभिस्सर्वमिदं जगत् ।
मोहितं नाभिजानाति मामेभ्यः परमव्ययम् ॥"

ಎಂದು ಶ್ರೀಕೃಷ್ಣನೇ ಹೇಳಿರುವಂತೆ ಈ ಪ್ರಪಂಚವೆಲ್ಲ ಸತ್ವರಜಸ್ತಮಗಳೆಂಬ ಗುಣತ್ರಯಗಳಿಂದ ಮೋಹಿತವಾಗಿ ಅವ್ಯಯವಾದ ಪರಮಾತ್ಮಸ್ವರೂಪವನ್ನು ಅರಿಯದೆ

अन्योन्यस्मिन्नन्योन्यात्मकतामन्योन्यधर्मांश्चाध्यस्येतरेतराविवेकेन अत्यंतविविक्तयोर्धर्मधर्मिणोर्मिथ्याज्ञाननिमित्तः सत्यानृते मिथुनीकृत्य अहमिदं ममेदमिति नैसर्गिकोऽयं लोकव्यवहारः"

ಎಂದು ಶ್ರೀಶಂಕರಾಚಾರ್ಯರು ಶಾರೀರಕಮೀಮಾಂಸಾಭಾಷ್ಯದ ಪ್ರಾರಂಭದಲ್ಲಿ ಹೇಳಿರುವಂತೆ ನಶ್ವರವಾದ ಮತ್ತು ಜಡವಾದ ದೇಹಾದಿಗಳನ್ನು ಆತ್ಮವೆಂದು ಭ್ರಮಿಸಿ ದುಃಖಕ್ಕೆ ಗುರಿಯಾಗುತ್ತಿರುವದು. ದೇಹವನ್ನು ಆತ್ಮವೆಂದು ತಿಳಿಯುವದರಿಂದ ತೋರುವಂಥ ಮಹತ್ತಾದ ಆಪತ್ತು ಬೇರೆ ಯಾವದರಿಂದಲೂ ಇಲ್ಲ. ದೇಹಕ್ಕೆ ಸಾವೆಂಬುದೊಂದು ಅತಿಭಯಂಕರವಾದ ಗಂಡಾಂತರ. ಮನುಷ್ಯನಿಗೆ ಸಾವಿನಷ್ಟು ಎದೆಗೆಡಿಸುವ ವಿಪತ್ತು ಇನ್ನಾವುದೂ ಇಲ್ಲ. ಜನರು, ಮರಣವು ಸನ್ನಿಹಿತವಾದಾಗ ಹೆದರುವ ಮಾತೊಂದುಕಡೆ ಇರಲಿ. ಮದುವೆ ಮುಂಜಿಗಳಂಥ ಶುಭಸಮಾರಂಭಗಳಲ್ಲಿ ಸಾವೆಂಬ ಹೆಸರನ್ನೇ ಅಮಂಗಳವಾಗಿ ಭಾವಿಸುವರು. ಪುರಾಣಗಳಲ್ಲಿ ನೋಡಿದರೆ ಎಷ್ಟೋ ಜನರು ಸಾವನ್ನು ತಪ್ಪಿಸಿಕೊಳ್ಳಬೇಕೆಂದೇ ಎಷ್ಟೋ ಉಗ್ರತಪಶ್ಚರ್ಯೆಯನ್ನು ಮಾಡುತ್ತಿದ್ದರೆಂದು ತಿಳಿಯುವದು. ಈಗಲೂ ಇತರವಿಷಗಳು ತಮ್ಮ ದೇಹಕ್ಕೆ ನಾಟದೆ ಇರಲೆಂದು ಎಷ್ಟೋ ಜನರು ತಮ್ಮ ದೇಹವನ್ನೆಲ್ಲ ಬೇವಿನ ತೊಗಟೆ ಮುಂತಾದವುಗಳ ಸೇವನೆಯಿಂದ ಕ್ರಮಕ್ರಮವಾಗಿ ವಿಷಮಯವಾಗಿ ಮಾಡಿಕೊಳ್ಳುತ್ತಾರೆ;

ಶೀತವಾತಗಳು ಬಾಧಿಸದಿರಲೆಂದು ಮದ್ಯಪಾನವನ್ನು ಮಾಡುತ್ತಾರೆ; ಪ್ಲೇಗಿನ ಅಥವಾ ಶಿಡುಬಿನ ಕ್ರಿಮಿಗಳ ವಿಷವನ್ನು ಏರಗೊಡದಂತೆ ಔಷಧರೂಪವಾದ ವಿಷದ್ರವವನ್ನು ತಮ್ಮ ರಕ್ತಕ್ಕೆ ಸೇರಿಸುತ್ತಾರೆ. ಏನುಮಾಡಿದರೇನು! "**जातस्य हि ध्रुवो मृत्युः**" ಎಂಬಂತೆ ಹುಟ್ಟಿದವನಿಗೆ ಸಾವು ಬಿಟ್ಟಿದ್ದಲ್ಲ. ಹಾಗಾದರೆ ಸಾವಿಗೆ ಪರಿಹಾರವೇ ಇಲ್ಲವೆ? ಎಂದರೆ ಅದು ಅಂಥ ಅಪರಿಹಾರ್ಯವಲ್ಲ. ಅದರ ಪರಿಹಾರವನ್ನು ಎಲ್ಲಿ ಹುಡುಕಬೇಕೊ ಅಲ್ಲಿ ಹುಡುಕಿದರೆ ಸಿಕ್ಕೀತು. ರಾಮೇಶ್ವರಕ್ಕೆ ಹೋಗಿ ವಿಶ್ವೇಶ್ವರನನ್ನು ಹುಡುಕಿದರೆ ಸಿಕ್ಕುವನೆ? ಮರಣಕ್ಕೆ ಪರಿಹಾರವು ಲೌಕಿಕವಾದ ಕ್ಷುದ್ರೋಪಾಯಗಳಿಂದ ಆಗುವದಿಲ್ಲ. ಮರಣದ ಪರಿಹಾರವು ವೇದಾಂತದಲ್ಲಿರುವದೆಂದು ನಮ್ಮವರು ಹೇಳುವ ಮಾತು ಇರಲಿ. ನಾನು ಮೊದಲನೇ ದಿನದ ವ್ಯಾಖ್ಯಾನದಲ್ಲಿ ಹೇಳಿದಂತೆ ಜರ್ಮನಿದೇಶದ ತತ್ತ್ವವೇತ್ತರಾದ ಶೋಪನ್ಹೇರ ಸಾಹೇಬರು ಮತ್ತು ಪ್ರಸಿದ್ಧಪಾಶ್ಚಾತ್ಯತತ್ತ್ವಜ್ಞಾನಿಗಳಾದ ಮ್ಯಾಕ್ಸಮುಲ್ಲರ ಸಾಹೇಬರು ಕೂಡ ಮರಣದ ಭಯವನ್ನು ಕಳೆಯುವ ಅಮೃತವು ವೇದಾಂತವೊಂದೇ ಎಂದು ಒಪ್ಪಿಕೊಂಡಿರುವರು. ಇದೊಂದರಲ್ಲಿ ಬಿಟ್ಟರೆ ಈಬ್ರಹ್ಮಾಂಡವನ್ನೆಲ್ಲ ಪರಮಾಣುಗಳನ್ನಾಗಿಮಾಡಿ ತೂರಿನೋಡಿದರೂ ಎಲ್ಲೆಲ್ಲಿಯೂ ಅದರ ಸೆಲೆ ಇರುವದಿಲ್ಲ. ಹಾಗಾದರೆ ವೇದಾಂತವು ಯಾವ ಪರಿಹಾರವನ್ನು ಹೇಳುತ್ತದೆ? ಅದೇ ಆತ್ಮವಿಚಾರ. ಶ್ರೀವಿದ್ಯಾರಣ್ಯಸ್ವಾಮಿಗಳು ಆತ್ಮಸ್ವರೂಪದ ವಿಷಯದಲ್ಲಿ ಪಂಚದಶೀಯೆಂಬ ಪ್ರಕರಣದ ಆದಿಭಾಗದಲ್ಲಿ ಹೇಳಿರುವದೇನೆಂದರೆ— ಜಾಗ್ರದವಸ್ಥೆಯಲ್ಲಿ ಶಬ್ದಸ್ಪರ್ಶಾದಿಗಳ ಮೂಲಕ ಬೇರೆಬೇರೆ ಜ್ಞಾನವಾಗುತ್ತದೆ. ಶಬ್ದದಿಂದ ಆಗುವ ಜ್ಞಾನವೂ ಜ್ಞಾನವೆ. ಸ್ಪರ್ಶದಿಂದ ಆಗುವ ಜ್ಞಾನವೂ ಜ್ಞಾನವೆ. ಹೀಗೆ ಶಬ್ದಾದಿಭೇದಗಳಿಂದ ಭಿನ್ನವಾಗಿ ತೋರಿದರೂ ಜ್ಞಾನಸ್ವರೂಪವೆಂದಿಗೂ ಒಂದೇ. ಸ್ವಪ್ನದಲ್ಲಿಯೂ ಹಾಗೆಯೆ. ಆದರೆ ಅದು ಜಾಗ್ರದವಸ್ಥೆಯ ಜ್ಞಾನದಷ್ಟು ಸ್ಥಿರವಾದುದಲ್ಲ. ಆದರೂ ಜಾಗ್ರದವಸ್ಥೆಯ ಜ್ಞಾನದಂಥ ಜ್ಞಾನವೆ. ಗಾಢನಿದ್ರೆಯಿಂದೆದ್ದವನು ಇಷ್ಟುಹೊತ್ತು ನನಗೇನೂ ತಿಳಿಯಲಿಲ್ಲವೆಂದು ಹೇಳುವನಷ್ಟೆ. ಈಸ್ಮರಣೆಯು ಅವನಿಗೆ ಅನುಭವದ ಹೊರತು ಬರುವದಿಲ್ಲ. ಆದುದರಿಂದ ಅವನಿಗೆ ನಿದ್ರಾಕಾಲದಲ್ಲಿ ಏನೂ ತಿಳಿಯ

ಲ್ಲವೆಂಬ ಜ್ಞಾನವು ಅನುಭವದಲ್ಲಿರಬೇಕು. ಇದು ಕೂಡ ಜಾಗ್ರತ್ಸ್ವಪ್ನಗಳ ಜ್ಞಾನಕ್ಕೆ ಭಿನ್ನವಲ್ಲ. ಹೀಗೆ ಸ್ವಯಂಭಾನರೂಪವಾದ ಈ ಜ್ಞಾನವು ಮೂರು ಅವಸ್ಥೆಗಳಲ್ಲಿಯೂ ಏಕರೀತಿಯಾಗಿರುವಂತೆ ಇಂದಿಗೂ, ನಾಳೆಗೂ, ಈ ಯುಗಕ್ಕೂ, ಹೆಚ್ಚೇನು! ಕಲ್ಪಕಲ್ಪಾಂತರಗಳಿಗೂ ಉದಯಾಸ್ತಾದಿವಿಕಾರ ವಿಲ್ಲದೆ ಏಕರೂಪವಾಗಿರುವದು. ಹೀಗೆ ಜ್ಞಾನಮಯವಾದ ಆತ್ಮಸ್ವರೂಪ ವನ್ನು ದೇಹದ ಮೇಲೆ ಆರೋಪಿಸಿಕೊಂಡು ಅದರ ಮೇಲೆ ಪರಮಪ್ರೀತಿ ಯನ್ನು ತೋರಿಸುತ್ತ ದೇಹಧರ್ಮವಾದ ಸ್ಥೂಲತ್ವ, ಕೃಶತ್ವ ಮೊದಲಾದವು ಗಳನ್ನು ಆತ್ಮನ ಮೇಲೆ ಆರೋಪಿಸುವದರಿಂದ ಮರಣವೆಂದರೆ ಬೆಚ್ಚಿಬೀಳುವ ಸ್ಥಿತಿಯೊದಗುವದು. ದೇಹವೇ ಆತ್ಮವಾದರೆ 'ನಾನು ನೋಡುತ್ತೇನೆ ಎಂದು' ಮುಂತಾಗಿ ಹೇಳುವಾಗ ಆ ಮಾತು ಸಮಂಜಸವಾಗಿರುವದೊ? ಜಡವಾದ ದೇಹವು ಏನು ನೋಡೀತು? ಏನು ಕೇಳೀತು? ಮತ್ತು 'ನನ್ನ ದೇಹ'ವೆಂದು ಹೇಳುವ ಮಾತಿಗೆ ಅರ್ಥವೇನು? ಅಲ್ಲದೆ ಬಾಲ್ಯಶರೀರಕ್ಕೆ ಭಿನ್ನವಾದ ಯುವ್ವನ ಶರೀರದಲ್ಲಿ ಮೊದಲಿನವನೇ ನಾನೆಂಬ ಜ್ಞಾನವು ಹೇಗೆ ಆಗುತ್ತದೆ? ಇನ್ನು ದೇಹವೇ ನಾನಾದರೆ ದೇಹದ ಕಡೆಯು ಲಕ್ಷ್ಯವಿರದಂತೆ ಅಫೀಂ ಗಾಂಜಾಮೊದ ಲಾದ ಅಪಾಯಕರವಸ್ತುವನ್ನು ಸೇವಿಸುವದೇಕೆ? ವಿಚಾರಮಾಡಿ ನೋಡಿ ದರೆ ದೇಹಾತ್ಮಬುದ್ಧಿಯೇ ಸಮಸ್ತ ಅಶುಭಗಳಿಗೂ ತವರುಮನೆಯಾಗಿದೆ. ಸುಷುಪ್ತಿಕಾಲದಲ್ಲಿ ದೇಹಭಾನವಿಲ್ಲದಿರುವದರಿಂದ ಆನಂದಾವಿರ್ಭಾವವಾಗು ವದು ಎಲ್ಲರಿಗೂ ಅನುಭವಸಿದ್ಧವಾಗಿದೆ. ಸುಷುಪ್ತಿಮೂರ್ಛಾಮರಣಾದಿ ಗಳಲ್ಲಿ ಅತಿವ್ಯಕ್ತವಾಗಿ ಜಡವಾಗಿರುವ ಇಂಥ ಶರೀರವನ್ನು ಸಚ್ಚಿದಾನಂದ ಸ್ವರೂಪವಾದ ಆತ್ಮವೆಂದು ಭ್ರಾಂತಿಗೊಂಡರೆ ಅದಕ್ಕೆ ಮರಣವಲ್ಲದೆ ಮತ್ತಿ ನ್ನೆಂಥ ಫಲವು ಸಿಕ್ಕೀತು? ದೇವತೆಗಳ ಒಡೆಯನಾದ ಇಂದ್ರನೂ ಅಸುರ ಸ್ವಾಮಿಯಾದ ವಿರೋಚನನೂ ಆತ್ಮತತ್ತ್ವವನ್ನು ತಿಳಿಯಬೇಕೆಂದು ಬ್ರಹ್ಮನ ಬಳಿಗೆ ಹೋದರು. ವಿರೋಚನನು

"दंभो दर्पोऽतिमानश्च क्रोधः पारुष्यमेव च ।
अज्ञानंचाभिजातस्य पार्थ संपदमासुरीं ॥"

ಎಂದು ಭಗವದ್ಗೀತೆಯಲ್ಲಿ ಹೇಳಿರುವಂತೆ ಧರ್ಮಧ್ವಜರೂಪವಾದ ದಂಭದಿಂದ-ಲೂ, ವಿದ್ಯಾಧನಾದಿಜನ್ಯವಾದ ದರ್ಪದಿಂದಲೂ, ದುರಭಿಮಾನದಿಂದಲೂ, ಕ್ರೋಧದಿಂದಲೂ, ಮರ್ಮಭೇದಕವಾಕ್ಕುಗಳನ್ನಾಡುವ ಸೊಕ್ಕಿನಿಂದಲೂ ಕರ್ತ-ವ್ಯಾದಿವಿಷಯಗಳಲ್ಲಿ ತಿರಸ್ಕಾರಬುದ್ಧಿಯಿಂದಲೂ ಕೂಡಿದ ಅಸುರಸಂಪತ್ತಿನ-ವನಾದುದರಿಂದ ದೇಹವೇ ಆತ್ಮವೆಂದು ತಿಳಿದು ದುಃಖಿಯಾದನು. ಇಂದ್ರನು

"अभयं सत्त्वसंशुद्धिर्ज्ञानयोगव्यवस्थितिः ।
दानं दमश्च यज्ञश्च स्वाध्यायस्तप आर्जवम् ॥
अहिंसा सत्यमक्रोधस्त्यागश्शांतिरपैशुनम् ।
दया भूतेष्वलोलुप्त्वं मार्दवं ह्रीरचापलम् ॥
तेजः क्षमा धृतिश्शौचमद्रोहो नातिमानिता ।
भवंति संपदं दैवीमभिजातस्य भारत ॥"

ಎಂಬಂತೆ ಅಭೀರುತ್ವ, ಶುದ್ಧಸತ್ತ್ವಭಾವ, ಶಾಸ್ತ್ರಾಚಾರ್ಯೋಪದಿಷ್ಟಜ್ಞಾನನಿಷ್ಠ ತೆ, ಅನ್ನವಸ್ತ್ರಾದಿದಾನ, ಬಾಹ್ಯೇಂದ್ರಿಯನಿಗ್ರಹ, ಯಜ್ಞ, ಅಧ್ಯಯನ, ತಪಸ್ಸು ಋಜುತ್ವ, ಅಹಿಂಸೆ, ಸತ್ಯ, ಅಕ್ರೋಧ, ಸನ್ಯಾಸ, ಶಾಂತಿ, ಪಿಶುನತ್ವವಿಲ್ಲ-ದಿರುವಿಕೆ, ದಯೆ, ಇಂದ್ರಿಯಗಳ ಅವಿಕ್ರಿಯತ್ವ, ಅಕ್ರೌರ್ಯ, ಲಜ್ಜೆ, ಚಪ-ಲತೆಯಿಲ್ಲದಿರುವಿಕೆ, ಪ್ರಾಗಲ್ಭ್ಯ, ಕ್ಷಮೆ, ಧೈರ್ಯ, ನೈರ್ಮಲ್ಯ ಮತ್ತು ದುರಭಿ-ಮಾನರಾಹಿತ್ಯದಿಂದ ಕೂಡಿದ ದೈವೀಸಂಪತ್ತುಳ್ಳವನಾದುದರಿಂದ ಯಥಾ-ರ್ಥವನ್ನು ತಿಳಿದು ಸುಖಿಯಾದನು. ಯಾರ ಬುದ್ಧಿಯಲ್ಲಿ ಅಸುರಸಂಪತ್ತು ತಾಂಡವಾಡುವದೊ ಅವರ ಬುದ್ಧಿಯು

"अधर्मं धर्ममिति या मन्यते तमसावृता"

ಎಂಬಂತೆ ಇದ್ದದ್ದನ್ನು ಇದ್ದ ಹಾಗೆ ತಿಳಿಯದೆ ವಿಪರೀತವಾಗಿ ತಿಳಿಯುವದು. ಯಾರ ಬುದ್ಧಿಯಲ್ಲಿ ದೈವೀಸಂಪತ್ತು ವಿಜೃಂಭಿಸುವದೊ ಅವರ ಬುದ್ಧಿಯು

"प्रवृत्तिं च निवृत्तिं च कार्याकार्ये भयाभये।
बंधं मोक्षं च या वेत्ति ... ... ...

ಎಂಬಂತೆ ಯಾವದನ್ನು ಬಿಡಬೇಕು, ಯಾವದನ್ನು ಹಿಡಿಯಬೇಕು, ಯಾವದನ್ನು ಮಾಡಬೇಕು, ಯಾವದನ್ನು ಮಾಡಬಾರದು, ಯಾವದು ಭಯಪ್ರದ, ಯಾವದು ಅಭಯಪ್ರದ, ಯಾವದು ಬಂಧ, ಯಾವದು ಮೋಕ್ಷ ಎಂಬುದನ್ನು ತಿಳಿಯುವದು. ಆದುದರಿಂದ ದೈವೀಸಂಪತ್ಪ್ರಧಾನವಾದ ಸಾತ್ತ್ವಿಕಬುದ್ಧಿಗೆ ಮಾತ್ರ ಯಥಾರ್ಥಗ್ರಹಣಶಕ್ತಿಯುಂಟಾಗುವದು.

ಇನ್ನು ಕೆಲವರು ಇಂದ್ರಿಯಗಳಿಂದಲೇ ಎಲ್ಲ ವ್ಯವಹಾರವೂ ನಡೆಯುವದರಿಂದ ಇಂದ್ರಿಯವೇ ಆತ್ಮವೆನ್ನುವರು. ಇದು ನಿಜವಾದರೆ ಕಿವಿಮೂಗು ಮೊದಲಾದ ಇಂದ್ರಿಯಗಳಿಲ್ಲದವರೂ ಇರುವದಿಲ್ಲವೊ? ಮತ್ತು ನನ್ನ ಕಣ್ಣು, ನನ್ನ ಕಿವಿ ಎಂಬ ಮಾತುಗಳು ಹೇಗೆ ಸಾಧುವಾಗುವವು? ಇದಲ್ಲದೆ ಮನಸ್ಸು ಬೇರೆ ವ್ಯಾಪಾರದಲ್ಲಿ ತೊಡಗಿರುವಾಗ ಇಂದ್ರಿಯಗಳು ಏನನ್ನೂ ಗ್ರಹಿಸುವದೇ ಇಲ್ಲವಲ್ಲ! ಇಂಥ ಜಡವಾದ ಇಂದ್ರಿಯಗಳನ್ನು ಆತ್ಮವೆಂದು ಹೇಳಬಹುದೆ?

ಮತ್ತೆ ಕೆಲವರು ಉಸಿರಾಡುವದು ನಿಂತರೆ ಸತ್ತನೆಂದು ಹೇಳುವದರಿಂದಲೂ ಸುಷುಪ್ತ್ಯವಸ್ಥೆಯಲ್ಲಿ ಇಂದ್ರಿಯಗಳಾವುವೂ ಜಾಗರೂಕವಾಗಿಲ್ಲದಿದ್ದರೂ ಪ್ರಾಣವಿದ್ದೇ ಇರುವದರಿಂದಲೂ ಪ್ರಾಣವೇ ಆತ್ಮವೆಂದು ಹೇಳುವರು. ಪ್ರಾಣವೆಂಬುದು ಹೊರಗಣ ಗಾಳಿಯಂತೆ ಅದೊಂದು ಗಾಳಿ. ನನ್ನ ಪ್ರಾಣವೆಂದು ಹೇಳುವಾಗ ಪ್ರಾಣವೇ ಹೇಗೆ ಆತ್ಮವಾದೀತು? ಹೊರಕ್ಕೂ ಒಳಕ್ಕೂ ಓಡಾಡಿಕೊಂಡಿರುವದಾಗಿಯೂ ನಿದ್ರಾಕಾಲದಲ್ಲಿ ತಾನಿದ್ದರೂ ತನ್ನೆದುರಿಗೇ ಯಾರಾದರೂ ಒಂದು ವಸ್ತುವನ್ನು ಕದ್ದುಕೊಂಡು ಹೋದರೂ ತಿಳಿಯದಷ್ಟು ಜಡವಾಗಿಯೂ ಇರುವ ಪ್ರಾಣವನ್ನು ಆತ್ಮವೆಂದರೆ ಹೇಗೆ ಒಪ್ಪೀತು?

ಬೇರೆ ಕೆಲವರು ಇಂದ್ರಿಯಜ್ಞಾನಕ್ಕೆಲ್ಲ ಮನಸ್ಸೇ ಹೇತುವಾದುದರಿಂದ ಮನಸ್ಸನ್ನೇ ಆತ್ಮವೆಂದು ತಿಳಿಯುವರು.

"मन एव मनुष्याणां कारणं बंधमोक्षयोः"

ಎಂಬ ವಚನದಲ್ಲಿ ಮನುಷ್ಯನ ಬಂಧಕ್ಕೂ ಮೋಕ್ಷಕ್ಕೂ ಮನಸ್ಸೇ ಕಾರಣವೆಂದು ಹೇಳಿರುವದರಿಂದ ನಮ್ಮ ಬಂಧಕ್ಕೂ ಕಾರಣವಾಗಿರುವ ಮನಸ್ಸು ನಮ್ಮ ಆತ್ಮವಾಗಲಾರದು. 'ನನ್ನ ಮನಸ್ಸು ಬೇರೆ ಕಡೆಗೆ ಹೋಗಿತ್ತು' ಎಂದು ನಾವು ಆಡುತ್ತೇವಲ್ಲ. ಮನಸ್ಸೇ ಆತ್ಮವಾದರೆ ಆ ಮಾತು ಹೇಗೆ ಒಪ್ಪುತ್ತದೆ?

ಹೀಗೆಯೇ ಒಬ್ಬರು ಕ್ಷಣಿಕವಿಜ್ಞಾನರೂಪಬುದ್ಧಿಯೇ ಆತ್ಮವೆಂದೂ, ಇನ್ನೊಬ್ಬರು ಪ್ರಕಾಶರೂಪವಾಗಿಯೂ ಅಪ್ರಕಾಶರೂಪವಾಗಿಯೂ ಇರುವ ಆನಂದಮಯಕೋಶವೇ ಆತ್ಮನೆಂದೂ, ಮತ್ತೊಬ್ಬರು ಶೂನ್ಯವೇ ಪರಮತತ್ತ್ವವೆಂದೂ ಮನಸ್ಸಿಗೆ ತೋರಿದಂತೆ ಪ್ರತಿಪಾದಿಸಹೋಗುತ್ತಾರೆ. ಅವೆಲ್ಲ ಶಾಸ್ತ್ರೀಯವಿಷಯಗಳಾದುದರಿಂದ ಅವುಗಳನ್ನು ಈಗ ವಿವರಿಸಹೋಗುವದು ಜನರ ಬೇಸರಕ್ಕೆ ಕಾರಣವಾದೀತು. ಶುಭವನ್ನು ಬಯಸುವವನು ಮುಖ್ಯವಾಗಿ ಅಶುಭವನ್ನು ಬಿಡಬೇಕೆಂದು ಹಿಂದೆ ಹೇಳಿದಂತೆ ದೇಹ, ಇಂದ್ರಿಯ, ಪ್ರಾಣ, ಮನಸ್ಸು ಮೊದಲಾದ ವಸ್ತುಗಳಿಗೆ ಅವುಗಳ ಯೋಗ್ಯತೆಯನ್ನು ಮೀರಿದ ಬೆಲೆಯನ್ನು ಕಟ್ಟಿ ಅವುಗಳೇ ಆತ್ಮನೆಂದು ಮರುಳಾಗುವದನ್ನು ಬಿಡಬೇಕು. ಇನ್ನು ಆತ್ಮನ ಸಚ್ಚಿದಾನಂದಸ್ವರೂಪವನ್ನು ಮನಗಾಣಬೇಕಾದರೆ

"तद्विद्धि प्रणिपातेन परिप्रश्नेन सेवया ।
उपदेक्ष्यंति ते ज्ञानं ज्ञानिनस्तत्त्वदर्शिनः ॥"

ಎಂಬಂತೆ ತತ್ತ್ವದರ್ಶಿಗಳಾದವರಿಗೆ ಶರಣುಹೊಕ್ಕು ಅವರನ್ನು ಸೇವಿಸಿ ಪ್ರಾರ್ಥಿಸಿದರೆ ಅವರು ಅದನ್ನು ತೋರಿಸುತ್ತಾರೆ. ಪರಮಾತ್ಮಸ್ವರೂಪವಿಚಾರದಲ್ಲಿ ಅನೇಕ ಗ್ರಂಥಾಂತರಗಳನ್ನು ಓದಿ ಗಂಗಾಪ್ರವಾಹದಂತೆ ವ್ಯಾಖ್ಯಾನದ ಅತಿವೃಷ್ಟಿಯನ್ನು ಸುರಿಸುವ ಮಹಾವಿದ್ವಾಂಸರು ಬಹುಜನರಿರಬಹದು. ಆದುದರಿಂದಲೆ ಮೇಲಿನ ಗೀತೋಕ್ತಿಯಲ್ಲಿ ತತ್ತ್ವದರ್ಶಿಗಳೆಂಬ ಶಬ್ದವು ಉಪಯೋಗಿಸಲ್ಪಟ್ಟಿರುವದು.

"गुरोस्तु मौनं व्याख्यानं शिष्यास्तु च्छिन्नसंशयाः"

ಎಂಬಂತೆ ಮೌನದಲ್ಲಿದ್ದೂ ಶಿಷ್ಯನ ಸಂದೇಹಗಳನ್ನೆಲ್ಲ ನಿರ್ಮೂಲ ಮಾಡಿ ಆತ್ಮಸಾಕ್ಷಾತ್ಕಾರಮಾಡಿಸುವ ಕೃತಿಯು ತತ್ತ್ವದರ್ಶಿಗಳಿಂದ ಮಾತ್ರ ಆಗುವದು. **"आश्चर्यो वक्ता कुशलोऽस्य श्रोता"** ಎಂಬಂತೆ ಅಪರೋಕ್ಷಜ್ಞಾನವು ಹೇಳುವಿಕೆ ಮತ್ತು ಕೇಳುವಿಕೆಗೆ ದೂರವಾದುದು. ಅದು ಅನುಭವೈಕವೇದ್ಯವೇ ಹೊರತು ವಾಕ್ಕೌಶಲಕ್ಕೆ ದಕ್ಕುವದಿಲ್ಲ. ಆತ್ಮಸ್ವರೂಪವನ್ನು "ತಿಳಿಸುವ ಮಾತಲ್ಲ; ತಿಳಿಸದೆ ತಿಳಿಯುವ ಮಾತಲ್ಲ." ಎಂದು ಒಬ್ಬ ಅನುಭವಿಯು ಹೇಳಿರುವದು ಬಹು ಚೆನ್ನಾಗಿದೆ.

ಒಂದೂರಲ್ಲಿ ಒಬ್ಬ ಜ್ಞಾನಿಯಿದ್ದನು. ಅವನು ತನ್ನ ಏಕಪುತ್ರನಿಗೆ ವೇದಾಂತವನ್ನು ಚೆನ್ನಾಗಿ ಕಲಿಸಬೇಕೆಂದು ಅವನನ್ನು ಬ್ರಹ್ಮನಿಷ್ಠನಾದ ಒಬ್ಬ ಗುರುವಿನ ಬಳಿಗೆ ಕಳುಹಿಸಿಕೊಟ್ಟನು. ಆಮಗನು ಅಲ್ಲಿ ಕೆಲವು ದಿನಗಳಿದ್ದು ಒಂದು ದಿನ ಮನೆಗೆ ಬಂದನು. ತಂದೆಯು ಭಗವತ್ಸ್ವರೂಪವೆಂತಿರುವದೆಂದು ಕೇಳಿದಾಗ ಅವನು ವೈಕುಂಠ ಮತ್ತು ಕೈಲಾಸಾದಿಲೋಕಗಳ ವರ್ಣನೆಯನ್ನೂ ಅಲ್ಲಿರುವ ವಿಷ್ಣುಶಿವಾದಿಸಗುಣಮೂರ್ತಿಗಳ ರೂಪವಿಶೇಷಗಳನ್ನೂ ಹೇಳಿದನು. ಆಗ ತಂದೆಯು ಇನ್ನೂ ಚೆನ್ನಾಗಿ ತಿಳಿದುಕೊಂಡು ಬಾರೆಂದು ಹೇಳಿ ಅವನನ್ನು ಮತ್ತೆ ಕಳುಹಿಸಲು ಅವನು ಹೋಗಿ ಪ್ರಸ್ಥಾನತ್ರಯಗಳನ್ನೂ ಮುಗಿಸಿಕೊಂಡು ಬಂದನು. ಈಸಲ ತಂದೆಯು ಹಿಂದಿನಂತೆಯೇ ಪ್ರಶ್ನೆಯನ್ನು ಮಾಡಿದಾಗ ಮಗನು ಆತ್ಮನ ಸದ್ರೂಪ, ಚಿದ್ರೂಪ ಮತ್ತು ಆನಂದರೂಪಗಳನ್ನೆಲ್ಲ ಸಲಕ್ಷಣವಾಗಿ ವಿವರಿಸಿ ಮಹಾವಾಕ್ಯಗಳ ಸಮನ್ವಯವನ್ನು ಮಾಡಿತೋರಿಸಿದನು. ತಂದೆಯು ಅದರಿಂದಲೂ ತೃಪ್ತನಾಗದೆ ಮತ್ತೂ ಚೆನ್ನಾಗಿ ತಿಳಿದುಕೊಂಡು ಬಾರೆಂದು ಇನ್ನೊಂದು ಸಲವೂ ಮನೆಯಿಂದ ಅಟ್ಟಿಬಿಟ್ಟನು. ಆಗ ಮಗನು ಗುರುಗಳ ಬಳಿಗೆ ಹೋಗಿ "ಮಹಾಸ್ವಾಮಿ, ತಾವು ಹೇಳಿಕೊಟ್ಟದ್ದನ್ನೆಲ್ಲ ಹೇಳಿದರೂ ನಮ್ಮ ತಂದೆಯವರು ಇನ್ನೂ ಚೆನ್ನಾಗಿ ತಿಳಿದುಕೊಂಡು ಬರಬೇಕೆನ್ನುತ್ತಾರೆ. ಈಸಲವಾದರೂ ನನಗೆ ಅದರ ಪರಮರಹಸ್ಯವೇನುಂಟೊ ಅದನ್ನು ಮನಗಾಣಿಸಬೇಕು. ಎಂದು ಸೆರಗೊಡ್ಡಿ ಬೇಡಿಕೊಂಡನು. ಗುರುಗಳು ಅವನಿಗೆ ಅಭಯವನ್ನು ಕೊಟ್ಟು ಅವನ ಮೇಲೆ ಅನುಗ್ರಹವನ್ನು ಮಾಡಿದರು. ಆಗ ಆಮಗನು

ತನ್ನ ಹೃದಯದಲ್ಲಿ ಅನುಭವಕ್ಕೆ ಬಂದ ಪರಮಾನಂದಪ್ರವಾಹವನ್ನು ಹೊರ ಸೂಸುವ ಪ್ರಸನ್ನಮುಖಮುದ್ರೆಯಿಂದ ಹೊರಟು ಬಂದು ತಂದೆಗೆ ನಮಸ್ಕರಿಸಿದನು. ತೇಜೋಮಯನಾಗಿ ಬೆಳಗುವ ಅವನ ಮುಖಲಕ್ಷಣದಿಂದಲೇ ಸುಪ್ರೀತನಾದರೂ ತಂದೆಯು ಮಗನನ್ನು ಎಂದಿನಂತೆ ಪರೀಕ್ಷೆಮಾಡಬೇಕೆಂದು ಆತ್ಮಸ್ವರೂಪವಿಚಾರವನ್ನು ತೆಗೆದನು. ಆಗ ಮಗನು ಯಾವ ಉತ್ತರವನ್ನೂ ಕೊಡದೆ ಎಷ್ಟು ಹೊತ್ತಾದರೂ ರೆಪ್ಪೆಯನ್ನು ಕೂಡ ಅಲ್ಲಾಡಿಸದೆ ಸುಮ್ಮನಿದ್ದನು. ಆಗ ತಂದೆಯು ಉತ್ತರವನ್ನು ಹೇಳೆಂದು ಮತ್ತೆ ಕೇಳಲು ಮಗನು ಅಪ್ಪ,

"यतो वाचो निवर्तते अप्राप्य मानसा सह"

ಎಂಬಂತೆ ಆತ್ಮಸ್ವರೂಪವನ್ನು ಹೇಳಬೇಕೆಂದು ಹೊರಟರೆ ಮಾತು ಹಿಂದೆಗೆಯುವದಿಷ್ಟೇ ಅಲ್ಲ; ಹೇಳಬೇಕೆಂಬ ಮನಸ್ಸು ಕೂಡ ಹಿಂದೆಗೆಯುವದೆಂದು ಹೇಳಿದನು. ಗ್ರಂಥಗಳ ಪರಾಕ್ರಮವೆಷ್ಟಿದ್ದರೂ ಅನಾತ್ಮವನ್ನು ಆತ್ಮವಾಗಿ ತಿಳಿಯುವ ಅಶುಭಮಾರ್ಗದಿಂದ ಹಿಮ್ಮುಖವಾಗಿ ಮಾಡುವದರಲ್ಲಿಯೇ ಮುಗಿದುಹೋಗುವದು. ಇನ್ನು ಆತ್ಮಸ್ವರೂಪವನ್ನು ಸಾಕ್ಷಾತ್ತಾಗಿ ಮಾಡಿಕೊಡುವದಕ್ಕೆ ಸದ್ಗುರು ಒಬ್ಬನೇ ಗತಿ. ಆದುದರಿಂದಲೇ ಗುರುವೆಂಬ ವಸ್ತುವಿಗೆ ಶಾಸ್ತ್ರದಲ್ಲಿ ಅಷ್ಟು ಪ್ರಾಶಸ್ತ್ಯವಿರುವದು. ಗುರುವಿನ ಅನುಗ್ರಹವಿಲ್ಲದೆ ಪರಮಾತ್ಮನ ಸಾಕ್ಷಾತ್ಕಾರವೇ ಆಗಲಾರದಾದುದರಿಂದ ಗುರುವನ್ನು ಭಗವಂತನಿಗಿಂತ ಹೆಚ್ಚೆಂದು ತಿಳಿಯಬೇಕೆಂದು ಕೂಡ ಗ್ರಂಥಗಳಲ್ಲಿ ಉಕ್ತವಾಗಿರುವದು. ಹೀಗೆ ಶಾಸ್ತ್ರಾಚಾರ್ಯೋಪದೇಶದಿಂದ

"सर्वभूतेषु येनैकं भावमव्ययमीक्षते ।
अविभक्तं विभक्तेषु तज्ज्ञानं विद्धि सात्त्विकम् ॥"

ಎಂಬಂತೆ ಭಿನ್ನಭಿನ್ನವಾಗಿರುವ ವಸ್ತುವಿಶೇಷಗಳೆಲ್ಲ ಅನಾತ್ಮಗಳೆಂದೂ ಪರಮಾತ್ಮನ ಸತ್ತಾಬಲದಿಂದ ಅವು ಸದ್ರೂಪವಾಗಿ ಕಾಣುತ್ತಿರುವವೆಂದೂ ತಿಳಿದು ಸರ್ವತ್ರ ಪರಮಾತ್ಮಸತ್ತೆಯನ್ನು ಅನುಸಂಧಾನ ಮಾಡುವ ಜ್ಞಾನಯೋ-

ಗವು ಸರ್ವೋತ್ಕೃಷ್ಟವಾದುದು. ಆರ್ತರು, ಜಿಜ್ಞಾಸುಗಳು, ಅರ್ಥಾರ್ಥಿಗಳು ಮತ್ತು ಜ್ಞಾನಿಗಳು ಹೀಗೆ ನಾಲ್ಕು ಬಗೆಯ ಜನರೂ ಭಗವತ್ಪರಾಯಣರೇ ಆದರೂ ಭಗಂತನು

"तेषां ज्ञानी नित्ययुक्तः एकभक्तिर्विशिष्यते"

ಎಂದೂ

"उदरास्सर्व एवैते ज्ञानीत्वात्मैव मे मतम्"

ಎಂದೂ ಸ್ವಕಂಠದಿಂದ ಉದ್ಘೋಷಿಸಿ ಜ್ಞಾನಿಗೇ ಪ್ರಾಶಸ್ತ್ಯವನ್ನು ಕೊಟ್ಟಿದ್ದಾನೆ. ಮನುಷ್ಯರಿಗೆ ಬಂಧನವಾಗಿರುವ ಅಜ್ಞಾನವು ಹೋಗಬೇಕಾದರೆ ಜ್ಞಾನದಿಂದಲೇ ಸರಿ ಎಂಬರ್ಥವನ್ನು ಭಗವಂತನು

"बहूनां जन्मनामंते ज्ञानवान्मां प्रपद्यते"

ಎಂಬ ವಾಕ್ಯದಿಂದ— ಅನೇಕ ಜನ್ಮಗಳ ಮೇಲೆ ಜ್ಞಾನವಾಗಿ ನನ್ನ ಸಾಕ್ಷಾತ್ಕಾರವನ್ನು ಪಡೆಯುತ್ತಾನೆಂದು— ಹೇಳುತ್ತಾನೆ. ಜ್ಞಾನವು ಅಜ್ಞಾನವನ್ನು ಧ್ವಂಸಮಾಡುವ ಸಾಕ್ಷಾತ್ಕಾರಣವಾದುದರಿಂದ ಶ್ರೀಕೃಷ್ಣನು ಗೀತೆಯಲ್ಲಿ

"न हि ज्ञानेन सदृशं पवित्रमिह विद्यते"

ಎಂಬ ವಾಕ್ಯದಲ್ಲಿ ಜ್ಞಾನಯೋಗವೇ ಹೆಚ್ಚಿನದೆಂದು ಹೊಗಳಿದ್ದಾನೆ. ಮೋಕ್ಷಕ್ಕೆ ಪ್ರಬಲಪ್ರತಿಬಂಧಗಳಾದ ಎಂಥೆಂಥ ಮಹಾಮಹಾಪಾತಕಗಳಿದ್ದರೂ

"अपि चेदासि पापेभ्यस्सर्वेभ्यः पापकृत्तमः ।
सर्वं ज्ञानप्लवेनैव वृजिनं संतारिष्यसि ॥
यथैधांसि समिद्धोग्निर्भस्मसात्कुरुतेऽर्जुन ।
ज्ञानाग्निस्सर्वकर्माणि भस्मसात्कुरुते तथा ॥"

ಎಂಬ ಗೀತೋಕ್ತಿಯಂತೆ ಅಗ್ನಿಯು ಸಮಿತ್ತುಗಳನ್ನು ಬೂದಿಮಾಡಿಬಿಡುವ

ಹಾಗೆ ಜ್ಞಾನವು ಸಮಸ್ತ ಪಾಪಗಳನ್ನೂ ಹೆಸರಳಿಸಿ ಬಿಡುವದು. ಪಾಪಗಳನ್ನು ಹೋಗಲಾಡಿಸುವ ಶಕ್ತಿವಿಶೇಷವು ಜ್ಞಾನಕ್ಕಿರುವ ಹಾಗೆ ಮತ್ತೆ ಯಾವ ಕರ್ಮಕ್ಕೂ ಇಲ್ಲ. ಆದುದರಿಂದಲೇ ಭಗವಂತನು

"श्रेयान् द्रव्यमयाद्यज्ञाज्ज्ञानयज्ञः परंतप"

ಎಂದರೆ ಅನೇಕ ದ್ರವ್ಯಸಾಧ್ಯವೂ ಹಿಂಸಾಯುಕ್ತವೂ ಆದ ಯಜ್ಞಕ್ಕಿಂತಲೂ ಜ್ಞಾನಯಜ್ಞವೇ ಶ್ರೇಯಸ್ಕರವೆಂದು ಹೇಳಿದ್ದಾನೆ.

"वीतरागभयक्रोधा मन्मया मामुपाश्रिताः ।
बहवो ज्ञानतपसा पूता मद्भावमागताः ॥

ಎಂಬಂತೆ ಹಿಂದೆ ಎಷ್ಟೋ ಜನರು ವಿಷಯಗಳ ಅನಾತ್ಮತ್ವವನ್ನು ವಿಚಾರದಿಂದ ಮನಗಂಡು ಜ್ಞಾನಯೋಗಬಲದಿಂದ ಆತ್ಮಸಾಕ್ಷಾತ್ಕಾರವನ್ನು ಪಡೆದಿರುತ್ತಾರೆ. ಆತ್ಮಸಾಕ್ಷಾತ್ಕಾರಕ್ಕೆ ಮನಸ್ಸು ಅರ್ಹವಾಗುವದಕ್ಕೆ ವಿಷಯಗಳ ಮೇಲಣ ರಾಗದ್ವೇಷಗಳು ಸಂಪೂರ್ಣವಾಗಿ ಹೋಗಬೇಕು. ಅವುಗಳ ಸ್ಮರಣೆ ಕೂಡ ಬರಬಾರದು. ಒಬ್ಬ ರಾಜನು ವಿರಕ್ತನಾಗಿ ಒಬ್ಬ ಸಾಧುಗಳನ್ನಾಶ್ರಯಿಸಿದನು. ಐಹಿಕರಾಗದ್ವೇಷಗಳ ಸಂಸ್ಕಾರಸಂಬಂಧವಾದ ಅಭಿಮಾನವೊಂದು ಅವನಿಗೆ ಸಾಕ್ಷಾತ್ಕಾರಕ್ಕೆ ಪ್ರತಿಬಂಧವಾಗಿತ್ತು. ಅದನ್ನು ಕಳೆಯಬೇಕೆಂದು ಗುರುಗಳು ಅವನಿಗೆ ಅವನ ಯೋಗ್ಯತೆಗೆ ಬಹುಹೀನವಾದ ಮಣ್ಣುಹೊರುವ ಕೆಲಸವನ್ನು ಹೇಳಿದರು. ಆತ್ಮಸಾಕ್ಷಾತ್ಕಾರದ ಮೇಲಣ ಇಚ್ಛಾವೇಗದ ಆವೇಶದಿಂದ ಆಅರಸನು ಆಕೆಲಸವನ್ನು ಮನಃಪೂರ್ವಕವಾಗಿ ನಡೆಸುತ್ತಿದ್ದನು. ಒಂದು ದಿನ ಆಅರಸನ ಪರಿಚಯಸ್ಥರೊಬ್ಬರು ಅವನ ದೀನದೆಸೆಯನ್ನು ನೋಡಿ ಕನಿಕರದಿಂದ "ಗುರುಗಳೆ, ನೀವು ಎಷ್ಟೋ ಜನರ ಮೇಲೆ ಬೇಗ ಬೇಗ ಅನುಗ್ರಹ ಮಾಡಿರುತ್ತೀರಿ. ಪಾಪ, ಇವನು ತನ್ನ ಅರಸುತನವನ್ನು ಕೂಡ ಮರೆತು ಈಕೀಳುಕೆಲಸವನ್ನು ಮಾಡುತ್ತಿರುವನು. ಇಂಥ ನಿರಭಿಮಾನಿಗಿಂತ ಜ್ಞಾನಕ್ಕೆ ಇನ್ನಾರು ಅಧಿಕಾರಿಗಳಾಗುತ್ತಾರೆ?" ಎಂದು ಕೇಳಿದನು. ಆಗ ಗುರುಗಳು "ಒಳ್ಳೇದು, ನಿಮಗೆ ಆತನಲ್ಲಿರುವ ನಿರಭಿಮಾನದ ಪ್ರಮಾಣ-

ವನ್ನು ತೋರಿಸುತ್ತೇನೆ. ನೀವು ಆತನಿಗೆ ಕಾಣದಂತೆ ಹಿಂದಿನಿಂದ ಹೋ-ಗಿ ಆತನು ಹೊತ್ತುಕೊಂಡು ಹೋಗುತ್ತಿರುವ ಮಣ್ಣಿನ ಪುಟ್ಟಿಯನ್ನು ಕೆಡವಿ. ಆಗಿನ ಆತನ ಸ್ಥಿತಿಯನ್ನು ನನಗೆ ತಿಳಿಸಿರಿ" ಎಂದು ಹೇಳಿದನು. ಆಗೃಹಸ್ಥನು ಅದರಂತೆ ಬೆನ್ನಕಡೆ ಹೋಗಿ ತಟ್ಟನೆ ಮಣ್ಣಿನ ಪುಟ್ಟಿಯನ್ನು ಕೆಡವಿಬಿಟ್ಟನು. ಆಗ ಅರಸನು "ಏನಯ್ಯಾ, ನನ್ನಷ್ಟಕ್ಕೆ ನಾನು ಹೋಗುತ್ತಿದ್ದರೆ ನೀನು ಅಡ್ಡ-ಬಂದು ಚೇಷ್ಟೆಮಾಡಿ ನನ್ನ ಕೆಲಸವನ್ನು ಕೆಡಿಸಿದೆ. ನಾನು ಅರಸಾಗಿದ್ದಾ-ಗ ಹೀಗೆಮಾಡಿದ್ದರೆ ತತ್ಕ್ಷಣದಲ್ಲಿಯೇ ಅದರ ಫಲವನ್ನು ತೋರಿಸುತ್ತಿದ್ದೆ" ಎಂದು ಹೇಳಿ ಮತ್ತೆ ತನ್ನ ಕೆಲಸಕ್ಕೆ ಹೋದನಂತೆ. ಆಗೃಹಸ್ಥನು ನಡೆದ ವಿದ್ಯಮಾನವನ್ನು ಗುರುಗಳಿಗೆ ವಿಜ್ಞಾಪಿಸಲು ಅವರು "ಅವನಿಗೆ ಸಾಕ್ಷಾತ್ಕಾರ-ಕ್ಕೆ ಆಅಭಿಮಾನವೇ ತಡೆಯಾಗಿರುವದು" ಎಂದು ಸಮಾಧಾನವನ್ನು ಹೇಳಿದ-ರಂತೆ. ಜ್ಞಾನಸಿದ್ಧಿಯಾಗುವದಕ್ಕೆ ಮನಸ್ಸು ನಿರ್ವಿಷಯವಾಗಬೇಕಾದುದತ್ಯವ-ಶ್ಯಕವು. ಮದ್ಯದಿಂದ ತುಂಬಿದ ಗಡಿಗೆಯನ್ನು ಮುಂದೆ ಹಿಡಿದು ಅದರೊಳ-ಕ್ಕೆ ಹಾಲನ್ನು ಹಾಕೆಂದರೆ ಯಾರು ಹಾಕುತ್ತಾರೆ? ಮದ್ಯವನ್ನೆಲ್ಲ ಚೆಲ್ಲಿ ಅದರ ವಾಸನೆ ನಿಶ್ಶೇಷವಾಗಿ ಹೋಗುವಂತೆ ಚೊಕ್ಕಟವಾಗಿ ತೊಳೆದುಕೊಂಡು ಬಂದ-ರಲ್ಲವೆ ಯಾರಾದರೂ ಅದರೊಳಕ್ಕೆ ಹಾಲನ್ನು ಸುರಿಯುವ ಸಂಭವವುಂಟು. ಚಿತ್ತಶುದ್ಧಿಯನ್ನು ಹೊಂದಿ ಜ್ಞಾನವನ್ನು ಪಡೆದನೆಂದರೆ

"सर्वं कर्माखिलं पार्थ ज्ञाने परिसमाप्यते"

ಎಂಬಂತೆ ಅವನು ಇನ್ನೇನನ್ನೂ ಮಾಡತಕ್ಕದ್ದು ಉಳಿದಿರುವದಿಲ್ಲ. ಅಜ್ಞಾನದ ವಿಷಯವನ್ನು ಈಗ ಹೇಳಹೋದರೆ ಅದ್ವೈತವಿಶಿಷ್ಟಾದ್ವೈತದ್ವೈತಗಳ ವಿಚಾರ-ವು ಮುಂದೆ ಬರುವದು. ಇವುಗಳಲ್ಲಿ ಇಂಥದ್ದೊಂದೇ ಸತ್ಯವೆಂದೂ ಉಳಿದುವೆ-ಲ್ಲ ಅಸತ್ಯವೆಂದೂ ಯಾರೂ ಹೇಳುವದಕ್ಕೆ ಬರುವದಿಲ್ಲ. ಯಾರು ತಮ್ಮ ಐಹಿಕ ಸುಖಸಾಧನಗಳೆಲ್ಲಕ್ಕೂ ತಿಲತರ್ಪಣವನ್ನು ಕೊಟ್ಟು ದುಃಖದಾವಾಗ್ನಿ-ಯಿಂದ ಬೆಂದು ಬೆಂಡಾಗುತ್ತಿರುವ ದೀನರ ಮೇಲಿನ ಕನಿಕರದಿಂದ ಕರಗಿದ ಮ-ನಸ್ಸುಳ್ಳವರಾಗಿ ಜೀವೇಶ್ವರಸ್ವರೂಪದ ಯಥಾರ್ಥವನ್ನು ಪ್ರಕಟಮಾಡಿ ಲೋಕ-ವನ್ನೆಲ್ಲ ಸುಖಮಯವಾಗಿ ಮಾಡಬೇಕೆಂದು ದೀಕ್ಷೆಯನ್ನು ವಹಿಸಿ ಸರ್ವಸ-

ಸ್ನಾಹವನ್ನು ಮಾಡಿದರೊ ಅಂಥ ಆಚಾರ್ಯಪುರುಷರ ಮಾತಿನಲ್ಲಿ ಸಂಶಯ-ಪಡುವದಾದರೆ **"संशयात्मा विनश्यति"** ಎಂಬಂತೆ ಆಅಪರಾಧಕ್ಕೆ ನಾಶವೇ ಪ್ರತಿಫಲ. ಯಾವಯಾವ ಕಾಲದಲ್ಲಿ ಜೀವೇಶ್ವರಸ್ವರೂಪವನ್ನು ಯಾವಯಾವ ದೃಷ್ಟಿಯಿಂದ ತೋರಿಸಬೇಕಾದ ಅಗತ್ಯವಿತ್ತೊ ಆಯಾಕಾಲದಲ್ಲಿ ಆಯಾದೃಷ್ಟಿ-ಯಿಂದ ಆಚಾರ್ಯಪುರುಷರು ಅದನ್ನು ಸಿದ್ಧಮಾಡಿ ತೋರಿಸಿರುತ್ತಾರೆ. ಅ-ವರವರ ಸಿದ್ಧಾಂತವು ಅವರವರ ಅನುಭವಕ್ಕೆ ಬಂದಿರದೆ ಇದ್ದರೆ ಮತ್ತು ಆ-ಯಾಸಿದ್ಧಾಂತವು ಆಯಾಕಾಲಕ್ಕೆ ಶ್ರೇಯಸ್ಕರವೆಂಬ ದೃಢವಾದ ಭಾವನೆ ಇರದಿ-ದ್ದರೆ ಪರಾರ್ಥಪ್ರಿಯರಾದ ಆಯಾಆಚಾರ್ಯಪುರುಷರಿಗೆ ಆಸಿದ್ಧಾಂತಗಳನ್ನು ದಿಗಂತಗಳಲ್ಲೆಲ್ಲ ಸಾರಿ ಡಂಗುರವನ್ನು ಹೊಡೆಯುವ ಧೈರ್ಯವು ಹೇಗೆ ಬರು-ತ್ತಿತ್ತು? ಮತ್ತು ಅವುಗಳು ತಥ್ಯಾಂಶವಾಗಿರದಿದ್ದರೆ ಎಷ್ಟೋ ಜನ ಮಹಾ-ಮಹಾ ಪಂಡಿತರೂ ತಮ್ಮ ಪ್ರಾಗಲ್ಭ್ಯವನ್ನು ತಮ್ಮಲ್ಲಿಯೇ ಅಡಗಿಸಿಕೊಂಡು ಆಆಚಾರ್ಯಪುರುಷರ ತೇಜಸ್ಸಿನೆದುರಿಗೆ ತಲೆಯನ್ನು ಬಗ್ಗಿಸಿ ಅವರ ಅನು-ಯಾಯಿಗಳಾಗುವ ಸಂಭವವೆಲ್ಲಿತ್ತು? ಅಷ್ಟೇ ಅಲ್ಲ. ಆಆಚಾರ್ಯಪುರುಷ-ರು ತಮ್ಮತಮ್ಮ ಸಿದ್ಧಾಂತಗಳನ್ನು ಬಯಲಿಗೆ ತಂದಿಟ್ಟು ಎಷ್ಟೋ ಶತಮಾನಗ-ಳು ಕಳೆದು ಹೋದರೂ ಇನ್ನೂ ಅವು ಕಳೆಗುಂದದೆ ಆಧುನಿಕಜನರಿಂದಲೂ ಅನುವರ್ತಿಸಲ್ಪಡುತ್ತಿರುವವೆಂದ ಮೇಲೆ ಅವುಗಳಲ್ಲಿ ನಿಸ್ಸತ್ತ್ವವನ್ನು ಕಲ್ಪನೆ-ಮಾಡುವದಕ್ಕೆ ದಾರಿಯೆಲ್ಲಿದೆ? ಎಲ್ಲ ಸಿದ್ಧಾಂತಗಳಲ್ಲಿಯೂ ಸತ್ಯತ್ವವಿದ್ದೇ ಇದೆ. ಆದರೆ ಈಸಿದ್ಧಾಂತಗಳನ್ನೆಲ್ಲ ಇಲ್ಲಿ ವಿವರಿಸಹೋಗುವದೆಂದರೆ ಎಷ್ಟೋ ಜನ-ರಿಗೆ ಬೇಸರವಾಗಬಹುದು. ಒಂದೆರಡು ಮಾತುಗಳಿಂದ ಆಸಿದ್ಧಾಂತವು ಮ-ನಸ್ಸಿಗೆ ಹಿಡಿಯುವದಿಲ್ಲ. ಇದಲ್ಲದೆ ಆಸಿದ್ಧಾಂತವಾಕ್ಯಗಳ ಪ್ರವೇಶಕ್ಕೆ ಸ-ಮಯವು ಸಾಕಾದಷ್ಟು ಸಾವಧಾನವಾದುದಾಗಿ ಇರಬೇಕು. ಈಗಿನ ಸಮ-ಯಕ್ಕೆ ಆವಿಚಾರ ಒಪ್ಪುವದಿಲ್ಲ. ಹಾಗಾದರೆ ಜ್ಞಾನಯೋಗದ ವಿಚಾರವಾಗಿ ಏನು ಹೇಳಿದ ಹಾಗೆ ಆಯಿತೆಂದರೆ ಹೇಳುವಿಕೆಯೆಂಬುದೆಲ್ಲ ಸಮಸ್ತದೃಶ್ಯಗ-ಳ ಅನಾತ್ಮತ್ವವನ್ನು ತಿಳಿದು ಅವುಗಳಿಂದ ವಿಮುಖರಾಗುವದಕ್ಕೆ ಮಾತ್ರವೆಂದೂ ಆತ್ಮಸ್ವರೂಪವು ಸದ್ಗುರುಪ್ರಸಾದದಿಂದ ಅವರವರ ಹೃದಯದಲ್ಲಿ ಸ್ಫೂರ್ತಿ-ಯಾಗಿ ತೋರತಕ್ಕದ್ದೆಂದೂ ಮೊದಲೇ ಹೇಳಿದ್ದೇನೆ. **"नैषा तर्केण मतिराप-**

ನೀಯಾ" ಎಂಬಂತೆ ಆತ್ಮಸ್ವರೂಪಸಿದ್ಧಾಂತವು ತರ್ಕಕ್ಕೆ ನಿಲುಕುವದಿಲ್ಲ. ಆದು-ದರಿಂದ ಒಮ್ಮೆಗೇ ಅದರ ತೊಡಕಿಗೆ ಹೋಗದೆ "ಆಯುರ್ವೈ ಘೃತಮ್" ಎಂಬ ಶ್ರುತಿ-ಯಲ್ಲಿ ಆಯುರ್ವರ್ಧಕವಾದ ತುಪ್ಪವನ್ನೇ ಆಯುಸ್ಸೆಂದು ಹೇಳಿರುವಂತೆ ಶ್ರೀ ಕೃಷ್ಣಪರಮಾತ್ಮನು ಜ್ಞಾನಪ್ರಾಪ್ತಿಯ ಸಾಧನಗಳಾದ ಅಮಾನಿತ್ವಾದಿಗಳನ್ನು "ಏತಜ್ಞಾನಮಿತಿ ಪ್ರೋಕ್ತಂ" ಎಂಬ ವಾಕ್ಯದಿಂದ ಜ್ಞಾನವೆಂದು ಹೇಳಿದ್ದಾನೆ. ಆ ಲಕ್ಷಣಗಳನ್ನು ತಿಳಿದುಕೊಂಡು ಅವುಗಳನ್ನು ತಮ್ಮ ಅನುಭವಕ್ಕೆ ಯಾರು ತಂದುಕೊಳ್ಳುತ್ತಾರೊ ಅವರಿಗೆ ಯಾವ ಸಿದ್ಧಾಂತದ ಪ್ರಕಾರವಾದರೂ ಆಗಲಿ ಜ್ಞಾನವಾಗಿಯೇ ತೀರಬೇಕು. ಸಾಧನೆ ಮಾಡುವದಂತು ನಮ್ಮ ಕೆಲಸ. ಅ-ದನ್ನು ನಾವು ಮಾಡಿದರೆ ಯಾವ ಸಿದ್ಧಾಂತವಾದರೂ ಅನುಭವಕ್ಕೆ ಬರಲಿ. ನಮಗೆ ಮರಣಭಯ ಮುಂತಾದ ಸರ್ವದುಃಖಗಳೂ ನಾಶವಾಗಿ ಸುಖಸ್ಫೂ-ರ್ತಿಯಾಗುತ್ತಿದ್ದರೆ ಸಾಕು. ಅದಕ್ಕಿಂತ ಹೆಚ್ಚಿನದಿನ್ನೇನು ಬೇಕು? ಅಮಾ-ನಿತ್ವಾದಿಸಾಧನಗಳು ಸಮಸ್ತನೀತಿಮರ್ಯಾದೆಗಳ ಘನೀಭೂತವಾದ ಸಾರ-ವಾಗಿರುವವು. ಆದುದರಿಂದ ಅಮಾನಿತ್ವಾದಿಗುಣಗಳಲ್ಲಿ ನಿರತರಾದವರಿಗೆ ನೀತಿಪ್ರಧಾನವಾದ ಪ್ರಪಂಚವ್ಯವಹಾರವು ಕೂಡ ಸುಖಮಯವಾಗದೆ ಇರು-ವದಕ್ಕೆ ಕಾರಣವೇ ಇಲ್ಲ. ಇನ್ನು ಜ್ಞಾನವಿಷಯದಲ್ಲಂತು ಅವು ಜ್ಞಾನಸಾ-ಧನಗಳೆಂದೇ ಉಕ್ತವಾದವುಗಳಾದುದರಿಂದ ಅದರ ಸಿದ್ಧಿಗೆ ಸಂಶಯವೇ ಇಲ್ಲ. ಲೋಕದಲ್ಲಿ ಜನರು ಅನೇಕ ಕಾರ್ಯಗಳನ್ನು ಸಾಧಿಸಬೇಕೆಂದು ಬಲವತ್ತರ-ವಾದ ಬಯಕೆಯನ್ನು ಮಾಡುತ್ತಾರೆ. ಆದರೆ ಅವರ ಲಕ್ಷ್ಯವೆಲ್ಲ ಸಾಧ್ಯವಿ-ಷಯದ ಮೇಲೆ ಇದ್ದಷ್ಟು ಸಾಧನದ ಮೇಲೆ ಇರುವದಿಲ್ಲ. ಹೀಗಾದ ಕೆಲಸ-ಗಳೆಲ್ಲ ವಿಫಲವಾಗುವದೇ ಸರಿ. ಕೆಲಸಗಳು ಕೆಡುವದಕ್ಕೆ ಕೇವಲ ಸಾಧ್ಯವಿ-ಷಯಗಳ ಮೇಲೆ ಲಕ್ಷ್ಯವಿಡುವದೇ ಕಾರಣ. ಉದ್ದಿಷ್ಟ ಸಾಧ್ಯವು ಕೈಗೂಡ-ಬೇಕಾದರೆ ಸಾಧನಗಳ ಕಡೆಗೇ ಸಂಪೂರ್ಣಲಕ್ಷ್ಯವಿರಬೇಕು. ಕೊನೆಗೆ ಸಾ-ಧ್ಯವಿಷಯವನ್ನು ಕಡೆಗಣ್ಣಿನಿಂದ ಕೂಡ ನೋಡದೆ ಇದ್ದರೂ ಸಾಗುತ್ತದೆ. ನಾವು ಮಾಡುವಂತೆ ಮಾಡಿದರೆ ಅದು ಆಗುವಂತೆ ಆಗಿಯೇ ಆಗುವದು. ಆದರೆ ನಾವು ನಡೆಸುವ ಸಾಧನಗಳು ಸಾಧ್ಯಕ್ಕೆ ಅನುಗುಣವಾಗಿ ಮಾತ್ರ ಇ-ರಬೇಕು. ಪ್ರಕೃತವಿಷಯವಾದ ಜ್ಞಾನಕ್ಕೆ ಅಮಾನಿತ್ವಾದಿಗಳು ಅನುಗುಣ-

ವಾದ ಸಾಧನಗಳೇ ಸರಿ ಎಂಬ ಮಾತೊಂದುಕಡೆ ಇರಲಿ. ಅವುಗಳನ್ನೇ ಜ್ಞಾನವೆಂದು ಶ್ರೀಕೃಷ್ಣಪರಮಾತ್ಮನೇ ಸಾರಿ ಹೇಳಿರುವನು. ಇದರ ಮುಂದೆ ಯಾರೂ ಉಸಿರೆತ್ತುವ ಹಾಗಿಲ್ಲ. ಸಾಧನವನ್ನು ಸಾಧ್ಯವು ಹಿಂಬಾಲಿಸುವದೆಂಬುದೊಂದು ನಿತ್ಯಸಿದ್ಧಾಂತ. ಆದುದರಿಂದ ಅಮಾನಿತ್ವಾದಿಸಾಧನೆಗಳಿಂದ ಜ್ಞಾನವು ಸಾಧ್ಯವಾಗಲೇ ಬೇಕು. ಅದು ಅದ್ವೈತರೂಪವೊ, ವಿಶಿಷ್ಟಾದ್ವೈತರೂಪವೊ, ದ್ವೈತರೂಪವೊ ಯಾವ ರೂಪವಾದರೂ ಅದೇ ಜ್ಞಾನ. ಸಾಧನದ ಪ್ರಸ್ತಾಪವನ್ನು ಬಿಟ್ಟು ಸಿದ್ಧಾಂತಭೇದಗಳನ್ನು ಪ್ರತಿಪಾದಿಸಹೋಗುವದು ಗಾಳಿಯಲ್ಲಿ ಮಾತುಗಳನ್ನು ತೂರಿದಂತೆಯೇ ಸರಿ. ಆಚಾರ್ಯಪುರುಷರಿಗೆ ಸಿದ್ಧಾಂತವಿಷಯದಲ್ಲಿ ಪರಸ್ಪರಮತಭೇದವಿದ್ದಂತೆ ಅಮಾನಿತ್ವಾದಿಗಳು ಜ್ಞಾನಸ್ವರೂಪವೆಂಬ ವಿಷಯದಲ್ಲಿಯೂ ಅಥವಾ ಜ್ಞಾನಸಾಧನಗಳೆಂಬ ವಿಷಯದಲ್ಲಿಯೂ ಭಿನ್ನಾಭಿಪ್ರಾಯವಿಲ್ಲ. ಆದುದರಿಂದ ಈಗಲೇ ಸಿದ್ಧಾಂತದ ತೊಡಕಿಗೆಬಿದ್ದು ತಲೆನೋವು ತಂದುಕೊಳ್ಳದೆ ಸಾವಧಾನದಿಂದ ಸಾಧನಗಳಲ್ಲಿ ಪ್ರವರ್ತಿಸಬೇಕು. ಶ್ರೀಮದ್ಭಗವದ್ಗೀತೆಯಲ್ಲಿ ಹೇಳಿರುವ ಅಮಾನಿತ್ವಾದಿಗಳಾವುವೆಂದರೆ

"अमानित्वमदंभित्वमहिंसा क्षांतिरार्जवम् ।
आचार्योपासनं शौचं स्थैर्यमात्मविनिग्रहः ॥
इंद्रियार्थेषु वैराग्यमनहंकार एव च ।
जन्ममृत्युजराव्याधिदुःखदोषानुदर्शनम् ॥
असक्तिरनभिष्वंगः पुत्रदारगृहादिषु ।
नित्यं च समचित्तत्वमिष्टानिष्टोपपात्तिषु ॥
मयिचानन्ययोगेन भक्तिरव्यभिचारिणी ।
विविक्तदेशसेवित्वमरतिर्जनसंसदि ॥

अध्यात्मज्ञाननित्यत्वं तत्त्वज्ञानार्थदर्शनम् ।"

ಇವುಗಳಲ್ಲಿ ಒಂದೊಂದನ್ನಾಗಿ ತೆಗೆದುಕೊಂಡು ವಿಚಾರಮಾಡೋಣ.

**ಅಮಾನಿತ್ವ:**— ಸಾಮಾನ್ಯವಾಗಿ ಜನರಿಗೆ ಇತರರ ದೋಷಗಳು ಅನಾಯಾಸವಾಗಿ ತಮಗೆ ತಾವೇ ಕಣ್ಣಿಗೆ ಬೀಳುವುವು. ತಮ್ಮತಮ್ಮ ದೋಷಗಳು ಮಾತ್ರ ತಮಗೆ ಕಾಣುವದಿಲ್ಲ. ತಮ್ಮತಮ್ಮ ದುರ್ಗುಣಗಳನ್ನು ಕೂಡ ಸುಗುಣಗಳನ್ನಾಗಿ ಭಾವಿಸಿ ಜನರು ತಮ್ಮತಮ್ಮ ಯೋಗ್ಯತೆಗೆ ಮಿತಿಮೀರಿದ ಬೆಲೆಯನ್ನು ಕಟ್ಟಿಕೊಳ್ಳುವ ಸಂಭವವುಂಟು. ಹೀಗೆ ತಮ್ಮಲ್ಲಿ ತಾವು ಹೆಚ್ಚುಗಾರಿಕೆಯನ್ನು ಕಲ್ಪಿಸಿಕೊಳ್ಳುವವರು ಇತರರನ್ನು ತುಚ್ಛವಾಗಿ ಭಾವಿಸುವದಕ್ಕೆ ಹಿಂದೆಗೆಯುವದಿಲ್ಲ. ಹೀಗೆ ಮಾಡುವದರಿಂದ ಇತರವ್ಯಕ್ತಿಗಳಲ್ಲಿರುವ ಭಗವದ್ವಿಭೂತಿಗಳನ್ನು ತುಚ್ಛವಾಗಿ ಕಂಡಂತಾಗುವದು. ಪ್ರಕಾರಾಂತರವಾದ ಈ ಭಗವದ್ವಿರೋಧವು ಶ್ರೇಯಸ್ಕಾಮಿಗೆ ಇರಬಾರದು. ಒಂದುಪಕ್ಷ ನಿಜವಾಗಿ ತನ್ನಲ್ಲಿ ಏನಾದರೊಂದು ಹೆಚ್ಚಿನ ಯೋಗ್ಯತೆ ಇದ್ದರೂ ಅದು ಯಾವದೋ ಒಂದು ಅನಾತ್ಮವಸ್ತುವಿನ ಧರ್ಮವೆಂದೂ ಆತ್ಮದೃಷ್ಟಿಯಿಂದ ತಾನು ಎಲ್ಲರಂತೆ ಒಬ್ಬನೆಂದೂ ತಿಳಿಯಬೇಕು.

**ಅದಂಭಿತ್ವ:**— ಹೃದಯದಲ್ಲಿ ಧರ್ಮದ ಸಂಸ್ಕಾರವಿರಲಿ ಇಲ್ಲದಿರಲಿ; ಬಾಹ್ಯದಲ್ಲಿ ಆಡಂಬರವಾಗಿ ತೋರಿಸಿಕೊಳ್ಳುವದೊಂದು ಪದ್ಧತಿಯುಂಟು. ಅವರವರ ಧರ್ಮದ ಬಾಹ್ಯಚಿನ್ಹೆಗಳು ಕೆಲವು ಪೂರ್ವದಿಂದ ನಡೆದುಕೊಂಡು ಬಂದಿರುವದು ನಿಜ. ಆದರೆ ಬರೀ ಅಷ್ಟರಲ್ಲಿಯೇ ಧರ್ಮವು ಕೊನೆಯಾಗಲಿಲ್ಲ. ಧರ್ಮವೆಂಬುದು ವಿಶೇಷವಾಗಿ ಮನೋವ್ಯಾಪಾರಕ್ಕೆ ಸಂಬಂಧಪಟ್ಟದು. ಧರ್ಮಕ್ಕೆಂದು ಆಗುವ ಫಲವು ಧರ್ಮದ ವೇಷಕ್ಕೆಂದಿಗೂ ಆಗುವದಿಲ್ಲ. ಅಲ್ಪಜ್ಞರಾದ ಮನುಷ್ಯರಲ್ಲಿಯೇ ಎಷ್ಟೋ ಜನರು ಮನಸ್ಸ್ಥಿತಿಯ ಬೆಲೆಯನ್ನು ಎಷ್ಟೋಮಟ್ಟಿಗೆ ಕಂಡುಹಿಡಿಯುವರು. ಇನ್ನು ಸರ್ವಜ್ಞನಾದ ಪರಮಾತ್ಮನು ಅದನ್ನು ತಿಳಿಯಲಾರನೆ? ಒಂದೂರಲ್ಲಿ ಒಬ್ಬ ಸನ್ಯಾಸಿಯ ಮಠವೂ ಒಬ್ಬ ವೇಶ್ಯೆಯ ಗೃಹವೂ ಎದುರುಬದರಾಗಿದ್ದವು. ವೇಶ್ಯೆಯೂ ಅವಳ ಸಹವಾಸಿಗಳೂ ಮನುಷ್ಯಜನ್ಮವನ್ನು ದುರುಪಯೋಗಮಾಡಿಕೊಳ್ಳುತ್ತಿದ್ದಾರಲ್ಲ! ಎಂಬ

ಕನಿಕರದಿಂದ ಸನ್ಯಾಸಿಯ ಮನಸ್ಸು ವೇಶ್ಯಾಗೃಹದಲ್ಲಿ ನಡೆಯುವ ವ್ಯಾಪಾರ-ಗಳ ಮೇಲೆಯೇ ಇರುತ್ತಿತ್ತು. ವೇಶ್ಯೆಯ ಮನಸ್ಸಾದರೊ ತನ್ನ ವರ್ತನವು ದೊಡ್ಡವರ ದೃಷ್ಟಿಗೆ ಬೀಳುತ್ತದೆಯಲ್ಲ! ಎಂಬ ಲಜ್ಜೆಯಿಂದ ಮಠದಲ್ಲಿ ನಡೆಯು-ವ ಧರ್ಮಾಚರಣೆಗಳ ಮೇಲೆಯೇ ಇರುತ್ತಿತ್ತು. ಹೀಗಿರುವಾಗ ಇಬ್ಬರಿಗೂ ಏಕಕಾಲದಲ್ಲಿ ಮರಣಪ್ರಾಪ್ತಿಯಾಯಿತು. ವೇಶ್ಯೆಗೆ ದೇವಲೋಕಪ್ರಯಾಣ-ಕ್ಕೆ ವಿಮಾನಬಂತು. ಸನ್ಯಾಸಿಗೆ ನರಕದ್ವಾರದಲ್ಲಿ ನುಗ್ಗುವ ಗತಿಯಾಯಿತು. ಆಗ ಸನ್ಯಾಸಿಯು ವಿಷಯಾಸಕ್ತಳಾಗಿ ಕಾಲವನ್ನು ಕಳೆಯುತ್ತಿದ್ದ ವೇಶ್ಯೆಗೆ ಸದ್ಗತಿಯೂ ವೈರಾಗ್ಯದಿಂದ ಸನ್ಯಾಸಮಾಡಿದ್ದ ತನಗೆ ದುರ್ಗತಿಯೂ ಹೇಗೆ ಒಪ್ಪುವದೆಂದು ಧರ್ಮಾಧ್ಯಕ್ಷನನ್ನು ಪ್ರಶ್ನೆಮಾಡಿದನು. ಅದಕ್ಕೆ ಆತನು "ವೇಶ್ಯೆಯ ದೇಹವು ವಿಷಯಸುಖದಲ್ಲಿ ಮುಳುಗಿದ್ದದರಿಂದ ಅಗೊ, ನೋಡು, ಅವಳ ದೇಹವನ್ನು ಅನಾದರದಿಂದ ಎಳೆದುಕೊಂಡು ಹೋಗಿ ಬಿಸುಟು ನಾ-ಯಿನರಿಗಳ ಪಾಲುಮಾಡುತ್ತಾರೆ. ಅವಳ ಮನಸ್ಸು ಧರ್ಮಾಚರಣೆಯ ಮೇ-ಲೆ ಇದ್ದುದರಿಂದ ಅವಳಿಗೆ ಸದ್ಗತಿ ದೊರೆಯಿತು. ನಿನ್ನ ದೇಹವು ವೈರಾಗ್ಯ ಸೂಚಕವಾದ ಪವಿತ್ರವೇಷವನ್ನು ಧರಿಸಿದ್ದುದರಿಂದ ಅಗೊ, ನೋಡು, ನಿನ್ನ ಶವವನ್ನು ಎಷ್ಟು ಸತ್ಕಾರಮಾಡುತ್ತಾರೆ! ನಿನ್ನ ಮನಸ್ಸು ವಿಷಯಲಂಪಟ-ವಾಗಿದ್ದುದರಿಂದ ನೀನು ನರಕವನ್ನನುಭವಿಸಬೇಕಾಯಿತು." ಎಂದು ಹೇಳಿದನು. ಬರೀವೇಷದಿಂದ ಏನಾದೀತು?

**ಅಹಿಂಸೆ:**—"आत्मवत्सर्वभूतानि" ಎಂಬಂತೆ ಇತರರನ್ನೆಲ್ಲ ತನ್ನಂತೆ ಯಾವನು ನೊಡುವನೊ ಅವನೇ ಯಥಾರ್ಥದೃಷ್ಟಿಯಿಂದ ನೋಡುವನು.

"श्लोकार्धेन प्रवक्ष्यामि यदुक्तं ग्रंथकोटिभिः ।
परोपकारः पुण्याय पापाय परपीडनम् ॥"

ಎಂಬ ಶ್ಲೋಕವು ಪರಪೀಡನೆಯು ಪಾಪವೆಂಬುದನ್ನು ಸ್ಪಷ್ಟವಾಗಿ ಹೇಳುವ-ದು. ಹಿಂಸೆಯಲ್ಲಿ ಪ್ರವರ್ತಿಸುವ ಮನಸ್ಸಿನಲ್ಲಿ ಪ್ರೇಮದ ವಾಸನೆಯು ಕೂ-ಡ ಇರುವದಿಲ್ಲ. ಕಲ್ಲುಬಂಡೆಯಂತೆ ಅತಿಕಠಿನವಾದ ಆಹೃದಯವು ಪರಮ-

ಪ್ರೇಮಸ್ವರೂಪನಾದ ಪರಮಾತ್ಮನ ಪ್ರತಿಬಿಂಬವನ್ನು ಹೇಗೆ ಗ್ರಹಿಸೀತು? ಅಷ್ಟೇ ಅಲ್ಲ. ಸರ್ವಪ್ರಾಣಿಗಳಲ್ಲಿಯೂ ಪರಮಾತ್ಮನು ಸೂತ್ರರೂಪವಾಗಿ-ವ್ಯಾಪಿಸಿಕೊಂಡಿರುವದರಿಂದ ಯಾರಿಗೆ ಯಾವ ಹಿಂಸೆಯನ್ನು ಮಾಡಿದರೂ ಅದು ಪರಂಪರೆಯಿಂದ ಪರಮಾತ್ಮನಿಗೆ ಹತ್ತುತ್ತದೆ.

**ಕ್ಷಾಂತಿ:**— ಇತರರು ನಮ್ಮ ವಿಷಯದಲ್ಲಿ ಅಪರಾಧವನ್ನು ಮಾಡಿದರೂ ನಾವು ಅದರ ಮುಯ್ಯಿ ತೀರಿಸುವದಕ್ಕೆ ಹೋಗದೆ ಇರಬೇಕು. ಕ್ಷಾಂತಿಯ ಅರ್ಥವು ಅಲ್ಲಿಗೇ ಮುಗಿಯುವದಿಲ್ಲ. ಆದಷ್ಟು ಅವರಿಗೆ ತಿರಿಗಿ ಒಳ್ಳೆಯದನ್ನೇ ಮಾಡಬೇಕು. ಟಗರಿನ ಜಾತಿಯಲ್ಲಿ ಒಂದು ಕದನದ ಸನ್ನಾಹವನ್ನು ತೋರಿಸುತ್ತಲೆ ಇನ್ನೊಂದು ನುಗ್ಗಿ ಬಂದು ಕೋಡಿನಿಂದ ತಿವಿದೇ ತಿವಿಯುತ್ತದೆ. ಮನುಷ್ಯರೂ ಹಾಗೆ ಮಾಡುವದಾದರೆ ಟಗರಿನ ಜಾತಿಗೂ ಮನುಷ್ಯರ ಜಾತಿಗೂ ಭೇದವೇನು? ಒಬ್ಬನು ನಮ್ಮ ಮೈಮೇಲೆ ಬಂದರೆ ಅವನ ಮೈಮೇಲೆ ನಾವು ಬೀಳುವದೇ ಪರಾಕ್ರಮವಲ್ಲ. ಅಂಥ ಬಲವತ್ತರವಾದ ಉದ್ವೇಶವನ್ನು ತಳಕ್ಕೆ ತುಳಿದು ಸೌಮ್ಯಭಾವದಿಂದ ಅವನನ್ನು ಸಮಾಧಾನಗೊಳಿಸುವದು ದೊಡ್ಡಮಾತು.

"कामः क्रोधश्च लोभश्च देहे तिष्ठंति तस्कराः।
ज्ञानरत्नापहारार्थं तस्माज्जाग्रत! जाग्रत!! ॥"

ಎಂಬ ನೀತಿಯಂತೆ ಮತ್ತು

"त्रिविधं नरकस्येदं द्वारं नाशनमात्मनः ।
कामः क्रोधस्तथा लोभस्तस्मादेतत्त्रयं त्यजेत् ॥"

ಎಂಬ ಗೀತೋಕ್ತಿಯಂತೆ ಕಾಮ, ಕ್ರೋಧ, ಲೋಭ ಇವು ಮೂರೂ ಮನಸ್ಸಿನ ಒಳಗೇ ಸೇರಿಕೊಂಡು ಜ್ಞಾನರತ್ನವನ್ನು ಅಪಹರಿಸುವದಕ್ಕೆ ಹೊಂಚುಹಾಕುತ್ತಿರುತ್ತವೆ. ಬಸವನ ಬಾಲದಂತೆ ಸಿಟ್ಟಿನ ಬೆನ್ನುಹತ್ತಿ ಹೋಗಿ ಬಸವಳಿಯದೆ ಪ್ರೇಮದಿಂದ ಸಿಟ್ಟನ್ನು ಜಯಿಸಬೇಕು. ಶೀತೋಷ್ಣಗಳ ಆಕಸ್ಮಿಕವಾದ ಉಲ್ಬಣದಿಂದ ಭೂಗರ್ಭದಲ್ಲಿ ಕುದಿಯುವ ಲಾವಾರಸವು ಮೇಲಕ್ಕೆ ನು-

ಗ್ಗಿ ಭೂಮಿಗೇ ಅನರ್ಥವನ್ನುಂಟುಮಾಡುವಂತೆ ಸಿಟ್ಟಿನಿಂದ ತಳಮಳಗೊಂಡ ಮನಸ್ಸು ತನಗೆ ತಾನೇ ಅನರ್ಥವನ್ನು ಮಾಡಿಕೊಳ್ಳುವದು. ಸಿಟ್ಟಿನಿಂದ ಕಾವೇರಿದ ಮನಸ್ಸಿಗೆ ಇತರರ ಸದುಪದೇಶಗಳು ಕಾದ ಕಾವಲಿಯ ಮೇಲಕ್ಕೆ ಸಿಡಿಸಿದ ಹನಿಗಳಂತೆ ಹೆಸರಳಿದು ಹೋಗುವವು. ಮನುಷ್ಯನಿಗೆ ಪರಮಾತ್ಮನು ಕೊಟ್ಟಿರುವ ಅನ್ಯಾದೃಶಸಂಪತ್ತಿರೂಪವಾದ ವಿಚಾರಶಕ್ತಿಯು ವಿಜೃಂಭಿಸುವದಕ್ಕೆ ಕ್ರೋಧರಹಿತವಾದ ಮನಸ್ಸಿನ ಪ್ರಸನ್ನತೆಯು ಅತ್ಯಗತ್ಯವು.

**ಆರ್ಜವ:**—ಮನುಷ್ಯನಿಗೆ ಕಾಯ, ವಾಕ್ಕು, ಮನಸ್ಸು ಎಂಬ ಮೂರು ಕರಣಗಳಿರುವವು. ಕರಣಗಳೆಂದರೆ ಸಾಧನಗಳು. ಈಮೂರರಲ್ಲಿ ಕಾಯವು ಕೇವಲ ಬಾಹ್ಯಸಾಧನವು; ವಾಕ್ಕು ಅದಕ್ಕಿಂತಲೂ ಆಂತರಂಗಿಕವಾದುದು; ಮನಸ್ಸು ಕೇವಲ ಆಂತರಂಗಿಕವಾದುದು. ಮನಸ್ಸು ವಿಚಾರಮಾಡುವ ಸಾಧನ. ವಾಕ್ಕು ಅದನ್ನು ಪ್ರಕಟಮಾಡುವ ಸಾಧನ. ಕಾಯವು ಅದನ್ನು ನಡೆಸುವ ಸಾಧನ. ಆರ್ಜವದಲ್ಲಿ ಈಮೂರೂ ಯಾವಾಗಲೂ ಒಂದಕ್ಕೊಂದು ಕೂಡಿಕೊಂಡು ಜೊತೆಯಲ್ಲಿಯೇ ಇರುವವು. ಮನಸ್ಸಿನಲ್ಲಿ ಯೋಗ್ಯವಾದುದನ್ನು ಯೋಚಿಸುವದು; ಅದನ್ನೇ ಬಾಯಿಯಲ್ಲಿ ಆಡುವದು; ಅದನ್ನೇ ಕೈಯಲ್ಲಿ ಮಾಡುವದು ಆರ್ಜವವೆನಿಸುವದು. ಆರ್ಜವವೆಂದರೆ ಸರಳತನ.

**ಆಚಾರ್ಯೋಪಾಸನೆ:**—ಮನುಷ್ಯನಿಗೆ ಅನೇಕ ವಿಷಯಗಳನ್ನು ತಿಳಿಸಿಕೊಡುವವರು ಅನೇಕರಿರುವರು. ಅವರೆಲ್ಲರೂ ಆಚಾರ್ಯರೆ. ಆಚಾರ್ಯೋಪಾಸನೆ ಎಂಬ ಮಾತಿನಲ್ಲಿರುವ ಆಚಾರ್ಯಶಬ್ದಕ್ಕೆ ತತ್ತ್ವಜ್ಞಾನವನ್ನು ಕೊಡುವ ಸದ್ಗುರುವೆಂದರ್ಥ. ಯಾರು ಪರಮಾತ್ಮನ ಅಂಶವನ್ನು ತುಂಬಿಕೊಂಡು ಅವತಾರ ಮಾಡಿರುವರೊ ಅಥವಾ ಅನೇಕ ಸಾಧನಗಳಿಂದ ಚಿತ್ತಶುದ್ಧಿಯನ್ನು ಹೊಂದಿ ಆತ್ಮಸಾಕ್ಷಾತ್ಕಾರವನ್ನು ಪಡೆದು ನಿತ್ಯತೃಪ್ತರಾಗಿರುವರೊ ಅಂಥವರು ಸದ್ಗುರುಶಬ್ದಕ್ಕೆ ಪಾತ್ರರು. ಅಂಥವರ ಸಾಮೀಪ್ಯವನ್ನು ಪಡೆದು ಅವರ ಸೇವೆಯನ್ನು ಮಾಡುವದರಿಂದ ಅವರ ಸಹವಾಸಬಲದಿಂದ ಅವರಲ್ಲಿರುವ ಅಮೂಲ್ಯವಾದ ಸದ್ಗುಣಗಳು ನಮ್ಮಲ್ಲಿಯೂ ಸ್ವಲ್ಪಸ್ವಲ್ಪವಾಗಿ ಮನೆಮಾಡಿಕೊಳ್ಳುತ್ತ ಬಂದು ನಮ್ಮ ಮನಸ್ಸಿಗೆ ಉಚ್ಚಸ್ಥಿತಿಯನ್ನು ತಂದುಕೊಡುವವು. ಒಬ್ಬ ಮಹಾರಾಜನ ಬಳಿಗೆ ಹೋಗಬೇಕಾದರೆ ಅವರ ಪ್ರೀತಿಪಾತ್ರರಾದ ಒಬ್ಬ

ಪ್ರಧಾನರ ಆಶ್ರಯು ಬೇಕಷ್ಟೆ. ಸೃಷ್ಟಿಸ್ಥಿತಿಲಯಕರ್ತನಾದ ಆಪರಮೇಶ್ವರನ ಪರಿಚಯುವಾಗಬೇಕಾದರೆ ಅವನ ಭಕ್ತರಾದ ಸದ್ಗುರುಗಳನ್ನು ಅವಲಂಬಿಸಬೇಕು.

**ಶೌಚ:**— ಶೌಚವೆಂದರೆ ನೈರ್ಮಲ್ಯ. ಮೃಜ್ಜಲಾದಿಗಳಿಂದ ಮೈತೊಳೆಯುವದು ಬಾಹ್ಯನೈರ್ಮಲ್ಯ. ರಾಗದ್ವೇಷಾದಿಮಲಗಳನ್ನು ದೂರಮಾಡುವದು ಅಂತರಂಗಿಕನೈರ್ಮಲ್ಯ. ಮನಸ್ಸಿನಲ್ಲಿ ರಾಗದ್ವೇಷಾದಿಮಲಗಳಿದ್ದರೆ ಸದ್ಗುರುಗಳು ತತ್ತ್ವೋಪದೇಶವನ್ನು ಮಾಡುವದಕ್ಕೆ ಮುಂದೆ ಬರುವದಿಲ್ಲ. ಅಲ್ಲಲ್ಲಿ ಕಲೆಗಳಿಂದ ತುಂಬಿರುವ ಕನ್ನಡಿಯು ಪ್ರತಿಬಿಂಬವನ್ನು ಹೇಗೆ ಯಥಾಸ್ಥಿತವಾಗಿ ಗ್ರಹಿಸಲಾರದೋ ಹಾಗೆ ರಾಗದ್ವೇಷಾದಿಗಳಿಂದ ಕಲುಷಿತವಾದ ಮನಸ್ಸು ಆ ಉಪದೇಶವನ್ನು ಗ್ರಹಿಸುವದಿಲ್ಲ. ದೇಹನೈರ್ಮಲ್ಯವು ಮನೋನೈರ್ಮಲ್ಯಕ್ಕೆ ಸಾಧಕವಾಗುವದರಿಂದ ಇಲ್ಲಿ ಎರಡನ್ನೂ ಗ್ರಹಿಸಬೇಕು.

**ಸ್ಥೈರ್ಯ:**— ಇಲ್ಲಿ ಮೋಕ್ಷಮಾರ್ಗದಲ್ಲಿಯೇ ಎಡೆಬಿಡದೆ ಪ್ರಯತ್ನಮಾಡುವದಕ್ಕೆ ಸ್ಥೈರ್ಯವೆಂದು ಹೆಸರು. ಮಗು ಅಳುತ್ತಿರುವಾಗ ತಾಯಿಯು ಅದರ ಮುಂದೊಂದು ಆಟದ ವಸ್ತುವನ್ನು ಬಿಸಾಡುವಳು. ಮಗು ಅದಕ್ಕೆ ಹಿಗ್ಗಿ ಅಷ್ಟಕ್ಕೇ ಸುಮ್ಮನಾದರೆ ತಾಯಿಯು ಆಮಗುವಿನ ಕಡೆ ತಿರಿಗಿ ಕೂಡ ನೋಡದೆ ತನ್ನ ಕೆಲಸದಲ್ಲಿ ತಾನಿರುವಳು. ಮಗು ಹಾಗೆ ಮಾಡದೆ ಆಟದ ವಸ್ತುವನ್ನು ಎಡಗಾಲಿನಿಂದ ಒದೆದು ತಾಯಿಯ ನೆರಿಯನ್ನು ಹಿಡಿದು ಜಗ್ಗಿ ಬಿಡದೆ ಅತ್ತರೆ ಆಗ ಆಕೆಯು ಅದನ್ನು ಎತ್ತಿಕೊಂಡು ಹೊಟ್ಟೆಗೆಕೊಟ್ಟು ಮುದ್ದಿಸಿ ಲಾಲಿಸುವಳು. ಮೋಕ್ಷವು ಬೇಕೆಂದು ನಾವು ಬಯುಸುವದರಲ್ಲಿ ಒಂದೊಂದುವೇಳೆ ಮಧ್ಯಕಾಲದಲ್ಲಿ ಅದನ್ನು ಮರೆಸುವಂಥ ಪ್ರಾಪ್ತಿಗಳು ಒದಗಬಹುದು. ಅದನ್ನು ಬಹುಮಾನಿಸದೆ ನಮ್ಮ ಉದ್ದಿಷ್ಟವು ನೆರವೇರುವವರೆಗೂ ಏಕಪ್ರಕಾರವಾದ ಸನ್ನಾಹವನ್ನು ಮಾಡಬೇಕು.

**ಆತ್ಮವಿನಿಗ್ರಹ:**— ಕರ್ಮೇಂದ್ರಿಯುಗಳನ್ನು ಮತ್ತು ಜ್ಞಾನೇಂದ್ರಿಯುಗಳನ್ನು ಸ್ವೇಚ್ಛೆಯಿಂದ ಪ್ರವರ್ತಿಸದಂತೆ ತಡೆಯುುವದೇ ಆತ್ಮವಿನಿಗ್ರಹ. ಮನಸ್ಸಿನ ಸಹಾಯವಿಲ್ಲದೆ ಸ್ವತಂತ್ರಪ್ರವೃತ್ತಿಯಿಲ್ಲದುದರಿಂದ ಈಇಂದ್ರಿಯುಗಳು ತಾವು

ದುಂದುಗಾರಿಕೆಯಿಂದ ಕಂಡಕಂಡ ಕಡೆಗೆ ಹೊರಡುವಾಗ ತಮ್ಮ ತಮ್ಮ ದಾರಿಗೆ ಮನಸ್ಸನ್ನೆಳೆಯುವವು. ಈ ಸರ್ವತೋಮುಖವಾದ ಜಗ್ಗಾಟಕ್ಕೆ ಸಿಕ್ಕಿ ಮನಸ್ಸು ದಿಕ್ಕುತೋಚದಂತಾಗಿ ಕಳವಳಗೊಳ್ಳುವದು. ಮನಸ್ಸು ಸರ್ವೇಂದ್ರಿಯಗಳಿಗೂ ಸ್ವಾಮಿಯೇ ನಿಜ. ಆದರೆ ಅದು ತನ್ನ ಸೇವಕರಾದ ಇಂದ್ರಿಯಗಳ ಬೆನ್ನು ಹಿಡಿದರೆ ಕೊನೆಗೆ ಸ್ವಬುದ್ಧಿ ಇಲ್ಲದೆ ಕಂಡಕಂಡವರ ಹೇಳಿಕೆಯ ಮಾತು ಕೇಳುವ ಅರಸಿನಂತೆ ನಷ್ಟಹೊಂದುವದೇ ಸರಿ. ಮನಸ್ಸು ತನ್ನ ಸ್ವಾಮಿತ್ವವನ್ನು ಉಳಿಸಿಕೊಳ್ಳಬೇಕಾದರೆ ಇಂದ್ರಿಯಗಳನ್ನೆಲ್ಲ ತನ್ನ ಹಿಡಿತದಲ್ಲಿಟ್ಟುಕೊಂಡು ಅವು ಕರೆದ ಕಡೆಗೆ ತಾನು ಹೋಗದೆ ತನ್ನ ಆಜ್ಞೆಯಂತೆ ಅವು ನಡೆಯುವ ಹಾಗೆ ಮಾಡಬೇಕು. ವ್ಯವಹಾರಸಿದ್ಧಿಯೇ ಆಗಲಿ ಪರಮಾರ್ಥಸಿದ್ಧಿಯೇ ಆಗಲಿ ಇಂದ್ರಿಯಗಳನ್ನು ವಶಮಾಡಿಕೊಂಡಿರುವ ಮನಸ್ಸಿಗೆ ಮಾತ್ರ ಆಗುವದು.

**ವೈರಾಗ್ಯ:**— ಇಂದ್ರಿಯಗಳನ್ನು ಸ್ವಾಧೀನಮಾಡಿಕೊಳ್ಳಬೇಕಾದರೆ ವೈರಾಗ್ಯವು ಬಹು ಉತ್ತಮಸಾಧನ. ಮನಸ್ಸಿನಲ್ಲಿ ವಿಷಯಗಳ ಮೇಲೆ ಅಲ್ಪಸ್ವಲ್ಪ ಬಯಕೆ ತೋರಿದರೂ ಸಾಕು. ಒಡನೆಯೇ ರಾಜನ ಇಷ್ಟ ಪೂರ್ತಿಮಾಡಿ ಅವನ ಪ್ರೀತಿಪಾತ್ರರಾಗಬೇಕೆಂದು ಓಡುವ ಇಂಗಿತಜ್ಞರಾದ ಸೇವಕರಂತೆ ಇಂದ್ರಿಯಗಳು ವಿಷಯಗಳನ್ನು ಹಿಡಿಯುವದಕ್ಕೆ ನುಗ್ಗುವವು. ಮನಸ್ಸು ಅಂಥ ಕಲ್ಪನೆಯನ್ನೇ ತಂದುಕೊಳ್ಳದೆ ಹೋದರೆ ಇಂದ್ರಿಯಗಳು ಸುಮ್ಮನೆ ಕುರಿಗಳಂತೆ ಜೋಲುಮುಖವನ್ನು ಹಾಕಿಕೊಂಡು ಮೂಲೆಗೆ ಮುಟ್ಟಾಗಿ ಕೂಡುವವು. ಕುತ್ಸಿತವಾದ ಬಯಕೆಗಳು ಒಮ್ಮೊಮ್ಮೆ ಮನಸ್ಸಿನಲ್ಲಿ ತಲೆಹಾಕಬಹುದು. ಕಳ್ಳಹಸುಗಳು ಮೇಯುವದಕ್ಕೆ ಬಂದಾಗ ಹಾ ಎಂದಕೂಡಲೆ ಓಡುವಂತೆ ಕ್ಷುದ್ರಕಲ್ಪನೆಗಳು ತಲೆಹಾಕುವದಕ್ಕೆ ಬಂದಾಗ ಎಚ್ಚರಿಕೆಯನ್ನು ಕೊಟ್ಟರೆ ಕೂಡಲೆ ಅವು ಕಾಲಿಗೆ ಬುದ್ಧಿಹೇಳುವವು. ಹೀಗೆ ವಿಷಯಗಳ ಮೇಲೆ ಪ್ರೀತಿ ಇಡದಿರುವದೇ ವೈರಾಗ್ಯ.

**ಅನಹಂಕಾರ:**— ದೇಹೇಂದ್ರಿಯಾದಿಗಳು ಅಂತರ್ಯಾಮಿಯಾದ ಚೈತನ್ಯದ ಬಲದಿಂದ ಆಡುತ್ತಿರುವವೆಂಬ ದೂರದೃಷ್ಟಿ ಇಲ್ಲದೆ ದೇಹೇಂದ್ರಿಯಾದಿಗಳೇ ತಾನೆಂದು ಭ್ರಮಿಸಿ ಕರ್ತೃತ್ವಾದ್ಯಭಿಮಾನವನ್ನು ಆರೋಪಿಸಿಕೊಂಡು

ಸೊಕ್ಕಿನಿಂದ ಮೆರೆಯುವದು ಅಹಂಕಾರವು. ಅದಿಲ್ಲದಿರುವದು ನಿರಹಂಕಾರ. ಸರ್ವರಿಂದಲೂ ಸರ್ವವಿಧದಲ್ಲಿಯೂ ಭಿನ್ನವಾದ ತನ್ನದೊಂದು ಸ್ವತಂತ್ರವ್ಯಕ್ತಿ-ವಿಶೇಷದ ಅಸ್ತಿತ್ವಭಾವನೆಯಿಂದ ತಲೆತಿರಿಗಿದ ಜನರಿಂದ ಅವರವರ ಸ್ವಹಿತವೂ ನೆರವೇರುವದಿಲ್ಲ; ಪರಹಿತವೂ ಆಗುವದಿಲ್ಲ. ಮನಸ್ಸು ಕರ್ತೃತ್ವಾದ್ಯಭಿಮಾ-ನಗಳಿಂದ ಸುಖದುಃಖಸಮುದ್ರದಲ್ಲಿ ಮುಳುಗಿರುವಾಗ ಪರಮಾರ್ಥವಿಚಾರದ ಕೂಗು ಹೇಗೆ ಕಿವಿಗೆ ಬಿದ್ದೀತು? ಆದುದರಿಂದ ದುರಭಿಮಾನವನ್ನು ಬಿಟ್ಟರೆ ಮಾತ್ರ ಪರಮಾರ್ಥದ ದಾರಿಹತ್ತೀತು.

**ಜನ್ಮಮರಣಾದಿಗಳಲ್ಲಿ ದುಃಖದರ್ಶನ:**— ಹುಟ್ಟುವಿಕೆಯಲ್ಲಿ ಗರ್ಭವಾಸಾದಿಗಳಿಂದ ದುಃಖವಾಗುವದೆಂದೂ ಮರಣಕಾಲದಲ್ಲಿ ಮಹಾಯಾತ-ನೆಯಿಂದ ಸಂಕಟವಾಗುವದೆಂದೂ ಮುಪ್ಪಿನಲ್ಲಿ ಇಂದ್ರಿಯಾದಿಶೈಥಿಲ್ಯದಿಂದ ವ್ಯಸನವಾಗುವದೆಂದೂ ವ್ಯಾಧಿಯಲ್ಲಿ ಆಧ್ಯಾತ್ಮಿಕಾಧಿಭೌತಿಕಾಧಿದೈವಿಕಯಾ-ತನೆಗಳಾಗುವವೆಂದೂ ಮನುಷ್ಯನ ಮನಸ್ಸಿನಲ್ಲಿ ವಿಚಾರ ಹುಟ್ಟದ ಹೊರತು ಅವನ ಮನಸ್ಸು ಪರಮಾರ್ಥವಿಚಾರಕ್ಕೆ ಅರ್ಹವಾಗುವದಿಲ್ಲವೆಂಬ ಮಾ-ತೊಂದುಕಡೆ ಇರಲಿ; ವ್ಯವಹಾರದಲ್ಲಿ ಪಾಪಕ್ಕೆ ಕೂಡ ಹೆದರುವದಿಲ್ಲ. ಜನ್ಮ-ಮೃತ್ಯುಜರಾವ್ಯಾಧಿಗಳು ಪಾಪಗಳ ಫಲಗಳು. ಇವುಗಳು ದುಃಖರೂಪ-ವಾಗಿ ಕಂಡರೆ ಇವುಗಳನ್ನು ತಪ್ಪಿಸಿಕೊಳ್ಳಬೇಕೆಂದು ಪಾಪಕ್ಕೆ ಹಿಂದೆಗೆಯ ಬೇಕಾದೀತು. ಜನ್ಮಮೃತ್ಯುಜರಾವ್ಯಾಧಿಗಳು ತತ್ಕಾಲದಲ್ಲಿ ದುಃಖರೂಪಗ-ಳಾಗಿ ತೋರಿ ತಟಸ್ಥವಾಗಬಹುದು. ಪುನಃಪುನಃ ಅವುಗಳ ವಿಚಾರವನ್ನು ಮಾಡುತ್ತ ಮನಸ್ಸನ್ನು ದೃಢಮಾಡಿಕೊಳ್ಳಬೇಕು.

**ಅಸಕ್ತಿ:**— ವಿಷಯಗಳಲ್ಲಿ ಪ್ರೀತಿಯಿಲ್ಲದಿರುವಿಕೆಯೇ ಅಸಕ್ತಿ. ಸುಖ-ವೆಂಬುದು ಮನಸ್ಸಿನ ಸಮತ್ವದಲ್ಲಿಯೇ ಹೊರತು ಹೊರಗಣ ವಿಷಯಗಳಲ್ಲಿ-ಲ್ಲವೆಂದು ನಂಬಿಕೆಯಾದರೆ ಅಸಕ್ತಿಯುದಯಿಸುವದು. ವಿಷಯಗಳ ಕಡೆ ಅಸಕ್ತವಾದ ಮನಸ್ಸು ಮಾತ್ರ ಪರಮಾತ್ಮನ ಕಡೆಗೆ ಸಕ್ತವಾಗ ಬಲ್ಲುದು.

**ಅನಭಿಷ್ವಂಗ:**— ಹೆಂಡತಿಮಕ್ಕಳು ಮೊದಲಾದವರು ಸತ್ತರೆ ಅ-ಥವಾ ಕೆಟ್ಟರೆ ತಾನೇ ಸತ್ತೆನೆಂದೂ ಅಥವಾ ಕೆಟ್ಟೆನೆಂದೂ ಮನೆಮಠಗಳು ಹಾಳಾದರೆ ತಾನೇ ಹಾಳಾದೆನೆಂದೂ ಭಾವಿಸುವ ಒಂದು ಬಗೆಯ ಅತಿ-

ಪ್ರೀತಿಯೇ ಅಭಿಷ್ವಂಗ. ಅದರ ಅಭಾವವೇ ಅನಭಿಷ್ವಂಗ. ತನ್ನ ದೇಹೇಂದ್ರಿಯಾದಿಗಳನ್ನು ತಾನೆಂದು ತಿಳಿಯುವದೇ ಎಷ್ಟೋ ಅನರ್ಥಹೇತುವಾಗಿರುವಾಗ ಅನ್ಯರಾದ ಸ್ತ್ರೀಪುತ್ರಾದಿಗಳನ್ನು ತಾನೆಂದು ತಿಳಿಯುವದು ಉತ್ಕಟವಾದ ಅನಿಷ್ಟವಾಗುವದೆಂದು ಹೆಚ್ಚಾಗಿ ಪ್ರತಿಪಾದಿಸಬೇಕಾದುದೇ ಇಲ್ಲ.

**ಸಮಚಿತ್ತತ್ವ:**— ಗಾಳಿಯಿಂದ ಹೊಯ್ದಾಡುತ್ತಿರುವ ನೀರಿನಲ್ಲಿ ಸೂರ್ಯಚಂದ್ರರ ಪ್ರತಿಬಿಂಬವು ಮೂಡದಿರುವಂತೆ ಇಷ್ಟವಸ್ತು ಸಿಕ್ಕಿದರೆ ಉಬ್ಬುತ್ತ ಮತ್ತು ಅನಿಷ್ಟವಸ್ತು ಪ್ರಾಪ್ತಿಯಾದಾಗ ತಗ್ಗುತ್ತ ಏಕಪ್ರಕಾರವಾಗಿರಲರಿಯದ ಮನಸ್ಸಿನಲ್ಲಿ ಪರಮಾತ್ಮಭಾವನೆ ಮೂಡುವದಿಲ್ಲ. ಯಾವ ಇಷ್ಟಾನಿಷ್ಟಗಳು ಬಂದರೂ ಕೂಡ ಅವು ದೇಹೇಂದ್ರಿಯಾದಿಗಳಿಗೆಂದು ನಿರ್ಧರಮಾಡಿಕೊಂಡುಬಿಟ್ಟರೆ ಚಿತ್ತಕ್ಕೆ ಸಮಾಧಾನವು ಸಿಕ್ಕುವದು.

**ಭಕ್ತಿ:**— ಮನಸ್ಸೆಂಬುದು ಕೋಮಲವಾದ ಬಳ್ಳಿಯಂಥ ವಸ್ತು. ಅದು ಏನಾದರೊಂದನ್ನು ಅವಲಂಬಿಸಿಕೊಂಡೇ ಇರಬೇಕು. ಮನಸ್ಸು ಮುಳ್ಳುಗಳ್ಳಿಯಂಥ ವಿಷಯಗಳನ್ನು ಸುತ್ತಿಕೊಂಡಿರುವದನ್ನು ಮೆಲ್ಲಗೆ ಬಿಡಿಸಿ ಅಷ್ಟಷ್ಟನ್ನೇ ಪರಮಾತ್ಮನೆಂಬ ಕಲ್ಪವೃಕ್ಷಕ್ಕೆ ಹಚ್ಚಬೇಕು. ಮನಸ್ಸು ವಿಷಯಗಳನ್ನು ಬಿಡುತ್ತ ಬಿಡುತ್ತ ಪರಮಾತ್ಮಕಲ್ಪತರುವನ್ನು ಸರ್ವತೋಮುಖದಿಂದ ಸುತ್ತಿಕೊಳ್ಳುತ್ತ ಹೋಗುವಂತೆ ಮಾಡುವದೇ ಭಕ್ತಿ.

**ವಿವಿಕ್ತದೇಶಸೇವಿತ್ವ:**— ಸ್ವಭಾವದಿಂದ ಅಥವಾ ಸಂಸ್ಕಾರದಿಂದ ಶುಚಿಯಾಗಿ ಸರ್ಪಚೋರಾದಿ ಭಯವಿರದೆ ಇರುವಂಥ ಅರಣ್ಯನದೀಪುಳಿನ ದೇವಗೃಹಾದಿಗಳಲ್ಲಿ ವಾಸಮಾಡುವದೇ ವಿವಿಕ್ತದೇಶಸೇವಿತ್ವ. ಸ್ಥಳದ ಅಶುಚಿಯೂ ಸರ್ಪಚೋರಾದಿಭೀತಿಯೂ ಮನಸ್ಸಿನ ವಿಕ್ಷೇಪಕ್ಕೆ ಕಾರಣವಾಗಿರುವವು. ಅರಣ್ಯನದೀಪುಳಿನಾದಿ ಪ್ರದೇಶಗಳು ನಿರಾತಂಕವಾಗಿದ್ದು ಮನಸ್ಸಿಗೆ ಉಲ್ಲಾಸವನ್ನುಂಟುಮಾಡುವದರಿಂದ ಚಿತ್ತೈಕಾಗ್ರ್ಯಕ್ಕೆ ಹೆಚ್ಚುಸಹಕಾರಿಯಾಗುವವು.

**ಜನಸಮೂಹಕ್ಕೆ ದೂರವಾಗಿರುವದು:**— ಜನರ ಸಮೂಹದಲ್ಲಿ ವಿಷಯಗಳ ವಿಚಾರವೇ ವಿಶೇಷವಾಗಿ ನಡೆಯುತ್ತಿರುವದು. ಅದರಿಂದ

ಮನೋವೃತ್ತಿಯು ಭಗವದ್ವಿಚಾರಕ್ಕೆ ಹೋಗದೆ ಇರುವ ಅಥವಾ ಹೋದದ್ದು ಹಿಂದಕ್ಕೆ ಹೊರಳುವ ಸಂಭವವುಂಟು. ಆದುದರಿಂದ ಜನಸಮೂಹದಲ್ಲಿ ವಿಶೇಷವಾಗಿ ಬೆರೆಯದೆ ಇರಬೇಕು.

**ಅಧ್ಯಾತ್ಮಜ್ಞಾನನಿತ್ಯತ್ವ:**— ಆತ್ಮವಿಷಯಕಜ್ಞಾನವೇ ಅಧ್ಯಾತ್ಮ-ಜ್ಞಾನ. ಅದೇ ನಿತ್ಯವೆಂಬ ಭಾವನೆಯೇ ಅಧ್ಯಾತ್ಮಜ್ಞಾನನಿತ್ಯತ್ವ. ವಿಷಯ-ಗಳು ಪರಿಣಾಮಸ್ವಭಾವವುಳ್ಳವುಗಳಾದುದರಿಂದ ಅವುಗಳ ಜ್ಞಾನವು ಅವುಗಳ ಯೋಗ್ಯತೆಗೆ ತಕ್ಕಂತೆ ಇರುವದು. ಆದುದರಿಂದ ಕ್ಷುದ್ರವಾದ ಆವಿಷಯ-ಜ್ಞಾನಕ್ಕೆ ಮಿತಿಮೀರಿದ ಮಹತ್ತ್ವವನ್ನು ಕೊಡದೆ ಆತ್ಮಜ್ಞಾನವೊಂದನ್ನೇ ನಿತ್ಯವಾದುದೆಂದು ಗೌರವಿಸಬೇಕು.

**ತತ್ತ್ವಜ್ಞಾನಾರ್ಥದರ್ಶನ:**— ಮೇಲೆ ಹೇಳಿದ ಅಮಾನಿತ್ವಾದಿಗು-ಣಗಳ ಫಲವೆಂಬುದೇ ತತ್ತ್ವಜ್ಞಾನ. ಅದರ ಅರ್ಥವೆಂದರೆ ಪ್ರಯೋಜನವು. ಅದು ಸಂಸಾರೋಪರಮಸ್ವರೂಪವಾದ ಮೋಕ್ಷ. ಅದನ್ನು ಆಲೋಚಿಸು-ತ್ತಿರುವದೇ ತತ್ತ್ವಜ್ಞಾನಾರ್ಥದರ್ಶನ. ನಾವು ಹೇಗೋ ಈಗ ಸಂಸಾರಬಂಧ-ನಕ್ಕೆ ಸಿಕ್ಕುಬಿದ್ದಿದ್ದೇವೆ. ಅದರಿಂದ ಬಿಡುಗಡೆಯನ್ನು ಮಾಡುವಂಥ ತತ್ತ್ವ-ಜ್ಞಾನದ ವಿಷಯವನ್ನು ಮೇಲೆ ಮೇಲೆ ಯೋಚಿಸುವದರಿಂದ ಮೋಕ್ಷದ ಭಾವನೆಯು ಮನಸ್ಸಿನಲ್ಲಿ ದೃಢವಾಗಿ ಅದರ ಸಾಧನಾನುಷ್ಠಾನದಲ್ಲಿ ಸ್ಥಿರ-ಪ್ರವೃತ್ತಿಯುಂಟಾಗುವದು.

ಹೀಗೆ ಸಾಧನಗಳನ್ನು ಹಿಡಿದುಹೋದರೆ ಸಾಧ್ಯವಾದ ತತ್ತ್ವಜ್ಞಾನವು ತನಗೆ ತಾನೇ ಅನುಭವಕ್ಕೆ ಬಂದೇ ಬರುವದು. ಹಾಗೆ ಸಾಧನಗಳನ್ನು ಮಾಡದೆ ಬರೀ ಎರಡಕ್ಷರಗಳ ಜ್ಞಾನದಿಂದ ದ್ವೈತಾದ್ವೈತವಿಶಿಷ್ಟಾದ್ವೈತಾದಿ ಸಿದ್ಧಾಂತದ ಒಣಮಾತುಗಳನ್ನು ಹಿಡಿದುಕೊಂಡು ಒಬ್ಬರಿಗೊಬ್ಬರು ಹೊಡೆದಾ-ಡುವದು ಕೇವಲ ನಿರರ್ಥಕವು. ಆಯಾಸಿದ್ಧಾಂತವನ್ನು ಅನುಭವಕ್ಕೆ ತೆಗೆ-ದುಕೊಂಡವರು ಮಾತ್ರ ಅವನ್ನು ಆಡಬಹುದೇ ಹೊರತು ಅನುಭವದ ಗೋ-ಜಿಗೆ ಹೋಗದೆ ಮಾಯೆ, ಮಿಥ್ಯೆ ಮೊದಲಾದ ಶಬ್ದಗಳನ್ನು ಸುಮ್ಮನೆ ಗಾಳಿ-ಯಲ್ಲಿ ತೂರಾಡುವದರಿಂದ ಪ್ರಯೋಜನವೇನು? ಮಾಯೆಯು ಯಾವನಿಗೆ ವಶವಾಗಿರುವದೊ ಆಮಹಾರಾಯನೊಬ್ಬನು ಮಾತ್ರ ನಾಲ್ಕುದಾರಿಗಳು

ಸೇರಿದ ಕಡೆಯಲ್ಲಾದರೂ ಎರಡು ಕೈಗಳನ್ನು ಎತ್ತಿ ಮಾಯೆಯು ಮಿಥ್ಯೆಯೆಂದು ಸಾರಬಲ್ಲನು. ಇತರರು ಹಾಗೆ ಮಾಡಿದರೆ ಒಪ್ಪಲಾರದು. ಮಾಯೆಯು ವಶವಾಗುವದೆಂದರೇನು ಸಾಮಾನ್ಯವೆ?

## "दैवीह्येषा गुणमयी मम माया दुरत्यया"

ಎಂದು ಶ್ರೀಕೃಷ್ಣಪರಮಾತ್ಮನು ಸ್ವಕಂಠದಿಂದ ಹೇಳಿರುವಂತೆ ಭಗವಂತನ ಮಾಯೆಯಿಂದ ಪಾರಾಗುವದೇ ಎಷ್ಟೋ ಕಷ್ಟಸಾಧ್ಯ. ಒಂದುಪಕ್ಷ ಪಾರಾದರೂ ಅಷ್ಟು ಮಾತ್ರಕ್ಕೇ ಮಾಯೆಯು ಅವನ ವಶವಾಯಿತೆಂದು ಹೇಳಲಾಗುವದಿಲ್ಲ. ಆದುದರಿಂದಲೆ ತಾನು ಮಾತ್ರ ಪಾರಾದವನು ಕೂಡ ಮಾಯೆಯನ್ನು ಮಿಥ್ಯೆಯೆಂದು ಹೇಳಲಿಕ್ಕಾಗುವದಿಲ್ಲ. ಶ್ರೀಕೃಷ್ಣನು ಗೀತೆಯಲ್ಲಿ **"मम माया"** ಎಂದು ಹೇಳಿರುವನು. ಆದುದರಿಂದ ಮಾಯೆಯು ಪರಮಾತ್ಮನ ವಶದಲ್ಲಿರುವದು. ಅವನೊಬ್ಬನು ಅದನ್ನು ಮಿಥ್ಯೆಯೆನ್ನಬಹುದು. ಏಕೆಂದರೆ ಅದನ್ನು ತನ್ನ ಮನೋನುಗುಣವಾಗಿ ಉಪಯೋಗಮಾಡಿಕೊಳ್ಳುವ ಸ್ವಾತಂತ್ರ್ಯವು ಪರಮಾತ್ಮನದು. ಮಾಯೆಯನ್ನು ಮಿಥ್ಯೆಯೆನ್ನಲಿಕ್ಕೆ ಇತರ ಜೀವರಿಗೆ ಅಧಿಕಾರವಿಲ್ಲ. ಇದಕ್ಕೊಂದುದಾಹರಣೆಯನ್ನು ಹೇಳುವೆನು. ಕೇಳಿರಿ. ಪೂರ್ವದಲ್ಲಿ ಒಬ್ಬರು ದೊಡ್ಡ ಸಾಧುಗಳಿದ್ದರು. ಅವರು ಒಳ್ಳೇ ಬ್ರಹ್ಮನಿಷ್ಠರು. ಆ ಸಾಧುಗಳು ಯಾವಾಗಲೂ ಜ್ಞಾನಸಾಧನಗಳ ವಿಷಯವಾಗಿ—ಎಂದರೆ ಕರ್ಮ, ಭಕ್ತಿ ಮತ್ತು ಯೋಗಗಳ ವಿಷಯವಾಗಿ—ಮಾತಾಡುತ್ತಿದ್ದರೇ ಹೊರತು ಐಕ್ಯ ಮತ್ತು ಭೇದ ಮೊದಲಾದ ಸಿದ್ಧಾಂತವಿಶೇಷಗಳ ವಿಚಾರವಾಗಿ ಮಾತುತೆಗೆಯುತ್ತಿರಲಿಲ್ಲ. ಹೀಗಿರುವಾಗ ಒಬ್ಬ ಅದ್ವೈತಶಾಸ್ತ್ರಸಂಪನ್ನನಾದ ಪಂಡಿತನು ಅವರ ಆಶ್ರಯಕ್ಕೆ ಬಂದು ಸೇರಿದನು. ಪ್ರಬಲವಾದ ಶಾಸ್ತ್ರವಾಸನೆಯ ಪ್ರಭಾವದಿಂದ ಆಪಂಡಿತನು ಯಾವಾಗಲೂ ಮಾಯೆಯು ಮಿಥ್ಯೆಯೆಂದು ಸಾಧಿಸುವದರಲ್ಲಿ ಬಹು ಉತ್ಸಾಹವನ್ನು ತೋರಿಸುತ್ತಿದ್ದನು. ಒಂದು ದಿನ ಆಸಾಧುಗಳು ಆಪಂಡಿತನೊಡನೆ ಹೋಗುತ್ತಿರುವಾಗ ಒಂದು ಕಡೆ ಒಬ್ಬ ಹಾವಾಡಿಗನು ತನ್ನ ಗಾರುಡೀವಿದ್ಯಾಕೌಶಲವನ್ನು ತೋರಿಸುತ್ತಿದ್ದನು. ಆಗ ಸಾಧುಗಳು ಪಂಡಿತನನ್ನು ನಿಲ್ಲಿಸಿಕೊಂಡು ತಾವೂ

ಅಲ್ಲಿ ನೋಡುತ್ತ ನಿಂತರು. ಹಾವಾಡಿಗನು ನೆಲದಮೇಲೆ ಒಂದು ಹಗ್ಗ-ವನ್ನು ಹಾಕಿ ಎಲ್ಲರೂ ಕಾಣುವಂತೆ ಅದನ್ನು ತನ್ನ ಮಂತ್ರಶಕ್ತಿಯಿಂದಲೊ ಅಥವಾ ಇತರ ಉಪಕರಣಪ್ರಭಾವದಿಂದಲೊ ಹಾವಾಗಿ ಮಾಡಿದನು. "ಆ ಹಾವು ಸತ್ಯವೊ ಮಿಥ್ಯವೊ?" ಎಂದು ಸಾಧುಗಳು ಪಂಡಿತನನ್ನು ಪ್ರಶ್ನೆ-ಮಾಡಿದರು. "ಮಿಥ್ಯೆಯೇ ಸರಿ. ಈಗ ತಾನೆ ಹಗ್ಗವಾಗಿದ್ದದ್ದು ಹಾವಾ-ಗಿದೆ" ಎಂದು ಪಂಡಿತನು ನಗುತ್ತ ಉತ್ತರವನ್ನು ಕೊಟ್ಟನು. ಆಗ ಸಾಧು-ಗಳು "ಹಾಗಾದರೆ ಅದನ್ನು ಹಿಡಿಯಿರಿ" ಎಂದು ಹೇಳಲು ಆಪಂಡಿತನು ತನ್ನ ಮಾನವನ್ನು ಉಳಿಸಿಕೊಳ್ಳುವದಕ್ಕಾಗಿ ಎಡಗೈಯಲ್ಲಿ ಜೀವವನ್ನು ಹಿಡಿ-ದುಕೊಂಡು ಬಹಿರಂಗದಲ್ಲಿ ಧೈರ್ಯವನ್ನು ನಟಿಸುತ್ತ ಮೆಲ್ಲಗೆ ಹೋಗಿ ಅದಕ್ಕೆ ಕಚ್ಚುವದಕ್ಕೆ ಅವಕಾಶವನ್ನು ಕೊಡದಂತೆ "ಹಾವೆಂದರೆ ಹರ ನಡುಗಿದ" ಎಂಬುದನ್ನು ನೆನಸಿಕೊಂಡು ಹೆದರುತ್ತ ಹೆದರುತ್ತ ಉಪಾಯದಿಂದ ಹೆಡೆ-ಯನ್ನೇ ಬಲಗೈಯಿಂದ ಗಟ್ಟಿಯಾಗಿ ಹಿಡಿದನು. ಒಡನೆ ಅದು ಅವನ ಕೈಗೆ ಬಲವಾಗಿ ಸುತ್ತಿಕೊಂಡಿತು. ಅದರ ಬಿಗಿಯಿಂದ ಸಂಕಟವುಂಟಾಗಿ ಆ ಪಂಡಿತನು ಕಣ್ಣುಕಣ್ಣುಬಿಡುತ್ತ ನಿಟ್ಟುಸಿರಿಟ್ಟನು. ಆಗ ಮತ್ತೆ ಸಾಧುಗಳು "ಪಂಡಿತರೆ, ಹಾವು ಸತ್ಯವೊ? ಮಿಥ್ಯವೊ?" ಎಂದು ಕೇಳಲು "ಮ-ಹಾಸ್ವಾಮಿ, ಹಾವು ಮಿಥ್ಯವೆಂದು ನನಗೆ ಕಂಡುಬಂದಿರುವದನ್ನು ನಾನು ಎಷ್ಟೆಷ್ಟು ದೃಢವಾಗಿ ಭಾವಿಸಿದರೂ ಅದರಿಂದಾಗುತ್ತಿರುವ ಸಂಕಟವು ಅಷ್ಟ-ಷ್ಟು ಸತ್ಯವೆಂದು ಅನುಭವಕ್ಕೆ ಬರುತ್ತಿದೆ. ಈಗ ನನಗೇನು ಗತಿ? ಸ್ವಲ್ಪ ಕೈಬಿಟ್ಟರೆ ಇದು ನನ್ನನ್ನು ಕಚ್ಚಿ ಕೊಂದುಬಿಡುವದು ನಿಶ್ಚಯ." ಎಂದು ಕಣ್ಣೀರು ಸುರಿಸಿದನು. ಆಗ ಸಾಧುಗಳು ಕನಿಕರದಿಂದ ಹಾವಾಡಿಗನಿಗೆ ಅದನ್ನು ಹಗ್ಗವಾಗಿ ಮಾಡೆಂದು ಹೇಳಿದರು. ಹಾವಾಡಿಗನು ಒಡನೆ ತನ್ನ ಮಾಟದ ವಿದ್ಯೆಯಿಂದ ಆಪ್ರಕಾರ ಮಾಡಿದನು. ಆಮಹತ್ತಾದ ಸಂಕಟ-ದಿಂದ ಪಾರಾಗಿ ಚೇತರಿಸಿಕೊಳ್ಳುತ್ತಿರುವ ಪಂಡಿತನನ್ನು ನೋಡಿ ಸಾಧುಗಳು "ಪಂಡಿತರೆ, ಆಹಾವನ್ನು ಹಾವಾಡಿಗನೊಬ್ಬನು ಮಿಥ್ಯೆಯೆಂದರೆ ಒಪ್ಪೀತು. ಏಕೆಂದರೆ ಅವನು ಹಗ್ಗವನ್ನು ಹಾವಾಗಿಯೂ ಮತ್ತೆ ಅದನ್ನು ಹಗ್ಗವಾಗಿಯೂ ಬೇಕಾದ ಹಾಗೆ ಮಾಡಬಲ್ಲನು. ಇತರರು ಮಿಥ್ಯೆಯೆಂದರೆ ಒಪ್ಪಲಾರದು.

ಹಾಗೆಯೇ ಮಾಯೆಯನ್ನು ಮಿಥ್ಯೆಯೆಂದು ಹೇಳುವದು ಮಾಯಾಧೀಶನಾದ ಭಗವಂತನೊಬ್ಬನಿಗೆ ಸಲ್ಲುವದೇ ಹೊರತು ಇತರರಿಗಲ್ಲ" ಎಂದು ಬೋಧಿಸಿದರು. ಅನುಭವಶಾಲಿಗಳಾದ ಸಾಧುಗಳ ಮಾತು ಹೀಗಿರುವದು. ಇನ್ನು ಅನುಭವದ ಲೇಶವೂ ಇಲ್ಲದೆ ಮಾಯೆ, ಮಿಥ್ಯೆ, ಸತ್ಯ ಮೊದಲಾದ ದೊಡ್ಡ ದೊಡ್ಡ ಮಾತುಗಳನ್ನಾಡುವವರ ವಿಷಯವು,

"कलौ वेदांतिनो भांति फाल्गुने बालका इव"

ಎಂಬಂತೆ ಫಾಲ್ಗುನಮಾಸದ ಕಾಮನ ಹಬ್ಬದಲ್ಲಿ ಬಾಲಕರು ಮನಸ್ಸಿಗೆ ಬಂದಂತೆ ತಮಗೆ ಅನುಭವವಿಲ್ಲದ ಬೀಭತ್ಸವಾದ ಮಾತುಗಳನ್ನಾಡುತ್ತ ಕೊನೆಗೆ ಒಬ್ಬರಿಗೊಬ್ಬರು ಬಡಿದಾಡುವ ಹಾಗೆ ನಿರರ್ಥಕವಾಗಿರುವದು. ಪ್ರೌಢವಯಸ್ಕರಾದ ಸಭ್ಯಗೃಹಸ್ಥರು ಅಂಥ ಮಾತುಗಳನ್ನು ಹೇಗೆ ಉಚ್ಚರಿಸುವದಕ್ಕೆ ಹೋಗುವದಿಲ್ಲವೋ ಹಾಗೆ ಅನುಭವಶಾಲಿಗಳಾದ ಸಾಧುಗಳು ಮಾಯೆ, ಮಿಥ್ಯೆ, ಸತ್ಯ ಮೊದಲಾದ ಮಾತುಗಳನ್ನಾಡುವದಕ್ಕೆ ಹೋಗುವದಿಲ್ಲ. ವ್ಯರ್ಥವಾಗಿ ಮಾಯಾಸಂಬಂಧವಾದ ಹೆಚ್ಚಿನ ವಿಚಾರವನ್ನು ಮಾಡುವದೇ ಆ ಮಾಯೆಯಿಂದ ಪಾರುಮಾಡುವ ಪರಮಾತ್ಮನನ್ನು ಮರೆತಂತೆ ಆಗುವದು. ಪರಮಾತ್ಮಸ್ವರೂಪದಲ್ಲಿ ವಿಸ್ಮರಣೆಯುಂಟಾದ ಮೇಲೆ ಇನ್ನೇನಿದ್ದೇನು? ಪೂರ್ವದಲ್ಲಿ ರಾಮನು ರಾವಣನನ್ನು ಕೊಲ್ಲುವ ಸಮಯ ಬಂದಾಗ "ಹೆ, ರಾವಣ, ಇಷ್ಟು ಹೊತ್ತು ನನಗೆ ದೂರವಾಗಿದ್ದ ನೀನು ಧನುರ್ಬಾಣಧಾರಿಯಾಗಿ ಎದುರಿಗೆ ನಿಂತಿರುವೆ, ಇಗೊ, ನಿನ್ನ ಕಾಲವು ಸಮೀಪವಾಯಿತು. ಈಗ ನಿನಗೇನು ಬೇಕು? ಕೇಳಿಕೊ ನಾನು ನಿನ್ನ ಇಷ್ಟಾರ್ಥವನ್ನು ಪೂರ್ಣಮಾಡುವೆನು" ಎಂದನು. ಅದಕ್ಕೆ ರಾವಣನು "ಹೆ, ರಾಮ, ಇಂಥ ವಿಪರೀತವಾದ ಮಾತನ್ನು ಬಿಡು. ಇಷ್ಟಾರ್ಥವನ್ನು ಬೇಡಿ ಕಯ್ಯೊಡ್ಡುವ ಸ್ಥಿತಿಯಲ್ಲಿರುವವನು ನಾನೋ ನೀನೋ ವಿಚಾರಿಸಿ ನೋಡು. ಇಷ್ಟು ದಿನಗಳಿಂದಲೂ ಕೊಲ್ಲಬೇಕೆಂಬ ಉದ್ದೇಶದಿಂದ ನನ್ನನ್ನೇ ಕನವರಿಸಿಕೊಳ್ಳುತ್ತಿರುವ ನೀನು ಬೇಕಾದರೆ ನಿನ್ನ ನಿಜಸ್ಥಿತಿಯನ್ನು ಬೇಡಬಹುದು. ಹೇಗೇ ಆಗಲಿ ನಿರಂತರ ನಿನ್ನ ಸ್ಮರಣೆಯಲ್ಲಿಯೇ ಕಾಲವನ್ನು ಕಳೆಯುತ್ತಿರುವ ನಾನು ಇನ್ನೇನು

ಬೇಡತಕ್ಕದ್ದಿದೆ? "ಎಂದು ಹೇಳಿದನಂತೆ. ಆದುದರಿಂದ

"मामेव ये प्रपद्यंते मायामेतां तरंति ते"

ಎಂಬ ಭಗವದುಕ್ತಿಯನ್ನು ನಂಬಿ ಭಗವಂತನಿಗೆ ಶರಣುಹೋದರೆ ಮಾಯೆಯು ಮಾಯವಾಗುವದಲ್ಲದೆ ತತ್ತ್ವಜ್ಞಾನವು ಕರತಲಾಮಲಕವಾಗುವದು.

# ಕರ್ಮಯೋಗ.

ತತ್ತ್ವಜ್ಞಾನದ ವಿಷಯವಾಗಿ ಭಗವಂತನು ಅರ್ಜುನನಿಗೆ "**एषा तेऽभिहिता सांख्ये बुद्धिः**" ಎಂದು ಹೇಳಿ ಆಮೇಲೆ **योगे त्विमां शृणु**" ಎಂದು ಜ್ಞಾನಕ್ಕೆ ಸಾಧನಭೂತವಾದ ಕರ್ಮೋಪಾಸನಾರೂಪವಾದ ಯೋಗದ ವಿಷಯವನ್ನು ಹೇಳಿದ್ದಾನೆ. ಜ್ಞಾನಯೋಗವು ಪರಿಪಕ್ವಬುದ್ಧಿಯುಳ್ಳವರಿಗೆ ಮಾತ್ರ ಒಡನೆಯೇ ಹತ್ತುವದು. ಅಷ್ಟು ಯೋಗ್ಯತೆಯುಳ್ಳವರು ಲೋಕದಲ್ಲಿ ಬಹು-ಕಡಮೆ. ಶ್ರೀಕೃಷ್ಣನ ಪರಮಪ್ರಿಯನಾದ ಅರ್ಜುನನಿಗೆ ಕೂಡ ಜ್ಞಾನಯೋಗವು ಒಮ್ಮೆಗೇ ಹಿಡಿಯಲಿಲ್ಲವೆಂದ ಮೇಲೆ ಇನ್ನು ಇತರರ ಪಾಡೇನು? ಜ್ಞಾನಯೋ-ಗವು ಹತ್ತಬೇಕಾದರೆ ಚಿತ್ತಶುದ್ಧಿಯಾಗಿರಬೇಕು. ಆ ಚಿತ್ತಶುದ್ಧಿಯಾಗುವ-ದಕ್ಕೆ ಕರ್ಮಯೋಗವು ಅತ್ಯುಪಯುಕ್ತವಾದುದು. ಆದುದರಿಂದ ನಾವು ಜ್ಞಾನಯೋಗದ ವಿಷಯವಾಗಿ ತಿಳಿದುಕೊಳ್ಳಬೇಕಾದುದಕ್ಕಿಂತಲೂ ಹೆಚ್ಚಾಗಿ ಅದರ ಸಾಧನವಾದ ಕರ್ಮಯೋಗದ ವಿಚಾರವನ್ನು ತಿಳಿದುಕೊಳ್ಳುವದಗ-ತ್ಯವು. ಏಕೆಂದರೆ ಕರ್ಮಯೋಗದ ವಿಚಾರವನ್ನು ತಿಳಿದು ಅದನ್ನು ಆಚರ-ಣೆಗೆ ತಂದುಕೊಳ್ಳುವದರಿಂದ ಚಿತ್ತಶುದ್ಧಿಯಾಗುವದು. ಆಮೇಲೆ ಜ್ಞಾನ-ಪ್ರಾಪ್ತಿಗೆ ತಡವಾಗುವದೇ ಇಲ್ಲ. ಹೊಲದಲ್ಲಿ ರೆಂಟೆಯನ್ನು ಹೊಡೆದು ಕಳೆ-ಯ ಬೇರುಗಳನ್ನೆಲ್ಲ ಕಿತ್ತುಹಾಕಿದ ಹೊರತು ಅದು ಬೀಜದ ಬಿತ್ತಿಗೆಗೆ ಹೇಗೆ ಸಿದ್ಧವೆನಿಸಿಕೊಳ್ಳುವದಿಲ್ಲವೊ ಹಾಗೆ ಮನಸ್ಸಿನಲ್ಲಿ ರಾಗದ್ವೇಷಾದಿಕಲ್ಮಷಗಳು ಹೋಗಿ ನೈರ್ಮಲ್ಯವುಂಟಾದ ಹೊರತು ಅದು ಜ್ಞಾನೋಪದೇಶಕ್ಕೆ ಯೋಗ್ಯ-ವೆನಿಸಿಕೊಳ್ಳುವದಿಲ್ಲ. ಬೀಜವನ್ನು ಬಿತ್ತುವದಕ್ಕೆ ಮೊದಲು ಹೊಲವನ್ನು

ಸರ್ವಪ್ರಕಾರದಿಂದಲೂ ಹಸನುಮಾಡುವಂತೆ ಜ್ಞಾನವನ್ನು ಪಡೆಯಲು ಹೋಗುವದಕ್ಕೆ ಮುಂಚೆ ಚಿತ್ತಶುದ್ಧಿಯನ್ನು ಮಾಡಿಕೊಳ್ಳಬೇಕು. ಕರ್ಮಯೋಗವನ್ನು ಆಶ್ರಯಿಸಿದರೆ ಕೈಹಿಡಿದೆಳೆದರೆ ವೈ ತಾನೇ ಬರುವಂತೆ ಜ್ಞಾನವು ತಾನಾಗಿ ಬಂದೇ ಬರುವದು. ದುರೂಹ್ಯವಾಗಿರುವ ಜ್ಞಾನಯೋಗವೆಂಬ ಕೀಲಿಗೆ ಕರ್ಮಯೋಗವೇ ಕೈ.

ಕೆಲವರು ಕರ್ಮಯೋಗವನ್ನು ನಿಕೃಷ್ಟವೆಂದು ಭಾವಿಸುವರು. ಇದು ತಪ್ಪು. ಅಮಾನಿತ್ವಾದಿ ಜ್ಞಾನಸಾಧನಗಳೇ ಹೇಗೆ ಜ್ಞಾನವೆಂದು ಹೇಳಲ್ಪಟ್ಟಿರುವವೊ ಹಾಗೆಯೇ ಜ್ಞಾನಯೋಗಸಾಧನವಾದ ಕರ್ಮಯೋಗವು ಕೂಡ ಜ್ಞಾನಯೋಗಕ್ಕೆ ಸಮಾನವೆಂಬ ಅಭಿಪ್ರಾಯದಿಂದ ಶ್ರೀಕೃಷ್ಣನು ಗೀತೆಯಲ್ಲಿ

"सांख्ययोगौ पृथग्बालाः प्रवदंति न पंडिताः"

ಎಂಬ ಶ್ಲೋಕದಲ್ಲಿ "ಜ್ಞಾನಯೋಗ ಕರ್ಮಯೋಗಗಳು ಬೇರೆಬೇರೆಯೆಂದು ಹೇಳುವದು ತಿಳಿಯದವರ ಮಾತು. ಪಂಡಿತರು ಅವೆರಡನ್ನು ಸಮವಾಗಿ ತಿಳಿಯುವರು." ಎಂದು ಸ್ವಕಂಠದಿಂದ ಹೇಳಿದ್ದಾನೆ. ಕರ್ಮದಿಂದ ಅಹಂಕಾರವು ಬಲಿಯುವದೆಂದು ಕೆಲವರು ಕರ್ಮದ ಮೇಲೆ ತಪ್ಪು ಹೊರಿಸುವರು. "ನಾನು ಕರ್ತ" ಎಂಬ ಅಹಂಕಾರದಂತೆ ನಾನು ಜ್ಞಾನಿ, ನಾನು ಯೋಗಿ, ನಾನು ಭಕ್ತ ಎಂದು ಎಲ್ಲ ಯೋಗಗಳಲ್ಲಿಯೂ ಅಹಂಕಾರ ಬರುವ ಸಂಭವವುಂಟೇ ಉಂಟು. ಯಾವ ಯೋಗದಲ್ಲಿಯೂ ಅಹಂಕಾರವನ್ನು ಬರಗೊಡದೆ ಇರಬೇಕಾದ ಎಚ್ಚರಿಕೆಯು ತಪ್ಪಿದ್ದೇ ಅಲ್ಲ. ಕರ್ಮಯೋಗದಲ್ಲಿಯೂ ಅದು ಇದೆ. ಎಲ್ಲಿಯವರೆಗೆ ಮನುಷ್ಯನು ಸ್ವಾರ್ಥಬುದ್ಧಿಯಿಂದ ಪ್ರವರ್ತಿಸುತ್ತಿರುತ್ತಾನೊ ಅಲ್ಲಿಯವರೆಗೆ ಅವನಲ್ಲಿ ಅಹಂಕಾರವಿರುತ್ತದೆ. ಸ್ವಾರ್ಥಬುದ್ಧಿಯು ತಗ್ಗುತ್ತ ಬಂದ ಹಾಗೆಲ್ಲ ಅಹಂಕಾರವು ಹಿಮ್ಮುಖವಾಗುತ್ತದೆ. ಕರ್ಮಯೋಗದಲ್ಲಿ ಅಹಂಕಾರವನ್ನು ಹಿಮ್ಮೆಟ್ಟಿಸುವ ಗುಣವಿದೆ. ನಿಷ್ಕಾಮಕರ್ಮವನ್ನು ಮಾಡುವದರಿಂದ ಅಹಂಕಾರವು ದಿಕ್ಕುಗೆಟ್ಟು ಓಡುವದು. ಅಮಿತವಾದ ಆಹಾರದಿಂದ ಆದ ಅಜೀರ್ಣವನ್ನು ಕಳೆದುಕೊಳ್ಳುವದಕ್ಕೆ ಶುಂಠಿಬೆಲ್ಲರೂಪವಾದ ಆಹಾರವು ಹೇಗೆ ಸಮರ್ಥವಾದುದೊ ಹಾಗೆ ಸ್ವಾರ್ಥಕ್ರಿಯಾಜನ್ಯವಾದ

ಅಹಂಕಾರವನ್ನು ಹೋಗಲಾಡಿಸುವದಕ್ಕೆ ನಿಷ್ಕಾಮಕರ್ಮದೀಕ್ಷೆಯು ತಕ್ಕ ಉಪಾಯವು. ನಿಷ್ಕಾಮಕರ್ಮವೇ ಕರ್ಮಯೋಗ.

"स्वल्पमप्यस्य धर्मस्य त्रायते महतो भयात्"

ಎಂಬಂತೆ ಪರಮೇಶ್ವರಾರಾಧನರೂಪವಾದ ನಿಷ್ಕಾಮಕರ್ಮಾನುಷ್ಠಾನವೆಂಬ ಕರ್ಮಯೋಗದ ಅಲ್ಪಮಾತ್ರವಾದರೂ ಮಹತ್ತಾದ ಸಂಸಾರಭಯವನ್ನು ತಪ್ಪಿಸುತ್ತದೆ. ಮತ್ತು

"नेहाभिक्रमनाशोऽस्ति प्रत्यवायो न विद्यते"

ಎಂಬಂತೆ ಪ್ರಾರಂಭಮಾಡಿದ ನಿಷ್ಕಾಮಕರ್ಮಕ್ಕೆ ಪೂರ್ತಿಯಾದಾಗಲೇ ಫಲವೆಂಬುದಿಲ್ಲ. ಅದನ್ನು ಪ್ರಾರಂಭಮಾಡಿದಾಗಲೆ ಫಲವೂ ಪ್ರಾರಂಭವಾಗಿಯೇ ಇರುವದು. ಕಾಮ್ಯಕರ್ಮಗಳು ಸಾಂಗವಾಗದಿದ್ದರೆ ಪ್ರತ್ಯವಾಯವುಂಟು. ನಿಷ್ಕಾಮಕರ್ಮಕ್ಕೆ ಹಾಗಿಲ್ಲ. ಆದುದರಿಂದಲೆ ಪರಮಾತ್ಮನು ಅದನ್ನು

"पार्थ, नैवेह नाऽमुत्र विनाशस्तस्य विद्यते"

ಎಂದು ಹೊಗಳಿದ್ದಾನೆ, ಗೀತೆಯಲ್ಲಿ

"सह यज्ञाः प्रजाः सृष्ट्वा पुरोवाच प्रजापतिः ।
अनेन प्रसविष्यध्वमेष वोऽस्त्विष्टकामधुक् ॥"

ಎಂದು ಹೇಳಿರುವಂತೆ ಪರಮಾತ್ಮಪ್ರೀತ್ಯರ್ಥವಾದ ಕರ್ಮವನ್ನು ಮಾಡುವದಕ್ಕೆ ನಾವೆಲ್ಲರೂ ಬದ್ಧರು. ಕರ್ಮಾಧಿಕಾರಿಗಳಾದ ತ್ರೈವರ್ಣಿಕರನ್ನು ಸೃಷ್ಟಿಮಾಡಿದಾಗಲೆ ಬ್ರಹ್ಮನು ಅವರಿಗೆ ಮುಖ್ಯಸಾಧನವಾಗಿ ಕರ್ಮವನ್ನೇ ಉಪದೇಶಿಸಿದ್ದಾನೆ. ಕರ್ಮವು ನಡೆಯದಿದ್ದರೆ ಜಗಚ್ಚಕ್ರಪ್ರವೃತ್ತಿಯೇ ನಿಂತುಹೋದೀತು. ಯಜ್ಞಾದಿಕರ್ಮಗಳ ಮೂಲಕ ಮನುಷ್ಯರು ದೇವತೆಗಳಿಗೆ ಹವಿರ್ಭಾಗಗಳನ್ನು ಕೊಡಬೇಕು. ದೇವತೆಗಳು ವೃಷ್ಟಿಯನ್ನೂ ಧನಧಾನ್ಯಗಳನ್ನೂ ಅನುಗ್ರಹಿಸಬೇಕು. ಅವುಗಳನ್ನು ಉಪಭೋಗಮಾಡುವದರಿಂದ ಪ್ರಜಾವೃದ್ಧಿಯಾಗಬೇಕು.

"नायं लोकोऽस्त्ययज्ञस्य कुतोऽन्यः कुरुसत्तम"

ಎಂದಂತೆ ಪರಮಾತ್ಮಪ್ರೀತ್ಯರ್ಥವಾದ ಕರ್ಮವನ್ನು ಮಾಡದೆ ಇರುವವರಿಗೆ ಈಲೋಕವೇ ಇಲ್ಲ; ಇನ್ನು ಮುಂದಿನ ಮಾತೇನು? ವೇದದಲ್ಲಿ ಭಗವತ್ಪೂಜಾಪರವಾದ ಅನೇಕ ಕರ್ಮಗಳನ್ನು ವಿಧಿಸುವದರಲ್ಲಿ ಜನರಿಗೆ ಆಯಾಕರ್ಮಗಳಲ್ಲಿ ಹೆಚ್ಚು ಆದರವು ಹುಟ್ಟುವಂತೆ ಅಲ್ಲಲ್ಲಿ ಅರ್ಥವಾದದ ವಾಕ್ಯಗಳು ಸೇರಿಕೊಂಡು ಸ್ವರ್ಗಾದಿಭೋಗಗಳನ್ನು ಸರ್ವತೋಮುಖದಿಂದ ಹೊಗಳುತ್ತವೆ. ಯಾವನಾದರೂ ಆಫಲಾಭಿಸಂಧಿಗೆ ಮರುಳಾಗಿ ಆಕರ್ಮವನ್ನು ಕೈಗೊಂಡರೆ ಅದು

"अयुक्तः कामकारेण फले सक्तो निबध्यते"

ಎಂಬಂತೆ ಫಲಾನುಭವಾರ್ಥವಾಗಿ ಜನ್ಮಾಂತರಗಳನ್ನು ಕೊಡುವದರ ಮೂಲಕ ಅವನಿಗೆ ಬಂಧನವನ್ನುಂಟುಮಾಡುವದು. ಅದೇ ಕರ್ಮವನ್ನೇ ಈಶ್ವರಪ್ರೀತ್ಯರ್ಥವಾಗಿ ಮಾಡಿದರೆ

"युक्तः कर्मफलं त्यक्त्वा शांतिमाप्नोति नैष्ठिकीम्"

ಎಂಬಂತೆ ಅದು ಜನ್ಮಮರಣಭಯಗಳನ್ನು ಕಳೆದು ನಿತ್ಯಶಾಂತಿಯನ್ನು ತಂದುಕೊಡುವದು.

"भोगैश्वर्यप्रसक्तानां तयापहृतचेतसाम् ।
व्यवसायात्मिका बुद्धिः समाधौ न विधीयते ॥"

ಎಂಬಂತೆ ಐಹಿಕಾಮುಷ್ಮಿಕಭೋಗಗಳ ಬಯಕೆಯಿಂದ ಚಂಚಲವಾದ ಮನಸ್ಸು ಸಮಾಧಿಗೆ ಎಂದರೆ ಬುದ್ಧಿಯ ಸಮತ್ವಕ್ಕೆ ನೆರವಾಗುವದಿಲ್ಲ, ಸಮತ್ವಕ್ಕೆ ಸಾಧನವಾಗುವಂಥ ಕರ್ಮವು ಕರ್ಮಯೋಗವೆನಿಸಿಕೊಳ್ಳಲಾರದು. ಧಾರ್ಮಿಕಕರ್ಮವನ್ನಾಗಲಿ ಇತರ ಯಾವ ವ್ಯಾವಹಾರಕರ್ಮವನ್ನಾಗಲಿ ಸ್ವಾರ್ಥವಾಸನೆ ಇಲ್ಲದೆ ಕೇವಲ ಕರ್ತವ್ಯಕ್ಕಾಗಿ ಮಾಡುತ್ತೇನೆಂದು ಮಾಡುವದೇ

ಕರ್ಮಯೋಗ. ಕರ್ಮಯೋಗದ ವಿಚಾರವು ನಿನ್ನೆ ಮತ್ತು ಮೊನ್ನೆ ತಕ್ಕಷ್ಟು ನಡೆದಿರುವದು. ಕರ್ಮವು ಸತ್ತ್ವಾದಿಗುಣಭೇದಗಳಿಂದ ಮೂರು ವಿಧವಾಗಿರುವದು.

"नियतं संगरहितं अरागद्वेषतः कृतम् ।
अफलप्रेप्सुना कर्म यत्तत्सात्त्विकमुच्यते ॥"

ಎಂಬಂತೆ ಇಷ್ಟಸಿದ್ಧಿಯಾಗುವದೆಂಬ ಪ್ರೀತಿಯಿಂದಾಗಲಿ ಅನಿಷ್ಟನಿವೃತ್ತಿಯಾಗುವದೆಂಬ ದ್ವೇಷದಿಂದಾಗಲಿ ಪ್ರವರ್ತಿಸದೆ ಮತ್ತು ಉಪಭೋಗಾರ್ಥವಾಗಿ ನಾನಾಜನ್ಮಗಳನ್ನು ಕೊಡತಕ್ಕಂಥ ಫಲವನ್ನು ಅಪೇಕ್ಷಿಸದೆ ಸಂಸಾರಸಂಬಂಧವಿಲ್ಲದೆ ಕರ್ತವ್ಯದೃಷ್ಟಿಯಿಂದ ಮಾಡುವ ಕರ್ಮವು ಸಾತ್ತ್ವಿಕವು.

"यत्तु कामेप्सुना कर्म साहंकारेण वा पुनः ।
क्रीयते बहुलायासं तद्राजसमुदाहृतं ॥"

ಎಂಬಂತೆ ತಾನೇ ಕರ್ಮದಕ್ಷನೆಂಬ ಅಭಿಮಾನವನ್ನು ಹಿಡಿದು ಅನೇಕ ಅಟ್ಟಹಾಸಗಳಿಂದ ಆಯಾಸಪೂರ್ವಕವಾಗಿ ಕಾಮ್ಯಕರ್ಮವನ್ನು ಮಾಡುವದು ರಾಜಸವು.

"अनुबंधं क्षयं हिंसामनपेक्ष्यच पौरुषम् ।
मोहादारभ्यते कर्म यत्तत्तामसमुच्यते ॥"

ಎಂಬಂತೆ ಮುಂದಿನ ದುಃಖವನ್ನೂ ದ್ರವ್ಯನಾಶವನ್ನೂ ಪರಪೀಡೆಯನ್ನೂ ಸ್ವಸಾಮರ್ಥ್ಯವನ್ನೂ ನೋಡಿಕೊಳ್ಳದೆ ದುರ್ಯೋಧನನು ಯುದ್ಧಕಾರ್ಯವನ್ನು ಕೈಗೊಂಡಂತೆ ಕರ್ಮಕ್ಕೆ ಕೈಹಾಕುವದು ತಾಮಸ.

ಕರ್ಮವನ್ನು ಮಾಡಬೇಕೆಂದು ವ್ಯವಹಾರದಲ್ಲಿ ಪ್ರವರ್ತಿಸುವದು ಜ್ಞಾನನಿಷ್ಠೆಗೆ ಅಡ್ಡಬರುವದೆಂದು ಕೆಲವರು ತಿಳಿಯುವರು. ಜ್ಞಾನನಿಷ್ಠೆಗೆ ಅಡ್ಡಬರುವದು ಕೇವಲ ಕರ್ಮವಲ್ಲ; ಕರ್ಮಫಲಾಭಿಸಂಧಿ. ಒಬ್ಬನು ಕಾ-

ಫಿಯನ್ನು ಮಾಡುವವಕ್ಕೆಂದು ನೀರನ್ನು ಕಾಯುವವಕ್ಕಿಟ್ಟು ಕಾಫಿಯ ಬೀಜವನ್ನು ತರಹೇಳಿ ಅಂಗಡಿಗೆ ಒಬ್ಬ ಹುಡುಗನನ್ನು ಅಟ್ಟುತ್ತಾನೆ. ಹುಡುಗನು ಓಡಿಹೋಗಿ ಓಡಿಬಂದು ಕಾಫಿಯ ಬೀಜವಿಲ್ಲವೆಂದು ಹೇಳಿಬಿಡುತ್ತಾನೆ. ಈ ಸಂದರ್ಭದಲ್ಲಿ ಒಲೆಯ ಮುಂದೆ ಸುಮ್ಮನೆ ಕೂತಿದ್ದವನಿಗೆ ಕಾಫಿಯನ್ನು ಮಾಡಿಕೊಂಡು ಕುಡಿಯಬೇಕೆಂಬ ಬಯಕೆ ಇದ್ದುದರಿಂದ ತಳಮಳವುಂಟಾಗುತ್ತದೆ. ಓಡಿಹೋಗಿ ಓಡಿಬಂದ ಆಹುಡುಗನಿಗೆ ಯಾವ ಬಯಕೆಯೂ ಇಲ್ಲದುದರಿಂದ ತನ್ನ ಕೆಲಸವನ್ನು ತಾನು ಮಾಡಿದೆನೆಂದು ಸಮಾಧಾನವೇ ಇರುತ್ತದೆ. ಹೀಗೆ ಫಲಾಭಿಸಂಧಿ ಮಾತ್ರ ಬಂಧನವು. ಕರ್ಮಗಳನ್ನೇ ಬಿಟ್ಟು ಕುಳಿತು ಬಿಟ್ಟರೆ ಫಲಾಭಿಸಂಧಿಯ ಬಂಧ ತಪ್ಪುವದೆಂದು ನೋಡಿದರೆ

"न हि देहभृता शक्यं त्यक्तुं कर्माण्यशेषतः"

ಎಂದಿರುವಂತೆ ಸರ್ವಕರ್ಮಗಳನ್ನೂ ಬಿಟ್ಟು ಕುಳಿತುಕೊಳ್ಳುವದು ಯಾರಿಗೂ ಸಾಧ್ಯವಲ್ಲ. ಯಾವ ಕರ್ಮವನ್ನೂ ಮಾಡದೆ ಸೋಮಾರಿಯಾಗಿ ಮೂಲೆಗೆ ಮುಟ್ಟಾಗಿ ಕುಳಿತುಕೊಳ್ಳುವದು ತ್ಯಾಗವೆನಿಸಿಕೊಳ್ಳುವದಿಲ್ಲ.

"नियतस्य तु सन्यासः कर्मणो नोपपद्यते ।
मोहात्तस्य परित्यागस्तामसः परिकीर्तितः ॥"

ಎಂಬಂತೆ ಚಿತ್ತಶುದ್ಧಿಪ್ರದವಾದ ನಿತ್ಯಕರ್ಮಗಳು ಬಿಡತಕ್ಕವುಗಳಲ್ಲ. ಮೋಹದಿಂದ ಅವುಗಳನ್ನು ಬಿಡುವದು ತಾಮಸತ್ಯಾಗವೆನಿಸುವದು.

"दुःखमित्येव यत्कर्म कायक्लेशभयात्त्यजेत् ।
स कृत्वा राजसं त्यागं नैव त्यागफलं लभेत् ॥"

ಎಂಬಂತೆ ಕರ್ಮವನ್ನು ನಿರ್ವಹಿಸುವದರಲ್ಲಿ ಕಾಯಕ್ಲೇಶಾದಿಕಷ್ಟಗಳನ್ನು ಸಹಿಸಬೇಕಾಗುವದೆಂದು ಬಿಡುವದು ರಾಜಸತ್ಯಾಗವೆನಿಸುವದು. ತ್ಯಾಗದ ಫಲವು ಇದಕ್ಕೆ ಬರುವದಿಲ್ಲ ಇನ್ನು

"कार्यमित्येव यत्कर्म नियतं क्रियतेऽर्जुन ।
संगं त्यक्त्वा फलंचैव स त्यागः सात्विकः स्मृतः ॥"

ಎಂಬಂತೆ ಕರ್ತೃತ್ವಾಭಿಮಾನವನ್ನೂ ಫಲಾಭಿಸಂಧಿಯನ್ನೂ ಬಿಟ್ಟು ತನ್ನ ಕರ್ತವ್ಯವೆಂದು ತಿಳಿದು ಚಿತ್ತಶುದ್ಧಿಪರ್ಯಂತವೂ ನಿತ್ಯಕರ್ಮವನ್ನು ಮಾಡುವದೇ ಸಾತ್ತ್ವಿಕತ್ಯಾಗವು.

"यस्तु कर्मफलत्यागी स त्यागीत्यभिधीयते"

ಎಂಬಂತೆ ಕರ್ಮಫಲವನ್ನು ತ್ಯಾಗಮಾಡಿದವನೇ ನಿಜವಾದ ತ್ಯಾಗಿಯು. ಪರಮಾತ್ಮಪ್ರೀತ್ಯರ್ಥವಾಗಿ ಅಲ್ಲದೆ ಬೇರೆ ಯಾವ ಫಲಾಭಿಸಂಧಿಯಿಂದ ಮಾಡಿದರೂ ಆಕರ್ಮವು ಬಂಧನಕ್ಕೆ ಕಾರಣವಾಗುವದೆಂಬರ್ಥವನ್ನು ಪರಮಾತ್ಮನು ಸ್ಪಷ್ಟವಾಗಿ

"यज्ञार्थात्कर्मणोऽन्यत्र लोकोऽयं कर्मबंधनः"

ಎಂಬ ವಾಕ್ಯದಿಂದ ಹೇಳಿದ್ದಾನೆ. ಜ್ಞಾನಯೋಗದ ಸತ್ಪಾತ್ರತೆಗಾಗಿ ಚಿತ್ತಶುದ್ಧಿಯನ್ನು ಬಯಸುವವನು ಯಾವ ಫಲದ ಕಡೆಗೂ ಕಣ್ಣುಹಾಕದೆ ಬ್ರಹ್ಮಾರ್ಪಣಬುದ್ಧಿಯಿಂದ ಮಾಡಬೇಕು. ಬ್ರಹ್ಮಾರ್ಪಣವೆಂದರೆ ಒಂದು ಶ್ಲೋಕವನ್ನು ಹೇಳಿ ನೀರುಬಿಡುವದಲ್ಲ. ಬ್ರಹ್ಮಾರ್ಪಣವು ಶ್ಲೋಕವನ್ನು ಹೇಳಿ ನೀರುಬಿಡುವಷ್ಟು ಸುಲಭವಾಗಿಲ್ಲ. ಪ್ರತಿಯೊಂದು ಕರ್ಮವನ್ನೂ ಪರಮಾತ್ಮಸ್ಮರಣಸಹಿತವಾಗಿ ಮಾಡಿದರೆ ಮಾತ್ರ ಅದು ಬ್ರಹ್ಮಾರ್ಪಣವೆನಿಸಿಕೊಳ್ಳುವದು. ಕರ್ಮವನ್ನು ಆಚರಿಸುತ್ತ ಬಂದ ಹಾಗೆಲ್ಲ ಅದು ಮನಸ್ಸಿನ ಮೇಲೆ ತನ್ನದೊಂದು ಸಂಸ್ಕಾರವನ್ನು ಮಾಡಿಯೇ ಮಾಡಿರುವದು. "बुद्धिः कर्मानुसारिणी" ಎಂಬಂತೆ ಕರ್ಮಸಂಸ್ಕಾರದಿಂದ ಕೂಡಿದ ಬುದ್ಧಿಯು ಪೂರ್ವವಾಸನೆಯನ್ನು ಹಿಡಿದು ಮುಂದೆ ಸಾಗುವದು. ಆದುದರಿಂದ ಸರ್ವಪ್ರಯತ್ನದಿಂದಲೂ ಬುದ್ಧಿಯ ಮೇಲೆ ಉತ್ತಮಸಂಸ್ಕಾರವಾಗುವಂತೆ ವಿಧ್ಯುಕ್ತಕರ್ಮವನ್ನು ಮಾಡಬೇಕಲ್ಲದೆ ನೀಚಸಂಸ್ಕಾರವೇನಾದರೂ ಇದ್ದರೆ ಅದರ ವಾಸನೆಯುಳಿಯದಂತೆ ಅವನ್ನು ತೊಳೆದುಕೊಳ್ಳಬೇಕು. ಮನಸ್ಸಿನ ಸಂಸ್ಕಾ-

ರಗಳನ್ನು ತೊಳೆದುಕೊಳ್ಳುವ ಕೆಲಸವು ಹಾಲುಕಾಸುವ ಕೆಲಸಕ್ಕೆ ಹೋಲುತ್ತದೆ. ನಾವು ಕಾಸಬೇಕಾದ ಪದಾರ್ಥವು ಹಾಲಾದರೂ ಅದನ್ನೇ ಸಾಕ್ಷಾತ್ತಾಗಿ ಬೆಂಕಿಯ ಮೇಲೆ ಹಾಕುವದಿಲ್ಲ. ಒಂದು ಪಕ್ಷ ಹಾಕಿದರೆ ಬೆಂಕಿಯೂ ಆರಿಹೋಗಿ ಹಾಲೂ ವ್ಯರ್ಥವೇ ಆಗಿ ಅನರ್ಥವಾಗುವದು. ಹಾಲಿನಿಂದ ತುಂಬಿರುವ ಪಾತ್ರೆಯನ್ನು ಕಾಸಿಬಿಟ್ಟರೆ ಹಾಲಿನ ಜಲಾಂಶವೆಲ್ಲ ಬತ್ತಿಹೋಗಿ ಹಾಲು ಕಾದು ಕೆನೆಗಟ್ಟಿ ರುಚಿಗೂಡುತ್ತದೆ. ಹಾಗೆಯೇ ಕರ್ಮಸಂಸ್ಕಾರಗಳಿಂದ ತುಂಬಿರುವ ಮನಸ್ಸೆಂಬ ಪಾತ್ರೆಯನ್ನು ಪರಮಾತ್ಮನ ಸ್ಮರಣೆಯೆಂಬ ಬೆಂಕಿಯ ಮೇಲೆ ಕಾಸಬೇಕು. ಈ ಮಾನಸಿಕತಪಸ್ಸಿನಿಂದ ಕೆಟ್ಟ ಸಂಸ್ಕಾರಗಳ ದೋಷಗಳು ಅದೃಶ್ಯವಾಗಿ ಚಿತ್ತವು ಶುದ್ಧವಾಗುವದು. ಜನ್ಮಜನ್ಮಾಂತರಗಳಿಂದ ದೋಷಗೂಡಿ ಬಂದಿರುವ ಮನಸ್ಸು ಒಂದೇ ದಿನಕ್ಕೆ ಶುದ್ಧವಾಗಲಾರದು. ಕ್ರಮಕ್ರಮವಾಗಿ ಶುದ್ಧಿಯು ವ್ಯಕ್ತವಾಗುವದು. ಹೀಗಾಗುವ ಮನಸ್ಸಿನ ಸ್ಥಿತಿಯನ್ನು ಯಾರುಬೇಕಾದರೂ ತಮ್ಮ ತಮ್ಮ ಕನಸುಗಳಿಂದಲೇ ಗೊತ್ತುಮಾಡಿಕೊಳ್ಳಬಹುದು. ಮನಸ್ಸು ಎಷ್ಟೆಷ್ಟರ ಮಟ್ಟಿಗೆ ಶುದ್ಧವಾಗುತ್ತ ಹೋಗುತ್ತದೊ ಅಷ್ಟಷ್ಟರ ಮಟ್ಟಿಗೆ ಅವರಿಗೆ ಶುಭವಾಸನೆಯು ಸ್ವಪ್ನಗಳಾಗುತ್ತ ಬಂದು ಕೊನೆಗೆ ಸ್ವಪ್ನಗಳೇ ಬರದೆಹೋಗುವವು. ಹೆಚ್ಚು ಸತ್ಕರ್ಮದಿಂದ ಇಂಥ ಪರಿಣಾಮವಾಗುವದು. ಆದುದರಿಂದಲೇ ಪರಮಾತ್ಮನು

"तदर्थं कर्म कौंतेय मुक्तसंगस्समाचर "

ಎಂದರೆ ಭಗವತ್ಪ್ರೀತ್ಯರ್ಥವಾಗಿ ನಿರಭಿಮಾನದಿಂದ ಕರ್ಮವನ್ನು ಮಾಡು ಎಂದು ಹೇಳಿದ್ದಾನೆ. ಹೀಗೆ ಫಲತ್ಯಾಗಪೂರ್ವಕವಾಗಿ ಬ್ರಹ್ಮಾರ್ಪಣಬುದ್ಧಿಯಿಂದ ವಿಧ್ಯುಕ್ತಕರ್ಮವನ್ನು ಮಾಡಿದರೆ ಚಿತ್ತಶುದ್ಧಿಯಾಗದೆ ಇರಲಾರದು.

"ಕೆಲವು ಜನರು ಮುದುಕರಾಗುವ ವರೆಗೂ ವಿಧ್ಯುಕ್ತಕರ್ಮಗಳನ್ನು ಮಾಡಿಕೊಳ್ಳುತ್ತ ಬಂದಿದಾರಲ್ಲ; ಅವರಿಗೆಲ್ಲ ಎಲ್ಲಿ ಚಿತ್ತಶುದ್ಧಿಯಾಗಿದೆ? ಇನ್ನೂ ಅವರಲ್ಲಿ ಕಾಮಕ್ರೋಧ ಮೊದಲಾದವು ಕಂಡೇ ಕಾಣುವವಲ್ಲ?" ಎಂದರೆ ನಿಜ. ಕೆಲವು ಜನರು ಎಷ್ಟೋ ದಿನಗಳಿಂದ ಕರ್ಮಾನುಷ್ಠಾನದಲ್ಲಿದ್ದರೂ ಅವರಲ್ಲಿ ಚಿತ್ತಶುದ್ಧಿಯ ವಾಸನೆಯೇ ಕಂಡುಬರುವದಿಲ್ಲ. ಇದಕ್ಕೆ ಕಾರಣ-

ವೇನಿರಬಹುದೆಂದು ವಿಚಾರಮಾಡೋಣ. ಒಂದು ರೋಗಕ್ಕೆ ಒಂದು ಔಷ-ಧವನ್ನು ಎಷ್ಟು ದಿವಸ ಕೊಟ್ಟು ಚಿಕಿತ್ಸೆಮಾಡಿದರೂ ಆರೋಗವು ಗುಣವಾಗದೆ ಇದ್ದರೆ ಅದಕ್ಕೆ ಮೂರು ಕಾರಣಗಳಲ್ಲೊಂದಿರಬೇಕಾಗುತ್ತದೆ. ೧ನೇದು. ಆಔಷಧವು ಆರೋಗಕ್ಕೆ ನಾಟತಕ್ಕದ್ದೇ ಅಲ್ಲವಾಗಿರಬೇಕು. ೨ನೇದು. ಆಔಷಧವು ಆರೋಗದ್ದೇ ಆದರೂ ಆರೋಗಿಯ ಪ್ರಕೃತಿಗೆ ಅನುಗುಣವಾಗಿಲ್ಲದೆ ಇರಬೇಕು. ೩ನೇದು. ಆಔಷಧವು ಆರೋಗಿಯ ಪ್ರಕೃತಿಗೆ ಅನು-ರೂಪವಾದದ್ದಾಗಿದ್ದರೂ ಅಪಥ್ಯವು ನಡೆಯುತ್ತಿರಬೇಕು. ಹಾಗೆಯೇ ಕರ್ಮ-ದಿಂದ ಚಿತ್ತಶುದ್ಧಿಯಾಗದೆ ಇರಬೇಕಾದರೂ ಅದಕ್ಕೆ ಮೂರುಕಾರಣಗಳ-ಲ್ಲೊಂದಿರಬೇಕಾಗುತ್ತದೆ. ೧ನೇದು. ಕರ್ಮವು ಚಿತ್ತಶುದ್ಧಿಯ ಸಾಧನವೇ ಅಲ್ಲದೆ ಇರಬೇಕು. ೨ನೇದು. ಕರ್ಮವು ಚಿತ್ತಶುದ್ಧಿಯ ಸಾಧನವಾಗಿ-ದ್ದರೂ ನಮಗೆ ಅನುಗುಣವಾಗಿಲ್ಲದೆ ಇರಬೇಕು. ೩ನೇದು ಅದು ನಮಗೆ ಅನುಗುಣವಾಗಿದ್ದರೂ ನಮ್ಮ ಆಚರಣೆಯಲ್ಲಿ ದೋಷವಿರಬೇಕು. ಇವುಗಳ-ಲ್ಲೊಂದೊಂದನ್ನು ವಿಚಾರಮಾಡೋಣ. ಜನರ ಚಿತ್ತಶುದ್ಧಿಗೆ ಈ ಮೂರ-ರಲ್ಲಿ ಯಾವ ಕಾರಣವು ಅಡ್ಡಬರುವದೋ ತಿಳಿಯೋಣ. ವಿಚಾರಮಾಡಿದರೆ ೧ನೇ ಕಾರಣವು ನಿಲ್ಲುವದಿಲ್ಲ. ಏಕೆಂದರೆ ಕರ್ಮಯೋಗದಿಂದ ಚಿತ್ತಶುದ್ಧಿ-ಯನ್ನು ಹೊಂದಿದವರೂ ಎಷ್ಟೋ ಜನರು ಕಂಡುಬರಬಹುದು. ಒಂದುವೇಳೆ ನಾವು ಅಂಥ ಯಾರನ್ನೂ ನೋಡದಿದ್ದರೂ ನಮ್ಮ ಶಾಸ್ತ್ರದ ಮಾತಿಗೆ ಗೌರವ-ವನ್ನು ಕೊಟ್ಟಾದರೂ ಕರ್ಮವು ಚಿತ್ತಶುದ್ಧಿಗೆ ಕಾರಣವೆಂದು ನಂಬಬೇಕು. ಹಾಗಿಲ್ಲದಿದ್ದರೆ ಮಹಾಮಹಾವಿಚಾರಶಾಲಿಗಳಾದ ನಮ್ಮ ಪೂರ್ವಿಕರು ಕರ್ಮಯೋಗಕ್ಕೆ ಅಷ್ಟು ಮಹತ್ವವನ್ನೇಕೆ ಕೊಡುತ್ತಿದ್ದರು? ಕರ್ಮಯೋಗದ ಜೊತೆಯಲ್ಲಿ ಅವರು ಹೇಳಿದ ಉಳಿದ ಮಾತುಗಳೆಲ್ಲ ಯಥಾರ್ಥವಾಗಿರುವಾಗ ಕರ್ಮಯೋಗವೊಂದು ಮಾತ್ರ ಅಯಥಾರ್ಥವಾಗುವದು ಹೇಗೆ? ದೂರದೃ-ಷ್ಟಿಯುಳ್ಳ ನಮ್ಮ ಶಾಸ್ತ್ರಕಾರರ ಮುಂದೆ ನಮ್ಮ ನಾಲಿಗೆಯನ್ನು ಉದ್ದಮಾಡು-ವದಕ್ಕೆ ಎಂದೂ ಹೋಗಬಾರದು. ಇನ್ನು ೨ನೇ ಕಾರಣವೂ ನಿಲ್ಲುವದಿಲ್ಲ. ಹೇಗೆಂದರೆ ಉದಾಹರಣೆಗೆ ಸಂಧ್ಯಾವಂದನೆಯೆಂಬ ಕರ್ಮವನ್ನು ತೆಗೆದುಕೊ-ಳ್ಳಿರಿ. ಅದು ಮೆಟ್ರಿಕ್ಯುಲೇಶನ ಪರೀಕ್ಷೆಯಂತೆ ಇದೆ. ಮೆಟ್ರಿಕ್ಯುಲೇಶನ

ಪರೀಕ್ಷೆಯಲ್ಲಿ ಇತಿಹಾಸವಿಷಯ, ಗಣಿತವಿಷಯ, ಭಾಷಾವಿಷಯ, ಶಾಸ್ತ್ರ-ವಿಷಯ ಹೀಗೆ ಬೇರೆ ಬೇರೆ ಮನುಷ್ಯನ ವ್ಯವಹಾರಕ್ಕೆ ಸಾಧನವಾದ ಎಲ್ಲ ವಿಷಯುಗಳೂ ಬೀಜರೂಪಗಳಾಗಿ ಸೇರಿರುತ್ತವೆ. ಅದನ್ನೆಲ್ಲ ಓದುವ ವಿದ್ಯಾ-ರ್ಥಿಯು ಮುಂದೆ ತನಗೆ ಯಾವ ವಿಷಯುವು ಅನುಕೂಲವಾಗಿ ತೋರುವದೊ ಅದನ್ನು ಹೆಚ್ಚು ಬೆಳಿಸಿಕೊಳ್ಳಬಹುದು. ಹಾಗೆಯೇ ಸಂಧ್ಯಾವಂದನೆಯಲ್ಲಿ ಕೇವಲ ಕರ್ಮವೇ ಇಲ್ಲ. ಸ್ವಲ್ಪಸ್ವಲ್ಪವಾಗಿ ಕರ್ಮ, ಭಕ್ತಿ, ಜ್ಞಾನ ಮತ್ತು ಯೋಗ ಎಲ್ಲ ಇವೆ. ನೋಡಿರಿ. ನೀರಿನಿಂದ ಮಾರ್ಜನೆಮಾಡಿಕೊಳ್ಳುವದೂ ಅರ್ಘ್ಯವನ್ನು ಬಿಡುವದೂ ಮೊದಲಾದುದೆಲ್ಲ ಕರ್ಮ. ಕೇಶವನಾರಾಯ-ಣಾದಿ ನಾಮಸ್ಮರಣೆಮಾಡುವದು ಭಕ್ತಿ. "तज्जपस्तदर्थभावनम्" ಎಂದು ಯೋಗಸೂತ್ರದಲ್ಲಿ ಹೇಳಿದಂತೆ ಅರ್ಥಾನುಸಂಧಾನಪೂರ್ವಕವಾಗಿ ಗಾಯತ್ರೀ ಜಪವನ್ನು ಮಾಡುವದು ಜ್ಞಾನ. ಪ್ರಾಣಾಯಾಮವು ಯೋಗದ ಅಂಗ. ಹೀಗೆ ಸೇರಿರುವ ನಾಲ್ಕು ಸಾಧನಗಳಲ್ಲಿ ಅವರವರು ಅವರವರಿಗೆ ಅನುಕೂಲ-ವಾಗಿ ತೋರುವ ಸಾಧನವನ್ನು ಚೆನ್ನಾಗಿ ಬೆಳಸಿಕೊಳ್ಳುವದಕ್ಕೆ ಅವಕಾಶ ವುಂಟು. ಇಂಥದ್ದೊಂದೇ ಒಂದು ಮಾರ್ಗದಿಂದ ಚಿತ್ತಶುದ್ಧಿಯೆಂದು ಎಲ್ಲಿ-ಯೂ ಹೇಳಿಲ್ಲ. ತನ್ನ ಮನಸ್ಸ್ಥಿತಿಗೆ ಯಾವದು ಅನುಕೂಲಿಸುವದೊ ಅದನ್ನು ಬೆಳಸಿಕೊಳ್ಳಬಹುದು. ಹೀಗೆ ಎಲ್ಲಾ ಪ್ರಕಾರದ ಯೋಗಗಳೂ ಅಂತರ್ಭೂತ-ವಾಗಿರುವ ಕರ್ಮವು ಅವರವರಿಗೆ ಅನುಕೂಲಿಸುವ ಯೋಗವನ್ನು ಬೆಳಸಿ-ಕೊಳ್ಳುವದಕ್ಕೆ ಉತ್ತಮಸಾಧನವಾಗಿರುವದರಿಂದ ಇದು ಯಾರ ಮನಸ್ಸ್ಥಿ-ತಿಗೂ ಅನುಗುಣವಾಗಿಲ್ಲವೆಂದೂ ಹೇಳುವದಕ್ಕೆ ಬರುವ ಹಾಗೆ ಇಲ್ಲ. ಹೀಗೆ ಎರಡೂ ಕಾರಣಗಳು ನಿರಸನವಾದುದರಿಂದ ಮೂರನೆಯ ಕಾರಣವೇ ಉಳಿದು-ಕೊಂಡಿರಬೇಕಾಯಿತು. ಒಂದು ಔಷಧವು ಎಷ್ಟೋ ರೋಗಿಗಳನ್ನು ಗುಣ-ಮಾಡಿ ಎಲ್ಲರ ಪ್ರಕೃತಿಗೂ ಒಗ್ಗುವಂತೆ ಇದ್ದೂ ಕೆಲವು ರೋಗಿಗಳ ರೋಗವು ಪರಿಹಾರವಾಗಲಿಲ್ಲವೆಂದ ಮೇಲೆ ಅವರು ಅಪಥ್ಯವನ್ನು ಮಾಡುತ್ತಿರಬೇ-ಕೆಂಬುದು ಸಿದ್ಧವು. ಔಷಧವನ್ನು ಪ್ರತಿದಿನವೂ ಸೇವನೆಮಾಡುತ್ತಿದ್ದರೆ ತಾನೆ ಏನು? ಅಪಥ್ಯವನ್ನು ಮಾಡುತ್ತಿದ್ದರೆ ರೋಗಪರಿಹಾರವಾದೀತೆ? ಒಂದು ಪಕ್ಷ ಔಷಧವನ್ನು ತೆಗೆದುಕೊಳ್ಳದಿದ್ದರೂ ಚಿಂತೆ ಇಲ್ಲ. ಅಪಥ್ಯವನ್ನು ಮಾಡ-

ದಿದ್ದರೆ ಸಾಕು ರೋಗದ ಬೆಳವಳಿಗೆಯಾದರೂ ನಿಲ್ಲುವದು. ಈಅಭಿಪ್ರಾಯುವನ್ನು

"अव्याकरणमधीतं भिन्नद्रोण्या तरंगिणी तरणम्
भेषजमपथ्यसहितं त्रयमिदमकृतं वरं नकृतम् ॥"

ಎಂಬ ನೀತಿಶ್ಲೋಕವು ಉದಾಹರಣೆಗಳೊಂದಿಗೆ ಹೇಳಿರುವದು. ವ್ಯಾಕರಣವಿಲ್ಲದೆ ಓದುವದು, ಒಡಕು ದೋಣಿಯಿಂದ ನದಿಯನ್ನು ದಾಟುವದು, ಅಪಥ್ಯಮಾಡುತ್ತ ಔಷಧವನ್ನು ಸೇವಿಸುವದು, ಈ ಮೂರನ್ನೂ ಮಾಡುವದಕ್ಕಿಂತ ಮಾಡದೆ ಇರುವದುತ್ತಮ. ಪ್ರಕೃತ ಕರ್ಮವು ಚಿತ್ತಶುದ್ಧಿಯನ್ನು ಮಾಡದೆ ಇರುವದಕ್ಕೆ ನಮ್ಮ ಆಚರಣೆಯಲ್ಲಿ ದೋಷವಿರುವದೇ ಕಾರಣ. ಕೆಲವರು ವಿಧ್ಯುಕ್ತಕರ್ಮ ಒಂದನ್ನು ಮಾಡುವ ಸಡಗರದಲ್ಲಿ ಎಷ್ಟೋ ನಿಷಿದ್ಧಕರ್ಮಗಳನ್ನು ಮಾಡುತ್ತಿರುವರು. ಅಂಥವರಿಗೆ ಚಿತ್ತಶುದ್ಧಿ ಹೇಗಾದೀತು?

"अकुर्वन्नपि विद्युक्तं निषिद्धं परिवर्जयेत्"

ಎಂಬ ಸ್ಮೃತಿವಾಕ್ಯದಂತೆ ಒಂದು ಪಕ್ಷ ವಿಧ್ಯುಕ್ತಕರ್ಮವನ್ನು ಮಾಡದಿದ್ದರೂ ನಿಷಿದ್ಧಕರ್ಮವನ್ನು ಅಗತ್ಯವಾಗಿ ಬಿಡಬೇಕು. ಹಣಗಾರನಾಗಬೇಕೆಂದಪೇಕ್ಷಿಸುವವನು ಹೆಚ್ಚು ಹಣವನ್ನು ಸಂಪಾದನೆ ಮಾಡಬೇಕೆಂಬ ತೊಡಕಿಗೆ ಬೀಳುವದಕ್ಕೆ ಮೊದಲು ಅತಿವ್ಯಯವನ್ನು ತಡೆಯಬೇಕು. ೧ರೂ. ಸಂಪಾದನೆಮಾಡಿ ೨ ರೂ.ಗಳನ್ನು ವ್ಯಸನದಲ್ಲಿ ಕಳೆದರೆ ೧ರೂ. ಸಾಲವೇ ಆಗುತ್ತದೆ. ಸಂಪಾದನೆಯು ಕೆಲಸಕ್ಕೇ ಹೋಗದಿದ್ದರೂ ವ್ಯಸನವನ್ನು ಬಿಟ್ಟರೆ ೧ರೂ. ಉಳಿದಂತೆಯೇ ಆಗುತ್ತದೆ. ಆದುದರಿಂದ ವಿಧ್ಯುಕ್ತಕರ್ಮವನ್ನು ಮಾಡುವದರ ಕಡೆಗೆ ಲಕ್ಷ್ಯವನ್ನು ಕೊಡುವದಕ್ಕೆ ಮೊದಲು ನಿಷಿದ್ಧಕರ್ಮವನ್ನು ಬಿಡುವದರ ಕಡೆಗೆ ನೋಡಬೇಕು. ನಾನು ಹೆಚ್ಚು ತಾನು ಹೆಚ್ಚೆಂಬ ದುರಭಿಮಾನಗ್ರಸ್ತರಾಗಿ ಇತರರಿಗೆ ಉದ್ವೇಗವನ್ನುಂಟುಮಾಡುತ್ತ ಇತರರಿಂದ ತಾನು ಉದ್ವಿಗ್ನನಾಗುತ್ತ ಮಾಡುವ ವಿಧ್ಯುಕ್ತಕರ್ಮವಿನ್ನೇನು ಫಲವನ್ನು ಕೊಟ್ಟೀತು? ಎಲುಬನ್ನು ಮುಟ್ಟಿದ ದೋಷವನ್ನು ಕಳೆದುಕೊಳ್ಳಬೇಕೆನ್ನುತ್ತ

ಆಎಲುಬನ್ನು ಹಿಡಿದುಕೊಂಡೇ ಎಷ್ಟುಸಲ ಗಂಗೆಯಲ್ಲಿ ಮುಳುಗಿದರೆ ತಾನೆ ಆದೋಷವು ಹೋಗುತ್ತದೆ? ಎಲುಬನ್ನು ದೂರಬಿಸಾಟು ಒಂದು ಮುಳುಗು ಹಾಕಿದರೂ ಸಾಕು ಶುದ್ಧನಾಗುತ್ತಾನೆ. ಸ್ನಾನವು ಹಿಂದಿನ ದೋಷವನ್ನು ಕಳೆಯುವದೇ ಹೊರತು ಸ್ನಾನದ ಕೂಡ ಮಾಡುತ್ತಿರುವ ದೋಷವನ್ನು ಕಳೆಯುವದಿಲ್ಲ. ನಿಷಿದ್ಧಕರ್ಮದ ದೋಷವನ್ನು ಕಳೆದುಕೊಳ್ಳಬೇಕೆನ್ನುತ್ತ ನಿಷಿದ್ಧಕರ್ಮವನ್ನು ಮಾಡುತ್ತಲೆ ಎಷ್ಟು ವಿಧ್ಯುಕ್ತಕರ್ಮವನ್ನು ಮಾಡಿದರೇನು? ನಿಷಿದ್ಧಕರ್ಮವನ್ನು ನಿರ್ಮೂಲಮಾಡಿ ವಿಧ್ಯುಕ್ತಕರ್ಮವನ್ನು ಸಾಧಿಸಿದರೆ ಅವನಿಗೆ ಚಿತ್ತಶುದ್ಧಿಯು ದೂರವಲ್ಲ. ಹಾಗಾದರೆ ನಿಷಿದ್ಧಕರ್ಮವನ್ನು ಮಾಡುತ್ತ ನಡೆಸಿದ ವಿಧ್ಯುಕ್ತಕರ್ಮಕ್ಕೆ ಫಲವೇ ಇಲ್ಲವೆ? ಎಂದರೆ

"न हि कल्याणकृत्कश्चिद्दुर्गतिं तात गच्छति"

ಎಂಬಂತೆ ಸತ್ಕರ್ಮವೆಂದಿಗೂ ವಿಫಲವಲ್ಲ. ವ್ಯಸನಕ್ಕೆ ೨ರೂ. ವೆಚ್ಚವನ್ನು ಮಾಡುತ್ತ ೧ರೂ. ಸಂಪಾದನೆಗೆ ಹೋದರೂ ೨ರೂ. ಸಾಲವಾಗುವದಕ್ಕೆ ಬದಲಾಗಿ ೧ರೂ. ಉಳಿಯುವದಿಲ್ಲವೆ? ಹಾಗೆ ನಿಷಿದ್ಧಕರ್ಮದೊಡನೆ ಮಾಡುವ ವಿಧ್ಯುಕ್ತಕರ್ಮವು ತತ್ಕಾಲದಲ್ಲಿ ಚಿತ್ತಶುದ್ಧಿಯನ್ನು ಮಾಡದಿದ್ದರೂ ಎಷ್ಟೋ ಮಟ್ಟಿಗೆ ಪಾಪವನ್ನು ಪರಿಹಾರ ಮಾಡುವದು.

ಕರ್ಮದಿಂದಾಗುವ ಚಿತ್ತಶುದ್ಧಿ ಎಂದರೆ ಗುಣೋತ್ಕರ್ಷ ಉಂಟಾಗುವದು. ಗುಣಗಳು ಸತ್ತ್ವ, ರಜ, ತಮ ಎಂದು ಮೂರು. ಈ ಮೂರು ಗುಣಗಳ ವ್ಯಾಪಾರವೂ ಸಂಕ್ಷೇಪವಾಗಿ

"सत्त्वं सुखे संजयति रजः कर्मणि भारत ।
ज्ञानमावृत्यतु तमः प्रमादे संजयत्युत ॥"

ಎಂಬ ಗೀತಾಶ್ಲೋಕದಲ್ಲಿ ಉಕ್ತವಾಗಿದೆ ಸತ್ತ್ವಗುಣದ ವ್ಯಾಪಾರವು ಸುಖ. ರಜೋಗುಣದ ವ್ಯಾಪಾರವು ಕರ್ಮ. ತಮೋಗುಣದ ವ್ಯಾಪಾರವು ಪ್ರಮಾದ

ಮೊದಲಾದವು. ಸತ್ತ್ವ ಮತ್ತು ರಜ ಎಂಬೆರಡು ಗುಣಗಳನ್ನೂ ಹಿಂದಕ್ಕೊತ್ತಿ ತಮೋಗುಣವು ಮುಂದಾದಾಗ

"अप्रकाशोऽप्रवृत्तिश्च प्रमादो मोह एव च ।
तमस्येतानि जायंते विवृद्धे कुरुनंदन ॥"

ಎಂಬಂತೆ ಜ್ಞಾನಕಾರಣವಿದ್ದರೂ ಜ್ಞಾನವಾಗದಿರುವದು, ಕಾರ್ಯದಲ್ಲಿ ಪ್ರವರ್ತಿಸತಕ್ಕದಿದ್ದರೂ ಸ್ತಬ್ಧನಾಗಿರುವದು, ತಾನು ಮಾಡಬೇಕಾದುದೇನೆಂದು ತಿಳಿಯದೆ ಇರುವದು, ವಿಪರೀತ ಭಾವನೆಯನ್ನು ಮಾಡಿಕೊಳ್ಳುವದು ಈ ಪ್ರಕಾರ ಆಗುವದು. ಸತ್ತ್ವ ಮತ್ತು ತಮ ಎಂಬೆರಡು ಗುಣಗಳನ್ನೂ ಕೆಳಕ್ಕೆ ಹಾಕಿ ರಜೋಗುಣವು ಮೇಲಾದಾಗ

"लोभः प्रवृत्तिरारंभः कर्मणामशमः स्पृहा ।
रजस्येतानि जायंते विवृद्धे भरतर्षभ ॥"

ಎಂಬಂತೆ ತನ್ನ ಹಣದ ವಿಷಯದಲ್ಲಿ ಜೀನತನ, ಕಾರ್ಯಗಳಲ್ಲಿ ಮುಂದೆ ಬೀಳುವದು, ದೊಡ್ಡ ದೊಡ್ಡ ಕೆಲಸಗಳಿಗೆ ಕೈಹಾಕುವದು, ಇಂಥಿಂಥ ಕೆಲಸಗಳನ್ನು ಮಾಡಿ ಇಂಥಿಂಥ ಕೆಲಸಗಳನ್ನು ಸಾಧಿಸುವೆನೆಂಬ ಸಂಕಲ್ಪಗಳಿಗೆ ಕೊನೆ ಇಲ್ಲದಿರುವದು, ವಿಷಯಾಭಿಲಾಷೆ ಇವೆಲ್ಲ ತೋರುವವು. ಇನ್ನು ರಜ ಮತ್ತು ತಮ ಎಂಬೆರಡು ಗುಣಗಳನ್ನೂ ಮೂಲೆಗೆ ಕೂಡಿಸಿ ಸತ್ತ್ವಗುಣವು ವಿಜೃಂಭಿಸುವಾಗ

"सर्वद्वारेषु देहेऽस्मिन् प्रकाश उपजायते ।
ज्ञानं यदा तदा विद्याद्विवृद्धं सत्त्वमित्यूत ॥"

ಎಂಬಂತೆ ಸರ್ವೇಂದ್ರಿಯಗಳೂ ಜಾಗರೂಕವಾಗಿ ಜ್ಞಾನವನ್ನು ಗ್ರಹಣಮಾಡುತ್ತವೆ. ಈ ಗುಣಗಳು ಮನಸ್ಸ್ಥಿತಿಗೆ ಸಂಬಂಧಪಟ್ಟವುಗಳಾದುದರಿಂದ ಇವುಗಳ ಫಲಾಫಲಗಳು ಈ ಜನ್ಮಕ್ಕೆ ಮಾತ್ರವೇ ಅಲ್ಲದೆ ಮುಂದಿನ ಜನ್ಮಕ್ಕೆ ಕೂಡ ಬೆನ್ನುಹತ್ತತಕ್ಕವುಗಳಾಗಿರುವವು. ನೋಡಿರಿ.

"यदा सत्त्वे प्रवृद्धेतु प्रलयं याति देहभृत् ।
तदोत्तमविदां लोकानमलान्प्रतिपद्यते ॥
रजसि प्रलयं गत्वा कर्मसंगिषु जायते ।
तथा प्रलीनस्तमसि मूढयोनिषु जायते ॥"

ಎಂಬಂತೆ ಸತ್ವೋತ್ಕರ್ಷಸ್ಥಿತಿಯಲ್ಲಿ ದೇಹತ್ಯಾಗ ಮಾಡಿದರೆ ಉತ್ತಮ ಲೋಕಪ್ರಾಪ್ತಿಯೂ ರಜೋಗುಣದ ಅಭ್ಯುದಯ ಕಾಲದಲ್ಲಿ ಮೃತನಾದರೆ ಕರ್ಮಾಸಕ್ತರಾದ ಮನುಷ್ಯರಲ್ಲಿ ಜನ್ಮವೂ ತಮೋಗುಣದ ಹೆಚ್ಚಿಗೆಯಲ್ಲಿ ಸತ್ತರೆ ಪಶ್ವಾದಿಯೋನಿಯಲ್ಲಿ ಹುಟ್ಟುವಿಕೆಯೂ ಉಂಟಾಗುವವು ಇವುಗಳಲ್ಲಿ

"कर्मणस्सुकृतस्याहुः सात्त्विकं निर्मलं फलम्."

ಎಂಬಂತೆ ಶಿಷ್ಟರು ಸಾತ್ತ್ವಿಕವೇ ಸತ್ಕರ್ಮಕ್ಕೆ ತಕ್ಕ ನಿರ್ಮಲಫಲವೆಂದು ಹೇಳುವರು "सत्त्वात्संजयते ज्ञानं" ಎಂಬಂತೆ ಸಾತ್ತ್ವಿಕ ಸ್ಥಿತಿಯಲ್ಲಿಯೇ ಜ್ಞಾನವಾಗುವದು. ಆದುದರಿಂದ ಸತ್ವಾಪತ್ತಿಗಾಗಿ ಈ ಮೂರು ಗುಣಗಳಲ್ಲಿ ಕೀಳಾದುದನ್ನು ಮೇಲಾದುದರಿಂದ ಜಯಿಸುತ್ತ ಹೋಗಬೇಕು ಎಂದರೆ ತಮೋಗುಣವನ್ನು ರಜೋಗುಣದಿಂದಲೂ ರಜೋಗುಣವನ್ನು ಸತ್ವಗುಣದಿಂದಲೂ ಗೆಲ್ಲಬೇಕು. ಪರಮಾನಂದಪ್ರಾಪ್ತಿಯಾಗಬೇಕಾದರೆ ಗುಣಾತೀತನಾಗಬೇಕಾದುದರಿಂದ ಈ ಸತ್ವಗುಣವನ್ನು ಕೂಡ ಮೀರಬೇಕು. ಏಕೆಂದರೆ ಪ್ರಮಾದಾಲಸ್ಯನಿದ್ರಾದಿಗಳಿಂದ ತಮೋಗುಣವೂ ತೃಷ್ಣಾಸಂಗಾದಿ ಕಾರಣವಾದ ಕರ್ಮಸಂಗದಿಂದ ರಜೋಗುಣವೂ ಬಂಧನವನ್ನುಂಟುಮಾಡುವಂತೆ

"तत्र सत्त्वं निर्मलत्वात्प्रकाशकमनामयम् ।
सुखसंगेन बध्नाति ज्ञानसंगेन चानघ ॥"

ಎಂಬ ಶ್ಲೋಕದಲ್ಲಿ ಹೇಳಿರುವ ಹಾಗೆ ನಾನು ಸುಖಿ ಮತ್ತು ನಾನು ಜ್ಞಾನಿ

ಎಂಬ ಭಾವನೆಗಳನ್ನುಂಟು ಮಾಡುವದರ ಮೂಲಕ ಸತ್ತ್ವಗುಣವೂ ಬಂಧನಕ್ಕೆ ಕಾರಣವಾಗುವದು. ಆದುದರಿಂದ ಇದನ್ನೂ ದಾಟಬೇಕು. ಆದಕಾರಣ ಭಗವಂತನು ಗೀತೆಯಲ್ಲಿ **"निस्त्रैगुण्यो भवार्जुन"** ಎಂದು ಉಪದೇಶಿಸಿದ್ದಾನೆ. ಸತ್ತ್ವಕ್ಕಿಂತ ಮೇಲಿನ ಗುಣವೆಂಬುದೊಂದು ಬೇರೆ ಇಲ್ಲದಿದ್ದರೂ **"सत्त्वं सत्त्वेन चैव हि"** ಎಂದು ಶ್ರೀಮದ್ಭಾಗವತದಲ್ಲಿ ಹೇಳಿರುವಂತೆ ಅಥವಾ ವಜ್ರವನ್ನು ವಜ್ರದಿಂದಲೇ ಕೊಯ್ಯುವಂತೆ ಸತ್ತ್ವಗುಣವನ್ನು ಸತ್ತ್ವಗುಣದಿಂದಲೇ ದಾಟಬೇಕು. ಅದು ಹೇಗೆಂದರೆ ರಜೋಗುಣವನ್ನು ಗೆಲ್ಲುವಾಗ ಈಗ ನಾನು-ಸತ್ತ್ವಗುಣವನ್ನು ಉತ್ಕರ್ಷಗೊಳಿಸುತ್ತಿದ್ದೇನೆಂಬ ಅರಿವು ಇರುವದು. ನಿರಂತರಸತ್ತ್ವಸಂಪನ್ನನೇ ಆಗಿಬಿಟ್ಟರೆ ಅವನ ಪಾಲಿಗೆ ಸತ್ತ್ವಾದಿಭೇದಗಳೇ ಹೋಗಿಬಿಡುವದರಿಂದ ಸತ್ತ್ವಗುಣವನ್ನು ಗೆದ್ದಂತಾಗುವದು. ಕೆಲವು ದುಷ್ಕರ್ಮದೊಡನೆ ಸತ್ಕರ್ಮವನ್ನು ಮಾಡುತ್ತಿದ್ದರೆ ನಾನು ಸತ್ಕರ್ಮವನ್ನು ಮಾಡುತ್ತಿದ್ದೇನೆನ್ನಿಸುವದು. ಅವನು ಮಾಡುವ ಕರ್ಮವೆಲ್ಲ ಸತ್ಕರ್ಮವೇ ಆಗಿದ್ದರೆ ಈಗ ನಾನು ಸತ್ಕರ್ಮವನ್ನು ಮಾಡುತ್ತಿದ್ದೇನೆಂಬ ಭಾವನೆ ಅವನಿಗೆ ಹೇಗೆ ಇರುವದಿಲ್ಲವೊ ಹಾಗೆ ಒಬ್ಬನು ಯಾವಾಗಲೂ ಸತ್ತ್ವಗುಣಸಂಪನ್ನನಾಗಿಯೇ ಇದ್ದರೆ ಅವನಿಗೆ ಈಗ ನನ್ನಲ್ಲಿ ಸತ್ತ್ವಗುಣವು ತೋರುತ್ತಿರುವದೆಂಬ ಭಾವನೆಯೇ ಮೈದೋರುವದಿಲ್ಲ. ಪ್ರಕಾಶವು ಅಗ್ನಿಧರ್ಮವಾಗಿರುವಂತೆ ಸತ್ತ್ವಗುಣವು ಅವನ ಸ್ವಭಾವವಾಗುವದು. ಆದುದರಿಂದಲೇ ಶ್ರೀಕೃಷ್ಣನು **"नित्यसत्त्वस्थः"** ಎಂದು **"निस्त्रैगुण्यो भव"** ಎಂಬದರ ಮುಂದೆ ಹೇಳಿದ್ದಾನೆ. ನಿಷಿದ್ಧಕರ್ಮವನ್ನು ಸಂಪೂರ್ಣವಾಗಿ ಬಿಟ್ಟು ಫಲಾಭಿಸಂಧಿಯಿಲ್ಲದೆ ಕೇವಲ ಪರಮಾತ್ಮಪ್ರೀತ್ಯರ್ಥವಾಗಿ ನಿರಭಿಮಾನದಿಂದ ವಿಧ್ಯುಕ್ತಕರ್ಮವನ್ನು ಮಾಡುವದರಿಂದ ಸತ್ತ್ವಗುಣವು ಬೆಳೆಯುವದು. ವಿಹಿತಕರ್ಮಗಳಾವವು ನಿಷಿದ್ಧಕರ್ಮಗಳಾವವು ಎಂಬ ವಿಷಯಕ್ಕೆ **"तस्माच्छास्त्रं प्रमाणं ते"** ಎಂಬಂತೆ ಶಾಸ್ತ್ರವೇ ಪ್ರಮಾಣವು ಸ್ಥೂಲರೀತಿಯಿಂದ ಹೇಳಬೇಕಾದರೆ ಯಾವ ಕರ್ಮಗಳನ್ನು ಮಾಡುವದರಿಂದ ಮುಂದೆ ಪಶ್ಚಾತ್ತಾಪವುಂಟಾಗುತ್ತದೊ ಅವೆಲ್ಲ ನಿಷಿದ್ಧಕರ್ಮಗಳು. ಸರ್ವಸಾಮಾನ್ಯವಾಗಿ ನಿಷಿದ್ಧಗಳೆಂದು ತಿಳಿದು ಬರುವ ಕರ್ಮಗಳನ್ನೆಲ್ಲ ದೂರಮಾಡಿಕೊಳ್ಳುತ್ತ ಬಂದ ಹಾಗೆಲ್ಲ ಮನಸ್ಸು ಶುದ್ಧವಾಗಿ ಸ್ವಚ್ಛವಾದ ಕನ್ನಡಿಯಲ್ಲಿ ಮೂಡುವ ಪ್ರತಿಬಿಂಬದಂತೆ

ಆದರಲ್ಲಿ ನಮ್ಮ ನಮ್ಮ ತಪ್ಪುಗಳು ನಮಗೆ ಮನಸ್ಸಾಕ್ಷಿಕವಾಗಿ ತೋರುವದಕ್ಕೆ ಮೊದಲಾಗುವವು. ಮನಸ್ಸು ಹೆಚ್ಚು ಹೆಚ್ಚು ಸಾತ್ತ್ವಿಕವಾಗುತ್ತ ಬಂದ ಹಾಗೆಲ್ಲ ಇತರ ಗುಣಗಳ ಗಾಳಿ ಬಡಿದರೂ ತಡೆಯುವದಿಲ್ಲ. ಅವನ ಆಹಾರವಿಹಾರಗಳು ಕೂಡ ಸಾತ್ತ್ವಿಕವಾಗುವವು. ಈ ಸಂದರ್ಭಕ್ಕೆ ಹೊಂದುವ ಒಂದು ಸಂಗತಿ-ಯು ನೆನಪಿಗೆ ಬಂದಿರುವದು.

ಒಂದೂರಿನಲ್ಲಿ ಒಬ್ಬ ಶ್ಯಾನುಭೋಗನು ಒಬ್ಬ ಸನ್ನ್ಯಾಸಿಯನ್ನು ಭಿಕ್ಷಕ್ಕೆ ಕರೆದಿದ್ದನು. ಆ ಸನ್ನ್ಯಾಸಿಗೆ ಬೆಳ್ಳಿಯ ಬಟ್ಟಲಲ್ಲಿ ತುಪ್ಪವನ್ನು ಬಡಿಸಿದ್ದರು. ಆ ಯತಿಯಾದರೂ ಸ್ವಧರ್ಮನಿಷ್ಠನಾಗಿ ಬಹುಯೋಗ್ಯನಾಗಿದ್ದನು. ಆದ-ರೂ ಊಟವನ್ನು ಮುಗಿಸಿಕೊಂಡು ಹೊರಡುವಾಗ ಹೇಗೋ ಆ ಬೆಳ್ಳಿಯ ಬಟ್ಟ-ಲನ್ನು ಹಾರಿಸಿಕೊಂಡು ಹೋಗಿಬಿಟ್ಟನು. ಮನೆಯುವರಿಗಾರಿಗೂ ಈಗುಟ್ಟು ಗೊತ್ತಾಗಲಿಲ್ಲ. ಬೆಳ್ಳಿಯ ಬಟ್ಟಲೆಲ್ಲಿಯೋ ಹೊಯಿತೆಂದುಕೊಂಡು ಸುಮ್ಮ-ನಾದರು. ಮರುದಿನ ಮುಂಜಾನೆ ಆ ಸನ್ನ್ಯಾಸಿಗೆ ಪ್ರಾತರ್ವಿಧಿ ಆದಮೇಲೆ ತನ್ನ ತಪ್ಪು ತನಗೆ ತಿಳಿದು ಬಹಳ ಪಶ್ಚಾತ್ತಾಪವಾಗಿ ಕೊನೆಗೆ ಅವನು ಹಿಂದಿರುಗಿ ಆಶ್ಯಾನುಭೋಗನಿಗೆ ಕಾಣಿಸಿಕೊಂಡು ಆಬೆಳ್ಳಿಯ ಬಟ್ಟಲನ್ನು ಮುಂದಿ-ಟ್ಟು ತನ್ನ ಅಪರಾಧವನ್ನು ಕ್ಷಮಿಸಬೇಕೆಂದು ಕೇಳಿಕೊಂಡನು. ಎಲ್ಲರಿಗೂ ಆಶ್ಚರ್ಯದ ಮೇಲೆ ಆಶ್ಚರ್ಯವಾಯಿತು. ಸನ್ನ್ಯಾಸಿಯು ಕದ್ದದ್ದೇ ಆಶ್ಚರ್ಯ! ಕದ್ದವನು ತಿರಿಗಿ ತಂದುಕೊಟ್ಟದ್ದು ಮತ್ತೂ ಆಶ್ಚರ್ಯ!! ಇನ್ನೇನು, ಆದು-ದಾಯಿತೆಂದು ಎಲ್ಲರೂ ಸುಮ್ಮನಾದ ಮೇಲೆ ಸನ್ನ್ಯಾಸಿಯು ಯಜಮಾನನನ್ನು ಕರೆದು ನಿಮ್ಮ ಮನೆಯ ಆಹಾರವು ನನ್ನ ಮನಸ್ಸಿನಲ್ಲಿ ದುಷ್ಟಕಲ್ಪನೆಯನ್ನು ತರುವಂಥದ್ದಾದುದಕ್ಕೆ ಕಾರಣವೇನೆಂದು ಕೇಳಿದನು. ಆಗ ಯಜಮಾನನು ತನ್ನಲ್ಲಿ ತಾನು ವಿಚಾರಮಾಡಿ "ಸ್ವಾಮಿ, ನಿನ್ನೆ ನಮ್ಮ ಮನೆಯಲ್ಲಿ ಸಣ್ಣಕ್ಕಿ ಇರಲಿಲ್ಲ. ತಮ್ಮಂಥ ದೊಡ್ಡವರನ್ನು ಕರೆದಾಗ ತಕ್ಕ ಪಕ್ವಾನ್ನವಿಲ್ಲದಿದ್ದರೆ ಸರಿ ಎನಿಸಲಾರದೆಂದು ಏನಾದರೂ ಮಾಡಿ ಸಣ್ಣಕ್ಕಿಯನ್ನು ತರಹೇಳಿ ಕಳ್ಳ-ತನ ಮಾಡುವ ಸ್ವಭಾವವುಳ್ಳ ನನ್ನ ಆಳಿಗೆ ಹೇಳಿದೆನು. ಅವನು ಹೇಗೋ ಎಲ್ಲಿಂದಲೋ ತಂದನು. ಇಷ್ಟೇ ಹೊರತು ಇನ್ನೇನೂ ಕಾಣಲಿಲ್ಲ" ಎಂದು ನಡೆದ ಸಂಗತಿಯನ್ನು ಹೇಳಿದನು. ಆಗ ಸನ್ನ್ಯಾಸಿಗೆ ಕಳವಿನ ಆಹಾರವು

ತನ್ನ ಹೊಟ್ಟೆಗೆ ಹೋಗಿದ್ದುದರಿಂದ ತನಗೂ ಕಳವು ಮಾಡುವ ಬುದ್ಧಿ ಹುಟ್ಟಿ-ದ್ದೂ ಮತ್ತು ಆ ಅನ್ನವು ಹೊಟ್ಟೆಯಿಂದ ಹೋದಕೂಡಲೆ ಪಶ್ಚಾತ್ತಾಪ-ವಾದದ್ದೂ ತಿಳಿದು ತನ್ನಿಂದ ದೋಷವು ಹೇಗೆ ಸಂಭವಿಸಿತೆಂಬ ಶಂಕೆ ನಿರಸನ-ವಾಯಿತು. ಆ ಸನ್ಯ್ಯಾಸಿಯ ಮನಸ್ಸು ಶುದ್ಧವಾಗಿದ್ದುದರಿಂದ ಒಡನೆಯೆ ಅವನ ಮನಸ್ಸಿನ ಮೇಲೆ ಹೀಗೆ ಪರಿಣಾಮವಾಯಿತು. "ಅದೇ ಅನ್ನವನ್ನು ಇತರರೂ ಉಂಡಿದ್ದರಲ್ಲ! ಅವರಿಗೇಕೆ ಹೀಗಾಗಲಿಲ್ಲ?" ಎಂದರೆ ಸ್ವಚ್ಛವಾದ ಬಿಳೀ ಗೋಡೆಯ ಮೇಲೆ ಮಶಿಯನ್ನು ಚಿಮಿಕಿಸಿದರೆ ಕಪ್ಪು ಕಂಡೇ ಕಾಣು-ವದು. ಅದೇ ಮಶಿಯನ್ನು ಹೊಲಸಾಗಿರುವ ಗೋಡೆಯ ಮೇಲೆ ಒರೆಸಿದರೂ ಎದ್ದು ಕಾಣುವದಿಲ್ಲ. ನಿಷಿದ್ಧಕರ್ಮರತರಾದವರಿಗೆ ನಿಷಿದ್ಧಕರ್ಮಗಳೆಂಬುದು ತೋರುವದೇ ಇಲ್ಲ. ಆದುದರಿಂದ ಸರ್ವಪ್ರಯತ್ನದಿಂದಲೂ ನಿಷಿದ್ಧಕರ್ಮ-ವನ್ನು ಬಿಟ್ಟು ಬ್ರಹ್ಮಾರ್ಪಣ ಬುದ್ಧಿಯಿಂದ ವಿಧ್ಯುಕ್ತಕರ್ಮವನ್ನು ಮಾಡಿ ಚಿತ್ತಶುದ್ಧಿಯನ್ನು ಪಡೆಯಬೇಕು. ಚಿತ್ತವು ಶುದ್ಧವಾದ ಮೇಲೆ ಅದು ಸ್ಥಿರ-ವಾಗುವದಕ್ಕೋಸ್ಕರ ಪಾತಂಜಲಸೂತ್ರೋಕ್ತವಾದ ಅಷ್ಟಾಂಗಯೋಗವನ್ನು ಅಥವಾ ಶಾಂಡಿಲ್ಯನಾರದ ಸೂತ್ರೋಕ್ತವಾದ ಭಕ್ತಿಯೋಗವನ್ನು ಆಶ್ರಯಿಸ-ಲಿಕ್ಕೆ ಯೋಗ್ಯತೆಯುಂಟಾಗುವದು.

# ರಾಜಯೋಗ.

ಪಾತಂಜಲಯೋಗಶಾಸ್ತ್ರದಲ್ಲಿ ಯೋಗವೆಂದರೆ ಚಿತ್ತವೃತ್ತಿನಿರೋಧ. ಚಿತ್ತವೃತ್ತಿಯು ವಿಷಯಾಕಾರವಾಗುತ್ತ ವಿಷಯುವನ್ನು ಧ್ಯಾನಿಸುತ್ತಿರುವದೇ ಬಂಧಕ್ಕೆ ಕಾರಣವೆಂದೂ ನಿರ್ವಿಷಯಕವಾಗುವದೇ ಮೋಕ್ಷಕ್ಕೆ ಕಾರಣವೆಂದೂ ಶ್ರುತಿಯೂ

"मन एव मनुष्याणां कारणं बंधमोक्षयोः ।
बंधाय विषयासक्तं मुक्त्यै निर्विषयं स्मृतम् ॥"

ಎಂಬ ವಚನದಲ್ಲಿ ಹೇಳಿರುವದು. ವಸಿಷ್ಠರೂ

"अस्य संसारवृक्षस्य सर्वोपद्रवदायिनः ।
उपाय एक एवास्ति मनसः स्वस्य निग्रहः ॥"

ಎಂಬ ಶ್ಲೋಕದಲ್ಲಿ ಸರ್ವೋಪದ್ರವಗಳನ್ನುಂಟುಮಾಡುತ್ತಿರುವ ಈಸಂಸಾರವೆಂಬ ವಿಷವೃಕ್ಷವನ್ನು ನಿರ್ಮೂಲಮಾಡುವದಕ್ಕೆ ಚಿತ್ತವೃತ್ತಿಯನ್ನು ನಿರೋಧಮಾಡುವದೊಂದೇ ಒಂದು ಉಪಾಯವೆಂದು ಹೇಳಿದ್ದಾರೆ. ಶ್ರೀಕೃಷ್ಣಪರಮಾತ್ಮನೂ ಮನುಷ್ಯನು ತನ್ನನ್ನು ತನ್ನ ಮನಸ್ಸಿನಿಂದಲೇ ಉದ್ಧಾರಮಾಡಿಕೊಳ್ಳಬೇಕೆಂದು "उद्धरेदात्मनाऽत्मान" ಎಂಬ ಶ್ಲೋಕದಲ್ಲಿ ಹೇಳಿ ಆಕಾರಣದಿಂದಲೆ ಮನಸ್ಸೇ ಜೀವನಿಗೆ ಬಂಧುವೆಂದು "आत्मैव ह्यात्मनो बंधुः" ಎಂಬ ಮಾತಿನಿಂದ ವ್ಯಕ್ತಪಡಿಸಿ ಆಮೇಲೆ ಬಂಧುಶಬ್ದಕ್ಕೆ ಯೋಗ್ಯವಾದ ಮನಸ್ಸಿನ ಸ್ವರೂಪವನ್ನು ತಿಳಿಸುವದಕ್ಕೆ ಹೊರಟು बंधुरात्माऽत्मनस्तस्य-येनात्मैवात्मना जितः" ಎಂದು ಹೇಳಿರುವದರಲ್ಲಿ ಯಾವ ಜೀವನ ಮನಸ್ಸು ವಿಷಯಗಳಿಂದ ಹಿಂದಿರುಗಿ ಬಂದು ಕೈಕಟ್ಟಿಕೊಂಡು ನಿಲ್ಲುತ್ತದೊ ಆಮನಸ್ಸು ಆಜೀವನ ಬಂಧುವೆಂದು ಅಭಿಪ್ರಾಯಪಟ್ಟಿದ್ದಾನೆ. ಸಮಸ್ತದುಃಖಕ್ಷಯವೂ, ಜ್ಞಾನಪ್ರಾಪ್ತಿಯೂ ಅಕ್ಷಯವಾದ ಶಾಂತಿಯೂ ಕೂಡ ಚಿತ್ತವೃತ್ತಿನಿರೋಧಾಯತ್ತವೆಂದು ಶ್ರೀಗೌಡಪಾದರೂ ಹೇಳಿರುವರು. ಈಚಿತ್ತವೃತ್ತಿನಿರೋಧದ ಉಪಾಯವನ್ನು ಚೆನ್ನಾಗಿ ವಿಚಾರಮಾಡಿ ಶ್ರೀಪತಂಜಲಿಋಷಿಗಳು ಯೋಗಶಾಸ್ತ್ರವೆಂಬ ಒಂದು ಶಾಸ್ತ್ರವನ್ನೆ ವಿರಚಿಸಿರುತ್ತಾರೆ. ಈಯೋಗಕ್ಕೆ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿ ಎಂಬ ಎಂಟು ಅಂಗಗಳು. ಇವುಗಳಲ್ಲಿ ಮೊದಲನೆಯ ನಾಲ್ಕಾದ ಯಮನಿಯಮಾಸನಪ್ರಾಣಾಯಾಮಗಳು ಬಹಿರಂಗ ಸಾಧನಗಳು; ಕೊನೆಯ ನಾಲ್ಕಾದ ಪ್ರತ್ಯಾಹಾರಧಾರಣಾಧ್ಯಾನಸಮಾಧಿಗಳು ಅಂತರಂಗಸಾಧನಗಳು. ಈಅಂತರಂಗಸಾಧನಗಳಿಗೆ ಬಹಿರಂಗಸಾಧನಗಳು ಸಾಧನಗಳಾಗಿರುವವು.

ಮೊಟ್ಟಮೊದಲನೆಯ ಸಾಧನವು ಯಮ. ಇದು ಮುಖ್ಯವಾಗಿ ಉತ್ತಮವಾದ ನೀತಿಮರ್ಯಾದೆಯನ್ನು ಕಾಪಾಡುವದು. "ಅಟ್ಟಕ್ಕೆ ಹಾರ-

ದವನು ಬೆಟ್ಟಕ್ಕೆ ಹಾರುವನೆ?" ಎಂಬಂತೆ ವ್ಯವಹಾರದ ನೀತಿಮರ್ಯಾದೆಯನ್ನೇ ಪಾಲಿಸಲಾರದವನಿಗೆ ಪರಮಾರ್ಥದ ಸಾಧನವಾದ ಚಿತ್ತಸ್ಥೈರ್ಯವು ಲಭ್ಯವಾಗುವದು ಹೇಗೆ? ನೀತಿನೈಪುಣ್ಯವು ಮೊದಲನೆ ಮೆಟ್ಟಲು. ಅದನ್ನು ಹತ್ತಿದ ಮೇಲೆ ಮುಂದಿನ ಮಾತು. ಅಥವಾ ನೈತಿಕವ್ಯವಹಾರವು ಅಸ್ತಿವಾರದ ಹಾಗೆ; ಪರಮಾರ್ಥವು ಅದರ ಮೇಲಿನ ಭವ್ಯಭವನದ ಹಾಗೆ. ಆದುದರಿಂದ ಶ್ರೀಪತಂಜಲಿಋಷಿಗಳು ಯಮವೆಂಬುದನ್ನು ಮೊದಲನೆಯ ಸಾಧನವಾಗಿ ಹೇಳಿದ್ದಾರೆ. ಅವರ ಅರ್ಥವಿವರಣೆಯಂತೆ ಯಮವೆಂಬುದರಲ್ಲಿ ಅಹಿಂಸಾ, ಸತ್ಯ, ಅಸ್ತೇಯ, ಬ್ರಹ್ಮಚರ್ಯ, ಅಪರಿಗ್ರಹ ಎಂಬ ಐದು ನೀತಿಗಳು ಅಂತರ್ಭೂತವಾಗುತ್ತವೆ. ಈಐದರಲ್ಲಿರುವ ಸ್ವಾರಸ್ಯವಿಶೇಷವನ್ನು ವಿಚಾರಪೂರ್ವಕವಾಗಿ ನೋಡಿರಿ. ಎಲ್ಲವೂ ನಿಷಿದ್ಧಧರ್ಮದಿಂದ ಹಿಮ್ಮೆಟ್ಟುವದನ್ನೇ ಬೋಧಿಸುವವು. ಅಹಿಂಸೆ, ಅಸ್ತೇಯ, ಅಪರಿಗ್ರಹ ಈ ಮೂರೂ ಹಿಂಸೆಮಾಡದಿರುವದು, ಪರಸ್ವಾಪಹಾರಮಾಡದಿರುವದು, ಪರಿಗ್ರಹಮಾಡದಿರುವದು ಎಂದು ಸಾಕ್ಷಾತ್ತಾಗಿ ನಿಷೇಧಬೋಧಕಗಳೇ ಆಗಿರುವವು. ಉಳಿದ ಸತ್ಯ ಮತ್ತು ಬ್ರಹ್ಮಚರ್ಯ ಎಂಬೆರಡೂ ಸುಳ್ಳುಮೊದಲಾದುದನ್ನು ಹೇಳಬಾರದು; ವೀರ್ಯವನ್ನು ವ್ಯರ್ಥಮಾಡಿಕೊಳ್ಳಬಾರದು; ಎಂಬ ಪ್ರಕಾರಾಂತರದಿಂದ ನಿಷೇಧಾರ್ಥಕಗಳೇ ಆಗಿರುವವು. ದುರ್ವಾಸನೆ ಇರುವ ಕಡೆ ಊದಬತ್ತಿಯನ್ನು ಹಚ್ಚಿದರೂ ಪ್ರಯೋಜನವಿಲ್ಲದಿರುವಂತೆ ನಿಷಿದ್ಧಧರ್ಮಗಳನ್ನು ತ್ಯಾಗಮಾಡದೆ ನಿಯಮಗಳನ್ನು ಹಿಡಿದರೂ ವ್ಯರ್ಥವೆಂದು ಯೋಚಿಸಿ ಯೋಗಶಾಸ್ತ್ರಕಾರರು ಯಮವನ್ನು ಮೊದಲನೆ ಅಂಗವಾಗಿ ಹೇಳಿರುವರು.

"पतति नियमवान्यमेष्वसक्तो
न तु यमवान्नियमालसोऽवसीदेत् ।
इति यमनियमौ समीक्ष्य बुध्द्या
यमबहुलेष्वनुसंदधीत बुद्धिम् ॥"

ಎಂಬ ಸ್ಮೃತಿವಚನದಂತೆ ನಿಯಮಗಳನ್ನು ನಡೆಸುತ್ತಿದ್ದು ಯಮವನ್ನುಪೇಕ್ಷೆ-ಮಾಡುವವನಿಗೆ ಅಧೋಗತಿಯಾಗುತ್ತದೆ; ಯಮವಂತನಾಗಿದ್ದು ನಿಯಮ-ಗಳನ್ನುಪೇಕ್ಷೆಮಾಡುವವನಿಗೆ ಹಾಗಲ್ಲ. ಆದುದರಿಂದ ಈಯಮನಿಯಮ-ಗಳ ಸ್ಥಿತಿಗತಿಗಳನ್ನು ಬುದ್ಧಿಯಲ್ಲಿ ಸಮಾಲೋಚನೆಮಾಡಿ ಯಮದ ಕಡೆಗೆ ಹೆಚ್ಚು ಲಕ್ಷ್ಯವನ್ನಿಡಬೇಕು.

**ಅಹಿಂಸೆ:**— ಪರಪೀಡೆಯನ್ನು ಮಾಡದೆ ಇರುವದು ಅಹಿಂಸೆ. ಪರರ ಜೀವವನ್ನು ಕೊಲ್ಲುವದು ಅಥವಾ ಪರರ ದೇಹವನ್ನು ನೋಯಿಸುವದು ಅಥವಾ ಕೊನೆಗೆ ಪರರ ಮನಸ್ಸನ್ನು ಉದ್ವೇಗಗೊಳಿಸುವದು ಕೂಡ ಹಿಂಸೆ-ಯೆಂಬ ಮಾತಿನಲ್ಲಿ ಅಂತರ್ಭೂತವಾಗುವದು. **"यस्मान्नोद्विजते लोको"** ಎಂಬ ವಾಕ್ಯದಲ್ಲಿ ಗೀತೆಯು ಜನರನ್ನು ಉದ್ವೇಗಗೊಳಿಸಕೂಡದೆಂದು ಉಪ-ದೇಶಿಸಿರುವದು. ಮಾತು ಕೂಡ ಮತ್ತೊಬ್ಬರಿಗೆ ಮರ್ಮಭೇದಕವಾಗಬಾರ-ದೆಂದು ಗೀತೆಯು **"अनुद्वेगकरं वाक्यं"** ಎಂಬ ಮಾತಿನಲ್ಲಿ ಮತ್ತೊಬ್ಬರ ಮನಸ್ಸು ನೋಯುವಂತೆ ಆಡಬಾರದೆಂದು ಕೂಡ ಹೇಳಿರುವದು. ಹಿಂಸೆ-ಯನ್ನು ಮಾಡದೆ ಇರಬೇಕೆಂಬುವನು ಅಗತ್ಯವಾಗಿ ಎಲ್ಲ ಪ್ರಾಣಿಗಳ ಮೇಲೆ-ಯೂ ದಯೆಯನ್ನು ತೋರಿಸುವ ಅಭ್ಯಾಸವನ್ನೇ ಮಾಡಬೇಕಾಗುವದು. ತನ್ನ ಆಹಾರಕ್ಕೆಂದು ಪ್ರಾಣಿಹಿಂಸೆಯನ್ನು ಮಾಡದೆ ಇರುವದಿಷ್ಟೇ ಅಲ್ಲ; ಯೋಗಸಾಧನವಾಗಿ ಅಹಿಂಸಾವ್ರತವನ್ನು ಕೈಗೊಂಡವನು ವಿನೋದಕ್ಕಾದರೂ ಹಿಂಸಾಕೃತ್ಯವನ್ನು ಮಾಡಬಾರದು. ಆಹಾರಕ್ಕೆ ಭಗವಂತನು ನಾನಾವಿಧ-ವಾದ ಪೌಷ್ಟಿಕಧಾನ್ಯವಿಶೇಷಗಳನ್ನು ಸೃಷ್ಟಿಮಾಡಿರುವಾಗ ನಮ್ಮಂತೆ ಜೀವನ-ಯಾತ್ರೆಯನ್ನು ಸಾಗಿಸುವದಕ್ಕೆ ಹುಟ್ಟಿರುವ ಇತರ ಪ್ರಾಣಿಗಳನ್ನು ನಾವು ಹಿಂಸಿಸುವದು ಯಾವ ನ್ಯಾಯ? ವಿನೋದಕ್ಕಾದರೂ ಇತರರು ನಮ್ಮನ್ನು ಹಿಂಸೆಮಾಡಿದರೆ ನಮಗೆ ಅದು ಹಿತವಾಗಿರುವದೆ? ಇರುವದಿಲ್ಲವೆಂದಮೇಲೆ ನಾವು ಇತರರನ್ನು ವಿನೋದಕ್ಕೆಂದು ಹಿಂಸೆಮಾಡುವದು ಹೇಗೆ ಯೋಗ್ಯವಾ-ದೀತು? ಹೀಗೆ ನಾವು ಅಭಿಪ್ರಾಯಪಡುವದು ಒಂದು ಕಡೆ ಇರಲಿ. ಪ್ರಸಿದ್ಧ-ಪಾಶ್ಚಾತ್ಯಗ್ರಂಥಕಾರರಾದ ಆಲಿವ್ಹರ ಗೋಲ್ಡಸ್ಮಿತ್ಥ ಸಾಹೇಬರು ಹೇಳಿರು-ವದನ್ನು ನೋಡಿರಿ. "Man was born to live with inno-

cence and simplcity but he has deviated from nature; he was born to govern the brute creation but he has become their tyrant" ಎಂದರೆ "ಮನುಷ್ಯನು ಹುಟ್ಟಿದ್ದು ನಿರಪರಾಧಿಯಾಗಿಯೂ ನಿಷ್ಕಪಟಿಯಾಗಿಯೂ ಬಾಳುವದಕ್ಕೆ; ಆದರೆ ಅವನು ಅಸ್ವಾಭಾವಿಕ ಮಾರ್ಗವನ್ನು ಬಿಟ್ಟು ಅಡ್ಡದಾರಿಯನ್ನು ಹಿಡಿದಿದ್ದಾನೆ. ಅವನು ಹುಟ್ಟಿದ್ದು ಪಶುವರ್ಗವನ್ನು ಆಳಲಿಕ್ಕೆ; ಆದರೆ ಅವನು ಅವುಗಳ ಹಿಂಸಕನಾಗಿದ್ದಾನೆ." ಇದನ್ನು ಮನಸ್ಸಿಗೆ ತಂದು ಸರ್ವಪ್ರಕಾರದಿಂದಲೂ "**आत्मवत्सर्वभूतानि**" ಎಂಬಂತೆ ಸರ್ವಪ್ರಾಣಿಗಳನ್ನೂ ತನ್ನಂತೆ ತಿಳಿದು, ತನ್ನ ಮೇಲೆ ತನಗೆ ಇರುವಂಥ ಪ್ರೇಮವನ್ನು ಇತರಜೀವಿಗಳ ಮೇಲೆ ಇಡಬೇಕು. ಹೀಗೆ ಮಾಡಿದರೆ ಇತರ ಪ್ರಾಣಿಗಳ ಸಹಾನುಭೂತಿಯು ತನಗೆ ದೊರೆಯುವದರಿಂದ ದ್ವೇಷಾಸೂಯಾದಿಗಳಿಂದ ಮನೋವಿಕಾರಾದಿಗಳಾಗುವ ಸಂಭವವು ಕಡಮೆಯಾಗುವದು. ಅಹಿಂಸಾಗುಣವು ಒಬ್ಬನಲ್ಲಿ ರೂಢಮೂಲವಾಯಿತೆಂಬುದಕ್ಕೆ "**अहिंसाप्रतिष्ठायां तत्सन्निधौ वैरत्यागः**" ಎಂಬ ಯೋಗಸೂತ್ರದಂತೆ ಅಂಥವರ ಸಾನ್ನಿಧ್ಯದಲ್ಲಿ ಇತರ ಪ್ರಾಣಿಗಳು ಕೂಡ ಪರಸ್ಪರ ವೈರಭಾವವನ್ನು ಬಿಟ್ಟಿರುವವು. ಋಷ್ಯಾಶ್ರಮಗಳಲ್ಲಿ ಸಾರಂಗದ ಮರಿಯು ಹುಲಿಯ ಮೊಲೆಯನ್ನುಣ್ಣುತ್ತಿತ್ತೆಂದೂ, ಬಿಸಿಲಲ್ಲಿ ಬಳಲಿದ ಹಾವಿನ ಮರಿಯು ನವಿಲಗರಿಯ ನೆಳಲಲ್ಲಿ ನಲಿಯುತ್ತಿತ್ತೆಂದೂ, ಆನೆಯ ಕಾಲಿಗೆ ನೆಟ್ಟ ಮುಳ್ಳನ್ನು ಸಿಂಹದ ಮರಿಯು ಕೀಳುತ್ತಿತ್ತೆಂದೂ, ಬೆಕ್ಕುಗಳೂ ಇಲಿಗಳೂ ಒಂದುಗೂಡಿ ಚೆಲ್ಲಾಟವಾಡುತ್ತಿದ್ದವೆಂದೂ ನಮ್ಮ ಗ್ರಂಥಗಳಲ್ಲಿರುವ ಇಂಥ ಅಭಿಪ್ರಾಯಗಳಿಗೆಲ್ಲ ಆಋಷಿಗಳ ಅಹಿಂಸಾಸಿದ್ಧಿಯೇ ಆಧಾರವೆಂದು ತಿಳಿಯಬೇಕು. ಹೀಗೆ ಅದರ ಪ್ರಭಾವವು ಹಾಗೆ ಇತರರ ಮನಸ್ಸಿನ ಮೇಲೇ ಪರಿಣಾಮವಾಗುವಷ್ಟು ಬಲವತ್ತರವಾಗಿರುವಾಗ ಇನ್ನು ಅದನ್ನು ಅಭ್ಯಾಸಮಾಡಿರುವವರ ಮನಸ್ಸಿನ ಮೇಲೆ ಅದು ಎಷ್ಟು ಉತ್ತಮಸಂಸ್ಕಾರಕಾರಿಯಾಗಿರಬಹುದೆಂಬುದನ್ನು ನೀವೇ ಯೋಚಿಸಿರಿ. ಈ ಅಹಿಂಸೆಗೆ ಗೌತಮಬುದ್ಧನು ಕೂಡ ಪ್ರಮುಖತೆಯನ್ನು ಕೊಟ್ಟಿರುತ್ತಾನೆ.

**ಸತ್ಯ:**— ಎಂದರೆ ಯಥಾರ್ಥಭಾಷಣ. ಇತರರ ದಾಕ್ಷಿಣ್ಯಕ್ಕೆ ಕಟ್ಟು-

ಬಿದ್ದು ಅಥವಾ ಸ್ವಪ್ರಯೋಜನಕ್ಕೆ ಮರುಳಾಗಿ ಸುಳ್ಳಾಡುವದಂತೂ ಹೆಚ್ಚಿನ ಅನೀತಿ. ಅದು ಹಾಗಿರಲಿ. ತನ್ನ ಯೋಗ್ಯತೆಗೆ ಮೀರಿ ವಾಗ್ದಾನವನ್ನು ಮಾಡಿ ಅದನ್ನು ಪೂರ್ಣಮಾಡಲಾರದೆ ಹೋಗುವದೂ ಇತರರಿಗೆ ತತ್ಕಾಲಕ್ಕೆ ಹಿತವಾದರೆ ಸಾಕೆಂದು ಸಮಯಕ್ಕೆ ಅನುಗುಣವಾಗಿ ಆಡುವದೂ ಕೂಡ ಸುಳ್ಳಿನೊಳಗೆ ಸೇರುವವು. ಇವುಗಳು ಕೊನೆಗೆ ಚಿತ್ತಚಾಂಚಲ್ಯಕ್ಕೆ ಕಾರಣಗಳಾಗುವವು. ಹೀಗೆ ಆಡುವದಕ್ಕಿಂತ ಸುಮ್ಮನಿರುವದು ಮೇಲೆಂದೂ ಸುಮ್ಮನಿರುವದಕ್ಕಿಂತ ನಿಜವನ್ನು ಹೇಳುವದುತ್ತಮವೆಂದೂ ಆನಿಜವು ಧರ್ಮಯುಕ್ತವಾಗಿದ್ದರೆ ಮತ್ತೂ ಶ್ರೇಷ್ಠವೆಂದೂ ಅದರ ಜೊತೆಗೆ ಅದು ಕಿವಿಗೆ ಇಂಪಾಗಿಯೂ ಇದ್ದರೆ ಸರ್ವೋತ್ಕೃಷ್ಟವೆಂದೂ ಶ್ರೀಮಹಾಭಾರತದ ಮೋಕ್ಷಪರ್ವದಲ್ಲಿ ಹೇಳಿರುವದು. ಇಂಥ ಸತ್ಯವು ಸ್ಥಾಯಿಯಾದರೆ "**सत्यप्रतिष्ठायां क्रियाफलाश्रयित्वम्**" ಎಂಬ ಯೋಗಸೂತ್ರದಂತೆ ಅಂಥವರ ಆಶೀರ್ವಾದ ವಚನಮಾತ್ರದಿಂದ ಇತರರಿಗೆ ಯಜ್ಞಯಾಗಾದಿಗಳ ಫಲಗಳು ದೊರೆಯುವವು.

**ಅಸ್ತೇಯ:**—ಎಂದರೆ ಪರರ ಸ್ವತ್ತನ್ನು ಅಪಹರಿಸದೆ ಇರುವದು. ಉದ್ದೇಶಪೂರ್ವಕವಾಗಿ ಇತರರ ಪದಾರ್ಥವನ್ನು ಅವರು ಕಾಣದಂತೆ ಕದಿಯುವದು ದೊಡ್ಡತಪ್ಪೆಂದು ಎಲ್ಲರಿಗೂ ಗೊತ್ತೇ ಇರುವದು. ತನ್ನದಲ್ಲದೆ ಕಾರಣಾಂತರದಿಂದ ತನ್ನ ಕೈವಶವಾದ ವಸ್ತುವನ್ನು ತನ್ನದೆಂದು ಭೋಗಿಸುವದೂ ಕೂಡ ಕಳ್ಳತನವೆ. ತಾನು ಭೋಗಿಸತಕ್ಕ ವಸ್ತು ತನ್ನ ಕಷ್ಟಾರ್ಜಿತವಾಗಿರಬೇಕು. ಇತರರ ಪದಾರ್ಥಕ್ಕೆ ಕೈಹಾಕುವ ಮಾತೊಂದುಕಡೆ ಇರಲಿ. ಅದನ್ನು ತಾನು ಉಪಭೋಗಮಾಡಬೇಕೆಂದು ಮನಸ್ಸಿನಲ್ಲೊಂದು ಕಲ್ಪನೆಯನ್ನು ತಂದುಕೊಳ್ಳುವದು ಕೂಡ ಸ್ತೇಯದೊಳಗೆ ಬರುವದು. "**समलोष्टाश्मकांचन:**" ಎಂಬ ಗೀತಾವಚನದಂತೆ ಅಥವಾ "**परद्रव्येषु लोष्टवत्**" ಎಂಬ ನೀತಿವಚನಂತೆ ಇತರರ ವಸ್ತುವನ್ನು ಮಣ್ಣುಹೆಂಟೆಯಂತೆ ತುಚ್ಛವಾಗಿ ಕಾಣದವನಲ್ಲಿ ಅಸ್ತೇಯವು ಪೂರ್ಣವೆನಿಸುವದಿಲ್ಲ. "ಕಳ್ಳನ ಮನಸ್ಸು ಹುಳ್ಳಗೆ" ಎಂಬ ಗಾದೆಯಂತೆ ಕಳ್ಳತನವು ಮನಸ್ಸಿನ ತಳಮಳಕ್ಕೆ ಕಾರಣವಾಗುವದು. ಆದುದರಿಂದ ಯೋಗವನ್ನು ಸಾಧಿಸುವವರು ಅಸ್ತೇಯವನ್ನು ಅಭ್ಯಾಸಮಾಡಬೇಕು. ಅಸ್ತೇಯುವನ್ನು ಸಾಧಿಸಿದವರಿಗೆ ಇಚ್ಛಾಮಾತ್ರ-

ದಿಂದಲೆ ಸರ್ವದಿವ್ಯರತ್ನಪ್ರಾಪ್ತಿಯಾದರೂ ಆಗುವದೆಂದು **"अस्तेयप्रतिष्ठायां सर्वरत्नोपस्थानम्"** ಎಂಬ ಯೋಗಸೂತ್ರವು ಸಾರುವದು.

**ಬ್ರಹ್ಮಚರ್ಯ:**—ಎಂದರೆ ವೀರ್ಯವನ್ನು ವ್ಯರ್ಥಮಾಡಿಕೊಳ್ಳದೆ ಇರುವದು. ಮನುಷ್ಯನ ವೀರ್ಯಕ್ಕೂ ಮನಸ್ಸಿಗೂ ಕೇವಲ ಸಮೀಪ-ಸಂಬಂಧವಿರುವದು. ವೀರ್ಯಸ್ಖಲನೆಯನ್ನನುಸರಿಸಿ ಮನಸ್ಸು ಚಂಚಲ-ವಾಗುವದು. ವೀರ್ಯಸ್ಖಲನೆಯಾಗುತ್ತಲೆ ಅಶಕ್ತತೆಯುಂಟಾಗುವದಂತು ಸರ್ವಾನುಭವಸಾಕ್ಷಿಕವಾದ ಮಾತು. ವೀರ್ಯಸ್ಖಲನೆ ಹೆಚ್ಚಿದ ಹಾಗೆಲ್ಲ ಮುಪ್ಪು ಸಮೀಪಿಸುವದಲ್ಲದೆ ಮರಣವು ಹೊಂಚುಹಾಕುತ್ತಲೆ ಇರುವದು. ವೀರ್ಯನಿರೋಧದಿಂದ ಮಾರುತಿಯು ಶ್ರೀರಾಮಚಂದ್ರನ ಕಾರ್ಯವನ್ನು ಸಾಧಿಸಿ ಸರ್ವಶ್ರೇಷ್ಠನಾಗಿ ಚಿರಂಜೀವಿಪದವಿಯನ್ನು ಪಡೆದನು. ಹಾಗೆಯೇ ಭಕ್ತಶಿರೋಮಣಿಯಾದ ಭೀಷ್ಮಪಿತಾಮಹನು ಬ್ರಹ್ಮಚರ್ಯದಿಂದ ಜ್ಞಾನ-ವಿಜ್ಞಾನಸಂಪನ್ನನಾಗಿ ಸ್ವೇಚ್ಛಾಮರಣಿಯಾದನು. ಬ್ರಹ್ಮಚರ್ಯವನ್ನು ಸಾ-ಧಿಸದೆ ಎಷ್ಟು ಪ್ರಯತ್ನಮಾಡಿದರೂ ಯೋಗಸಿದ್ಧಿಯಾಗುವದಿಲ್ಲ. ಈಗಿನ ಕಾಲದಲ್ಲಿ ಅಂಥ ನೈಷ್ಠಿಕಬ್ರಹ್ಮಚರ್ಯವನ್ನು ಸಾಧಿಸುವದು ಆಗದಿದ್ದರೂ ಶಾಸ್ತ್ರವಿಧಿಯನ್ನನುಸರಿಸಿ ಗೃಹಸ್ಥಾಶ್ರಮಿಯಾಗಿ **"मातृवत्परदारेषु"** ಎಂಬಂತೆ ಇತರಸ್ತ್ರೀಯರನ್ನು ತನ್ನ ತಾಯಂತೆ ಕಾಣುತ್ತ ಏಕಪತ್ನೀವ್ರತಸ್ಥನಾಗಿ **"ऋतुस्नाताभिगामी स्यात्स्वदारनिरतस्सदा"** ಎಂಬ ಸ್ಮೃತಿವಚನದಂತೆ ನಿಷ್ಠಾ-ವಂತನಾಗಿ ಇರುವದಾದರೂ ಒಂದು ಪ್ರಕಾರದ ಬ್ರಹ್ಮಚರ್ಯೆಯು. ಬ್ರಹ್ಮ-ಚರ್ಯೆಯನ್ನು ಸಾಧಿಸುವದಕ್ಕಾಗಿಯೆ ಯೋಗಶಾಸ್ತ್ರದಲ್ಲಿ ವಜ್ರೋಳಿಯೆಂಬ ಮುದ್ರೆಯು ಉಕ್ತವಾಗಿರುವದು. ಬ್ರಹ್ಮಚರ್ಯವ್ರತವನ್ನು ಸಾಧಿಸಬೇಕೆಂಬುವವರು ಎಂದಿಗೂ ಸ್ತ್ರೀಯರೊಡನೆ ಏಕಾಂತದಲ್ಲಂತು ಸೇರಲೇ ಕೂಡದು. ಸಾಮಾನ್ಯವಾಗಿ ಅವರ ಜೊತೆಯಲ್ಲಿ ವ್ಯವಹಾರಮಾಡುವದೂ ಅವರ ಮಾತು-ಕಥೆಗಳನ್ನು ಕೇಳುವದೂ ಅವರನ್ನು ನೋಡುವದೂ ಕೊನೆಗೆ ಅವರ ವಿಚಾರ-ವನ್ನು ಮನಸ್ಸಿಗೆ ತರುವದೂ ಕೂಡ ನಿಷಿದ್ಧವು. ಸ್ತ್ರೀಕಾಮುಕರೊಡನೆ ವ್ಯವಹಾರಮಾಡುವದು ಸಾಕ್ಷಾತ್ಸ್ತ್ರೀಯರೊಡನೆ ವ್ಯವಹರಿಸುವದಕ್ಕಿಂತ ಕೆಟ್ಟ-ದ್ದು. ಅವರು ಸ್ತ್ರೀಯರ ಗುಣಾನುವಾದಗಳ ಮೂಲಕ ಮನಸ್ಸನ್ನು

ಹೊಲಸುಮಾಡುವರು. ಅಂಥವರ ಸಹಾವಾಸವನ್ನು ಅಗತ್ಯವಾಗಿ ಬಿಟ್ಟೀ-ತೀರಬೇಕು. ಕಾಮೋದ್ದೀಪಕವಾದ ಸುಗಂಧದ್ರವ್ಯಾದಿಗಳನ್ನು ಸಾಧಕನು ಹತ್ತಿರಕ್ಕೆ ಬರಗೊಡಬಾರದು; ಶೃಂಗಾರರಸಪ್ರಧಾನವಾದ ಗ್ರಂಥಗಳನ್ನು ಮುಟ್ಟಬಾರದು; ಶೃಂಗಾರಾಭಿನಯಗಳನ್ನು ಕಣ್ಣೆತ್ತಿಯೂ ನೋಡಬಾರದು. ಒಂದು ಪಕ್ಷ ಸ್ತ್ರೀಯ ಭಾವನೆಯು ಮನಸ್ಸಿಗೆ ಬಂದರೆ **"त्वङ्मांसरक्तबाष्पांबु पृथक्कृत्वा विलोचने । समालोकय रम्यं चेत्किं मुधा परिमुह्यसि"** ಎಂಬ ಯೋಗವಾಸಿಷ್ಠ ವಚನದಂತೆ ಅದೊಂದು ಮಾಂಸಪುತ್ಥಳಿಯೆಂದೂ ಅದರಲ್ಲಿ ಅಸಹ್ಯವಾದ ಮಾಂಸಮೇದೋಮಜ್ಜಾಸ್ಥಿಗಳಲ್ಲದೆ ಹೃದಯಂಗಮವಾದುದೇ-ನೇನೂ ಇಲ್ಲವೆಂದೂ ವಿಚಾರಮಾಡಬೇಕು. ಬ್ರಹ್ಮಚರ್ಯಪ್ರತಿಷ್ಠೆಯಿಂದ ವಿಲಕ್ಷಣಸಾಮರ್ಥ್ಯಪ್ರಾಪ್ತಿಯಾಗಿ ಅಣಿಮಾದಿಸಿದ್ಧಿಗಳು ದೊರೆತು ಅವನ ಉಪದೇಶವು ತತ್ಕ್ಷಣಫಲಪ್ರಾಪ್ತಿಕರವಾಗುವದೆಂದು **"ब्रह्मचर्यप्रतिष्ठायां वीर्यलाभः"** ಎಂಬ ಯೋಗಸೂತ್ರವು ಸೂಚಿಸುವದು.

**ಅಪರಿಗ್ರಹ:**— ಎಂದರೆ ಶರೀರರಕ್ಷಣಾರ್ಥವಾಗಿ ಅಲ್ಲದೆ ಹೆಚ್ಚಿನ ಭೋ-ಗಾರ್ಥವಾಗಿ ಭೋಗಸಾಧನಗಳನ್ನು ಸ್ವೀಕಾರಮಾಡುವದು. ಮನುಷ್ಯನು ಹೇಗೆಹೇಗೆ ಭೋಗದ್ರವ್ಯಗಳನ್ನು ಕೂಡಿಹಾಕಿಕೊಳ್ಳುತ್ತ ಹೋಗುವನೊ ಹಾಗೆ ಹಾಗೆ ಅವುಗಳ ವಿಯೋಗಾದಿಗಳಿಂದ ಅವನಿಗೆ ಸಂತಾಪವೇ ಉಂಟಾಗುವದು. ಪರಿಗ್ರಹವನ್ನು ಮಾಡುವದರಿಂದ ಇತರರ ದಾಕ್ಷಿಣ್ಯಕ್ಕೆ ಬದ್ಧನಾಗಿ ಅವರ ಇಷ್ಟಾನುಸಾರ ನಡೆಯಬೇಕಾದ ಸಂಭವಗಳೊದಗಬಹುದು. ಆದುದರಿಂದ ಭಿಕ್ಷಾನ್ನಾದಿ ಕೇವಲ ಶರೀರರಕ್ಷಣಾರ್ಥವಾಗಿ ಹೊರತು ಹೆಚ್ಚಿನದನ್ನು ಮುಟ್ಟ-ಲು ಕೂಡ ಕೂಡದು. ಶ್ರೀಮದ್ಭಾಗವತವು

"परिग्रहो हि दुःखाय यद्यत्प्रियतमं नृणाम् ।
अनंतं सुखमाप्नोति तद्विद्वान् यस्त्वकिंचनः ॥"

ಎಂಬ ಶ್ಲೋಕದಲ್ಲಿ ಈಅರ್ಥವನ್ನೇ ಬೋಧಿಸಿ ಅಪರಿಗ್ರಹನಿಷ್ಠನು ಅನಂತ-ವಾದ ಸುಖವನ್ನು ಪಡೆಯುವನೆಂದು ಹೊಗಳಿರುವದು. ಭಗವದ್ಗೀತೆಯು ಕೂಡ **"निराशीरपरिग्रहः"** ಎಂಬ ವಾಕ್ಯದಲ್ಲಿ ಅಪರಿಗ್ರಹವನ್ನು ವಿಧಿಸಿರು-

ವದು. ಈಅಪರಿಗ್ರಹಪ್ರಭಾವದಿಂದ "अपरिग्रहस्थैर्ये जन्मकथंतासंबोधः" ಎಂಬ ಯೋಗಸೂತ್ರದಂತೆ ಭೂತಭವಿಷ್ಯದ್ವರ್ತಮಾನಗಳ ಸರ್ವಜ್ಞಾನವೂ ಆಗುವದು.

ಯಮದ ವಿಷಯವಾಗಿ ಹೇಳುವಾಗ ಹಠಯೋಗಪ್ರದೀಪಿಕಾಕಾರರೇ ಮೊದಲಾದವರು ಮೇಲೆ ಕಂಡ ನೀತಿಗಳಲ್ಲದೆ ಕ್ಷಮೆ, ಧೃತಿ, ದಯೆ, ಆರ್ಜವ, ಮಿತಾಹಾರ ಎಂಬ ಐದನ್ನು ಹೆಚ್ಚಿಗೆ ಸೇರಿಸುವರು. ಆದುದರಿಂದ ಇವುಗಳೂ ವಿಚಾರಾರ್ಹಗಳಾಗಿವೆ.

**ಕ್ಷಮೆ:**—ಎಂದರೆ ಪ್ರತಿಯಾಗಿ ಛಲವನ್ನು ತೀರಿಸಿಕೊಳ್ಳುವ ಸಾಮರ್ಥ್ಯವಿದ್ದರೂ ಇತರರು ತಮಗೆ ಮಾಡಿದ ಅಪಕಾರವನ್ನು ಮನಸ್ಸಿಗೆ ಹಚ್ಚಿಕೊಳ್ಳದೆ ಇರುವದು. ಲೋಕದಲ್ಲಿ ತನಗೆ ಯಾವನಾದರೊಬ್ಬನು ಪ್ರತಿಕೂಲನಾಗಿ ನಡೆದಾಗ ಉದ್ವೇಗವನ್ನು ಹೊಂದಿ, ಅವನು ಶರಣು ಬಂದರೆ ಅವನನ್ನು ಕ್ಷಮಿಸಿದೆನೆಂದು ಹೇಳುವವರು ಎಷ್ಟೋ ಜನರಿರಬಹುದು. ಪರಮಾರ್ಥಸಾಧಕನ ಕ್ಷಮೆಯು ಅದಕ್ಕಿಂತ ಎಷ್ಟೋ ಉಚ್ಚತರದ್ದು. ಇವನ ಕ್ಷಮಾಗುಣವು ವ್ಯಕ್ತವಾಗುವದು ಮಾತಿನಲ್ಲಲ್ಲ. ಎಂಥ ಅಪಕಾರಪ್ರಾಪ್ತಿಯಾದರೂ "लोकान्नोद्विजते च यः" ಎಂಬ ಗೀತಾವಚನದಂತೆ ಮನಸ್ಸಿನಲ್ಲಿ ಕ್ರೋಧವಿಕಾರವುಂಟಾಗದಿರುವದೇ ಇಲ್ಲಿ ಹೇಳುವ ಕ್ಷಮೆ.

**ಧೃತಿ:**—ಮನುಷ್ಯನ ಧೈರ್ಯವನ್ನು ಪರೀಕ್ಷೆಮಾಡುವದಕ್ಕೆ ಸಂಕಟಕಾಲವೇ ಒರೆಗಲ್ಲು. ಸಾಮಾನ್ಯಕಾಲದಲ್ಲಿ ಧೈರ್ಯವನ್ನು ಕಾಪಾಡಿಕೊಳ್ಳುವದು ದೊಡ್ಡದಲ್ಲ. ಹರಿಶ್ಚಂದ್ರನನ್ನು ನೋಡಿರಿ. ಎಷ್ಟು ಬಗೆಯ ಕಷ್ಟಗಳೊದಗಿದರೂ ಧೈರ್ಯದಿಂದ ತನ್ನ ಸತ್ಯವನ್ನು ಬಿಡಲಿಲ್ಲ. ಧರ್ಮದ ಮೇರೆಯನ್ನು ದಾಟಲಾರದೆ ಪಾಂಡವರೂ ನಳಚಕ್ರವರ್ತಿಯೂ ಎಷ್ಟು ಕಷ್ಟವನ್ನು ಸಹಿಸಿದರು! ಅವರಿಗೆ ಆಕಷ್ಟಗಳು ಒದಗದಿದ್ದರೆ ಅವರ ಧೈರ್ಯಶಾಲಿತ್ವವು ಈಗಿನ ಹಾಗೆ ವ್ಯಕ್ತವಾಗುತ್ತಲೆ ಇರಲಿಲ್ಲ. ಇಂಥ ವಿಶೇಷಸಂದರ್ಭಗಳ ಮಾತು ಒಂದುಕಡೆ ಇರಲಿ. ಸಾಮಾನ್ಯವಾಗಿ ವಿವಿಧವಿಷಯಗಳು ಮನುಷ್ಯರ ಭೋಗವಾಸನೆಯನ್ನು ಉತ್ತೇಜನಗೊಳಿಸುತ್ತ ಅವರನ್ನು ತಮ್ಮ ಮುಂದೆ ಹಲ್ಲು ಕಿರಿಯುವಂತೆ ಪ್ರೇರಿಸುವವು. ಅವುಗಳನ್ನು ಹಿಮ್ಮೆಟ್ಟಿಸಿ

ಸ್ವಸ್ಥಿತಿಯನ್ನು ಕಾಪಾಡಿಕೊಳ್ಳಬೇಕಾದ ಸಂದರ್ಭಗಳು ಕ್ಷಣಕ್ಷಣಕ್ಕೂ ಒದಗುತ್ತಿರುವವು. ಸಾಧಕರು ಅಂಥ ಸಂದರ್ಭಗಳಲ್ಲಿ ತಮ್ಮ ಮನೋದಾರ್ಢ್ಯವನ್ನು ಕಳೆದುಕೊಳ್ಳದೆ ಇರಬೇಕು. "यतात्मा दृढनिश्चयः" ಎಂಬ ಮತ್ತು "स्थिरमतिर्भक्तिमान्मे प्रियो नरः" ಎಂಬ ಮಾತುಗಳಲ್ಲಿಯೂ ಗೀತೆಯು ಈ ಅರ್ಥವನ್ನುಪದೇಶಿಸಿರುವದಲ್ಲದೆ ಧೃತಿಯನ್ನು ಸಾತ್ತ್ವಿಕಾದಿ ಭೇದದಿಂದ ಮೂರುಪ್ರಕಾರವಾಗಿ ಹೇಳಿರುವದು.

"यया स्वप्नं भयं शोकं विषादं मदमेवच ।
न विमुंचति दुर्मेधा धृतिस्सापार्थ तामसी ॥"

ಎಂಬಂತೆ ಸ್ವಪ್ನವನ್ನೂ, ಭಯವನ್ನೂ, ಶೋಕವನ್ನೂ, ವಿಷಾದವನ್ನೂ, ಮದವನ್ನೂ ಸಂಪೂರ್ಣವಾಗಿ ಗೆಲ್ಲಲಾರದೆ ಮತ್ತೆ ಮತ್ತೆ ಅವುಗಳನ್ನು ಪಡೆಯುವವನ ಧೈರ್ಯವು ತಾಮಸಿ.

"यया तु धर्मकामार्थान् धृत्याधारयतेऽर्जुन ।
प्रसङ्गेन फलाकांक्षी धृतिः सा पार्थ राजसी ॥"

ಎಂಬಂತೆ ಕರ್ತೃತ್ವಾಭಿಮಾನದಿಂದ ಫಲಾಕಾಂಕ್ಷಿಯಾಗಿ ಧರ್ಮಾದಿಗಳಲ್ಲಿ ಪ್ರವರ್ತಿಸುವ ಧೃತಿಯು ರಾಜಸಿ.

"धृत्या यया धारयते मनःप्राणेंद्रियक्रियाः ।
योगेनाऽव्यभिचारिण्या धृतिस्सा पार्थ सात्त्विकी ॥"

ಎಂಬಂತೆ ಪ್ರಯತ್ನದಿಂದ ಮನಸ್ಸು, ಪ್ರಾಣ ಮತ್ತು ಇಂದ್ರಿಯಗಳ ಚೇಷ್ಟೆಗಳನ್ನು ತಡೆದುಕೊಂಡು ಅವುಗಳನ್ನು ಹರಿದುಹೋಗಗೊಡದಂತೆ ಮಾಡುವ ಧೃತಿಯು ಸಾತ್ತ್ವಿಕಿ.

**ದಯೆ:**— ಎಂದರೆ ಕನಿಕರವನ್ನು ತೋರಿಸುವದು. ಎಂದರೆ ಪ್ರಾಣಿಗಳು ರೋಗಾದಿಗಳಿಂದ ಪೀಡಿತವಾಗಿರುವಾಗ ಅಥವಾ ಹಸಿವು ಬಾಯಾರಿಕೆ-

ಗಳಿಂದ ಬಳಲುತ್ತಿರುವಾಗ ಅವುಗಳನ್ನು ತನ್ನವೆಂದು ಭಾವಿಸಿ ಅವುಗಳಿಗೆ ತನ್ನ ಕೈಲಾದ ಸಹಾಯವನ್ನು ಮಾಡುವದು. ಇದರಿಂದ ಮನಸ್ಸು ಉದಾರವಾಗುವದು.

**ಆರ್ಜವ:**— ಎಂದರೆ ಒಳಗೊಂದು ಹೊರಗೊಂದು ಇಲ್ಲದೆ, ಮನಸ್ಸಿನಲ್ಲಿ ಇರುವದನ್ನು ಬಾಯಲ್ಲಿ ಆಡುತ್ತ, ಬಾಯಲ್ಲಿ ಆಡಿದಂತೆ ಕೈಯಲ್ಲಿ ಮಾಡುತ್ತ, ತ್ರಿಕರಣ ಶುದ್ಧಿಯಾಗಿ ವರ್ತಿಸುವದು.

**ಮಿತಾಹಾರ:**— ಮನಸ್ಸಿನ ಸ್ಥಿತಿಗತಿಗಳಿಗೂ ಆಹಾರಕ್ಕೂ ಸಂಬಂಧವಿದ್ದೇ ಇರುವದರಿಂದ ಯೋಗಿಯು ಆಹಾರದ ವಿಷಯಕ್ಕೂ ಲಕ್ಷ್ಯವನ್ನು ಕೊಡಬೇಕು.

"यातयामं गतरसं पूति पर्युषितं च यत् ।
उच्छिष्टमपि चामेध्यं भोजनं तामसप्रियम् ॥"

ಎಂಬ ಗೀತೋಕ್ತಿಯಂತೆ ಅಡಿಗೆಯಾಗಿ ಒಂದು ಯಾಮ ಕಳೆದುಹೋಗಿರುವದು ಎಂದರೆ ತೀರ ಆರಿರುವದೂ, ಒಣಗಿಹೋಗಿರುವದೂ, ದುರ್ಗಂಧವುಳ್ಳದ್ದೂ, ಪಕ್ವವಾದ ಮೇಲೆ ರಾತ್ರಿಯನ್ನು ಕಳೆದಿರುವದೂ, ಇತರರು ಉಂಡು ಮಿಕ್ಕದ್ದೂ, ಭಗವಂತನಿಗೆ ನಿವೇದನಮಾಡುವದಕ್ಕೆ ಅಯೋಗ್ಯವಾದದ್ದೂ ಆದ ಆಹಾರವು ತಾಮಸರಿಗೆ ಮಾತ್ರ ಪ್ರಿಯವಾದದ್ದು.

"कट्वाम्लवणात्युष्णतीक्ष्णरूक्षाविदाहिनः ।
आहारा राजसस्येष्टा दुःखशोकामयप्रदाः ॥"

ಎಂಬ ಗೀತೋಕ್ತಿಯಂತೆ ಬೇವಿನಂಥ ಹೆಚ್ಚು ಕಹಿಯೂ, ಮೆಣಸಿನಂಥ ಹೆಚ್ಚು ತೀಕ್ಷ್ಣವೂ, ಸಾಸುವೆಯಂಥ ಹೆಚ್ಚು ದಾಹಕಾರಿಯೂ ಆಗಿ ಹೆಚ್ಚು ಹುಳಿಯೂ, ಹೆಚ್ಚು ಉಪ್ಪೂ, ಹೆಚ್ಚು ಬಿಸಿಯೂ, ಹೆಚ್ಚು ರೂಕ್ಷ(ಸ್ನೇಹಶೂನ್ಯ)ವೂ ಆದ ಆಹಾರಗಳು ರಾಜಸರಿಗೆ ಮಾತ್ರ ಪ್ರಿಯವಾದವುಗಳು. ಈರಾಜಸತಾಮಸಾಹಾರಗಳು ತತ್ಕಾಲದಲ್ಲಿಯೇ ದುಃಖವನ್ನೂ ಮುಂದೆ ದೌರ್ಮನಸ್ಯರೂಪವಾದ ಶೋಕವನ್ನೂ ರೋಗವನ್ನೂ ಹುಟ್ಟಿಸುವವು. ಆದುದರಿಂದ

ಸಾಧಕರು ಇವುಗಳನ್ನು ಬಿಡಬೇಕು.

"आयुःसत्वबलारोग्यसुखप्रीतिविवर्धनाः ।
रस्याः स्निग्धाः स्थिरा हृद्या आहाराः सात्त्विकप्रियाः॥"

ಎಂಬ ಗೀತೋಕ್ತಿಯಂತೆ ಆಯುಸ್ಸನ್ನೂ ಚಿತ್ತಸ್ಥೈರ್ಯವನ್ನೂ ಶರೀರ-ಸಾಮರ್ಥ್ಯವಿಶೇಷವನ್ನೂ ಆರೋಗ್ಯವನ್ನೂ ತೃಪ್ತಿಯನ್ನೂ ಸಂತೋಷ-ವನ್ನೂ ಹೆಚ್ಚಿಸುವದಾಗಿಯೂ, ಮಧುರರಸಪ್ರಧಾನವಾಗಿಯೂ, ರಸಯುಕ್ತ-ವಾಗಿಯೂ, ಸ್ನಿಗ್ಧವಾಗಿಯೂ, ಸ್ಥಿರವಾದುದಾಗಿಯೂ, ದುರ್ಗಂಧ ಮತ್ತು ಅಶುಚಿ ಮೊದಲಾದ ದೋಷಗಳಿಲ್ಲದೆ ಹೃದಯಂಗಮವಾಗಿಯೂ ಇರುವಂಥ ಭಕ್ಷ್ಯಭೋಜ್ಯಾದಿಗಳು ಸಾತ್ತ್ವಿಕಪ್ರಿಯಗಳು. ಆದುದರಿಂದ ಯೋಗಾ-ಭ್ಯಾಸಿಗಳು ಅಗತ್ಯವಾಗಿ ಸಾತ್ತ್ವಿಕಾಹಾರವನ್ನೇ ತೆಗೆದುಕೊಳ್ಳತಕ್ಕದ್ದು. ಸಾತ್ತ್ವಿಕಾಹಾರವನ್ನು ತೆಗೆದುಕೊಳ್ಳುವವರ ಮನಸ್ಸು ಸ್ವಚ್ಛವಾಗಿರುವದು. ಹೀಗೆ ಆರಿಸಿ ತೆಗೆದುಕೊಳ್ಳುವ ಆಹಾರದಲ್ಲಿಯೂ ಮಿತದ ಕಡೆಗೆ ಹೆಚ್ಚು ಲಕ್ಷ್ಯವನ್ನು ಕೊಡಬೇಕು. "भिक्षौषधं भुज्यताम्" ಎಂಬ ಮಾತಿನಲ್ಲಿ ಶ್ರೀಶಂಕರಾಚಾರ್ಯರು ಔಷಧರೂಪವಾಗಿ ಆಹಾರವನ್ನು ತೆಗೆದುಕೊಳ್ಳ-ಬೇಕೆಂದು ಹೇಳಿರುವಂತೆ ಸಾಧಕರು ಹಸಿವೆಂಬ ರೋಗದ ಬಾಧೆಯನ್ನು ಕಳೆದುಕೊಳ್ಳುವದಕ್ಕಾಗಿ ಔಷಧವನ್ನು ಹಾಕುತ್ತೇವೆಂಬ ಭಾವನೆಯಿಂದ ಎಷ್ಟು ಅನ್ನವು ಸುಲಭವಾಗಿ ಜೀರ್ಣಿಸಿ ತನಗೆ ಅಗತ್ಯವಾದ ಸಾಮರ್ಥ್ಯ-ವನ್ನು ಕೊಡುವದೊ ಅಷ್ಟೇ ಅನ್ನವನ್ನು ಭೋಜನಮಾಡಬೇಕು. ಭೋಜ-ನಕಾಲದಲ್ಲಿಯೂ ರುಚಿಯ ಕಡೆಗೆ ಲಕ್ಷ್ಯವನ್ನು ಕೊಡದೆ

"अहं वैश्वानरो भूत्वा प्राणिनां देहमाश्रितः ।
प्राणापानसमायुक्तः पचाम्यन्नं चतुर्विधम् ॥"

ಎಂಬ ಗೀತೋಕ್ತಿಯಂತೆ ಪರಮಾತ್ಮನೇ ಜಠರಾಗ್ನಿರೂಪದಿಂದ ದೇಹ-ದೊಳಗೆ ಇದ್ದು ನಾವು ಹಾಕುವ ಎಲ್ಲ ಬಗೆಯ ಅನ್ನವನ್ನೂ ಪಚನಮಾಡು-ವನೆಂದು ಅನುಸಂಧಾನಮಾಡುತ್ತಿರಬೇಕು. ನಾಲಗೆಯೆಂಬುದು ಬಹು-

ಪ್ರಬಲವಾದ ಇಂದ್ರಿಯು. ನಾಲಗೆಯೊಂದನ್ನು ಜಯಿಸಿದರೆ ಸರ್ವವನ್ನೂ ಜಯಿಸಿದಂತೆ ಆಯಿತೆಂದು ಶ್ರೀಮದ್ಭಾಗವತದ "जितं सर्वं जिते रसे" ಎಂಬ ವಾಕ್ಯವು ಹೇಳುವದು. ರುಚಿಗೆ ಸೋತು ಹೆಚ್ಚು ಅನ್ನವನ್ನು ಹೊಟ್ಟೆಗೆ ತುಂಬುವವನಿಗೆ ಯೋಗವು ಸಿದ್ಧಿಸುವದಿಲ್ಲ. ಆಹೆಚ್ಚಿನ ಅನ್ನದಿಂದ ಅಜೀರ್ಣವಾಗಿ ಜ್ವರಾದಿರೋಗಗಳುಂಟಾಗುವವು. ಯೋಗಿಗೆ ಹೆಚ್ಚಿನ ಅನ್ನವು ಹೇಗೆ ಕೆಟ್ಟದ್ದೊ ಅಲ್ಪಾಹಾರವೂ ಅಥವಾ ನಿರಾಹಾರವೂ ಹಾಗೆಯೇ ಕೆಟ್ಟದ್ದೆಂದು ಗೀತೆಯು

"नात्यश्नतस्तु योगोऽस्ति न चैकांतमनश्नतः"

ಎಂಬ ಶ್ಲೋಕದಲ್ಲಿ ಹೇಳಿರುವದು. ಯಾವನು ಭೋಜನವನ್ನು ಬಿಟ್ಟೇ ಬಿಡುವನೊ ಅಥವಾ ಅತ್ಯಲ್ಪಭೋಜನಮಾಡುವನೊ ಅವನಿಗೂ ಯೋಗವಾಗುವದಿಲ್ಲ. ಏಕೆಂದರೆ ಆನಿರಾಹಾರ ಅಥವಾ ಅಲ್ಪಾಹಾರದಿಂದ ಶರೀರಕ್ಕೆ ರಸಾಧಿಧಾತುಗಳ ಪುಷ್ಟಿ ತಕ್ಕಷ್ಟು ಆಗುವದಿಲ್ಲ. ಆದುದರಿಂದ ಅವನ ವೃತ್ತಿಯು ಏಕಾಗ್ರವಾಗುವದಿಲ್ಲ; ಯೋಗವನ್ನು ಸಾಧಿಸುವವನು ಆಹಾರದಲ್ಲಿ ಹೇಗೋ ಹಾಗೆ ನಡೆನುಡಿಗಳಲ್ಲಿ ಕೂಡ ಮಿತವಾಗಿರಬೇಕೆಂದು ಗೀತೆಯು "युक्ताहारविहारस्य युक्तचेष्टस्य कर्मसु" ಎಂಬ ಮಾತಿನಲ್ಲಿ ಹೇಳಿರುವದು.

ಯಮವೆಂಬ ಅಂಗವನ್ನು ಹೇಳಿದ ಮೇಲೆ ಶ್ರೀಪತಂಜಲಿಋಷಿಗಳು ಜನ್ಮಹೇತುವಾದ ಕಾಮ್ಯಕರ್ಮದಿಂದ ಹಿಂದಿರುಗಿಸಿ ಮೋಕ್ಷಹೇತುವಾದ ನಿಷ್ಕಾಮಕರ್ಮದಲ್ಲಿ ನಿಯಮಿಸುವ ನಿಯಮಗಳನ್ನು ಹೇಳಿರುತ್ತಾರೆ. ಅವರ ಸೂತ್ರದಂತೆ ನಿಯಮವೆಂದರೆ ಶೌಚ, ಸಂತೋಷ, ತಪಸ್ಸು, ಸ್ವಾಧ್ಯಾಯ, ಈಶ್ವರಪ್ರಣಿಧಾನ ಎಂಬ ಐದು.

**ಶೌಚ:**— ಸಾಮಾನ್ಯವಾಗಿ ಮೃತ್ತಿಕಾಸ್ನಾನ ಮತ್ತು ಗಂಗಾಸ್ನಾನ ಮೊದಲಾದವು ಶೌಚ. ಕಾಯಿಕಶೌಚಕ್ಕಾಗಿ ಹಠಯೋಗಪ್ರದೀಪಿಕೆಯಲ್ಲಿ ಧೌತಿ, ಬಸ್ತಿ, ನೇತಿ, ತ್ರಾಟಕ, ನೌಲಿ, ಕಪಾಲಭಾತಿ ಎಂಬ ಆರು ಕ್ರಿಯೆಗಳು ವಿವೃತವಾಗಿರುವವು. ಈಕ್ರಿಯೆಗಳನ್ನೆಲ್ಲ ವಿವರಿಸುವದಕ್ಕೆ ಇದು ಸಮಯವಲ್ಲ. ಕಾಯಿಕಶೌಚವನ್ನು ನಿತ್ಯವೂ ಮಾಡುತ್ತಿರುವದರಿಂದ ಕೆಲವು

ದಿನಗಳ ಮೇಲೆ ತನಗೇ ತನ್ನ ಅವಯುವಗಳ ಮೇಲೆ ಬೇಸರ ಹುಟ್ಟಿ ವೈರಾಗ್ಯಕ್ಕೆ ಕಾರಣವಾಗುವದೆಂದು "शौचात्स्वांगजुगुप्सा परैरसंसर्गः" ಎಂಬ ಸೂತ್ರವು ಹೇಳುವದು.

**ಸಂತೋಷಃ**—ಎಂದರೆ "यदृच्छालाभसंतुष्टः" ಎಂದೂ "**संतुष्टो येन केनचित्**" ಎಂದೂ ಗೀತೆಯು ಹೇಳಿರುವಂತೆ ಸಿಕ್ಕಿದಷ್ಟಕ್ಕೆ ತೃಪ್ತಿಪಡುವದು. ಈ ಸಾಧನವನ್ನು ಪಿಂಗಳೆಯೆಂಬ ಒಬ್ಬ ವೇಶ್ಯೆಯಿಂದ ಕಲಿತುಕೊಂಡೆನೆಂದು ಒಬ್ಬ ಅವಧೂತನು ಹೇಳಿದನೆಂದು ಶ್ರೀಮದ್ಭಾಗವತದಲ್ಲಿ ಬಂದಿರುವದು. ಪಿಂಗಳೆಯೆಂಬ ವೇಶ್ಯೆಯು ಕೂಡ ತನಗೆ ಹೆಚ್ಚು ಹಣವನ್ನು ಕೊಡುವವರಿಗಾಗಿ ರಾತ್ರೆಯೆಲ್ಲ ಕಾದುಕಾದು ಕಂಗಾಲಾಗಿ ಕೊನೆಗೆ

"आशा हि परमं दुःखं निराशा परमं सुखम्"

ಎಂದು ನಿಶ್ಚಯುಮಾಡಿಕೊಂಡು ನಿಟ್ಟುಸಿರು ಬಿಟ್ಟು ಸುಮ್ಮನಾದಳಂತೆ. ಸಂತೋಷದಿಂದಿರುವವನ ಸುಖದ ಮುಂದೆ ಸ್ವರ್ಗಸುಖವು ಕೂಡ ಅತಿಕ್ಷುದ್ರವಾಗಿ ಕಾಣುವದೆಂದು "संतोषादनुत्तमसुखलाभः" ಎಂಬ ಯೋಗಸೂತ್ರವು ಹೇಳುವದು.

**ತಪಃ**—ಎಂದರೆ ಕೃಛ್ರಚಾಂದ್ರಾಯಣಾದಿ ವ್ರತಗಳು. ಇವುಗಳಿಂದ ಶರೀರ ಶೋಷಣೆಯಾಗುವದರಿಂದ ಇಂದ್ರಿಯಗಳ ಮತ್ತು ಮನಸ್ಸಿನ ಸೊಕ್ಕು ಅಡಗಿ ಆಮೇಲೆ ಅವು ಹೇಳಿದಂತೆ ಕೇಳುವದಕ್ಕೆ ಕೈಕಟ್ಟಿಕೊಂಡು ನಿಲ್ಲುವವು. ಇದರ ವಿಷಯುವು ಗೀತೆಯಲ್ಲಿ ತ್ರಿವಿಧಯಜ್ಞಗಳಿಂದ ವ್ಯಕ್ತವಾಗುವದು.

"विधिहीनमसृष्टान्नं मंत्रहीनमदक्षिणं ।
श्रद्धाविरहितं यज्ञं तामसं परिचक्षते ॥"

ಎಂಬಂತೆ ಶಾಸ್ತ್ರೋಕ್ತವಿಧಿ, ಅನ್ನಸಂತರ್ಪಣೆ, ಮಂತ್ರ, ದಕ್ಷಿಣೆ ಮೊದಲಾದವುಗಳೇನೂ ಇಲ್ಲದೆ ಅಶ್ರದ್ಧೆಯಿಂದ ಮಾಡುವ ವ್ರತವು ತಾಮಸ.

"अभिसंधाय तु फलं दम्भार्थमपि चैव यत् ।
इज्यते भरतश्रेष्ठ तं यज्ञं विद्धि राजसम् ॥"

ಎಂಬಂತೆ ಫಲವನ್ನು ಉದ್ದೇಶವಾಡಿ ಲೋಕದಲ್ಲಿ ಧಾರ್ಮಿಕನೆಂಬ ಖ್ಯಾತಿಯನ್ನು ಪಡೆಯಬೇಕೆಂದು ಮಾಡುವ ವ್ರತವು ರಾಜಸ. ಇನ್ನು

"अफलाकांक्षिभिर्यज्ञो विधिदृष्टो य इज्यते ।
यष्टव्यमेवे.ते मनः समाधाय स सात्त्विकः ॥"

ಎಂಬಂತೆ ಕೇವಲ ಪರಮೇಶ್ವರಪ್ರೀತ್ಯರ್ಥವಾಗಿ ಇದು ತನ್ನ ಕರ್ತವ್ಯವೆಂದು ತಿಳಿದು ಏಕಮನಸ್ಸಿನಿಂದ ವಿಧಿಯನ್ನನುಸರಿಸಿ ಮಾಡುವ ವ್ರತವು ಸಾತ್ತ್ವಿಕ. ಸಾಧಕರು ಈಸಾತ್ತ್ವಿಕಯಜ್ಞವನ್ನೇ ಅಗತ್ಯವಾಗಿ ಅನುಷ್ಠಾನಕ್ಕೆ ತರಬೇಕು. ತಪಸ್ಸಿದ್ಧಿಯಿಂದ ಅಣಿಮಾದಿಸಿದ್ಧಿಗಳೂ ದೂರದರ್ಶನಸೂಕ್ಷ್ಮದರ್ಶನಶಕ್ತಿಗಳೂ ಬರುವವೆಂದು ಯೋಗಶಾಸ್ತ್ರದ "**कायेंद्रियसिद्धिरशुद्धिक्षयात्तपसः**" ಎಂಬ ಸೂತ್ರವು ಹೇಳುವದು.

**ಸ್ವಾಧ್ಯಾಯ:**—ಎಂದರೆ ಧರ್ಮಗ್ರಂಥಗಳ ಪಾರಾಯಣ ಮತ್ತು ಮಂತ್ರಜಪ. ವೇದಾಂತಗ್ರಂಥಗಳ ಶ್ರವಣಮನನಗಳೂ ಈಮಾತಿನಲ್ಲಿ ಸಮಾವೇಶವಾಗುವವು. ಜಪದಲ್ಲಿ ವಾಚಿಕವೆಂದೂ ಮಾನಸವೆಂದೂ ಎರಡು ಬಗೆ. ಅವುಗಳಲ್ಲಿ ವಾಚಿಕಜಪವು ಉಪಾಂಶು, ವೈಖರಿ ಎಂದು ಎರಡು ಬಗೆ. ಉಪಾಂಶು ಜಪವೆಂದರೆ ಇತರರ ಕಿವಿಗೆ ಬೀಳದ ಹಾಗೆ ಉಚ್ಚರಿಸುವದು. ವೈಖರಿಯೆಂದರೆ ಗಟ್ಟಿಯಾಗಿ ಉಚ್ಚರಿಸುವದು. ಮಾನಸಜಪವು ಧ್ಯಾನರಹಿತ ಮತ್ತು ಧ್ಯಾನಸಹಿತ ಎಂದು ಎರಡು ಬಗೆ. ಧ್ಯಾನರಹಿತವೆಂದರೆ ಲಕ್ಷ್ಯವನ್ನಿಡದೆ ಇರುವದು. ಧ್ಯಾನಸಹಿತವೆಂದರೆ "**तज्जपस्तदर्थभावनम्**" ಎಂಬ ಸೂತ್ರದಂತೆ ಆಮಂತ್ರಾಧಿದೇವತೆಯನ್ನು ಅನುಸಂಧಾನಮಾಡುತ್ತಿರುವದು. ಯಾಜ್ಞ್ಯವಲ್ಕ್ಯರು ವೈಖರೀಜಪಕ್ಕಿಂತ ಉಪಾಂಶುಜಪವು ಸಾವಿರಪಾಲು ಮೇಲಿನದೆಂದೂ ಅದಕ್ಕಿಂತ ಮಾನಸಜಪವು ಸಾವಿರಪಾಲು ಶ್ರೇಷ್ಠ-

ವೆಂದೂ ಅದರಲ್ಲಿಯೂ ಧ್ಯಾನಸಹಿತವಾದುದು ಸರ್ವೋತ್ಕೃಷ್ಟವೆಂದೂ ಹೇಳಿದ್ದಾರೆ. "स्वाध्यायादिष्टदेवतासंप्रयोगः" ಎಂಬ ಯೋಗಸೂತ್ರದಂತೆ ಸ್ವಾಧ್ಯಾಯನಿರತನಾದವನಿಗೆ ಇಷ್ಟದೇವತಾಪ್ರತ್ಯಕ್ಷದರ್ಶನಾದಿಗಳು ಲಭಿಸುವ.

**ಈಶ್ವರಪ್ರಣಿಧಾನ**:—ಎಂದರೆ ಈಶ್ವರನಿಗೆ ಶರಣುಹೋಗುವದು. ಈ ಧರ್ಮವನ್ನು ಶ್ರೀಕೃಷ್ಣಪರಮಾತ್ಮನು ಗೀತೆಯಲ್ಲಿ

"यत्करोषि यदश्नासि यज्जुहोषि ददासि यत् ।
यत्तपस्यासि कौंतेय तत्कुरुष्व मदर्पणम् ॥"

ಎಂಬ ಶ್ಲೋಕದಲ್ಲಿ ಹೇಳಿರುವನು. ದೇಹಯಾತ್ರಾರ್ಥ.ವಾಗಿ, ಮಾಡುವ ಗಮನಾಗಮನಾದಿ ಲೌಕಿಕಕರ್ಮಗಳನ್ನೂ, ದೇಹಧಾರಣಾರ್ಥವಾಗಿ ಮಾಡುವ ಭೋಜನವನ್ನೂ, ಹೋಮದಾನತಪಃಪ್ರಭೃತಿಯಾದ ನಿತ್ಯನೈಮಿತ್ತಿಕವೈದಿಕಕರ್ಮಗಳನ್ನೂ ಮನುಷ್ಯನು ಮಾಡುವ ಸರ್ವಕರ್ಮಗಳನ್ನೂ ಪರಮಾತ್ಮನಿಗೆ ಅರ್ಪಣೆಮಾಡಬೇಕೆಂದು ಅದರ ತಾತ್ಪರ್ಯ. ಮುಖ್ಯವಾಗಿ ತನ್ನ ತನುಮನಧನಗಳನ್ನೆಲ್ಲ ಪರಮೇಶ್ವರಪ್ರೀತಿಗಾಗಿ ಅರ್ಪಣೆಮಾಡಿ ಪರಮೇಶ್ವರನಲ್ಲಿ ಅತ್ಯಂತದೃಢಪ್ರೇಮವನ್ನಿಟ್ಟು ಅವನ ಗುಣವನ್ನೇ ಶ್ರವಣಮಾಡುವದೂ ಅವನ ಯಶಸ್ಸನ್ನೇ ಹಾಡುವದೂ ಅವನ ನಾಮವನ್ನೇ ಸ್ಮರಿಸುವದೂ ಅವನ ಪಾದಗಳಿಗೇ ಸಾಷ್ಟಾಂಗಪ್ರಣಾಮಮಾಡುವದೂ ಅವನ ಪ್ರತಿಮೆಯನ್ನೇ ಪೂಜಿಸುವದೂ ಅವನಿಗೇ ದಾಸ್ಯವನ್ನು ಮಾಡುವದೂ ಅವನನ್ನೇ ಸ್ನೇಹಿತನನ್ನಾಗಿ ಮಾಡಿಕೊಳ್ಳುವದೂ ಅವನನ್ನೇ ತನ್ನ ಸರ್ವಸ್ವವಾಗಿ ಭಾವಿಸುವದೂ ಈಪ್ರಕಾರವಾದ ಭಕ್ತಿಯೇ ಈಶ್ವರಪ್ರಣಿಧಾನ. **समाधिसिद्धिरीश्वरप्राणिधानात्**" ಎಂಬ ಯೋಗಸೂತ್ರದಂತೆ ಈಶ್ವರಪ್ರಣಿಧಾನದಿಂದ ಸಮಾಧಿಯು ಸಿದ್ಧಿಸುವದು.

ಹಠಯೋಗಪ್ರದೀಪಿಕಾ ಮೊದಲಾದ ಗ್ರಂಥಗಳಲ್ಲಿ ಮೇಲೆ ಹೇಳಿದ ನಿಯಮಗಳ ಜೊತೆಗೆ ಆಸ್ತಿಕ್ಯ, ದಾನ, ಸಿದ್ಧಾಂತವಾಕ್ಯಶ್ರವಣ, ಮತಿ, ಲಜ್ಜೆ, ಹೋಮ ಎಂಬ ಆರನ್ನು ಸೇರಿಸುವರು. ಇವುಗಳನ್ನೂ ವಿಚಾರಮಾಡೋಣ.

**ಆಸ್ತಿಕ್ಯ:**— ದೇವರಿದ್ದಾನೆಂಬ ದೃಢನಿಶ್ಚಯ.

**ದಾನ:**— ಇದು ಭಗವದ್ಗೀತೆಯಲ್ಲಿ ಸತ್ತ್ವಾದಿಭೇದದಿಂದ ಮೂರು ಬಗೆಯಾಗಿರುವದು.

"अदेशकाले यद्दानमपात्रेभ्यश्च दीयते ।
असत्कृतमवज्ञातं तत्तामसमुदाहृतम् ॥"

ಎಂಬಂತೆ ಅಶುಚಿಯಾಗಿರುವ ಅಥವಾ ದುಷ್ಟರ ಆವಾಸಸ್ಥಾನವಾಗಿರುವ ಅದೇಶದಲ್ಲಿ ಅಶುಚಿಸಮಯವಾದ ಅಕಾಲದಲ್ಲಿ ನಟವಿಟಾದಿ ಅಪಾತ್ರರಿಗೆ ಪ್ರಿಯಭಾಷಣಪಾದಪ್ರಕ್ಷಾಳನ ಮೊದಲಾದ ಸತ್ಕಾರವಿಲ್ಲದೆ ಅಪಮಾನ-ಪೂರ್ವಕವಾಗಿ ಕೊಡುವದು ತಾಮಸದಾನ.

"यत्तु प्रत्युपकारार्थं फलमुद्दिश्य वा पुनः ।
दीयते च परिक्लिष्टं तद्राजसमुदाहृतम् ॥"

ಎಂಬಂತೆ ಕಾಲಾಂತರದಲ್ಲಿ ನನಗೆ ಇವರಿಂದ ಏನಾದರೂ ಸಹಾಯವಾದೀ-ತೆಂಬ ಅಥವಾ ಸ್ವರ್ಗಾದಿಫಲ ಉಂಟಾದೀತೆಂಬ ನಿರೀಕ್ಷಣೆಯನ್ನಿಟ್ಟುಕೊಂಡು 'ಇದನ್ನು ಹೇಗೆ ಕೈಬಿಟ್ಟುಕೊಡಲಿ?' ಎಂದು ಸಂಕಟದಿಂದ ಕೊಡುವದು ರಾಜಸದಾನ. ಇನ್ನು

"दातव्यमिति यद्दानं दीयतेऽनुपकारिणे ।
देशे काले च पात्रेच तद्दानं सात्त्विकं स्मृतम् ॥"

ಎಂಬಂತೆ ಕೊಡುವದಕ್ಕೆ ಯೋಗ್ಯವಾದ ಸುವರ್ಣದಾನ ಮತ್ತು ಭೂದಾನ ಮೊದಲಾದವುಗಳನ್ನು ಯಾವ ಉಪಕಾರವನ್ನೂ ಮಾಡದೆ ಇರುವವನಿಗಾ-ದರೂ ಯಾವ ಫಲಾಭಿಸಂಧಿಯೂ ಇಲ್ಲದೆ ದೇಶಕಾಲಗಳನ್ನು ನೋಡಿ ದಾನ-ಮಾಡುವದು ಸಾತ್ತ್ವಿಕದಾನ. ಸಾಮಾನ್ಯವಾಗಿ ಅತಿಥಿಅಭ್ಯಾಗತರನ್ನು ಯಥೋಚಿತವಾಗಿ ಸತ್ಕರಿಸುವದೂ ಬಡಬಗ್ಗರಿಗೆ ಸಹಾಯಮಾಡುವದೂ ಪ್ರತಿಫಲವನ್ನು ನಿರೀಕ್ಷಿಸದೆ ವಿದ್ಯೆಯನ್ನು ಕಲಿಸುವದೂ ಕೂಡ ದಾನವೆಂಬ

ಮಾತಿನೊಳಗೆ ಬರುವವು.

**ಸಿದ್ಧಾಂತವಾಕ್ಯಶ್ರವಣ:**— ದೇಹ ಮತ್ತು ಜಗತ್ತು ಕ್ಷಣಭಂಗುರವೆಂದೂ ಪರಮಾತ್ಮನೊಬ್ಬನು ನಿತ್ಯನೂ ವಿಭುವೂ ಆಗಿರುವನೆಂದೂ ಮನಸ್ಸಿನ-ಭಾವನೆಯು ದೃಢವಾಗುವಂತೆ ಆಗಾಗ ಶ್ರವಣಮಾಡುತ್ತಿರುವದು.

**ಮತಿ:**— ವಿವಿಧವಾದ ಸಾಂಸಾರಿಕಭೋಗ್ಯವಸ್ತುಗಳಿಗೆ ಮತ್ತು ಸ್ವರ್ಗಾದಿವೈಭವಗಳಿಗೆ ಬೆರಗಾಗದೆ ಮನಸ್ಸಿನ ಕಲ್ಪನೆಗಳನ್ನೆಲ್ಲ ನಿರ್ಮೂಲಮಾಡುತ್ತ ಹೋಗುವದು.

**ಲಜ್ಜೆ:**— ಯಾರು ಏನೆಂದರೂ ಅದನ್ನು ಕಿವಿಯ ಮೇಲೆ ಹಾಕಿಕೊಳ್ಳದೆ ಸದ್ಗುರುವಿನ ಯಾವ ಬಗೆಯ ಸೇವೆಗೂ ಹಿಂದುಮುಂದು ನೋಡದೆ ಇರುವದು.

**ಹೋಮ:**— ಮನಸ್ಸನ್ನು ಇಂದ್ರಿಯಗಳ ಕಡೆಗೆ ಹೋಗಗೊಡದೆ ಪರಮಾತ್ಮನಲ್ಲಿ ಲೀನಮಾಡುವದು ಸಾತ್ತ್ವಿಕಹೋಮ. ಫಲಾದಿಗಳನ್ನು ಅಗ್ನಿಯಲ್ಲಿ ಹೋಮಮಾಡುವದು ರಾಜಸಹೋಮ.

ಈ ಯಮನಿಯಮಗಳ ಲಕ್ಷಣಗಳೆಲ್ಲ ಭಗವದ್ಗೀತೆಯಲ್ಲಿ ದೈವೀ-ಸಂಪತ್ತಿನಲ್ಲಿಯೂ ತ್ರಿವಿಧತಪಸ್ಸಿನಲ್ಲಿಯೂ ಸೇರಿಹೋಗಿರುವವು. ದೈವೀ-ಸಂಪತ್ತೆಂದರೆ

"अभयं सत्त्वसंशुद्धिर्ज्ञानयोगव्यवस्थितिः ।
दानं दमश्च यज्ञश्च स्वाध्यायस्तप आर्जवम् ॥
अहिंसा सत्यमक्रोधस्त्यागः शांतिरपैशुनम् ।
दया भूतेष्वलोलुप्त्वं मार्दवं ह्रीरचापलम् ॥
तेजः क्षमा धृतिश्शौचमद्रोहो नातिमानिता ॥"

ಎಂಬಂತೆ ಅಭಯ, ಭಗವತ್ತತ್ತ್ವಸ್ಫೂರ್ತಿಗೆ ಯೋಗ್ಯವಾದ ಅಂತಃಕರಣ-ಶುದ್ಧಿ, ಶಾಸ್ತ್ರಾಚಾರ್ಯೋಪದೇಶದಿಂದ ತಿಳಿದ ಅರ್ಥವನ್ನು ಅನುಭವಕ್ಕೆ

ತಂದುಕೊಳ್ಳುವದಕ್ಕೆ ಯಾವಾಗಲೂ ಪ್ರಯತ್ನಿಸುತ್ತಿರುವದು, ದಾನ, ಬಾಹ್ಯೇಂದ್ರಿಯಸಂಯಮ, ಯಜ್ಞ, ವೇದಾಧ್ಯಯನ, ತಪಸ್ಸು, ಆರ್ಜವ, ಅಹಿಂಸಾ, ಸತ್ಯ, ಅಕ್ರೋಧ, ದುಃಖಸಂಗಪರಿತ್ಯಾಗ, ಶಾಂತಿ, ಪರದೋಷವನ್ನು ಎಣಿಸದಿರುವಿಕೆ, ದಯೆ, ವಿಷಯಗಳ ಹತ್ತರ ಇದ್ದರೂ ಇಂದ್ರಿಯಗಳು ವಿಕಾರವನ್ನು ಪಡೆಯದೆ ಇರುವಿಕೆ, ಮೃದುಸ್ವಭಾವ, ಲಜ್ಜೆ, ವ್ಯರ್ಥಚೇಷ್ಟೆಗಳನ್ನು ಮಾಡದೆ ಇರುವದು, ಪ್ರಾಗಲ್ಭ್ಯ, ಕ್ಷಮೆ, ಧೃತಿ, ಶೌಚ, ಅದ್ರೋಹ, ದುರಭಿಮಾನವಿಲ್ಲದಿರುವಿಕೆ. ದೇವಯೋಗ್ಯವಾದ ಮತ್ತು ಶುಭವಾಸನಾರೂಪವಾದ ಈ ಸಾತ್ವಿಕಸಂಪತ್ತು

"भवंति संपदं दैवीमभिजातस्य भारत "

ಎಂಬ ಗೀತೋಕ್ತಿಯಂತೆ ಶರೀರಾರಂಭಕಾಲದಲ್ಲಿ ಪುಣ್ಯಫಲವಾಗಿ ಬರುವವು. ಇನ್ನು ತ್ರಿವಿಧತಪಸ್ಸನ್ನು ವಿಚಾರಮಾಡಿದರೆ

"देवद्विजगुरुप्राज्ञपूजनं शौचमार्जवम् ।
ब्रह्मचर्यमहिंसा च शारीरं तप उच्यते ॥"

ಎಂಬಂತೆ ದೇವರನ್ನೂ ಬ್ರಾಹ್ಮಣರನ್ನೂ ಗುರುಗಳನ್ನೂ ತತ್ವಜ್ಞಾನಿಗಳನ್ನೂ ಪೂಜಿಸುವದೂ, ಶೌಚವೂ, ಆರ್ಜವವೂ, ಬ್ರಹ್ಮಚರ್ಯೆಯೂ, ಅಹಿಂಸೆಯೂ ಶಾರೀರತಪಸ್ಸು.

"अनुद्वेगकरं वाक्यं सत्यं प्रियहितं च यत् ।
स्वाध्यायाभ्यसनं चैव वाङ्मयं तप उच्यते ॥"

ಎಂಬಂತೆ ಇತರರಿಗೆ ದುಃಖವನ್ನುಂಟುಮಾಡದೆ ಇರುವದಾಗಿಯೂ ಯಥಾರ್ಥವಾಗಿಯೂ ಕಿವಿಗೆ ಇಂಪಾಗಿಯೂ ಪರಿಣಾಮದಲ್ಲಿ ಸುಖಕರವಾಗಿಯೂ ಇರುವಂಥ ಮಾತಾಡುವದೂ ವಿಧಿಪ್ರಕಾರ ವೇದಾಭ್ಯಾಸ ಮಾಡುವದೂ ವಾಚಿಕತಪಸ್ಸು.

"मनःप्रसादः सौम्यत्वं मौनमात्मविनिग्रहः ।
भावसंशुद्धिरित्येतत्तपो मानस उच्यते ॥"

ಎಂಬಂತೆ ಮನಸ್ಸಿನ ಸ್ವಚ್ಛತೆ, ವಿಷಯಚಿಂತಾವ್ಯಾಕುಲತ್ವವಿಲ್ಲದಿರುವಿಕೆ, ಏಕಾಗ್ರತೆಯಿಂದ ತತ್ತ್ವಚಿಂತನ ಮಾಡುವದು ಮನೋನಿರೋಧ, ಭಾವಸಂಶುದ್ಧಿ ಇವು ಮಾನಸಿಕತಪಸ್ಸು.

ಶ್ರೀಪತಂಜಲಮಹರ್ಷಿಗಳು ಯಮನಿಯಮಗಳನ್ನು ಹೇಳಿದ ಮೇಲೆಯೂ ಸಾಕ್ಷಾಚ್ಚಿತ್ತವೃತ್ತಿ ನಿರೋಧದ ಮಾತೆತ್ತುವದಕ್ಕೆ ಮೊದಲು ಅದಕ್ಕಿಂತಲೂ ಸಾವಿರಪಾಲು ಸ್ಥೂಲವಾದ ದೇಹದ ಸ್ಥೈರ್ಯವನ್ನು ಅಭ್ಯಾಸ ಮಾಡಿಸಬೇಕೆಂದು "तत्र स्थिरसुखमासनम्" ಎಂಬ ಸೂತ್ರದಿಂದ ಆಸನವೆಂಬ ಮೂರನೆಯ ಅಂಗವನ್ನು ಹೇಳಿದ್ದಾರೆ. ಭಗವಂತನು ಗೀತೆಯಲ್ಲಿ

"शुचौ देशे प्रतिष्ठाप्य स्थिरमासनमात्मनः"

ಎಂದೂ "विविक्तदेशसेवित्वं" ಎಂದೂ ಹೇಳಿರುವದನ್ನು ನೋಡಿದರೆ ಬೇರೆ ಬೇರೆ ಆಸನಗಳ ವಿಚಾರವನ್ನು ಮಾಡುವದಕ್ಕೆ ಮೊದಲು ಯೋಗಾಭ್ಯಾಸಕ್ಕೆ ಕುಳಿತುಕೊಳ್ಳುವ ಸ್ಥಳದ ಪ್ರಾಶಸ್ತ್ಯವನ್ನು ನೋಡಬೇಕು. ಯೋಗಾಭ್ಯಾಸಕ್ಕೆ ಯೋಗ್ಯವೆನಿಸಬೇಕಾದರೆ ಆ ಸ್ಥಳವು ನಾಲ್ಕು ಕಡೆಯಲ್ಲಿಯೂ ಸಮಭೂಮಿಯಾಗಿಯೂ ಪವಿತ್ರವಾಗಿಯೂ ಇರಬೇಕು; ಬೆಂಕಿಯ ಶಾಖವೂ ಸರ್ಪಾದಿಗಳ ಸಂಚಾರವೂ ಇರಬಾರದು; ಅಲ್ಲಿ ಸುತ್ತುಮುತ್ತು ಜಲಾಶಯಗಳೂ ಕಂದಮೂಲಗಳೂ ಹೂಗಿಡಗಳೂ ಬಳ್ಳಿಗಳೂ ಇದ್ದರೆ ಉತ್ತಮ. ವಾಯು ಮಂದವಾಗಿ ಸಂಚರಿಸುವ ಸ್ಥಳವಾಗಬೇಕು. "अरतिर्जनसंसदि" ಎಂಬ ಗೀತೋಕ್ತಿಯಂತೆ ಹಿಂದೆ ಮುಂದೆ ಪ್ರಾಪಂಚಿಕರ ಯಾವ ಗದ್ದಲವೂ ಇರಬಾರದು.

"योगी युंजीत सततमात्मानं रहसि स्थितः"

ಎಂಬ ಗೀತೋಕ್ತಿಯಂತೆ ಅದು ಏಕಾಂತಪ್ರದೇಶವಾಗಿರಬೇಕು. ಅಲ್ಲಿ ಯೋಗಿಯು "एकाकीयतचित्तात्मा" ಎಂಬ ಗೀತೋಕ್ತಿಯಂತೆ ಮನಸ್ಸನ್ನು

ಬಿಗಿಹಿಡಿದು ಏಕಾಕಿಯಾಗಿ ಕುಳಿತುಕೊಳ್ಳಬೇಕು. ಶ್ರೀಮದ್ಭಾಗವತದಲ್ಲಿ ಹೇಳಿರುವಂತೆ ಒಬ್ಬ ಅವಧೂತನು ಏಕಾಕಿತ್ವವೆಂಬ ಸಾಧನವನ್ನು ಸಂಗ್ರಹ-ಮಾಡಿದ್ದು ಬಹು ಚೆನ್ನಾಗಿದೆ. ನೆರೆಯ ಊರಿನ ಗೃಹಸ್ಥರು ಕನ್ಯಾರ್ಥಿಗಳಾಗಿ ಒಬ್ಬರ ಮನೆಗೆ ಬಂದರು. ಆ ಸಮಯದಲ್ಲಿ ಮನೆಯವರೆಲ್ಲ ಎಲ್ಲಿಯೋ ಹೊರಕ್ಕೆ ಹೋಗಿದ್ದರು; ಆ ಕನ್ಯೆಯೊಬ್ಬಳೇ ಮನೆಯಲ್ಲಿದ್ದು ಕೆಲಸದಲ್ಲಿ ತೊಡ-ಗಿದ್ದಳು. ಬಂದ ಬಂಧುಗಳು ನಡುಮನೆಯಲ್ಲಿ ವಿಶ್ರಮಿಸಿಕೊಂಡರು. ಒಳಗೆ ಆ ಕನ್ಯೆಯು ಅಕ್ಕಿಯನ್ನು ಕುಟ್ಟಬೇಕಾಗಿತ್ತು. ಒಂದು ಕುಟ್ಟು ಕುಟ್ಟಿದಳು. ಕೈಲಿದ್ದ ಬಳೆಗಳ ಸದ್ದು ಬಹಳವಾಗಿ ತಾನು ಆಕೆಲಸವನ್ನು ಮಾಡುತ್ತಿರು-ವದು ಪರಗೃಹಸ್ಥರಿಗೆ ತಿಳಿಯುವದೆಂದು ಆಕೆಗೆ ನಾಚಿಕೆಯಾಯಿತು. ಒಂದೆ-ರಡು ಬಳೆಗಳನ್ನು ಒಡೆದು ಹಾಕಿ ಮತ್ತೊಂದು ಕುಟ್ಟು ಕುಟ್ಟಿದಳು. ಆಗಲೂ ಸದ್ದಾಯಿತು. ಆಗ ಆಕೆಯು ಕೈಗೆ ಎರೆಡೆರಡರಂತೆ ಮಾತ್ರ ಬಳೆಗಳನ್ನುಳಿಸಿ-ಕೊಂಡು ಹೆಚ್ಚಿನವುಗಳನ್ನು ಒಡೆದುಬಿಟ್ಟು ಇನ್ನೊಂದು ಕುಟ್ಟು ಕುಟ್ಟಿದಳು. ಆದರೂ ಸದ್ದು ತಪ್ಪಲಿಲ್ಲ. ಆಗ ಆಕೆಯು ಕೈಗೆ ಒಂದೊಂದರಂತೆ ಉಳಿಸಿ-ಕೊಂಡು ಇನ್ನೊಂದನ್ನು ಒಡೆದುಹಾಕಿ ಕುಟ್ಟುತ್ತ ಬಂದಳು. ಸದ್ದಾಗಲಿಲ್ಲ. ಒಬ್ಬ ಅವಧೂತನು ಆಕುಮಾರಿಯ ಈ ನಡವಳಿಕೆಯಿಂದ ಏಕಾಕಿತ್ವವನ್ನು ಕಲಿತುಕೊಂಡನಂತೆ. ಹೀಗೆ ಏಕಾಕಿಯಾದ ಯೋಗಿಯು ಕುಳಿತುಕೊಳ್ಳ-ಬೇಕಾದ ಸ್ಥಳವು ಸ್ವಭಾವವಾಗಿ ಆಗಲಿ ಮಣ್ಣಿನಿಂದ ಅಥವಾ ಗೋಮಯ-ದಿಂದ ಸಾರಿಸಿದುದಾಗಿ ಆಗಲಿ ಶುಚಿಯಾಗಿರಬೇಕು. ಗೋಡೆಗಳ ಮೇಲೆ ಭಕ್ತಿಸಾಧನಗಳಾದ ಮುನಿಗಳು, ನದಿಗಳು, ವೃಕ್ಷಗಳು, ಪರ್ವತಗಳು, ಬಳ್ಳಿಗಳು, ಭಗವಂತನ ಅವತಾರಗಳು, ಸಾಧುಸತ್ಪುರುಷರ ಅಥವಾ ವೈರಾಗ್ಯ ಸಾಧನಗಳಾದ ಶ್ಮಶಾನಗಳು ಮತ್ತು ಘೋರನರಕಗಳು ಮೊದಲಾದವುಗಳ ಚಿತ್ರಪಠಗಳು ಮಾತ್ರ ಇರಬೇಕು. ಇಂಥ ರಮ್ಯಸ್ಥಾನದಲ್ಲಿ ಆಸನವನ್ನು ಕಲ್ಪಿಸಿಕೊಳ್ಳಬೇಕು. ಆಸನಗಳು ಅನೇಕ ಬಗೆಯೆಂದೂ ಅವುಗಳಲ್ಲಿಯೂ ಎಂಭತ್ನಾಲ್ಕು ಮುಖ್ಯವೆಂದೂ ಅವುಗಳಲ್ಲಿಯೂ ಸಿದ್ಧಾಸನಪದ್ಮಾಸನ ಮೊದ-ಲಾದ ಕೆಲವು ಅತಿಮುಖ್ಯವೆಂದೂ ಹಠಯೋಗಪ್ರದೀಪಿಕೆ ಮೊದಲಾದ ಗ್ರಂಥ-ಗಳಲ್ಲಿ ಹೇಳಿರುವದು. ಆಸನಜಯದಿಂದ ಶೀತೋಷ್ಣಾದಿ ದ್ವಂದ್ವಬಾಧೆಯು

ತಪ್ಪುವದೆಂದು "ततो द्वंद्वानभिघातः" ಎಂಬ ಯೋಗಸೂತ್ರವು ಹೇಳುವದು. ಈ ಗೀತಾವಿಚಾರವಾದ ವ್ಯಾಖ್ಯಾನದಲ್ಲಿ ಈ ಮುಖ್ಯಾಸನಗಳ ವಿವರಣೆಕೂಡ ಅಗತ್ಯವಿಲ್ಲ. ಏಕೆಂದರೆ ಆಸನವಿಷಯದಲ್ಲಿ ಗೀತೆಯಲ್ಲಿ ಭಗವಂತನು

"नात्युच्छ्रितं नातिनीचं चेलाजिनकुशोत्तरम् ।
समं कायशिरोग्रीवं धारयन्नचलं स्थिरः ।
संप्रेक्ष्यनासिकाग्रं स्वं दिशश्चानवलोकयन् ॥"

ಎಂದು ಹೇಳಿರುವನು. ಇದರ ತಾತ್ಪರ್ಯವೇನೆಂದರೆ ಯೋಗಿಯು ಕುಳಿತು-ಕೊಳ್ಳಬೇಕಾದ ಆಸನವು ಹೆಚ್ಚು ಎತ್ತರವೂ ಆಗಬಾರದು; ತೀರ ತಗ್ಗೂ ಆಗ-ಬಾರದು. ಹೆಚ್ಚು ಎತ್ತರವಾದರೆ ಒಂದು ವೇಳೆ ಪರವಶನಾಗಿ ಬೀಳುವ ಸಂಭವವುಂಟು. ತೀರ ತಗ್ಗಾದರೆ ಶೀತೋಷ್ಣಾದಿಗಳು ವ್ಯಾಪಿಸುವದರಿಂದ ಯೋಗಕ್ಕೆ ವಿಘ್ನಬರಬಹುದು. ಆದುದರಿಂದ ಸಮಭೂಮಿಯಲ್ಲಿ ಮೊದಲು ದರ್ಭೆಗಳನ್ನು ಹಾಸಿ ಅದರ ಮೇಲೆ ಅತ್ಯಂತ ಮೃದುವಾದ ಕೃಷ್ಣಾಜಿನವನ್ನಾ-ಗಲಿ ಅಥವಾ ವ್ಯಾಘ್ರಚರ್ಮವನ್ನಾಗಲಿ ಹರಡಿ ಅದರ ಮೇಲೆ ಮೆತ್ತಗಿರುವ ವಸ್ತ್ರವನ್ನು ಹಾಕಬೇಕು. ಹೀಗೆ ಮಾಡಿಕೊಂಡ ಪೀಠದ ಮೇಲೆ ಕಾಯ, ಶಿರಸ್ಸು, ಕೊರಳು ಈ ಮೂರನ್ನು ಸರಳರೇಖಾಕೃತಿಯಲ್ಲಿ ಅಚಲವಾಗಿಟ್ಟು-ಕೊಂಡು ಅತ್ತಿತ್ತ ನೋಡದೆ ನಾಸಿಕಾಗ್ರದ ಕಡೆಗೆ ಲಕ್ಷ್ಯವನ್ನಿಡಬೇಕು. ಹೀಗೆ

"येन केन प्रकारेण सुखं धैर्यं च जायते ।
तत्सुखासनमित्युक्तं ... ... ... ॥"

ಎಂಬ ಶಾಸ್ತ್ರೋಕ್ತಿಯಂತೆ ಯಾವ ಪ್ರಕಾರವಾಗಿ ಕುಳಿತರೆ ಸುಖವೂ ಧೈರ್ಯ-ವೂ ಕಾಣುವದೊ ಅದಕ್ಕೆ ಸುಖಾಸನವೆಂದೊಂದು ಹೆಸರಿರುವದರಿಂದ ಗೀತೆಗೆ ಅದೇ ಅಭಿಮತವಾಗಿ ಕಾಣುತ್ತದೆ. "विविक्तदेशे च सुखासनस्थः" ಎಂಬ ಶ್ರುತಿಯು ಕೂಡ ರಾಜಯೋಗಿಗೆ ಸುಖಾಸನವನ್ನು ಹೇಳಿರುವದು.

ಭಗವಾನ್ ಪತಂಜಲ ಮಹರ್ಷಿಯೂ ಸ್ಥೂಲಪದಾರ್ಥವಾದ ದೇಹವನ್ನು

ನಿಗ್ರಹಿಸುವ ಉಪಾಯವನ್ನು ಹೇಳಿದ ಮೇಲಾದರೂ ಒಡನೆ ಅತಿಸೂಕ್ಷ್ಮ ಪದಾರ್ಥವಾದ ಚಿತ್ತದ ಗೋಜಿಗೆ ಹೋಗದೆ ಇವೆರಡಕ್ಕೂ ಮಧ್ಯಸ್ಥವಾಗಿರುವ ಶ್ವಾಸೋಚ್ಛ್ವಾಸರೂಪವಾದ ವಾಯುವನ್ನು ನಿಗ್ರಹಿಸುವದಕ್ಕೆ ಹೊರಟು ಪ್ರಾಣಾಯಾಮವೆಂಬುದನ್ನು ನಾಲ್ಕನೆಯ ಅಂಗವಾಗಿ ಉಪದೇಶಮಾಡಿರುವದುಂಟು. ಈ ಶರೀರದಲ್ಲಿ ಪ್ರಾಣವು ಮುಖ್ಯವಾದುದೆಂದು ಶ್ರೀವೇದವ್ಯಾಸ ಮಹರ್ಷಿಗಳೂ ತಮ್ಮ ಸೂತ್ರದಲ್ಲಿ ಹೇಳಿರುವರು. ಈ ಶರೀರದಿಂದ ನಡೆಯುವ ಸರ್ವ ವ್ಯಾಪಾರಗಳೂ ವಾಯುವಿನಿಂದಲೆ ಆಗುವವು. ಪ್ರಾಣವು ಜೀವಿತಕಾಲದಲ್ಲಿ ಹೊಂದಿಕೊಂಡಿರುವದಲ್ಲದೆ ಮರಣಾನಂತರದಲ್ಲಿ ಕೂಡ ದೇಹಾಂತರಗಮನಾಗಮನಗಳಲ್ಲಿ ಆತಿವಾಹಿಕವಾಗಿ ಸಂಗಡ ಇದ್ದೇ ಇರುವದು. ಈ ವಾಯುವನ್ನು ಅವಲಂಬಿಸಿಕೊಂಡು ವಾಸನಾಯುಕ್ತವಾದ ಮನಸ್ಸು ಇರುವದು.

"यः प्राणपवनस्पंदश्चित्तस्पंदस्स एव हि ।
प्राणस्पंदक्षये यत्नः कर्तव्यो धीमतोच्चकैः ॥"

ಎಂಬ ವಸಿಷ್ಠರ ಅಭಿಪ್ರಾಯದಂತೆ ಪ್ರಾಣಸ್ಪಂದವೇ ಚಿತ್ತಸ್ಪಂದವಾದುದರಿಂದ ಚಿತ್ತನಿರೋಧವನ್ನು ಮಾಡಬೇಕೆಂಬುವರು ಪ್ರಾಣನಿರೋಧವನ್ನು ಮಾಡಬೇಕು. ಹಠಯೋಗಪ್ರದೀಪಿಕೆಯಲ್ಲಿಯೂ ಕೂಡ ಪ್ರಾಣಲಯವಾದರೆ ಮನೋಲಯವಾಗುವದೆಂದೂ ಮನೋಲಯವಾದರೆ ಪ್ರಾಣಲಯವಾಗುವದೆಂದೂ ಉಕ್ತವಾಗಿರುವದು. ನಮ್ಮ ದೇಹದಲ್ಲಿ ಪ್ರಾಣಮಾರ್ಗವನ್ನು ಆಶ್ರಯಿಸಿಕೊಂಡಿರುವ ಮುಖ್ಯ ನಾಡಿಗಳು ಇಡಾ, ಪಿಂಗಳಾ, ಸುಷುಮ್ನಾ ಎಂದು ಮೂರು. ಇವು ಮೂರೂ ಪ್ರಾಣಿಗಳ ಬೆನ್ನುಹುರಿಯಲ್ಲಿ ಇವೆ. ಆಮೂರರಲ್ಲಿ ಸುಷುಮ್ನೆಯು ಮಧ್ಯದನಾಡಿ. ಯಾವಾಗ ವಾಯು ಸುಷುಮ್ನಾ ನಾಡಿಯನ್ನು ಪ್ರವೇಶಮಾಡಿ ಬ್ರಹ್ಮರಂಧ್ರದಲ್ಲಿ ನಿಲ್ಲುವದೊ ಆಗ ಚಿತ್ತನಿರೋಧವಾಗುವದೆಂದು ಅಮೃತಸಿದ್ಧಿಯಲ್ಲಿ ಹೇಳಿದೆ. ಇಂದ್ರಿಯಗಳೆಲ್ಲ ಪ್ರಾಣಾಧೀನವೆಂಬ ವಿಷಯದಲ್ಲಿ ವಾಜಸನೇಯಿಗಳು ಹೇಳಿರುವ ವಿಚಾರವು ಹೃದಯಂಗಮವಾಗಿದೆ. ಮನಸ್ಸು, ವಾಕ್, ಚಕ್ಷು ಮೊದಲಾದ ಇಂದ್ರಿಯ ದೇವತೆಗಳೆಲ್ಲ

ತಮ್ಮ ತಮ್ಮ ವ್ಯಾಪಾರಗಳನ್ನು ಎಡೆಬಿಡದೆ ಮಾಡಬೇಕೆಂದು ಗೊತ್ತುಮಾಡಿಕೊಂಡವು. ಕೆಲವು ಕಾಲದ ಮೇಲೆ ಎಲ್ಲ ಇಂದ್ರಿಯಗಳೂ ಸೋತವು; ಪ್ರಾಣವಾಯುಮಾತ್ರ ಬೇಸರವಿಲ್ಲದೆ ಶ್ವಾಸೋಚ್ಛ್ವಾಸಗಳ ರೂಪದಿಂದ ಕೆಲಸ ಮಾಡುತ್ತಲೆ ಇತ್ತು. ಇದನ್ನು ನೋಡಿ ಎಲ್ಲ ಇಂದ್ರಿಯದೇವತೆಗಳೂ ಪ್ರಾಣದಲ್ಲಿ ಪ್ರವೇಶಮಾಡಿದರು. ಆ ಪ್ರಾಣವು ನಮಗೆ ವಶವಾಯಿತೆಂದ ಮೇಲೆ ಇಂದ್ರಿಯಗಳು ವಶವಾದವೆಂದೂ ಚಿತ್ತನಿರೋಧವಾಯಿತೆಂದೂ ಹೇಳಬೇಕಾದುದೇನು? ಪ್ರಾಣವನ್ನು ನಿರೋಧಮಾಡುವದರಿಂದ

"यथा पर्वतधातूनां दह्यंते दहनान्मलाः ।
तथेंद्रियकृता दोषा दह्यंते प्राणनिग्रहात् ॥"

ಎಂಬ ಶ್ರುತಿಯಂತೆ ಚಿನ್ನವನ್ನು ಮೂಸಿಯಲ್ಲಿಟ್ಟು ಕಾಸುವದರಿಂದ ಅದರ ಕಲ್ಮಷಗಳು ಸುಟ್ಟುಹೋಗುವ ಹಾಗೆ ಇಂದ್ರಿಯಕೃತದೋಷಗಳು ಸುಟ್ಟುಹೋಗುವವು. ಪ್ರಾಣಚಲನೆಯು ಚಿತ್ತಚಲನೆಯೇ ಆಗಿ ಅಪಕಾರಿಯಾಗಿದ್ದರೂ ವಿಧಿಯನ್ನನುಸರಿಸಿ ಪ್ರಾಣನಿರೋಧವನ್ನು ಮಾಡಿದರೆ, ಯುಕ್ತಿಗೆ ವಶವಾದ ಸಿಂಹವ್ಯಾಘ್ರಾದಿ ದುಷ್ಟ ಪ್ರಾಣಿಗಳಂತೆ, ಉಪಕಾರಿಯಾಗಿಯೇ ಆಗುವದು. ಸಾಕಿದ ಸಿಂಹವು ರಕ್ಷಕನನ್ನು ಹೇಗೆ ತಿನ್ನುವದಿಲ್ಲವೊ ಹಾಗೆ ನಿಗ್ರಹಿಸಿದ ವಾಯು ಸಾಧಕನಿಗೆ ಅಹಿತವನ್ನು ಮಾಡುವದಿಲ್ಲ. ಪ್ರಾಣಾಯಾಮ ಪ್ರಕಾರವನ್ನು ಕೇವಲ ಗುರುಮುಖದಿಂದಲೆ ತಿಳಿದು ಅದರಂತೆ ಮಾಡತಕ್ಕದ್ದೆಂದು ಯೋಗಬೀಜದಲ್ಲಿ ಮಹದೇವರು ಹೇಳಿರುವರು.

ಪ್ರಾಣಾಯಾಮವೆಂದರೆ ಪ್ರಾಣಾಪಾನಗಳ ವೃತ್ತಿನಿರೋಧ. ಈ ಪ್ರಾಣಾಯಾಮವು ಪೂರಕ, ರೇಚಕ, ಕುಂಭಕ, ಕೇವಲಕುಂಭಕ ಎಂದು ನಾಲ್ಕು ಪ್ರಕಾರವಾಗಿರುವದು. ಅಮೃತಬಿಂದೂಪನಿಷತ್ತಿನಲ್ಲಿ ಇವುಗಳೆಲ್ಲ ಸ್ಪಷ್ಟಗೊಂಡಿರುವವು. ಗೀತೆಯೂ ಈ ನಾಲ್ಕುಪ್ರಾಣಾಯಾಮುಗಳನ್ನೂ ಉಪದೇಶಿಸಿರುವದು. ಅದರಲ್ಲಿ "अपाने जुह्वति प्राणं" ಎಂಬ ವಾಕ್ಯದಿಂದ ಪೂರಕಪ್ರಾಣಾಯಾಮವು ಸೂಚಿತವಾಗಿರುವದು. ನಿಶ್ವಾಸರೂಪವಾದ ಅಪಾ-

ನವೃತ್ತಿಯಲ್ಲಿ ಉಚ್ಛ್ವಾಸರೂಪವಾದ ಪ್ರಾಣವೃತ್ತಿಯನ್ನು ಹೋಮಮಾಡು-ವದು ಅದರ ಲಕ್ಷಣ. ಎಂದರೆ ಹೊರಗಣ ಗಾಳಿಯನ್ನು ಒಳಕ್ಕೆ ತೆಗೆದು-ಕೊಂಡು ಉಚ್ಛ್ವಾಸರೂಪವಾದ ಪ್ರಾಣವೃತ್ತಿಯನ್ನು ನಿರೋಧಿಸುವದು. **“प्राणेऽपानं तथापरे”** ಎಂಬ ವಾಕ್ಯದಿಂದ ರೇಚಕಪ್ರಾಣಾಯಾಮವು ತೋರು-ವದು. ಉಚ್ಛ್ವಾಸರೂಪವಾದ ಪ್ರಾಣವೃತ್ತಿಯಲ್ಲಿ ನಿಶ್ವಾಸರೂಪವಾದ ಅಪಾನ-ವೃತ್ತಿಯನ್ನು ಹೋಮಮಾಡುವದು ಅದರ ಲಕ್ಷಣ. ಎಂದರೆ ಒಳಗಣ ಗಾಳಿ-ಯನ್ನು ಹೊರಕ್ಕೆ ಬಿಟ್ಟು ನಿಶ್ವಾಸರೂಪವಾದ ಅಪಾನವೃತ್ತಿಯನ್ನು ನಿರೋಧಿ-ಸುವದು. ಇನ್ನು ಬೇರೆ ಬೇರೆ ಇವೆರಡನ್ನೂ ಹೇಳಿರುವದರ ಆಧಾರದ ಮೇಲೆ ಇವೆರಡೂ ಸೇರಿದ ಕುಂಭಕಪ್ರಾಣಾಯಾಮವನ್ನೂ ಹೇಳಿದಂತೆ ಊಹಿಸ-ಬೇಕು. ಈ ಕುಂಭಕವು ಆಂತರಕುಂಭಕ, ಬಾಹ್ಯಕುಂಭಕ ಎಂದು ಎರಡು ಬಗೆ. ಒಳಗಣ ಗಾಳಿಯನ್ನೆಲ್ಲ ಹೊರಕ್ಕೆ ಬಿಟ್ಟು ಒಡನೆ ಹೊರಗಣ ಗಾಳಿ-ಯನ್ನು ಒಳಕ್ಕೆ ತೆಗೆದುಕೊಂಡು ಆ ಮೇಲೆ ಶ್ವಾಸಪ್ರಶ್ವಾಸವನ್ನು ನಿರೋಧ-ಮಾಡಿಬಿಡುವದು ಆಂತರಕುಂಭಕ. ಹೊರಗಣ ಗಾಳಿಯನ್ನು ಒಳಕ್ಕೆ ತೆಗೆದು-ಕೊಂಡು ಒಡನೆ ಒಳಗಣ ಗಾಳಿಯನ್ನೆಲ್ಲ ಹೊರಕ್ಕೆ ಬಿಟ್ಟು ಆಗ ಶ್ವಾಸೋ-ಚ್ಛ್ವಾಸಗಳನ್ನು ತಡೆಯುವದು ಬಾಹ್ಯಕುಂಭಕ. ಪ್ರಾಣಾಯಾಮವು ಅಗರ್ಭ, ಸಗರ್ಭ ಎಂದು ಎರಡು ಬಗೆ. ಮಂತ್ರರಹಿತವಾದುದು ಅಗರ್ಭ, ಮಂತ್ರ-ಸಹಿತವಾದುದು ಸಗರ್ಭ. ವಸಿಷ್ಠಸಂಹಿತೆಯಲ್ಲಿ ಸಗರ್ಭಕ್ಕೆ ಪ್ರಾಶಸ್ತ್ಯ ಹೆಚ್ಚು. ಆದುದರಿಂದ ಯಾವದಾದರೊಂದು ಮಂತ್ರವನ್ನು ಉಸಿರಿಗೆ ಸೇರಿಸಿಕೊಂಡು ಅವುಗಳ ಸಂಖ್ಯೆಯ ಮೇಲೆ ಪ್ರಾಣಾಯಾಮವನ್ನು ಬೆಳಸಿಕೊಳ್ಳುತ್ತ ಹೋಗ-ಬೇಕು. ರೇಚಕಪೂರಕಾದಿಗಳನ್ನೆಲ್ಲ ದೇವತಾಧ್ಯಾನಪೂರ್ವಕವಾಗಿಯೇ ಮಾಡ ತಕ್ಕದ್ದೆಂದು ಧ್ಯಾನಬಿಂದೂಪನಿಷತ್ತಿನಲ್ಲಿ ಉಕ್ತವಾಗಿರುವದು. ಪ್ರಾಣಾ-ಯಾಮವನ್ನು ಯಾವಾಗಲೂ ಸಾವಧಾನದಿಂದ ಮಾಡಬೇಕು; ಇಲ್ಲದಿದ್ದರೆ ಶ್ವಾಸಖಾಸಾದಿ ರೋಗಗಳು ಬರುವ ಸಂಭವವುಂಟು. ಹೀಗೆ ಮಾಡುವ ಪ್ರಾಣಾಯಾಮದಿಂದ ಬೆವರು ಉತ್ಪನ್ನವಾದರೆ ಕನಿಷ್ಠವೆಂದೂ, ಕಂಪನ-ವುಂಟಾದರೆ ಮಧ್ಯಮವೆಂದೂ ನೆಲದಿಂದ ಉತ್ಥಾನವುಂಟಾದರೆ ಉತ್ತಮ-ವೆಂದೂ ತಿಳಿಯಬೇಕೆಂದು ಯಾಜ್ಞ್ಯವಲ್ಕ್ಯರು ಹೇಳಿರುವರು. ಹೀಗೆ ಮೂರು

ಪ್ರಾಣಾಯಾಮಗಳನ್ನು ಹೇಳಿದ ಮೇಲೆ ಗೀತೆಯು "प्राणान्प्राणेषु जुह्वति" ಎಂಬ ವಾಕ್ಯದಿಂದ ನಾಲ್ಕನೆಯದಾದ ಕೇವಲಕುಂಭಕಪ್ರಾಣಾಯಾಮವನ್ನು ವ್ಯಕ್ತಗೊಳಿಸಿರುವದು. ಕೇವಲಕುಂಭಕವೆಂದರೆ ರೇಚಕಪೂರಕಗಳಿಲ್ಲದ ಕುಂಭಕ. ಇದು ಮೂರನೆಯದಾದ ಕುಂಭಕವನ್ನು ಮಾಡಿದ ಅಭ್ಯಾಸಬಲದಿಂದ ತಾನಾಗಿ ಸಿದ್ಧವಾಗುವ ಫಲರೂಪವಾದ ಸ್ಥಿತಿ. ಧಾರಣೆಯೆಂಬ ಯೋಗಾಂಗವನ್ನು ಬರಮಾಡಿಕೊಡುವದು ಇದೆ. ನಿದ್ರಾತಂದ್ರಾದಿ ದೋಷಯುಕ್ತರಿಗೆ ಪೂರಕಾದಿತ್ರಿವಿಧ ಪ್ರಾಣಾಯಾಮಗಳು ಬೇಕಾಗುವವು. ಹಾಗಿಲ್ಲದವರಿಗೆ ಈ ನಾಲ್ಕನೆಯದು ಸಾಕು. ಪ್ರಾಣಗಳಲ್ಲಿ ಜ್ಞಾನೇಂದ್ರಿಯಕರ್ಮೇಂದ್ರಿಯರೂಪಪ್ರಾಣಗಳನ್ನು ಹೋಮಮಾಡುವದು ಇದರ ಲಕ್ಷಣ. ಸರ್ವೇಂದ್ರಿಯಗಳೂ ಪ್ರಾಣಾಧೀನಗಳೆಂದು ವಾಜಸನೇಯಿಗಳು ಹೇಳಿಯೇ ಇರುವರು. ಈ ಪ್ರಾಣಾಯಾಮದಲ್ಲಿ ರೇಚಕಪೂರಕಗಳಿಲ್ಲದೆ ಪ್ರಾಣನಿರೋಧವಾಗಿ, ಸಾರಥಿಯು ಜಗ್ಗಿ ಹಿಡಿದ ಕುದುರೆಗಳ ಹಾಗೆ ಸರ್ವೇಂದ್ರಿಯಗಳೂ ತಟಸ್ಥವಾಗಿ ನಿಲ್ಲುವವು. ಈ ಸ್ಥಿತಿಯು ಸಿದ್ಧವಾಯಿತೆಂಬುದಕ್ಕೆ ಶರೀರ ಕೃಶವಾಗುವದು, ಮುಖವು ಪ್ರಸನ್ನವಾಗುವದು, ಕಣ್ಗಳು ಹೊಳೆಯುವದು, ಆರೋಗ್ಯ, ನಾಡೀಶುದ್ಧಿ, ಅಗ್ನಿಪಟುತ್ವ, ಬಿಂದುಜಯ ಮತ್ತು ನಾದಾನುಸಂಧಾನ ಮೊದಲಾದವೇ ಚಿಹ್ನೆಗಳು. ಸಾಮಾನ್ಯವಾಗಿ ಮನುಷ್ಯನ ನಿಶ್ವಾಸಗತಿಯು ೧೨ ಅಂಗುಲ. ಇದು ಕಡಮೆಯಾಗುತ್ತ ಬಂದ ಹಾಗೆಲ್ಲ ಹೆಚ್ಚು ಹೆಚ್ಚಿನ ಫಲವು ಕಾಣುವದು. ನಿಶ್ವಾಸಗತಿಯು ೧೧ ಆದರೆ ನಿಷ್ಕಾಮತೆ, ೧೦ ಆದರೆ ಆನಂದಪ್ರಾಪ್ತಿ, ೯ ಆದರೆ ಅಲೌಕಿಕ ಕವಿತಾಶಕ್ತಿ, ೮ ಆದರೆ ವಾಕ್ಸಿದ್ಧಿ, ೭ ಆದರೆ ದೂರದೃಷ್ಟಿ, ೬ ಆದರೆ ಆಕಾಶಗಮನ, ೫ ಆದರೆ ಪ್ರಚಂಡವೇಗ, ೪ ಆದರೆ ಅಣಿಮಾದಿಸಿದ್ಧಿ, ೩ ಆದರೆ ನವನಿಧಿಪ್ರಾಪ್ತಿ, ೨ ಆದರೆ ಒಂದೇ ಕಾಲದಲ್ಲಿ ಅನೇಕದೇಹಧಾರಣಮಾಡುವ ಶಕ್ತಿ, ೧ ಆದರೆ ಅವನ ನೆರಳೇ ಇಲ್ಲದ ಹಾಗೆ ಆಗುವದು, ಅದೂ ಇಲ್ಲದ ಹಾಗಾದರೆ ಆವಾಯು ನಖಶಿಖಾಗ್ರಗಳಲ್ಲೆಲ್ಲ ವ್ಯಾಪಿಸಿಕೊಂಡು ಅಮೃತಪಾನಪ್ರಾಪ್ತಿಯಾಗಿ ಅವನಿಗೆ ಅನ್ನನೀರಿನ ಅವಶ್ಯಕತೆ ತಪ್ಪುವದು ಎಂದು ಶಾಸ್ತ್ರದಲ್ಲಿ ಹೇಳಿರುವದು. ಮುಖ್ಯವಾಗಿ ಇದರಿಂದ ಜ್ಞಾನದ ಪ್ರತಿಬಂಧಕವು ಕ್ಷಯವಾಗುವದೆಂದೂ ಧಾರಣವೆಂಬ ಅಂಗಕ್ಕೆ

ಮನಸ್ಸು ಯೋಗ್ಯವಾಗುವದೆಂದೂ ಯೋಗಸೂತ್ರಗಳು ಹೇಳುವವು.

ಪ್ರತ್ಯಾಹಾರವೆಂದರೆ **"स्वविषयासंप्रयोगे चित्तस्वरूपानुकार इवेंद्रियाणां प्रत्याहारः"** ಎಂಬ ಯೋಗಸೂತ್ರದಂತೆ ಶಬ್ದಾದಿ ವಿಷಯಗಳಿಂದ ಹಿಮ್ಮುಖವಾದ ಮನಸ್ಸನ್ನು ಹಿಂಬಾಲಿಸಿ ಇಂದ್ರಿಯಗಳೂ ವಿಷಯಗಳ ಸಂಪರ್ಕವನ್ನು ಬಿಟ್ಟು ಹಿಂದಿರುಗುವದೇ ಪ್ರತ್ಯಾಹಾರ. ಒಂದೇ ಮಾತಿನಲ್ಲಿ ಹೇಳಬೇಕೆಂದರೆ ಪ್ರತ್ಯಾಹಾರವೆಂದರೆ ಯೋಗಿಯು ಅಂತರ್ಮುಖನಾಗುವದು. ಪ್ರತ್ಯಾಹಾರಧಾರಣಾಧ್ಯಾನಸಮಾಧಿಗಳು ಅಂತರಂಗಸಾಧನಗಳಾಗಿದ್ದು ಆಯಾ ಅಧಿಕಾರಿಗಳಿಗೆ ಮಾತ್ರ ತಿಳಿಯಬಹುದಾದುದರಿಂದ ಇಲ್ಲಿ ಅವುಗಳ ವಿಚಾರವೂ ಸಂಕ್ಷಿಪ್ತವಾಗಿ ಮಾಡಲ್ಪಡುವದು. ಯಾರ ಮನಸ್ಸು ಸ್ವಭಾವಸಿದ್ಧವಾಗಿ ಈ ಪ್ರತ್ಯಾಹಾರಕ್ಕೆ ತಕ್ಕದ್ದಾಗಿಯೇ ಇರುವದೊ ಅವರು ಪ್ರಾಣಾಯಾಮವನ್ನು ಮಾಡಬೇಕಾದ ಅವಶ್ಯಕವಿಲ್ಲ. ಅವರು ಯೋಗವನ್ನು ಪ್ರತ್ಯಾಹಾರದಿಂದಲೆ ಆರಂಭಿಸಬಹುದು. **इंद्रियेभ्यः परं मनः** ಎಂಬ ಗೀತೋಕ್ತಿಯಂತೆ ಮನಸ್ಸು ಇಂದ್ರಿಯಗಳಿಗೆಲ್ಲ ರಾಜನು. ಜೇನ್ನೊಣಗಳಲ್ಲಿ ರಾಜನಾದುದು ಒಂದು ಹೂವಿನ ಮೇಲೆ ಕುಳಿತರೆ ಎಲ್ಲವೂ ಅಲ್ಲಿಯೇ ಕುಳಿತುಕೊಳ್ಳುವವು. ಆ ಅರಸುಜೇನ್ನೊಣವು ಇನ್ನೊಂದಕ್ಕೆ ಹಾರಿಹೋದರೆ ಉಳಿದ ನೊಣಗಳೂ ಅದರ ಬೆನ್ನುಹಿಡಿದು ಹೋಗುವವು. ಹಾಗೆಯೇ ಮನಸ್ಸು ವಿಷಯಗಳ ಕಡೆಗೆ ಹೋದರೆ ಇಂದ್ರಿಯಗಳೂ ಅದರ ದಾರಿಯನ್ನೇ ಹಿಡಿಯುವವು. ಅದು ಅಲ್ಲಿಂದ ಹಿಂದಿರುಗಿದರೆ ಅವೂ ಬಸವನ ಹಿಂದಿನ ಬಾಲದಂತೆ ಹಿಂದಕ್ಕೆ ಬರುವವು. ಮನಸ್ಸು ಇಂದ್ರಿಯಗಳ ಬೆನ್ನುಹಿಡಿದು ಹೋದರೆ

"तदस्य हरति प्रज्ञां वायुर्नावमिवांभसि ॥"

ಎಂಬ ಗೀತೋಕ್ತಿಯಂತೆ ಅವನ ಬುದ್ಧಿಯು ವಾಯುವಿನಿಂದ ಹಡಗು ನಾಶವಾಗುವ ಹಾಗೆ ವಿಕ್ಷೇಪವನ್ನು ಪಡೆದು ನಾಶವಾಗುವದು. ಹಡಗನ್ನು ಹತ್ತಿ ಸಮುದ್ರಮಾರ್ಗದಿಂದ ದ್ವೀಪಾಂತರಕ್ಕೆ ಹೋಗುವವರಿಗೆ ವಾಯು ಪ್ರತಿಕೂಲವಾದಾಗ ನಾವಿಕನು ಸಾವಧಾನದಿಂದ ನೌಕಾಬಂಧವನ್ನು ಬಿಗಿಮಾಡಿಕೊಂಡು

ಅದನ್ನು ಕಾಪಾಡುವನು. ಆನಾವಿಕನು ದುರ್ದೈವದಿಂದ ಯಾವಾಗಲಾದರೂ ಪ್ರತಿಕೂಲವಾಯುವಿನ ಓಘವನ್ನು ಅನುಸರಿಸಿಯೆ ಹಡಗನ್ನು ನಡೆಸಿದರೆ ಆಗ ಆವಾಯು ಆಹಡಗನ್ನು ಸಮುದ್ರದಲ್ಲಿ ಅತ್ತ ಇತ್ತ ತಿರುಗಿಸಿ ನಾಶಮಾಡಿಬಿಡುವದು. ಹಾಗೆ ಸಂಸಾರಸಮುದ್ರದಲ್ಲಿ ಪ್ರಜ್ಞೆಯೆಂಬ ಹಡಗನ್ನು ಆಶ್ರಯಿಸಿ ಪಾರಾಗಬೇಕೆಂದು ಹೊರಟಿರುವವರಿಗೆ ಇಂದ್ರಿಯಗಳೆಂಬ ಪ್ರತಿಕೂಲವಾಯು ಪ್ರತಿಭಟಿಸಿದಾಗ ಮನಸ್ಸೆಂಬ ನಾವಿಕನು ಪರಮೇಶ್ವರ ಸಂಬಂಧವನ್ನು ದೃಢಮಾಡಿಕೊಳ್ಳದೆ ಇಂದ್ರಿಯಗಳನ್ನೇ ಅನುಸರಿಸಿದರೆ ಆ ಇಂದ್ರಿಯಗಳೆಂಬ ವಾಯು ಪ್ರಜ್ಞೆಯೆಂಬ ಹಡಗನ್ನು ಅತ್ತ ಇತ್ತ ಅಲೆದಾಡಿಸಿ ನಾಶಮಾಡುವದು. ಆದುದರಿಂದ

"यदा संहरते चायं कूर्मोऽङ्गानीव सर्वशः ।
इंद्रियाणींद्रियार्थेभ्यस्तस्य प्रज्ञा प्रतिष्ठिता ॥"

ಎಂಬ ಗೀತೋಕ್ತಿಯಂತೆ ಇಂದ್ರಿಯನಿಗ್ರಹವನ್ನು ಮಾಡದಿದ್ದರೆ ಪ್ರಜ್ಞೆಗೆ ಕ್ಷೇಮವಿಲ್ಲ. ಯಾರ ಇಂದ್ರಿಯಗಳು ಆಮೆಯ ಅವಯವಗಳಂತೆ ವಿಷಯಗಳಿಂದ ಹಿಮ್ಮುಖವಾಗುವವೊ ಅವನ ಪ್ರಜ್ಞೆಯೇ ಸ್ಥಿರವಾಗುವದು. ಇಂದ್ರಿಯಗಳನ್ನು ಹಿಮ್ಮೆಟ್ಟಿಸಬೇಕಾದರೆ ಮನಸ್ಸನ್ನು ಹಿಂದಕ್ಕೆ ತರಬೇಕು. ಮನಸ್ಸನ್ನು ಹಿಂದಕ್ಕೆ ತರಬೇಕಾದರೆ

"यतो यतो निश्चलति मनश्चंचलमस्थिरम् ।
ततस्ततो नियम्यैतदात्मन्येव वशं नयेत् ॥"

ಎಂಬ ಗೀತೋಕ್ತಿಯಂತೆ ಮನಸ್ಸು ರೂಪರಸಾದಿಗಳನ್ನು ಬಯಸಿ ಯಾವಾಗ ಹರಿದುಹೋಗುತ್ತದೊ ಮತ್ತು ನಿದ್ರಾಶೇಷ, ಅತ್ಯಾಹಾರ, ಮತ್ತು ಅತಿಶ್ರಮ ಇವುಗಳಿಂದ ಲಯಹೊಂದುವದಕ್ಕೆ ಹೋಗುತ್ತದೊ ಆಗ ಅದು ಹರಿದುಹೋಗದಂತೆ ಮತ್ತು ಲಯಹೊಂದದಂತೆ ತಡೆದುಕೊಳ್ಳಬೇಕು. **"ततः परमा वश्यतेंद्रियाणां"** ಎಂಬ ಯೋಗಸೂತ್ರದಂತೆ ಇಂದ್ರಿಯಗಳೆಲ್ಲ ವಶ-

ವಾಗುವದೇ ಪ್ರತ್ಯಾಹಾರಸಿದ್ಧಿಯ ಲಕ್ಷಣ.

ಪ್ರತ್ಯಾಹಾರವಾದ ಮೇಲೆ ಧಾರಣ. **"देशबंधश्चित्तस्य धारणं"** ಎಂಬ ಯೋಗಸೂತ್ರದಂತೆ ಧಾರಣವೆಂದರೆ ಮನಸ್ಸನ್ನು ಒಂದು ಸ್ಥಾನದಲ್ಲಿ ನೆಲೆಗೊಳಿಸುವದು. ಕಂಡಕಂಡವರ ಹೊಲಗದ್ದೆಗಳನ್ನು ಮೇಯುವದಕ್ಕೆ ಹೋಗುವ ತುಡುಗುದನವನ್ನು ತಿರುಗಿಸಿ ಹಿಡಿದುಕೊಂಡು ಬಂದಮೇಲೆ ಅದನ್ನು ಒಂದು ಗೂಟಕ್ಕೆ ಕಟ್ಟಿಹಾಕುವದು ಹೇಗೆ ಅವಶ್ಯಕವೊ ಹಾಗೆ ವಿಷಯಗಳ ಕಡೆಯಿಂದ ಸೆಳೆದು ತಂದ ಮನಸ್ಸು ನಿಲ್ಲುವದಕ್ಕೆ ಒಂದು ಅವಲಂಬನೆಯನ್ನು ಕೊಡಬೇಕು. **"मय्येव मन आधत्स्व"** ಎಂಬ ಗೀತೋಕ್ತಿಯಂತೆ ಪರಮಾತ್ಮಸ್ವರೂಪದಲ್ಲಿ ಮನಸ್ಸನ್ನು ನಿಲ್ಲಿಸಬೇಕು. ಸಾಮಾನ್ಯವಾಗಿ ಶಾಲಗ್ರಾಮ, ಶಿವಲಿಂಗ, ಸೂರ್ಯಮಂಡಲ ಮೊದಲಾದ ವಿಗ್ರಹಗಳಲ್ಲಿ ಮನಸ್ಸು ನಿಲ್ಲಿಸುವದೂ ಒಂದು ಬಗೆಯ ಧಾರಣ. ಹೀಗೆ ಕೆಲವು ಕಾಲ ಅಭ್ಯಾಸಮಾಡಿದ ಮನಸ್ಸನ್ನು ಕ್ರಮಕ್ರಮವಾಗಿ ಮನಸ್ಸಿನಿಂದಲೇ ಕಲ್ಪನೆಮಾಡಿದ ಇಷ್ಟದೇವತಾಮೂರ್ತಿಯಲ್ಲಿ ನೆಲೆಗೊಳಿಸಬೇಕು.

"विलाप्य विकृतीं कृत्स्नां संभवव्यत्ययक्रमात् ।
परिशिष्टं च सन्मात्रं चिदानंदं विचिंतयेत् ॥"

ಎಂದು ಸರ್ವಾನುಭವಯೋಗಿಗಳು ಹೇಳಿರುವಂತೆ ನಾಮರೂಪಾತ್ಮಕವಾದ ಸರ್ವವನ್ನೂ ಮರೆತು ಅದರ ಸ್ಥಾನದಲ್ಲಿ ಸರ್ವಾಧಿಷ್ಠಾನಭೂತವಾದ ಪರಮಾತ್ಮಸ್ವರೂಪವನ್ನು ಅನುಸಂಧಾನಮಾಡುವದು ಉತ್ತಮಧಾರಣ. ಇನ್ನು ಧ್ಯಾನವೆಂದರೆ **"तत्र प्रत्ययैकतानता ध्यानम्"** ಎಂಬ ಯೋಗಸೂತ್ರದಂತೆ ಮನಸ್ಸಿನ ವೃತ್ತಿಯು ಯಾವ ವಸ್ತುವನ್ನು ಧಾರಣಮಾಡಿರುವದೊ ಆ ವೃತ್ತಿಯು ತೈಲಧಾರೆಯಂತೆ ಏಕಪ್ರಕಾರವಾಗಿರುವದು ಧ್ಯಾನ. **"तत्रैकाग्रं मनः कृत्वा"** ಎಂದೂ

"मनस्संयम्य मच्चित्तो युक्त आसीत मत्परः"

ಎಂದೂ ಗೀತೆಯಲ್ಲಿ ಹೇಳಿರುವಂತೆ ನಿಗ್ರಹಿಸಿದ ಮನಸ್ಸನ್ನು ಏಕಮುಖವಾಗಿ

ಮಾಡಿ ಧ್ಯೇಯಾಕಾರವೃತ್ತಿಯನ್ನೇ ಬೆಳಸಿಕೊಳ್ಳುವದರಿಂದ

"विषयान्ध्यायतो चित्तं विषयेषु विषज्जते ।
मामनुस्मरतश्चित्तं मय्येव प्रविलीयते ॥"

ಎಂದು ಶ್ರೀಮದ್ಭಾಗವತದಲ್ಲಿ ಹೇಳಿರುವಂತೆ ವಿಷಯಗಳನ್ನು ಧ್ಯಾನಿಸುವ ಮನಸ್ಸು ವಿಷಯಗಳಲ್ಲಿ ಅತ್ಯಂತಸಕ್ತವಾಗುವ ಹಾಗೆ ಪರಮಾತ್ಮನನ್ನೇ ಧ್ಯಾನಿಸುವ ಮನಸ್ಸು ಪರಮಾತ್ಮನಲ್ಲಿಯೇ ಲೀನವಾಗುವದಕ್ಕೆ ಹೋಗುವದು. ಈ ಧ್ಯಾನವು ಬಲಿಯುವದಕ್ಕೆ ಲಯ, ವಿಕ್ಷೇಪ ಮತ್ತು ಕಷಾಯಗಳೆಂಬ ಮೂರು ಪ್ರಬಲಪ್ರತಿಬಂಧಕಗಳಿರುವವು. ಆಲಸ್ಯನಿದ್ರಾದಿಗಳಿಂದ ವೃತ್ತಿ ಇಲ್ಲದೆ ಇರುವದು ಲಯ. ವೃತ್ತಿಯು ಬಾಹ್ಯವಿಷಯಾಕಾರವಾಗುವದಕ್ಕೆ ಕುತೂಹಲಪಡುವದು ವಿಕ್ಷೇಪ. ಕಷಾಯವೆಂದರೆ ಮನಸ್ಸು ಅಂತರ್ಮುಖವಾದರೂ ಧ್ಯೇಯಾಕಾರವಾಗದೆ ಇರುವಂಥ ಸಂಸ್ಕಾರದೋಷ. ಸ್ತ್ರೀಪುತ್ರಾದಿಗಳ ಯೋಚನೆಯೂ ಮತ್ತು ಸ್ವವಿಷಯಕವಾದ ಭೂತಭವಿಷ್ಯನ್ಮನೋರಾಜ್ಯವೂ ಕಷಾಯವೆನಿಸುವವು. ಲಯವೆಂಬ ದೋಷವು ತಲೆಹಾಕುವದಕ್ಕೆ ಬರುತ್ತಲೆ ಅದನ್ನು ಎಚ್ಚರಗೊಳಿಸಬೇಕು. ಇದನ್ನು ಶ್ರೀಗೌಡಪಾದರು ಚಿತ್ತಸಂಬೋಧನವೆಂದು ಕರೆದಿದ್ದಾರೆ. ವಿಕ್ಷೇಪವೆಂಬ ದೋಷವು ಜಗ್ಗಿದರೆ ವಿಷಯಗಳಲ್ಲಿ ದೋಷದೃಷ್ಟಿಯನ್ನು ಮಾಡಿ ಮನಸ್ಸನ್ನು ಹೊರಕ್ಕೆ ಹೋಗಗೊಡದೆ ಇರಬೇಕು. ಇದನ್ನು ಗೌಡಪಾದರು ಶಮವೆಂದು ಕರೆದಿದ್ದಾರೆ. ಕಷಾಯದೋಷವು ಉದ್ಭೂತವಾದಾಗ ವಿಚಾರದಿಂದ ಅದನ್ನು ಹಿಮ್ಮೆಟ್ಟಿಸಬೇಕು ಯೋಗಿಯು ಈ ಮೂರು ಪ್ರತಿಬಂಧಕಗಳನ್ನು ಕಳೆದುಕೊಂಡು ತನ್ನ ಧ್ಯಾನವನ್ನು ಸಾಗಿಸಬೇಕು.

"मनसश्चेन्द्रियाणांचाप्यैकाग्र्यं परमं तपः ।
तज्ज्यायः सर्वधर्मेभ्यः स धर्मः पर उच्यते ॥"

ಎಂಬ ಸ್ಮೃತಿವಚನದಂತೆ ಧ್ಯಾನವೇ ಪರಮತಪಸ್ಸು; ಅದೇ ಸರ್ವೋತ್ಕೃಷ್ಟವಾದ ಧರ್ಮ. ಈ ಧ್ಯಾನವು ಜ್ಞಾನಕ್ಕೆ ಸಾಕ್ಷಾತ್ಸಾಧನವಾದ ನಿಧಿಧ್ಯಾಸ-

ರೂಪವಾಗಿರುವದು. ಸಾಧನಪ್ರಕರಣವು ಧ್ಯಾನಾಂಗಕ್ಕೆ ಮುಗಿಯಿತೆಂದು ಹೇಳಬೇಕು. ಧ್ಯಾನದ ಮುಂದೆ ಸಮಾಧಿಯೆಂಬ ಇನ್ನೊಂದಂಗವಿದ್ದರೂ ಅಮಾನಿತ್ವಾದಿ ಜ್ಞಾನಸಾಧನಗಳನ್ನೇ ಜ್ಞಾನವೆಂದು ಹೇಳಿದ ಹಾಗೆ ಸಮಾಧಿ ಸಾಧನವಾದ ಧ್ಯಾನವನ್ನೇ ಸವಿಕಲ್ಪಸಮಾಧಿ ಅಥವಾ ಸಂಪ್ರಜ್ಞಾತಸಮಾಧಿಯೆಂದು ಹೇಳುವರು. ಸವಿಕಲ್ಪವೆಂದರೆ ನನ್ನ ಮನಸ್ಸಿನ ವೃತ್ತಿಯು ಧ್ಯೇಯಾಕಾರವಾಗಿರುವದೆಂಬ ಭಾಸವಿರುವದು. ಈ ಸ್ಥಿತಿಯಲ್ಲಿ ಯೋಗಿಗೆ ನಿಜಾನಂದದ ವಾಸನೆ ಹಿಡಿಯುವದು. ಈ ಧ್ಯಾನವು ಬಲಿಯುತ್ತ ಬಲಿಯುತ್ತ ಕೊನೆಗೆ ಧ್ಯೇಯಾಕಾರಮಾತ್ರವಾಗಿ ಉಳಿದುಕೊಳ್ಳುವದು. ಈ ಸ್ಥಿತಿಯನ್ನೆ **"तदेवार्थमात्र निर्भासं स्वरूपशून्यमिव समाधिः"** ಎಂಬ ಯೋಗಸೂತ್ರವು ಸಮಾಧಿಯೆಂದು ಕರೆಯುವದು.

"तदैवमात्मन्यवरुद्धचित्तो
न वेद किंचिद्बहिरंतरं वा ।
यथेषुकारो नृपतिंव्रजंत
मीषौ गतात्मा न ददर्श पार्श्वे ॥"

ಎಂದು ಶ್ರೀಮದ್ಭಾಗವತದಲ್ಲಿ ಹೇಳಿರುವಂತೆ— ಬಾಣದ ಗುರಿಯಲ್ಲಿಯೇ ಲಕ್ಷ್ಯವನ್ನಿಟ್ಟವನಿಗೆ ಮಗ್ಗಲಲ್ಲಿ ಹೋಗುವ ಅರಸನು ಕೂಡ ಕಾಣದಂತೆ ಏಕಾಗ್ರಮನಸ್ಕನಾದ ಆ ಯೋಗಿಗೆ ಒಳಗೂ ಹೊರಗೂ ಏನೂ ಕಾಣುವದಿಲ್ಲ.

"शनैः शनैरुपरमेद्बुध्या धृतिगृहीतया ।
आत्मसंस्थं मनः कृत्वा न किंचिदपि चिंतयेत् ॥"

ಎಂಬ ಗೀತೋಕ್ತಿಯಂತೆ ಯೋಗಿಯು ಸಾತ್ವಿಕಧೃತಿಯಿಂದ ಮನಸ್ಸನ್ನು ಕ್ರಮಕ್ರಮವಾಗಿ ನಿರೋಧಿಸಿ ವೃತ್ತಿಶೂನ್ಯವಾಗಿ ಮಾಡಬೇಕು. ವೃತ್ತಿಯು ಅನಾತ್ಮಾಕಾರವಾದರಂತು ಮನಸ್ಸಿಗೆ ವಿಕ್ಷೇಪವೇ ಆಗುವದು; ಆತ್ಮಾಕಾರವಾದರೆ ಸಂಪ್ರಜ್ಞಾತಸಮಾಧಿಮಾತ್ರವಾಗುವದು. ಅಸಂಪ್ರಜ್ಞಾತಸಮಾಧಿ-

ಯಲ್ಲಿ ವೃತ್ತಿ ಇರುವದಿಲ್ಲ. ಆತ್ಮನು ವೃತ್ತಿವಿಷಯನಲ್ಲ. ಅನಾತ್ಮಕಾರವೃತ್ತಿ-ಯನ್ನು ನಿಶ್ಶೇಷಮಾಡುವದಕ್ಕಾಗಿಯೇ ಸಮಾಧಿಯ ಅಭ್ಯಾಸವೆಂದು ಶ್ರೇಯೋ-ಮಾರ್ಗದಲ್ಲಿ ಹೇಳಿರುವದು.

"यदा विनियतं चित्तमात्मन्येवाऽवतिष्ठते ।
निःस्पृहः सर्वकामेभ्यो युक्त इत्युच्यते तदा ॥"

ಎಂಬ ಗೀತೋಕ್ತಿಯಂತೆ ಯಾವಾಗ ವೃತ್ತಿಶೂನ್ಯತೆಯನ್ನು ಪಡೆದ ಮನಸ್ಸು ರಜಸ್ತಮೋಗುಣಗಳಿಂದ ರಹಿತವಾಗಿ ಅತಿಸ್ವಚ್ಛವಾಗಿ ಆತ್ಮಸ್ವರೂಪದಲ್ಲಿ ಸ್ಥಿರ-ವಾಗುವದೊ ಆಗ ಅವನಿಗೆ ಯೋಗಸಿದ್ಧಿಯಾಯಿತೆಂದು ತಿಳಿಯಬೇಕು. ಯಮನಿಯಮಾದಿಸಾಧನಗಳಿಂದ ಇದುವರಿಗೆ ಅವನಿಗೆ ಇದ್ದದ್ದು ಇಂದ್ರಿಯ ಭೋಗಗಳನ್ನು ಬಯಸದಿರುವ ಅಪರವೈರಾಗ್ಯ. ಈಗ ಪ್ರಾಪಂಚಿಕವಾದ ಸರ್ವವ್ಯವಹಾರದಲ್ಲಿಯೂ ವಿರಕ್ತಿಯುಂಟಾಗಿ ಪರವೈರಾಗ್ಯವು ಸಿದ್ಧಿಸುವದು.

"विषया विनिवर्तन्ते निराहारस्य देहिनः ।
रसवर्जं रसोऽप्यस्य परं दृष्ट्वा निवर्तते ॥"

ಎಂಬಂತೆ ಯೋಗಿಯು ಇದುವರಿಗೆ ವಿಷಯಗಳನ್ನು ತನ್ನ ಪ್ರಯತ್ನದಿಂದ ಹಿಮ್ಮೆಟ್ಟಿಸಿದ್ದನು. ಅವುಗಳ ಅಭಿಲಾಷೆಯು ಅವನಿಗೆ ಹೋಗಿರಲಿಲ್ಲ. ಸಮಾಧಿಸುಖವು ಅನುಭವಕ್ಕೆ ಬರುತ್ತಲೆ ಆಅಭಿಲಾಷೆಯು ಕೂಡ ನಿರ್ಬೀ-ಜವಾಗಿ ಹೋಗುವದು.

"यत्तदग्रे विषमिव परिणामेऽमृतोपमम् ।
तत्सुखं सात्त्विकं प्रोक्तमात्मबुद्धिप्रसादजम् ॥"

ಎಂಬ ಭಗವದಭಿಪ್ರಾಯದಂತೆ ಜ್ಞಾನ, ವೈರಾಗ್ಯ, ಧ್ಯಾನ ಮತ್ತು ಸಮಾಧಿ-ಗಳ ಅಭ್ಯಾಸಕಾಲದಲ್ಲಿ ಅತ್ಯಂತಾಯಾಸಕರವಾಗಿದ್ದು ಜ್ಞಾನವೈರಾಗ್ಯಾದಿಗಳ ಪರಿಪಾಕಸ್ಥಿತಿಯಲ್ಲಿ ಅಮೃತೋಪಮವಾದ ಮತ್ತು ಆತ್ಮವಿಷಯಕವಾದ

ಬುದ್ಧಿಯ ಸ್ವಚ್ಛಸ್ಥಿತಿಯ ಫಲರೂಪವಾದ ಸಮಾಧಿಸುಖವು ಕೇವಲ ಸಾತ್ತ್ವಿಕವು.

"यं लब्ध्वा चापरं लाभं मन्यते नाधिकं ततः ।
यस्मिन् स्थितो न दुःखेन गुरुणापि विचाल्यते ॥"

ಎಂಬ ಗೀತೋಕ್ತಿಯಂತೆ ನಿರತಿಶಯವಾದ ಆತ್ಮಸುಖವನ್ನು ಅನುಭವಕ್ಕೆ ತಂದುಕೊಡುವ ವೃತ್ತಿಶೂನ್ಯವಾದ ಮನಃಸ್ಥಿತಿಯನ್ನು ಪಡೆದ ಮೇಲೆ ಆವನಿಗೆ ವಿಷಯಭೋಗವಾಸನೆಯು ಕಾಟವಿರುವದಿಲ್ಲ. ಆ ಸುಖಸ್ಥಿತಿಯಲ್ಲಿರುವ ಯೋಗಿಯು ಶೀತವಾತಾದಿಮಹದ್ದುಃಖದಿಂದಲೂ ಕೂಡ ಕದಲುವದಿಲ್ಲ.

"समाधिनिर्धूतमलस्य चेतसो
निवेशितस्यात्मनि यत्सुखं भवेत् ।
न शक्यते वर्णयितुं गिरा तदा
स्वयं तदंतःकरणेन गृह्यते ॥"

ಎಂಬ ಶ್ರುತಿಯಂತೆ ಸಮಾಧಿಸುಖವು ಅನುಭವೈಕವೇದ್ಯವೇ ಹೊರತು ಆಡಿ-ತೋರಿಸುವದಕ್ಕೆ ಬರತಕ್ಕದ್ದಲ್ಲ. ಧಾರಣಾಧ್ಯಾನಸಮಾಧಿಗಳಿಗೆ ಒಂದೊಂದಕ್ಕೆ ಭೇದವೇನೂ ಇಲ್ಲ. ಧಾರಣೆಯು ಬೆಳೆದರೆ ಧ್ಯಾನ; ಧ್ಯಾನವು ಬೆಳೆದರೆ ಸಮಾಧಿ. ಧ್ಯಾನಕ್ಕೂ ಸಮಾಧಿಗೂ ಮುಖ್ಯಭೇದವೇನೆಂದರೆ ಧ್ಯಾನದಲ್ಲಿ ಮನಸ್ಸು ನಿರ್ಬಂಧಕ್ಕೊಳಪಟ್ಟು ಆತ್ಮಾಕಾರವಾಗಿರುವದು; ಸಮಾಧಿಯಲ್ಲಿ ಸಹಜವಾಗಿ ಆತ್ಮಸ್ವರೂಪದಿಂದಿರುವದು.

ಅರ್ಜುನನಂಥ ಸಾಧಕನು ಯೋಗೇಶ್ವರನಾದ ಪರಮಾತ್ಮನಿಂದ ಈ ಯೋಗರಹಸ್ಯವನ್ನು ಗ್ರಹಿಸಿ ಕೊನೆಗೆ ಇದನ್ನು ಸಾಧಿಸುವ ವಿಷಯದಲ್ಲಿ ತನ್ನಲ್ಲಿ ತನಗೇ ಭರವಸವಿಲ್ಲದೆ

"चंचलं हि मनः कृष्ण प्रमाथि बलवद्दृढम् ।
तस्याहं निग्रहं मन्ये वायोरिव सुदुष्करम् ॥"

ಎಂಬ ಶ್ಲೋಕದಿಂದ ಪರಮಾತ್ಮನನ್ನು ಸಂಬೋಧನೆಮಾಡಿ ಮನಸ್ಸನ್ನು ನಿಗ್ರಹಿಸುವದು ಗಾಳಿಯನ್ನು ಮೂಟೆಕಟ್ಟುವಷ್ಟು ಅಸಾಧ್ಯವಾದುದೆಂದು ಹೇಳಿದಾಗ ಪರಮಾತ್ಮನು

"अभ्यासेन तु कौंतेय वैराग्येण च गृह्यते"

ಎಂಬ ಮಾತಿನಿಂದ ವೈರಾಗ್ಯದಿಂದಲೂ ಅಭ್ಯಾಸದಿಂದಲೂ ಸಾಧಿಸಬೇಕೆಂದು ಹೇಳಿದ್ದಾನೆ. ಈ ಸಂದರ್ಭದಲ್ಲಿ ಮನೋನಿಗ್ರಹದ ಅಭ್ಯಾಸಕ್ಕೆ ಶ್ರೀಗೌಡ-ಪಾದರು ಹೇಳಿರುವ ಮಾತು ಚೆನ್ನಾಗಿ ಒಪ್ಪುತ್ತದೆ. ಅದೇನೆಂದರೆ

"उत्सेक उदधेर्यद्वत्कुशाग्रेणैकबिंदुना ।
मनसो निग्रहस्तद्वद्भवेदपरिखेदतः॥"

ದರ್ಭೆಯತುದಿಯಿಂದ ಒಂದೊಂದು ಹನಿಯನ್ನೆತ್ತುತ್ತ ಸಮುದ್ರವನ್ನೇ ಶೋ-ಷಿಸುವಂತೆ ಬೇಸರವಿಲ್ಲದೆ ಮನೋನಿಗ್ರಹವನ್ನು ಮಾಡಬೇಕೆಂದು ಅದರ ಅರ್ಥ. ಈ ಪ್ರಸಂಗದಲ್ಲಿ ಸಂಪ್ರದಾಯವಿದರು ಒಂದು ಕಥೆಯನ್ನು ಹೇಳು-ವರು. ಸಮುದ್ರತೀರದಲ್ಲಿ ಒಂದು ವೃಕ್ಷವಿತ್ತು. ಅದರ ಮೇಲೆ ಒಂದು ಪಕ್ಷಿಯು ಸಂಸಾರಮಾಡಿಕೊಂಡಿದ್ದು ಮೊಟ್ಟೆಗಳನ್ನಿಡುತ್ತಿತ್ತು. ಸಮುದ್ರದ ಅಲೆಗಳು ಬಂದು ಆ ಮೊಟ್ಟೆಗಳನ್ನು ಕೊಚ್ಚಿಕೊಂಡು ಹೋಗುತ್ತಿದ್ದವು. ಇದನ್ನು ಕಂಡು ಉದ್ವಿಗ್ನವಾದ ಆ ಪಕ್ಷಿಯು ಸಮುದ್ರವನ್ನೆ ಶೋಷಿಸಿಬಿಡ-ಬೇಕೆಂದು ತನ್ನ ಚಂಚುವಿನಿಂದ ಸಮುದ್ರದ ನೀರನ್ನು ಎತ್ತಿಹಾಕುವದಕ್ಕಾ-ರಂಭಿಸಿತು. ತನಗೆ ಅದು ಬಹುಮಹತ್ತಾಗಿ ಕಾಣುತ್ತಲೆ ಅದು ತನ್ನ ಕುಟುಂ-ಬದ ಇತರ ಪಕ್ಷಿಗಳನ್ನೂ ಜೊತೆಗೆ ಸೇರಿಸಿಕೊಂಡು ಎಡೆಬಿಡದೆ ಆಕಾರ್ಯ-ವನ್ನು ನಡೆಸುತ್ತಿತ್ತು. ಇದನ್ನು ಕಂಡು ಪರಮಕಾರುಣಿಕರಾದ ನಾರದರು ಪಕ್ಷಿರಾಜನಾದ ಗರುಡನಿಗೆ ಈ ಸಂಗತಿಯನ್ನು ತಿಳಿಸಿ ಜಾತಿವಾತ್ಸಲ್ಯದಿಂದ

ಆ ಬಡಹಕ್ಕಿಗ ನೆರವಾಗುವಂತೆ ಪ್ರೇರಿಸಿದರು. ಮಹಾಬಲಶಾಲಿಯಾದ ಗರುಡನು ಪ್ರಚಂಡವೇಗದಿಂದ ಹೊರಟು ತನ್ನ ಪಕ್ಷಗಳನ್ನು ವೀರಾವೇಶದಿಂದ ಬಡಿಯುತ್ತ ಬರುತ್ತಲೆ ಸಮುದ್ರವು ಹೆದರಿ ತಳಮಳಿಸಿ ಆ ಬಡಹಕ್ಕಿಯ ಮೊಟ್ಟೆಗಳನ್ನೆಲ್ಲ ತಂದುಕೊಟ್ಟಿತಂತೆ. ಹೀಗೆ

"स निश्चयेन योक्तव्यो योगोऽनिर्विण्णचेतसा ॥"

ಎಂಬ ಗೀತೋಕ್ತಿಯಂತೆ ಯೋಗವನ್ನು ಸಾಧಿಸಿಯೇ ಬಿಡುವೆನೆಂಬ ದೃಢನಿಶ್ಚಯದಿಂದ ಬೇಸರವಿಲ್ಲದೆ ಕಾರ್ಯವು ಕೈಗೂಡುವವರಿಗೂ ಮಾಡುತ್ತಲೆ ಇರಬೇಕು. ಒಂದೆರಡುದಿನ ಒಂದೆರಡು ಪ್ರಾಣಾಯಾಮವನ್ನು ಮಾಡಿ ಇನ್ನೂ ಸಮಾಧಿ ಬರಲಿಲ್ಲವೆಂದು ಕನವರಿಸಿಕೊಂಡರೆ ಪ್ರಯೋಜನವಿಲ್ಲ. ಒಬ್ಬಗೃಹಸ್ಥನು ತನ್ನ ಮಗನನ್ನು ವೇದಗಳನ್ನೆಲ್ಲ ಕಲಿತುಕೊಂಡು ಬರುವದಕ್ಕೆ ಪರಸ್ಥಳಕ್ಕೆ ಕಳುಹಿಸಿ ಐದನೆಯ ದಿನವೇ "ವೇದಗಳು ನಾಲ್ಕೇ ನಾಲ್ಕು. ನನ್ನ ಮಗನು ಐದು ದಿನಗಳಾದರೂ ಏಕೆ ಸರ್ವಜ್ಞನಾಗಿ ಬರಲಿಲ್ಲ?" ಎಂದು ಹಂಬಲಿಸಿದನಂತೆ. ಯೋಗಸಿದ್ಧಿಯು ಅವಸರಕ್ಕೆ ಆಗುವ ಕೆಲಸವಲ್ಲ. ಅದು

"अनेकजन्मसंसिद्धस्ततो याति परां गतिं"

ಎಂಬ ಗೀತೋಕ್ತಿಯಂತೆ ಅನೇಕಜನ್ಮಗಳ ಸಾಧನಪ್ರಭಾವದಿಂದ ಸಿದ್ಧವಾಗಬೇಕು. ಒಂದು ಜನ್ಮದ ಅಭ್ಯಾಸಬಲದಿಂದಲೇ ಯೋಗವು ಸಾಧಿಸದೆ ಹೋದರೂ ಅವನು ಆ ಜನ್ಮದಲ್ಲಿ ಮಾಡಿದ ಸಾಧನವು ಎಂದಿಗೂ ವ್ಯರ್ಥವಾಗುವದಿಲ್ಲವೆಂದೂ ಮರಣಾನಂತರದಲ್ಲಿ ಅವನು ದೀರ್ಘಕಾಲ ಪುಣ್ಯಲೋಕಗಳಲ್ಲಿ ಸುಖಾನುಭವವನ್ನು ಮಾಡಿ ಶ್ರೀಮಂತರ ವಂಶದಲ್ಲಿ ಅಥವಾ ಯೋಗಿಗಳ ಕುಲದಲ್ಲಿ ಹುಟ್ಟಿ ಮತ್ತೆ ಪೂರ್ವಸಂಸ್ಕಾರದ ಬಲದಿಂದ ಮುಂದಮುಂದಣ ಸಾಧನಗಳನ್ನು ನಡೆಸುವನೆಂದೂ ಗೀತೆಯಲ್ಲಿ ಶ್ರೀಕೃಷ್ಣಪರಮಾತ್ಮನು ಹೇಳಿರುವನು.

# ಭಕ್ತಿಯೋಗ.

ಈಗ ಗೀತೋಪದಿಷ್ಟಯೋಗಗಳಲ್ಲಿ ಉಳಿದುಕೊಂಡಿರುವ ಭಕ್ತಿಯೋಗದ ಪ್ರಸ್ತಾಪವನ್ನು ನಡೆಸೋಣ. ಯೋಗಗಳಲ್ಲಿ ಭಕ್ತಿಯೋಗವು ಮೊದಲು ಬರತಕ್ಕದ್ದೊ ಅಥವಾ ಕೊನೆಗೆ ಬರತಕ್ಕದ್ದೊ ಎಂಬುದು ನಿಜವಾಗಿ ವಿಚಾರಾಸ್ಪದವಾದ ವಿಷಯವಾಗಿದೆ. ಏಕೆಂದರೆ ಇತರ ಯೋಗಗಳಲ್ಲಿ ಸಾಧನವು ಬೇರೆ; ಸಾಧ್ಯವು ಬೇರೆ. ಉದಾಹರಣೆಗೆ ಜ್ಞಾನಯೋಗವನ್ನು ತೆಗೆದುಕೊಂಡರೆ ಅವರಲ್ಲಿ ವಿವೇಕವೈರಾಗ್ಯಾದಿಗಳು ಸಾಧನ; ಜ್ಞಾನವು ಸಾಧ್ಯ. ಆದರೆ ಭಕ್ತಿಯೋಗದಲ್ಲಿ ಸಾಧನವೂ ಭಕ್ತಿ; ಸಾಧ್ಯವೂ ಭಕ್ತಿ. ಭಕ್ತಿಯಲ್ಲಿ ಎರಡು ವಿಧ. ಒಂದು ಗೌಣೀ; ಇನ್ನೊಂದು ಪರಾ. ಗೌಣೀಭಕ್ತಿಯು ಸಾಧನರೂಪವಾದ ಭಕ್ತಿ. ಪರಭಕ್ತಿಯು ಜ್ಞಾನದ ಪರಿಪಾಕಾವಸ್ಥೆಯಾದ ಸಾಧ್ಯರೂಪವಾದ ಭಕ್ತಿ. ಹೀಗೆ ಸಾಧನವೂ ಸಾಧ್ಯವೂ ಒಂದೇ ಆಗಿರುವ ವಿಲಕ್ಷಣಸೌಕರ್ಯವುಳ್ಳದ್ದಾಗಿರುವದರಿಂದ ಭಕ್ತಿಯೋಗ ವಿಷಯವು ಯೋಗಗಳಲ್ಲೆಲ್ಲ ಅತಿಮನೋಹರವಾದುದು. ಆದಕಾರಣ ಸಂತರ್ಪಣೆಯಲ್ಲಿ ಮುಖ್ಯವಾದ ಪಕ್ವಾನ್ನವು ಕೊನೆಕೊನೆಗೆ ಬರುವಂತೆ ಭಕ್ತಿಯೋಗವು ಕೊನೆಗೆ ಬಂದಿರುವದು. ನಿಜವಾಗಿ ಪ್ರಧಾನವಾದ ಪಕ್ವಾನ್ನವು ಎಲ್ಲರಿಗೂ ಬಾಯಿನೀರು ಕರೆಸುವಂತೆ ಭಕ್ತಿಯೋಗವು ಎಲ್ಲರ ಹೃದಯವನ್ನೂ ಕರಗಿಸುವದು. ಭಕ್ತಿಯೋಗಶ್ರವಣದಿಂದ ಹೃದಯದ ಮೇಲೆ ಆಗುವ ಈಪರಿಣಾಮಕ್ಕೆ ವ್ಯಾಖ್ಯಾನಕೌಶಲ್ಯವು ಎಷ್ಟುಮಟ್ಟಿಗೂ ಕಾರಣವಲ್ಲ. ಭಕ್ತಿಯೋಗದ ಸ್ವಭಾವವೇ ಅಂಥದ್ದು. ಇನ್ನೊಂದು ವಿಷಯವೇನೆಂದರೆ ಜ್ಞಾನಯೋಗ, ಕರ್ಮಯೋಗ ಮತ್ತು ರಾಜಯೋಗ ಇವುಗಳು ಒಂದೊಂದುಬಗೆಯ ಸ್ವಭಾವಕ್ಕೆ ಮಾತ್ರ ರುಚಿಸುವವು. ಹೇಗೆಂದರೆ ಜ್ಞಾನಯೋಗವನ್ನು ಗ್ರಹಿಸಬೇಕಾದರೆ ಅವನ ಮನಸ್ಸಿನಲ್ಲಿ ವಿಚಾರಶಕ್ತಿ ಇರಬೇಕಾಗುವದು. ಕರ್ಮಯೋಗವನ್ನು ಅವಲಂಬಿಸಬೇಕಾದರೆ ಅವನಿಗೆ ಯೋಗ್ಯವಾದ ದೇಶಕಾಲಗಳೂ ಮತ್ತು ಅನೇಕ ಉಪಕರಣಸಂಪತ್ತೂ ಅಗತ್ಯವಾಗುವವು. ಇನ್ನು ರಾಜಯೋಗವನ್ನು ನಡೆಸಬೇಕಾ-

ದರೆ ಯಮನಿಯಮಾದಿಗಳು ಅವಶ್ಯಕವಾಗುವವು. ಭಕ್ತಿಯೋಗಕ್ಕೆ ಏನೇ-ನೂ ಬೇಕಿಲ್ಲ. ಬುದ್ಧಿಬಲವಿಲ್ಲದ ದಡ್ಡನಿಗಾದರೂ, ಯಾವ ಸ್ಥಳದಲ್ಲಾದರೂ, ಯಾವ ಕಾಲಕ್ಕಾದರೂ, ಯಾವದೊಂದು ಸಾಧನಸಮಗ್ರಿಯೂ ಇಲ್ಲದ ಹುಟ್ಟು ಬಡವನಿಗಾದರೂ, ಯಾವ ಕೆಲಸಕ್ಕೂ ಬರದ ಅಂಗಹೀನನಿಗಾದರೂ ಭಕ್ತಿಯೋಗವು ಅನುಕೂಲಿಸುವದು. ಪಶುವರ್ಗದಲ್ಲೆಲ್ಲ ಮಹಾಮದೋ-ನ್ಮತ್ತವಾದ ಒಂದಾನೆಯು ಕೂಡ ಭಕ್ತಿಯಿಂದ ಮುಕ್ತಿಯನ್ನು ಪಡೆಯಿತೆಂದು ನಮ್ಮ ಭಾರತೀಯಪವಿತ್ರಗ್ರಂಥಗಳಲ್ಲೊಂದಾದ ಗಜೇಂದ್ರಮೋಕ್ಷವು ಸಾರು-ತ್ತಿರುವಾಗ ಅಂಥ ಭಕ್ತಿಯು ಮನುಷ್ಯನಿಗೆ ಅನುಗುಣವಾಗದೆ ಇರುವ-ದುಂಟೆಂಬುದೆಂಥ ಮಾತು! ಜ್ಞಾನಯೋಗಾದಿಗಳಿಗೆ ಬೇಕಾಗುವ ವಿವೇಕಾದಿ-ಗಳು ಎಲ್ಲಾ ಮನುಷ್ಯರಿಗೂ ಏಕಪ್ರಕಾರವಾಗಿ ಆಜನ್ಮಸಿದ್ಧವಾಗಿರುವದಿಲ್ಲ. ಭಕ್ತಿಯೋಗದ ಸಾಧನವು ಮಾತ್ರ ಪ್ರತಿಯೊಬ್ಬನ ಹುಟ್ಟುಗುಣವಾಗಿಯೇ ಇರುವದು. ಮನುಷ್ಯನು ಹುಟ್ಟುವಾಗಲೆ ಅವನ ಹೃದಯದಲ್ಲಿ ಭಕ್ತಿ-ಯೋಗದ ಬೀಜವಿದ್ದೇ ಇರುವದು. ಭಕ್ತಿಯೋಗದ ಬೀಜವು ಪ್ರೇಮ. ಪ್ರೇಮವೆಂಬ ಮಾತಿಗೆ ಅರ್ಥವಿವರಣೆ ಬೇಕಾಗಿಲ್ಲ; ಧಾತುರೂಪಾದಿಗಳ ನಿಷ್ಪತ್ತಿ ಬೇಕಾಗಿಲ್ಲ. ನಮ್ಮ ಜೀವಿಕೆಗೆಲ್ಲ ಆಧಾರವಾಗಿರುವ ಶಕ್ತಿಯೇ ಪ್ರೇಮ. ಪ್ರೇಮವೆಂದರೇನೆಂದು ನಾವು ಯಾರನ್ನೂ ಕೇಳುವದಕ್ಕೆ ಹೋಗ-ಬೇಕಾಗಿಲ್ಲ. ಮಗುವು ತಾಯಿ ಗರ್ಭದಿಂದ ಹೊರಬಿದ್ದು ಭೂಸ್ಪರ್ಶ ಮಾಡುತ್ತಲೆ ಚೀರುವದಲ್ಲ! ಅದೇಕೆ? ತನ್ನ ಮೇಲಿನ ಪ್ರೇಮದಿಂದಲ್ಲದೆ ಮತ್ತೇನು? ನಾವು ಇದ್ದೇವೆಂಬ ಜ್ಞಾನವು ನಮಗೆ ಆಗುತ್ತಲೆ ತಿಳಿದೋ ಅಥವಾ ತಿಳಿಯದೆಯೊ ನಮ್ಮ ಮೇಲೆ ನಾವು ಪ್ರೇಮವನ್ನು ಮಾಡಿಯೇ ಮಾಡುತ್ತೇವೆ. ಹೀಗೆ ತನ್ನ ಮೇಲೆ ತಾನು ಪ್ರೇಮವನ್ನು ಮಾಡುವದು ಮನುಷ್ಯರಲ್ಲಿರುವಂತೆ ಪಶ್ವಾದಿಗಳಲ್ಲಿಯೂ ಇದೆ. ತಾನು ಎಂಬುದಿರುವ ಕಡೆಯಲ್ಲೆಲ್ಲ ತನ್ನ ಮೇಲಿನ ಪ್ರೀತಿ ಇದ್ದೇ ಇರುತ್ತದೆ. ಇದನ್ನು ಪಶು-ಪ್ರೇಮವೆಂದು ಕರೆಯಬಹುದು. ಈ ಪ್ರೇಮವೇ ಮನುಷ್ಯವರ್ಗದಲ್ಲಿ ಬೆಳವಣಿಗೆಯನ್ನು ಹೊಂದುತ್ತ ವಿಕಾಸವಾಗಿ ಹೆಚ್ಚು ಶಕ್ತಿಯುಳ್ಳದ್ದಾಗುವದು.

ಮನುಷ್ಯವರ್ಗದಲ್ಲಿಯೂ ತಮ್ಮ ಮೇಲೆ ತಮಗಿರುವ ಪ್ರೇಮವೆನಿಸಿ-

ಕೊಳ್ಳುವ ದೇಹದ ಮೇಲಣ ಪ್ರೇಮುವನ್ನೂ ದೇಹಕ್ಕೆ ಸಂಬಂಧಿಸಿದ ಪದಾರ್ಥಗಳ ಮೇಲಣ ಪ್ರೇಮುವನ್ನೂ ಮನಸ್ಸನ್ನು ವಿನೋದಗೊಳಿಸುವಂಥ ಸರ್ವವಸ್ತುಗಳ ಮೇಲಣ ಪ್ರೇಮುವನ್ನೂ ಪಶುಪ್ರೇಮುವೆಂದೇ ಹೇಳಬೇಕು. ಶರೀರದ ಮೇಲೆ ಪ್ರೇಮುವನ್ನು ಮಾಡುತ್ತ ಹೋದರೆ ಕೊನೆಗೆ ಶರೀರವೇ ಪೂಜ್ಯವೆಂಬ ಭಾವನೆ ನೆಲೆಗೊಳ್ಳುತ್ತದೆ. ಮನುಷ್ಯವರ್ಗದಲ್ಲಿ ಬಹುಭಾಗದವರು ದೇಹದ ಮೇಲೆ ಮತ್ತು ಇಂದ್ರಿಯಗಳಿಗೆ ಸುಖಕರವಾಗಿ ತೋರುವ ವಿಷಯಗಳ ಮೇಲೆ ಪ್ರೇಮುವನ್ನಿಟ್ಟವರೇ ಆಗಿದ್ದಾರೆ. ಅವರ ಜೀವಮಾನದ ಸರ್ವಸ್ವವೆಲ್ಲ ಅದೇ ಆಗಿರುತ್ತದೆ. ಅವರಿಗೆ ಅದಕ್ಕಿಂತ ಹೆಚ್ಚಿನ ಸ್ಥಿತಿಗೆ ಹೋಗುವದಕ್ಕೆ ಆಗುವದೇ ಇಲ್ಲ. ಅವರು ತಿಳಿದು ಅಥವಾ ತಿಳಿಯದೆ ತಮ್ಮ ತಮ್ಮ ದೇಹವನ್ನು ಆರಾಧಿಸುತ್ತಾರೆ. ಅದರ ಮೇಲಣ ಅತ್ಯಂತವಾದ ಪ್ರೇಮದಿಂದ ಅವರು ಆದೇಹವನ್ನು ಬಹು ಬೆಲೆಯುಳ್ಳ ಭೂಷಣಗಳಿಂದ ಅಲಂಕರಿಸುತ್ತಾರೆ. ಈಪ್ರೀತಿಯು ಅತಿಕ್ಷುದ್ರವಾದುದು. ಇದೇ ಬಂಧನ. ದುಃಖ ಮತ್ತು ದುರವಸ್ಥೆಗಳೇ ಇದರ ಫಲ. ಈಪಶುಪ್ರೇಮುವು ಅತ್ಯಂತ ಸ್ವಾರ್ಥಪರವಾಗಿರುವದು. ಇದನ್ನು ಮೆಲ್ಲಮೆಲ್ಲಗೆ ಬೆಳಸಿ ಇತರರ ಪ್ರೇಮದ ಸವಿಯನ್ನು ಇದಕ್ಕೆ ಹಚ್ಚಿ ಇತರರನ್ನು ಪ್ರೀತಿಸುವಂತೆ ಮಾಡುವದು ಅಸಂಭವವಲ್ಲ. ಯಾವಾಗ ಪ್ರೇಮವು ಶರೀರಾರಾಧನಾರೂಪವಾದ ಎಲ್ಲೆಯನ್ನು ದಾಟಿ ಇತರರ ಪ್ರೀತಿಯನ್ನು ಸಂಪಾದಿಸಬೇಕೆಂದು ಇತರರನ್ನು ಪ್ರೀತಿಸುತ್ತ ಹೋಗುವದೊ ಆಗ ಅದು ಪಶುಪ್ರೇಮುವೆಂಬ ಬಯ್ಗುಳದಿಂದ ಪಾರಾಗಿ ಮಾನುಷಪ್ರೇಮುವೆನ್ನಿಸಿಕೊಳ್ಳುವದು. ಇದೇ ಪ್ರೇಮುವೇ ಯಾವ ಸ್ವಾರ್ಥವೂ ಇಲ್ಲದೆ ದೇವರ ಕಡೆಗೆ ತಿರುಗಿದರೆ ದೈವಿಕಪ್ರೇಮುವೆನ್ನಿಸಿಕೊಳ್ಳುವದು. ಈದೈವಿಕಪ್ರೇಮುವೇ ಭಕ್ತಿ.

ಭಕ್ತಿಶಾಸ್ತ್ರದ ಸೂತ್ರಕಾರರಾದ ಶ್ರೀಶಾಂಡಿಲ್ಯರ "सा परानुरक्तिरीश्वरे" ಎಂಬ ಸೂತ್ರದಂತೆ ಪರಮೇಶ್ವರನ ಮೇಲೆ ಪರಮಪ್ರೇಮುವನ್ನು ಮಾಡುವದೇ ಭಕ್ತಿ. ಇಲ್ಲಿ ಪರಮೇಶ್ವರನ ಮೇಲೆ ಪ್ರೇಮುಮಾಡುವದೆಂದು ಸಾಮಾನ್ಯವಾಗಿ ಹೇಳದೆ ಪರಮಪ್ರೇಮುವನ್ನು ಮಾಡುವದೆಂದು ಹೇಳಿರುವದರಿಂದ ಭಗವದ್ವಿಷಯಕವಾದ ಪ್ರೇಮುವು ಸಾಮಾನ್ಯವಾಗಿದ್ದ ಮಾತ್ರಕ್ಕೇ ಭಕ್ತಿ-

ಯೆನಿಸಿಕೊಳ್ಳುವದಕ್ಕೆ ತಕ್ಕದ್ದಾಗುವದಿಲ್ಲ. ಭಕ್ತಿಯೆಂಬ ಭವ್ಯನಾಮಧೇಯಕ್ಕೆ ಪಾತ್ರವಾಗಬೇಕಾದರೆ ಭಗವದ್ವಿಷಯಕಪ್ರೇಮವು ಅವನ ಹೃದಯದಲ್ಲಿ ತುಂಬಿ ಕಣ್ಣು, ಕಿವಿ, ನಾಲಿಗೆ ಮೊದಲಾದ ಇಂದ್ರಿಯಗಳ ಮೂಲಕ ತುಳುಕುತ್ತಿರಬೇಕು. ಕೇವಲ ಪತ್ನೀಪುತ್ರಾದಿಗಳ ಮೇಲಣ ಪ್ರೇಮದಂಥ ಪ್ರೇಮವು ಸಾಲದು. ವಿಚಾರಮಾಡಿದರೆ ಆಸ್ವಜನಪ್ರೇಮವು ನಿಜವಾದುದಲ್ಲ. ಹೇಗೆಂದರೆ ನಿಜವಾದ ಪ್ರೇಮವು ಒಂದು ವಸ್ತುವಿನ ಮೇಲೆ ನಾಟಿತೆಂದರೆ ಅನ್ಯಪದಾರ್ಥದ ಇಚ್ಛೆಯಾಗಲಿ ಅದರ ಅವಶ್ಯಕತೆಯಾಗಲಿ ನಿಲ್ಲಲಾರದು; ಮತ್ತು ಯಾರ ಮೇಲೆ ನಿಜವಾದ ಪ್ರೇಮವಿರುವದೊ ಅವರಲ್ಲಿ ಸ್ವಲ್ಪವಾದರೂ ದೋಷವು ತೋರುತ್ತಿರಬಾರದು. ಇಂಥ ಪ್ರೇಮವನ್ನು ಪ್ರೇಮವೆಂದು ಹೇಳಬಹುದಲ್ಲದೆ ಹೆಂಡತಿ, ಮಕ್ಕಳು, ಧನ ಮೊದಲಾದ ವಸ್ತುಗಳಲ್ಲಿ ಹರಿದಾಡುತ್ತಿರುವ ಪ್ರೇಮವನ್ನು ಪ್ರೇಮವೆಂದು ಕರೆಯಲಾಗದು. ಏಕೆಂದರೆ ಹೆಂಡತಿಯ ಮೇಲೆ ಪ್ರೇಮವಿದ್ದವನಿಗೆ ಅನ್ಯಸ್ತ್ರೀಯ ಯೋಚನೆ ಏತಕ್ಕೆ? ಮಕ್ಕಳ ಮೇಲೆ ಪ್ರೀತಿ ಇದ್ದವನಿಗೆ ಅವರು ತನ್ನ ಮಾತನ್ನು ಮೀರುವರೆಂಬ ದುಃಖವೇತಕ್ಕೆ? ಧನವನ್ನು ಪ್ರೀತಿಸುವವನಿಗೆ ಪ್ರಾಣದಾಶೆ ಏತಕ್ಕೆ? ಆದರೆ ಲೋಕದ ಪರಿಸ್ಥಿತಿಯು ಹೀಗೆಯೇ ಇರುವದರಿಂದ ನಮಗೆ ನಿಜವಾದ ಪ್ರೇಮದ ಪರಿಚಯವೇ ಇಲ್ಲವೆನ್ನಬಹುದು. ಪ್ರೀತಿಗೆ ಪಾತ್ರವಾಗತಕ್ಕ ವಸ್ತು ಪ್ರೇಮಮಯವಾಗಿಯೂ ಸ್ವಾರ್ಥರಹಿತವಾಗಿಯೂ ಇದ್ದರೆ ಅದರಲ್ಲಿ ನಿಜವಾದ ಪ್ರೇಮವು ಜನಿಸುವದು. ಹೀಗೆ ಇಲ್ಲವಾದುದರಿಂದಲೆ ಪತ್ನೀಪುತ್ರಾದಿಗಳು ನಿಜಪ್ರೇಮಕ್ಕೆ ಭಾಗಿಗಳಲ್ಲ. ಏಕೆಂದರೆ ಅವರು ತಮ್ಮ ಸುಖವನ್ನು ತಾವು ನೋಡಿಕೊಳ್ಳತಕ್ಕವರಾಗಿರುವದರಿಂದ ಪ್ರೀತಿಸುವವನ ಸುಖಕ್ಕೆ ಲಕ್ಷ್ಯವನ್ನು ಕೊಡಲಾರರು; ಮತ್ತು ಸ್ವಾರ್ಥಕ್ಕಾಗಿಯೇ ಅವನ ಮೇಲೆ ಪ್ರೀತಿಯನ್ನು ಮಾಡುವರು. ಅನೇಕ ಕಡೆಗಳಲ್ಲಿ ಹರಿದಾಡುವ ಪ್ರೀತಿಯನ್ನೆಲ್ಲ ಒಂದೇ ಪದಾರ್ಥದಲ್ಲಿರಿಸಿ ಆಒಂದೇ ಪದಾರ್ಥವನ್ನು ಲಕ್ಷ್ಯದಲ್ಲಿಟ್ಟುಕೊಂಡು ಅದರಲ್ಲಿಯೇ ಮಗ್ನನಾಗಿ ಪ್ರೇಮವನ್ನು ಮಾಡಬೇಕಾದರೆ ಅಂಥ ಪ್ರೇಮಕ್ಕೆ ಪಾತ್ರವಾಗತಕ್ಕ ವಸ್ತು ಲೋಕೋತ್ತರವಾಗಿರಬೇಕು. ಆವಸ್ತು ತನ್ನನ್ನು ಪ್ರೀತಿಸುವವನ ಪ್ರೇಮವನ್ನು ಇನ್ನೊಂದು

ವಸ್ತುವಿಗೆ ಹೋಗಗೊಡದಷ್ಟು ಸುಖಮಯವಾಗಿರಬೇಕು. ಇಂಥ ವಸ್ತು ಜಗತ್ತಿನಲ್ಲಿ ಉಂಟೊ? ಉಂಟು. ಈ ವಸ್ತು ಆನಂದಮಯನಾದ ಭಗವಂತನೊಬ್ಬನಲ್ಲದೆ ಮತ್ತಾವುದೂ ಅಲ್ಲ. ಹೇಗೆ ಸರ್ವಸದ್ಗುಣನಿಧಿಯಾದ ಭಗವಂತನಲ್ಲಿ ಮಾಡುವ ನಿಶ್ಚಲವಾದ ಮತ್ತು ಅಹೇತುಕವಾದ ಪ್ರೀತಿಯೇ ಪರಮಪ್ರೇಮ ಅಥವಾ ಭಕ್ತಿ. ಭಕ್ತ್ಯಾಚಾರ್ಯರುಗಳೆಲ್ಲ ಪ್ರಕಾರಾಂತರದಿಂದ ಇದೇ ಅರ್ಥವನ್ನೇ ಭಕ್ತಿಗೆ ಲಕ್ಷಣವಾಗಿ ಹೇಳಿರುವರು. ಶ್ರೀಶಂಕರಾಚಾರ್ಯರು ಇದೇ ಅರ್ಥವನ್ನೇ ತಮ್ಮ ಶಿವಾನಂದಲಹರೀ ಎಂಬ ಸ್ತೋತ್ರಗ್ರಂಥವಲ್ಲಿ

"अंकोलं निजबीजसंततिरयस्कांतोपलं सूचिका ।
साध्वी नैजविभुं लता क्षितिरुहं सिंधुस्सरिद्वल्लभम्॥
प्राप्नोतीह यथा तथा पशुपतेः पादारविंदद्वयं ।
चेतोवृत्तिरुपेत्य तिष्ठति सदा सा भक्तिरित्युच्यते ॥"

ಎಂಬ ಶ್ಲೋಕದಲ್ಲಿ ಬಹುಹೃದಯಂಗಮವಾಗಿ ಹೇಳಿರುತ್ತಾರೆ. ಅಂಕೋಲಬೀಜಗಳು ಅಂಕೋಲವೃಕ್ಷವನ್ನೂ, ಸೂಜಿಯು ಸೂಜಿಗಲ್ಲನ್ನೂ, ಪತಿವ್ರತಾಸ್ತ್ರೀಯು ತನ್ನ ಪತಿಯನ್ನೂ, ಬಳ್ಳಿಯು ಮರವನ್ನೂ, ನದಿಯು ಸಮುದ್ರವನ್ನೂ ಹೇಗೆ ಪಡೆಯುತ್ತಿರುತ್ತವೊ ಹಾಗೆ ಮನಸ್ಸಿನ ವೃತ್ತಿಯು ಯಾವಾಗಲೂ ಈಶ್ವರವಿಷಯಕವಾಗಿ ಸಿದ್ಧಪಟ್ಟರೆ ಅದು ಭಕ್ತಿ. ಮುಖ್ಯತಾತ್ಪರ್ಯವೇನೆಂದರೆ ತನ್ನ ಮನಸ್ಸು ಈಶ್ವರನ ಕಡೆಗೆ ಒಲಿದು ಅವನನ್ನು ಅವಲಂಬಿಸಿ ಅವನಲ್ಲಿಯೇ ಅಂತರ್ಭೂತವಾಗುವಂತೆ ಮಾಡುವದು ಭಕ್ತಿ. ಅನೇಕ ಉದಾಹರಣೆಗಳಿಂದ ಸೂಚಿತವಾಗಿರುವ ಈಭಕ್ತಿಯನ್ನು ಮೂರು ತರಗತಿಗಳಾಗಿ ವಿಂಗಡಿಸಬಹುದಾಗಿದೆ. ಒಂದನೇದು ಅಂಕೋಲಬೀಜಗಳ ಸ್ಥಿತಿ; ಎರಡನೇದು ಸೂಜಿ, ಪತಿವ್ರತಾಸ್ತ್ರೀ ಮತ್ತು ಬಳ್ಳಿಗಳ ಸ್ಥಿತಿ; ಮೂರನೇದು ನದಿಯ ಸ್ಥಿತಿ. ಅಂಕೋಲಬೀಜದಿಂದ ತುಂಬಿದ ಕಾಯಿಗಳು ಆ

ವೃಕ್ಷದ ಕಡೆಗೇ ಬಾಗಿಕೊಂಡಿರುವವು. ಹೀಗೆ ಭಕ್ತರು ತಮ್ಮ ಲಕ್ಷ್ಯವನ್ನೆಲ್ಲ ಆದಷ್ಟು ಪರಮಾತ್ಮನ ಕಡೆಗೇ ತಿರುಗಿಸಿಕೊಂಡು ಪ್ರೇಮವನ್ನು ಮಾಡುವದು ಮೊದಲನೇ ಸ್ಥಿತಿ. ಸೂಜಿಯೂ, ಪತಿವ್ರತಾಸ್ತ್ರೀಯೂ ಮತ್ತು ಬಳ್ಳಿಯೂ ಕ್ರಮವಾಗಿ ಸೂಜಿಗಲ್ಲನ್ನೂ, ತನ್ನ ಪತಿಯನ್ನೂ ಮತ್ತು ಮರವನ್ನೂ ಬಿಟ್ಟು ತಿರುಗಲಾರದೆ ಅಲ್ಪಸ್ವಲ್ಪಸ್ಪರ್ಶಸುಖವನ್ನು ಮಾತ್ರ ಪಡೆಯುತ್ತ ಅವುಗಳನ್ನೆ ಆಶ್ರಯಿಸಿಕೊಂಡಿರುವವು. ಹೀಗೆ ಭಗವಂತನ ಸಾನ್ನಿಧ್ಯವನ್ನು ಬಿಟ್ಟಿರಲಾರದೆ ತಮ್ಮ ಸಂಬಂಧಕ್ಕೆ ಚ್ಯುತಿ ಬರದೆ ಇರಲೆಂದು ಅವನನ್ನು ಅವಲಂಬಿಸಿಕೊಂಡು ಪ್ರೇಮವನ್ನು ಮಾಡುತ್ತಿರುವದು ಎರಡನೇ ಸ್ಥಿತಿ. ನದಿಯು ತಾನು ಎಂದು ಸಮುದ್ರದೊಳಗೆ ಲೀನನಾಗಿ ಹೋದೇನೋ ಎಂಬ ಅತ್ಯಂತವಾದ ಕಾತರದಿಂದ ಅವಿಶ್ರಾಂತಿಯಿಂದ ಸಮುದ್ರದ ಕಡೆಗೆ ಬಹುವೇಗವಾಗಿ ಪ್ರವಹಿಸುತ್ತಿರುವದು. ಹೀಗೆ ತಾವು ಎಂದು ತಮ್ಮ ಪ್ರತ್ಯೇಕವ್ಯಕ್ತಿತ್ವವನ್ನು ಕಳೆದುಕೊಂಡು ಭಗವತ್ಸ್ವರೂಪದಲ್ಲಿ ಲೀನರಾಗಿ ಅಖಂಡಾನಂದವನ್ನು ಹೊಂದುವೆವೊ ಎಂದು ಅತ್ಯುತ್ಸುಕರಾಗಿ ಪ್ರೇಮವನ್ನು ಮಾಡುವದು ಮೂರನೇ ಸ್ಥಿತಿ. ಶ್ರೀಶಂಕರಾಚಾರ್ಯರು ಹೇಳಿರುವ ಹಾಗೆಯೆ ಮೊನ್ನೆ ಮೊನ್ನೆ ಆಗಿಹೋದ ಸಾಧುಗಳಾದ ಶ್ರೀಸ್ವಾಮಿವಿವೇಕಾನಂದರು ತಮ್ಮ ಪದ್ಧತಿಯಂತೆ ಈಗಿನ ಜನರ ಮನಸ್ಸಿಗೆ ಹಿಡಿಯುವ ಹಾಗೆ ಪ್ರಕಾರಾಂತರದಿಂದ ಒಂದು ಲಕ್ಷಣವನ್ನು ಹೇಳಿದ್ದಾರೆ. ಅದೇನಂದರೆ:—"Bhaktiyoga is a real, genuine search after the Lord, a search beginning, continuing and ending in Love." ಭಕ್ತಿಯೋಗವೆಂದರೆ ಪ್ರೇಮದಲ್ಲಿ ಹುಟ್ಟಿ, ಪ್ರೇಮದಲ್ಲಿ ಸಾಗಿ, ಪ್ರೇಮದಲ್ಲಿ ಪರ್ಯವಸಾನವಾಗುವ ನಿಜವಾದ— ಮನಃಪೂರ್ವಕವಾದ— ಪರಮಾತ್ಮಾನ್ವೇಷಣವೇ ಭಕ್ತಿಯೋಗ. ಇದು ಎಷ್ಟು ಚೆನ್ನಾಗಿದೆ! ನೋಡಿರಿ. ಭಗವತ್ಸ್ವರೂಪಾನ್ವೇಷಣರೂಪವಾದ ಭಕ್ತಿಯೋಗವು ಪ್ರಾರಂಭವಾಗುವದೂ ಪ್ರೇಮದಲ್ಲಿ; ಸಾಗುವದೂ ಪ್ರೇಮದಲ್ಲಿ; ಪರ್ಯವಸಾನವಾಗುವದೂ ಪ್ರೇಮದಲ್ಲಿ. ಈಲಕ್ಷಣದಲ್ಲಿ ಭಕ್ತಿಯೋಗದ ಸರ್ವಸ್ವವೂ ಅಡಕವಾಗಿದೆ. ಆದುದರಿಂದ ಈ ಮೂರರಲ್ಲಿ ಪ್ರತಿಯೊಂದನ್ನೂ ವಿಚಾರಮಾಡೋಣ.

ಮೊದಲನೇದು ಭಗವತ್ಸ್ವರೂಪಾನ್ವೇಷಣವು ಪ್ರೇಮದಲ್ಲಿ ಪ್ರಾರಂಭವಾಗುವ ವಿಷಯ. ಸರ್ವತಂತ್ರಸ್ವತಂತ್ರನಾದ ಪರಮಾತ್ಮನ ನಿಜಸ್ವರೂಪವನ್ನು ತಿಳಿಯುವದಕ್ಕಾಗಿ ತಮ್ಮ ಆಯುಸ್ಸನ್ನೆಲ್ಲ ಧಾರೆಯೆರೆದು, ಪ್ರಾಪಂಚಿಕಸುಖಗಳನ್ನೆಲ್ಲ ತೊರೆದು, ತದೇಕಧ್ಯಾನದಲ್ಲಿ ಮಗ್ನರಾಗಿದ್ದ ನಮ್ಮ ಪೂರ್ವಿಕ ಪುಣ್ಯಪುರುಷರು ಆಸ್ವರೂಪವನ್ನು ತಾವು ಅನುಭವಕ್ಕೆ ತೆಗೆದುಕೊಂಡು ಅದನ್ನು ಮತ್ತೊಬ್ಬರಿಗೆ ತಿಳಿಸುವದಕ್ಕಾಗಿ ಅನೇಕ ಬಗೆಯ ಮಾತುಗಳನ್ನು ಉಪಯೋಗಿಸಿರುತ್ತಾರೆ. ಎಷ್ಟೋ ಬಗೆಯಲ್ಲಿ ಎಷ್ಟೋ ಮಾತುಗಳನ್ನು ಉಪಯೋಗಿಸಿದರೂ ಅವರಿಗೆ ತೃಪ್ತಿಯಾದಂತೆ ಕಂಡುಬರಲಿಲ್ಲ. ಏಕೆಂದರೆ ವಿಚಾರಮಾಡುತ್ತ ಹೋದ ಹಾಗೆಲ್ಲ ಅವರ ಮಾತುಗಳೆಲ್ಲ ಪರಮಾತ್ಮನ ಯಾವದೋ ಒಂದು ಗುಣವನ್ನು ಮಾತ್ರ ಹಾಗೂ ಹೀಗೂ ಸೂಚನೆ ಮಾಡುತ್ತಿದ್ದವು. ಹೀಗಾಗಿ ನಿರ್ಗುಣ, ನಿರಾಕಾರ, ಸರ್ವವ್ಯಾಪಿ ಮತ್ತು ಸರ್ವಾಂತರ್ಯಾಮಿ ಮೊದಲಾದ ಯಾವ ಗುಣವಾಚಕದಲ್ಲಿಯೂ ಭಗವಂತನ ಪ್ರಧಾನಗುಣದ ಗಂಧವಾದರೂ ಕಾಣಲಿಲ್ಲ. ಪರಮಾತ್ಮನ ಯಥಾರ್ಥಸ್ವರೂಪವನ್ನು ಆದಷ್ಟು ವ್ಯಕ್ತಗೊಳಿಸುವಂಥ, ಆಪರಮಾತ್ಮನಿಗೂ ಇತರ ಜೀವರಾಶಿಗಳಿಗೂ ಅಷ್ಟೇ ಏಕೆ ಬ್ರಹ್ಮಾಂಡಕ್ಕೂ ಇರುವ ಸಂಬಂಧವನ್ನೂ ಸೂಚನೆಮಾಡುವಂಥ ಮತ್ತು ಜೀವಸಮೂಹವನ್ನು ಪರಮಾತ್ಮನ ಸನ್ನಿಧಿಗೆ ಒಯ್ಯುವ ಅಮಾನುಷಶಕ್ತಿಯುಳ್ಳಂಥ ಒಂದು ಶಬ್ದವನ್ನು ಕಂಡುಹಿಡಿಯಬೇಕೆಂದು ಬಹುದೀರ್ಘಕಾಲ ಯೋಚಿಸಿ ಕೊನೆಗೆ ಅವರು “रसो वै सः रसꣳ ह्येवायं लब्ध्वाऽनन्दीभवति” ಎಂಬುದನ್ನು ಕಂಡುಹಿಡಿದರು. ಅದರ ತಾತ್ಪರ್ಯವೇನೆಂದರೆ “ಪರಮಾತ್ಮನು ರಸಸ್ವರೂಪನು ಎಂದರೆ ಮಾಧುರ್ಯಮಯನು. ಯಾವನು ಆದ್ವೈವಿಕಪ್ರೇಮರಸದ ಸವಿಯನ್ನು ನೋಡುವನೊ ಅವನು ಆನಂದಮಯನಾಗುವನು.” ಇದನ್ನು ಒಂದು ಮಾತಿನಲ್ಲಿ ಹೇಳಬೇಕೆಂದರೆ ಭಗವಂತನ ಸ್ವರೂಪವು ಪ್ರೇಮ ಅಥವಾ ಪ್ರೇಮವೇ ಭಗವಂತ. ಇದೇ ಅರ್ಥವನ್ನೇ ಶ್ರೀನಾರದರು “स अनिर्वचनीयप्रेमस्वरूपः” ಎಂಬ ಸೂತ್ರದಲ್ಲಿ ವ್ಯಕ್ತಪಡಿಸಿದ್ದಾರೆ. ಈಪ್ರೇಮಸ್ವರೂಪವನ್ನು ಅನುಭವಕ್ಕೆ ತಂದುಕೊಳ್ಳುವ ಸಾಧನವು ಪ್ರತಿಯೊಬ್ಬನಲ್ಲಿಯೂ ಬಹು ಬಲವತ್ತರವಾಗಿದೆ.

ಹೇಗೆಂದರೆ ಪ್ರೇಮವಿಲ್ಲದ ಪ್ರಾಣಿಯೇ ಇಲ್ಲ. ಮರುಭೂಮಿಯಲ್ಲಾದರೂ ಎಲ್ಲಾದರೊಂದು ಕಡೆ ಒದ್ದೆಯಾಗಿದ್ದಂತೆ ಕಾಣುವ ಸ್ಥಳವುಂಟೇ ಉಂಟು. ಪ್ರೇಮವಿಲ್ಲದ ಪ್ರಾಣಿ ಇರುವದೆಂಬುದು ಅಸಂಭವದ ಮಾತು. ಪ್ರೇಮ-ವನ್ನು ಪ್ರಾಣಿಗಳಿಗೆ ಹೊಸದಾಗಿ ಕಲಿಸಬೇಕಾದುದಿಲ್ಲ; ಮತ್ತು ಪ್ರೇಮದ ವಿಷಯವನ್ನು ಮತ್ತೆ ಮತ್ತೆ ಜ್ಞಾಪಕಕೊಡಬೇಕಾದುದಿಲ್ಲ. ಮಗು ಬಹು-ಹೊತ್ತು ಹೊರಗೆ ಆಡುತ್ತಿದ್ದು ಅವ್ವ ಎಂದು ಕೂಗುತ್ತ ಬಂದು ತಾಯನ್ನು ತಬ್ಬಿಕೊಂಡಾಗ ಆ ಮಗುವಿಗೆ ಹೊಟ್ಟೆಗೆ ಕೊಡೆಂದು ತಾಯಿಗೆ ಹೇಳಬೇಕೇನು? ಆಕೆಯು ಬೇರೆ ಕೆಲಸದಲ್ಲಿ ಮುಳುಗಿ ಹೋಗಿದ್ದರೂ ಆಕೆಯ ಸ್ತನದಲ್ಲಿ ಹಾಲು ತುಂಬಿಕೊಳ್ಳುವದು. ಅದನ್ನು ಮಗು ಕುಡಿದ ಹೊರತು ಆಕೆಗೆ ಸಮಾಧಾನವಾಗುವದಿಲ್ಲ. ಈ ಸಂದರ್ಭದಲ್ಲಿ ಆಕೆಯ ಸ್ತನದಲ್ಲಿ ಹಾಲನ್ನು ಉಬ್ಬಿಸಿದವರು ಯಾರು? ಈ ಕ್ರಿಯೆಯು ತನಗೆ ತಾನೇ ನಡೆಯುವದಿಲ್ಲವೆ? ಇಷ್ಟೇ ಅಲ್ಲ. ಪ್ರೇಮವೆಂಬುದು ಮನುಷ್ಯನಲ್ಲಿ ಎಂಥೆಂಥ ಕೆಲಸಗಳನ್ನಾ-ದರೂ ಮಾಡಿಸಿಬಿಡುವದು. ಹಣವೊದಲಾದವುಗಳಿಗೆ ಬಾಯಿನೀರು ಕರೆ-ಯುವ ಸ್ವಾರ್ಥಪರವಾದ ಪ್ರೇಮವು ಕಳ್ಳತನ, ದರೋಡೆ ಮುಂತಾದುದನ್ನು ಮಾಡಿಸಿಬಿಡುವದು. ಏನಾದರೂ ಮಾಡಿ ಇನ್ನೊಬ್ಬನ ಪ್ರಾಣವನ್ನು ಉಳಿ-ಸಬೇಕೆಂಬ ಪರಾರ್ಥಪ್ರೇಮವು ಒಬ್ಬನ ಪ್ರಾಣವನ್ನು ಕೂಡ ಸೂರೆಮಾಡಿಸಿ-ಬಿಡುವದು. ಮನುಷ್ಯನಿಗೆ ಪ್ರೇಮಪ್ರವಾಹವೆಂಬುದೇನೋ ಸ್ವಭಾವಸಿದ್ಧ-ವಾಗಿದ್ದೇ ಇರುವದು. ಆದರೆ ತಗ್ಗುಕಂಡಕಡೆಗೆಲ್ಲ ಹರಿಯುವದು ಅದರ ಸ್ವಭಾವ. ನಮ್ಮ ಮನಸ್ಸು ಯಾವದಾದರೊಂದನ್ನು ಬಯಸಿ ಆ ಇಷ್ಟವಸ್ತು-ವಿನ ಕಡೆಗೆ ಬಗ್ಗಿದ ಕೂಡಲೆ ಪ್ರೇಮಪ್ರವಾಹವು ಆತಗ್ಗಿಗೆ ನುಗ್ಗುವದು. ಪ್ರೇಮಸ್ವರೂಪವನ್ನು ಅನುಭವಕ್ಕೆ ತಂದುಕೊಳ್ಳುವ ಸಾಧನವು ಬಹುಬಲ-ವತ್ತರವಾದುದೆಂದು ಹೇಳಿದುದಕ್ಕೆ ಕಾರಣವೇನೆಂದರೆ ಸ್ವಭಾವವಾಗಿ ಪಶು-ಪ್ರೇಮರೂಪವಾಗಿಯೊ ಮಾನುಷಪ್ರೇಮರೂಪವಾಗಿಯೊ ವಿಷಯಾಭಿಮು-ಖವಾಗಿ ಪ್ರವಹಿಸುತ್ತಿರುವ ಪ್ರೇಮವನ್ನು ಮೆಲ್ಲಮೆಲ್ಲಗೆ ಪರಮಾತ್ಮಪ್ರೇಮದ ಕಡೆಗೆ ತಿರುಗಿಸಿ ಬಿಟ್ಟರಾಯಿತು. ಮನಸ್ಸು ಪರಮಾತ್ಮನನ್ನು ಬಯಸಿ ಬಗ್ಗುತ್ತಲೆ ಆತಗ್ಗಿನಲ್ಲಿ ನಮ್ಮ ಪ್ರೇಮಪ್ರವಾಹವು ನುಗ್ಗಿ ದೈವಿಕಪ್ರೇಮವೆಂಬ

ಹೆಸರನ್ನು ತೆಗೆದುಕೊಳ್ಳುವದು. ಇದೇ ಅಭಿಪ್ರಾಯವನ್ನೇ ಭಕ್ತಾಗ್ರಗಣ್ಯ-ನಾದ ಪ್ರಹ್ಲಾದನು

"या प्रीतिरविवेकानां विषयेष्वनपायिनी ।
त्वामनुस्मरतस्सा मे हृदयान्मापसर्पतु ॥"

ಎಂಬ ಶ್ಲೋಕದಲ್ಲಿ ಹೇಳಿದ್ದಾನೆ. "ಅವಿವೇಕಿಗಳ ಪ್ರೇಮವು ವಿಷಯಗಳ ಮೇಲೆಯೇ ಹರಿದಾಡುವಂತೆ ನಿನ್ನನ್ನು ಸ್ಮರಿಸುತ್ತಿರುವ ನನ್ನ ಪ್ರೀತಿಯು ನಿನ್ನಲ್ಲಿಯೇ ನೆಲೆಗೊಂಡಿರಲಿ." ಎಂದು ಅದರ ತಾತ್ಪರ್ಯ. ಹೀಗೆ ಪ್ರೇಮಪ್ರವಾಹವು ವಿಷಯಾಭಿಮುಖವಾಗಿ ಹೋಗುವದನ್ನು ಬಿಟ್ಟು ಪರ-ಮಾತ್ಮನ ಕಡೆಯ ದಾರಿಯನ್ನು ಹಿಡಿದಾಗಲೆ ಗೌಣೀಭಕ್ತಿಯಾರಂಭವಾಯಿ-ತೆಂದು ತಿಳಿಯಬೇಕು. ಗೌಣೀಭಕ್ತಿಯೆಂಬುದು ಸಾಧನರೂಪವಾದ ಭಕ್ತಿ. ವೇದಾಧ್ಯಯನವನ್ನು ಮಾಡಿ ಬ್ರಹ್ಮಜ್ಞಾನವನ್ನು ಪಡೆಯುವದಕ್ಕೆ ಅಧಿಕಾರ-ವಾದ ಉಪನಯನಸಂಸ್ಕಾರವನ್ನು ಹೊಂದಿದವನು ಮಾತ್ರ ಬ್ರಾಹ್ಮಣನೆಂಬ ಹೆಸರಿಗೆ ಯೋಗ್ಯನಾದರೂ ಆಸಂಸ್ಕಾರವನ್ನಿನ್ನೂ ಪಡೆಯದ, ಅವನ ಕುಟುಂಬಕ್ಕೆ ಸೇರಿದ, ಹುಡುಗನನ್ನೂ ಮುಂದೆ ಅವನು ಆಸಂಸ್ಕಾರವನ್ನು ಪಡೆದೇ ಪಡೆಯುವನೆಂಬ ನಿರೀಕ್ಷಣೆಯಿಂದ ಉಪಚಾರದಿಂದ ಬ್ರಾಹ್ಮಣನೆಂದು ಹೇಳುತ್ತಿರುವಂತೆ ಪರಾಭಕ್ತಿಯನ್ನು ಪಡೆಯುವ ಮನೋವೃತ್ತಿಯ ಬಾಲ್ಯಾ-ವಸ್ಥೆಯಾದ ಗೌಣೀಭಕ್ತಿಯನ್ನೂ ಉಪಚಾರದಿಂದ ಭಕ್ತಿಯೆಂದು ಕರೆಯು-ವರು. ಗೌಣೀಭಕ್ತಿಯಲ್ಲಿ ಭಕ್ತನು ಪರಮಾತ್ಮಸ್ವರೂಪವನ್ನು ಪ್ರೇಮದಿಂದ ಹುಡುಕುವನು.

ಈಭಕ್ತಿಯಾದರೂ ಹೃದಯದಲ್ಲಿ ಅಂಕುರಿಸಬೇಕಾದರೆ

"येषां त्वंतगतं पापं जनानां पुण्यकर्मणाम् ।
ते द्वंद्वमोहनिर्मुक्ता भजंते मां दृढव्रताः ॥"

ಎಂಬ ಗೀತೋಕ್ತಿಯಂತೆ ಪರಮಾತ್ಮಜ್ಞಾನಕ್ಕೆ ಪ್ರತಿಬಂಧಕವಾದ ಪಾಪವು

ಅನೇಕ ಜನ್ಮಗಳಲ್ಲಿ ಮಾಡಿದ ಸುಕೃತಗಳ ಪರಿಪಾಕದಿಂದ ಕ್ಷಯವಾಗಿರಬೇಕು.

"चतुर्विधा भजंते मां जनास्सुकृतिनोऽर्जुन ।
आर्तो जिज्ञासुरर्थार्थी ज्ञानी च भरतर्षभ ॥"

ಎಂಬ ಶ್ಲೋಕದಲ್ಲಿ ಆರ್ತ, ಜಿಜ್ಞಾಸು, ಅರ್ಥಾರ್ಥಿ ಮತ್ತು ಜ್ಞಾನಿ ಎಂಬ ನಾಲ್ಕು ಬಗೆಯ ಸುಕೃತಿಗಳು ತನ್ನನ್ನು ಭಜಿಸುವರೆಂದು ಶ್ರೀಕೃಷ್ಣನು ಹೇಳಿರುವದರಲ್ಲಿ ರೋಗಾದಿಸಂಕಟಗಳಿಂದ ದೀನರಾಗಿಯೊ, ತಿಳಿದುಕೊಳ್ಳಬೇಕೆಂದೊ ಅಥವಾ ಏನಾದರೊಂದು ಇಷ್ಟಪ್ರಾಪ್ತಿಯಾಗಬೇಕೆಂದೊ ಇಚ್ಛೆಯನ್ನು ಇಟ್ಟುಕೊಂಡು ಭಜನೆಮಾಡುವವರನ್ನು ಕೂಡ ಪರಮಾತ್ಮನು ಸುಕೃತಿಗಳೊಳಗೇ ಸೇರಿಸಿದ್ದಾನೆ. ವಿಚಾರಮಾಡಿದರೆ ಅವರನ್ನು ಭಕ್ತರೆನ್ನುವದಕ್ಕಿಂತಲೂ ಕರ್ಮಿಗಳೆನ್ನಬಹುದು. ಪರಮಾತ್ಮನು ಇಂಥವರನ್ನೇ ಸುಕೃತಿಗಳೆನ್ನುವಾಗ ಕೇವಲ ಪ್ರೇಮದಿಂದ ಭಜನೆಯನ್ನು ಮಾಡುವವರ ಹೆಚ್ಚುಗಾರಿಕೆಯನ್ನು ಹೇಳಬೇಕಾದುದೇನು?

"सर्वभुतानि सम्मोहं सर्गे यांति परंतप"

ಎಂಬ ಗೀತಾವಾಕ್ಯದಂತೆ ಸೃಷ್ಟಿಕಾಲದಲ್ಲಿ ಸರ್ವಪ್ರಾಣಿಗಳೂ ಮೋಹಯುಕ್ತರಾಗಿ ಹುಟ್ಟಿದರೂ ಪರಮಾತ್ಮನ ಭಜನೆಯಲ್ಲಿ ಪ್ರೇಮವುಂಟಾಗುವ ಸುಕೃತವೇ ಆಮೋಹವೆಂಬ ಆವರಣದ ಒಂದು ಭಾಗವನ್ನು ಕಿತ್ತು ಬಿಸುಡಿದ ಚಿಹ್ನವಾಗಿರುವದು. ಪರಮಾತ್ಮಸ್ವರೂಪವನ್ನೇ ಇನ್ನೂ ತಿಳಿಯದೆ ಮೂಢಬುದ್ಧಿಯಿಂದ ಸುಮ್ಮನೆ ಮಾಡುವ ಪ್ರೇಮಕ್ಕೆ ಅಷ್ಟು ಮಹತ್ತ್ವವೆಲ್ಲಿಯದೆಂದು ಸಂಶಯಪಡಕೆಲಸವಿಲ್ಲ.

"ज्ञात्वाऽज्ञात्वाथ ये वै मां यावान् यश्चास्मि यादृशः ।
भजंत्यनन्यभावेन ते मे भक्ततमा मताः ॥"

ಎಂದು ಶ್ರೀಮದ್ಭಾಗವತದಲ್ಲಿ ಹೇಳಿರುವಂತೆ ಪರಮಾತ್ಮನು ಯಾರು? ಹೇಗಿ-

ದ್ದಾನೆ? ಎಷ್ಟಿದ್ದಾನೆ? ಎಂಬುದನ್ನು ತಿಳಿದೇ ಆಗಲಿ ತಿಳಿಯದೇ ಆಗಲಿ ಅನನ್ಯಭಾವದಿಂದ ಅವನನ್ನು ಭಜಿಸಿದರೆ ಅವರು ಭಕ್ತಾಗ್ರಗಣ್ಯರೆನಿಸಿಕೊಳ್ಳು-ವರು. ತಿಳಿದವರು ಭಜಿಸುವದೇನು ದೊಡ್ಡ ಮಾತು! ಅವರು ಭಗವಂತ-ನನ್ನು ಪ್ರೀತಿಸದೆ ಇರುವದಕ್ಕೇ ಆಗುವದಿಲ್ಲ. ಭಗವತ್ಸ್ವರೂಪವನ್ನು ತಿಳಿಯುವವರೆಗೂ ಆಪ್ತವಾಕ್ಯರೂಪವಾದ ಶಬ್ದಪ್ರಮಾಣದಿಂದ ಭಗವಂತ ನಲ್ಲಿ ಗೌಣೀಭಕ್ತಿಯನ್ನು ಮಾಡಬೇಕು.

ವಿಚಾರದವರು ಭಗವಂತನನ್ನು "यतो वा इमानि भूतानि जायंते" ಎಂಬ ಶ್ರುತಿಯಂತೆ ಈಪ್ರಪಂಚದ ಸೃಷ್ಟಿಸ್ಥಿತಿಯ ಕರ್ತನಾದವನೆಂದು ಹುಡುಕುವರು. ಪ್ರೇಮದಿಂದ ಹುಡುಕಬೇಕೆಂಬುವವನಿಗೆ ಈಲಕ್ಷಣವು ಒಪ್ಪಾಗುವದಿಲ್ಲ. ಅವನು ಲೋಕಗಳ ಸೃಷ್ಟಿಸ್ಥಿತಿಲಯಗಳನ್ನು ಮಾಡುವ ಸರ್ವಸಮರ್ಥನಾದರೆ ನನಗೇನು ಸಂಬಂಧವೆಂದು ಭಕ್ತನು ಆಲಕ್ಷಣವನ್ನು ಕಡೆಗಣ್ಣಿನಿಂದ ನೋಡುವನು. ಅನಾಥರೂ ಅಶಕ್ತರೂ ಆದ ನಮ್ಮಂಥ ಕ್ಷುದ್ರ-ಜೀವಿಗಳಿಗೂ ಸರ್ವನಾಥನೂ ಸರ್ವಶಕ್ತನೂ ಆದ ಆಮಹಾ ಮಹಾ ಪುರುಷನಿಗೂ ಅಜಗಜನ್ಯಾಯವೆಂದು ಆಲಕ್ಷಣದ ಮೇಲೆ ಭಕ್ತರಿಗೆ ಉಪೇಕ್ಷೆ. ಅವನ ನಿರಾಕಾರತ್ವ, ಸರ್ವವ್ಯಾಪಿತ್ವ, ಸರ್ವಾಂತರ್ಯಾಮಿತ್ವ ಮೊದಲಾದವು-ಗಳನ್ನು ಕಲ್ಪನೆಮಾಡಿ ತಲೆನೋವುತಂದುಕೊಳ್ಳುವದು ಭಕ್ತನ ಮನಸ್ಸಿಗೆ ಬರುವದಿಲ್ಲ. ಭಗವಂತನ ಅನುಗ್ರಹವನ್ನು ಪಡೆಯಬೇಕೆಂದು ಹೇಳುತ್ತ ಭಗವಂತನ ಪ್ರತಿಕಕ್ಷಿಯಾಗಿ, ಭಗವಂತನು ಸೃಷ್ಟಿಮಾಡಿದ ಪವಿತ್ರವಾದ ಕ್ಷೇತ್ರ-ತೀರ್ಥಗಳನ್ನೂ ಮನೋಹರವಾದ ಪರ್ವತವನಪ್ರದೇಶಗಳನ್ನೂ ಉಪ-ಯುಕ್ತವಾದ ಗೃಹಾರಾಮಗಳನ್ನೂ ಸರ್ವಪ್ರಾಣಿಗಳನ್ನೂ ಸಮಸ್ತವನ್ನೂ ದೃಕ್ಪಥಕ್ಕೆ ಬೀಳದಂತೆ ನಿರ್ದಯದಿಂದ ಒಂದೇ ಸಲಕ್ಕೆ ಬ್ರಹ್ಮಾಂಡದಿಂದ ಹೊರಕ್ಕೆ ಚೆಲ್ಲುವದೆಂದಕೂಡಲೆ ಭಕ್ತನು ಬೆಚ್ಚಿಬೀಳುವನು. ನಿರಾಕಾರ-ವನ್ನೂ ನಿರ್ಗುಣವನ್ನೂ ಹಂಬಲಿಸುತ್ತ ತ್ರಿಶಂಕುಸ್ವರ್ಗದಂತೆ ಆಕಾಶದಲ್ಲಿ ಹಾರಾಡುವ ಸಾಹಸವು ಭಕ್ತನಿಗೆ ಬಹುಭಯಂಕರವಾಗಿ ತೋರುವದು. ನಾವು ಸಾಕಾರರಾಗಿ ನಿರಾಕಾರವನ್ನು ಕಲ್ಪನೆಮಾಡುವದು ಹೇಗೆಂಬುದೊಂದು ಭಕ್ತನಿಗೆ ದೊಡ್ಡಸಂದೇಹ. ಭಗವಂತನು

"नाहं वेदैर्न तपसा न दानेन न चेज्यया ।
शक्य एवंविधो द्रष्टुं दृष्टवानसि मां यथा ॥"

ಎಂಬ ಶ್ಲೋಕದಲ್ಲಿ ಅರ್ಜುನನನ್ನು ಕುರಿತು "ಈಗ ನೀನು ನೋಡಿದ ನೋಟವು ಭಕ್ತಿಯಿಲ್ಲದೆ ವೇದಶ್ರವಣ, ತಪಸ್ಸು, ದಾನ ಮತ್ತು ಯಜ್ಞ ಇವುಗಳನ್ನು ಮಾಡಿದವರಿಗೆ ಕೂಡ ಸಾಧ್ಯವಿಲ್ಲವೆಂದು ಹೇಳಿ, ವಿರಾಡ್ರೂಪವನ್ನು ತೋರಿಸಿದಾಗ ಪರಮಾತ್ಮನ ಸಾಕ್ಷಾತ್ಸಖನಾದ ಅರ್ಜುನನು

अदृष्टपूर्वं हृषितोऽस्मि दृष्ट्वा
भयेन च प्रव्यथितं मनो मे ।
तदेव मे दर्शय देव रूपं
प्रसीद देवेश जगन्निवास ॥"

ಎಂಬ ಶ್ಲೋಕದಲ್ಲಿ "ಎಂದೆಂದೂ ನೋಡಿಲ್ಲದ ರೂಪನ್ನು ನೋಡಿ ಸಂತೋಷವೂ ಆಗಿರುವದಲ್ಲದೆ ಭಯದಿಂದ ಮನಸ್ಸು ವ್ಯಾಕುಲವನ್ನೂ ಹೊಂದಿರುವದು. ಆದುದರಿಂದ ಹೆ, ದೇವೇಶ, ಜಗನ್ನಿವಾಸ, ಪ್ರಸನ್ನನಾಗು; ನಿನ್ನ ಮೊದಲಿನ ರೂಪನ್ನೇ ನನಗೆ ತೋರಿಸು." ಎಂದು ಕೇಳಿರುವದನ್ನೂ ಆ ಮೇಲೆ ಕಿರೀಟಗದಾಚಕ್ರಮೊದಲಾದವುಗಳಿಂದ ಕೂಡಿದ ರೂಪನ್ನು ನೋಡಿ

"दृष्ट्वेदं मानुषं रूपं तव सौम्यं जनार्दन ।
इदानीमस्मि संवृत्तः सचेताः प्रकृतिं गतः ॥"

ಎಂಬ ಶ್ಲೋಕದಲ್ಲಿ "ಹೆ, ಜನಾರ್ದನ, ಈ ನಿನ್ನ ಸೌಮ್ಯವಾದ ಮನುಷ್ಯವೇಷವನ್ನು ನೋಡಿ ಸಮಾಧಾನವನ್ನು ಹೊಂದಿ ಪೂರ್ವಸ್ಥಿತಿಗೆ ಬಂದೆನೆಂದು ಹೇಳಿರುವದನ್ನು ನೋಡಿದರೆ ವಿರಾಡ್ರೂಪಕ್ಕಿಂತ ಹೆಚ್ಚಿನದಾದ ನಿರಾಕಾರದ ಕಲ್ಪನೆಯು ಎಷ್ಟು ಭಯಂಕರವೆಂಬುದು ತಿಳಿಯುವದು. "ಕಲ್ಪನಾತೀತನೆಂದು ಕಲ್ಪನೆಮಾಡು" ಎಂದು ಜ್ಞಾನಿಯು ಹೇಳಿದರೆ ಭಕ್ತನು ಹೊಟ್ಟೆ-

ಹಿಡಿಯಲಾರದಷ್ಟು ನಗುವನು. ಕಣ್ಣು, ಕಿವಿ, ಮೂಗು, ಮುಖ ಏನೂ ಇಲ್ಲದ ಒಂದು ದೈವಸ್ವರೂಪವನ್ನು ಕಲ್ಪನೆಮಾಡುವದು ಬಹು ಅಸಹ್ಯವಾಗುವದು. ಸಾಮಾನ್ಯವಾಗಿ ನಾವು ಒಂದೆರಡು ದಿನಗಳು ಮನೆಯಲ್ಲಿಟ್ಟು ಪೂಜೆಮಾಡಿ ಆ ಮೇಲೆ ನೀರೊಳಕ್ಕೆ ಒಗೆಯುವ ಗಣಪತಿಯ ವಿಗ್ರಹವನ್ನು ಮನೆಗೆ ತಂದಾಗಲೆ ಅದರ ಅಂಗದಲ್ಲೇನಾದರೂ ಕೊರತೆಯಿದ್ದರೆ ಮನೆಯ ಮಂದಿಯೆಲ್ಲ ನಮ್ಮ ಮನೆಗೆ ಸುಂದರವಾದ ವಿಗ್ರಹವು ಬರಲಿಲ್ಲವಲ್ಲ! ಎಂದು ಕೈಕೈಹಿಸುಕಿಕೊಳ್ಳುವರು. ಇನ್ನು ಶಾಶ್ವತವಾಗಿರಬೇಕೆಂದು ನಾವು ಬಯಸುವ ಪರಮಾತ್ಮಸ್ವರೂಪವನ್ನು ಅಂಥ ಘೋರಾಕಾರವಾಗಿ ಮಾಡುವದೆಂದರೆ ಭಕ್ತನು ತನ್ನ ಮನಸ್ಸಿಗೆ ವಿರುದ್ಧವಾಗಿ ನಡೆಯಬೇಕಾಗುವದು. ಮನಸ್ಸಿಗೆ ವಿರುದ್ಧವಾಗಿ ಕಲ್ಪನೆಯನ್ನು ಮಾಡುವದೂ ಆಮೇಲೆ ಅದರ ಮೇಲೆ ಪ್ರೇಮವನ್ನಿಡುವದೂ ಆಗದ ಮಾತು. ಭಗವಂತನ ಆನಂದ ಸ್ವರೂಪವನ್ನು ಬಹು ಚೆನ್ನಾಗಿ ಅನುಭವಮಾಡಬೇಕೆಂಬ ಭಕ್ತನು ತನ್ನ ದೇವರು ತನ್ನ ಮನಸ್ಸಿಗೆ ಅಂದವಾಗಿ ಕಾಣುವಂಥವನಾಗಿರಬೇಕೆಂದು ಇಚ್ಛಿಸುವನು. ಮನುಷ್ಯನ ಭಾಗಕ್ಕೆ ಮನುಷ್ಯನಷ್ಟು ಸುಂದರವಾದ ಪ್ರಾಣಿಯಾವದೂ ಇಲ್ಲ. ಮನುಷ್ಯರು ತಮ್ಮ ವಿನೋದಕ್ಕಾಗಿ ಬೆಕ್ಕಿನಮರಿ, ನಾಯಿಕುನ್ನಿ, ಜಿಂಕೆ, ಗಿಳಿ ಮುತ್ತು ಪಾರಿವಾಳ ಮೊದಲಾದ ಬೇರೆ ಬೇರೆ ಪ್ರಾಣಿಗಳನ್ನು ಸಾಕುತ್ತ ಅವುಗಳನ್ನು ಪ್ರೀತಿಸಿದರೂ ಮನುಷ್ಯನಿಗೆ ಮನುಷ್ಯನಷ್ಟು ಸೌಂದರ್ಯ ಇನ್ನೊಂದರಲ್ಲಿ ಕಾಣುವದಿಲ್ಲ. ಆದುದರಿಂದ ಭಕ್ತನ ಭಾಗಕ್ಕೆ ದೇವರು ತನ್ನ ಸರ್ವವ್ಯಾಪಿತ್ವವನ್ನು ಸಂಕೋಚಮಾಡಿಕೊಂಡು ಮನುಷ್ಯಾಕಾರವನ್ನು ಹೊಂದಬೇಕು. ಭಕ್ತನು ತನ್ನ ದೇವರಿಗೆ ಲಯವನ್ನು ಮಾಡುವ ಅಧಿಕಾರವನ್ನು ಕೊಡುವದಿಲ್ಲ. ಲಯದಿಂದ ಪ್ರಾಣಿಗಳಿಗೆ ಬಾಧೆಯುಂಟಾಗುವದೆಂದು ಅವನಿಗೆ ಅಂಜಿಕೆ. ಶ್ರೀರಾಮಚಂದ್ರನು ವಿಭೀಷಣನನ್ನು ತನ್ನವನನ್ನಾಗಿ ಮಾಡಿಕೊಂಡಾಗ

"सकृदेव प्रपन्नाय तवास्मीति च याचते ।
अभयं सर्वभूतेभ्यो ददाम्येतद्व्रतं मम ॥"

ಎಂದರೆ "ಒಂದು ಸಲ ಬಂದು ನಾನು ನಿನ್ನವನೆಂದು ಹೇಳಿಕೊಂಡರೆ ಯಾರಿಗಾದರೂ ಅಭಯವನ್ನು ಕೊಡುವದೇ ನನ್ನ ವ್ರತ" ಎಂದು ಹೇಳಿ ಆಮೇಲೆ ಆ ಅರ್ಥವನ್ನೇ "ವಿಭೀಷಣನೇ ಏಕೆ, ಸಾಕ್ಷಾದ್ರಾವಣನೇ ಬಂದು ಒಮ್ಮೆ ನಿನ್ನವನೆಂದು ಶರಣುಹೊಕ್ಕರೆ ಸರಿ. ಅವನಿಗೂ ಅಭಯವನ್ನು ಕೊಡುತ್ತೇನೆ" ಎಂದು ಸ್ಪಷ್ಟಪಡಿಸಿದ ಹಾಗೆ ತನ್ನ ದೇವರು ದಯಾಮಯನಾಗಿರಬೇಕೆಂದು ಭಕ್ತನು ಅಪೇಕ್ಷಿಸುವನು. ಭಕ್ತರ ದೇವರಿಗೆ ಶಿಕ್ಷೆಮಾಡುವದೆಂದರೇನೆಂಬುದೇ ತಿಳಿದಿರಕೂಡದು. ದಯಾಗುಣಕ್ಕೆ ಬಾಧಕವನ್ನು ತರತಕ್ಕದ್ದೇನೇನೂ ಅವನಲ್ಲಿರಬಾರದು. ಅವನು ತನ್ನ ಸರ್ವೈಶ್ವರ್ಯಸಂಪನ್ನತೆಯನ್ನು ಸಂಕೋಚಮಾಡಿಕೊಂಡು ಭಕ್ತನ ಸ್ಥಿತಿಗತಿಯನ್ನನುಸರಿಸಿ ಬಡತನವನ್ನೊ ಭಾಗ್ಯವನ್ನೊ ಸಮಯ ಬಂದ ಹಾಗೆ ಅನುಭವಿಸಿಕೊಂಡಿರುವಂಥವನಾಗಬೇಕು. ಇಷ್ಟೇ ಅಲ್ಲದೆ ದೇವರಿಗೆ ಸರ್ವೇಶ್ವರತ್ವವನ್ನು ಕೂಡ ಸಾಮಾನ್ಯವಾಗಿ ಭಕ್ತರು ಒಪ್ಪುವದಿಲ್ಲ. ಏಕೆಂದರೆ ಈಶ್ವರತ್ವವನ್ನು ದೇವರಿಗೆ ಕೊಟ್ಟರೆ ನಾವು ಅವನೆದುರಿಗೆ ಕೈ ಕಟ್ಟಿಕೊಂಡು, ನಮ್ಮ ದೇಹವನ್ನೆಲ್ಲ ಸಂಕೋಚಮಾಡಿಕೊಂಡು ಜಿ, ಜಿ, ಎನ್ನುತ್ತ ಇರಬೇಕಾಗುತ್ತದೆ. ಈ ಸ್ಥಿತಿಯಲ್ಲಿ ನಮ್ಮ ಸ್ವಾತಂತ್ರ್ಯವನ್ನೆಲ್ಲ ಮಾರಿಕೊಂಡು ಅವನ ಮನೋವೃತ್ತಿಯನ್ನೇ ನಾವು ಅನುಸರಿಸಿಕೊಂಡು ಇರಬೇಕಾಗುತ್ತದೆ. ಈ ಪದ್ಧತಿಯಿಂದ ನಮಗೆ ಆಗಬೇಕಾದಷ್ಟು ಪ್ರಯೋಜನವಾಗುವದಿಲ್ಲ. ಪಾಠಶಾಲೆಯಲ್ಲಿ ಉಪಾಧ್ಯಾಯರ ಮನೋವೃತ್ತಿಯನ್ನನುಸರಿಸಿ ಪಾಠವನ್ನು ಕಲಿಯಬೇಕೆಂದರೆ ಮಕ್ಕಳಿಗೆ ಸಾಧ್ಯವೆ? ಪಾಪ! ಮನೆಯಲ್ಲಿ ಮುದ್ದುಮುದ್ದಾಗಿ ತಂದೆತಾಯಿಗಳ ಬಳಿಯಲ್ಲಿ ಮೊದಲು ಮಾತಾಡುತ್ತ ನಿರಂಕುಶರಾಗಿ ಬೆಳೆದ ಮಕ್ಕಳು ಪಾಠಶಾಲೆಯ ಹೊಸಿಲನ್ನು ದಾಟುತ್ತಲೆ ಉಪಾಧ್ಯಾಯರ ಮನೋವೃತ್ತಿಯನ್ನನುಸರಿಸಬೇಕೆಂಬುದು ಎಂಥ ಮಾತು!! ಅವರಿಗೆ ತಮ್ಮ ಮನೋವೃತ್ತಿಯೇ ತಿಳಿಯದು. ಇನ್ನು ಉಪಾಧ್ಯಾಯರ ಮನೋವೃತ್ತಿ ಹೇಗೆ ತಿಳಿದೀತು? ಉಪಾಧ್ಯಾಯರ ವಿದ್ಯಾಪ್ರವಾಹವು ಮಕ್ಕಳ ಹೃದಯದೊಳಕ್ಕೆ ಹರಿಯಬೇಕಾದರೆ ಉಪಾಧ್ಯಾಯರು ಪಾಠಶಾಲೆಯಲ್ಲಿ ತಾವು ಬಾಲತ್ವವನ್ನು ಆವಾಹನೆಮಾಡಿಕೊಂಡು ಮಕ್ಕಳ ಮನೋವೃತ್ತಿಯನ್ನನುಸರಿಸಿ ಕಿಂಡರ್ಗಾರ್ಟನ್ ಎಂದು ಈಗ ಹೆಸರು

ಗೊಂಡಿರುವ ಕ್ರಮದಲ್ಲಿ ಬೋಧಿಸಬೇಕು. ಭಗವಂತನ ಆನಂದಪ್ರವಾಹವು ಭಕ್ತನ ಹೃದಯಕ್ಕೆ ಹರಿಯಬೇಕಾದರೂ ಭಗವಂತನು ಭಕ್ತರಿಗೆ ತಕ್ಕ ಸ್ಥಿತಿಯನ್ನು ಅವಾಹನೆಮಾಡಿಕೊಂಡು ಬಂದು ತನ್ನ ಅನುಗ್ರಹವನ್ನು ತೋರಿಸಬೇಕು. ಹೀಗೆ ಮಾಡುವದೇ ಸರಳವಾದ ಮಾರ್ಗ. ಹೀಗಲ್ಲದೆ ಭಗವಂತನು ಸರ್ವೇಶ್ವರತ್ವದ ದರ್ಪವನ್ನು ತೋರಿಸುತ್ತಿರುವಾಗ ನಾವು ಹೊರಗೆ ಪ್ರೇಮವನ್ನು ನಟಿಸಿದರೂ ಒಳಗೆ ಮನಸ್ಸು ಸಂಕುಚಿತಸ್ಥಿತಿಯನ್ನು ಪಡೆದಿರುತ್ತದೆ. ಬಾಯಿಮುಚ್ಚಿರುವ ಪಾತ್ರೆಯೊಳಗೆ ನೀರು ಹೇಗೆ ಹೋಗಲಾರದೊ ಹಾಗೆ ಸಂಕುಚಿತವಾದ ಮನಸ್ಸಿನೊಳಕ್ಕೆ ಆನಂದದ ಪ್ರವಾಹವು ಪ್ರವೇಶಿಸಲಾರದು. ಇಷ್ಟೇ ಅಲ್ಲದೆ ಅವನು ದರ್ಪವನ್ನು ಪ್ರದರ್ಶನಮಾಡುವಾಗ ನಾವು ಹೆದರಿಕೊಂಡು ನಡೆಯಬೇಕಾಗುವದು. ಪ್ರೇಮ ಮತ್ತು ಭಯ ಎರಡೂ ಒಂದು ಕಡೆ ಕೂಡಿರಲಾರವು; ಅವು ಪರಸ್ಪರ ವಿರುದ್ಧವಾದವುಗಳು. ಹೆದರಿಕೆಯ ಗಂಧವೇ ಭಕ್ತನಿಗೆ ಆಗದು. ಆದುದರಿಂದ ಭಕ್ತನ ಭಾಗಕ್ಕೆ ಬರುವಾಗ ದೇವರು ತನ್ನ ಸರ್ವೇಶ್ವರತ್ವವನ್ನು ಮೂಲೆಯಲ್ಲಿ ಮುದುರಿಟ್ಟು ಬರಬೇಕು; ಅದರ ವಾಸನೆಯನ್ನು ಕೂಡ ತೋರಿಸಕೂಡದು. ಭಕ್ತನು ಬಯಸಿದಂತೆ ದೇವರು ಆಗಬೇಕು. ತಂದೆಯಾಗಿ ಯಾಜಮಾನ್ಯವನ್ನು ವಹಿಸಿ ಮಕ್ಕಳಿಗೆ ಬುದ್ಧಿವಾದವನ್ನು ಹೇಳಬೇಕು; ತಾಯಾಗಿ ಮಕ್ಕಳ ಸುಖಕಷ್ಟಗಳನ್ನು ಸುಧಾರಿಸಬೇಕು; ಅರಸಾಗಿ ಸಿಂಹಾಸನವನ್ನು ಹತ್ತಬೇಕು; ಆಳಾಗಿ ಗಾಡಿಯನ್ನು ಹೊಡೆಯಬೇಕು; ಸ್ನೇಹಿತನಾಗಿ ಆಲೋಚನೆಯನ್ನು ಹೇಳಬೇಕು; ಶಿಷ್ಯನಾಗಿ ಪಾಠವನ್ನು ಕಲಿಯಬೇಕು; ಗುರುವಾಗಿ ಬ್ರಹ್ಮಜ್ಞಾನವನ್ನು ಬೋಧಿಸಬೇಕು. ಬಹಳವಾಗಿ ಹೇಳುವದೇನು? ಸಮಯ ಬಂದರೆ ಮೀನಾಗಬೇಕು; ಆಮೆಯಾಗಬೇಕು; ಹಂದಿಯಾದರೂ ಆಗಬೇಕು; ಮೃಗವಾದರೂ ಆಗಬೇಕು. ಭಕ್ತನ ಮನಸ್ಸಿನಂತೆ ಕುಳಿತುಕೊಳ್ಳಬೇಕು, ಸ್ನಾನಮಾಡಬೇಕು, ವಸ್ತ್ರವನ್ನುಡಬೇಕು, ಪುಷ್ಪವನ್ನು ಮುಡಿಯಬೇಕು, ಗಂಧವನ್ನು ಹಚ್ಚಿಕೊಳ್ಳಬೇಕು, ನೈವೇದ್ಯವನ್ನು ಉಣ್ಣಬೇಕು. ಹೀಗೆಲ್ಲ ಅಪೇಕ್ಷಿಸುವ ಭಕ್ತನ ಕಿವಿಗೆ ಪೂರ್ಣನಾದ ನಿನ್ನನ್ನು ಎಲ್ಲಿ ಆವಾಹನೆ ಮಾಡಲಿ? ಸರ್ವಾಧಾರನಾದ ನಿನಗೆ ಆಸನವನ್ನು ಹೇಗೆ ಕಲ್ಪಿಸಲಿ? ನಿರಾಕಾರನಾದ ನಿನಗೆ

ಹೇಗೆ ಸ್ನಾನವನ್ನು ಮಾಡಿಸಲಿ? ವಿಶ್ವೋದರನಾದ ನಿನಗೆ ಹೇಗೆ ವಸ್ತ್ರವನ್ನು-ಡಿಸಲಿ? ನಿರ್ವಾಸನನಾದ ನಿನಗೆ ಪುಷ್ಪವನ್ನು ಹೇಗೆ ಮುಡಿಸಲಿ? ನಿರ್ಲೇಪ-ನಾದ ನಿನಗೆ ಗಂಧವನ್ನು ಹೇಗೆ ಹಚ್ಚಲಿ? ನಿತ್ಯತೃಪ್ತನಾದ ನಿನಗೆ ನೈವೇದ್ಯ-ವನ್ನು ಹೇಗೆ ಮಾಡಲಿ? ಅನಂತನಾದ ನಿನ್ನನ್ನು ಹೇಗೆ ಪ್ರದಕ್ಷಿಣೆಮಾಡಲಿ? ಅದ್ವಯನಾದ ನಿನಗೆ ಹೇಗೆ ನಮಸ್ಕಾರವನ್ನು ಮಾಡಲಿ? ವೇದವಾಕ್ಯಕ್ಕೂ ಕೂಡ ಅವೇದ್ಯನಾದ ನಿನ್ನನ್ನು ಹೇಗೆ ಸ್ತೋತ್ರಮಾಡಲಿ? ಎಂಬ ಜ್ಞಾನಿಯ ಮಾತುಗಳು ಹೇಗೆ ಇಂಪಾದಾವು? ದೇವರು ಭಕ್ತನ ಬಯಕೆಯಂತೆ ಆಗಿ ಬರುವದರಿಂದ ಭಕ್ತನು ಅಕೃತ್ರಿಮವಾದ ಪ್ರೇಮವನ್ನು ಮಾಡುವದಕ್ಕೆ ಸಾಧನ-ವಾಗುತ್ತದೆ. ಮಕ್ಕಳಿಗೆ ಬುದ್ಧಿವಾದವನ್ನು ಹೇಳಬೇಕಾದರೆ ತಂದೆಗೆ ಯಾರೇನು ಕೊಡುವರು? ಮಕ್ಕಳನ್ನು ಆದರಿಸುವದಕ್ಕೆ ತಾಯಿ ಏನು ಬೇಡುವಳು? ಒಂದು ಮುತ್ತು ಕೊಡೆಂದರೆ ಕೂಸು ಅದಕ್ಕೆ ನನಗೇನು ಕೊಡುತ್ತಿ ಎಂದು ಕೇಳುವದೇನು? ಹೀಗೆ ಭಕ್ತನು ದೇವರನ್ನು ತನ್ನ ಬಂಧುವರ್ಗದಲ್ಲಿ ಸೇರಿಸಿ-ಕೊಳ್ಳುವದರಿಂದ ಫಲಾಪೇಕ್ಷೆಮಾಡದೆ ಇರುವದಕ್ಕೆ ಸಹಾಯವಾಗುತ್ತದೆ. ದೇವರು ನಮ್ಮ ಸ್ವಕೀಯನೇ ಆಗಿರುವದರಿಂದ ನಮಗೆ ಸರ್ವಶ್ರೇಯಸ್ಸನ್ನೂ ತಾನೇ ತಿಳಿದು ಕೊಡುತ್ತಾನೆ. ಅವನು ನಮ್ಮಿಂದ ಯಾವ ಪ್ರತಿಫಲವನ್ನೂ ಬಯಸುವದಿಲ್ಲ. ಅವನು ಯಾವನೋ ಒಬ್ಬ ಪರಕೀಯನಾಗಿದ್ದರೆ ನಮಗೆ ಏನಾದರೊಂದು ಕೆಲಸವಾಗಬೇಕಾದಾಗ ನಾವು ನಮ್ಮ ಕೈಲಾದ ಏನಾದ-ರೊಂದು ಸೇವೆಯನ್ನು ಮಾಡಿ ಅವನಿಂದ ಆ ಕೆಲಸವನ್ನು ಪೂರ್ಣಮಾಡಿ-ಕೊಂಡು ಬರಬೇಕಾಗುತ್ತದೆ. ಈ ಸಂದರ್ಭದಲ್ಲಿ ಅವನ ಮತ್ತು ನಮ್ಮ ಪ್ರೇಮವು ಕೇವಲ ಮಾರಾಟದ್ದು. ನಮ್ಮದೊಂದು ಬಗೆಯ ಪ್ರೇಮದ ಬೆಲೆಗೆ ಅವನದೊಂದು ಬಗೆಯ ಪ್ರೇಮವನ್ನು ಕೊಂಡುಕೊಂಡ ಹಾಗಾಗುವದು. ಇಂಥ ಪ್ರೇಮವು ಭಕ್ತನಿಗೆ ಬೇಕಿಲ್ಲ. "ದೇವರು ನಮ್ಮವನಾದ ಮೇಲೆ ನಾವು ಸೇವೆಮಾಡಲಿ ಬಿಡಲಿ ಅವನು ನಮ್ಮ ಪ್ರೇಮಕ್ಕೆ ಪಾತ್ರನು; ಅವನು ನಮ-ಗೊಂದು ಹೆಚ್ಚಿನ ಪ್ರಯೋಜನವನ್ನು ತೋರಿಸಲಿ ಬಿಡಲಿ ನಾವು ಅವನ ಪ್ರೇಮಕ್ಕೆ ಪಾತ್ರರು." ಎಂದು ಭಕ್ತನು ಯೋಚಿಸುವನು. ಸಾಕ್ಷಾದ್ದೇ-ವನೇ ಭಕ್ತನ ಬಂಧುವರ್ಗದಲ್ಲೊಬ್ಬನಾಗುವದರಿಂದ ಭಕ್ತನು ಭಗವಂತನ

"**नियोगक्षेम आत्मवान्**" ಎಂದರೆ "ತನಗಿಲ್ಲದಿರುವದನ್ನು ಪಡೆಯುವ ಮತ್ತು ಇದ್ದದ್ದನ್ನು ಕಾಪಾಡಿಕೊಳ್ಳುವ ಸಂಬಂಧವಾದ ಉದ್ಯೋಗವು ರಜೋಗುಣ ಮತ್ತು ತಮೋಗುಣಗಳಲ್ಲಿ ಅಂತರ್ಭೂತವಾಗುವದರಿಂದ ಪರಮೇಶ್ವರನೇ ಗತಿಯೆಂಬ ವ್ರತವನ್ನು ಧರಿಸಬೇಕು" ಎಂಬ ಮತ್ತು

"अनन्याश्चिंतयंतो मां ये जनाः पर्युपासते ।
तेषां नित्याभियुक्तानां योगक्षेमं वहाम्यहम् ॥"

ಎಂದರೆ "ಯಾರು ನೀನೆ ಗತಿಯೆಂದು ನನ್ನನ್ನು ಯಾವಾಗಲೂ ಸರ್ವಪ್ರಕಾರದಿಂದಲೂ ಉಪಾಸನೆಮಾಡುತ್ತಾರೊ ಅವರ ಯೋಗಕ್ಷೇಮದ ಭಾರವನ್ನು ನಾನು ವಹಿಸುತ್ತೇನೆ" ಎಂಬ ವಾಕ್ಯಗಳ ಮೇಲೆ ದೃಢವಿಶ್ವಾಸವನ್ನಿಟ್ಟು

"भोजनाच्छादने चिंतां वृथा कुर्वंति वैष्णवाः ।
योऽसौ विश्वंभरो देवस्स भक्तान् किमुपेक्षते? ॥"

ಎಂಬಂತೆ ಸಮಸ್ತಲೋಕಗಳನ್ನೂ ರಕ್ಷಿಸುವ ದೇವನು ಭಕ್ತರನ್ನು ಉಪೇಕ್ಷೆ ಮಾಡಲಾರನಾದುದರಿಂದ ಊಟಉಡಿಗೆಯ ಚಿಂತೆ ನಮಗೇತಕ್ಕೆಂದು ನಿರಾತಂಕದಿಂದ ಭಗವಂತನ ಮೇಲೆ ಪ್ರೇಮವನ್ನು ಮಾಡುವನು. ಇದರಿಂದ ಗೌಣೀಭಕ್ತಿಯಲ್ಲಿ ಸಂಸಾರಕ್ಕಿಂತಲೂ ಹೆಚ್ಚು ಸುಖವು ಸಿಕ್ಕುವದಕ್ಕೆ ಅವಕಾಶವಾಗುವದು. ನೋಡಿರಿ. ನಮ್ಮ ದುಃಖಕ್ಕೆ ಅಭಿಮಾನವೇ ಕಾರಣವು ಹೊರತು ಮತ್ತೇನೂ ಅಲ್ಲ. ಅಭಿಮಾನದಿಂದ ಕರ್ತೃತ್ವವನ್ನು ವಹಿಸುತ್ತ ಹೋದ ಹಾಗೆಲ್ಲ ದುಃಖವು ಹೆಚ್ಚುತ್ತ ಹೋಗುವದು. ಶಿಶುವಿನ ಸರ್ವಭಾರವನ್ನೂ ತಾಯಿಯೇ ವಹಿಸುವಳಷ್ಟೆ. ಆಗ ಅದರ ತಲೆಯ ಮೇಲೆ ಏನೂ ಇರುವದಿಲ್ಲ. ಆದರೆ ಅದೇ ಶಿಶು ಬೆಳೆಯುತ್ತ ಬೆಳೆಯುತ್ತ ತನ್ನ ಕಾರ್ಯಭಾರವನ್ನು ತಾನು ಹೊರುವದಕ್ಕೆ ಹೋದ ಹಾಗೆಲ್ಲ ತಾಯ ಚಿಂತೆಯು ತಪ್ಪಿ ಅದು ತನಗೆ ತಾನೇ ಚಿಂತೆಗೆ ಗುರಿಯಾಗುವದು. ಬಾಲಕನು ಹಸಿವೆಯನ್ನು ಕಳೆದುಕೊಳ್ಳುವದಕ್ಕೆ ಅಡಿಗೆಯನ್ನು ಮಾಡಬೇಕಾದುದಿಲ್ಲ; ಹಸಿವೆಯಾದುದನ್ನು ತಾಯಿಗೆ ತಿಳಿಸಿದರಾಯಿತು. ಇದರಂತೆಯ ಭಗವನ್ಮಹಿಮೆ-

ಯನ್ನು ಶ್ರವಣಮಾಡಿ ಭಕ್ತಿಮಾರ್ಗದಲ್ಲಿ ಹೆಜ್ಜೆಯನ್ನಿಟ್ಟ ಕೂಡಲೆ ನಾವು ಭಗವಂತನ ಮೇಲೆ ನಿಮಿಷಮಾತ್ರವಾದರೂ ಸರ್ವಭಾರವನ್ನೂ ವಹಿಸುತ್ತೇವೆ. ಅದರಿಂದ ರೋಗಾರ್ತನು ವೈದ್ಯರಿಗೆ ಬೇನೆಯನ್ನು ತಿಳಿಸಿದ ಕೂಡಲೆ ಅಥವಾ ಚೋರರಿಂದ ಪೀಡಿತನಾದವನು ನ್ಯಾಯಾಧೀಶನಿಗೆ ತನ್ನ ಪೀಡೆಯನ್ನು ಅರಿಕೆಮಾಡಿಕೊಂಡ ಕೂಡಲೆ ಒಂದು ರೀತಿಯಿಂದ ನಿಶ್ಚಿಂತನಾಗುವಂತೆ ನಾವು, ನಮ್ಮ ತಲೆಯ ಮೇಲಿನ ಭಾರವು ಇಳಿದಂತಾಗಿ, ಸಂಸಾರದಲ್ಲಿ ದೊರೆಯುದ ಒಂದು ವಿಧವಾದ ಸಮಾಧಾನವನ್ನು ಪಡೆಯುತ್ತೇವೆ. ಹೀಗಾಗುವದರಿಂದ ನಮ್ಮ ಮನಸ್ಸು ಭಕ್ತಿಮಾರ್ಗದ ಕಡೆಗೆ ಹೆಚ್ಚು ಪ್ರವಿಷ್ಟವಾಗುವದು. ಹೀಗೆ ಗೌಣೀಭಕ್ತಿಯನ್ನು ಮಾಡುವ ಭಕ್ತನಿಗೆ ಭಗವಂತನ ಅವತಾರಗಳು ಬಹು ಉಪಯುಕ್ತವಾಗುವವು.

ಅವತಾರವೆಂದರೆ "ಕೆಳಗೆ ಇಳಿಯುವದು" ಎಂದು ಅರ್ಥವಾಗುವದು. ಪರಮಾತ್ಮನು ಹದಿನಾಲ್ಕು ಲೋಕಗಳನ್ನೂ ಸೃಷ್ಟಿಮಾಡಿ ತನ್ನ ಮಹಿಮೆಯನ್ನು ಪ್ರಕಾಶಪಡಿಸಿದನು; ಈ ಲೋಕಗಳಲ್ಲಿ ಜೀವರ ವಿಚಿತ್ರಕರ್ಮಕ್ಕೆ ಅನುಸಾರವಾಗಿ ಭೋಗಸಾಮಗ್ರಿಗಳನ್ನು ನಿರ್ಮಿಸಿದನು; ಈ ಭೋಗಗಳಲ್ಲಿ ವಿರಸರಾಗಿ ಅಂತರ್ಮುಖರಾದವರಿಗೆ ನಿತ್ಯಾನಂದವನ್ನು ಕೊಡುವದಕ್ಕೆ ಸಿದ್ಧನಾಗಿ ಅವರ ಹೃದಯದಲ್ಲಿಯೇ ನಿಂತನು; ಇಂಥ ಆನಂದವು ಆಜೀವರಿಗೆ ಸಿಕ್ಕುವ ಸಂಭವವಿದೆಯೆಂಬುದನ್ನು ಪ್ರಕಟಿಸುವದಕ್ಕೆ ಸರ್ವಜ್ಞಕಲ್ಪವಾದ ವೇದಗಳನ್ನು ಕಳುಹಿಸಿದನು. ಇವುಗಳೆಲ್ಲ ಭಕ್ತನಿಗೆ ಸೊಗಸುವದಿಲ್ಲ. ಆತನು

"क्लेशोऽधिकतरस्तेषामव्यक्तासक्तचेतसाम् ।
अव्यक्ता हि गतिर्दुःखं देहवद्भिरवाप्यते ॥"

ಎಂದರೆ ನಿರಾಕಾರವನ್ನು ಅನುಸಂಧಾನಮಾಡುವವರಿಗೆ ಕಷ್ಟವು ಅಧಿಕತರವೆಂದೂ ದೇಹಭಾವದಿಂದ ಕೂಡಿದವರಿಗೆ ಅವ್ಯಕ್ತಸ್ವರೂಪವು ದುಃಖಪ್ರದವೆಂದೂ ಹೇಳಿ ಅಲ್ಪಜ್ಞರಾದ ಜೀವರಿಗೆ ತನ್ನ ಮಹಿಮೆಯ ಜ್ಞಾನವನ್ನು ಅನಾಯಾಸದಿಂದ ಮಾಡಿಕೊಡಬೇಕೆಂದು ಕೊನೆಗೆ ತಾನೇ ಸಾಕಾರ ರೂಪವನ್ನು ತೆಗೆದುಕೊಂಡು ಜೀವರ ಕಡೆಗೆ ಇಳಿದು ಬಂದನು. ಆನಂದ ಸ್ವರೂಪನಾದ

ಪರಮಾತ್ಮನು ತನ್ನ ಸಹಜಪ್ರೇಮವನ್ನು ಜೀವರಿಗೆ ಸಂಪೂರ್ಣವಾಗಿ ತೋರಿಸಬೇಕೆಂದು ತನ್ನ ಪೂರ್ಣಸ್ಥಿತಿಯನ್ನು ಬಿಟ್ಟು ಜನ್ಮಾದಿವಿಕಾರಗಳ ಉಪಾಧಿಯನ್ನು ಹೊಂದಿ ಜೀವರ ಸ್ಥಿತಿಗೆ ತಾನೇ ಇಳಿದು ಬಂದು ನಾನಾ ಲೀಲೆಗಳಿಂದ ತನ್ನ ದಿವ್ಯಮಹಿಮೆಯನ್ನು ತೋರಿಸಿದುದರಿಂದ ಮಾತ್ರ ಭಕ್ತರು ದೇವರನ್ನು ಪರಮಕರುಣಾಳುವೆಂದು ಬಹು ಕೊಂಡಾಡುವರು.

"जन्म कर्म च मे दिव्यं एवं यो वेत्ति तत्त्वतः ।
त्यक्त्वा देहं पुनर्जन्म नैति मामेति सोऽर्जुन ॥"

ಎಂಬ ಗೀತೋಕ್ತಿಯಲ್ಲಿ ಭಗವಂತನು "ಅರ್ಜುನ, ದಿವ್ಯವಾದ ನನ್ನ ಜನ್ಮವನ್ನೂ ಕರ್ಮವನ್ನೂ ಹೀಗೆ ಯಾವನು ಸರಿಯಾಗಿ ತಿಳಿಯುವನೋ ಅವನು ನನ್ನನ್ನೆ ಪಡೆಯುತ್ತಾನೆ" ಎಂದು ಹೇಳಿರುವಂತೆ ಭಗವಂತನ ಅವತಾರರಹಸ್ಯವನ್ನು ತಿಳಿಯುವದರಿಂದ ವಿಶೇಷಫಲವುಂಟು. ಈರಹಸ್ಯವನ್ನು ತಿಳಿಯದ ಆಸುರೀಸಂಪತ್ತಿನ ಮೂಢರು ಬ್ರಹ್ಮಾದಿಸ್ಥಾವರಾಂತವಾದ ಭೂತಗಳಿಗೂ ನಿಯಂತಾರನಾದ ಪರಮಾತ್ಮನ ಮೂಲಸ್ವರೂಪವನ್ನು ಅರಿಯದೆ ಮನುಷ್ಯಾಕಾರನೆಂದು ಅವಮಾನಮಾಡುವರೆಂದೂ ದೈವೀಸಂಪತ್ತಿನ ಮಹಾನುಭಾವರು ನನ್ನ ಭೂತಾದಿಯಾದ ಅವ್ಯಯಸ್ವರೂಪವನ್ನು ತಿಳಿದು ಅನನ್ಯಭಕ್ತಿಯನ್ನು ಮಾಡುವರೆಂದೂ ಭಗವಂತನು ಗೀತೆಯಲ್ಲಿ

"अवजानंति मां मूढाः मानुषीं तनुमाश्रितम् ।
परं भावमजानंतो मम भूतमहेश्वरम् ॥
महात्मानस्तु मां पार्थ दैवीं प्रकृतिमाश्रिताः ।
भजंत्यनन्यमनसो ज्ञात्वा भूतादिमव्ययम् ॥"

ಎಂಬ ಶ್ಲೋಕಗಳಲ್ಲಿ ಹೇಳಿರುವನು. ನಿಜವಾಗಿ ಸಾಕಾರವೆಂದರೇನು? ನಿರಾಕಾರವೆಂಬ ಕ್ಷೀರಸಾಗರದ ಮಥನದಿಂದ ತೇಲಿ ಬಂದ ಬೆಣ್ಣೆಯ ಮುದ್ದೆ.

ಭಗವಂತನು ಮನುಷ್ಯರ ಅಭಿರುಚಿಯು ನಾನಾ ವಿಧವಾಗಿರುವದನ್ನು

ನೋಡಿ ಪ್ರತಿಯೊಬ್ಬನ ಅಭಿರುಚಿಗೂ ತಕ್ಕ ಅವತಾರವಿರಲೆಂದು ಅನೇಕ ಅವತಾರಗಳನ್ನು ಮಾಡಿರುವನು. ಆಅವತಾರಗಳ ಲೀಲೆಗಳನ್ನು ವೇದ-ವ್ಯಾಸರಾದ ಶ್ರೀಕೃಷ್ಣದ್ವೈಪಾಯನರು ತಮ್ಮ ಪುರಾಣಗಳಲ್ಲಿ ಬರೆದಿಟ್ಟಿರುವರು. ಈಅವತಾರಗಳಲ್ಲಿ ಒಬ್ಬೊಬ್ಬರಿಗೆ ಒಂದೊಂದು ವಿಗ್ರಹದ ಮೇಲೆ ಪ್ರೀತಿ ಇರು-ವದು. ಒಬ್ಬನು ಭೋಗೈಶ್ವರ್ಯಸಮನ್ವಿತನಾದ ವಿಷ್ಣುವಿನ ವಿಗ್ರಹವನ್ನು ಪ್ರೀತಿಸುವನು. ಮತ್ತೊಬ್ಬನು ಕೇವಲ ವಿರಕ್ತನೂ ಗೃಹಸ್ಥನೂ ಆದ ಶಿವನ ವೇಷವನ್ನು ಮೆಚ್ಚುವನು. ಇನ್ನೊಬ್ಬನು ಬಾಲಸನ್ಯಾಸಿಯಾದ ದತ್ತನ ಅವ-ತಾರವನ್ನು ಬಹುಮಾನಿಸುವನು. ಈಬೇರೆ ಬೇರೆ ಅಭಿರುಚಿಗಳು ಅವರಿಗೆ ಹೇಗೆ ಬಂತೊ ಹೇಳುವದಕ್ಕೆ ಬರುವ ಹಾಗೆ ಇಲ್ಲ. ಒಂದೇ ಕುಟುಂಬದಲ್ಲಿ ತಂದೆಯ ಮನಸ್ಸು ವಿಷ್ಣುವಿನ ಕಡೆಗೆ ಇದ್ದರೆ ಮಗನ ಮನಸ್ಸು ಶಿವನ ಕಡೆಗೆ ಇರಬಹುದು; ಮೊಮ್ಮಗನ ಮನಸ್ಸು ದತ್ತನಲ್ಲಿ ನೆಲೆಗೊಳ್ಳಬಹುದು. ಆದುದ-ರಿಂದ ಈ ಸಂಸ್ಕಾರವು ಮನೆತನದ ಪೂರ್ವಾಚಾರದಿಂದ ಬಂದದ್ದೆಂದೂ ಹೇಳು-ವದಕ್ಕೆ ಆಗುವದಿಲ್ಲ. ಬಹು ಮಟ್ಟಿಗೆ ಆಯಾಜೀವರ ಪೂರ್ವಜನ್ಮಸಂಸ್ಕಾ-ರವೆ ಇದಕ್ಕೆ ಕಾರಣವೆಂದು ತೋರುತ್ತದೆ. ಒಬ್ಬ ತಾಯಿ ಹೊಟ್ಟೆಯಲ್ಲಿ ಒಂದು ಗಂಡು ಕೂಸು ಮತ್ತು ಒಂದು ಹೆಣ್ಣು ಕೂಸು ಹುಟ್ಟಿರುತ್ತವೆ. ತಾಯಿಯು ಮಕ್ಕಳಿಗೆ ಸ್ತನ್ಯಪಾನಮಾಡಿಸುವದನ್ನು ಎರಡು ಕೂಸುಗಳೂ ನೋಡಿರುತ್ತವೆ; ಎರಡು ಕೂಸುಗಳೂ ಸ್ತನ್ಯಪಾನಮಾಡಿರುತ್ತವೆ. ಅವೆ-ರಡೂ ಆಡುವದಕ್ಕೆ ಹೊರಟಾಗ ಗಂಡು ಲೇಖನಿಯನ್ನು ಹುಡುಕಿ ತೆಗೆದು-ಕೊಂಡು ಗೆರೆಯನ್ನೆಳೆಯುತ್ತ ಪುಸ್ತಕವನ್ನು ಕಂಕುಳಿಗಿಟ್ಟುಕೊಳ್ಳುತ್ತದೆ; ಹೆಣ್ಣು ಮೂರು ಹೆಂಟೆಗಳ ಮೇಲೆ ಒಂದು ಬೋಕಿಯನ್ನಿಟ್ಟು ಅಡಿಗೆಯನ್ನು ಮಾಡುವ ಹಾಗೆ ನಟಿಸಿ ಸಣ್ಣ ಬೊಂಬೆಯನ್ನು ಮಗುವೆಂದು ಕಂಕುಳಲ್ಲಿಟ್ಟುಕೊಂಡು ಅದಕ್ಕೆ ಸ್ತನ್ಯಪಾನವನ್ನು ಮಾಡಿಸುವದಕ್ಕೆ ಹೋಗುತ್ತದೆ. ಈ ವ್ಯತ್ಯಾಸಕ್ಕೆ ಪೂರ್ವ ಸಂಸ್ಕಾರವನ್ನು ಬಿಟ್ಟರೆ ಇನ್ನೇನು ಹೇಳುವದಕ್ಕಾಗುತ್ತದೆ? ಭಕ್ತರಿಗೂ ಹಾಗೆ ಪೂರ್ವಸಂಸ್ಕಾರಬಲದಿಂದ ಒಂದೊಂದವತಾರಮೂರ್ತಿಯಲ್ಲಿ ಪ್ರೀತಿ ಹೆಚ್ಚಿರುವದು. ಕೆಲವರು ಮೂರ್ಖರು ಯಾವದೋ ಒಂದು ಅವ-ತಾರದಲ್ಲಿ ಸಹಜವಾದ ಪ್ರೀತಿಯುಳ್ಳವರಾಗಿ ಆಅವತಾರಮಹಿಮೆಯನ್ನು

ಅಕ್ಕರೆಯಿಂದ ತಿಳಿದುಕೊಂಡು ಅದರ ಮೇಲೆ ಪ್ರೀತಿಯನ್ನು ಇಡುವ ಸಡಗರದಲ್ಲಿ ಇತರ ಅವತಾರಗಳನ್ನು ತುಚ್ಛವಾಗಿ ಕಾಣುವರು. ಹೀಗೆ ಬೇರೆಬೇರೆ ಕೆಲವರು ಬೇರೆಬೇರೆ ಅವತಾರಗಳಲ್ಲಿ ಪ್ರೀತಿಯುಳ್ಳವರಾಗಿ ಅವಿಚಾರದಿಂದ ಒಬ್ಬರ ಪ್ರೇಮಪಾತ್ರವಾದ ಅವತಾರವನ್ನು ಇನ್ನೊಬ್ಬರು ತಿರಸ್ಕಾರಬುದ್ಧಿಯಿಂದ ನೋಡುತ್ತಿರುವದು ಬಹು ಶೋಚನಿಯವಾಗಿದೆ. ಈ ಹಾಳುದುರಭಿಮಾನದಿಂದಲೆ ನಮ್ಮ ದೇಶದಲ್ಲಿ ಲೆಕ್ಕವಿಲ್ಲದಷ್ಟು ಪಂಗಡಗಳಾಗಿ ಒಬ್ಬರು ಮತ್ತೊಬ್ಬರ ಮೇಲೆ ಕತ್ತಿಯನ್ನು ಮಸೆಯುತ್ತಿರುವರು.

"अज्ञः सुखमाराध्यः
सुखतरमाराध्यते विशेषज्ञः
ज्ञानलवदुर्विदग्ध
ब्रह्माऽपि नरं न रंजयति ॥"

ಎಂಬ ಭರ್ತೃಹರಿಯ ನೀತಿಯಂತೆ ಏನೂ ತಿಳಿಯದವನನ್ನು ಸುಖವಾಗಿ ಒಪ್ಪಿಸಬಹುದು; ಸಂಪೂರ್ಣವಾಗಿ ತಿಳಿದವನನ್ನಂತು ಮತ್ತೂ ಸುಖವಾಗಿ ಒಪ್ಪಿಸಬಹುದು; ತನಗೆ ಚನ್ನಾಗಿ ತಿಳಿಯದೆ ಮತ್ತೊಬ್ಬರ ಮಾತಿಗೆ ಕಿವಿಗೊಡದೆ ಇರುವ ಮೂರ್ಖನನ್ನು ಒಪ್ಪಿಸುವದು ಬ್ರಹ್ಮನಿಗೂ ಆಗುವದಿಲ್ಲ. ಪ್ರತಿಯೊಂದವತಾರವನ್ನೂ ಸರ್ವೋತ್ತಮವೆಂದು ಆಯಾ ಅವತಾರಮಹಿಮೆಗಳಲ್ಲಿ ವ್ಯಾಸರು ಬರೆದಿರುವಾಗ ತನ್ನ ಪ್ರೇಮಪಾತ್ರವಾದ ಅವತಾರದ ವಿಷಯವಾದ ಮಾತಿಗೆ ಗೌರವವನ್ನು ಕೊಟ್ಟಂತೆ ಇನ್ನೊಂದಕ್ಕೂ ಏಕೆ ಕೊಡಬಾರದೊ ಮತ್ತು ತನಗೆ ತನ್ನ ಪೂರ್ವಸಂಸ್ಕಾರಕ್ಕನುಗುಣವಾಗಿ ಒಂದು ವಿಗ್ರಹದಲ್ಲಿ ಪ್ರೇಮವುಂಟಾಗಿರುವಂತೆ ಮತ್ತೊಬ್ಬನಿಗೆ ಅವನ ಪೂರ್ವಸಂಸ್ಕಾರಕ್ಕನುಗುಣವಾಗಿ ಮತ್ತೊಂದು ವಿಗ್ರಹದಲ್ಲಿ ಪ್ರೇಮವುಂಟಾಗಿರುವದೆಂದು ಏಕೆ ತಿಳಿಯಬಾರದೊ ದೇವರಿಗೆ ಗೊತ್ತು. ಪ್ರಕೃತ ಕೇವಲಪ್ರಬಲವಾದ ಭೇದಭಾವನೆಗೆ ವಿಷಯರಾಗಿರುವವರು ಶಿವ ಮತ್ತು ವಿಷ್ಣು. ಮುಮುಕ್ಷುಗಳಲ್ಲಿ ಸುಖವು ಬೇಕು, ದುಃಖವು ಬೇಡ ಎಂಬೆರಡು ಬಯಕೆಗಳುಂಟಷ್ಟೆ.

ಸುಖವು ಬೇಕೆಂಬ ಪಕ್ಷವನ್ನು ಹಿಡಿಯುವವರು ಸ್ಥಿತಿಕರ್ತನಾದ ವಿಷ್ಣುವನ್ನು ಮರೆಹೋಗುವರು. ದುಃಖವು ಬೇಡವೆಂಬ ಪಕ್ಷವನ್ನವಲಂಬಿಸುವವರು ಲಯಕರ್ತನಾದ ಶಿವನನ್ನು ಉಪಾಸನೆಮಾಡುವರು. ಇವರಿಬ್ಬರಿಗೆ ಪರಸ್ಪರ ದ್ವೇಷವೇಕೆ? ಶಿವವಿಷ್ಣುಗಳಿಗೇನಾದರೂ ಪರಸ್ಪರ ದ್ವೇಷವುಂಟೆ? ಶಿವನನ್ನೂ ಕಾಣದೆ ವಿಷ್ಣುವನ್ನೂ ಕಾಣದೆ ಸುಮ್ಮನೆ ಗುದ್ದಾಡುವದೆಂಥ ಮೂರ್ಖತನ! ಶಿವನು ಮಹಾಪುಣ್ಯಕ್ಷೇತ್ರವಾದ ಕಾಶಿಯಲ್ಲಿ ವಿಶ್ವೇಶ್ವರನಾಗಿ ವಿಷ್ಣುದೇವತಾಸಂಬಂಧವಾದ ರಾಮತಾರಕಮಂತ್ರವನ್ನು ತಾನೂ ಸ್ಮರಿಸುತ್ತ ಇತರರಿಗೂ ಉಪದೇಶವನ್ನು ಮಾಡುವನೆಂದೂ ವಿಷ್ಣುವು ಶಿವಪೂಜೆಗೆ ಕಮಲಪುಷ್ಪವು ಸಾಲದೆ ಹೋದಾಗ ತನ್ನ ಕಣ್ಣನ್ನೆ ಕಿತ್ತು ಅರ್ಪಿಸಿದನೆಂದೂ ಹೇಳುವರಲ್ಲ!! ಅವರು ಅಷ್ಟು ಪರಸ್ಪರ ಮೈತ್ರಿಯಲ್ಲಿರುವಾಗ ಅವರ ಭಕ್ತರು ಒಬ್ಬರಿಗೊಬ್ಬರು ಹೊಡದಾಡುವದು ಯಾವ ನ್ಯಾಯ? ನಿಜವಾಗಿ ಯಾವ ನಾಮಗಳು ನಿರತಿಶಯಶಾಂತಿಸುಖಕ್ಕೆ ಸಾಧನಗಳೊ ಅವುಗಳನ್ನು ಹೇಯವಾದ ರಕ್ತಪಾತಕ್ಕೆ ಸಾಧನವಾಗಿ ಉಪಯೋಗಮಾಡಿಕೊಳ್ಳುವವರ ದೌರಾತ್ಮ್ಯವನ್ನೇನೆಂದು ಹೇಳಬೇಕು? ಭಕ್ತನು ಭಕ್ತಿಮಾರ್ಗದಲ್ಲಿ ಮುಂದೆ ಸಾಗುವದಕ್ಕೆ ನಿಜವಾಗಿ ಇಂದೊಂದು ದೊಡ್ಡ ಅಡ್ಡಗುಡ್ಡ.

“यो यो यां यां तनुं भक्तः श्रद्धयाऽर्चितुमिच्छति ।
तस्य तस्याचलां श्रद्धां तामेव विदधाम्यहम् ॥”

ಎಂಬಂತೆ ಯಾರುಯಾರು ಯಾವಯಾವ ವಿಗ್ರಹದ ಮೇಲೆ ಶ್ರದ್ಧೆಯನ್ನಿಡುವರೊ ಆವರವರಿಗೆ ಆಯಾ ಶ್ರದ್ಧೆಯನ್ನೇ ಭಗವಂತನು ನೆಲೆಗೊಳಿಸುವನು. ಆದುದರಿಂದ ತನಗೆ ಸಹಜವಾಗಿ ಯಾವ ವಿಗ್ರಹದಲ್ಲಿ ಪ್ರೇಮವು ತೋರುತ್ತದೊ ಅದನ್ನು ಆಶ್ರಯಿಸಿ ಅದರ ಮೇಲೆ ತನ್ನ ಪ್ರೇಮವನ್ನು ಮೊದಲು ಗೌಣೀಭಕ್ತಿಯಿಂದ ತೋರಿಸಬೇಕು.

ಭಗವಂತನು ಗೌಣೀಭಕ್ತಿಯ ವಿಚಾರವನ್ನು ಭಗವದ್ಗೀತೆಯಲ್ಲಿ

"सततं कीर्तयंतो मां यतंतश्च दृढव्रताः ।
नमस्यंतश्च मां भक्त्या नित्ययुक्ता उपासते ॥
मन्मना भव मद्भक्तो मद्याजी मां नमस्कुरु ।
मामेवैष्यसि युक्त्वैवमात्मानं मत्परायणः ॥
मच्चित्ता मद्गतप्राणा बोधयंतः परस्परम् ।
कथयंतश्च मां नित्यं तुष्यंति च रमंति च ॥"

ಎಂಬ ಶ್ಲೋಕಗಳಲ್ಲಿ ತಂದಿರುವನು. ಇವುಗಳಲ್ಲಿ "ತೈಲಧಾರೆಯಂತೆ ಎಡೆಬಿಡದೆ ನನ್ನ ಮೂರ್ತಿಯನ್ನು ಧ್ಯಾನಿಸಬೇಕು. ಸ್ವಲ್ಪ ಹೊತ್ತು ಹಾಗೆ ಮಾಡಿದ ಮನಸ್ಸು ಕದಲಿದ ಕೂಡಲೆ ನಮಸ್ಕಾರರೂಪವಾದ ಕಾಯಿಕೋಪಾಸನೆಯನ್ನು ಮಾಡಬೇಕು. ಅದರಲ್ಲಿ ಆಯಾಸ ತೋರಿದಾಗ ನನ್ನ ಕೀರ್ತಿಯನ್ನು ಕೀರ್ತನಮಾಡುವದರ ಮೂಲಕ ವಾಚನಿಕೋಪಾಸನೆಯನ್ನು ಮಾಡಬೇಕು. ಹೀಗೆ ಮಾಡಿ ಹೊರಗೆ ಹಾರಾಡುವದಕ್ಕೆ ಹೋದ ಚಿತ್ತವನ್ನು ತಿರುಗಿಸಿ ತಂದು ನನ್ನ ಮೇಲೆ ಇಡಬೇಕು" ಎಂಬುದು ಮೊದಲನೇ ಶ್ಲೋಕದ ತಾತ್ಪರ್ಯ; "ಸರ್ವವಿಷಯಗಳಿಂದಲೂ ಮನಸ್ಸನ್ನು ಹಿಂದಿರುಗಿಸಿ ನನ್ನಲ್ಲಿಯೇ ಇಡು. ಹೀಗೆ ಮಾಡುವದಕ್ಕೆ ನಿನಗೆ ಆಗದೆ ಇದ್ದರೆ ವಿಷಯಾಂತರಗಳ ಮೇಲೆ ಮನಸ್ಸಿದ್ದರೂ ನನ್ನ ಮೇಲೆಯೂ ಸ್ವಲ್ಪ ಇಡುತ್ತಾ ಬಾ. ಇದೂ ಅಸಾಧ್ಯವಾದರೆ ನನ್ನ ವಿಗ್ರಹವನ್ನು ಪೂಜೆಮಾಡು. ಪೂಜಾಸಾಮಗ್ರಿಗಳು ದೊರೆಯದೆ ಇದ್ದರೆ ಆಗ ನನಗೆ ನಮಸ್ಕಾರ ಮಾಡು. ಹೀಗೆ ಮಾಡುವದರಿಂದ ಮದೇಕಶರಣನಾದ ನೀನು ನನ್ನನ್ನು ಪಡೆಯುತ್ತಿ" ಎಂಬುದು ಎರಡನೇ ಶ್ಲೋಕದ ತಾತ್ಪರ್ಯ; "ನನ್ನನ್ನು ಬಿಟ್ಟು ಕ್ಷಣಮಾತ್ರವಾದರೂ ಪ್ರಾಣಧಾರಣಮಾಡಿಕೊಂಡಿರಲಾರದಂಥ ಮನಸ್ಥಿತಿಯು ಎರಡು ಬಗೆ. ಒಂದನೇದು ಧ್ಯಾನಾವಸ್ಥೆ, ಎರಡನೇದು ವಿಕ್ಷೇಪಾವಸ್ಥೆ. ನನ್ನಲ್ಲಿಯೇ ಮನಸ್ಸನ್ನು ಲೀನಮಾಡುವದು ಧ್ಯಾನಾವಸ್ಥೆ; ಇನ್ನು ಭಕ್ತಗೋಷ್ಠಿಯಲ್ಲಿ ಒಬ್ಬರಿಗೊಬ್ಬರು ತಮ್ಮ

ತಮ್ಮ ಅನುಭವವನ್ನನುಸರಿಸಿ ನನ್ನ ಕಲ್ಯಾಣಗುಣಗಳನ್ನು ವರ್ಣನೆ ಮಾಡುವದರಿಂದ ನಾನೊಬ್ಬನೇ ಭಜನೀಯನೆಂದು ಹೇಳುತ್ತ ಪರಸ್ಪರಾನುಮೋದನದಿಂದ ಸಂತೋಷವನ್ನು ಹೊಂದುವದೂ ಮತ್ತು ಭಕ್ತಗೋಷ್ಠಿಯಲ್ಲಿಲ್ಲದೆ ತಾನೊಬ್ಬನೆ ಇರುವಾಗ ಹರೆ, ಗೋವಿಂದ, ಗೋಪಾಲ, ಶಂಭೊ, ಶಂಕರ ಎಂದು ಕೀರ್ತನಮಾಡುತ್ತ ಆನಂದದಲ್ಲಿರುವದೂ ವಿಕ್ಷೇಪಾವಸ್ಥೆ." ಎಂಬುದು ಮೂರನೇ ಶ್ಲೋಕದ ತಾತ್ಪರ್ಯ. ಈಶ್ಲೋಕಗಳಲ್ಲಿ ಮೊದಮೊದಲು ಭಗವಂತನು ಮಾನಸಿಕ ತಪಸ್ಸನ್ನು ಹೇಳಿ ಅದಕ್ಕೆ ಸಾಧನವಾಗಿ ಮುಂದೆ ಮುಂದೆ ಶಾರೀರ ಮತ್ತು ವಾಚನಿಕ ತಪಸ್ಸನ್ನು ಉಪದೇಶಮಾಡಿರುವನು. ಇದಲ್ಲದೆ

"अथ चित्तं समाधातुं न शक्नोषि मयि स्थिरं ।
अभ्यासयोगेन ततो मामिच्छाप्तुं धनंजय ॥"

ಎಂಬ ಶ್ಲೋಕದಲ್ಲಿ "ಅರ್ಜುನ, ನನ್ನಲ್ಲಿ ಮನಸ್ಸನ್ನು ನೆಲೆಗೊಳಿಸುವದಕ್ಕೆ ನಿನಗೆ ಆಗದೆ ಇದ್ದರೆ ಒಂದು ಪ್ರತಿಮೆಯನ್ನು ಆಲಂಬನಮಾಡಿಕೊಂಡು ಮನೋವೃತ್ತಿಗಳನ್ನು ಎಲ್ಲಕಡೆಗಳಿಂದಲೂ ತಿರುಗಿಸಿ ತಂದು ಮತ್ತೆ ಮತ್ತೆ ಆ ಪ್ರತಿಮೆಯ ಮೇಲೆ ಇಡುವ ಅಭ್ಯಾಸವನ್ನು ಮಾಡಿ ಆಮೇಲೆ ಮಾನಸಿಕತಪಸ್ಸನ್ನು ಮಾಡುವದಕ್ಕೆ ಪ್ರಯತ್ನಮಾಡು" ಎಂದು ಹೇಳಿರುವನು.

ಭಕ್ತಶಿಖಾಮಣಿಯಾದ ಪ್ರಹ್ಲಾದನು ತನ್ನ ತಂದೆಗೆ ಹೇಳಿರುವ

"श्रवणं कीर्तनं विष्णोः स्मरणं पादसेवनम् ।
अर्चनं वंदनं दास्यं सख्यमात्मनिवेदनम् ॥"

ಎಂಬ ಶ್ಲೋಕದಂತೆ ಗೌಣೀಭಕ್ತಿಯು ಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ ಮತ್ತು ಆತ್ಮನಿವೇದನ ಎಂದು ಒಂಭತ್ತು ಪ್ರಕಾರವಾಗಿರುವದು. ಶ್ರವಣವೆಂದರೆ ಪರಮಾತ್ಮನ ವಿವಿಧಾವತಾರಗಳ ಪವಿತ್ರಚರಿತ್ರೆಗಳನ್ನು ಆಲಿಸುವದು. ಸುಮ್ಮನೆ ಒಂದು ಕಿವಿಯಲ್ಲಿ ಕೇಳಿ ಮತ್ತೊಂದು ಕಿವಿಯಲ್ಲಿ ಬಿಡುವದು ನಿಜವಾದ ಶ್ರವಣವೆನಿಸಲಾರದು.

ಕೇಳಿದ ವಿಷಯವು ಕಿವಿಯಲ್ಲಿ ಹೊಕ್ಕದ್ದು ಹೃದಯವನ್ನು ವ್ಯಾಪಿಸಿ ರೋಮಾಂಚ ಗಳನ್ನು ಹುಟ್ಟಿಸಬೇಕು. ಮನಸ್ಸು ಪರಮಾತ್ಮನ ಚರಿತ್ರೆಯಲ್ಲಿ ಅಡಗಿ ಹೋಗಬೇಕು. ಪೂರ್ವದಲ್ಲಿ ಕುಲಶೇಖರಾಳ್ವಾರ್ ಮಾಡುತ್ತಿದ್ದ ಶ್ರವಣವು ಉದಾಹರಣೆಗೆ ಯೋಗ್ಯವಾಗಿರುವದು. ಇವರು ಅರಸರು. ಇವರಿಗೆ ಶ್ರೀ ರಾಮಚಂದ್ರದೇವರಲ್ಲಿ ಬಹು ಭಕ್ತಿ ಇತ್ತು. ಒಂದು ದಿನ ಪುರಾಣಿಕನು ರಾಮಾಯಣದ ಕಥೆಯನ್ನು ಹೇಳುತ್ತಿರುವಾಗ ಕುಲಶೇಖರಾಳ್ವಾರ್ ತನ್ಮಯ-ರಾಗಿ ಹೋಗಿದ್ದರು. ಇಂಥ ಸಂದರ್ಭದಲ್ಲಿ ಪುರಾಣಿಕನು ಸೀತೆಯನ್ನು ರಾವ-ಣನು ಕದ್ದೊಯ್ದನೆಂದು ಹೇಳಿಬಿಟ್ಟನು. ಈ ಮಾತು ಕಿವಿಗೆ ಬೀಳುತ್ತಲೆ ಕುಲಶೇಖರಾಳ್ವಾರರ ಕಣ್ಣುಗಳು ಕೆಂಪಗೆ ಕೆಂಡವಾದವು. ಆ ಕಣ್ಣುಗಳಿಂದ ಹೊರಡುತ್ತಿದ್ದ ತೀಕ್ಷ್ಣವಾದ ಕಿರಣಗಳು ಅಲ್ಲಿದ್ದ ಇತರರ ಹೃದಯಗಳನ್ನು ಕೂಡ ಭೇದಿಸಿದವು. ಅವರ ಹುಬ್ಬುಗಳು ಕುಣಿಯುವದಕ್ಕೆ ಮೊದಲಾದವು. ಅವರ ದೇಹದಲ್ಲೆಲ್ಲ ರೋಮಾಂಚವಾಗಿ ಕಂಪನಕ್ಕಾರಂಭವಾಯಿತು. "ರಾವ-ಣನು ಸೀತೆಯನ್ನು ಅಪಹರಿಸಿಕೊಂಡು ಹೋದನು" ಎಂದು ಹೇಳುತ್ತಲೆ ಪ್ರಲಯಕಾಲದಲ್ಲಿ ಸಂಕೋಲೆಯನ್ನು ಕಡಿದ ಮೇಘದಂತೆ ಗರ್ಜಿಸುತ್ತ ಒರೆಯಿಂದ ಕತ್ತಿಯನ್ನು ಹಿರಿದು ಝಳಪಿಸುತ್ತ ತಟಕ್ಕನೆ ಎದ್ದು ನಾನಿನ್ನೂ ಜೀವಿಸಿರುವಾಗ ನಮ್ಮ ಕುಲದೇವತೆಯಾದ, ನಮ್ಮ ಮನೆಯ ದೇವತೆಯಾದ, ನಮ್ಮ ಭಾಗ್ಯದೇವತೆಯಾದ, ನಮ್ಮ ಪ್ರಾಣಗಳ ಪ್ರಾಣವಾದ, ಆಲೋಕ-ಮಾತೆಯನ್ನು ಆದುರಳನಾದ, ದುಷ್ಟನಾದ, ಧೂರ್ತನಾದ, ನೀಚನಾದ, ಪಾಪಿಯಾದ, ಕ್ರೂರನಾದ, ಕಳ್ಳನಾದ, ಹೇಡಿಯಾದ, ಕಾಮಿಯಾದ ಆ ರಾವ-ಣನು ಕದ್ದೊಯ್ವನೆ? ಈ ಕ್ಷಣದಲ್ಲಿಯೇ ಅವನನ್ನು ಹಿಡಿದು, ಹೊಡೆದು, ಕಡಿದು, ಬಡಿದು, ಜಡಿದು ನಮ್ಮ ತಾಯನ್ನು ಸಂತಯಿಸಿ ಕರೆದುಕೊಂಡು ಬಂದು ಶ್ರೀರಾಮರ ಬಳಿಗೆ ಬಿಡುವೆನು" ಎಂದು ಕುದುರೆಯನ್ನು ಹತ್ತಿ ಒಂದೇ ಓಟದಿಂದ ಕಲ್ಲುಮುಳ್ಳುಗಳನ್ನು ನೋಡದೆ ಸರಳರೇಖಾಕೃತಿಯಾಗಿ ನುಗ್ಗಿ ಬರುತ್ತಿರುವಾಗ ದಾರಿಗೆ ಅಡ್ಡಲಾಗಿ ಸಮುದ್ರವು ಸಿಕ್ಕಿತು. ನೀರಿನ ಮೇಲೆ ಕುದುರೆಯು ನಡೆಯಲಾರದೆಂಬುದನ್ನು ಕೂಡ ಯೋಚನೆ ಮಾಡದೆ ಆಳ್ವಾರರು ಮುಂದೆ ಸಾಗುತ್ತಿರಲು ಶ್ರೀರಾಮಚಂದ್ರನು ಸೀತಾಲಕ್ಷ್ಮಣ

ಸಮೇತನಾಗಿ ತಾನೇ ಅಲ್ಲಿಗೆ ಬಂದು ದರ್ಶನವನ್ನು ಕೊಟ್ಟು ಸೀತೆಯನ್ನು ಬಿಡಿಸಿಕೊಂಡು ಬಂದ ವಿಷಯವನ್ನು ಹೇಳಿ ಸಮಾಧಾನವನ್ನು ಮಾಡಲು ಆಳ್ವಾರರು ತನ್ನ ಪ್ರೇಮಮೂರ್ತಿಗೆ ಬಂದಿದ್ದ ಕಷ್ಟವನ್ನು ನೆನಸಿಕೊಂಡು ಬಿಕ್ಕಿಬಿಕ್ಕಿ ಅತ್ತು ಆಮೇಲೆ ಅವರಪ್ಪಣೆಯನ್ನು ಪಡೆದು ತಮ್ಮೂರಿಗೆ ಬಂದರು. ಇದೇನೂ ಅಸಂಭವವಲ್ಲ. ಇರಲಿ. ಅವರ ಪ್ರೇಮದ ಮಹತ್ತ್ವವನ್ನು ನೋಡಿರಿ. ಕೀರ್ತನವೆಂದರೆ ಶ್ರವಣಮಾಡಿದ ಪರಮಾತ್ಮಚರಿತ್ರೆಯನ್ನು ಹಾಡುವದು.

"मधुरं हि पयः स्वभावतो
न हि कीदृक्सितशर्करान्वितम् ॥"

ಎಂದು ಉಪಮನ್ಯುವೆಂಬ ಭಕ್ತನು ಹೇಳಿರುವಂತೆ ಪರಮಾತ್ಮನ ಬರೀ ಹೆಸರುಗಳೇ ಹಾಲಿನಂತೆ ಮಧುರವಾದವು. ಇನ್ನು ಆಹಾಲಿಗೆ ಬಿಳೀ ಸಕ್ಕರೆಯನ್ನು ಬೆರೆಸಿದಂತೆ ಪರಮಾತ್ಮನ ಗುಣವರ್ಣನೆಯೂ ಸೇರಿದರೆ ಆದರ ಮಾಧುರ್ಯವನ್ನು ಹೇಳತಕ್ಕದ್ದೇನು! ಶ್ರೀಮದ್ಭಾಗವತದಲ್ಲಿ

"तदेव रम्यं रुचिरं नवं नवं
तदेव शश्वन्मनसा महोत्सवम् ।
तदेव शोकार्णव शोषणं नृणाम्
यदुत्तमश्लोकयशोऽनुगीयते ॥"

ಎಂದು ಹೇಳಿರುವಂತೆ ಉತ್ತಮಶ್ಲೋಕನಾದ ಆ ಪರಮಾತ್ಮನ ಯಶಸ್ಸನ್ನು ಗಾನ ಮಾಡುವದೇ ಮನೋಹರವಾಗಿಯೂ ಎಷ್ಟು ಸಲ ಹಾಡಿದರೂ ಹೊಸ ಹೊಸದರಷ್ಟು ರುಚಿಕರವಾಗಿಯೂ ಮನಸ್ಸಿಗೆ ಯಾವಾಗಲೂ ಉಲ್ಲಾಸಕರವಾಗಿಯೂ ದುಃಖಪರಿಹಾರಕವಾಗಿಯೂ ಇರುವದು. ಅರ್ಥವನ್ನು ಅನುಸಂಧಾನಮಾಡುತ್ತ ಹಾಡುವಾಗ ಹೃದಯದಲ್ಲಿ ತುಂಬಿದ ಸಂತೋಷವು ಕಣ್ಣಿನಲ್ಲಿ ಆನಂದಾಶ್ರುಗಳ ಮೂಲಕವೂ ದೇಹದಲ್ಲಿ ರೋಮಾಂಚಗಳ ಮೂಲ-

ಕವೂ ಹೊರಸೂಸಬೇಕು. ಕಲಿಯುಗದಲ್ಲಿ ಕೀರ್ತನಕ್ಕೆ ಪ್ರಾಶಸ್ತ್ಯವು ಹೆಚ್ಚೆಂಬ ವಿಷಯದಲ್ಲಿ ವಿಷ್ಣುಪುರಾಣದಲ್ಲಿ

"अत्यंतदुष्टस्य कलेरयमेको महान्गुणः ।
कीर्तनादेव कृष्णस्य मुक्तबंधः परं व्रजेत् ॥"

ಎಂಬ ಶ್ಲೋಕವಿರುವದು. "ಅತ್ಯಂತ ದುಷ್ಟನಾದ ಕಲಿಯಲ್ಲಿ ಒಂದು ದೊಡ್ಡ ಗುಣವಿರುವದು. ಕೃಷ್ಣನ ಯಶಸ್ಸನ್ನು ಕೀರ್ತನಮಾಡಿದರೆ ಸಾಕು. ಮುಕ್ತಿಯಾಗುವದು" ಎಂದು ಅದರ ಅರ್ಥ. ಕೀರ್ತನವೇನೂ ಸಾಮಾನ್ಯವಲ್ಲ.

"ध्यायन् कते यजन् यज्ञैस्त्रेतायां द्वापरेऽर्चयन् ।
यदाप्नोति तदाप्नोति कलौ संकीर्त्य केशवम् ॥"

ಎಂಬ ವಿಷ್ಣುಪುರಾಣೋಕ್ತಿಯಂತೆ ಕೃತಯುಗದಲ್ಲಿ ಧ್ಯಾನದಿಂದಲೂ, ತ್ರೇತಾಯುಗದಲ್ಲಿ ಯಜ್ಞದಿಂದಲೂ, ದ್ವಾಪರದಲ್ಲಿ ಪೂಜೆಯಿಂದಲೂ ಆಗುವ ಫಲವು ಕಲಿಯುಗದಲ್ಲಿ ಕೀರ್ತನದಿಂದಾಗುವದು. ಇದನ್ನರಿತು ದೇವತೆಗಳು ಕೂಡ ಕಲಿಯುಗದಲ್ಲಿ ಜನ್ಮವನ್ನು ಬಯಸುವರು. ಭಗವಂತನು

"नाहं वसामि वैकुंठे योगिनां हृदये रवौ ।
मद्भक्ता यत्र गायंति तत्र तिष्ठामि नारद ॥"

ಎಂದರೆ "ನಾನು ವೈಕುಂಠದಲ್ಲಾಗಲಿ, ಕುಂಡಲಿಯ ಉತ್ಥಾಪನೆಯನ್ನು ಮಾಡುವ ಯೋಗಿಗಳ ಹೃದಯದಲ್ಲಾಗಲಿ, ಸೂರ್ಯಮಂಡಲದಲ್ಲಾಗಲಿ ಇಲ್ಲ; ನನ್ನ ಯಶಸ್ಸನ್ನು ಗಾನಮಾಡುವ ಭಕ್ತರ ಬಳಿಯಲ್ಲಿ ಇರುವೆನೆಂದು ಹೇಳಿರುವನು. ಆದಕಾರಣ ಕೀರ್ತನಭಕ್ತಿಯು ಅತಿಪ್ರಶಸ್ತವಾದುದು. ಸ್ಮರಣವೆಂದರೆ ಲೋಭಿಯು ಹಣವನ್ನು ನೆಲದೊಳಗೆ ಬಚ್ಚಿಟ್ಟು ಹಗಲಿರುಳೂ ಅದರ ಯೋಚನೆಯಲ್ಲಿಯೇ ಇರುವಂತೆ ಪರಮಾತ್ಮವಿಚಾರವನ್ನು ಹೃದಯದಲ್ಲಿ ಬಚ್ಚಿಟ್ಟು ಯಾವಾಗಲೂ ಅವನ ಧ್ಯಾನದಲ್ಲಿಯೇ ಇರುವದು. ಪಾದಸೇವ-

ನವೆಂದರೆ ಭಗವನ್ಮೂರ್ತಿಯ ಚರಣಗಳನ್ನು ಸೇವಿಸುವದು. ಅರ್ಚನವೆಂದರೆ ಆವಾಹನ, ಆಸನ, ಅರ್ಘ್ಯ ಮತ್ತು ಪಾದ್ಯ ಮೊದಲಾದ ಷೋಡಶೋಪಚಾರಗಳಿಂದ ದೇವರನ್ನು ಪೂಜಿಸುವದು. ವಂದನವೆಂದರೆ ದೇವರಿಗೆ ನಮಸ್ಕರಿಸುವದು. ದಾಸ್ಯವೆಂದರೆ ತನ್ನನ್ನು ದೇವರ ಸೇವಕನೆಂದು ಭಾವಿಸಿಕೊಂಡು ಸೇವೆಮಾಡುವದು. ಸಖ್ಯವೆಂದರೆ ದೇವರೊಡನೆ ನಿಷ್ಕಪಟಮಿತ್ರಭಾವದಿಂದ ವರ್ತಿಸುವದು. ಆತ್ಮನಿವೇದನವೆಂದರೆ ಭಗವಂತನು ಗೀತೆಯಲ್ಲಿ

"यत्करोषि यदश्नासि यज्जुहोषि ददासि यत् ।
यत्तपस्यसि कौंतेय तत्कुरुष्व मदर्पणम् ॥"

ಎಂಬ ಶ್ಲೋಕದಲ್ಲಿ ಉಪದೇಶಿಸಿರುವಂತೆ ತಾನು ದೇಹಯಾತ್ರಾರ್ಥವಾಗಿ ಮಾಡತಕ್ಕ ಗಮನಾಗಮನಾದಿಲೌಕಿಕಕರ್ಮವನ್ನೂ, ದೇಹಧಾರಣಕ್ಕಾಗಿ ಊಟಮಾಡುವದನ್ನೂ, ವೈದಿಕವಾದ ಹೋಮದಾನಾದಿನಿತ್ಯನೈಮಿತ್ತಿಕ ಕರ್ಮಗಳನ್ನೂ ಎಲ್ಲವನ್ನೂ ಪರಮಾತ್ಮನಿಗೆ ಅರ್ಪಣೆಮಾಡುವದು. ಈ ಅರ್ಥವನ್ನು

"आत्मा त्वं गिरिजा मतिः परिजनाः प्राणाः शरीरं गृहं
पूजा ते विषयोपभोगरचना निद्रा समाधिस्थितिः ।
संचारः पदयोः प्रदक्षिणाविधिः स्तोत्राणि सर्वा गिरो
यद्यत्कर्म करोमि तत्तदखिलं शंभो तवाराधनम् ॥"

ಎಂಬ ಶ್ಲೋಕವು ವಿವರಿಸುವದು. ಇದರ ಅರ್ಥವೇನೆಂದರೆ "ಹೆ, ದೇವ, ನೀನು ನನ್ನ ಆತ್ಮನು. ನನ್ನ ಬುದ್ಧಿಯೇ ನಿನ್ನರ್ಧಾಂಗಿಯಾದ ಪಾರ್ವತಿಯು. ನನ್ನ ಪಂಚಪ್ರಾಣಗಳೂ ನಿನ್ನ ಪರಿಜನರು. ನನ್ನ ದೇಹವೇ ನಿನ್ನ ಆಲಯು. ನಾನು ವಿಷಯೋಪಭೋಗಮಾಡುವದೆಲ್ಲ ನಿನ್ನ ಪೂಜೆ. ನನ್ನ ನಿದ್ರೆಯೇ ಸಮಾಧಿಸ್ಥಿತಿ. ನಾನು ಸಂಚಾರಮಾಡುವದೆಲ್ಲ ನಿನ್ನ ಪ್ರದಕ್ಷಿಣೆ. ನಾನಾಡುವ ಮಾತೆಲ್ಲ ನಿನ್ನ ಸ್ತೋತ್ರ. ನಾನು ಮಾಡುವದೆಲ್ಲ ನಿನ್ನಾರಾಧನೆಯು." ಹೀಗೆ ಭಕ್ತನು ಆತ್ಮನಿವೇದನಮಾಡುವಾಗ ದೇವರನ್ನು ತನಗೆ ಇಂಥ-

ದ್ದೊಂದು ಕಾರ್ಯಸಾಧನೆಯನ್ನು ಮಾಡಿಕೊಡೆಂದು ಮಾತ್ರ ಎಂದಿಗೂ ಕೇಳ-ಬಾರದು. ಶ್ರೀ ಶಂಕರಾಚಾರ್ಯರು.

"मत्समः पातकी नास्ति पापघ्नी त्वत्समा न हि ।
एवं ज्ञात्वा महादेवि यथायोग्यं तथा कुरु ॥"

ಎಂದರೆ "ಹೇ ಜಗಜ್ಜನನಿ, ನನ್ನಂಥ ಪಾಪಿಗಳಿಲ್ಲ; ನಿನ್ನಂಥ ಪಾಪ ಪರಿಹಾರಕ-ರಿಲ್ಲ; ಇದನ್ನು ತಿಳಿದು ನಿನಗೆ ಹೇಗೆ ಯೋಗ್ಯವಾಗಿ ಕಾಣುತ್ತದೊ ಹಾಗೆ ಮಾಡು." ಎಂದು ಹೇಳಿದಂತೆ ದೇವರಿಗೆ ನಮ್ಮ ಸ್ಥಿತಿಗತಿಯನ್ನು ವಿಜ್ಞಾಪನೆ ಮಾಡಿ ಮುಂದೆ ಹೇಗೆ ಸಾಗಿಸಬೇಕೊ ಅದನ್ನು ದೇವರೇ ನಮಗೆ ಶ್ರೇಯಸ್ಸಾಧನವಾಗಿ ಕೊಟ್ಟಿರುತ್ತಾನೆಂದು ಅನುಭವಿಸಬೇಕು. ಹೀಗೆ ಮಾಡುವದು ಆತ್ಮನಿವೇದನ. ಈ ಪ್ರಕಾರ ಶ್ರವಣಾದಿಭಕ್ತಿಯನ್ನು ಮಾಡುವದೇ ಮನು-ಷ್ಯನ ಪರಮಕರ್ತವ್ಯವೆಂದು ಶ್ರೀಮದ್ಭಾಗವತದ

"एतावानेव लोकेऽस्मिन् पुंसः स्वार्थः परः स्मृतः ।
भक्तियोगे भगवति तन्नामश्रवणादिभिः ॥"

ಎಂಬ ಶ್ಲೋಕವು ಪ್ರತಿಪಾದಿಸುವದು. ಶ್ರವಣಾದಿ ಭಕ್ತಿಗಳಲ್ಲಿ ಒಂದೊಂದ-ರಿಂದಲೆ ಒಬ್ಬೊಬ್ಬರು ಕೈವಲ್ಯವನ್ನು ಪಡೆದಿರುವರು. ಪರೀಕ್ಷಿನ್ಮಹಾರಾಜನು ಶ್ರೀಮದ್ಭಾಗವತಶ್ರವಣದಿಂದಲೂ, ಶುಕಮುನೀಂದ್ರನು ಶ್ರೀಮದ್ಭಾಗವತಕೀ-ರ್ತನದಿಂದಲೂ, ಪ್ರಹ್ಲಾದನು ಸ್ಮರಣದಿಂದಲೂ, ಲಕ್ಷ್ಮಿಯು ಚರಣಸೇವೆ-ಯಿಂದಲೂ, ಪ್ರಥುಚಕ್ರವರ್ತಿಯು ಅರ್ಚನದಿಂದಲೂ, ಅಕ್ರೂರನು ನಮ-ಸ್ಕಾರದಿಂದಲೂ, ಹನುಮಂತನು ದಾಸ್ಯದಿಂದಲೂ, ಅರ್ಜುನನು ಸಖ್ಯ-ದಿಂದಲೂ, ಬಲಿಚಕ್ರವರ್ತಿಯು ಆತ್ಮನಿವೇದನದಿಂದಲೂ ಭಗವದನುಗ್ರಹಕ್ಕೆ ಪಾತ್ರರಾಗಿರುವರು.

ಒಂದು ಪಕ್ಷ ಮೊದಮೊದಲು ವಿಗ್ರಹಗಳ ಮೇಲೆ ಪ್ರೀತಿ ತೋರದಿದ್ದರೂ ಯಾವ ವ್ಯಸನವೂ ಇಲ್ಲದವನಾದರೂ ಒಂದು ವ್ಯಸನದ ಅಭ್ಯಾಸದಿಂದ

ಕೊನೆಗೆ ಆ ವ್ಯಸನವನ್ನು ಬಿಟ್ಟು ಅರೆಗಳಿಗೆಯಾದರೂ ಜೀವವನ್ನು ಹಿಡಿದಿರ-ಲಾರದಂತೆ ಆಗುವ ಹಾಗೆ ಅಭ್ಯಾಸಮಾಡಿ ಸಾಕಾರೋಪಾಸನೆಯನ್ನು ಬೆಳೆ-ಸಬೇಕು.

"एवं सततयुक्ता ये भक्तास्त्वां पर्युपासते ।
ये चाप्यक्षरमव्यक्तं तेषां के योगवित्तमाः ॥"

ಎಂಬ ಗೀತಾಶ್ಲೋಕದಲ್ಲಿ ಅರ್ಜುನನು ಸಾಕಾರೋಪಾಸಕರು ಶ್ರೇಷ್ಠರೊ ನಿ-ರಾಕಾರೋಪಾಸಕರು ಶ್ರೇಷ್ಠರೊ ಎಂದು ಕೇಳಿದಾಗ ಭಗವಂತನು

"मय्यावेश्य मनो ये मां नित्ययुक्ता उपासते ।
श्रद्धया परयोपेतास्ते मे युक्ततमा मताः ॥"

ಎಂದರೆ ಮೊದಲು ನನ್ನ ಸಗುಣಮೂರ್ತಿಯಲ್ಲಿ ಮನಸ್ಸಿಟ್ಟು ಶ್ರದ್ಧಾಪೂರ್ವ-ಕವಾಗಿ ಉಪಾಸನೆಮಾಡುವವರೇ ಶ್ರೇಷ್ಠರೆಂದು ಹೇಳಿರುವನು. ಹಾಗಾದರೆ, ಭಗವಂತನು ಒಂದು ಸಲ ಭಕ್ತನು ನನಗೆ ಪ್ರಿಯನೆಂದು ಹೇಳುವದೂ ಇನ್ನೊಂದು ಸಲ

"समोऽहं सर्वभूतेषु न मे द्वेष्योऽस्ति न प्रियः"

ಎಂಬದರಿಂದ "ನನಗೆ ಎಲ್ಲರೂ ಸಮ; ಒಬ್ಬನಲ್ಲಿ ಪ್ರಿಯವೂ ಇನ್ನೊಬ್ಬನಲ್ಲಿ ಅಪ್ರಿಯವೂ ನನಗೆ ಇಲ್ಲ." ಎಂದು ಹೇಳುವದೂ ಹೇಗೆ ಸಮಂಜಸವಾಗು-ವದೆಂದರೆ ಪರಮಾತ್ಮನು ಎಲ್ಲರಿಗೂ ಒಂದೇ. ಅವನಿಗೆ ಪ್ರಿಯಾಪ್ರಿಯಗಳೇನೂ ಇಲ್ಲ. ಪರಮಾತ್ಮನು ಅಗ್ನಿಯಂತೆ. ಅಗ್ನಿಯು ತನ್ನ ಬಳಿಗೆ ಬಂದವರ ಶೀತ ಬಾಧೆಯನ್ನು ಪರಿಹರಿಸುವ ವಿಷಯದಲ್ಲಿ ಯಾರ ಮೇಲೆಯೂ ಪಕ್ಷಪಾತವನ್ನು ಮಾಡುವದಿಲ್ಲ; ಆದರೆ ಹತ್ತಿರಕ್ಕೆ ಬಂದರೆ ಮಾತ್ರ ಶೀತ ಭಾಧೆಯನ್ನು ಕಳೆ-ಯುವದು. ಅಕ್ಷರೋಪಾಸಕರು ತಮ್ಮ ಸ್ವಸಾಹಸದಿಂದ ಮಾಯೆಯನ್ನು ದಾಟಿ "तरती शोकमात्मवत्" ಎಂಬ ಶ್ರುತಿಯಂತೆ ತಮಗೆ ತಾವೇ ಪಾರಾ-ಗುವರು. ಭಕ್ತರು ಪರಮಾತ್ಮನಿಗೆ ಶರಣು ಹೋಗುವದರಿಂದ

"तेषामहं समुद्धर्ता मृत्युसंसारसागरात् ।
भवामि न चिरात्पार्थ मय्यावेशितचेतसाम् ॥"

ಎಂಬ ಗೀತೋಕ್ತಿಯಲ್ಲಿ ಭಗವಂತನು ತನ್ನ ಮೇಲೆ ಮನಸ್ಸಿಟ್ಟವರನ್ನು ತಡ-ವಿಲ್ಲದೆ ತಾನು ಮೃತ್ಯುರೂಪವಾದ ಸಂಸಾರದಿಂದ ಉದ್ಧರಿಸುವೆನೆಂದು ಹೇಳಿ-ರುವನು. ಇದರಲ್ಲಿ ಪಕ್ಷಪಾತವೇನು? ಪರಮಾತ್ಮನ ಮನೆಯ ಬಾಗಿಲಲ್ಲಿ ಮಾಯೆಯೆಂಬ ನ್ಯೂಫೌಂಡ್‌ಲ್ಯಾಂಡಿನ ನಾಯಿ ಇದೆ. ಅದು ಯಾರನ್ನೂ ಒಳಗೆ ಬಿಡುವದಿಲ್ಲ. ಜ್ಞಾನಿಗಳು ವಿಚಾರವೆಂಬ ದೊಣ್ಣೆಯನ್ನು ಹಿಡಿದುಕೊಂಡು ಜಗ್ಗು-ಹಾಕುತ್ತ ತಾವೇ ಮನೆಯ ಯಜಮಾನರಂತೆ ತೋರಿಸಿಕೊಂಡು ಒಳಕ್ಕೆ ನುಗ್ಗಿ ಬಿಡುವರು. ಅವರ ದೊಣ್ಣೆಯ ತೂಕವನ್ನೂ ಅವರ ಯಜಮಾನಿ-ಕೆಯ ತಿರುಳನ್ನೂ ನೋಡಿ ಆನಾಯಿ ಬಾಯಿಮುಚ್ಚಿಕೊಂಡಿರುವದು. ಅಷ್ಟು ಧೈರ್ಯದಿಂದ ಹೋಗಲಾರದವರು ಮನೆಯ ಮುಂದೆ ನಿಂತು ಪರಮಾತ್ಮನನ್ನು ಕೂಗಬೇಕು. ತನ್ನವರು ಬಂದರೆಂದು ಪರಮಾತ್ಮನು ತನ್ನ ಮಾಯೆಯೆಂಬ ನಾಯನ್ನು ಹಿಂದಕ್ಕೆ ಕರೆದುಕೊಳ್ಳುವನು. ಭಕ್ತರು ಆಗ ನಿರ್ಭಯದಿಂದ ಒಳಕ್ಕೆ ಹೋಗುವರು. ಅಪಾಯಕ್ಕೆ ತಲೆಗೊಟ್ಟು ನುಗ್ಗುವದಕ್ಕಿಂತಲೂ ಹೀಗೆ ಹೋಗುವದು ಮೇಲೆಂದು ಭಕ್ತರು ಈ ಭಕ್ತಿಪಂಥವನ್ನು ಹಿಡಿಯುವರು.

ಆರಂಭಸ್ಥಿತಿಯಲ್ಲಿ ವಿಗ್ರಹಾರಾಧನೆಯನ್ನು ಮಾಡುವದು ಬಹು ಉಪ-ಕಾರಕವಾಗುವದು. ಭರತಖಂಡದವರನ್ನು ಮಾತ್ರ ವಿಗ್ರಹಾರಾಧಕರೆಂದು ಕಡೆಗಣ್ಣಿಂದ ನೋಡುವವರು ತಮ್ಮ ಕಣ್ಣೊಳಗೆ ಗಜ್ಜುಗ ಬೆಳೆದಿರುವದನ್ನು ತಿಳಿಯದೆ ಇತರರ ಕಣ್ಣಲ್ಲಿ ಹೂವು ಕೂತಿರುವದನ್ನು ಎತ್ತಿಣಿಸುತ್ತಾರೆ. ಲೋಕ-ದಲ್ಲಿ ವಿಗ್ರಹಾರಾಧನೆ ಮಾಡದ ಪ್ರಾಣಿಯೇ ಇಲ್ಲ. ಇನ್ನು ಜನಾಂಗವೆಲ್ಲಿಂದ ಬಂತು? ದೇವರೆಂಬ ಹೆಸರಿನ ಮೇಲೆ ಆರಿದಾಳದ ಗೀಟೆಳೆಯಬೇಕೆಂದು ಹೇಳು-ವಷ್ಟು ದೇವರ ಅಸ್ತಿತ್ವವನ್ನು ನಂಬದವನು ಕೂಡ ತನ್ನ ಪ್ರೀತಿಪಾತ್ರರಾದ-ವರ ಭಾವಚಿತ್ರಕ್ಕೆ ಸುಂದರವಾದ ಚೌಕಟ್ಟನ್ನೂ ಕನ್ನಡಿಯನ್ನೂ ಹಾಕಿಸಿ ತನ್ನ ಮನೆಯಲ್ಲಿ ಉನ್ನತವಾದ ಸ್ಥಳದಲ್ಲಿಟ್ಟು ಅಲಂಕರಿಸುವನು. ದೇವರ ಅಸ್ತಿತ್ವವನ್ನು ನಂಬುವನು ದೇವರ ವಿಗ್ರಹವನ್ನು ಬಹುಮಾನಿಸುವದರಲ್ಲಿ

ಆಶ್ಚರ್ಯವೇನು? ರಾಜರ ಮತ್ತು ದೊಡ್ಡ ಅಧಿಕಾರಿಗಳ ಶಿಲಾವಿಗ್ರಹ-ಗಳನ್ನು ಸ್ಥಾಪಿಸುವರಲ್ಲ! ಅದು ವಿಗ್ರಹಾರಾಧನೆಯಲ್ಲವೇನು? ನಮ್ಮ ವಿಗ್ರಹಾರಾಧನೆಯ ಉದ್ದೇಶವೇನೆಂದರೆ— ಸಾಧಾರಣವಾಗಿ ಮನಸ್ಸು ಕ್ಷುದ್ರ-ವಾದ ಸ್ತ್ರೀಪುತ್ರಾದಿ ವಿಷಯಗಳಲ್ಲಿ ಪೂಜ್ಯ ಬುದ್ಧಿಯನ್ನಿಡುತ್ತ ಹೋಗುತ್ತದೆ. ಅದನ್ನು ತಪ್ಪಿಸಬೇಕಾದರೆ ಕಾಲಿಗೆ ನಟ್ಟ ಒಂದು ಮುಳ್ಳನ್ನು ಮತ್ತೊಂದು ಮುಳ್ಳಿನಿಂದಲೇ ತೆಗೆಯುವಂತೆ ಸ್ತ್ರೀಪುತ್ರಾದಿಗಳ ಮೇಲಣ ಪ್ರೇಮವೊದಲಾದ ಅಶಾಸ್ತ್ರೀಯವಿಗ್ರಹಪೂಜೆಯನ್ನು ಭಗವಂತನ ಅವತಾರಗಳ ಮೇಲಣ ಪ್ರೇಮ-ವೆಂಬ ಶಾಸ್ತ್ರೀಯವಿಗ್ರಹಪೂಜೆಯಿಂದ ತೆಗೆದು ಹಾಕಬೇಕು.— ಇಷ್ಟೆ. ನಮ್ಮ ವಿಗ್ರಹಪೂಜೆ, ವಿಗ್ರಹಪೂಜೆಯೇ ಅಲ್ಲ. ನಾವು ವಿಗ್ರಹಗಳನ್ನು ಪೂಜೆಮಾಡುವಾಗ "ಕಲ್ಲೆ, ಉಣ್ಣು; ಮಣ್ಣೆ ಕುಡಿ;" ಎಂದು ಹೇಳುವದಿಲ್ಲ. ನಮ್ಮ ಪೂಜೆಯಲ್ಲಿ ವಿಗ್ರಹದಿಂದ ಸ್ಮರಣೆಗೆ ಬರುವಂಥ ಪರಮಾತ್ಮಸ್ವರೂಪಕ್ಕೆ. ವಿಗ್ರಹದಿಂದ ಪರಮಾತ್ಮನ ಸ್ಮರಣೆಗೆ ಹೇಗೆ ಬರುವದೆಂದರೆ ಪಾಠಶಾಲೆಗಳಲ್ಲಿ ಒಬ್ಬ ಹುಡುಗನ ಮುಂದೆ ಒಂದು ಚಿತ್ರಪಠವನ್ನಿಟ್ಟು ಅದರಲ್ಲಿ ನಾಯನ್ನೊ ಅಥವಾ ಬೆಕ್ಕನ್ನೊ ತೋರಿಸೆಂದ ಕೂಡಲೆ ಅವನು ತೋರಿಸುವದಿಲ್ಲವೆ? ಆಹುಡುಗನಿಗೆ ಆಚಿತ್ರವನ್ನು ನೋಡುತ್ತಲೆ ನಾಯ ಅಥವಾ ಬೆಕ್ಕಿನ ಸ್ಮರಣೆ ಬಂದ ಹಾಗೆ ಶಾಸ್ತ್ರದಲ್ಲಿ ಹೇಳಿರುವ ಸುಗುಣಮೂರ್ತಿಯ ಆಕೃತಿವಿಶೇಷ-ಗಳನ್ನು ವಿಗ್ರಹದಲ್ಲಿ ನೋಡುತ್ತಲೆ ಯಾರಿಗಾದರೂ ಆಅವತಾರದ ನೆನಪಾಗು-ವದು. ಶ್ರೀಕೃಷ್ಣಪರಮಾತ್ಮನು ಗೀತೆಯಲ್ಲಿ

"अहं सर्वस्य प्रभवो मत्तः सर्वं प्रवर्तते ।
इति मत्वा भजंते मां बुधा भावसमन्विताः ॥"

ಎಂಬ ಶ್ಲೋಕದಲ್ಲಿ "ನಾನು ಸಮಸ್ತ ಜಗತ್ತಿನ ಉತ್ಪತ್ತಿಗೂ ಕಾರಣನೆಂದೂ ನನ್ನಿಂದಲೇ ಬುದ್ಧಿಜ್ಞಾನಾದಿಗಳೆಲ್ಲ ಪ್ರವರ್ತಿಸುವವೆಂದೂ ಹೀಗೆ ನನ್ನ ವಿಷ-ಯವನ್ನು ಚೆನ್ನಾಗಿ ತಿಳಿದೇ ವಿವೇಕಿಗಳು ಪ್ರೇಮಪೂರ್ವಕವಾಗಿ ನನ್ನನ್ನು ಭಜಿಸುವರು" ಎಂದು ಹೇಳಿರುವನು. ಹೀಗೆ ಪರಮಾತ್ಮಭಾವನೆಯನ್ನು

ಇಹದಂಥವರ ವಿಗ್ರಹಪೂಜೆಯು ಮಾತ್ರ ತಿರಸ್ಕರಣೀಯವೇ ಸರಿ. ಭಾವನೆಯೊಂದು ಬಲವಾಗಿದ್ದರೆ ಅದರಿಂದ ಮೂಲಸ್ವರೂಪವನ್ನು ಸಾಕ್ಷಾತ್ತಾಗಿ ಪೂಜೆಮಾಡಿದುದರ ಫಲವು ಬಂದೇ ಬರುವದು. ಏಕಲವ್ಯನೆಂಬ ನಿಷಾದನು ಮಣ್ಣಿನಿಂದ ದ್ರೋಣಾಚಾರ್ಯರ ಬೊಂಬೆಯನ್ನು ಮಾಡಿ ಮುಂದೆ ಇಟ್ಟು-ಕೊಂಡು ಅದನ್ನೆ ದ್ರೋಣಾಚಾರ್ಯರನ್ನಾಗಿ ಭಾವಿಸಿ ಧನುರ್ವಿದ್ಯೆಯನ್ನು ಅಭ್ಯಾಸಮಾಡಿ ಧನುರ್ಧರಾಗ್ರೇಸರನಾದನೆಂದು ಮಹಾಭಾರತದಲ್ಲಿ ಹೇಳಿದೆ. ಈಸಂದರ್ಭದಲ್ಲಿ ಅವನೇ ಮಾಡಿದ ಮಣ್ಣಿನ ಬೊಂಬೆಯು ಅವನಿಗೆ ಇನ್ನು ಏನು ಹೇಳಿಕೊಟ್ಟಿದ್ದೀತು! ಮಣ್ಣಿನ ಬೊಂಬೆ ಬರೀ ಜ್ಞಾಪಕಮಾತ್ರಕ್ಕೆ. ಅವನ ಭಾವನೆಯು ಬಲವಾಗಿದ್ದುದರಿಂದ ಅವನಿಗೆ ದ್ರೋಣಾಚಾರ್ಯರಿಂದ ಆಗತಕ್ಕ ಪ್ರಯೋಜನವಾಯಿತು. ಲೋಕದಲ್ಲಿ ಒಳ್ಳೆಯವರ ಜೊತೆಯಲ್ಲಿ ಸೇರುತ್ತಿ-ರುವದರಿಂದ ಒಳ್ಳೆಯ ಗುಣಗಳು ಬರುವವೆಂದೂ ಕೆಟ್ಟವರ ಜೊತೆಯಲ್ಲಿ ಸೇರುತ್ತಿರುವದರಿಂದ ಕೆಟ್ಟಗುಣಗಳು ಬರುವವೆಂದೂ ಎಲ್ಲರೂ ಒಪ್ಪುವರಷ್ಟೆ. ಇದಕ್ಕೆ ಅರ್ಥವೇನು? ಒಬ್ಬನ ಗುಣಗಳಲ್ಲಿ ಒಳ್ಳೆಯತನವು ಪ್ರಬಲವಾ-ಗಿದ್ದರೆ ಅವನ ಸಮೀಪದಲ್ಲಿ ಬಹಳವಾಗಿ ಸೇರುವ ಇನ್ನೊಬ್ಬನಿಗೂ ಹೇಗೋ ಆಒಳ್ಳೆಯ ಗುಣಗಳು ಬಂದು ಸೇರಿಕೊಳ್ಳುವವು. ಕೆಟ್ಟಗುಣಗಳ ವಿಷ-ಯವೂ ಹಾಗೆಯೇ. ನಮ್ಮ ಬುದ್ಧಿಗೆ ತೋರಿದಷ್ಟು ಸರ್ವೋತ್ಕೃಷ್ಟ ಗುಣಗಳನ್ನುಳ್ಳ ಒಂದು ವ್ಯಕ್ತಿಯನ್ನು ಆವಾಹನೆ ಮಾಡಿದ ವಿಗ್ರಹವನ್ನು ನಾವು ಎಡೆಬಿಡದೆ ಇದ್ದು ಅದರ ಸಂಬಂಧವಾದ ಪವಿತ್ರವಾದ ಚರಿತ್ರೆಗಳನ್ನು ಹೇಳುತ್ತ, ಕೇಳುತ್ತ, ಹಾಡುತ್ತ, ನೋಡುತ್ತ, ಮುಟ್ಟುತ್ತ, ಸ್ಮರಿಸುತ್ತ ಆಭಾವನಾಮಯರಾದರೆ ಅದರಿಂದ ನಮ್ಮ ಮನಸ್ಸಿನ ಮೇಲೆ ಉತ್ತಮ ಪರಿಣಾಮವಾಗಲಾರದೆಂದು ಸಂಶಯಪಡುವದಕ್ಕೆ ಕಾರಣವೇನು? ಗೌಣೀ-ಭಕ್ತಿಯಿಂದ ಚಿತ್ತಶುದ್ಧಿಯಾಗಿಯೇ ಆಗುವದು. "ಮುಖವು ಮನಸ್ಸಿನ ಕನ್ನಡಿ" ಎಂಬ ನಾಣ್ಣುಡಿಯಂತೆ ಅವನ ಮನಸ್ಸಿಗೆ ಸಿಕ್ಕಿದ ಅಷ್ಟಿಷ್ಟು ಶಾಂತ-ತೆಯ ಲಕ್ಷಣವು ಅವನ ಮುಖದ ಮೇಲೆ ಕಂಡೇ ಕಾಣುವುದು. ಗೌಣೀ ಭಕ್ತಿಯನ್ನು ಮಾಡುವದರಿಂದ ಕರ್ಮಯೋಗದಿಂದಾಗಬೇಕಾದ ಚಿತ್ತಶುದ್ಧಿ-ಯಾಗುವದಲ್ಲದೆ ಜ್ಞಾನಯೋಗಿಯು ಶಾಸ್ತ್ರೀಯರೀತಿಯಿಂದ ತಿಳಿಯುವ ಪರ-

ಮಾತ್ಮವಿಚಾರವು ನವವಿಧವಾದ ಭಕ್ತಿಗಳಲ್ಲಿ ಮೊದಲನೇ ಪ್ರೇಮಪ್ರಧಾನ-ವಾದ ಹರಿಕಥಾಶ್ರವಣದಿಂದ ತಿಳಿದು ಅದು ಕೀರ್ತನಸ್ಮರಣಾದಿಗಳಿಂದ ಮನನವಾಗುವದು. ಈ ಭಕ್ತಿಯನ್ನು ಮಾಡುವಾಗ ಭಕ್ತನು ತನ್ನ ಭಕ್ತಿಗೆ ಬಾಧಕವಾದ ವಿಷಯಗಳ ಗೋಜಿಗೆ ಹೋಗದೆ ಸಾಧಕವಾದವುಗಳನ್ನು ಮಾತ್ರ ಉಪಯೋಗಮಾಡಿಕೊಳ್ಳುತ್ತಿರುವನು. ವಿಷಯಗಳು ಭಕ್ತನನ್ನು ತಮಗೆ ತಾವೇ ಬಿಟ್ಟು ಹಿಂದಿರುಗುವವು. ಅದು ಹೇಗೆಂದರೆ ನೋಡಿರಿ. ಕೇವಲ ಸಣ್ಣ ಶಿಶುವು ಕೂಡ ಏನಾದರೊಂದು ಆಟದ ಒಡವೆಯನ್ನು ಇಟ್ಟು-ಕೊಂಡು ಆಡುತ್ತ ಕುಳಿತಿರುವ ವೇಳೆಯಲ್ಲಿ ಆಆಟದ ವಸ್ತುವನ್ನು ಕಸು-ಕೊಳ್ಳಹೋದರೆ ಅದು ಅದನ್ನು ಕೊಡದೆ ಹಿಂದಕ್ಕೆ ಸೆಳೆದುಕೊಂಡು ಅದರಲ್ಲಿ ತನಗೆ ಇರತಕ್ಕ ಪ್ರೀತಿಯನ್ನು ವ್ಯಕ್ತಮಾಡುತ್ತದೆ. ಆದರೆ ಅದೇ ಕೂಸಿಗೆ ಕಲ್ಲುಸಕ್ಕರೆಯ ಚೂರನ್ನು ಕೊಡುವದಾಗಿ ತೋರಿಸಿದರೆ ತತ್ಕ್ಷಣದಲ್ಲಿಯೇ ಮೊದಲು ತನ್ನ ಕೈಯಲ್ಲಿದ್ದ ಆಟದ ಪದಾರ್ಥವನ್ನು ಆಚೆಗೆ ಬಿಸುಟು ಆಸಕ್ಕ-ರೆಯನ್ನು ತಿನ್ನಬೇಕೆಂಬ ಲವಲವಿಕೆಯಿಂದ ಮುಂದಕ್ಕೆ ಸರಿದು ಅಳುತ್ತ ಬರುತ್ತದೆ. ಇದರಿಂದ ಆ ಕೂಸಿಗೆ ಆಆಟದ ಒಡವೆಯಿಂದ ಯಾವ ಸಂತೋ-ಷವು ಉಂಟಾಗುತ್ತಿತ್ತೋ ಅದಕ್ಕಿಂತಲೂ ಹೆಚ್ಚಾದ ಸಂತೋಷವು ಆಸಕ್ಕರೆ-ಯಿಂದ ಖಂಡಿತವಾಗಿ ತನಗೆ ದೊರೆಯುವದೆಂದು ತಿಳಿದುದರಿಂದಲೆ ಮೊದಲಿನ ಪದಾರ್ಥವನ್ನು ಅಲಕ್ಷ್ಯಮಾಡಿ ಈಹೊಸವಸ್ತುವಿಗೆ ಆಸೆಗೊಂಡಿತು. ಅದ-ರಂತೆಯೆ ಪ್ರಪಂಚವಿಷಯಗಳಲ್ಲಿ ಮಗ್ನರಾಗಿ ಅವುಗಳನ್ನೇ ಸುಖರೂಪವಾಗಿ ಎಣಿಸಿ ಅಹೋರಾತ್ರಿ ಅವುಗಳನ್ನೆ ಯೋಚಿಸಿ ಬೆಂದು ಬೆಂಡಾಗುತ್ತಿರುವವ-ರಾದರೂ ತಮಗೆ ಆವಸ್ತುಗಳಲ್ಲಿ ದೊರಕುತ್ತಿರುವ ಆನಂದಕ್ಕಿಂತಲೂ ಅಧಿ-ಕವಾದ ಆನಂದವನ್ನೀಯುವ ವಸ್ತು ಲಭಿಸಿದ ಹೊರತು ಅವುಗಳನ್ನು ಬಿಟ್ಟಿ-ರಲಾರೆವೆಂದರೆ ನ್ಯಾಯವಾಗಿಯೇ ಇರುವದು. ಲೌಕಿಕಪದಾರ್ಥಗಳಿಂದಾಗ-ತಕ್ಕ ಸೌಖ್ಯಕ್ಕಿಂತಲೂ ಶತಾಧಿಕವಾದ ಸುಖವು ಗೌಣೀಭಕ್ತಿಯಲ್ಲಿ ಕೂಡ ಆಗುವದರಿಂದಲೆ ಅದರಲ್ಲಿ ಭಕ್ತರು ಪ್ರವರ್ತಿಸುವರು. ಈಅರ್ಥವನ್ನು ಮನಸ್ಸಿನಲ್ಲಿಟ್ಟುಕೊಂಡೇ ಕರ್ಣಾಟಕದ ಪ್ರಸಿದ್ಧ ಭಕ್ತರಾದ ಶ್ರೀಪುರಂದರ-ದಾಸರು "ಕಲ್ಲುಸಕ್ಕರೆ ಕೊಳ್ಳಿರೊ, ನೀವೆಲ್ಲರು ಕಲ್ಲುಸಕ್ಕರೆ ಕೊಳ್ಳಿರೊ" ಎಂದು

ಸಾರಿಸಾರಿ ಹೇಳಿದಂತೆ ತೋರುತ್ತದೆ. ಹೀಗೆ ಅವರು ಗೌಣೀಭಕ್ತಿಯಿಂದ ಆನಂದವನ್ನು ತೆಗೆದುಕೊಳ್ಳುತ್ತ ಹೋದ ಹಾಗೆಲ್ಲ ವಿಷಯುಗಳು ಅವಮಾನ-ಪಟ್ಟು ಬಾಲವನ್ನು ಮುದುರಿಕೊಂಡು ಕೂಗದೆ ಮುಖವನ್ನು ಜೋಲುಹಾಕಿ-ಕೊಂಡು ಹಿಂದಿರುಗುವವು. ಇನ್ನು ಕರ್ಮಯೋಗದಿಂದ ಚಿತ್ತಶುದ್ಧಿಯಾ-ದವನು ಚಿತ್ತಸ್ಥೈರ್ಯಕ್ಕಾಗಿ ರಾಜಯೋಗವನ್ನವಲಂಬಿಸುವಂತೆ ಗೌಣೀಭಕ್ತಿ-ಯಿಂದ ಚಿತ್ತಶುದ್ಧಿಯನ್ನು ಹೊಂದಿ ಶ್ರವಣಮನನಗಳನ್ನು ಪೂರೈಸಿದ ಭಕ್ತನು ಮುಂದೆ ನಿಧಿಧ್ಯಾಸವನ್ನು ಆರಂಭಿಸುವನು. ನಿಧಿಧ್ಯಾಸವೂ ಕೂಡ ಗೌಣೀ-ಭಕ್ತಿಯೇ ಆದರೂ ಅದನ್ನು ಗೌಣೀಭಕ್ತಿಯ ಪರಿಪಾಕಸ್ಥಿತಿಯೆಂದೂ ಪರ-ಭಕ್ತಿಯ ಪ್ರಾರಂಭಸ್ಥಿತಿಯೆಂದೂ ಹೇಳಬಹುದಾದುದರಿಂದ ಶ್ರೀಶಂಕರಾಚಾ-ರ್ಯರ ಮತ್ತು ಶ್ರೀಸ್ವಾಮಿವಿವೇಕಾನಂದರ ಭಕ್ತಿಲಕ್ಷಣಗಳಿಗೆ ಹೊಂದು-ವಂತೆ ನಿಧಿಧ್ಯಾಸರೂಪವಾದ ಗೌಣೀಭಕ್ತಿಯು ಶ್ರವಣಮನನರೂಪವಾದ ಗೌಣೀಭಕ್ತಿಗೂ ಜ್ಞಾನದ ಪರಿಪಕ್ವಾವಸ್ಥೆಯಾದ ಪರಭಕ್ತಿಗೂ ಮಧ್ಯಸ್ಥವಾದ ಒಂದು ಮೆಟ್ಟಿಲಾಗಿರುವದಕ್ಕೆ ಒಪ್ಪುವದು. ಇನ್ನೊಂದು ರೀತಿಯಿಂದ ನೋಡಿ-ದರೆ ಈಗೌಣೀಭಕ್ತಿಯಿಂದ ಕಾಯಿಕವಾಚಿಕತಪಸ್ಸುಗಳನ್ನು ಮಾಡಿದ ಭಕ್ತನು ಮುಂದೆ ಮಾನಸಿಕತಪಸ್ಸಿಗೆ ಕೈಹಾಕುವನು.

ಶ್ರವಣಕೀರ್ತನಾದಿಗಳನ್ನು ಸಮರ್ಪಕವಾಗಿ ನಡೆಸುವದರಿಂದ ಮನ-ಸ್ಸೆಂಬ ಕಬ್ಬಿಣದ ಪಾಪವೆಂಬ ತುಕ್ಕು ಹೋಗುತ್ತ ಬರುವದಲ್ಲದೆ ವಿಷಯಾಭಿ-ಲಾಷೆಯೆಂಬ ದಾಹವು ಕಡಮೆಯಾಗುತ್ತ ಬರುವದು. ಆಸೆ ಹೋಗುವದೇ ಒಂದು ದೊಡ್ಡ ಶ್ರೇಯಸ್ಸು. ಆನಂದಮಯನಾದ ದೇವರನ್ನು ಮರೆಹೊಕ್ಕು ಕ್ಷುದ್ರವಾದ ವಿಷಯಸುಖವನ್ನು ಬೇಡುವದೆಂಬುದು ಎಂಥ ತಿಳಿಗೇಡಿತನ! ವಿಷಯಾಭಿಲಾಷೆಯೂ ಭಗವಂತನ ಮೇಲಣ ಪ್ರೇಮವೂ ಎರಡೂ ಎಂದಿಗೂ ಕೂಡಿರುವದಿಲ್ಲ. ಅಕ್ಕಿಯ ಮೇಲಣ ಆಸೆ, ನೆಂಟರ ಮೇಲಣ ಹಿತ ಎರಡೂ ಹೊಂದಿಕೊಂಡಿರುವದುಂಟೆ? ಆನಂದನಿಧಿಯಾದ ದೇವರ ಮುಂದೆ ನಿಂತು ವಿಷಯಗಳಿಗೆ ಬಾಯಿನೀರುಸುರಿಸುವದು ಗಂಗಾನದಿಯ ದಡದಲ್ಲಿ ನಿಂತು ನೀರಿಗಾಗಿ ಗುಂಡಿಯನ್ನು ತೋಡಿದಂತೆ ಮತ್ತು ವಜ್ರದ ಗನಿಯ ಮೇಲೆ ನಿಂತು ಗಾಜಿನ ಚೂರುಗಳನ್ನು ಹುಡುಕಿದಂತೆ ಭಗವದ್ಭಕ್ತನಿಗೆ ಐಹಿಕಸುಖಾಭಿ-

ಲಾಷೆ ತಗ್ಗುವದೂ ಅಲ್ಲದೆ ಸ್ವರ್ಗಾದಿಪರಲೋಕಸುಖವೂ ಅವನಿಗೆ ಮಹತ್ತೆನಿಸುವದಿಲ್ಲ. "ಸ್ವರ್ಗಾದಿಲೋಕಗಳೇನು? ಭೂಲೋಕದಂತಿರುವ ಮೇಲಿನ ಲೋಕಗಳಿರಬಹುದು ಅಥವಾ ಇವಕ್ಕಿಂತಲೂ ಸ್ವಲ್ಪ ಮೇಲಾಗಿರಬಹುದು. ಆದ ಮಾತ್ರಕ್ಕೇ ಏನು?" ಎಂದು ವಿಚಾರಮಾಡುತ್ತ ವಿಷಯಗಳ ಜಗ್ಗುವಿಕೆಯಿಂದ ಕೊಸರಿಕೊಂಡು ದೇವರ ಬೆಂಬಲವನ್ನು ಬಯಸಿ ಕಣ್ಣುಕಣ್ಣು ಬಿಡುವ ಭಕ್ತನ ಮನಸ್ಸೆಂಬ ನಿಷ್ಕಲ್ಮಷವಾದ ಕಬ್ಬಿಣವನ್ನು ಪರಮಾತ್ಮನೆಂಬ ಸೂಚಿಕಾಂತಶಿಲೆಯು ತಾನಾಗಿ ತನ್ನ ಕಡೆಗೆ ಎಳೆಯುವದು. ಪ್ರಾಣಿಗಳೆಲ್ಲ ವಿಷಯಾಸಕ್ತರಾಗಿ ದುರ್ಗತಿಗೆ ಹೋಗಲೆಂದು ಪರಮಾತ್ಮನ ಇಚ್ಛೆಯಿದ್ದೀತೆ? ಇದ್ದರೆ "**भक्तास्तेऽतीव मे प्रियाः**" ಎಂಬ ವಾಕ್ಯದಿಂದ ಭಕ್ತರು ನನ್ನ ಪ್ರಿಯರೆಂದು ಭಗವಂತನು ಏಕೆ ಹೇಳುತ್ತಿದ್ದನು? ಪರಮಾತ್ಮಸ್ವರೂಪವೆಂಬ ಆನಂದನಿಧಿಯ ಕಡೆಗೆ ಲಕ್ಷ್ಯವನ್ನು ಕೊಡದೆ ಹೊರಹೊರಗೆ ಹರಿದಾಡುತ್ತ ಗಂಡಕೀನದಿಯ ಮಳಲಿನಲ್ಲಿ ಚಿನ್ನವನ್ನು ಹುಡುಕುವಂಥ ಮೂರ್ಖರ ಮನಸ್ಸನ್ನು ಸಮಾಧಾನಗೊಳಿಸುವದಕ್ಕಾಗಿ ವಿವಿಧವಿಷಯಗಳನ್ನು ಸೃಷ್ಟಿಮಾಡಿರುವ ಅವ್ಯಕ್ತಸ್ವರೂಪನಾದ ಆಪರಮಾತ್ಮನು ಅಂತರ್ಮುಖರಾಗಿ ತನ್ನನ್ನೆ ಹುಡುಕುವವರಿಗಾಗಿ ತಾನು ನಾಮರೂಪಗಳನ್ನು ಹೊಂದಿ ಅವರಿಗೆ ಶುಭಾಗಮನವನ್ನು ಬಯಸುವನು. ಮಕ್ಕಳು ಬಂದು ಮೈಮೇಲೆ ಬಿದ್ದರೆ ಯಾರಿಗೆ ಬೇಡ? ಆದರೆ ಏನಾದರೊಂದನ್ನು ಬೇಡುತ್ತ ಕಾಡುತ್ತ ಬಂದರೆ ಬೇಸರವಾಗಬಹುದು. ಏನನ್ನೂ ಕೇಳದೆ ಪ್ರೇಮಾವೇಶದಿಂದ ಆಲಿಂಗನವನ್ನು ಮಾಡುವದಕ್ಕೆ ಬಂದರೆ ತಾಯಿಯು ಎರಡು ಕೈಗಳನ್ನೂ ಮುಂದಕ್ಕೆ ಚಾಚಿ ಮಗುವನ್ನು ಕರೆದುಕೊಳ್ಳುವದಿಲ್ಲವೆ? ಪರಮಾತ್ಮನು ನಮಗೆಲ್ಲ ತಾಯಿ ತಂದೆ. ಅವನೇ ನಮ್ಮೆಲ್ಲರನ್ನು ಉತ್ಪತ್ತಿಮಾಡಿರುವನು. ಅವನೇ ನಮ್ಮ ಆಗುಹೋಗುಗಳನ್ನೆಲ್ಲ ನೋಡಿಕೊಳ್ಳುವನು. ಅವನೇ ನಮಗೆ ಶ್ರೇಯಸ್ಕರವಾದುದೇನೆಂಬುದನ್ನು ತಿಳಿದು ಮಾಡುವನು. ಅವನು ನಮಗೆ ಮಾಡುವದೆಲ್ಲ ನಮ್ಮ ಹಿತಕ್ಕಾಗಿಯೆ. ನಮ್ಮನ್ನು ಒಂದು ಕಷ್ಟಕ್ಕೆ ಹಾಕಿ ಹಲ್ಲುಕಿರಿಯುವಂತೆ ಮಾಡಿ ಆವಿನೋದವನ್ನು ನೋಡಬೇಕೆಂದು ಅವನು ಎಂದಿಗೂ ಇಚ್ಛಿಸುವದಿಲ್ಲ. ನಾವು ನಮ್ಮ ಕ್ಷುದ್ರಬುದ್ಧಿಯಿಂದ ಏನೋ ಒಂದು ವಿಷ-

ಯುವನ್ನು ನಮಗೆ ಶ್ರೇಯಸ್ಕರವೆಂದು ನಿಶ್ಚಯಮಾಡಿಕೊಂಡು ಅದು ನಮ್ಮ ಮನಸ್ಸಿಗೆ ತಕ್ಕಂತೆ ಆಗದೆ ಹೋಗುತ್ತಲೆ ಅದಕ್ಕೆ ವಿಷಾದಪಡುವೆವು. ಭಕ್ತನು ಪ್ರಸಂಗ ಬಂದ ಹಾಗೆ ಮನಸ್ಸುಮಾಡಿಕೊಳ್ಳಬೇಕು. ಭಕ್ತನಿಗೆ ತನಗೆ ಹೀಗೇ ಆಗಬೇಕೆಂಬ ಮನಸ್ಸೆಂಬುದಿರಬಾರದು. ದೈವೇಚ್ಛೆಯೂ ತನ್ನ ಇಚ್ಛೆಯೂ ಒಂದೇ ಆಗಿರಬೇಕು. ನಮಗೆ ಇದು ಶ್ರೇಯಸ್ಕರವೆಂದು ನಿಶ್ಚಯಿಸುವ ಭಾರವನ್ನು ನಾವೇಕೆ ಹೊರಬೇಕು? ನಮ್ಮ ಬುದ್ಧಿ ಎಷ್ಟರದು? "ಊರಮುಂದೆ ಹೋಗುವ ಮಾರಿಯನ್ನು ಮನೆಹೊಕ್ಕು ಹೋಗು" ಎಂದ ಹಾಗೆ ಪೂರ್ವಾಪರವಿಚಾರಗಳನ್ನು ಮಾಡಿ ನಮ್ಮ ಯೋಗಕ್ಷೇಮವನ್ನು ನೋಡುವದಕ್ಕೆ ದೇವರಿರುವಾಗ ಸುಮ್ಮಸುಮ್ಮನೆ ಇಲ್ಲದ ಭಾರವನ್ನು ಹೊತ್ತು ಕೊಂಡು ನಾವೇಕೆ ತಿಣುಕುತ್ತಾ ಹೆಣಗಬೇಕು? ಆದ ಅಡಿಗೆಯನ್ನು ಉಣ್ಣು-ವದಕ್ಕೆ ಹೋಗುವದು ಸುಖವೊ? ಪದಾರ್ಥಗಳನ್ನು ಒದಗಿಸಿಕೊಂಡು ಅಡಿಗೆ-ಮಾಡಿಕೊಂಡು ಉಣ್ಣುವದು ಸುಖವೊ? ಭಕ್ತರು ತಮ್ಮ ಯೋಚನೆಯನ್ನು ತಾವು ಹಚ್ಚಿಕೊಳ್ಳುವದಿಲ್ಲ. ಎಲ್ಲ ಭಾರವನ್ನೂ ಪರಮಾತ್ಮನಿಗೆ ವಹಿಸಿ-ಬಿಡುವರು. ಹೀಗೆ ನೀನೇಗತಿಯೆಂದು ಪ್ರೇಮದಿಂದ ಶರಣುಬರುತ್ತಲೆ ಭಗವಂತನು ಅಂಥ ಭಕ್ತನನ್ನು ತಾನೂ ತನ್ನ ಕಡೆಗೆ ಕರೆಯುವನು. ತಾಯಿ ಕರೆದ ಹಾಗೆಲ್ಲ ಮಕ್ಕಳು ಮತ್ತಷ್ಟು ಬೇಗಬೇಗ ಮುಂದೆ ಸಾಗುವಂತೆ ಭಕ್ತರು ಭಗವಂತನ ಕಡೆಗೆ ಸಾಗುವರು. ಈ ಸ್ಥಿತಿಗೆ ಶ್ರೀಶಂಕರಾಚಾ-ರ್ಯರು ಸೂಜಿಕಲ್ಲನ್ನು ಸೂಜಿಯೂ ಪ್ರಾಣಕಾಂತನನ್ನು ಸಾಧ್ವಿಯೂ ಮರವನ್ನು ಬಳ್ಳಿಯೂ ಅವಲಂಬಿಸುವ ಎರಡನೇ ಸ್ಥಿತಿಯೆಂದು ಹೇಳಿರುವರು. ಈಸ್ಥಿತಿಗೆ ಸ್ವಾಮಿವಿವೇಕಾನಂದರ "a search continuing ...in love" ಎಂದರೆ ಪ್ರೇಮದಲ್ಲಿ ಸಾಗುವದೆಂಬ ಲಕ್ಷಣವು ಅನ್ವಯಿ-ಸುವದು. ಸೂರ್ಯೋದಯಕ್ಕೆ ಅರುಣೋದಯವು ಹೇಗೋ ಹಾಗೆ ಭಕ್ತಿಗೆ ಇದು ಪ್ರಥಮಸೂಚನೆ. ಹೇಗೆಂದರೆ ಪರಮಾತ್ಮವಿಷಯಕವಾದ ಪ್ರೇಮ-ವೆಂಬುದೊಂದು ಮಾತ್ರ ಮುಂದೆ ಸಾಗೀತೇ ಹೊರತು ಉಳಿದ ವಿಷಯಾಂತರ ಪ್ರೇಮವಾವುದೂ ಮುಂದೆ ಸಾಗಲಾರದು. ಏಕೆಂದರೆ ಉದಾಹರಣೆಗಾಗಿ ಹೆಂಡತಿಮಕ್ಕಳ ಮೇಲಣ ಪ್ರೇಮವನ್ನು ತೆಗೆದುಕೊಳ್ಳೋಣ. ನಮಗೆ

ಹೆಂಡತಿಮಕ್ಕಳಿಂದ ಸುಖವಾದೀತೆಂದು ಅವರನ್ನು ನಾವು ಆಶ್ರಯಿಸುವೆವು. ತಮಗೆ ನಮ್ಮಿಂದ ಸುಖವಾದೀತೆಂದು ಅವರು ನಮ್ಮನ್ನಾಶ್ರಯಿಸುವರು. ಇವರಿಬ್ಬರ ಪರಸ್ಪರಪ್ರೇಮವನ್ನು ನೆನಸಿಕೊಂಡರೆ ಕಥಾಶತಕದಲ್ಲಿ ಸಗಣಿ-ತಕ್ಕಡಿಗ ಮತ್ತು ಮರಳುತಕ್ಕಡಿಗನೆಂಬ ಇಬ್ಬರ ಪರಸ್ಪರಪ್ರೇಮದ ನೆನಪು-ಬರುವದು. ಬೇರೆಬೇರೆ ಊರಿನವರಾದ ಆ ಇಬ್ಬರು ಪ್ರಯಾಣಿಕರಾಗಿ ಹೊರಟು ದೈವಯೋಗದಿಂದ ಒಂದೂರಿನ ಧರ್ಮಸಾಲೆಯಲ್ಲಿ ಕಲೆತರು. ಸಗಣಿಯು ತಕ್ಕಡಿಗನಲ್ಲಿ ಸಗಣಿಯದೊಂದು ಗಂಟಿತ್ತು. ಮರಳು ತಕ್ಕಡಿಗ-ನಲ್ಲಿ ಮರಳಿನದೊಂದು ಗಂಟಿತ್ತು. ಸಗಣಿಯ ಗಂಟನ್ನು ಅನ್ನದ ಗಂಟೆಂದು ಮರಳುತಕ್ಕಡಿಗನೂ ಮರಳಿನ ಗಂಟನ್ನು ಅಕ್ಕಿಯ ಗಂಟೆಂದು ಸಗಣಿತಕ್ಕಡಿ-ಗನೂ ಭಾವಿಸಿಕೊಂಡರು. ತನ್ನ ಸಗಣಿಯನ್ನು ಕೊಟ್ಟು ಆಹಾರಪದಾರ್ಥ-ವಾದ ಅಕ್ಕಿಯನ್ನು ಎತ್ತಿಹಾಕಬೇಕೆಂದು ಸಗಣಿತಕ್ಕಡಿಗನೂ ತನ್ನ ಮರಲನ್ನು ಕೊಟ್ಟು ಅನ್ನವನ್ನು ಪಡೆಯಬೇಕೆಂದು ಮರಳುತಕ್ಕಡಿಗನೂ ಯೋಚನೆ-ಮಾಡಿ ಇಬ್ಬರೂ ತಮ್ಮತಮ್ಮ ಗಂಟನ್ನು ವಿನಿಮಯಮಾಡಿಕೊಂಡು ತಮ್ಮ ಗುಟ್ಟು ಹೊರಗೆ ಬಿದ್ದೀತೆಂದು ಒಡನೆ ಆಸ್ಥಳವನ್ನು ಬಿಟ್ಟು ಬೇರೆ ಕಡೆಗೆ ಹೋಗಿ ತಾವು ತಾವು ಹೊಸದಾಗಿ ಸಂಪಾದನೆಮಾಡಿದ ಗಂಟನ್ನು ಬಿಚ್ಚಿ ನೋಡಿ ನಿರಾಶರಾಗಿ ನಿಟ್ಟುಸಿರುಬಿಟ್ಟರು. ಹೀಗೆ ನಮ್ಮಲ್ಲಿ ಸುಖವಿಲ್ಲ-ವೆಂದೂ ಹೆಂಡತಿಮಕ್ಕಳಿಂದ ನಮಗೆ ಸುಖವಾಗುವದೆಂದೂ ನಾವು ತಿಳಿಯು-ತ್ತೇವೆ. ಆಹೆಂಡತಿಮಕ್ಕಳು ತಮ್ಮಲ್ಲಿ ಸುಖವಿಲ್ಲವೆಂದೂ ತಮಗೆ ನಮ್ಮಿಂದ ಸುಖವಾಗುವದೆಂದೂ ಭಾವಿಸುತ್ತಾರೆ. ಇಬ್ಬರೂ ತಿರುಕರೆ. ಹೇಗೆ ಹೊಟ್ಟೆ-ತುಂಬಬೇಕು? ಆದುದರಿಂದಲೆ ಹೆಂಡತಿ ಮತ್ತು ಮಕ್ಕಳ ಮೇಲಣ ಪ್ರೇಮವು ನೆಲೆಯಾಗಿರುವದಿಲ್ಲ. ಇವತ್ತು ಇರಬಹುದು; ನಾಳೆ ಹೋಗಬಹುದು. ನಾಡಿದ್ದು ಮತ್ತೆ ಬರಬಹುದು; ಆಚೆಯ ನಾಡಿದ್ದು ತಿರುಗಿ ಹಾರಿಹೋಗ-ಬಹುದು. ಸಂಸಾರದಲ್ಲಿ ಒಬ್ಬರ ಮೇಲೆ ಒಬ್ಬರು ಇಡುವ ಪ್ರೇಮವು ಬಹು ಕ್ಷಣಿಕವಾದುದು. ಏಕೆಂದರೆ ಒಬ್ಬರಿಂದೊಬ್ಬರು ಸುಖವನ್ನು ಬಯಸುವರು; ಒಬ್ಬರಲ್ಲಾದರೂ ಸುಖವಿರುವದಿಲ್ಲ. ಆಪ್ರೇಮವಿನ್ನು ಹೇಗೆ ಬೆಳೆಯಬೇಕು? ಕ್ಷಣಕ್ಷಣಕ್ಕೂ ನಿರಾಶರಾಗಿ ನಿಟ್ಟುಸಿರುಬಿಡುತ್ತಿರುವದೆ ಅವರ ಹಣೆಯ ಬರಹ.

ಪರಮಾತ್ಮವಿಷಯಕಪ್ರೇಮವು ಹಾಗಲ್ಲ. ಪರಮಾತ್ಮನು ಸುಖಸ್ವರೂಪನು. ಆವನಿಂದ ಸುಖವು ಸಿಕ್ಕಿಯೇ ಸಿಕ್ಕುವದರಿಂದ ಅವನ ಮೇಲಣ ಪ್ರೇಮವು ಬೆಳೆಯುವದು. ಹಾಗಾದರೆ ಶ್ರವಣಕೀರ್ತನಾದಿಗಳಿಂದ ಮುಂದೆ ಪ್ರೇಮವು ಬೆಳೆಯುವದೆಂದ ಮೇಲೆ ಆಕಾಯಿಕ ಮತ್ತು ವಾಚನಿಕ ತಪಸ್ಸಿನಿಂದಲೆ ನಿಜ-ಸುಖವು ಸಿಕ್ಕಿರಬೇಕಷ್ಟೆ? ಎಂದರೆ ಸಂಪೂರ್ಣವಾಗಿ ಇಲ್ಲವೇಇಲ್ಲವೆಂದು ಹೇಳಲಾಗುವದಿಲ್ಲ. ಹಸಿವೆಯಿಂದ ಪೀಡಿತನಾದ ಬಡವನೊಬ್ಬನು ಒಬ್ಬ ಶ್ರೀಮಂತನ ಮನೆಗೆ ಊಟಕ್ಕೆ ಬಂದಿರುವನೆಂದು ತಿಳಿಯಿರಿ. ಅವನು ಶ್ರೀಮಂತನ ಮನೆಗೆ ಬಂದಿರುವದರಿಂದ ತನಗೆ ಅನ್ನವು ದೊರೆಯುವದೊ ಇಲ್ಲವೊ ಎಂದು ಸಂಶಯಪಡುವ ಹಾಗಂತು ಇಲ್ಲ. ಇಷ್ಟೇ ಅಲ್ಲದೆ ಒಳಗೆ ಸಿದ್ಧವಾಗುತ್ತಿರುವ ವಿವಿಧಪಕ್ವಾನ್ನಗಳ ಸುವಾಸನೆಯು ಮೂಗಿಗೆ ಬಡಿದರೆ ಆಹಸಿವೆಯ ಸಂಕಟವು ಸ್ವಲ್ಪ ಕಡಮೆಯಾಗುವದಿಲ್ಲವೆ? ಪರಮಾತ್ಮನು ಇಂದ್ರಿಯಗಳನ್ನೆಲ್ಲ ಸೃಷ್ಟಿಮಾಡಿ ಮನುಷ್ಯದೇಹದಲ್ಲಿ ಅವುಗಳಿಗೆ ಒಂದೊಂದು ಸ್ಥಳವನ್ನು ಗೊತ್ತುಮಾಡಿಕೊಟ್ಟನು. ಆಮೇಲೆ ಹಸಿವೆಬಾಯಾರಿಕೆಗಳನ್ನು ಸೃಷ್ಟಿಮಾಡಿದನು. ಅವು "ನಮಗೆಲ್ಲಿ ಸ್ಥಳ?" ಎಂದು ಕೇಳಿದವು. ಆಗ ಭಗವಂತನು "ನೀವು ಎಲ್ಲ ಇಂದ್ರಿಯಗಳಲ್ಲಿಯೂ ವ್ಯಾಪಿಸಿಕೊಂಡಿರಿ" ಎಂದು ಹೇಳಿದನೆಂದು ಐತರೇಯಶ್ರುತಿ ಇದೆ. ಆದುದರಿಂದಲೆ ಯಾರಾದರೂ ಊಟಕ್ಕೆ ಕರೆದರೇನೆ ಶ್ರವಣೇಂದ್ರಿಯದ ಮೂಲಕ ಆಗುವಷ್ಟು ತೃಪ್ತಿ-ಯಾಗಿಯೇ ಆಗುತ್ತದೆ. ಹಾಗೆಯೇ ಶ್ರೀಮಂತನ ಮನೆಗೆ ಬಂದ ಬಡವ-ನಿಗೂ ಘ್ರಾಣೇಂದ್ರಿಯದ ಮೂಲಕ ಆಗಬಹುದಾದಷ್ಟು ತೃಪ್ತಿಯಾಗಿಯೇ ಇರುವದು. ಶ್ರವಣಕೀರ್ತನಾದಿಗಳನ್ನು ಮಾಡಿದವನಿಗೂ ಈಪರಿಣಾಮ-ದಷ್ಟು ತೃಪ್ತಿಯಾಗಿದ್ದೇ ತೀರಬೇಕು. ಇಲ್ಲದಿದ್ದರೆ ಇನ್ನು ಮುಂದೆ ಸಾಗು-ವದಕ್ಕೆ ಅವನಿಗೆ ಪ್ರವೃತ್ತಿಯೇ ಇರುವದಿಲ್ಲ. ಆದುದರಿಂದ ಮನಸ್ಸು ಹೀಗೆ ಪರಮಾತ್ಮವಿಚಾರದಲ್ಲಿ ಮುಂದೆ ಸಾಗಿದುದೇ ಒಂದು ದೊಡ್ಡ ಶುಭಸೂಚನೆ. ಈಸ್ಥಿತಿಯೊದಗುವ ಕಾಲಕ್ಕೆ ಭಕ್ತನು ವಿಗ್ರಹಗಳನ್ನೂ ದೇವಾಲಯಗಳನ್ನೂ ಪೂಜೋಪಕರಣಗಳನ್ನೂ ಇದ್ದಲ್ಲಿಯೇ ಬಿಟ್ಟು ಕೊಡವಿಕೊಂಡು ಏಳುವನು. ಏಕೆಂದರೆ ಅವುಗಳೆಲ್ಲ ಎಳೇಗಿಡಕ್ಕೆ ಬೇಲಿಯ ಹಾಗೆ ಪ್ರಾರಂಭಸ್ಥಿತಿಗೆ ಅಗತ್ಯ-

ವಾದವುಗಳೆಂದು ಅವನು ಮನಗಾಣುವನು. ಗ್ರಂಥಕಾಲಕ್ಷೇಪವು ಕೂಡ ಅವನಿಗೆ ಎಳೇ ಗಿಡವನ್ನು ಬೆಳೆಸುವ ಕುಂಡದಂತೆ ತೋರುವದು. ಸ್ವಲ್ಪ ಬೇರುಬಿಟ್ಟುಕೊಂಡು ಬಲಿತ ಮೇಲೆ ಬೇಲಿಯನ್ನು ಉಪೇಕ್ಷೆಮಾಡುವಂತೆ ಮತ್ತು ಗಿಡವನ್ನು ಕುಂಡದಿಂದ ತೆಗೆದು ಬಯಲಲ್ಲಿಡುವಂತೆ ಭಕ್ತನು ಹೊರ-ಬಿದ್ದು ತಾನೇ ತಾನಾಗುವನು. ವೈದಿಕಧರ್ಮಪಂಥದವರನ್ನು ಮೂರ್ತಿ-ಪೂಜಕರೆಂದು ಹಿಂದುಮುಂದು ನೋಡದೆ ಆಕ್ಷೇಪಿಸುವವರು ಈಸಂಧಿಕಾಲದ ಭಕ್ತನ ಮನಸ್ಸ್ಥಿತಿಯ ಕಡೆಗೆ ಲಕ್ಷ್ಯವನ್ನು ಕೊಟ್ಟರೆ ಅದರ ಯಥಾರ್ಥವು ತಿಳಿಯುವದು. ಶ್ರವಣಕೀರ್ತನಾದಿಗಳನ್ನು ನಡೆಸುವಾಗ ಭಕ್ತನು ಅದಕ್ಕೆ ಸಾಧಕವಾದ ವಿಷಯಗಳನ್ನು ಇಟ್ಟುಕೊಂಡಿದ್ದನಷ್ಟೆ. ಈಗ ಅವನಿಗೆ ಏನೇನೂ ಬೇಕಾಗುವದಿಲ್ಲ. ತಾನು ಮತ್ತು ತನ್ನ ದೇವರು ಹೊರತು ಬೇರೆ ಯಾವ ವಿಷಯವೂ ಅವನಿಗೆ ಸೇರುವದಿಲ್ಲ. ಬಾಹ್ಯಪೂಜೆಯ ಅಟ್ಟ-ಹಾಸಗಳು ಅವನಿಗೆ ರುಚಿಸುವದಿಲ್ಲ.

"गभीरे कासारे विशति विजने घोरविपिने
विशाले शैले च भ्रमति कुसुमार्थं जडमतिः ।
समर्प्यैकं चेतः सरसिजमुमानाथ भव ते
सुखेनैव स्थातुं जन इह न जानाति किमहो ॥"

ಎಂದರೆ "ಮೂಢರು ಆಳವಾದ ಸರಸ್ಸುಗಳಲ್ಲಿ, ನಿರ್ಜನವಾದ ಘೋರಾಟವಿ-ಗಳಲ್ಲಿ, ವಿಸ್ತಾರವಾದ ಪರ್ವತಗಳಲ್ಲಿ ಹೂಗಳಿಗಾಗಿ ಅಲೆಯುವರಲ್ಲ! ಹೆ, ಪಾರ್ವತೀವಲ್ಲಭ, ಅನಾಯಾಸದಿಂದ ಮನಸ್ಸೆಂಬ ಒಂದು ಕಮಲಪುಷ್ಪವನ್ನು ನಿನಗೆ ಅರ್ಪಣೆಮಾಡುವದಕ್ಕೆ ತಿಳಿಯದೆ ಇರುವರಲ್ಲ!!" ಎಂದು ಶ್ರೀಶಂಕರಾ-ಚಾರ್ಯರು ಹೇಳಿರುವ ಅರ್ಥವು ಅವನ ಮನಸ್ಸಿನಲ್ಲಿ ತನಗೆ ತಾನೇ ಸ್ಫೂರ್ತಿಯಾಗುವದು. ಈಸ್ಥಿತಿಬಂದಾಗ ಭಕ್ತಿಯೆಂಬ ವೃಕ್ಷವು ಪುಷ್ಪಿತವಾ-ಗುವದು. ಶ್ರದ್ಧಾಪೂರ್ವಕವಾಗಿ ಶ್ರವಣಮನನರೂಪವಾದ ಅಥವಾ ಕಾಯಿ-

ಕವಾಚನಿಕತಪ್ರೋರೂಪವಾದ ಗೌಣೀಭಕ್ತಿಯನ್ನು ಮಾಡಿದವನ ಮನಸ್ಸಿನಲ್ಲಿ "ಹೆ, ದೇವ, ಭಕ್ತವತ್ಸಲ, ದೀನದಯಾಳು, ಜಗನ್ನಾಟಕಸೂತ್ರಧಾರಿ, ಪತಿತ-ಪಾವನಾ, ಕೃಪಾನಿಧಿ, ಶ್ಯಾಮಸುಂದರಾ, ರಘುಕುಲಲಲಾಮ, ಮುರಲೀಧರ, ಕೈಲಾಸವಾಸಿ, ನೀನು ನನ್ನನ್ನು ಎಂದು ನಿನ್ನ ಸಮೀಪಕ್ಕೆ ಕರೆದುಕೊಳ್ಳುವೆ? ಎಂದು ಕೃಪಾಕಟಾಕ್ಷವನ್ನು ನನ್ನ ಮೇಲೆ ಪ್ರಸರಿಸುವೆ? ಮೃದುವಚನದಿಂದ ಎಂದು ನನ್ನನ್ನು ಸಂತಯಿಸುವೆ? ಆಲಿಂಗನ ಮಾಡಿ ಎಂದು ನನ್ನನ್ನು ಸಂತೋಷಗೊಳಿಸುವೆ? ಎಂದು ನನ್ನ ಕಣ್ಣುಗಳಿಂದ ಆನಂದಾಶ್ರುವನ್ನು ಸುರಿಸುವೆ? ಎಂದು ದೇಹವನ್ನು ರೋಮಾಂಚಗಳಿಂದ ಅಲಂಕಾರಗೊಳಿಸುವೆ? ಎಂದು ಸಂತೋಷಾತಿಶಯದಿಂದ ನನ್ನ ಮೈಯಲ್ಲಿ ಬೆವರು ಹುಟ್ಟುವಂತೆ ಮಾಡುವೆ? ಎಂದು ಸುಖಾತಿಶಯದಿಂದ ನಿನ್ನನ್ನು ಸ್ತೋತ್ರಮಾಡುವ ಕಂಠ-ವನ್ನು ಗದ್ಗದವಾಗಿಮಾಡುವೆ? ಎಂದು ಹರ್ಷವಿಶೇಷದಿಂದ ನನ್ನ ಶರೀರವು ಕಂಪಿಸುವಂತೆ ಮಾಡುವೆ? ಎಂದು ನನ್ನ ತಲೆಯನ್ನು ನಿನ್ನ ಪಾದದ ಮೇಲೆ ಇರಿಸಿಕೊಳ್ಳುವೆ? ಎಂದು ನಿನ್ನ ಭಕ್ತಿಪ್ರವಾಹದಲ್ಲಿ ನನ್ನನ್ನು ಮುಳುಗಿಸುವೆ? ಎಂದು ನೀನು ನನ್ನ ಕಣ್ಣುಗಳಲ್ಲಿ ತುಂಬಿರುವೆ? ಎಂದು ನೀನು ನನ್ನ ನಾಲಿಗೆಯಲ್ಲಿ ನಲಿದಾಡುವೆ? ಎಂದು ನೀನು ನನ್ನ ಮನಸ್ಸಿನಲ್ಲಿ ನೆಲಸುವೆ? ಅಯ್ಯೋ, ನಾನು ಎಂಥ ಪಾಪಿಯು! ಎಷ್ಟೋ ದುಷ್ಕರ್ಮಗಳನ್ನು ಮಾಡಿದೆ-ನಲ್ಲ! ಭಗವಂತನು ನನ್ನನ್ನು ಹೇಗೆ ಕ್ಷಮಿಸುವನು! ಹೆ, ದೇವ, ನೀನು ಕರುಣಾಸಾಗರನಲ್ಲವೆ? ಈ ಪಾಪಿಯು ಬಳಲುತ್ತಿರುವದು ಇನ್ನೂ ನಿನ್ನ ದಿವ್ಯಚಿತ್ತಕ್ಕೆ ವಿದಿತವಾಗಲಿಲ್ಲವೆ? ನಾನು ಇನ್ನೂ ಎಷ್ಟುದಿವಸ ಹೀಗೆ ಕಷ್ಟ-ಪಡಲಿ? ನೀನುಪೇಕ್ಷೆಮಾಡಿದರೆ ನಾನು ಹೇಗೆ ಬಾಳಬೇಕು? ಸರ್ವಜ್ಞ-ನಾದ ನಿನಗೆ ನನ್ನ ವಿಚಾರವೇಕೆ ತಿಳಿಯದು? ನಾನು ಪಾಪಿಯಾದರೆ ತಾನೆ ಏನು? ಮಕ್ಕಳು ಕೆಟ್ಟವರಾದರೆ ತಾಯಿಯು ಅವರನ್ನು ಒದ್ದು ಓಡಿಸುವಳೆ? ಕರುಣಾಳುವಾದ ನಿನಗೆ ಈ ಕಠಿನತೆ ಇರಬಹುದೆ? ನಿನ್ನ ಸರ್ವಜ್ಞತೆಗೆ ನನ್ನ ಪಾಪಗಳನ್ನೆಣಿಸುವದೇ ಸಾರ್ಥಕವೆ? ಹಾಗಾದರೆ ಪಾಪಿಯಲ್ಲದವರಾರು? ದೀನನಾದ ನನ್ನ ಮೇಲೆ ದಯಮಾಡು." ಎಂಬ ಹಂಬಲವೇ ಬರುತ್ತಿರುವದು. ಪರಮಾತ್ಮವಿಚಾರವಿಲ್ಲದೆ ಅವನಿಗೆ ಕುಳಿತರೆ ಸಮಾಧಾನವಿಲ್ಲ; ನಿಂತರೆ ಸಮಾ-

ಧಾನವಿಲ್ಲ; ಮಲಗಿದರೆ ಸಮಾಧಾನವಿಲ್ಲ; ಏನು ಮಾಡಿದರೂ ಸಮಾಧಾನವಿಲ್ಲ; ಅವನಿಗೆ ಊಟಬೇಡ; ಉಡಿಗೆ ಬೇಡ; ನಿದ್ರೆ ಬೇಡ; ಉಪಚಾರ ಬೇಡ; ಮಾತು ಬೇಡ; ಕಥೆ ಬೇಡ. ಹೀಗಾಗುವ ಹೊತ್ತಿಗೆ ಅವನಿಗೆ ಅಷ್ಟಿಷ್ಟು ಚಿತ್ತಸ್ಥೈರ್ಯವು ಬಂದಿರುವದರಿಂದ ಅಲ್ಲಿಂದ ಮುಂದೆ ಅವನು ನಿಧಿಧ್ಯಾಸ-ರೂಪವಾದ ಮಾನಸಿಕ ತಪಸ್ಸಿಗೆ ಪ್ರಾರಂಭಿಸಿ

"मय्येव मन आधत्स्व मयि बुद्धिं निवेशय ।
निवासिष्यासि मय्येव अत ऊर्ध्वं न संशयः ॥"

ಎಂದರೆ "ನನ್ನ ಸಗುಣಮೂರ್ತಿಯಲ್ಲಿ ಮನಸ್ಸಿಡು; ನಾನೇ ಪರಮಪ್ರಾಪ್ಯ-ನೆಂದು ನಿಶ್ಚಯುವನ್ನು ಮಾಡು; ಹೀಗೆ ಮಾಡಿದರೆ ನೀನು ನನ್ನಲ್ಲಿಯೇ ವಾಸ-ಮಾಡುವೆ. ಇದಕ್ಕೆ ಸಂಶಯುವಿಲ್ಲ" ಎಂದು ಗೀತೆಯಲ್ಲಿ ಹೇಳಿರುವಂತೆ ತನ್ನ ಮನಸ್ಸಿನ ವೃತ್ತಿಯುನ್ನು ತನ್ನ ಉಪಾಸ್ಯವಾದ ಸಗುಣಮೂರ್ತಿಯ ಆಕಾರವಾಗಿ ಮಾಡಿಕೊಂಡು ಉಪಾಸನೆಯುನ್ನು ಮಾಡುವನು. ಉಪಾಸ-ಕರ ಉದ್ಧಾರಾರ್ಥವಾಗಿ ಪರಮಾತ್ಮನು ತೆಗೆದುಕೊಂಡ ನಾಮರೂಪಗಳೆರಡನ್ನೂ ಅವನು ಗಟ್ಟಿಯಾಗಿ ಹಿಡಿದುಕೊಳ್ಳುವನು. ಅವನಿಗೆ ಕುಳಿತಿರುವಾಗಲೂ ನಾಮಸ್ಮರಣೆ, ನಿಂತಿರುವಾಗಲೂ ನಾಮಸ್ಮರಣೆ, ಮಲಗಿರುವಾಗಲೂ, ಓಡಾ-ಡುವಾಗಲೂ, ಉಣ್ಣುವಾಗಲೂ, ತಿನ್ನುವಾಗಲೂ, ಕುಡಿಯುವಾಗಲೂ, ಜಾಗ್ರತಿಯುಲ್ಲಿಯೂ, ಸ್ವಪ್ನದಲ್ಲಿಯೂ, ಹೆಚ್ಚಾಗಿ ಹೇಳುವದೇನು, ಪ್ರತಿ-ಯೊಂದುಸಿರಿನಲ್ಲಿಯೂ ನಾಮಸ್ಮರಣೆಯೆ. ಅದರ ಜೊತೆಗೆ ತದರ್ಥಭಾವನೆ. ಏನು ನೋಡಿದರೂ, ಏನು ಕೇಳಿದರೂ, ಏನು ಮುಟ್ಟಿದರೂ, ಏನು ಮೂಸಿ-ದರೂ, ಏನು ಸವಿದರೂ ಅವನಿಗೆ ಉಪಾಸ್ಯನಾಮಸ್ಮರಣೆ, ಉಪಾಸ್ಯರೂಪ-ಚಿಂತನೆ. ಹೀಗಾಗಿ ಅವನ ಭಾಗಕ್ಕೆ ಪ್ರಪಂಚವೆಲ್ಲ ಉಪಾಸ್ಯದೇವತಾ-ಸ್ವರೂಪವಾಗಿ ಪರಿವರ್ತಿತವಾಗಿ ಕಾಣುವದು. ಅವನಿಗೆ ಅನ್ನ, ನೀರು, ಹೆಂಡತಿ, ಮಕ್ಕಳು, ಮನೆ, ಮಠ, ಬಂಧು, ಬಳಗ ಮೊದಲಾದ ಯಾವ ಕಲ್ಪನೆಯೂ ಇಲ್ಲ. ಅವನ ಮನಸ್ಸೆಲ್ಲ ಇತರ ಎಲ್ಲ ಕಲ್ಪನೆಗಳನ್ನೂ ಹೊರಕ್ಕೆ

ತಳ್ಳಿ ಪರಮಾತ್ಮಕಲ್ಪನೆಯೊಂದನ್ನು ಒಳಕ್ಕೆ ಸೇರಿಸಿಕೊಂಡಿರುವದು. ಅವನಿಗೇ-ನಾದರೂ ಕಾರಣಾಂತರದಿಂದ ವಿಷಯವ್ಯಾಪಾರಗಳ ಗಡಿಬಿಡಿಯಲ್ಲಿ ತೊಡಗಿರ-ಬೇಕಾದ ನಿರ್ಬಂಧವೊದಗಿದರೆ ಅದು ಅವನಿಗೆ ಬಹು ಅಸಹ್ಯವಾಗುವದು. ನಾಮದಲ್ಲಿ ಅಭಿರುಚಿಯುತ್ಪನ್ನವಾಯಿತೆಂಬುದಕ್ಕೆ ಈ ಮನಸ್ಥಿತಿಯೇ ನಿದ-ರ್ಶನ. ಹೀಗಾಗಿ

"हरेर्नामैव नामैव नामैव मम जीवनं"

ಎಂದು ವಿದುರನು ಹೇಳಿರುವಂತೆ ಭಕ್ತನು ಪರಮಾತ್ಮನ ನಾಮವನ್ನು ತನ್ನ ಸರ್ವಸ್ವವಾಗಿ ಭಾವಿಸುವನು. ಲೋಕದಲ್ಲಿ ಒಂದು ವಸ್ತುವಿನ ಹೆಸರನ್ನು ಹೇಳುತ್ತಲೆ ಆವಸ್ತುವಿನ ರೂಪವು ತನಗೆ ತಾನೇ ಸ್ಫೂರ್ತಿಯಾಗುವದು. ರೂಪವನ್ನು ಬಿಟ್ಟು ನಾಮವೊಂದೇ ಎಲ್ಲಿಯೂ ಇರುವದಿಲ್ಲ. ಆದುದರಿಂದ ಲೋಕಾನುಗ್ರಹಪರಾಯಣರಾದ ಸಾಧುಸತ್ಪುರುಷರೆಲ್ಲರೂ ನಾಮಸ್ಮರಣೆಗೆ ಹೆಚ್ಚು ಮಹತ್ತ್ವವನ್ನು ಕೊಟ್ಟಿರುವರು. "ಸಂಕಟಬಂದಾಗ ವೆಂಕಟರಮಣ" ಎಂಬಂತೆ ಕಷ್ಟಕಾಲದಲ್ಲಿ ಸ್ವಭಾವವಾಗಿ ದೇವರ ನೆನಪು ಬರುವದುಂಟು. ಏಕೆಂದರೆ ಸಾಮಾನ್ಯವಾಗಿ ನಮಗೆ ಯಾವಾಗಲೂ ಪ್ರಾಪಂಚಿಕವಿಷಯಗಳ ಕೊರತೆಯೇ ತೋರುತ್ತಿರುತ್ತದೆ. ಅದನ್ನು ಪೂರ್ಣಮಾಡಿಕೊಳ್ಳಬೇಕೆಂದೇ ನಾವು ಬಯಸುತ್ತಿರುತ್ತೇವೆ. ಇದು ಸಾಗುತ್ತಿರುವವರೆಗೂ ನಮಗೆ ದೇವರ ಬಯಕೆ ಹುಟ್ಟುವದಿಲ್ಲ. ನಮ್ಮ ಪ್ರಾಪಂಚಿಕಸುಖದ ಬಯಕೆಗಳು ಪೂರ್ಣ-ವಾಗದೆ ನಮಗೆ ಅನೇಕಬಗೆಯಿಂದ ಘಾಸಿಯಾದಾಗ ನಾವು ಪ್ರಾಪಂಚಿಕ ವಿಷಯಗಳಿಗಿಂತ ಹೆಚ್ಚಿನದೊಂದರ ಆಶ್ರಯವನ್ನು ಬಯಸುವೆವು. ಆಗ ನಮ್ಮ ಮನಸ್ಸು ನಿಜವಾಗಿ ದೇವರ ಕಡೆಗೆ ಹರಿಯುವದು. ಆದುದರಿಂದ ಪರಮಾತ್ಮನ ಸ್ಮರಣೆಯನ್ನು ತಂದುಕೊಡುವ ಅಂಥ ಸಂಕಟಸಮಯವೇ ನನಗೆ ಚಿರವಾಗಿರಲೆಂದು ಕುಂತೀದೇವಿಯು

"विपदस्संतु नश्शश्वद्यासु संकीर्त्यते हरिः"

ಎಂದು ಬಯಸಿರುವಳು. ಹೀಗೆ ಭಕ್ತರು ನಾಮಸ್ಮರಣೆಯೊಂದು ಸಿಕ್ಕುವ

ಸಂಭವವನ್ನು ಕಂಡರೆ ಅದಕ್ಕಾಗಿ ಎಂಥೆಂಥ ಕಷ್ಟಗಳಿಗೆ ತಲೆಗೊಡುವದಕ್ಕೂ ಹಿಂದೆಗೆಯುವದಿಲ್ಲ. ನಮ್ಮ ಪೂರ್ವಿಕರು ಪರಮಾತ್ಮನ ನಾಮವು ಆಗಾಗ ಕಾರಣಾಂತರಗಳಿಂದ ಸ್ಮರಣೆಗೆ ಬರುತ್ತಿರಲೆಂದೇ ಮಕ್ಕಳಿಗೆ ದೇವರ ಹೆಸರನ್ನಿಡುವ ಪದ್ಧತಿಯನ್ನು ಮಾಡಿರಬಹುದು. ಸಾಯುವ ಮಗನನ್ನು ನಾರಗನೆಂದು ಕರೆದ ಮಾತ್ರದಿಂದ ನಾರಾಯಣಸ್ಮರಣೆಯಾದಂತಾಗಿ ಅಜಮಿಳನೆಂಬುವನಿಗೆ ಮುಕ್ತಿಯಾಯಿತೆಂದು ಪೌರಾಣಿಕಕಥೆ ಇರುವದು.

"अंतकाले च मामेव स्मरन्मुक्त्वा कलेबरम् ।
यः प्रयाति स मद्भावं याति नास्त्यत्र संशयः ॥"

ಎಂಬ ಗೀತೋಕ್ತಿಯಲ್ಲಿ "ಮರಣಕಾಲದಲ್ಲಿ ಕೂಡ ಯಾರು ನನ್ನನ್ನೇ ಸ್ಮರಿಸುತ್ತ ದೇಹವನ್ನು ಬಿಟ್ಟು ಹೋಗುತ್ತಾರೊ ಅವರು ಮೋಕ್ಷವನ್ನು ಪಡೆಯುತ್ತಾರೆ. ಇದಕ್ಕೆ ಸಂಶಯವಿಲ್ಲ" ಎಂದು ಭಗವಂತನು ಹೇಳಿರುವನು. ಮರಣಕಾಲದಲ್ಲಿ ಸಮಸ್ತ ಇಂದ್ರಿಯಗಳಿಗೂ ದೇಹಕ್ಕೂ ವ್ಯಥೆಯುಂಟಾಗುವದರಿಂದ ಆಗ ಮನಸ್ಸು ದುಃಖಪರವಶವಾಗಿರುವದಲ್ಲ! ಎಂದರೆ ಸ್ತ್ರೀಯರಿಗೆ ಪ್ರಸವವೇದನೆಯು ಮರಣಸಂಕಟದಷ್ಟು ವ್ಯಥೆಯನ್ನು ಕೊಡುವದು. ಆದರೂ ಅವರು ಗಂಡುಕೂಸನ್ನು ಅಥವಾ ಕೊನೆಗೆ ಹೆಣ್ಣುಕೂಸನ್ನು ಅಂತು ಒಂದು ಮುದ್ದಿನ ಮುದ್ದೆಯನ್ನು ಹೊತ್ತಿರುವೆವೆಂದು ಅವರ ಲಕ್ಷ್ಯವೆಲ್ಲ ಹೊಟ್ಟೆಯಲ್ಲಿರುವ ಕಂದನ ಮೇಲೆ ಇರುವದರಿಂದ ಪ್ರಸವವೇದನೆಯ ವೇಗವಿಶೇಷವು ಅವರ ಮನಸ್ಸಿಗೆ ಹೆಚ್ಚು ಹತ್ತುವದಿಲ್ಲ. ಹಾಗೆಯೆ ಭಕ್ತನ ಲಕ್ಷ್ಯವು ಸುಖಸ್ವರೂಪನಾದ ಭಗವಂತನ ಕಡೆಗೆ ಬಲವಾಗಿದ್ದರೆ ಮರಣದುಃಖದ ಪ್ರಾಬಲ್ಯವು ತೋರದೆ ಹೋಗುವ ಸಂಭವವುಂಟು. ಅಥವಾ ಏನಾದರೊಂದು ಮಾದಕಪದಾರ್ಥದ ಅಮಲುಹತ್ತಿರುವ ಮನುಷ್ಯನಿಗೆ ತನ್ನ ಮೈಗೆ ಆಗುವ ಹಿಂಸೆಯು ತೋರದಿರುವಂತೆ ಭಗವಂತನ ನಾಮಮಾಧುರ್ಯದ ಅಮಲು ಹತ್ತಿರುವವನಿಗೆ ದೇಹೇಂದ್ರಿಯಾದಿಗಳ ವ್ಯಥೆಯು ಮರೆಯಾಗುವದೇನಾಶ್ಚರ್ಯ? ಮರಣಕಾಲದಲ್ಲಿ ದೇವರಕಡೆಯ ಲಕ್ಷ್ಯವಿರಬೇಕಾದರೆ

ಅದಕ್ಕೆ ಬಹುಕಾಲದ ಅಭ್ಯಾಸವು ಬೇಕು. ಆದುದರಿಂದಲೇ "ಮರಣಕಾಲದಲ್ಲಿ ಕೂಡ" ಎಂದು ಗೀತೆಯಲ್ಲಿ ಹೇಳಿರುವದು. ಆದುದರಿಂದ ಯಾವಾಗಲೂ—ಅಖಂಡವಾಗಿ—ಅನುಚಿಂತನೆಯನ್ನು ಅಭ್ಯಾಸಮಾಡುತ್ತಿದ್ದರೆ ಅದರ ವಾಸನಾಬಲದಿಂದ ಮರಣಸಂಕಟವನ್ನನುಭವಿಸುವ ಕಾಲದಲ್ಲಾದರೂ ಆದರ ಸ್ಮರಣೆಯುಂಟಾಗುವದು ದುರ್ಘಟವಲ್ಲ. ಈಅಭಿಪ್ರಾಯವನ್ನು ಮನಸ್ಸಿನಲ್ಲಿಟ್ಟುಕೊಂಡೇ ಶ್ರೀಕೃಷ್ಣಪರಮಾತ್ಮನು **"तस्मात्सर्वेषु कालेषु मामनुस्मर** ಎಂದರೆ "ಆದಕಾರಣ ಯಾವಾಗಲೂ ನನ್ನನ್ನು ಸ್ಮರಿಸುತ್ತಿರು." ಎಂದು ಅರ್ಜುನನಿಗೆ ಉಪದೇಶಮಾಡಿರುವನು. ಬಹುಕಾಲದಿಂದ ಅಭ್ಯಸ್ತವಾದ ಭಾವನೆಯೇ ಅಂತ್ಯಕಾಲಕ್ಕೆ ಬರುವದು. ನಾಮಸ್ಮರಣೆಯಿಂದ ದೇವರು ಒಲಿಯುವನೆಂಬ ನಂಬಿಕೆಯಿಂದ ಮೊದಮೊದಲು ಭಕ್ತರು "ಹೆ, ದೇವ, ನೀನು ವೈಕುಂಠದಲ್ಲಾದರೂ ಇರು; ಕೈಲಾಸದಲ್ಲಾದರೂ ಇರು; ನಿನ್ನ ನಾಮಸ್ಮರಣೆಯೊಂದನ್ನು ಮಾತ್ರ ಅಗತ್ಯವಾಗಿ ನನಗೆ ಕೊಡು" ಎಂದು ಕೇಳಿಕೊಳ್ಳುವರು. "ನೀನೇಕೋ, ನಿನ್ನ ಹಂಗೇಕೊ, ನಿನ್ನ ನಾಮದ ಬಲವೊಂದಿದ್ದರೆ ಸಾಕೊ." "ನಾಮಕೀರ್ತನೆ ಅನುದಿನ ಮಾಳ್ಪಗೆ ನರಕಭಯಗಳುಂಟೆ?" "ನಾಮವೊಂದೇ ಸಾಲದೆ, ಶ್ರೀಹರಿಯೆಂಬ" "ಭಯನಿವಾರಣವು ಶ್ರೀಹರಿಯನಾಮ" "ರಾಮನಾಮ ಭಜಿಸಿದವರಿಗುಂಟೇ? ಭವದ ಬಂಧನ" ಮುಂತಾದ ದಾಸರಪದಗಳು ಈಅರ್ಥವನ್ನು ಸೂಚಿಸುವವು. **नामस्मरणादन्योपायं न हि पश्यामो भवतरणे"** ಎಂಬುದರಿಂದ ಶ್ರೀಶಂಕರಾಚಾರ್ಯರು ಸಂಸಾರದಿಂದ ಪಾರಾಗುವದಕ್ಕೆ ನಾಮಸ್ಮರಣೆಯ ಹೊರತು ಬೇರೊಂದುಪಾಯವನ್ನರಿಯೆವೆಂದು ಹೇಳಿದ್ದಾರೆ. **"यज्ञानां जपयज्ञोस्मि"** ಎಂದರೆ "ಯಜ್ಞಗಳಲ್ಲಿ ಜಪಯಜ್ಞವು ನಾನು" ಎಂದು ಗೀತೆಯಲ್ಲಿ ಪರಮಾತ್ಮನು ಜಪಯಜ್ಞವನ್ನು ಹೊಗಳಿರುವನು. **"तज्जपस्तदर्थभावनं"** ಎಂಬಂತೆ ಪರಮಾತ್ಮನ ರೂಪವನ್ನು ಅನುಸಂಧಾನಮಾಡುವದು ಜಪ. **"विधियज्ञाज्जपयज्ञो विशिष्टो दशभिर्गुणैः"** ಎಂದರೆ "ವಿಧಿಯಜ್ಞಕ್ಕಿಂತಲೂ ಜಪಯಜ್ಞವು ಹತ್ತರಷ್ಟು ಶ್ರೇಷ್ಠವೆಂದು ಮನು ಹೇಳಿರುವನು.

"इति षोडशकं नाम्नां कलिकल्मषनाशनम् ।
नाऽतः परतरोपायः सर्ववेदेषु दृश्यते ॥"

ಎಂದರೆ "ಪರಮಾತ್ಮನ ನಾಮುಗಳು ಕಲಿಕಲ್ಮಷವನ್ನು ಕಳೆಯತಕ್ಕವುಗಳು. ಎಲ್ಲ ವೇದಗಳನ್ನು ಶೋಧಿಸಿದರೂ ಇದಕ್ಕಿಂತ ಹೆಚ್ಚಿನ ಉಪಾಯವು ಸಿಕ್ಕುವದಿಲ್ಲ"ವೆಂದು ಕಲಿಸಂತರಣೋಪನಿಷತ್ತು ಸಾರುತ್ತಿರುವದು. ಪರಿಶುದ್ಧನಾಗಲಿ, ಅಪರಿಶುದ್ಧನಾಗಲಿ, ಎಂಥ ಪಾಪಿಯಾಗಲಿ, ಪರಮಾತ್ಮಸ್ಮರಣೆಯನ್ನು ಮಾಡಿದರೆ ಒಳಗೂ ಹೊರಗೂ ಕೂಡ ಶುದ್ಧನಾಗುವನೆಂದು

"अपवित्रः पवित्रो वा सर्वावस्थां गतोऽपि वा ।
यः स्मरेत्पुंडरीकाक्षं स बाह्याभ्यंतरश्शुचिः ॥"

ಎಂಬ ಸ್ಮೃತಿಯು ಡಂಗುರವನ್ನು ಹೊಡೆಯುವದು. ತಪಸ್ಸುಪೂಜಾ ಮೊದಲಾದ ಕರ್ಮಗಳೆಲ್ಲ ನಾಮುಸ್ಮರಣೆಯಿಂದಲೆ ಪೂರ್ಣತೆಯನ್ನು ಪಡೆಯುವವೆಂದು

"यस्य स्मृत्या च नामोऽक्त्या तपः पूजाक्रियादिषु ।
न्यूनं संपूर्णतां याति सद्योवंदे तमच्युतम् ॥"

ಎಂಬ ಸ್ಮೃತಿಯು ಘಂಟಾಘೋಷದಿಂದ ಹೇಳುವದು.

ಧರ್ಮಪ್ರಾಬಲ್ಯವಿದ್ದ ಪೂರ್ವಯುಗಗಳಲ್ಲಿ ಕೂಡ ಮೋಕ್ಷಕ್ಕೆ ಯಜ್ಞಯಾಗಾದಿಗಳೂ ಧ್ಯಾನಧಾರಣಾದಿಗಳೂ ಅಗತ್ಯವಾಗಿದ್ದವು. ಧರ್ಮವು ಒಂಟಿಕಾಲಲ್ಲಿ ನಿಂತುಕೊಂಡು ತಪಸ್ಸುಮಾಡುತ್ತಿರುವ ಈಕಲಿಯುಗದಲ್ಲಿ ಮೋಕ್ಷವು ಇಷ್ಟು ಅಗ್ಗವೆ? ಎಂದರೆ ಲೋಕದಲ್ಲಿ ಒಂದರಲ್ಲಿ ನ್ಯೂನತೆ ಇದ್ದರೆ ಇನ್ನೊಂದರಲ್ಲಿ ಆಧಿಕ್ಯವಿರುವದೊಂದು ನಿಯಮವಿದೆ. ಉದಾಹರಣೆಗೆ ನೋಡಿರಿ. ಒಬ್ಬನಿಗೆ ನೇತ್ರೇಂದ್ರಿಯವು ಶಿಥಿಲವಾಗಿದ್ದರೆ ಅವನ ಇತರ ಇಂದ್ರಿಯಗಳು ಉಳಿದವರ ಇಂದ್ರಿಯಗಳಿಗಿಂತ ಹೆಚ್ಚು ಪಟುವಾಗಿರುವವು. ದೇವರು ನೇತ್ರೇಂದ್ರಿಯದ ಪಾಟವವನ್ನು ಉಳಿದ ಇಂದ್ರಿಯಗಳಿಗೆ ಹಂಚಿರು-

ವನು. ಹಾಗೆಯೇ ಪೂರ್ವಯುಗಗಳಲ್ಲಿ ಜನರಿಗೆ ಸ್ವಭಾವವಾಗಿ ಪರಮಾತ್ಮನ ಕಡೆಯು ಲಕ್ಷ್ಯವು ಹೆಚ್ಚಾಗಿತ್ತು. ಆಗ ಪರಮಾತ್ಮಪ್ರಾಪ್ತಿಯ ಸಾಧನವು ಅದಕ್ಕೆ ತಕ್ಕ ಹಾಗೆ ಇತ್ತು. ಈಚೀಚೆಗೆ ಭೋಗ್ಯವಿಷಯುಗಳ ಸಂಪತ್ತು ಮೇರೆದಪ್ಪಿದ ಕಡಲಿನಂತೆ ಭೂಮಿಯ ಮೇಲೆಲ್ಲ ಹರಡಿಕೊಂಡು ಜನಮಂಡಲಿಯನ್ನೆಲ್ಲ ಸರ್ವತೋಮುಖದಿಂದ ಮೋಹಗೊಳಿಸುತ್ತಿರುವದರಿಂದ ಈಗಿನವರ ಪ್ರವೃತ್ತಿಯಲ್ಲಿ ದೇವರ ಕಡೆಗೆ ತಿರುಗುವ ಸೌಕರ್ಯವು ಕಡಮೆ. ಪೂರ್ವಿಕರು ಯಜ್ಞಯಾಗಾದಿಗಳಿಗಾಗಿ ಪಡುತ್ತಿದ್ದ ಕಷ್ಟವನ್ನು ಈಗಿನವರು ವಿಷಯುಗಳಿಂದ ಮನಸ್ಸನ್ನು ಹಿಂದಿರುಗಿಸುವದರಲ್ಲಿ ಅನುಭವಿಸುತ್ತಾರೆ. ಈಅಸೌಕರ್ಯವನ್ನು ನೋಡಿ ಪರಮಾತ್ಮನು ಕಾಲೋಚಿತವಾಗಿ ಅಗ್ಗವಾಗಬೇಕಾಗಿ ಬಂತು. ಹಾಗೆ ಮಾಡದಿದ್ದರೆ ಅವನನ್ನು ಕೇಳುವವರು ಯಾರು? ಆದಕಾರಣ ಕಲಿಯುಗದಲ್ಲಿ ಪರಮಾತ್ಮನು ನಾಮಸ್ಮರಣಮಾತ್ರಕ್ಕೆ ಒಲಿಯುವನು. ಹೀಗೆಂದು ಒಂದು ಸಲ ದೇವರ ನಾಮವನ್ನು ನುಡಿದು ಮುಕ್ತಿಯನ್ನು ತಡಕಿದರೆ ಸಂತಾನಾರ್ಥಿಯಾದ ಸ್ತ್ರೀಯು ಒಂದು ಸಲ ಅರಳೀಮರವನ್ನು ಸುತ್ತಿ ಹೊಟ್ಟೆಯನ್ನು ಮುಟ್ಟಿ ನೋಡಿಕೊಂಡಂತಾಗುತ್ತದೆ. ಹಾಲನ್ನು ಕಾಯಲಿಕ್ಕಿಟ್ಟಾಗ ಮೊದಲು ಅದರಲ್ಲಿದ್ದ ಜಲಾಂಶವೆಲ್ಲ ಬತ್ತುತ್ತದೆ. ಆಮೇಲೆ ಹಾಲುಕಾದು ಕೆನೆಗೂಡುತ್ತದೆ. ಹಾಗೆ ಮನಸ್ಸನ್ನು ನಾಮಸ್ಮರಣೆಯಲ್ಲಿಟ್ಟಾಗ ಮೊದಲು ಮನಸ್ಸಿನ ಪಾಪಸಂಸ್ಕಾರಗಳು ಹೋಗುತ್ತವೆ. ಆಮೇಲೆ ಪುಣ್ಯಸಂಸ್ಕಾರಗಳು ಪರಿಪಕ್ವವಾಗಿ ಮನಸ್ಸು ಮುಕ್ತಿಗೆ ಪಾತ್ರವಾಗುತ್ತದೆ. ನಮ್ಮ ಮನಸ್ಸಿನ ಪಾಪಸಂಸ್ಕಾರಗಳು ಹೋಗುವದಕ್ಕೇ ಎಷ್ಟೋ ನಾಮಸ್ಮರಣೆ ಬೇಕಾಗುವದು. ನಮ್ಮ ಮನಸ್ಸಿನಲ್ಲಿ ಎಷ್ಟೆಷ್ಟು ಜನ್ಮಗಳ ಸಂಸ್ಕಾರವಿರುವದೆಂದು ಯಾರು ಲೆಕ್ಕಮಾಡಬಲ್ಲರು? ಆಕಾಶದಲ್ಲಿರುವ ನಕ್ಷತ್ರಗಳನ್ನೆಣಿಸಬಹುದು; ಹುಣಸೇಮರದ ಎಲೆಗಳನ್ನೆಣಿಸಬಹುದು; ನಾವೆತ್ತಿರುವ ಜನ್ಮಸಂಖ್ಯೆಯನ್ನು ಗೊತ್ತುಮಾಡುವದಕ್ಕೆ ಆಗುವದಿಲ್ಲ. ನಾವೆತ್ತಿರುವ ಜನ್ಮಗಳಲ್ಲೆಲ್ಲ ಕುಡಿದ ಸ್ತನ್ಯವನ್ನು ಈಗ ಕಾರಿದರೆ ಹೊಸದಾಗಿ ಸಪ್ತಸಮುದ್ರಗಳಾಗಬಹುದು. ಸಪ್ತದ್ವೀಪಗಳನ್ನೆಲ್ಲ ಶೋಧಿಸಿದರೂ ನಮ್ಮ ಸುಡುಗಾಡಲ್ಲದ ನೆಲವು ದೊರೆಯದೆ ಹೋಗಬಹುದು. ನಮ್ಮ ಎಲ್ಲ ಜನ್ಮಗಳ ಮೂಳೆ-

ಗಳನ್ನು ಒಂದುಕಡೆ ಒಟ್ಟಿದರೆ ಸಪ್ತಕುಲಾಚಲಗಳಾಗಬಹುದು. ನಮ್ಮ ಪುಣ್ಯಪಾಪಗಳನ್ನು ಬರೆದು ಬರೆದು ಚಿತ್ರಗುಪ್ತರ ಲೇಖಿನಿಗಳೆಲ್ಲ ಮೊಂಡಾಗಿ ಹೋಗಿ ಅವರ ಕೈ ಸೋತು ಅದನ್ನು ಓದಿ ಅವರ ನಾಲಿಗೆಯು ಒಣಗಿರುವಷ್ಟು ನಾವು ಜನ್ಮಾಂತರಗಳನ್ನು ಹೊಂದಿರುವೆವು; ಮತ್ತು ಧರ್ಮಶಾಸ್ತ್ರಕಾರರು ಇನ್ನಿಷ್ಟು ಯೋಚಿಸಿದರೂ ಅವರ ಊಹೆಗೆ ನಿಲುಕದಂಥ ಬಗೆಬಗೆಯ ಪಾಪಗಳನ್ನು ಮಾಡಿರುವೆವು. ಅವುಗಳ ಸಂಸ್ಕಾರವೆಲ್ಲ ಒಂದುಸಲಕ್ಕೆ ಹೇಗೆ ಹೋದೀತು? ಆದಕಾರಣ ಪೂರ್ವದಲ್ಲಿ ಮಾಡಿದ ಪಾಪಗಳಿಗೆ ಪಶ್ಚಾತ್ತಾಪಪಟ್ಟು ಮುಂದೆ ಪಾಪದ ಬಲೆಗೆ ಬೀಳದೆ ಏಕಪ್ರಕಾರವಾಗಿ ಅಖಂಡನಾಮಸ್ಮರಣೆಯನ್ನು ಮಾಡಿದರೆ ಇಷ್ಟಸಿದ್ಧಿಯಾಗಿಯೇ ಆಗುವದು. ಅಖಂಡಸ್ಮರಣೆಯಿಂದ ಪರಮಾತ್ಮಪ್ರಾಪ್ತಿಯು ಸುಲಭವಾಗುವದೆಂಬರ್ಥವನ್ನು

"अनन्यचेताः सततं यो मां स्मरति नित्यशः ।
तस्याऽहं सुलभः पार्थ नित्ययुक्तस्य देहिनः ॥"

ಎಂಬ ಶ್ಲೋಕವು ಸಾಧಿಸುವದು. "ಯಾರು ಯಾವಾಗಲೂ ನನ್ನನ್ನು ಸ್ಮರಿಸುತ್ತಾರೊ ಅವರಿಗೆ ನಾನು ಸುಲಭನು" ಎಂದು ಭಗವಂತನ ಅಭಿಪ್ರಾಯು. ಮೂರ್ಛಾದಿಪರವಶನಾಗಿ ದೇಹವನ್ನು ಬಿಡಲಿ, ಇಂದ್ರಿಯಾದಿ ಕ್ಲೇಶವಿಲ್ಲದೆ ದೇಹವನ್ನು ಬಿಡಲಿ ಅವನ ಅಖಂಡವಾದ ಅನುಚಿಂತನಾಭ್ಯಾಸವು ಅವನ ಪರಮಪ್ರಾಪ್ತಿಗೆ ಹೇತುವಾಗುವದು. ಕಣ್ಣುಮೊದಲಾದ ಇಂದ್ರಿಯಗಳು ಬೇರೆಬೇರೆ ವಿಷಯಗಳನ್ನು ಗ್ರಹಣಮಾಡುತ್ತಿರುವಾಗ ಆಯಾವಸ್ತುಗಳ ಅನುಚಿಂತನೆಯೇ ಆಗುವದರಿಂದ ಅಖಂಡವಾಗಿ ಪರಮಾತ್ಮನ ಅನುಚಿಂತನೆಯೆಂತಾಗುವದೆಂದರೆ ಬಾಹ್ಯೇಂದ್ರಿಯಗಳಿಗೆ ವಿಷಯಾಂತರಗಳ ಸಂಬಂಧವಾದ ಮಾತ್ರಕ್ಕೇ ಅದು ಬಾಧಕವಲ್ಲ. ಅದನ್ನು ತಪ್ಪಿಸುವದು ಅಸಾಧ್ಯ. ಮನಸ್ಸಿನಲ್ಲಿ ಪರಮಾತ್ಮವಿಷಯಕವಾದ ಏಕನಿಷ್ಠೆಯಿರುವದೇ ಅಖಂಡಚಿಂತನ. ಈನಿಷ್ಠೆಯು ವರ್ಷವೊ, ಆರುತಿಂಗಳೊ, ಒಂದು ದಿನವೊ ಇದ್ದರೆ ಸಾಲದು; ಯಾವಜ್ಜೀವವೂ ಇರಬೇಕು. ಪರಮಾತ್ಮವಿಷಯಕವಾದ ಪ್ರೇಮಾತಿಶಯದಿಂದ ಕ್ಷಣಮಾತ್ರವಾದರೂ ಪರಮಾತ್ಮಚಿಂತನೆಯನ್ನು ಬಿಟ್ಟು ಪ್ರಾಣಧಾರಣ-

ಮಾಡಿಕೊಂಡಿರಲಾರದಷ್ಟು ಭಾವನಾಬಲವುಳ್ಳವರಿಗೆ ಪರಮಾತ್ಮಪ್ರಾಪ್ತಿಯು ಸುಲಭವಾಗಿ ಆಗುವದು. ನಾಮಮಹಿಮೆಯನ್ನು ಹೇಳುವದೇನು? ಶ್ರೀರಾಮಚಂದ್ರನು ಸೇತುವನ್ನು ಕಟ್ಟಿ ದಾಟಿದ ಸಮುದ್ರವನ್ನು ಶ್ರೀರಾಮದೂತನಾದ ಹನುಮಂತನು ರಾಮನಾಮಪ್ರಭಾವದಿಂದ ಒಂದೇ ಸಲಕ್ಕೆ ಹಾರಿದನು. ಸಾಮಾನ್ಯವಾಗಿ ಪೌರಾಣಿಕಕಥೆಗಳೆಲ್ಲ ನಾಮಸ್ಮರಣರೂಪವಾದ ಭಕ್ತಿಯ ಮಹಿಮೆಯನ್ನೇ ತೋರಿಸತಕ್ಕವುಗಳಾಗಿವೆ. ಭಕ್ತನು ಹೀಗೆ ಅಖಂಡನಾಮಸ್ಮರಣೆ ಮತ್ತು ಅಖಂಡಾನುಸಂಧಾನಗಳಿಂದ ದೈವಿಕಪ್ರೇಮವನ್ನು ಚೆನ್ನಾಗಿ ಬೆಳಸಿಕೊಳ್ಳುವನು. ಆಗ ಅವನಿಗೆ ನಿಜವಾದ ಪ್ರೇಮವುಂಟಾಗಿ ನಿಷ್ಕಾಮತೆಯು ತಲೆದೋರುವದು.

ದೇವರಲ್ಲಿ ನಿಜವಾದ ಪ್ರೇಮವುಂಟಾದವನು ದೇವರನ್ನು "ನನಗೆ ಇದುಕೊಡು; ಅದುಕೊಡು;" ಎಂದು ಎಂದಿಗೂ ಕೇಳುವದಿಲ್ಲ. ಅವನು ಭಾಗ್ಯವನ್ನಾಗಲಿ, ಕೀರ್ತಿಯನ್ನಾಗಲಿ ಬಯಸುವದಿಲ್ಲ. ಭಗವಂತನು ಪ್ರೇಮಕ್ಕೆ ಪಾತ್ರನೆಂದು ಭಕ್ತನು ಅವನ ಮೇಲೆ ಪ್ರೇಮವನ್ನು ಮಾಡುವನು. ಪ್ರೇಮಕ್ಕೆ ಯೋಗ್ಯವಾದ ವಸ್ತು ದೇವರನ್ನು ಬಿಟ್ಟರೆ ಅವನಿಗೆ ಇನ್ನೇನೂ ಕಾಣುವದಿಲ್ಲ. ಸಾಯಂಕಾಲದಲ್ಲಿ ಪಶ್ಚಿಮದಿಕ್ಕಿನಲ್ಲಿ ಪ್ರಭಾವಿಶೇಷವನ್ನು ಬೀರುತ್ತ ಸೂರ್ಯನು ಮುಳುಗುತ್ತಿರುವಾಗ ಒಂದು ದೊಡ್ಡ ನದಿಯ ತೀರದಲ್ಲಿ ನಿಂತುಕೊಂಡು ನಾವು "ಆಹಾ! ಈ ನೋಟವೆಷ್ಟು ಮನೋಹರವಾಗಿದೆ!! ನನಗೆ ಇದರ ಮೇಲೆ ಬಹುಪ್ರೇಮವುಂಟಾಗಿದೆ" ಎಂದು ಹೇಳುತ್ತೇವಲ್ಲ! ಆಪ್ರೇಮಕ್ಕೇನಾದರೂ ನಾವು ಪ್ರತಿಫಲವನ್ನು ಬಯಸುತ್ತೇವೊ? ಆಅಸ್ವಾರ್ಥಪರವಾದ ಪ್ರೇಮವು ನಮ್ಮ ಹೃದಯದಲ್ಲಿ ತುಂಬಿ ತುಳುಕುವಾಗ ನಾವು ನಮ್ಮ ಪ್ರತ್ಯೇಕವ್ಯಕ್ತಿತ್ವವನ್ನೇ ಮರೆತುಬಿಡುತ್ತೇವೆ. ಆಪ್ರೇಮವು ಆಸಂಧ್ಯಾಕಾಲಸೌಂದರ್ಯದಂಥ ಸಮಸ್ತ ಸೌಂದರ್ಯಗಳಿಗೂ ನಿಧಿಯಾದ ಪರಮಾತ್ಮನ ಕಡೆಗೆ ಹರಿದಾಗ ಭಕ್ತನು "ಹೆ, ದೇವ, ನೀನು ಅತ್ಯಂತ ಹೃದಯಂಗಮನಾಗಿದ್ದಿ. ನೀನು ಪ್ರೇಮಮೂರ್ತಿಯಾಗಿರುವೆ. ನಾನು ನಿನ್ನನ್ನಗಲಿರಲಾರೆನು. ನೀನೇ ನನ್ನ ಸರ್ವಸ್ವವು." ಎಂದು ಹೇಳುವನು. ಇದಕ್ಕಿಂತ ಹೆಚ್ಚಿನ ಪ್ರಾರ್ಥನೆಯೊಂದುಂಟೆ? ದೈವಿಕಪ್ರೇಮದ ಕಿರಣಗಳ

ಬೆಳಕು ಎಲ್ಲಿ ಹೊರಬೀಳುವದೊ ಅಲ್ಲಿ ಸ್ವಾರ್ಥಬುದ್ಧಿಯೆಂಬ ಕತ್ತಲೆಯು ಮೈಗರೆಯುವದು.

ಮತ್ತೇನೆಂದರೆ ದೈವಿಕಪ್ರೇಮಕ್ಕೆ ಯಾವ ಭಯವೂ ಇಲ್ಲ. ಶಿಕ್ಷೆ-ಯಾದೀತೆಂಬ ಭಯವಿರುವ ಕಡೆ ಪ್ರೇಮವಿದ್ದೀತೆ? ಕೆಲಸಮಾಡದಿದ್ದರೆ ಬೆನ್ನಮೂಳೆ ಮುರಿಯುವಂತೆ ಯಜಮಾನನು ಹೊಡೆದಾನೆಂಬ ಭೀತಿಯುಳ್ಳ ಸೇವಕನು ಯಜಮಾನನ ಮೇಲೆ ಪ್ರೇಮವನ್ನು ಮಾಡುವನೆ? ಭಯವೆಂಬುದು ಯಾವಾಗಲೂ ಸ್ವಾರ್ಥಪರವಾದ ಹೃದಯದಲ್ಲಿ ಮಾತ್ರ ಕಾಣಿಸಿಕೊಳ್ಳುತ್ತದೆ. ಅಸ್ವಾರ್ಥಬುದ್ಧಿಯೆಲ್ಲ ಪ್ರೇಮಮಯವಾಗಿರುವದು. ಪ್ರತಿಯೊಂದು ಪ್ರಾಣಿ-ಯೂ ಪರಮಾತ್ಮನ ಸಂತತಿಯೆಂದೂ ತನ್ನ ಪ್ರೇಮನಿಧಿಯಾದ ಪರಮಾತ್ಮನೇ ಚರಾಚರಾತ್ಮಕಪ್ರಪಂಚವಾಗಿರುವನೆಂದೂ ಭಾವಿಸುವಂಥ ಪ್ರೇಮಪೂರ್ಣ-ವಾದ ಹೃದಯವುಳ್ಳವನು ಯಾವದರ ಮೇಲೆಯೂ ಪ್ರೇಮವನ್ನು ಮಾಡದೆ ಇರಲೇ ಆರನು. ಅವನು ಸರ್ವಜ್ಞನಾದ ಪರಮಾತ್ಮನಲ್ಲಿ ತನ್ನ ಮನಸ್ಸನ್ನು ಅಡಗಿಸಿ ತನಗೆ ಬರುವ ಸುಖದುಃಖಗಳಿಗೆಲ್ಲ ಮನಃಪೂರ್ವಕವಾಗಿ ತಲೆ-ಗೊಡುತ್ತಾನೆ. ಅವನ ಮೇಲೆ ದುಷ್ಟಮೃಗಗಳೇನಾದರೂ ಬಾಯಿಹಾಕು-ವದಕ್ಕೆ ಬಂದರೆ ಅವನು "ದೇವರು ನನಗೊಬ್ಬ ಅತಿಥಿಯನ್ನು ಕಳುಹಿಸಿದ್ದಾನೆ; ನಾನು ಅವನನ್ನು ಆದರಿಸಬೇಕು." ಎಂದು ಭಾವಿಸುತ್ತಾನೆ. ಮರಣ-ವೆಂಬುದು ಬಂದರೆ ಅಣ್ಣತಮ್ಮಂದಿರು ಬಂದರೆ ಹೇಗೋ ಹಾಗೆ ಆದಕ್ಕೂ ಸುಖಾಗಮನವನ್ನು ಬಯಸುತ್ತಾನೆ. ಈಪ್ರೇಮವು ಜ್ಞಾನಕ್ಕಿಂತಲೂ ಹೆಚ್ಚಿ-ನದು; ಮತ್ತು ಧ್ಯಾನಕ್ಕಿಂತಲೂ ಉತ್ತಮವಾದುದು. ಹೇಗೆಂದರೆ ಅವೆರ-ಡಕ್ಕೂ ದೈವಿಕಪ್ರೇಮವೇ ಫಲ. ದೈವಿಕಪ್ರೇಮವು ತನಗೆ ತಾನೇ ಫಲ-ವುಳ್ಳದ್ದು.

"पुरुषः स परः पार्थ भक्त्या लभ्यस्त्वनन्यया ।
यस्यांतस्स्थानि भूतानि येन सर्वमिदं ततम् ॥"

ಎಂಬ ಗೀತೋಕ್ತಿಯಂತೆ ಸಮಸ್ತ ಚರಾಚರಪ್ರಪಂಚವೂ ಯಾವನಲ್ಲಿ ಅಡಗಿ-ರುವದೊ ಯಾವನು ಸ್ಥಾವರಜಂಗಮಾತ್ಮಕಬ್ರಹ್ಮಾಂಡದಲ್ಲೆಲ್ಲ ವ್ಯಾಪಿಸಿ-

ಕೊಂಡಿರುವನೊ ಆ ಪರಮಾತ್ಮನು ವಿಷಯಾಂತರವರ್ಜಿತವಾದ — ಏಕನಿಷ್ಠಾ-ರೂಪವಾದ — ಈ ಪ್ರೇಮಕ್ಕೆ ವಶನಾಗುವನು. ಈ ಭಕ್ತಿಯನ್ನು ಮಾಡುವ ಕಾಲದಲ್ಲಿ ಭಕ್ತನು ಯಾವಾಗಲೂ ಏಕಾಂತವಾಸವನ್ನು ಅಪೇಕ್ಷೆ ಮಾಡು-ತ್ತಿರುವನು. ಅವನಿಗೆ ಯಾವದೊಂದು ವಿಷಯಸಂಪತ್ತು ಇಲ್ಲದೆ ಹೋದರೂ — ಯಾವ ತೃಪ್ತಿಸಾಧನವೂ ಇಲ್ಲದೆ ಇದ್ದರೂ — ಅವನ ಮುಖದ ಮೇಲೆ ತೃಪ್ತಿಯು ಕಳೆಯು ತಾಂಡವವಾಡುತ್ತಿರುವದು. ಭಕ್ತಿಯ ಪ್ರವಾ-ಹವು ಮನಸ್ಸಿನಲ್ಲಿ ಹರಿಯುತ್ತ ಹರಿಯುತ್ತ ಅದರ ಸ್ವಾರ್ಥ, ಪಾಪಾಸಕ್ತಿ, ದುರಭಿಮಾನ, ವಿಷಯಾಭಿಲಾಷೆ ಮೊದಲಾದ ಹೊಲಸನ್ನೆಲ್ಲ ಕೊಚ್ಚಿ ಬಿಸುಡುವದರಿಂದ ಭಕ್ತಿಯಲ್ಲಿ ಏಕನಿಷ್ಠೆಯುದಯಿಸುವ ಕಾಲಕ್ಕೆ ಮನಸ್ಸು ಶುದ್ಧಸತ್ತ್ವವಾಗಿರುವದು. ಹೀಗೆ ಪರಮಾತ್ಮನ ನಾಮವನ್ನು ನಂಬಿ ಮನೋವೃತ್ತಿಯನ್ನು ಪರಮಾತ್ಮಾಕಾರವಾಗಿ ಮಾಡಿಕೊಂಡು ದೈವಿಕಪ್ರೇಮ-ವನ್ನು ಬೆಳಸಿಕೊಳ್ಳುವವನಿಗೆ ಪರಮಾತ್ಮಸಾಕ್ಷಾತ್ಕಾರಕ್ಕೆ ಯೋಗ್ಯವಾದ ಬುದ್ಧಿಯೋಗವನ್ನು ಕೊಡುತ್ತೇನೆಂದು ಶ್ರೀಕೃಷ್ಣಪರಮಾತ್ಮನು ಗೀತೆಯಲ್ಲಿ

"तेषां सततयुक्तानां भजतां प्रीतिपूर्वकम् ।
ददामि बुद्धियोगं तमेन मामुपयांति ते ॥"

ಎಂಬ ಶ್ಲೋಕದಲ್ಲಿ ಹೇಳಿರುತ್ತಾನೆ. ಈ ನಿಧಿಧ್ಯಾಸರೂಪವಾದ ಮಾನಸಿಕ-ತಪಸ್ಸಿನಿಂದ ಭಕ್ತನ ಮನಸ್ಸು ತಾಮ್ರದ ಸಂಪರ್ಕವನ್ನು ಕಳೆದುಕೊಂಡ ಅಪರಂಜಿಯಂತಾಗುವದು. ತೈಲಧಾರೆಯಂತೆ ಮನಸ್ಸು ಧ್ಯಾನಾಭ್ಯಾಸದಲ್ಲಿ ಅಳವಡುವ ಈ ಸ್ಥಿತಿಗೆ ಸಾಧನರೂಪವಾದ ಗೌಣೀಭಕ್ತಿಯು ಮುಗಿಯಿತು. ಈ ಭಕ್ತಿಯಿಂದ

"भक्त्या मामभिजानाति यावान् यश्चास्मि तत्त्वत"

ಎಂಬ ಗೀತಾವಾಕ್ಯದಂತೆ ಭಕ್ತನಿಗೆ ಪರಮಾತ್ಮನ ಯಥಾರ್ಥಸ್ವರೂಪವು ಅನುಭವಕ್ಕೆ ಬರುವದು. ಶ್ರವಣಕಾಲದಲ್ಲಿ ಅದು ಕಂಡವರು ಹೇಳಿದ

ಮಾತಾಗಿತ್ತು ಭಕ್ತಿಯು ಪಕ್ವವಾಗುತ್ತಲೆ ಅದು ತಾನೇ ಕಂಡ ಮಾತಾಗುವದು.

ಒಂದು ರೀತಿಯಿಂದ ನೋಡಿದರೆ ಇಲ್ಲಿಗೇ ಮನುಷ್ಯನು ಕೃತಾರ್ಥನಾದಂತಾಯಿತು. ಏಕೆಂದರೆ ಅಜ್ಞಾನದಿಂದ ಬಂಧವುಂಟಾಗಿತ್ತು. ಭಕ್ತಿಯೆಂಬ ಸಾಧನದಿಂದ ಜ್ಞಾನವಾಯಿತು. ಸೂರ್ಯೋದಯವಾಗುತ್ತಲೆ ಓಡಿಹೋಗುವ ಕತ್ತಲೆಯಂತೆ ಭಕ್ತನ ಅಜ್ಞಾನವು ನಾಶವಾಗಿ ಆತ್ಮಸಾಕ್ಷಾತ್ಕಾರವಾದುದರಿಂದ

"भिद्यते हृदयग्रंथिश्छिद्यंते सर्वसंशयाः ।
क्षीयंते चास्य कर्माणि तस्मिन् दृष्टे परावरे ॥

ಎಂಬ ಗೀತೋಕ್ತಿಯಂತೆ ಸ್ಥೂಲದೇಹ ಮತ್ತು ಸೂಕ್ಷ್ಮದೇಹಗಳ ನಾನು ಮತ್ತು ನನ್ನದೆಂಬ ಅಭಿಮಾನರೂಪವಾದ ಗಂಟು ಬಿಚ್ಚಿಕೊಂಡು ಹೋಗುವದು; "यस्मिन् विज्ञाते सर्वं विज्ञातं भवति" ಎಂಬ ಶ್ರುತಿಯನ್ನನುಸರಿಸಿ ಸರ್ವಾಧಿಷ್ಠಾನಸ್ವರೂಪನಾದ ಪರಮಾತ್ಮನನ್ನು ತಿಳಿಯುವದರಿಂದ ಸರ್ವದ ನಿಜತ್ವವನ್ನೂ ತಿಳಿದಂತಾಗಿ ಸಂಶಯಗಳೆಲ್ಲ ಕತ್ತರಿಸಿ ಬೀಳುವವು; ಅವನ ಆಗಾಮಿಸಂಚಿತಕರ್ಮಗಳು ಸುಟ್ಟುಹೋಗುವವು. "ಅವನಿಗಿನ್ನೇನಾಗತಕ್ಕದ್ದಿದೆ?" ಎಂದರೆ ಭಗವಂತನು ಭಕ್ತಿಯಿಂದ ಜ್ಞಾನವಾಗುವದೆಂದು ಹೇಳಿ ಸುಮ್ಮನಾಗದೆ

"ततो मां तत्त्वतो ज्ञात्वा विशते तदनंतरम्"

ಎಂದು ಹೇಳಿದ್ದಾನೆ. ಆಯಥಾರ್ಥಜ್ಞಾನವಾಗುತ್ತಲೆ ಅದರಲ್ಲಿಯೇ ಪ್ರವೇಶಮಾಡುತ್ತಾನೆಂದು ಅದರ ತಾತ್ಪರ್ಯ. ಯಥಾರ್ಥಜ್ಞಾನವಾಗುತ್ತಲೆ ಎಂಬ ಪ್ರಯೋಗಕ್ಕೆ ಅರ್ಥವೇನೆಂದರೆ ಕರ್ಮಾಚರಣೆಗೂ ಸ್ವರ್ಗಾದಿಪ್ರಾಪ್ತಿಗೂ ಮಧ್ಯೆ ಅವಕಾಶವಿರುವದಷ್ಟೆ. ಜ್ಞಾನಕ್ಕೂ ಪ್ರವೇಶಮಾಡುವದೆಂಬುದಕ್ಕೂ ವಿಲಂಬವೇ ಇಲ್ಲ. ಈ ಅಭಿಪ್ರಾಯವನ್ನೇ ಶ್ರೀಶಂಕರಾಚಾರ್ಯರು "ನದಿಯು ಸಮುದ್ರವನ್ನು ಪಡೆಯುವಂತೆ" ಎಂಬ ಉಪಮಾನದಿಂದ ಸಾಧಿಸಿರುವರು. ನದಿಯು ಹುಟ್ಟುವಾಗ ಬಹು ನಿದಾನವಾಗಿಯೂ ಬರಬರುತ್ತ ಹರಿಯುವಾಗ

ಮೊದಲಿಗಿಂತ ವೇಗವಾಗಿಯೂ ಪ್ರವಹಿಸುವದು. ಈಸ್ಥಿತಿಗಳಲ್ಲಿ ನದಿಗೆ ಅಲ್ಲಲ್ಲಿ ಕೆರೆಕಟ್ಟೆಕಾಲುವೆಗಳಲ್ಲಿ ನಿಂತುಹೋಗುವಂಥ ಅಥವಾ ಅಡ್ಡದಾರಿಗೆ ತಿರುಗುವಂಥ ಪ್ರತಿಬಂಧಕಗಳು ಬರುವದುಂಟು. ಆನದಿಯು ಸಮುದ್ರವನ್ನು ಕಂಡಿತೆಂದರೆ ನದೀಮುಖವು ಸ್ವಭಾವವಾಗಿ ತಗ್ಗಾಗಿರುವದರಿಂದ ನಿರಂಕುಶವೇಗದಿಂದ ಸಮುದ್ರದೊಳಕ್ಕೆ ಪ್ರವೇಶಿಸುವವರೆಗೂ ನುಗ್ಗಿಯೇ ನುಗ್ಗುವದು. ಅದನ್ನು ತಡೆಯುವದಕ್ಕೆ ಯಾರಿಂದಲೂ ಆಗುವದಿಲ್ಲ. ಯಾವ ಪ್ರತಿಬಂಧವೂ ಅದರೆದುರಿಗೆ ಎದೆಗೊಡಲಾರದು. ಅದು ಸಮುದ್ರವನ್ನು ಪ್ರವೇಶಿಸಿಯೇ ತೀರುವದು. ನದಿಯು ಸಮುದ್ರವನ್ನು ಕಂಡಿತೆಂದರೆ ಅದು ಅಲ್ಲಿ ಪ್ರವೇಶಿಸಿತೆಂತಲೇ ತಿಳಿಯಬಹುದು. ಹಾಗೆಯೇ ಶ್ರವಣಮನನರೂಪವಾದ ಅಥವಾ ಕಾಯಿಕವಾಚಿಕತಪೋರೂಪವಾದ ಗೌಣೀಭಕ್ತಿಯನ್ನು ಮಾಡುವಾಗ ಭಕ್ತರಿಗೆ ಅವರ ಹೃದಯದಲ್ಲಿ ಭಕ್ತಿಪ್ರವಾಹವು ಮೆಲ್ಲಗೆ ಹರಿಯುತ್ತಿರುವದು. ನಿಧಿಧ್ಯಾಸರೂಪವಾದ ಮಾನಸಿಕತಪಸ್ಸನ್ನು ಮಾಡುವಾಗ ಆಪ್ರವೇಶವು ಹೆಚ್ಚು ವೇಗದಿಂದ ಮುಂದೆ ಸಾಗುವದು. ಈಸ್ಥಿತಿಗಳಲ್ಲಿ ಅವನ ಭಕ್ತಿಪ್ರವಾಹಕ್ಕೆ ಪ್ರತಿಬಂಧಕಗಳು ಬರುವ ಸಂಭವವುಂಟು. ಈ ಎರಡು ಸ್ಥಿತಿಗಳನ್ನೂ ದಾಟಿ ಜ್ಞಾನವನ್ನು ಪಡೆದನೆಂದರೆ ಮುಂದೆ ಆವನು ಪರಮಾತ್ಮಸ್ವರೂಪದಲ್ಲಿ ಪ್ರವೇಶಮಾಡುವದಕ್ಕೆ ತಡವೇ ಇರುವದಿಲ್ಲ. ಯಾವದೊಂದು ಪ್ರತಿಬಂಧಕವೂ ಅವನಿಗೆ ಅಡ್ಡಬರಲಾರದು. ಅವನು ಆಪರಮಾನಂದಸ್ವರೂಪದಲ್ಲಿ ಪ್ರವೇಶಮಾಡಿಯೇ ಮಾಡುವನು. ಜ್ಞಾನವಾಗುತ್ತಲೆ ಆವನು ಅಲ್ಲಿ ಪ್ರವೇಶಮಾಡಿದನೆಂದೇ ಹೇಳಬಹುದು. ಈ ಅರ್ಥವನ್ನು ಸ್ವಾಮಿವಿವೇಕಾನಂದರು "A search ending in love." ಎಂಬ ಮಾತುಗಳಿಂದ ಸೂಚಿಸಿರುವರು. ಈಪ್ರವೇಶರೂಪವಾದ ಭಕ್ತಿಯೇ ಪರಾ. ಇದೇ ಸಾಧ್ಯರೂಪವಾದ ಭಕ್ತಿ. ಇಂಥ ಜ್ಞಾನೋತ್ತರಭಕ್ತಿಯುಳ್ಳವನನ್ನೆ ಭಗವಂತನು **ज्ञानीत्वात्मैव मे मतम्**" ಎಂಬ ಮೊದಲಾದ ವಾಕ್ಯಗಳಿಂದ ಶ್ಲಾಘಿಸಿದ್ದಾನೆ.

"**ज्ञानादेव तु कैवल्यम्**" ಮೊದಲಾದ ಶ್ರುತಿವಾಕ್ಯಗಳು ಜ್ಞಾನದಿಂದಲೇ ಮುಕ್ತಿಯಾಗುವದೆಂದು ಹೇಳುವವಲ್ಲ! ಈಗ ಜ್ಞಾನವಾದ ಮೇಲೆ ಮು-

ತ್ತೊಂದು ಪರಭಕ್ತಿಯೆಂಬುದೇನು? ಎಂದರೆ ಜ್ಞಾನದಿಂದ ಮುಕ್ತಿಯೆಂಬ ಮಾತೇನೂ ಸುಳ್ಳಲ್ಲ. ಜ್ಞಾನವಾದ ಮೇಲೆ ಮುಕ್ತಿಯಾಗಿಯೇ ಆಗುವದು. ಆದರೆ ಕೇವಲ ಜ್ಞಾನಮಾತ್ರವೇ ಮೋಕ್ಷಕ್ಕೆ ಸಾಕ್ಷಾತ್ಕಾರಣವಲ್ಲ. ಮೋಕ್ಷಕ್ಕೆ ಸಾಕ್ಷಾತ್ಕಾರಣ ಪರಭಕ್ತಿ. ಜ್ಞಾನವಾದ ಮೇಲೆ ಪರಭಕ್ತಿಯು ಸ್ವಭಾವ-ಸಿದ್ಧವಾಗಿಯೇ ಬರುವದರಿಂದ ಜ್ಞಾನವಾದ ಮೇಲೆ ಮೋಕ್ಷವಾದಂತೆಯೇ ಆಯಿತೆಂದು ಭಾವಿಸಿ ಜ್ಞಾನದಿಂದ ಮೋಕ್ಷವೆಂದು ಹೇಳಿರುವರು. **"तन्नि-ष्ठस्य मोक्षोपदेशात्"** ಎಂಬ ಬ್ರಹ್ಮಸೂತ್ರವನ್ನು ವಿಚಾರಮಾಡಿದರೆ ಈ ಅಭಿ-ಪ್ರಾಯವು ವ್ಯಕ್ತವಾಗುವದು. ಪರಬ್ರಹ್ಮನಿಷ್ಠೆಯಿಂದ ಮೋಕ್ಷವೆಂದು ಆದರ ತಾತ್ಪರ್ಯ. ಜ್ಞಾನವಾದ ಮೇಲೆ ಪರಬ್ರಹ್ಮನಿಷ್ಠೆಯೊಂದುಂಟೆಂದು ಗೀತೆಯಲ್ಲಿಯೂ ಅನೇಕ ಕಡೆ ಉಕ್ತವಾಗಿರುವದು. ನೋಡಿರಿ,

"तद्बुद्धयस्तदात्मानस्तन्निष्ठास्तत्परायणाः ।
गच्छंत्यपुनरावृत्तिं ज्ञाननिर्धूतकल्मषाः ॥"

ಎಂದರೆ ಜ್ಞಾನದಿಂದ ಪುನರ್ಜನ್ಮಕ್ಕೆ ಕಾರಣವಾದ ಪುಣ್ಯಪಾಪಗಳನ್ನು ಕಳೆದು-ಕೊಂಡವರಾಗಿ ಬ್ರಹ್ಮದಲ್ಲಿಯೇ ಬುದ್ಧಿಯನ್ನು ಇಟ್ಟವರಾಗಿಯೂ, ಬ್ರಹ್ಮ-ವನ್ನೇ ತಮ್ಮ ಆತ್ಮವಾಗಿ ಭಾವಿಸುವವರಾಗಿಯೂ, ಬ್ರಹ್ಮನಿಷ್ಠರಾಗಿಯೂ ಬಹ್ಮ-ಪರಾಯಣರಾಗಿಯೂ ಇದ್ದು ಕೈವಲ್ಯವನ್ನು ಪಡೆಯುತ್ತಾರೆ.

"ब्रह्मभूतः प्रसन्नात्मा न शोचति न कांक्षति ।
समः सर्वेषु भूतेषु मद्भक्तिं लभते पराम् ॥"

ಎಂದರೆ **"ब्रह्मविद्ब्रह्मैव भवति"** ಎಂಬ ಶ್ರುತಿಯಂತೆ ಬ್ರಹ್ಮಜ್ಞಾನವನ್ನು ಪಡೆದು ಬಹ್ಮಸ್ವರೂಪಿಯಾಗಿ ಶುದ್ಧಚಿತ್ತನಾದವನು ದುಃಖಕ್ಕೂ ಮತ್ತು ಆಶೆಗೂ ದೂರನಾಗಿ ಸರ್ವಭೂತಗಳಲ್ಲಿಯೂ ಸಮತ್ವಬುದ್ಧಿಯುಳ್ಳವನಾಗಿ ನನ್ನಲ್ಲಿ ಪರಭಕ್ತಿಯನ್ನು ಪಡೆಯುವನು.

"चतुर्विधा भजंते मां जनास्सुकृतिनोऽर्जुन
तेषां ज्ञानी नित्ययुक्तः एकभक्तिर्विशिष्यते॥ "

ಎಂದರೆ ಆರ್ತಿನಿವಾರಣೆಗಾಗಿ ಭಜಿಸುವ ಆರ್ತನೂ, ಅರ್ಥಪ್ರಾಪ್ತಿಗಾಗಿ ಬೇಡುವ ಅರ್ಥಾರ್ಥಿಯೂ, ಜ್ಞಾನಕ್ಕಾಗಿ ಆಶ್ರಯಿಸುವ ಜಿಜ್ಞಾಸುವೂ, ಜ್ಞಾನಪ್ರಾಪ್ತಿಯಾಗಿದ್ದರೂ ಪ್ರೇಮವನ್ನು ಮಾಡುವ ಜ್ಞಾನಿಯೂ ಸುಕೃತಿಗಳೆ. ಇವರೆಲ್ಲರೂ ಪೂರ್ವಜನ್ಮದಲ್ಲಿ ಅನೇಕಸುಕೃತಗಳನ್ನು ಮಾಡಿದವರು. ಇಲ್ಲದಿದ್ದರೆ ಇವರಲ್ಲಿ ಯಾರೂ ನನ್ನನ್ನು ಭಜಿಸುತ್ತಲೆ ಇರಲಿಲ್ಲ. ಆದುದರಿಂದಲೆ ಅವರೆಲ್ಲರೂ ನನಗೆ ಪ್ರಿಯರೆ. ನನ್ನ ಭಕ್ತರಲ್ಲಿ ನನಗೆ ಯಾರೂ ಅಪ್ರಿಯರಲ್ಲ. ನನ್ನ ಮೇಲೆ ಭಕ್ತಿಯನ್ನು ಮಾಡಿದವನು ಮುಕ್ತನಾಗದೆ ಇರುವದಿಲ್ಲ. ಅವರಲ್ಲಿ ಜ್ಞಾನಿಯು ಏಕನಿಷ್ಠೆಯಿಂದ ಪರಭಕ್ತಿಯನ್ನು ಮಾಡುವದರಿಂದ ಅವನು ಸರ್ವಶ್ರೇಷ್ಠನು.

"बहवो ज्ञानतपसा पूता मद्भावमागताः ॥"

ಎಂದರೆ ಜ್ಞಾನವೆಂಬ ತಪಸ್ಸಿನಿಂದ ಪರಿಶುದ್ಧರಾದ ಅನೇಕರು ಪರಮಾತ್ಮಭಾವವನ್ನು ಪಡೆಯುತ್ತಾರೆ.

"भक्त्यात्वनन्यया शक्य अहमेवं विधोऽर्जुन ।
ज्ञातुं द्रष्टुं च तत्त्वेन प्रवेष्टुं च परंतप ॥"

ಎಂದರೆ ಹೆ, ಅರ್ಜುನ ಈಪ್ರಕಾರವಾದ ನನ್ನನ್ನು ಏಕನಿಷ್ಠೆಯುಳ್ಳ ನಿರತಿಶಯಪ್ರೇಮರೂಪವಾದ ಭಕ್ತಿಯಿಂದ ತಿಳಿಯುವದಕ್ಕೂ ಶ್ರವಣಮನನನಿಧಿಧ್ಯಾಸಕ್ರಮದಿಂದ ಸಾಕ್ಷಾತ್ಕರಿಸಿಕೊಳ್ಳುವದಕ್ಕೂ ಆಗುವದಲ್ಲದೆ ಆಮೇಲೆ ನನ್ನಲ್ಲಿ ಪ್ರವೇಶಮಾಡುವದಕ್ಕೂ ಆಗುವದು.

ಈಶ್ಲೋಕಗಳೆಲ್ಲ ಜ್ಞಾನವಾದ ಮೇಲೆಯೂ ಭಕ್ತಿಮಾಡುವದುಂಟೆಂಬರ್ಥವನ್ನು ಪುಷ್ಟಿಗೊಳಿಸುತ್ತವೆ. ಈಅಭಿಪ್ರಾಯವನ್ನು

"एवं सर्वेषु भूतेषु भक्तिरव्यभिचारिणी ।
कर्तव्या पंडितैर्ज्ञात्वा सर्वभूतमयं हरिम् ॥"

ಎಂದರೆ "ವಿವೇಕಿಗಳು ಸರ್ವಭೂತಮಯನಾದ ಹರಿಯ ಜ್ಞಾನವನ್ನು ಪಡೆದು ಸರ್ವಭೂತಗಳಲ್ಲಿಯೂ ಏಕಪ್ರಕಾರವಾದ ಭಕ್ತಿಯನ್ನು ಮಾಡಬೇಕು." ಎಂಬರ್ಥವುಳ್ಳ ಶ್ಲೋಕವೂ ಅನುವಾದ ಮಾಡುತ್ತದೆ.

"सर्वं कर्माखिलं पार्थ ज्ञाने परिसमाप्यते"

ಎಂದು ಗೀತೆಯಲ್ಲಿ ಹೇಳಿರುವಂತೆ ಜ್ಞಾನವಾದರೆ ಮಾಡತಕ್ಕದ್ದೆಲ್ಲ ಮುಗಿ-ದಂತಾಯಿತಲ್ಲ! ಎಂದರೆ ನಿಜ; ಮಾಡತಕ್ಕದ್ದೆಲ್ಲ ಮುಗಿಯಿತು. ಮುಂದೆ ಅವನು ಏನನ್ನಾದರೂ ಮಾಡಬೇಕೆಂಬ ವಿಧಿ ಇಲ್ಲ. ಹಾಗಾದರೆ ಜ್ಞಾನವಾದ ಮೇಲೆಯೂ ಪ್ರೇಮವನ್ನು ಮಾಡುವದೊಂದುಂಟೆಂಬ ಮಾತಿಗೆ ಅರ್ಥವೇ-ನೆಂದರೆ ಜ್ಞಾನಿಗೆ ಆಮೇಲೆ ಪ್ರೇಮವನ್ನು ಮಾಡಬೇಕೆಂಬುದೊಂದು ವಿಧಿಯಲ್ಲ. ಜ್ಞಾನವನ್ನು ಪಡೆದವನು ಆಮೇಲೆ ಪ್ರೇಮವನ್ನು ಮಾಡುವದಕ್ಕೆ ಪ್ರಯತ್ನಿಸ-ಬೇಕಾದುದಿಲ್ಲ. ಸಾಧ್ವಿಯು ತನ್ನ ಪತಿಯ ಮೇಲೆ ಸ್ವಭಾವಸಿದ್ಧವಾಗಿ ಪ್ರೇಮವನ್ನು ಮಾಡುತ್ತಲೆ ಇರುವಂತೆ ಅವನು ಭಗವಂತನ ಮೇಲೆ ಪ್ರೇಮ-ವನ್ನು ಮಾಡುತ್ತಲೆ ಇರುವನು. ಸ್ತ್ರೀಯು ಪತಿಯ ಪರಿಚಯವಾಗುವದಕ್ಕೆ ಮೊದಲು ತನ್ನ ಕಡೆಗೆ ಅವನ ಪ್ರೇಮವನ್ನು ಆಕರ್ಷಣೆಮಾಡುವದಕ್ಕಾಗಿ ವಿವಿಧೋಪಚಾರಗಳಿಂದ ಅವನ ಮೇಲೆ ಪ್ರಯತ್ನಪೂರ್ವಕವಾಗಿ ಪ್ರೇಮವನ್ನು ಮಾಡುತ್ತಿರುವಳು. ಅವರಿಬ್ಬರ ಪರಸ್ಪರಪ್ರೇಮವು ಕಲೆತ ಮೇಲೆ ಆ ಸಾಧ್ವಿಯು ಪ್ರೇಮಕ್ಕಾಗಿ ಯಾವ ಪ್ರಯತ್ನವನ್ನೂ ಮಾಡುವದಿಲ್ಲ. ಆಕೆಯು ಆತನಿಗೆ ಯಾವ ಉಪಚಾರವನ್ನೂ ಮಾಡದೆ ಸುಮ್ಮನಿದ್ದರೂ ಮನಸ್ಸಿನಲ್ಲಿ ಆತನ ಮೇಲೆ ಪ್ರೇಮವನ್ನು ಮಾಡುತ್ತಲೆ ಇರುವಳು. ಏಕೆಂದರೆ ಆಕೆಯು ಆತನ ಮೇಲೆ ಪ್ರೇಮವನ್ನು ಮಾಡದೆ ಇರಲೇ ಆರಳು. ಅದರಂತೆಯೆ ಭಕ್ತನು ಭಗವಂತನ ಸಾಕ್ಷಾತ್ಕಾರವಾಗುವದಕ್ಕೆ ಮೊದಲು ತನ್ನ ಹೃದಯ-ದೊಳಕ್ಕೆ ಪರಮಾನಂದದ ಸ್ವರೂಪವನ್ನು ಆಕರ್ಷಣೆಮಾಡುವದಕ್ಕಾಗಿ ವಿವಿಧ-

ಸಾಧನಗಳಿಂದ ದೇವರ ಮೇಲೆ ಪ್ರಯತ್ನಪೂರ್ವಕವಾಗಿ ಪ್ರೇಮವನ್ನು ಮಾಡುತ್ತಿರುವನು. ಭಗವಂತನ ಸಾಕ್ಷಾತ್ಕಾರವಾದ ಮೇಲೆ ಅವನು ಪ್ರೇಮಕ್ಕಾಗಿ ಯಾವ ಪ್ರಯತ್ನವನ್ನೂ ಮಾಡುವದಿಲ್ಲ. ಅವನು ಯಾವ ಪ್ರೇಮಸಾಧನವನ್ನೂ ಮಾಡದೆ ಸುಮ್ಮನಿದ್ದರೂ ಅವನ ಮನಸ್ಸು ದೇವರಲ್ಲಿ ಪ್ರೇಮವನ್ನು ಮಾಡುತ್ತಲೆ ಇರುವದು. ಏಕೆಂದರೆ ಅವನು ಕಣ್ಣುರೆಪ್ಪೆಹೊಡೆಯುವಷ್ಟು ಹೊತ್ತಾದರೂ ಭಗವಂತನ ಮೇಲೆ ಪ್ರೇಮವನ್ನು ಮಾಡದೆ ಇರಲೇ ಆರನು. ಈಪ್ರಕಾರ ಪರಭಕ್ತಿಯನ್ನು ಮಾಡುತ್ತಿರುವವನ ಮಹಿಮೆಯನ್ನು ಏನೆಂದು ಹೇಳೋಣ.

"आपूर्यमाणमचलं प्रतिष्ठं
समुद्रमापः प्रविशांति यद्वत् ।
तद्वत्कामा यं प्रविशांति सर्वे
स शांतिमाप्नोति न कामकामी ॥"

ಎಂಬ ಗೀತೋಕ್ತಿಯಂತೆ ನಿರತಿಶಯಾನಂದದಿಂದ ಪರಿಪೂರ್ಣನಾಗಿ ಕ್ಷುದ್ರವಾದ ವಿಷಯಾನಂದದ ಬಯಕೆಯಿಂದ ಅತ್ತಿತ್ತ ನೋಡದವನಾಗಿರುವ ಆ ಮಹಾಪುರುಷನ ಭಾಗಕ್ಕೆ ಇಚ್ಛೆಗಳು ಅಪಾರಜಲರಾಶಿಯಿಂದ ಪರಿಪೂರ್ಣವಾಗಿ ಅಲ್ಲಾಡದೆ ಇರುವ ಸಮುದ್ರವನ್ನು ಪ್ರವೇಶಿಸುವ ನದಿಗಳಂತೆ ಆಗುವವು. ಕಾಮ್ಯಮಾನವಾದ ವಿಷಯಗಳು ಅವನ ಇಂದ್ರಿಯಗಳಿಗೆ ಗೋಚರವಾಗುವವು; ಆದರೆ ಎಷ್ಟೋ ನದಿಗಳು ಬಂದು ಬಿದ್ದವೆಂದು ಉಬ್ಬದೆ, ಬರಲಿಲ್ಲವೆಂದು ತಗ್ಗದೆ ಸಮುದ್ರವು ಏಕರೂಪವಾಗಿ ತುಂಬಿ ನಿಂತಿರುವಂತೆ ಆಪರಮಭಕ್ತನು ವಿಷಯಗಳು ಗೋಚರವಾದಾಗಲೂ ಆಗದಿದ್ದಾಗಲೂ ಯಾವಾಗಲೂ ಯಾವ ಮನೋವಿಕಾರವನ್ನೂ ಪಡೆಯದೆ ಇರುವನು. ಕಾಮಧೇನುವನ್ನು ಕಟ್ಟಿಹಾಕಿಕೊಂಡಿರುವವನು ಗೊಡ್ಡಾಕಳನ್ನು ಹಿಂಡುವದಕ್ಕೇಕೆ ಹೋಗುತ್ತಾನೆ? ಕಲ್ಪವೃಕ್ಷವನ್ನು ಹಿತ್ತಲಲ್ಲಿ ಬೆಳಸಿಕೊಂಡಿರುವವನು ಜಾಲಿಯ ಮರದಿಂದ ಬರುವ ಲಾಭವನ್ನೇಕೆ ಬಯಸುತ್ತಾನೆ? ಚಿಂತಾಮಣಿಯನ್ನು

ಹೃದಯದಲ್ಲಿ ಧಾರಣಮಾಡಿರತಕ್ಕವನು ಕಾಡುಗಲ್ಲಿನ ಮುಂದಕ್ಕೆ ಹೋಗಿ ಏಕೆ ದೇಹಿಯೆನ್ನುತ್ತಾನೆ? ಅಕ್ಷಯಪಾತ್ರೆಯ ಸ್ವಾಮಿಯಾದವನು ಭಿಕ್ಷಾ-ಪಾತ್ರೆಯ ಮುಂದೆ ಏಕೆ ಕೈ ಒಡ್ಡುತ್ತಾನೆ? ಕ್ಷೀರಸಮುದ್ರದ ಅಧಿದೇವತೆ-ಯಾದವನು ಮಜ್ಜಿಗೆಯ ಬಾನಿಯ ಮುಂದೆ ಏಕೆ ಬಾಯಿನೀರು ಕರೆಯು-ತ್ತಾನೆ? ಪರಭಕ್ತಿಯ ಸ್ಥಿತಿಯನ್ನು ಮುಟ್ಟಿದವನು ನಿತ್ಯತೃಪ್ತನು.

"आस्थितस्स हि युक्तात्मा मामेवानुत्तमां गतिम्"

ಎಂದರೆ "ಅವನು ಯಾವಾಗಲೂ ನನ್ನಲ್ಲಿಯೇ ಮನಸ್ಸಿಟ್ಟು ಅನುತ್ತಮಗತಿ-ರೂಪವಾದ ನನ್ನನ್ನೆ ಹೊಂದಿ ಕೃತಕೃತ್ಯನಾಗಿರುವನು" ಎಂದು ಭಗವಂತನು ಹೇಳಿರುವದೇ ಆಜ್ಞಾನಿಯಾದ ಭಕ್ತನ ಸ್ಥಿತಿಯು.

"दुःखेष्वनुद्विग्नमनाः सुखेषु विगतस्पृहः ।
वीतरागभयक्रोधः स्थितधीर्मुनिरुच्यते॥"

ಎಂಬಂತೆ ಅವನ ಮನಸ್ಸು ದುಃಖಬಂದಾಗ ತಗ್ಗುವದಿಲ್ಲ; ಸುಖಬಂದಾಗ ಹಿಗ್ಗುವದಿಲ್ಲ. ದೇಹವಿರುವವರೆಗೂ ಅವನಿಗೆ ಪ್ರಾರಬ್ಧಕರ್ಮಾಯತ್ತವಾದ ಚಿತ್ತವೃತ್ತಿ ಇರುವದರಿಂದ ಸುಖದುಃಖಗಳು ಸಂಘಟಿಸುವವು; ಆದರೆ ಅವುಗಳ ಪರಿಣಾಮವಾದ ಹಿಗ್ಗುವಿಕೆ ತಗ್ಗುವಿಕೆ ಅವನಿಗೆ ಇಲ್ಲ. ಏನಾದ-ರೊಂದನ್ನು ಬಯುಸಿದರಲ್ಲವೆ ಅದು ಸಿಕ್ಕಿದಾಗ ಮನಸ್ಸು ಹಿಗ್ಗಬೇಕು. ಅವ-ನಿಗೆ ಬಯಕೆ ಇಲ್ಲದುದರಿಂದ ಮನಸ್ಸು ಹಿಗ್ಗುವದಿಲ್ಲ. ತನಗೆ ಬೇಕಾದು-ದೊಂದು ಹೋದರೆ ಅಥವಾ ಬೇಡವಾದುದೊಂದು ಬಂದರೆ ಅದರ ಭಯ-ದಿಂದ ಅಥವಾ ಅದರ ಮೇಲಿನ ಕೋಪದಿಂದ ಮನಸ್ಸು ತಗ್ಗಬೇಕು; ಅವನಿಗೆ ಬೇಕೆಂಬುದೂ ಮತ್ತು ಬೇಡವೆಂಬುದೂ ಎರಡೂ ಇಲ್ಲ. ಆದುದರಿಂದ ಅವನ ಮನಸ್ಸಿಗೆ ತಗ್ಗುವಿಕೆ ಇಲ್ಲ. ಮತ್ತು

"यस्सर्वत्रानभिस्नेहस्तत्तत्प्राप्य शुभाशुभम् ।
नाभिनंदति न द्वेष्टि तस्य प्रज्ञा प्रतिष्ठिता ॥"

ಎಂಬಂತೆ ಭಕ್ತನು ತನಗೆ ಹಿತವನ್ನು ಬಯಸುವಂಥ ಹೆಂಡತಿಮಕ್ಕಳಿದ್ದರೂ ಅವರಿಂದ ತಾನು ಸುಖವನ್ನು ಬಯಸುವದಿಲ್ಲವಾದುದರಿಂದ ಅವರನ್ನು ಉಪಚಾರಮಾಡುವದಕ್ಕೂ ಹೋಗುವದಿಲ್ಲ. ತನಗೆ ಅಹಿತವನ್ನು ಬಯಸು-ವಂಥ ಹಗೆಗಳಿದ್ದರೂ ಅವರ ಬಾಧೆಯನ್ನು ತಪ್ಪಿಸಿಕೊಳ್ಳಬೇಕೆಂಬ ಇಚ್ಛೆ-ಯುಂಟಾಗದಿರುವದರಿಂದ ಅವರನ್ನು ನಿಂದಿಸುವದಕ್ಕೂ ಹೋಗುವದಿಲ್ಲ. ಏಕೆಂದರೆ ಅವನು ತನ್ನ ದೇಹಾದಿಗಳನ್ನು ತಾನೆಂದು ಪ್ರೇಮವನ್ನು ಮಾಡು-ತ್ತಿರುವದಿಲ್ಲ. ಒಳ್ಳೆಯದೆ ಆಗಲಿ ಕೆಟ್ಟದ್ದೆ ಆಗಲಿ ಪ್ರಾರಬ್ಧವಶದಿಂದ ಏನೇನು ಬರುತ್ತದೊ ಅದನ್ನು ಉದಾಸೀನದಿಂದ ಕಂಡುಕೊಂಡಿರುವನು. ಅಲ್ಲದೆ

"यदा संहरते चायं कूर्मोऽगानीव सर्वशः ।
इंद्रियाणींद्रियार्थेभ्यस्तस्य प्रज्ञा प्रतिष्ठिता ॥"

ಎಂಬ ಶ್ಲೋಕದ ಅಭಿಪ್ರಾಯದಂತೆ ಆಮೆಯು ತನ್ನ ಅವಯುವಗಳನ್ನೆಲ್ಲ ಒಳಕ್ಕೆ ಸೆಳೆದುಕೊಳ್ಳುವ ಹಾಗೆ ಭಕ್ತನು ಇಂದ್ರಿಯುಗಳನ್ನೆಲ್ಲ ಅವುಗಳ ವಿಷ-ಯುಗಳಿಂದ ಹಿಂದಿರುಗಿಸಿಟ್ಟುಕೊಳ್ಳಬಲ್ಲನು. ಗಿಣಿಯು ಪಂಜರದಲ್ಲಿದ್ದು ಬೇಸರವಾದಾಗ ಹೊರಬಿದ್ದು ಅಲ್ಲಲ್ಲಿ ಹಾರಾಡುತ್ತ ಇರುವದು. ಎಲ್ಲಿ-ಯಾದರೂ ಬೆಕ್ಕಿನ 'ಮಿಯಾವ್' ಎಂಬ ಸದ್ದು ಕೇಳುತ್ತಲೆ ಅದು ಹಾರಿ-ಬಂದು ತನ್ನ ಗೂಡಿನೊಳಕ್ಕೆ ಸೇರಿಕೊಂಡು 'ರಾಮ, ರಾಮ,' ಎಂದು ಕೂಗಿಕೊಳ್ಳುವದು. ಹಾಗೆ ಭಕ್ತನು ತನ್ನ ಮನಸ್ಸು ವಿಕ್ಷೇಪವಾದಾಗ ವ್ಯವಹಾರದಲ್ಲಿ ಪ್ರವರ್ತಿಸಿ ಅತ್ತಿತ್ತ ವಿಷಯುಗಳ ಕಡೆ ಹರಿದಾಡುತ್ತಿರುವನು. ಆವಿಷಯುಗಳು ತನ್ನನ್ನು ನುಂಗುವದಕ್ಕೆ ಬರುತ್ತಲೆ ಮತ್ತೆ ಬೇಕಾದ ಹಾಗೆ ತನ್ನ ಮನಸ್ಸನ್ನು ಏಕಾಗ್ರವಾಗಿ ಮಾಡಿಕೊಂಡು ನಾಮಸ್ಮರಣೆಯಿಂದ ಪರ-ಮಾತ್ಮನ ಸಾನ್ನಿಧ್ಯವನ್ನು ತಂದುಕೊಳ್ಳಬಲ್ಲನು. ಅಥವಾ ಈಅರ್ಥವನ್ನು ಇನ್ನೊಂದುದಾಹರಣೆಯಿಂದ ಇನ್ನೂ ಒಂದು ರೀತಿಯುಲ್ಲಿ ಉದಾಹರಿಸಬಹುದು. ಶ್ರೀಶಂಕರಾಚಾರ್ಯರು

"सदा मोहाटव्यां चरति युवतीनां कुचगिरौ ।
नटत्याशाशाखास्वटति झटिति स्वैरमभितः ॥
कपालिन्भिक्षो मे हृदयकपिमत्यंत चपलम् ।
दृढं भक्त्या बध्वा शिव भवदधीनं कुरु विभो ॥"

ಎಂಬ ಶ್ಲೋಕದಲ್ಲಿ "ಹೆ, ಶಿವ, ಕಪಾಲಿ, ಭಿಕ್ಷುಕ, ಅತ್ಯಂತ ಚಪಲವಾದ ನನ್ನ ಮನಸ್ಸೆಂಬ ಕಪಿಯು ಯಾವಾಗಲೂ ಮೋಹವೆಂಬ ಕಾಡಿನಲ್ಲಿ ಅಲೆಯುತ್ತದೆ; ಸ್ತ್ರೀಯರ ಸ್ತನಗಳೆಂಬ ಪರ್ವತದ ಮೇಲೆ ಕುಣಿಯುತ್ತದೆ; ಆಶೆಯೆಂಬ ಕೊಂಬೆಗಳ ಮೇಲೆ ಹಾರುತ್ತದೆ; ನಾಲ್ಕು ದಿಕ್ಕುಗಳಲ್ಲಿಯೂ ಮನಸ್ಸು ಬಂದ ಹಾಗೆ ಹರಿದಾಡುತ್ತದೆ. ಇದನ್ನು ನೀನು ಭಕ್ತಿಯೆಂಬ ಹಗ್ಗದಿಂದ ಕಟ್ಟಿಕೊಂಡು ನಿನ್ನ ವಶದಲ್ಲಿಟ್ಟುಕೊ" ಎಂದು ಪ್ರಾರ್ಥನೆಮಾಡಿಕೊಂಡಿರುವ ಪ್ರಕಾರ ಭಗವಂತನು ಭಕ್ತರ ಮನಸ್ಸನ್ನು ಭಕ್ತಿಯೆಂಬ ರಬ್ಬರಿನಂಥ ಹಗ್ಗದಿಂದ ಕಟ್ಟಿ ಹಿಡಿದುಕೊಂಡಿರುತ್ತಾನೆ. ಕಪಿಯು ಚಪಲದಿಂದ ಅತ್ತಿತ್ತ ಹೋದರೂ ಭಿಕ್ಷುಕನನ್ನೇನೂ ಬಿಟ್ಟುಹೋಗಿರುವದಿಲ್ಲ. ಎಷ್ಟು ಹರಿದಾಡಿದರೂ ಅವನ ಸುತ್ತಲೆ. ಅದೇ ಪ್ರಕಾರ ಭಕ್ತನು ವ್ಯವಹಾರದಲ್ಲಿ ಪ್ರವರ್ತಿಸಿ ಎಷ್ಟು ಮುಂದೆ ಬಿದ್ದರೂ ಭಗವಂತನ ಸಂಬಂಧವನ್ನು ಬಿಟ್ಟು ಹೋಗಿರುವದಿಲ್ಲ. ಅವನಿಗೂ ಭಗವಂತನಿಗೂ ಸಂಬಂಧಗೊಳಿಸಿರುವಂಥ ರಬ್ಬರಿನಂತಿರುವ ಭಕ್ತಿಯೆಂಬ ಹಗ್ಗವು ಅವನನ್ನು ಭಗವಂತನ ಕಡೆಗೆ ಜಗ್ಗುತ್ತಲೆ ಇರುವದು. ಹಿಂದಿರುಗಬೇಕೆಂಬ ಕಲ್ಪನೆಯನ್ನು ಮನಸ್ಸಿಗೆ ತಂದುಕೊಂಡರೆ ಸಾಕು. ಸ್ಥಿತಿಸ್ಥಾಪಕಧರ್ಮವುಳ್ಳ ರಬ್ಬರಿನಂಥ ಆಭಕ್ತಿಪಾಶವು ಒಮ್ಮೆಗೇ ಅವನನ್ನು ವಿಷಯಗಳಿಂದ ಸೆಳೆದು ಸ್ವಸ್ವರೂಪಾನುಸಂಧಾನದಲ್ಲಿ ನಿಲ್ಲಿಸಿಬಿಡುವದು. ಭಕ್ತನು ಭಗವಂತನನ್ನು ಹಿಡಿದಿದ್ದ ಪಕ್ಷದಲ್ಲಿ ಅವನು ಕೈಬಿಟ್ಟು ಬೀಳುವ ಸಂಭವವುಂಟು. ಭಗವಂತನೇ ಭಕ್ತನನ್ನು ಹಿಡಿದಿರುವದರಿಂದ ಅವನಿಗೆ ಭಗವಂತನ ಸಂಬಂಧವು ತಪ್ಪೀತೆಂಬ ಭಯವೇ ಇಲ್ಲ. ಗೌಣೀಭಕ್ತಿಯನ್ನು ಮಾಡುವಾಗ ಭಕ್ತನು ಭಗವಂತನನ್ನು ಹಿಡಿದಿರುವನು.

ಪರಭಕ್ತಿ ಮೈಗೂಡಿದಾಗ ಭಗವಂತನೇ ಭಕ್ತನನ್ನು ಹಿಡಿದಿರುವನು. ಆದುದರಿಂದ ವಿಷಯುಗಳ ಹೆದರಿಕೆ ಅವರಿಗಿಲ್ಲ. ಹೀಗೆ ವಿಷಯುಗಳಿಂದ ಹಿಂದಿರುಗುವದನ್ನು ಸಾಧಕನು ಕೂಡ ಅಭ್ಯಾಸಮಾಡುವನಲ್ಲ! ಎಂದರೆ

"विषया विनिवर्तंते निराहारस्य देहिनः ।
रसवंर्ज रसोऽप्यस्य परं दृष्ट्वानिवर्तते ॥"

ಎಂಬಂತೆ ವಿಷಯುಗಳಿಂದ ಇಂದ್ರಿಯುಗಳನ್ನು ಹಿಂದಿರುಗಿಸಿ ತಂದವನಿಗೆ ವಿಷಯುಗಳು ಬಿಟ್ಟುಹೋದರೂ ಅವುಗಳ ಮೇಲಿನ ಅನುರಾಗವು ಇದ್ದೇ ಇರುವದು. ನಿರತಿಶಯಾನಂದದಲ್ಲಿ ಮಗ್ನನಾಗಿರುವ ಭಕ್ತನಿಗೆ ಆಅನುರಾಗವು ಕೂಡ ನಿರ್ಬೀಜವಾಗುವದು. ಈಮಹಾನುಭಾವನ ಸ್ಥಿತಿಯನ್ನು

"या निशिं सर्वभूतानां तस्यां जागर्ति संयमी ।
यस्यां जाग्रति भुतानि सा निशा पश्यतो मुनेः॥"

ಎಂಬ ಶ್ಲೋಕವು ಚೆನ್ನಾಗಿ ಹೇಳುವದು. ಪರಮಾತ್ಮಸ್ವರೂಪವೆಂಬುದು ಸರ್ವಪ್ರಾಣಿಗಳಿಗೂ ರಾತ್ರಿಯಂತೆ ಇದೆ. ಲೋಕದಲ್ಲಿ ರಾತ್ರಿಕಾಲದಲ್ಲಿ ನಿದ್ರೆಮಾಡುವ ಜನರಿಗೆ ರಾತ್ರಿಕಾಲವೇ ಕಾಣುವದಿಲ್ಲ. ಹಾಗೆ ಪರಮಾತ್ಮಸ್ವರೂಪವೆಂಬ ರಾತ್ರಿಯಲ್ಲಿ ಎಲ್ಲರೂ ಅಜ್ಞಾನಪರವಶರಾಗಿರುವದರಿಂದ ಆ ಪರಮಾತ್ಮಸ್ವರೂಪವನ್ನು ನೋಡಲಾರರು. ಆ— ಸರ್ವಪ್ರಾಣಿಗಳಿಗೂ ರಾತ್ರಿಸ್ವರೂಪವಾದ— ಪರಮಾತ್ಮಸ್ವರೂಪವನ್ನು ಜಿತೇಂದ್ರಿಯನಾದ ಭಕ್ತನು ಜಾಗರೂಕನಾಗಿ ನೋಡುತ್ತಿರುವನು. ಸರ್ವಪ್ರಾಣಿಗಳೂ ಜಾಗರೂಕರಾಗಿ ನೋಡುತ್ತಿರುವ ಪ್ರಪಂಚವ್ಯವಹಾರರೂಪವಾದ ಅಜ್ಞಾನಾವಸ್ಥೆಯು ಆಭಕ್ತನಿಗೆ ಅಪ್ರಕಾಶರೂಪವಾಗುವದು. ಇದರ ಒಟ್ಟುಸಾರಾಂಶವನ್ನು ಒಂದು ಮಾತಿನಲ್ಲಿ ಹೇಳಬೇಕಾದರೆ ಪ್ರಾಪಂಚಿಕರಿಗೆ ದೇವರ ಕಡೆಯ ಲಕ್ಷ್ಯವೆಷ್ಟುರಮುಟ್ಟಗಿರುವದೊ ಭಕ್ತರಿಗೆ ಪ್ರಪಂಚದ ಕಡೆಯ ಲಕ್ಷ್ಯವಷ್ಟೆ. ಹಾಗೆಯೆ ಪ್ರಾಪಂಚಿಕರಿಗೆ ವ್ಯವಹಾರದ ಕಡೆಯ ಲಕ್ಷ್ಯವೆಷ್ಟು ಬಲವತ್ತರವೊ ಭಕ್ತ-

ರಿಗೆ ಭಗವಂತನ ಕಡೆಯ ಲಕ್ಷ್ಯವಷ್ಟು ಬಲವತ್ತರವಾಗಿರುವದು. ಹೀಗೆ ಅವನಿಗೆ ಅಖಂಡಭಗವಚ್ಚಿಂತನವು ದೃಢವಾಗಿರುವದರಿಂದ ಪ್ರಪಂಚವನ್ನೆಲ್ಲ ಅವನು ಪರಮಾತ್ಮನ ಸಗುಣಸ್ವರೂಪವೆಂದು ಕಾಣುವನು.

"विष्टभ्याहमिदं कृत्स्नमेकांशेन स्थितो जगत्"

ಎಂದು ಶ್ರೀಕೃಷ್ಣನು ಗೀತೆಯಲ್ಲಿ ಹೇಳಿರುವಂತೆ ಸಮಸ್ತಬ್ರಹ್ಮಾಂಡವೂ ಭಗವಂತನ ಒಂದಂಶವೆಂದು ಭಾವಿಸುತ್ತ

"विद्याविनयसंपन्ने ब्राह्मणे गवि हस्तिनि ।
शुनि चैव श्वपाके च पंडिताः समदर्शिनः ॥"

ಎಂಬ ಗೀತೋಕ್ತಿಯಂತೆ ವಿದ್ಯಾವಿನಯಸಂಪನ್ನನಾದ ಬ್ರಾಹ್ಮಣನಲ್ಲಿಯೂ, ಆಕಳಲ್ಲಿಯೂ, ಆನೆಯಲ್ಲಿಯೂ, ನಾಯಲ್ಲಿಯೂ ಚಂಡಾಲನಲ್ಲಿಯೂ ಸಮಬುದ್ಧಿಯನ್ನು ತೋರಿಸುತ್ತಿರುವನು. ಹಾಗಾದರೆ ಒಬ್ಬ ಬ್ರಾಹ್ಮಣನು ಒಂದು ನಾಯಿಯನ್ನು ಒಂದು ತೊಡೆಯ ಮೇಲೆಯೂ ಒಬ್ಬ ಚಂಡಾಲನನ್ನು ಇನ್ನೊಂದು ತೊಡೆಯ ಮೇಲೆಯೂ ಹೀಗೆ ಕೂಡಿಸಿಕೊಂಡರಲ್ಲವೆ ಸಮಬುದ್ಧಿಯನ್ನು ತೋರಿಸಿದಂತಾಗುವದು? ಭಕ್ತರು ಹೀಗೆ ಮಾಡುವರೊ? ಎಂದರೆ ಎಂದಿಗೂ ಇಲ್ಲ. ಹಾಗೆ ಮಾಡುವವರು ಕೇವಲ ಅವಿವೇಕಿಗಳು. **"पंडिताः समदर्शिनः"** ಎಂಬ ಶಬ್ದಗಳನ್ನು ಇನ್ನೊಮ್ಮೆ ಮನಸ್ಸಿಗೆ ತಂದುಕೊಂಡು ನೋಡಿರಿ. ವಿವೇಕಿಗಳು ಸಮದರ್ಶಿಗಳಾಗುವರೆಂದು ಅದರ ಅರ್ಥ. ಒಂದು ತೊಡೆಯ ಮೇಲೆ ನಾಯನ್ನೂ ಇನ್ನೊಂದು ತೊಡೆಯ ಮೇಲೆ ಹೊಲೆಯನನ್ನೂ ಕೂಡಿಸಿಕೊಳ್ಳುವದರಲ್ಲಿ ವಿವೇಕವೆಲ್ಲಿ ಬಂತು? ಸಮದೃಷ್ಟಿಯನ್ನು ಮಾಡುವದಕ್ಕೆ ವಿವೇಕವು ಬೇಕು. ಯಾರ ಯಾರ ಯೋಗ್ಯತೆಯು ಎಷ್ಟೆಂಬುದನ್ನು ತಿಳಿದು ಅದಕ್ಕೆ ತಕ್ಕಂತೆ ಮಾಡುವದೇ ವಿವೇಕ. ಒಬ್ಬ ಗೃಹಸ್ಥನು ಬೀಗರಿಗೆ ಔತನವನ್ನು ಮಾಡಬೇಕೆಂದು ಅವರನ್ನು ಕರೆದು ದೊಡ್ಡ ಪೀಠವನ್ನು ಹಾಕಿ ಸುತ್ತಲೂ ರಂಗವಲ್ಲಿಯ ಚಿತ್ರಗಳನ್ನು ರಚಿಸಿ ಬೆಳ್ಳಿಯ ತಟ್ಟೆಗಳನ್ನೂ ಬಟ್ಟಲುಗಳನ್ನೂ ಇಟ್ಟು ವಿವಿಧಪಕ್ವಾನ್ನಗಳನ್ನೂ

ಬಡಿಸಿ ಎಡೆಯ ಮುಂದೆ ಧೂಪದ ಕಡ್ಡಿಗಳನ್ನೂ ದೀಪಗಳನ್ನೂ ಇಟ್ಟು ಭೋಜನವನ್ನು ಮಾಡಿಸಿ ಪೂಗೀಫಲ, ನಾಗವಲ್ಲಿಯ ದಳ ಮತ್ತು ಕರ್ಪೂರ-ಚೂರ್ಣಮೊದಲಾದವುಗಳಿಂದ ಕೂಡಿದ ತಾಂಬೂಲವನ್ನು ಕೊಟ್ಟು ಉಪ-ಚರಿಸುವರು. ಈಉಪಚಾರಗಳಲ್ಲೇನಾದರೂ ಕೊರತೆಯಾದರೆ ಬೀಗರು ತಮ್ಮ-ನ್ನು ತಿರಸ್ಕಾರಬುದ್ಧಿಯಿಂದ ಕಂಡನೆಂದು ಆಗ್ರಹಸ್ಥನನ್ನು ದೂರುವರು. ಬೀಗರಿಗೆ ಹೀಗೆ ಉಪಚಾರ ಮಾಡುವಾಗ ಒಬ್ಬ ತಿರುಕನು ಬಂದು ಒದರಿದರೆ, ಒಬ್ಬ ಹೊಲೆಯನು ಬಂದು ಹೊಟ್ಟೆಗೆ ಕೇಳಿದರೆ, ಒಂದು ನಾಯಿ ಬಂದು ದೈನ್ಯದಿಂದ ನಾಲಿಗೆಯನ್ನು ಮುಂದಕ್ಕೆ ಚಾಚಿದರೆ ಸಮದೃಷ್ಟಿಯನ್ನು ಮಾಡ-ಬೇಕೆಂದು ಬೀಗರ ಜೊತೆಗೆ ತಿರುಕನನ್ನೂ ಹೊಲೆಯನನ್ನೂ ನಾಯನ್ನೂ ಕೂಡಿಸಬೇಕೇನು? ಹಾಗೆ ಮಾಡಿದರೆ ಎಂಥ ಅನರ್ಥವಾಗುವದು! ನಾಗರಿಕ-ರಾದ ಬೀಗರ ಪಙ್ಕ್ತಿಗೆ ತಿರುಕನೂ ಹೊಲೆಯನೂ ಹೇಗೆ ಯೋಗ್ಯರಾದಾರು? ಬೀಗರ ಉಪಚಾರಗಳ ಸುಖವನ್ನು ಆಕಳೂ ಆನೆಯೂ ನಾಯೂ ಹೇಗೆ ಅನುಭವಿಸಬಲ್ಲವು? ತಿರುಕರೇ ಮೊದಲಾದವರು ಹೊರಗೆ ದೈನ್ಯದಿಂದ ನಿಂತಿರುವಾಗ ಅವರನ್ನು ಬಯ್ದು ಅಟ್ಟದೆ ಕನಿಕರದಿಂದ ಎಂಜಲೆಲೆಗಳನ್ನು ಅದ ರಲ್ಲಿ ಉಳಿದಿರುವ ಶೇಷಪದಾರ್ಥಗಳೊಡನೆ ತಂದು ಅವರಿಗೆ ಹಾಕಬೇಕು. ಇಷ್ಟಾ ದರೆ ಸಾಕು; ಅವರಿಗೆ ಬ್ರಹ್ಮಾನಂದವಾಗುವದು. ಭಕ್ತನು ಬೀಗರ ಜೊತೆಗೆ ತಿರುಕರೇ ಮೊದಲಾದರನ್ನು ಸೇರಿಸುವಷ್ಟು ವ್ಯವಹಾರಮೂಢನಲ್ಲ. ಅವ-ರವರ ಯೋಗ್ಯತೆಯ ಮೇಲೆ ಅವರವರು ಇಚ್ಛಾ ಮಾಡುತ್ತಾರೆ. ಅವರವರ ಯೋಗ್ಯತೆಯನ್ನು ನೋಡಿ ಅದಕ್ಕೆ ತಕ್ಕಂತೆ ಅವರವರನ್ನು ಸಮಾಧಾನಮಾ-ಡುವದೇ ಸಮದೃಷ್ಟಿ.

ಇನ್ನೂ ಆಭಕ್ತಶಿಖಾಮಣಿಯ ನಡವಳಿಕೆಯನ್ನೇನೆಂದು ಹೇಳಬೇಕು! ತನ್ನ ಮೇಲೆ ಯಾರಾದರೂ ವಿರೋಧವನ್ನು ಮಾಡಿದರೂ ಅವನು ಅವರ ನ್ನು ದ್ವೇಷಿಸುವದಿಲ್ಲ. ಪರಮಾತ್ಮವಿಷಯವನ್ನು ಪ್ರೀತಿಮಾಡುವವರ ಮೇಲೆ ತಾನೂ ಪ್ರೀತಿಮಾಡುವನು. ಸಂಸಾರದುಃಖದಲ್ಲಿ ಮಗ್ನರಾಗಿರುವವರನ್ನು ನೋಡಿ ಕನಿಕರಪಡುವನು. ನಾನು ನನ್ನದೆಂಬ ಈಎರಡು ಬಗೆಯ ಅಭಿ-ಮಾನವೂ ಅವನಿಗಿರುವದಿಲ್ಲ. ಅವನಿಗೆ ಸುಖದುಃಖಾದಿಗಳೇನಾದರೂ ಬಂದ

ರೆ ಅವನು ಜಾಗ್ರತ್ಕಾಲದಲ್ಲಿ ಸ್ವಪ್ನಸುಖದುಃಖಾದಿಗಳನ್ನು ಭಾವಿಸುವ ಹಾಗೆ ಹರ್ಷವಿಷಾದಗಳನ್ನು ಪಡೆಯದೆ ಇರುವನು. ಯಾವ ನಿಂದಾಸ್ತುತಿಗಳೂ ಅವನ ಮೇಲೆ ಯಾವ ವಿಕಾರವನ್ನೂ ಮಾಡಲಾರವು. ಅನ್ನಪಾನಾದಿಗಳು ಸಿಕ್ಕಲಿ ಸಿಕ್ಕದಿರಲಿ ಅವನ ತೃಪ್ತಿಗೆ ಕೊರತೆ ಇರುವದಿಲ್ಲ. ಯಾರಿಂದಲೂ ಅವನು ಉದ್ವಿಗ್ನನಾಗುವದಿಲ್ಲ. ಅವನು ಯಾರನ್ನೂ ಉದ್ವೇಗಗೊಳಿಸು-ವದೂ ಇಲ್ಲ. ತಾನು ಮಾಡುವ ಕರ್ಮಗಳಿಗೆ ಯಾವ ಫಲೇಚ್ಛೆಯೂ ಇರುವದಿಲ್ಲ; ಯಾವದೊಂದು ನಿಯಮಿತ ಕಾರ್ಯವನ್ನೂ ಆರಂಭಮಾಡುವ-ದಿಲ್ಲ; ಭಿಕ್ಷಾಟನಾದಿ ಕರ್ಮಗಳನ್ನು ಮಾಡುವಾಗ ಕೂಡ ಅದರಲ್ಲಿ ಕರ್ತೃತ್ವ-ಬುದ್ಧಿಯನ್ನು ಬಿಟ್ಟು ಉದಾಸೀನನಾಗಿ ಮಾಡುವನು. ಅವನು ಸರ್ವಪ್ರಾ-ಣಿಗಳಲ್ಲಿಯೂ ಭಗವತ್ಸ್ವರೂಪವನ್ನೂ ಭಗವಂತನಲ್ಲಿ ಸರ್ವಪ್ರಾಣಿಗಳನ್ನೂ ನೋಡುವನು. ತನ್ನ ಜಾತಿ, ತನ್ನ ಕರ್ಮ, ತನ್ನ ಆಶ್ರಮ ಮೊದಲಾದ ಯಾವ ದುರಭಿಮಾನವೂ ಅವನಿಗೆ ಇರುವದಿಲ್ಲ. ಹದಿನಾಲ್ಕು ಲೋಕಗಳನ್ನೂ ಧಾರೆಯೆರೆಯುತ್ತೇನೆಂದು ಕಾಲಿಗೆ ಬಿದ್ದರೂ ಅವನು ತನ್ನ ಭಗವದನು-ಸಂಧಾನವನ್ನು ಬಿಟ್ಟು ಬರುವದಕ್ಕೊಪ್ಪುವದಿಲ್ಲ. ಭಗವತ್ಪ್ರೇಮದ ವೇಗವು ಅವನ ತಲೆಗೆ ಚೆನ್ನಾಗಿ ಏರಿರುವದು. ಅವನು ಭಗವತ್ಸ್ವರೂಪವೆಂಬ ಆನಂದ ಸಮುದ್ರದಲ್ಲಿ ಮುಳುಗಿರುವದರಿಂದ ಆಆನಂದರಸವು ಅವನ ಕಣ್ಣು-ಕಿವಿ ಮೂಗು ಮೊದಲಾದ ರಂಧ್ರಗಳಲ್ಲೆಲ್ಲ ವ್ಯಾಪಿಸಿರುವ ಕಾರಣ ಅವನ ಸರ್ವೇಂದ್ರಿಯಗಳಿಗೂ ಭಗವಂತನೇ ವಿಷಯನಾಗಿರುವನು. ಪ್ರಾಪಂಚಿಕ ವಿಷಯಗಳ ಭಾಗಕ್ಕೆ ಅವನು ಕಣ್ಣಿದ್ದೂ ಕುರುಡ; ಕಿವಿ ಇದ್ದೂ ಕಿವುಡ; ನಾಲಿಗೆ ಇದ್ದೂ ಮೂಕ. ಅವನು ನೋಡುವದೂ ದೇವರನ್ನು; ಕೇಳು-ವದೂ ದೇವರನ್ನು; ರುಚಿನೋಡುವದೂ ದೇವರನ್ನು; ಮೂಸಿನೋಡುವದೂ ದೇವರನ್ನು; ಮುಟ್ಟಿನೋಡುವದೂ ದೇವರನ್ನು. ಹೀಗೆ ಅವನು ತನ್ಮಯ-ನಾಗಿ ಒಂದುಸಲ ಭಗವನ್ಮೂರ್ತಿಯ ಆಟಪಾಟಗಳನ್ನು ನೆನಸಿಕೊಂಡು ದೊಡ್ಡದಾಗಿ ನಗುವನು; ಒಂದುಸಲ ಭಗವಂತನ ಚರಿತ್ರೆಯಲ್ಲಿ ಸೀತಾವಿರ-ಹಾದಿದುಃಖಗಳನ್ನು ನೆನಸಿಕೊಂಡು ಬಿಕ್ಕಿಬಿಕ್ಕಿ ಅಳುವನು; ಒಂದುಸಲ ಬಗೆಬಗೆಯಾಗಿ ಅವನ ಯಶಸ್ಸನ್ನು ಗಾನಮಾಡುವನು; ಒಂದುಸಲ ನಾಲ್ಕು

ದಿಕ್ಕುಗಳೂ ಬಿರಿದುಹೋಗುವ ಹಾಗೆ ಸುಮ್ಮನೆ ಭಗವಂತನ ನಾಮಗಳನ್ನು ಹಿಡಿದು ಕೂಗುವನು; ಒಂದುಸಲ ಅವನ ಲೀಲೆಗಳನ್ನು ಸ್ಮರಿಸಿಕೊಂಡು ಕುಣಿಯುವನು. ಪರಮಾನಂದದ ವೇಗದಿಂದ ಭಕ್ತನು ಹೀಗೆಲ್ಲ ಮಾಡುವನು. ಪ್ರಾಪಂಚಿಕರಲ್ಲಿಯೂ ನೋಡಿ. ಬಹು ದಿನಗಳ ಹಿಂದೆ ದೂರದೇಶಕ್ಕೆ ಹೋಗಿದ್ದ ತನ್ನ ಪತಿಯು ಮನೆಗೆ ಬಂದಾಗ ಆಸಾಧ್ವಿಯಾದ ಹೆಂಡತಿಯ ನಡವಳಿಕೆಯನ್ನು ನೆನೆಸಿಕೊಳ್ಳಿರಿ. ಬಹುದಿನಗಳಿಂದ ಅಗಲಿದ್ದ ಪತಿಯನ್ನು ಕಾಣುತ್ತಲೆ ಆಸಾಧ್ವಿಗೆ ಅತ್ಯಾನಂದದಿಂದ ಕಾಣುವದೂ ಪತಿ; ಕೇಳುವದೂ ಪತಿ; ರುಚಿನೋಡುವದೂ ಪತಿ; ಮೂಸಿ ನೋಡುವದೂ ಪತಿ; ಮುಟ್ಟಿನೋಡುವದೂ ಪತಿ. ಹೀಗಾಗಿ ಆಕೆಯು ನಗಲೂ ಬಹುದು; ಅಳಲೂ ಬಹುದು; ಸಂಭ್ರಮದಿಂದ ಕಾಲುಂಗುರವನ್ನು ಮೂಗಿಗೆ ಸಿಕ್ಕಿಸುವದಕ್ಕೆ ಹೋಗಲೂ ಬಹುದು. ರಾಜರ ಪುರಪ್ರವೇಶ ಮುಂತಾದ ಸಂಭ್ರಮಕಾಲಗಳಲ್ಲಿ ಸ್ತ್ರೀಯರು ಹೀಗೆ ಮಾಡುತ್ತಿದ್ದರೆಂದು ಕಾವ್ಯಗಳಲ್ಲಿ ಸಹ ಬಂದಿರುವದು. ಶ್ರೀಕೃಷ್ಣಪರಮಾತ್ಮನು ಮನೆಗೆ ಬಂದಾಗ ವಿದುರನ ಹೆಂಡತಿಯು ಆಸಂಭ್ರಮದಲ್ಲಿ ಸುಲಿದ ಬಾಳೆಯ ಹಣ್ಣನ್ನು ಕೆಳಕ್ಕೆ ಬಿಸುಟು ಕೃಷ್ಣನಿಗೆ ಸಿಪ್ಪೆಯನ್ನು ತಿನ್ನಿಸುತ್ತಿದ್ದಳಂತೆ. ಸಂಭ್ರಮಕಾಲಕ್ಕೆ ಹೀಗೆ ಮಾಡುವದೇ ಭೂಷಣ. ಇದೇ ಅದರ ಬಹಿರಂಗಲಕ್ಷಣ. ಇದರಷ್ಟು ಪ್ರೇಮಗರ್ಭಿತವಾದುದಾವದೂ ಇಲ್ಲ. ಸ್ವಲ್ಪ ಹೊತ್ತಿನ ಮೇಲೆ ವಿದುರನು ಮನೆಗೆ ಬಂದು ನೋಡಿ ತನ್ನ ಹೆಂಡತಿ ದಡ್ಡಳೆಂದು ಆಕೆಯನ್ನು ಹಿಂದಕ್ಕೆ ತಳ್ಳಿ ತಾನು ಒಳ್ಳೆ ಕಳಿತ ಹಣ್ಣನ್ನು ಕೃಷ್ಣನ ಬಾಯಿಗಿಟ್ಟಾಗ ಕೃಷ್ಣನು "ವಿದುರ, ಇದೇಕೆ ಇಷ್ಟು ಸಪ್ಪಗಿದೆ?" ಎಂದನಂತೆ. ಕೃಷ್ಣನಿಗೆ ಮಧುರವಾದುದು ಸಂಭ್ರಮರೂಪವಾಗಿ ಪರಿಣಮಿಸಿದ ಪ್ರೇಮವಲ್ಲದೆ ಮತ್ತಾವುದು?

ಭಕ್ತರಲ್ಲಿ ಇನ್ನೊಂದು ವಿಶೇಷವೇನೆಂದರೆ ಇವರು ಮೋಕ್ಷವನ್ನೆಂದಿಗೂ ಬಯಸುವದಿಲ್ಲ. ಲೋಕದಲ್ಲಿ ಜನರು ತಾವು ಸಕ್ಕರೆಯನ್ನು ತಿನ್ನುವವರಾಗಿರಬೇಕೆಂದು ಬಯಸುವರೇ ಹೊರತು ತಾವೇ ಸಕ್ಕರೆಯಾಗಬೇಕೆಂದು ಯಾರೂ ಬಯಸುವದಿಲ್ಲ. ಮೋಕ್ಷದಲ್ಲೇನಿದೆ? ಮಿಟಮಿಟಸ್ವರ್ಗ. ಶ್ರೀ ಕುಲಶೇಖರಮುನಿ ರಚಿತವಾದ ಈಶ್ಲೋಕವನ್ನು ನೋಡಿರಿ.

"नाहं वंदे तव चरणयोर्द्वंद्वमद्वंद्वहेतोः
कुंभीपाकं गुरुमपि हरे नारकं नापनेतुम् ।
रम्या रामा मृदुतनुलता नंदने नापि रंतुम्
भावे भावे हृदयभवने भावयेयं भवंतम् ॥"

ಎಂದರೆ ಹೆ, ಹರಿ, ಸುಖದುಃಖಾದಿಗಳ ತೊಡಕನ್ನು ತಪ್ಪಿಸಿಕೊಳ್ಳಬೇಕೆಂದಾಗಲಿ, ನರಕಸಂಬಂಧವಾದ ದೊಡ್ಡ ಯಮಯಾತನೆಯನ್ನು ಪರಿಹರಿಸಿಕೊಳ್ಳಬೇಕೆಂದಾಗಲಿ, ನಂದನವನದಲ್ಲಿ ಸರ್ವಾಂಗಸುಂದರಿಯಾದ ಸ್ತ್ರೀಯೊಡನೆ ವಿಹಾರಮಾಡಬೇಕೆಂದಾಗಲಿ ಬಯಸಿ ನಿನಗೆರಗುವದಿಲ್ಲ. ಜನ್ಮಜನ್ಮದಲ್ಲಿಯೂ ನನಗೆ ನಿನ್ನ ಧ್ಯಾನವೇ ಪರಮಲಾಭವು. ಬೇರೆಯಾಗಿದ್ದು ಭಕ್ತಿಯನ್ನು ಮಾಡುವರಲ್ಲಿರುವ ಆಂನದದ ರುಚಿಯನ್ನು ತಿಳಿದವರು ಮೋಕ್ಷವನ್ನೆಂದಿಗೂ ಬಯಸುವದಿಲ್ಲ. ಒಂದುದಿನ ನಾರದರು ಒಂದು ಕಡೆ ಹೋಗುತ್ತಿದ್ದರು. ದಾರಿಯಲ್ಲಿ ಒಬ್ಬ ಯೋಗಿಯು ಆಸನವನ್ನು ಹಾಕಿಕೊಂಡು ಶ್ವಾಸಗಳನ್ನು ಏರಿಸಿಕೊಂಡು ಧ್ಯಾನಾರೂಢನಾಗಿದ್ದನು. ಆಪ್ರದೇಶಕ್ಕೆ ನಾರದರ ಪ್ರವೇಶವಾಗುತ್ತಲೆ ಅಪೂರ್ವವಾದ ಒಂದು ದಿವ್ಯಜ್ಯೋತಿಯು ಎಲ್ಲ ಕಡೆಗೆ ಹರಡಿಕೊಂಡಂತಾಗಲು ಆಯೋಗಿಯು ಶ್ವಾಸವನ್ನಿಳಿಸಿ ನಾರದರನ್ನು ನೋಡಿ ಆತನು ಮಹಾಪುರುಷನೆಂದು ತಿಳಿದು ನೀವು ಯಾರೆಂದು ಕೇಳಿದನು. ನಾರದರು ತಮ್ಮ ಹೆಸರನ್ನು ಹೇಳಿದರು. ಯೋಗಿಯು ಈಗ ನೀವು ಎಲ್ಲಿಗೆ ಹೋಗುತ್ತೀರೆಂದು ಮತ್ತೆ ಕೇಳಿದನು. ವೈಕುಂಠಕ್ಕೆ ಹೋಗಿ ಬರುತ್ತೇನೆಂದು ನಾರದರು ಹೇಳಿದರು. ಆಗ ಯೋಗಿಯು ದೈನ್ಯದಿಂದ ಅವರಿಗೆ ಅಡ್ಡಬಿದ್ದು "ಮಹಾಸ್ವಾಮಿ, ತಮ್ಮಿಂದ ನನಗೊಂದು ಮಹದುಪಕಾರವಾಗಬೇಕು" ಎಂದು ಕೈಜೋಡಿಸಿ ಬೇಡಿಕೊಂಡನು. ನಾರದರು 'ಆಗಲಿ' ಎಂದರು. ಆಗ ಯೋಗಿಯು "ಸ್ವಾಮಿ, ತಾವು ವೈಕುಂಠಕ್ಕೆ ಹೋದಾಗ ದೇವರು ನನಗೆ ಯಾವಾಗ ಮುಕ್ತಿಯನ್ನು ಕೊಡುತ್ತಾನೆಂಬುದನ್ನು ಮರೆಯದೆ ತಿಳಿದುಕೊಂಡು ಬನ್ನಿ" ಎಂದು ಕೇಳಿದನು. "ಹಾಗೆ ಮಾಡುತ್ತೇನೆ" ಎಂದು ನಾರದರು ಮುಂದೆ

ಹೋದರು. ಅಲ್ಲೊಬ್ಬ ಭಕ್ತನು ಕೈಯಲ್ಲಿ ತಾಳವನ್ನು ಹಾಕುತ್ತ, ಕಣ್ಣು-ಗಳಿಂದ ಆನಂದಾಶ್ರುವನ್ನೂ ಮೈಯಿಂದ ಬೆಮರನ್ನೂ ಸುರಿಸುತ್ತ, ರೋ-ಮಾಂಚಗಳಿಂದ ಕೂಡಿದವನಾಗಿ, ಗದ್ಗದಸ್ವರದಿಂದ ಹಾಡುತ್ತ ಕುಣಿಯು-ತ್ತಿದ್ದನು. ನಾರದರು ತಾವಾಗಿ ಅವನ ಮುಂದೆ ಬಂದು ನಿಂತರು. ತಂಬೂರಿಯನ್ನು ಮಿಾಟುತ್ತ ಹಾಡುತ್ತಿದ್ದ ಅವರನ್ನು ನೋಡಿ ಅವರು ಮಹಾ ಭಕ್ತರೆಂದು ಭಕ್ತನು ಅವರಿಗೆ ವಿನಯದಿಂದ ವಂದಿಸಿದನು. ಆಗ ನಾರದರು "ನಾನು ವೈಕುಂಠಕ್ಕೆ ಹೋಗಿಬರುತ್ತೇನೆ. ಅಲ್ಲಿ ನನ್ನಿಂದ ನಿನಗೇನಾದರೂ ಕೆಲಸವಾಗತಕ್ಕದ್ದುಂಟೆ?" ಎಂದು ಕೇಳಿದರು. ಆಗ ಭಕ್ತನು "ಪರಮಾತ್ಮ-ನಿಗೆ ನನ್ನ ನಮಸ್ಕಾರವನ್ನು ತಿಳಿಸಬೇಕು. ಇದಕ್ಕಿಂತ ಹೆಚ್ಚಿನದು ನನಗೆ ಯಾವದೂ ಇಲ್ಲ" ಎಂದು ಹೇಳಿದನು. ಆದರೂ ನಾರದರು "ನಿನಗೆ ಮೋಕ್ಷ-ವೆಂದಾಗುವದೊ ಪರಮಾತ್ಮನಿಂದ ತಿಳಿದುಕೊಂಡು ಬರುತ್ತೇನೆ" ಎಂದು ಹೇಳಿ ಅಲ್ಲಿಂದ ಹೊರಟುಹೋಗಿ ತಿರುಗಿ ಬರುತ್ತ ಮೊದಲಿನ ಯೋಗಿಯ ಮುಂದೆ ಬಂದು ನಿಂತರು. ಆಗ ಯೋಗಿಯು ಬಹು ಸಂಭ್ರಮದಿಂದ ಅಡ್ಡಬಿದ್ದು ತನಗೆ ಬೇಕಾದ ಸುದ್ದಿಯನ್ನು ಕೇಳಿದನು. ಆಗ ನಾರದರು "ಯೋಗೀಶ್ವರ, ನಿನಗೆ ಮುಂದಿನ ಜನ್ಮದಲ್ಲಿಯೇ ಮುಕ್ತಿ ಸಿಕ್ಕುವದು" ಎಂದನು. ಈಮಾತು ಕಿವಿಗೆ ಬೀಳುತ್ತಲೆ ಯೋಗಿಯು ಎದೆ ಬಿರಿದುಹೋಯಿತು. "ಇಷ್ಟು ಕಷ್ಟ ಪಟ್ಟು ದೇಹದಂಡನೆಯನ್ನು ಮಾಡಿ ಹಠಯೋಗಾದಿಗಳನ್ನು ಸಾಧಿಸಿದರೂ ಇನ್ನೂ ಒಂದು ಜನ್ಮವನ್ನು ಎತ್ತಬೇಕಲ್ಲ!" ಎಂದು ಅವನು ಹಣೆಯನ್ನು ಚಚ್ಚಿಕೊಂಡನು. ಅಲ್ಲಿಂದ ಮುಂದೆ ನಾರದರು ಭಕ್ತನ ಮುಂದೆ ಹೋಗಿ ನಿಂತರು. ಭಕ್ತನು ಹಿಂದಿನಂತೆ ಅವರಿಗೆ ಸತ್ಕಾರವನ್ನು ಮಾಡಿ ಪರಮಾತ್ಮನ ಲೀಲಾವೈಭವಗಳನ್ನು ಕೇಳಿದನು. ನಾರದರು ಅವನ ಪ್ರಶ್ನೆಗಳಿಗೆಲ್ಲ ಉತ್ತರ-ವನ್ನು ಕೊಟ್ಟು ಮಧ್ಯೆ ಪ್ರಸಂಗವನ್ನು ತಂದು "ನಿನಗೆ ಈಹುಣಸೆಯ ಮರ-ದಲ್ಲಿರುವ ಎಲೆಗಳಷ್ಟು ಜನ್ಮಗಳಾಗುತ್ತಲೆ ಮುಕ್ತಿಯಾಗುವದು" ಎಂಬರ್ಥ-ವನ್ನು ಸೂಚಿಸಿದರು. ಆಗ ಭಕ್ತನು ಮತ್ತಷ್ಟು ಹಾರಿಹಾರಿ ಕುಣಿದು, "ದೀನದಯಾಳು, ಕರುಣಾಸಿಂಧು, ಅನಾಥಬಾಂಧವ, ಭಕ್ತವತ್ಸಲ, ಎಂಥ ಮಹದುಪಕಾರವನ್ನು ಮಾಡಿದೆ. ಇನ್ನೂ ಲೆಕ್ಕವಿಲ್ಲದಷ್ಟು ಜನ್ಮಗಳು ನಾನು

ನಿನ್ನ ಭಕ್ತಿಸುಖವನ್ನು ಅನುಭವಿಸಬಹುದಲ್ಲ!" ಎಂದು ಸಂತೋಷಾತಿಶಯು-ವನ್ನು ತೋರಿಸಿದನು. ಅದಕ್ಕೆ ಪರಮಾತ್ಮನು ಮೆಚ್ಚಿ ಅವನಿಗೆ ಆಗಲೆ ಪ್ರತ್ಯಕ್ಷನಾದನು. ಇರಲಿ, **"सुखमय्योऽखिला दिशः"** ಎಂಬಂತೆ ಭಕ್ತಿ-ಪ್ರಭಾವದಿಂದ ನಾಲ್ಕುದಿಕ್ಕುಗಳೂ ಸುಖವಾಗಿರುವ ಭಕ್ತನಿಗೆ ಮೋಕ್ಷದ ಮೇಲೆ ಇಚ್ಛೆಯೇ ಆಗುವದಿಲ್ಲ. ಕುಂತಿದೇವಿಯು ಕೂಡ

"स्वकर्मफलनिर्दिष्टां यां यां योनिं व्रजाम्यहम् ।
तस्यां तस्यां हृषीकेश त्वयि भक्तिर्दृढास्तु मे ॥"

ಎಂದರೆ "ಹೆ, ದೇವ, ನನಗೆ ನನ್ನ ಕರ್ಮಾನುಗುಣವಾಗಿ ಯಾವ ಯಾವ ಜನ್ಮಗಳಾದರೂ ಬರಲಿ; ಆದರೆ ಪ್ರತಿಯೊಂದು ಜನ್ಮದಲ್ಲಿಯೂ ನಿನ್ನ ಭಕ್ತಿ ಮಾತ್ರ ದೃಢವಾಗಿರಲಿ" ಎಂದು ಕೇಳಿಕೊಂಡಿರುವಂತೆ ಭಕ್ತರು ಭಕ್ತಿಯೊಂ-ದನ್ನು ಕೇಳುವರೇ ಹೊರತು ಮುಕ್ತಿಯನ್ನು ಕೇಳುವದಿಲ್ಲ. ಭಕ್ತರು ಜನ್ಮಕ್ಕೆ ಹೆದರುವದಿಲ್ಲ; ಮರಣಕ್ಕೆ ಹೆದರುವದಿಲ್ಲ; ಯಾವದಕ್ಕೂ ಹೆದರುವದಿಲ್ಲ. ಭಕ್ತಿಯೊಂದಿದ್ದರೆ ಸರಿ ಜನ್ಮಮರಣಗಳು ಲೆಕ್ಕವಿಲ್ಲದಷ್ಟು ಆಗುತ್ತಿರಬಹುದು. ಭಕ್ತನು ತನ್ನ ಜೀವಿತಕಾಲವನ್ನು ಕಳೆಯುವ ರೀತಿಯು ಎಷ್ಟು ಚೆನ್ನಾಗಿದೆ! ಒಬ್ಬ ಭಕ್ತನ ಪ್ರಾರ್ಥನೆಯನ್ನು ನೋಡಿರಿ.

"कदा वाराणस्याममरतटिनी रोधसि वसन्
वसानः कौपीनं शिरसि निदधानोऽञ्जलिपुटम् ॥
अये, गौरीनाथ, त्रिपुरहर, शंभो, त्रिनयन,
प्रसीदेत्याक्रोशन्निमिषमिव नेष्यामि दिवसान् ॥"

ಎಂದರೆ "ನಾನು ಕಾಶಿಯಲ್ಲಿ ಗಂಗಾತೀರದಲ್ಲಿದ್ದು ಕೌಪೀನಧಾರಿಯಾಗಿ ತಲೆಯ ಮೇಲೆ ಕರಗಳನ್ನು ಜೋಡಿಸಿಕೊಂಡು 'ಹೆ, ಗೌರಿನಾಥ, ತ್ರಿಪುರಹರ, ಶಂಭೊ, ತ್ರಿನಯನ, ಪ್ರಸನ್ನನಾಗು,' ಎಂದು ಗೋಳಿಡುತ್ತ ಒಂದು ದಿನವನ್ನು ಒಂದು ನಿಮಿಷವಾಗಿ ಎಂದು ಕಳದೇನೋ" ಎಂದು ಹಂಬಲಿಸುತ್ತಾನಲ್ಲ! ಸರ್ವಸಂಪತ್ತನ್ನೂ ಎಡಗಾಲಿನಿಂದ ನೂಕಿ, ಕೇವಲ ಕೌಪೀನಧಾರಿಯಾಗಿ

ಭಗವಂತನನ್ನು ಸ್ಮರಿಸುತ್ತ ಗೋಳಾಡುವದರಲ್ಲಿ ಏನು ಸುಖವೆಂಬ ಭಕ್ತರ ಸ್ಥಿತಿಯನ್ನು 'ಬಲ್ಲವನೇ ಬಲ್ಲ ಬೆಲ್ಲದಸವಿ' ಎಂಬಂತೆ ಭಕ್ತರೇ ಬಲ್ಲರು. ಸಾಕ್ಷಾತ್ಪರಮಾತ್ಮನಿಗೆ ಕೂಡ ಈ ಪ್ರೇಮವೇಗದ ಆನಂದದ ಸವಿಯು ಗೊತ್ತಿದೆಯೋ ಇಲ್ಲವೋ ಹೇಳುವದಕ್ಕಾಗುವದಿಲ್ಲ. ಆನಂದಸ್ವರೂಪನೇ ಆಗಿರುವವನಿಗೆ ಆನಂದದ ಸವಿ ಏನು ಗೊತ್ತಿದ್ದೀತು? ತನಗಿಂತ ಹೆಚ್ಚಿನ ಆನಂದವುಳ್ಳ ವಸ್ತುವೊಂದಿದ್ದರೆ, ಅದರ ಅನುಸಂಧಾನದಿಂದ ಅವನಿಗೆ ಸುಖವಾಗ ಬಹುದಾಗಿತ್ತು. ಇತರ ಸರ್ವವೂ ಅವನ ಆನಂದದ ಒಂದಂಶಾಂಶವನ್ನು ಹೊಂದಿರತಕ್ಕವುಗಳಾದುದರಿಂದ ಪಾಪ, ಅವನು ಪ್ರೇಮವೇಗವನ್ನು ಪಡೆಯುವವಕಾಶವೇ ಇಲ್ಲ. ಭಕ್ತನಿಗೆ ಹಾಗಲ್ಲ. ಅವನು ಪ್ರೇಮವನ್ನು ಮಾಡುವದಕ್ಕೆ ಭಗವಂತನಿರುವನು. ಒಂದು ದಿನ ಯಶೋದೆಯು ಬಾಲಕೃಷ್ಣನನ್ನು ತೊಡೆಯ ಮೇಲೆ ಮಲಗಿಸಿಕೊಂಡು ಮುಂಗುರುಳುಗಳನ್ನು ತಿದ್ದುತ್ತ ಮುದ್ದಿಸಿ ಮುದ್ದಿಸಿ ಆನಂದದಿಂದ ನಗುತ್ತಿದ್ದಳು. ಆಗ ಮುಗುವಾದ ಕೃಷ್ಣನು "ಅಮ್ಮ ಏನನ್ನು ನೋಡಿ ನಗುತ್ತಿ?" ಎಂದು ಕೇಳಿದನು. ಯಶೋದೆಯು "ಕಂದ, ನಿನ್ನ ಮುಖವನ್ನು ನೋಡಿ" ಎಂದು ಹೇಳಿ ಮತ್ತೆ ಮುತ್ತು ಕೊಟ್ಟಳು. ಆಗ ಕೃಷ್ಣನು "ನನಗೇಕೆ ಆನಂದವಾಗುವದಿಲ್ಲ? ಎಂದು ಪ್ರಶ್ನೆಮಾಡಲು, ಯಶೋದೆಯು "ಆಮುಖವನ್ನು ನೋಡುವ ಸುಯೋಗವು ನಿನಗಿಲ್ಲವಲ್ಲ!" ಎಂದು ಹೇಳಿದಳು. ಭಕ್ತಿಸುಖವೆಂಬುದು ಪರಮಾತ್ಮವಿಷಯುಕವಾದ ಪ್ರೇಮರಸದ ವೇಗ. ಈಪ್ರೇಮರಸದ ಪರಿಪಾಕವನ್ನು ಎಲ್ಲರೂ ಬಯಸಬೇಕು. ಈಪ್ರೇಮರಸದ ಪರಿಪಾಕವೇ ಮನುಷ್ಯನ ಪರಿಪೂರ್ಣಾವಸ್ಥೆ. ಹೇಗೆಂದರೆ ಪ್ರಾಣಿಮಾತ್ರದಲ್ಲಿ ಪ್ರೇಮದ ಬೀಜವಿದ್ದೇ ಇರುವದೆಂದು ಮೊದಲೇ ನಿಶ್ಚಯವಾಗಿದೆ. ಆದುದರಿಂದ ಮನುಷ್ಯಜನ್ಮವನ್ನು ಸಾರ್ಥಕಮಾಡಿಕೊಳ್ಳಬೇಕೆಂಬುವರೆಲ್ಲರೂ ಈರಸವನ್ನು ಬರಿಸಿಕೊಳ್ಳುವದಕ್ಕೆ ಸರ್ವ ಸನ್ನಾಹವನ್ನೂ ಮಾಡಬೇಕು. ಕೆಲವು ವರ್ಷಗಳ ಹಿಂದೆ ದಕ್ಷಿಣದೇಶದಲ್ಲಿ ಸದಾಶಿವೇಂದ್ರಸರಸ್ವತಿಗಳೆಂಬ ಒಬ್ಬ ಯತೀಶ್ವರರು ಈ ಪ್ರೇಮದ ಪರಾಕಾಷ್ಠಸ್ಥಿತಿಯನ್ನು ಮುಟ್ಟಿ ಉನ್ಮತ್ತರಂತೆ ವ್ಯವಹಾರಮಾಡುತ್ತಿದ್ದರು. ಅದನ್ನು ಕಂಡವರು ಅವರ ಗುರುಗಳಾದ ಪರಮಶಿವೇಂದ್ರರ

ಬಳಿಗೆ ಹೋಗಿ ಅವರ ಉನ್ಮತ್ತಸ್ಥಿತಿಯನ್ನು ಹೇಳಿದಾಗ ಅವರು "ಅಯ್ಯೋ, ಆ ಹುಚ್ಚು ನನಗೆ ಬರಲಿಲ್ಲವಲ್ಲ!" ಎಂದು ಬಿಸುಸುಯ್ದರೆಂದು ಶ್ರೀಶೃಂಗಗಿರಿ ಜಗದ್ಗುರುಪೀಠಸ್ಥರಾಗಿದ್ದು ಕೆಲವು ದಿನಗಳ ಕೆಳಗೆ ಸಮಾಧಿಸ್ಥರಾದ ಶ್ರೀ-ಸಚ್ಚಿದಾನಂದಶಿವಾಭಿನವನೃಸಿಂಹಭಾರತೀಸ್ವಾಮಿಗಳವರು ತಾವು ಬರೆದ ಸದಾಶಿವೇಂದ್ರ ಸ್ತುತಿಯೆಂಬ ಗ್ರಂಥದಲ್ಲಿ

"उन्मत्तवत्संचरतीह शिष्य
स्तवेति लोकस्य वचांसि श्रुण्वन् ।
खिद्यन्नुवाचास्य गुरुः पुराहो
ह्युन्मत्तता मे न हि तादृशीति ॥"

ಎಂಬ ಶ್ಲೋಕದಲ್ಲಿ ವ್ಯಕ್ತಗೊಳಿಸಿದ್ದಾರೆ. ಈಪ್ರೇಮರಸವು ಮನುಷ್ಯಪ್ರಕೃ-ತಿಗೆ ದೈವಿಕಸ್ವರೂಪವನ್ನು ಕೊಡುವದು. ಈಪ್ರೇಮರಸವನ್ನು ಪಡೆದ-ವನಿಗೆ ಈ ಪ್ರಪಂಚವು ಜಾಗರಾವಸ್ಥೆಯಲ್ಲಿ ಕಣ್ಣಿಗೆ ಕಟ್ಟಿದಂತೆ ಕಾಣುವ ಸ್ವಪ್ನಪ್ರಪಂಚದ ಹಾಗೆ ಆಗುವದು. ಬಿಸಿಲು ತಣ್ಣಗಾದರೂ, ಬೆಳದಿಂಗಳು ಬಿಸಿಯಾದರೂ, ಅಗ್ನಿಯು ಕೆಳಗಡೆಗೆ ಮುಖವಾಗಿ ಉರಿದರೂ ಅವನಿಗೆ ಆಶ್ಚರ್ಯವೆನಿಸುವದಿಲ್ಲ. ಅವನು ಕೆಟ್ಟದೆಂದು ಒಂದನ್ನೂ ಬಿಡುವದಿಲ್ಲ; ಒಳ್ಳೇದೆಂದು ಒಂದನ್ನೂ ಹಿಡಿಯುವದಿಲ್ಲ; ಹಿಂದೆ ಆದುದನ್ನು ನೆನೆಸುವದಿಲ್ಲ; ಮುಂದೆ ಆಗುವದನ್ನು ಯೋಚಿಸುವದಿಲ್ಲ; ಇದ್ದದ್ದನ್ನು ಬಿಡುವದಿಲ್ಲ; ಇಲ್ಲ-ದ್ದನ್ನು ಬಯಸುವದಿಲ್ಲ. ಅವನಿಗೆ ವಿಷಯಗಳಿಂದ ಖೇದವೂ ಇಲ್ಲ; ಪ್ರಮೋ-ದವೂ ಇಲ್ಲ. ಅವುಗಳಲ್ಲಿ ಅವನಿಗೆ ಆಸಕ್ತಿಯೂ ಇಲ್ಲ; ವಿರಕ್ತಿಯೂ ಇಲ್ಲ. ಅವನು ನಿರ್ಧನನಾದರೂ ಸಂತುಷ್ಟನು; ಅಸಹಾಯನಾದರೂ ಮಹಾ-ಬಲನು; ಮಾಡಿದರೂ ಮಾಡದವನು; ಭೋಗಿಸಿದರೂ ಭೋಗಿಸದವನು; ಶರೀರಿಯಾದರೂ ಅಶರೀರಿ; ಪರಿಚ್ಛಿನ್ನನಾದರೂ ಸರ್ವವ್ಯಾಪಿ. ಅವನು ವಿಷಯಗಳನ್ನು ಗ್ರಹಿಸಿರೆಂದು ಇಂದ್ರಿಯಗಳಿಗೆ ವಿಧಿಸುವದೂ ಇಲ್ಲ; ಅಲ್ಲಿಗೆ ಹೋಗಬೇಡಿರೆಂದು ನಿಷೇಧಿಸುವದೂ ಇಲ್ಲ. ಅವರು ಮಾಡತಕ್ಕದ್ದೆಲ್ಲ

ಮಾಡಿದುದಾಯಿತು. ಅವರು ಪಡೆಯತಕ್ಕದ್ದನ್ನು ಪಡೆದುದಾಯಿತು. ಅವರು ಹಿಂದೆ ಮಾಡಿದ ಸರ್ವಸಾಧನಗಳೂ ಈಗ ಫಲಿಸಿದವು. ಅವನ ಮನಸ್ಸಿನಲ್ಲಿರುವ ಪ್ರೇಮರಸಪ್ರಭಾವದಿಂದ ಅವನ ಭಾಗಕ್ಕೆ ಈ ಪ್ರಪಂಚವೆಲ್ಲ ನಂದನವನ; ಕಾಡುಮರಗಳೆಲ್ಲ ಕಲ್ಪವೃಕ್ಷಗಳು; ಕಗ್ಗಲ್ಲುಗಳೆಲ್ಲ ಚಿಂತಾಮಣಿಗಳು. ಅವನಿಗೆ ಯಾವ ಕೊರತೆಯೂ ಇಲ್ಲವಾದುದರಿಂದ ಅವನ ಯಾವ ಪ್ರವೃತ್ತಿಗೂ ಯಾವ ಉದ್ದೇಶವೂ ಇರುವದಿಲ್ಲ.

"ईश्वरस्सर्वभुतानां हृद्देशेऽर्जुन तिष्ठति"

ಎಂಬ ಗೀತೋಕ್ತಿಯಂತೆ ಪರಮಾತ್ಮನು ಆಡಿಸಿದಂತೆ ಆಡುವದು ತನ್ನ ಕೆಲಸವೆಂದು ಅವನು ಭಾವಿಸುವನು. ಪ್ರವಾಹವು ಹೊಡೆದುಕೊಂಡು ಹೋದ ಹಾಗೆಲ್ಲ ಕಟ್ಟಿಗೆಯು ತುಂಡು ಹೋಗುತ್ತಿರುವಂತೆ ಪ್ರಾರಬ್ಧಕರ್ಮದಿಂದ ಅನುಭವಿಸಬೇಕಾದುದನ್ನೆಲ್ಲ ಅನುಭವಿಸುತ್ತ ಹೋಗುವಾಗ ಅವನು ಆ ಸುಖದುಃಖಗಳನ್ನು ದೇವರು ತನಗೆ ಪ್ರೇಮದಿಂದ ಕಳುಹಿಸಿರುವನೆಂದೂ ಅದನ್ನು ಅಕ್ಕರೆಯಿಂದ ಚೆನ್ನಾಗಿ ಅನುಭವಿಸಿ ಅವನಿಗೆ ಸಂತೋಷವನ್ನುಂಟುಮಾಡಬೇಕೆಂದೂ ಉತ್ಸಾಹದಿಂದ ಅವುಗಳಿಗೆ ತಲೆಗೊಡುವನು. ಪತಿವ್ರತೆಯಾದ ಸ್ತ್ರೀಯು ಪತಿಯ ವಿನೋದಕಾಲಕ್ಷೇಪಕ್ಕೆ ತಾನು ಸಾಧಕಳಾದೆನೆಂದು ಹಿಗ್ಗುವಂತೆ ಭಕ್ತನು ಪರಮಾತ್ಮನ ಆಟಕ್ಕೆ ತಾನೊಂದುಪಕರಣವಾದೆನೆಂದು ಅವನು ಉಲ್ಲಾಸದಿಂದಿರುವನು. ಜೀವನ್ಮುಕ್ತಾನಂದಲಹರಿಯಲ್ಲಿ ಹೇಳಿರುವಂತೆ ಅವನು ಪಟ್ಟಣಗಳಲ್ಲಿ ಸರ್ವಾಲಂಕಾರಭೂಷಿತೆಯರಾದ ಸರ್ವಾಂಗಸುಂದರಿಯರ ಕದಳೀಸ್ತಂಭದಂಥ ತೊಡೆಗಳ ಮೇಲೆ ತಲೆಯನ್ನಿಟ್ಟುಕೊಂಡಿದ್ದರೂ ಆಸ್ತ್ರೀಯರನ್ನು ಹಸೀಹೆಣಗಳಂತೆ ಭಾವಿಸುತ್ತಿರಬಲ್ಲನು; ಅರಣ್ಯದಲ್ಲಿ ಫಲಪುಷ್ಪಭರಿತವಾದ ದಿವ್ಯವೃಕ್ಷಗಳ ನೆಳಲಲ್ಲಿರುವಾಗಲಾದರೂ ಅದಕ್ಕೆ ಲಕ್ಷ್ಯವನ್ನು ಕೊಡದೆ ಇರಬಲ್ಲನು; ಇಂದು ಉಪ್ಪರಿಗೆಯ ಮೇಲೆ ಸಿಕ್ಕುವ ಹಂಸತೂಲಿಕಾತಲ್ಪವನ್ನೂ ನಾಳೆ ಕಗ್ಗಾಡಿನಲ್ಲಿ ಸಿಕ್ಕುವ ಒಂದು ಹಾಸುಬಂಡೆಯನ್ನೂ ಸಮವಾಗಿ ನೋಡಬಲ್ಲನು; ಹುಡುಗರೊಡನೆ ತಾಳವನ್ನು ಹಾಕುತ್ತ ನಗುತ್ತ ಹಾಡುತ್ತಿದ್ದರೂ ಪ್ರಾಯಸ್ಥರಾದ ಸ್ತ್ರೀ-

ಪುರುಷರೊಡನೆ ಉದ್ಯಾನದಲ್ಲಿ ವಿಹಾರಮಾಡುತ್ತಿದ್ದರೂ ಚಿಂತಾಕ್ರಾಂತರಾದ ವೃದ್ಧರೊಡನೆ ಸಹಾನುಭೂತಿಯನ್ನು ತೋರಿಸುತ್ತಿದ್ದರೂ ತಾನು ಏಕಪ್ರಕಾರವಾಗಿರುವನು. ಅವನು ವಿದ್ವಾಂಸರೊಡನೆ ಸೇರುವನು; ವಿದ್ಯಾರ್ಥಿಗಳೊಡನೆ ಕಲೆಯುವನು; ಕಾವ್ಯಾಲಂಕಾರಶಾಸ್ತ್ರಜ್ಞರಾದ ಕವೀಶ್ವರರ ಜೊತೆಗಿರುವನು; ತಾರ್ಕಿಕರೊಡನೆ ತರ್ಕಮಾಡುವನು; ಕರ್ಮಠರ ಜೊತೆಯಲ್ಲಿ ಕರ್ಮವನ್ನು ಮಾಡುವನು; ಒಂದುವೇಳೆಯಲ್ಲಿ ಧ್ಯಾನಾರೂಢನಾಗಿರುವನು; ಇನ್ನೊಂದುವೇಳೆಯಲ್ಲಿ ಗಂಧಪುಷ್ಪಾಕ್ಷತಾದಿಗಳಿಂದ ಪೂಜೆಮಾಡುತ್ತಿರುವನು; ಒಂದುವೇಳೆ ಶಿವನನ್ನು ಅರ್ಚಿಸುವನು; ಇನ್ನೊಂದುವೇಳೆ ವಿಷ್ಣುವನ್ನು ಆರಾಧಿಸುವನು; ಒಂದುವೇಳೆ ಗಂಗಾಸ್ನಾನಕ್ಕೆ ಹೋಗುವನು; ಇನ್ನೊಂದುವೇಳೆ ಹಿತ್ತಲ ಬಾವಿಯಲ್ಲಿ ಮುಳುಗುವನು; ಒಂದುವೇಳೆ ಬರೀ ಮೈಯಲ್ಲಿರುವನು; ಇನ್ನೊಂದುವೇಳೆ ದಿವ್ಯಾಂಬರಧಾರಿಯಾಗಿರುವನು; ಒಂದುವೇಳೆ ಸಂಸಾರಿಯಂತಿರುವನು; ಇನ್ನೊಂದುವೇಳೆ ವೇದಾಂತಿಯಾಗಿರುವನು; ಒಂದುವೇಳೆ ಮೌನದಲ್ಲಿರುವನು; ಒಂದುವೇಳೆ ವಾಗ್ವಾದನಿರತನಾಗಿರುವನು; ಒಂದುವೇಳೆ ನಿರಾಕಾರವನ್ನು ಅನುಸಂಧಾನಮಾಡುವನು; ಇನ್ನೊಂದುವೇಳೆ ಸಾಕಾರವನ್ನನುಸಂಧಾನಮಾಡುವನು. ಪ್ರೇಮರಸದಿಂದ ತುಂಬಿ ಪ್ರೇಮರಸಮಯನಾಗಿರುವ ಅವನ ಎಲ್ಲ ಪ್ರವೃತ್ತಿಯೂ ಪ್ರೇಮದಿಂದಲೇ ಆಗಿರುವದು. ಅವನು ಅತ್ತರೂ ಪ್ರೇಮದಿಂದ; ನಕ್ಕರೂ ಪ್ರೇಮದಿಂದ; ಹೊಗಳಿದರೂ ಪ್ರೇಮದಿಂದ; ಬಯ್ದರೂ ಪ್ರೇಮದಿಂದ; ಆಲಿಂಗಿಸಿದರೂ ಪ್ರೇಮದಿಂದ; ಹೊಡೆದರೂ ಪ್ರೇಮದಿಂದ. ಈ ಅರ್ಥವನ್ನು ವ್ಯಕ್ತಗೊಳಿಸುವದಕ್ಕೆ ಭೀಷ್ಮಾಚಾರ್ಯರ ಉದಾಹರಣೆಯು ಬಹು ಚೆನ್ನಾಗಿದೆ. ಭೀಷ್ಮಾಚಾರ್ಯರು ಮಹಾಭಗವದ್ಭಕ್ತರು ಮತ್ತು ಕುರುವಂಶಕ್ಕೂ ಪಾಂಡವವಂಶಕ್ಕೂ ವೃದ್ಧಪಿತಾಮಹರು. ಇಂಥವರು ಮಹಾಸ್ವಾಮಿಯಾದ ಶ್ರೀಕೃಷ್ಣನಿಗೂ ಮತ್ತು ಮೊಮ್ಮಗನಾದ ಅರ್ಜುನನಿಗೂ ಪ್ರತಿಪಕ್ಷದವರಾಗಿ ಯುದ್ಧಕ್ಕೆ ನಿಂತರು. ಇದೊಂದು ವಿಲಕ್ಷಣವಲ್ಲವೆ? ಶ್ರೀಕೃಷ್ಣನನ್ನು ದೇವರೆಂದು ಪ್ರೀತಿಸುವದೇನು? ಅವನ ಮುಂದೆ ಧನುಸ್ಸಿಗೆ ಬಾಣವನ್ನೇರಿಸುವದೇನು? ಅರ್ಜುನನನ್ನು ಮೊಮ್ಮಗನೆಂದು ಕರೆಯು-

ವದೇನು? ಅವನ ಕಂಠಕ್ಕೆ ಬಾಣವನ್ನು ಗುರಿ ಇಡುವದೇನು? ಕೃಷ್ಣನ ಮುಂದೆ ಸುಮ್ಮನೆ ಯುದ್ಧಕ್ಕೆ ನಿಂತದ್ದಿಷ್ಟೇ ಅಲ್ಲ. ಕೃಷ್ಣನು ತಾನು ಚಕ್ರವನ್ನು ಹಿಡಿಯುವದಿಲ್ಲವೆಂದು ಪ್ರತಿಜ್ಞೆಯನ್ನು ಮಾಡಿದ್ದನು. "ನಿನ್ನಿಂದ ಚಕ್ರವನ್ನು ಹಿಡಿಸಿಯೇ ಬಿಡುತ್ತೇನೆ" ಎಂದು ಭೀಷ್ಮರು ಪ್ರತಿಜ್ಞೆಯನ್ನು ಮಾಡಿದ್ದರು. ಇದೆಂಥ ಪೂಜ್ಯಭಾವ! ನಿಜವಾಗಿ ಇದು ನಮಗೆಲ್ಲ ಹೊಸದು. ವ್ಯವಹಾರದಲ್ಲಿ ಬಿದ್ದಾಗ ಭಕ್ತರು ದೇವರೆಂದು ಅಂಜಿ ಎಂದಿಗೂ ಹಿಂದಕ್ಕೆ ಸರಿದುಕೊಳ್ಳುವದಿಲ್ಲ. ಪ್ರೇಮರಸಮಯವಾಗಿರುವ ಅವರ ಉತ್ಸಾಹವು ಎಂಥ ಅಸಾಧ್ಯಕಾರ್ಯವನ್ನಾದರೂ ಸಾಧ್ಯಮಾಡಿಸಿ ಬಿಡುತ್ತದೆ. ಏಕೆಂದರೆ ಅವರಿಗೆ ಭಗವಂತನ ಬಲವುಂಟು. ಪಾಪ, ಭಗವಂತನಿಗಿನ್ನಾರಬಲ? ಆದುದರಿಂದ ಭೀಷ್ಮರು ಹಾಗೆ ಪ್ರತಿಜ್ಞೆಯನ್ನುಮಾಡಿ ಕೃಷ್ಣಾರ್ಜುನರ ಮುಂದೆ ಧನುರ್ಬಾಣಧಾರಿಯಾಗಿ ನಿಂತು ಯುದ್ಧಮಾಡಿದರು. ಭೀಷ್ಮರ ಕೈಮೆಯು ಅತಿ ತೀಕ್ಷ್ಣವಾಗಿರುವದನ್ನು ಕಂಡು ಕೃಷ್ಣನು ಅರ್ಜುನನಿಗೆ ಭೀಷ್ಮರು ದಕ್ಕುವದಿಲ್ಲವೆಂದು ಯೋಚಿಸಿ, ತಾನೇ ರಥದಿಂದ ಧುಮ್ಮಿಕ್ಕಿ ಚಕ್ರವನ್ನು ತೊಟ್ಟು, ಕೋಪಾವಿಷ್ಟವಾದ ಸಿಂಹವು ಆನೆಯ ಮೈಮೇಲೆ ಬರುವಂತೆ ಭೀಷ್ಮರ ಮೇಲೆ ನುಗ್ಗಿದನು. ಆ ಸಮಯದಲ್ಲಿ ಕ್ರೋಧದ ಆವೇಶದಿಂದ ಅವನು ನಡೆಯುತ್ತಿರುವಾಗ ಪ್ರಪಂಚವೆಲ್ಲ ಗಡಗಡ ನಡುಗಿತು. ಅವನ ಮೈಮೇಲಣ ಉತ್ತರೀಯವು ಕೆಳಕ್ಕೆ ಬಿತ್ತು. ಹೀಗೆ ಅವನು ಭೀಷ್ಮರ ಮೇಲೆ ನುಗ್ಗಿಬರುವಾಗ ಭೀಷ್ಮರು ಕ್ಷಾತ್ರಧರ್ಮಕ್ಕೆ ಅನುಸಾರವಾಗಿ ಅವನ ಮೇಲೆ ಕ್ರೂರವಾದ ಬಾಣಗಳನ್ನು ಪ್ರಯೋಗಮಾಡಿದನು. ಆಬಾಣದ ಪೆಟ್ಟಿನಿಂದ ಅವನ ಕವಚವು ಶೀಳಿಹೋಗಿ ಮೈಯಲ್ಲ ರಕ್ತಮಯವಾಯಿತು. ಆಕಾಲದಲ್ಲಿ ಸ್ನೇಹಪಾಶದಿಂದ ಬದ್ಧನಾಗಿ ಅರ್ಜುನನು ಅವನನ್ನು ಹಿಂದಕ್ಕೆ ಎಳೆಯುತ್ತಿದ್ದರೂ, ಅವನು ಕೊಸರಿಕೊಂಡು ಹಲ್ಲುಹಲ್ಲು ಕಡಿಯುತ್ತ ಭೀಷ್ಮರನ್ನು ಕೊಂದೇ ಬಿಡುತ್ತೇನೆಂದು ಮುಂದೆ ಬಂದನು. ಆಗ ಭೀಷ್ಮರು

"एह्येहि देवेश, जगन्निवास,
नमोऽस्तु ते माधव, चक्रपाणे, ।

प्रसह्य मां पालय लोकनाथ,
रथोत्तमात्सर्वशरण्य संख्ये ॥
त्वया हतस्यापि ममाद्य कृष्ण,
श्रेयः परस्मिन्निह चैव लोके ।
संभावितोस्म्यंधकवृष्णिनाथ,
लोकैस्त्रिविर्वीर, तवाभियानात् ॥"

ಎಂದರೆ "ಹೆ, ದೇವೇಶ, ಬಾ, ಜಗನ್ನಿವಾಸ ಬಾ, ಮಾಧವ, ನಿನಗೆ ನಮಸ್ಕಾರ; ಚಕ್ರಪಾಣಿ, ಈರಥದಿಂದ ನನ್ನನ್ನು ಕೆಳಕ್ಕೆ ಕೆಡವು; ಲೋಕನಾಥ, ಸರ್ವಶರಣ್ಯ, ಕೃಷ್ಣ, ಅಂಧಕವೃಷ್ಣಿ, ನಿನ್ನಿಂದ ಮೃತಿಯನ್ನು ಹೊಂದಿದರೆ ಅದು ನನಗೆ ಇಹಪರಗಳೆರಡಕ್ಕೂ ಶ್ರೇಯಸ್ಕರವು. ನೀನು ನನ್ನ ಬಳಿಗೆ ಬಂದನೆಂದು ಮೂರು ಲೋಕವೂ ನನ್ನನ್ನು ಸಂಭಾವಿಸುವದು" ಎಂದು ಕರೆದರು. ಅಷ್ಟರಲ್ಲಿ ಅರ್ಜುನನು ಅಡ್ಡಬಂದು "ದೇವ, ನೀನು ಪಾಂಡವಪ್ರಾಣನು; ಭೀಷ್ಮರ ಮುಂದೆ ಮೈ ಒಡ್ಡಬೇಡ; ಚಕ್ರವನ್ನು ಹಿಡಿಯುವದಿಲ್ಲವೆಂದು ನೀನು ಶಪಥವನ್ನು ಮಾಡಿರುವದನ್ನು ಸ್ಮರಿಸಿಕೊಂಡು ಕೋಪವನ್ನು ಬಿಡು. ಬಾ. ನಾನು ಭೀಷ್ಮರ ಸೊಕ್ಕನ್ನು ಇಳಿಸುವೆನು" ಎಂದು ಸಂತಯಿಸಿ ಹಿಂದಕ್ಕೆ ಕರೆದುಕೊಂಡು ಹೋದನು. ಆಗ ತನ್ನ ಪ್ರತಿಜ್ಞೆಯನ್ನಾದರೂ ಹಿಂದಕ್ಕೆ ಇಟ್ಟುಕೊಂಡು ಭಕ್ತನ ಪ್ರತಿಜ್ಞೆಯನ್ನು ಪೂರ್ಣಮಾಡುವದಕ್ಕಾಗಿ ಹೀಗೆ ಮಾಡಿದುದಕ್ಕೆ ಭೀಷ್ಮರು ಶ್ರೀಕೃಷ್ಣನನ್ನು ಬಹು ವಿಧದಿಂದ ಸ್ತೋತ್ರಮಾಡಿರುವರು. ಭೀಷ್ಮಾರ್ಜುನರ ಪ್ರೇಮವೂ ಇದೇ ರೀತಿಯಲ್ಲಿ ವ್ಯಕ್ತವಾಗಿರುವದು. ಮೊದಲು ಅರ್ಜುನನು ಭೀಷ್ಮರ ಪಾದಕ್ಕೆ ಬಾಣವನ್ನು ಹೊಡೆದನು. ಆಗ ಭೀಷ್ಮರ ಕಡೆಯ ಜನರು ಅರ್ಜುನನನ್ನು ಗುರಿಯಿಡಲರಿಯದವನೆಂದು ಹಿಯ್ಯಾಳಿಸಿದರು. ಅದು ಗುರುವಿಗೆ ನಮಸ್ಕಾರ ರೂಪವಾದುದೆಂದು ಭೀಷ್ಮರು ಸರಿಯಾಗಿ ಅರ್ಥವನ್ನು ಮಾಡಿ ಹೇಳಿದರು. ಆಗಲೇ

ಭೀಷ್ಮರು ಅರ್ಜುನನ ತಲೆಯ ಮೇಲೆ ಬಾಣವನ್ನು ಬಿಟ್ಟರು. ಅದನ್ನು ನೋಡಿ ಅರ್ಜುನನ ಕಡೆಯವರು ಭೀಷ್ಮರ ಕೈಚಳಕವನ್ನು ಜರೆದರು. ಅದು ತನಗೆ ಆಶೀರ್ವಾದರೂಪವಾದುದೆಂದು ಅರ್ಜುನನು ಆಪ್ರೇಮರೂಪಬಾಣ ಪ್ರಹಾರಸಮಸ್ಯೆಯನ್ನು ಬಿಡಿಸಿ ಹೇಳಿದನು. ಇದರ ಗುಟ್ಟು ಭೀಷ್ಮರಿಗೂ, ಅರ್ಜುನನಿಗೂ ತಿಳಿದ ಹಾಗೆ ಇತರರಿಗೆ ತಿಳಿಯಲಿಲ್ಲ. ಹಾಗೆ ಪರಭಕ್ತಿ ಸಂಪನ್ನರಾದ ಜೀವನ್ಮುಕ್ತರು ಯಾವ ಯಾವ ಕಾಲದಲ್ಲಿ ಹೇಗೆ ಹೇಗೆ ವ್ಯವ-ಹಾರಮಾಡುತ್ತಿರುವರೋ ಆರಹಸ್ಯವನ್ನು ಅವರಂಥವರು ಬಲ್ಲರೇ ಹೊರತು ಇತರರು ಹೇಗೆ ತಿಳಿದಾರು? ಅವರ ಪ್ರೇಮದ ಆಳವನ್ನು ನಾವು ಕಂಡು ಹಿಡಿಯುವದಕ್ಕೆ ಹೋಗುವದು ಮಿಣುಕುಹುಳು ಸೂರ್ಯಮಂಡಲದ ವೃತ್ತ-ಪರಿಮಾಣವನ್ನು ಕಾಣುವದಕ್ಕೆ ಯತ್ನಿಸಿದಂತೆ ಆಗುವದು. ಅವರು ತಮ್ಮ ಪ್ರೇಮದ ಬೀಜವನ್ನು ಬೆಳಸಿಕೊಂಡು ಮನುಷ್ಯತ್ವವನ್ನು ದಾಟಿಹೋಗಿರುವರು. ಅವರು ಮನುಷ್ಯರಾಗಿದ್ದರೂ ದೇವರು. ಅವರು ನಿಂತ ಸ್ಥಳವೇ ವೈಕುಂಠ ಅಥವಾ ಕೈಲಾಸ. ಅವರು ಓಡಾಡಿದ ನೆಲವೇ ಕಾಶೀಕ್ಷೇತ್ರ. ಅವರು ಮುಟ್ಟಿದ ನೀರೇ ದೇವಗಂಗೆ. ಅವರು ಮುಡಿದ ಹೂವೇ ಮಹಾಪ್ರಸಾದ. ಅವರು ಆಡುವದೆಲ್ಲ ವೇದ; ಮಾಡುವದೆಲ್ಲ ಸತ್ಕರ್ಮ. ಅವರ ಪ್ರಪಂಚವ್ಯವಹಾರ-ವೆಲ್ಲ ಪರಮಾರ್ಥ. ಅವರನ್ನು ಕಂಡವರು ಧನ್ಯರು. ಅವರನ್ನು ಮಾತಾ-ಡಿಸಿದವರು ಧನ್ಯರು. ಅವರ ಪಾದದ ಮೇಲೆ ಹಣೆಯನ್ನಿಟ್ಟವರು ಧನ್ಯರು. ಅವರ ದೇಹವು ಕೂಡ ದೇವಸ್ಥಾನದಂತೆ ಪೂಜಾಯೋಗ್ಯವು. ಸಮುದ್ರ-ದೊಳಕ್ಕೆ ಪ್ರವೇಶಮಾಡದಿದ್ದರೂ ದಂಡೆಯ ಹತ್ತಿರಕ್ಕೆ ಬಂದರೇನೇ ಆಸಮು-ದ್ರದ ಮೇಲಣ ಗಾಳಿ ಬೀಸಿ ಮೈಯ್ಯ ಬಿಸಿಯಡಗಿ ತಣ್ಪು ತಲೆದೋರುವಂತೆ ಆಮಹಾಭಗವದ್ಭಕ್ತರಿರುವ ವಾತಾವರಣದ ಹತ್ತಿರಕ್ಕೆ ಹೋದರೆ ಸಾಕು; ಅವರ ಮನಸ್ಸಿನ ತಳಮಳವು ತಗ್ಗಿ ಶಾಂತಿಸುಖವು ಅಭಿವ್ಯಕ್ತವಾಗುವದು. ಇನ್ನು ಅವರಿಗೆ ಶರಣಹೊಕ್ಕು, ಅವರನ್ನು ಭಗವತ್ಸ್ವರೂಪವಾಗಿ ಭಾವಿಸು-ವವನ ಧನ್ಯತೆಯನ್ನು ಹೇಳಬೇಕಾದುದೇ ಇಲ್ಲ. ಅವರು ಕೈಹಿಡಿದರೆ ಸಾಕು; ದೇವರ ಅಭಯಹಸ್ತವು ನಮಗೆ ದೊರೆತಂತೆ. ದೇವರಿಗೆ ಭಕ್ತಪರಾಧೀನ-ನೆಂಬ ಬಿರುದಿರುವದು. ಆದುದರಿಂದ ನಾವು ಭಕ್ತರನ್ನು ಆಶ್ರಯಿಸಿದರೆ,

ಭಗವಂತನ ಅನುಗ್ರಹವು ತನಗೆ ತಾನೇ ಬರುವದು. ಸಮುದ್ರಕ್ಕೆ ಹೋಗುತ್ತ ಬರುತ್ತ ಇರುವವನು ದಾರಿಯಲ್ಲಿ ಒಂದು ಸಣ್ಣ ಗುಂಡಿಯಲ್ಲಿ ನೀರಿಲ್ಲದೆ ಸಾಯುವ ಸ್ಥಿತಿಗೆ ಬಂದಿರುವ ಮೀನನ್ನು ತನ್ನ ಜಲಭರಿತವಾದ ತಂಬಿಗೆಯೊಳಕ್ಕೆ ಹಾಕಿಕೊಂಡು ಹೋದನೆಂದರೆ ಆಮೀನಿಗೆ ಮರಣ ಭಯವೆಲ್ಲಿಯದು? ತಂಬಿಗೆಯ ನೀರಲ್ಲಿ ಸುರಕ್ಷಿತವಾಗಿರಬಹುದು. ಆದಯಾಳು ಎಂದೋ ಒಂದು ದಿನ ಅದನ್ನು ತೆಗೆದುಕೊಂಡುಹೋಗಿ ಸಮುದ್ರದೊಳಕ್ಕೆ ಬಿಟ್ಟೇ ಬಿಡುವನು. ಭಕ್ತರು ಕೈಹಿಡಿದರೂ ಹಾಗೆಯೇ. ಇಂದಿಲ್ಲದಿದ್ದರೆ ನಾಳೆ ಅವರು ನಮ್ಮನ್ನು ಪ್ರೇಮಸಾಗರದೊಳಕ್ಕೆ ಬಿಡುವರು. ಇದೆಲ್ಲ ಪರಭಕ್ತಿಯ ಪ್ರಭಾವ. ಜ್ಞಾನಕ್ಕೆ ಪ್ರಾಶಸ್ತ್ಯವನ್ನು ಕೊಟ್ಟು ಹೇಳತಕ್ಕವರು ಈ ಪರಭಕ್ತಿಸ್ಥಿತಿಯನ್ನೇ ಜ್ಞಾನಿಯ ಸ್ಥಿತಿಯೆಂದು ಹೇಳಿ ಮುಗಿಸುತ್ತಾರೆ. ಬೋಧಸಾರ ಭಕ್ತಿಯೋಗದಲ್ಲಿಯೂ ಈಅಭಿಪ್ರಾಯವನ್ನು

"तवास्मीति भजंत्येके त्वमेवास्मीति चापरे ।
इति किंचिद्विशेषेऽपि परिणामः समो द्वयोः ।
न भक्तज्ञानिनोर्दृष्टा शास्त्रे लक्षणभिन्नता ।"

ಎಂಬ ವಾಕ್ಯಗಳು ಹೇಳುತ್ತವೆ. "ನಾನು ನಿನ್ನವನೆಂದು ಭಜಿಸಲಿ, ನೀನೇ ನಾನೆಂದು ಅನುಸಂಧಾನಮಾಡಲಿ, ಪದ್ಧತಿಯಲ್ಲಿ ಸ್ವಲ್ಪ ವ್ಯತ್ಯಾಸವಾದರೂ ಪರಿಣಾಮವೆರಡಕ್ಕೂ ಒಂದೇ. ಜ್ಞಾನಿಗೂ ಭಕ್ತನಿಗೂ ಲಕ್ಷಣಭೇದವು ಶಾಸ್ತ್ರದಲ್ಲಿ ಉಕ್ತವಾಗಿಲ್ಲ" ಎಂದು ಅದರ ತಾತ್ಪರ್ಯ. ವಿಶೇಷವಾಗಿ ಜ್ಞಾನಪ್ರತಿಪಾದನೆಯನ್ನು ಮಾಡುವ ಶ್ರೀಶಂಕರಾಚಾರ್ಯರು ಕೂಡ

"सत्यपि भेदापगमे
नाथ तवाहं न मामकीनस्त्वम् ।
सामुद्रो हि तरंगः
क्वचन समुद्रो न तारंगः ॥"

ಎಂಬ ಶ್ಲೋಕದಲ್ಲಿ "ಅಲೆಯು ಸಮುದ್ರಸಂಬಂಧವಾದುದೇ ಹೊರತು ಸಮುದ್ರವು ಎಷ್ಟು ಮಾತ್ರವೂ ಹೇಗೆ ಅಲೆಯ ಸಂಬಂಧವಾದುದಲ್ಲವೊ ಹಾಗೆ ಭೇದವಿಲ್ಲದಿದ್ದರೂ ನಾನು ನಿನ್ನವನೇ ಹೊರತು ನೀನು ನನ್ನ ಸಂಬಂಧಿಯಲ್ಲ" ಎಂದು ಹೇಳಿ ಭಕ್ತಿಯನ್ನು ಅಭಿವ್ಯಕ್ತಗೊಳಿಸಿದ್ದಾರೆ. ಈಭಕ್ತಿಯೋಗವು ಗೌಣೀ ಮತ್ತು ಪರಾ ಎಂಬೆರಡು ಭೇದಗಳಾಗಿದ್ದು ಜ್ಞಾನವನ್ನು ಉಭಯ-ಪಾರ್ಶ್ವಗಳಿಂದಲೂ ಕಾಪಾಡುತ್ತಿರುವದು. ಶ್ರೀಮದ್ಭಾಗವತಪುರಾಣದಲ್ಲಿ

"अकामः सर्वकामो वा मोक्षकाम उदारधीः ।
तीव्रेण भक्तियोगेन यजेत पुरुषं परम् ॥"

ಎಂದು ಹೇಳಿರುವಂತೆ ಯಾವ ಕಾಮನೆಯೂ ಇಲ್ಲದಿದ್ದರೂ ಅಥವಾ ಎಲ್ಲ ಕಾಮನೆಗಳೂ ಇದ್ದರೂ ಮೋಕ್ಷಕಾಮನಾದರೂ ಭಕ್ತಿಯೋಗದಿಂದ ಪರ-ಮಾತ್ಮನನ್ನು ಸೇವಿಸಬೇಕು. ಇದಕ್ಕೆ ಭಾಗವತಧರ್ಮವೆಂದು ಹೆಸರು. ಅದೇ ಪುರಾಣದಲ್ಲಿ

"यानास्थाय नरो राजन् न प्रमाद्येत कर्हिचित् ।
धावन्निमील्य वा नेत्रे न स्खलेन्न पतेदिह ॥"

ಎಂದಿರುವಂತೆ ಭಕ್ತಿಯೋಗಮಾರ್ಗದಲ್ಲಿ ಕಣ್ಣುಮುಚ್ಚಿಕೊಂಡು ಓಡಿದರೂ ಎಡವುವದೂ ಇಲ್ಲ; ಬೀಳುವದೂ ಇಲ್ಲ. ಮತ್ತು ಅದೇ ಪುರಾಣದಲ್ಲಿ

"यत्कर्मभिर्यत्तपसा ज्ञानवैराग्यतश्च यत् ।
योगेन दानधर्मेण श्रेयोभिरितरैरपि ।
सर्वं मद्भक्तियोगेन मद्भक्तो लभतेऽजसा ।"

ಎಂದು ಹೇಳಿರುವಂತೆ ಕರ್ಮಯೋಗ, ರಾಜಯೋಗ ಮತ್ತು ಜ್ಞಾನಯೋಗ ಇವುಗಳಿಂದಲೂ ವೈರಾಗ್ಯ, ಯೋಗ, ದಾನಧರ್ಮ ಮೊದಲಾದ ಇತರ ಸತ್ಕರ್ಮಗಳಿಂದಲೂ ಸಿಕ್ಕುವದನ್ನೆಲ್ಲ ಭಕ್ತಿಯೋಗಿಯು ಪಡೆಯುತ್ತಾನೆ.

ಆದುದರಿಂದ ಕರ್ಮಯೋಗ, ರಾಜಯೋಗ, ಮತ್ತು ಜ್ಞಾನಯೋಗ ಇವುಗಳಿಗಿಂತ ಭಕ್ತಿಯೋಗವು ಶ್ರೇಷ್ಠವು. ಭಗವದ್ಗೀತೆಯೂ ಕೂಡ

"योगिनामपि सर्वेषां मद्गतेनांतरात्मना ।
श्रद्धावान्भजते यो मां स मे युक्ततमो मतः ॥"

ಎಂಬ ಶ್ಲೋಕದಲ್ಲಿ ಸಮಸ್ತಯೋಗಿಗಳಲ್ಲೆಲ್ಲ ಭಕ್ತಿಯೋಗಿಯೇ ಶ್ರೇಷ್ಠವೆಂದು ಸ್ಪಷ್ಟವಾಗಿ ಹೇಳಿರುತ್ತದೆ. ಶ್ರೀಕೃಷ್ಣನು ಭಗವದ್ಗೀತೆಯಲ್ಲಿ

"इति ते ज्ञानमाख्यातं गुह्याद्गुह्यतरं मया ।
विमृश्यैतदशेषेण यथेच्छसि तथा कुरु ॥"

ಎಂಬ ಶ್ಲೋಕದಲ್ಲಿ "ಹೆ, ಅರ್ಜುನ, ಅತಿರಹಸ್ಯವಾದ ಜ್ಞಾನಯೋಗವನ್ನು ನಿನಗೆ ಹೇಳಿದೆನು. ಅದನ್ನೆಲ್ಲ ಸಂಪೂರ್ಣವಾಗಿ ವಿಚಾರಮಾಡಿ ನಿನಗೆ ತಿಳಿದ ಹಾಗೆ ನಡೆ" ಎಂದು ಹೇಳಿ ಅಷ್ಟಕ್ಕೇ ತನ್ನ ಮಾತನ್ನು ಮುಗಿಸದೆ

"सर्वगुह्यतमं भूयः शृणु मे परमं वचः ।
इष्टोऽसि मे दृढमिति ततो वक्ष्यामि ते हितम् ॥'

ಎಂಬ ಶ್ಲೋಕದಲ್ಲಿ ನನಗೆ ಬಹು ಪ್ರಿಯನಾದುದರಿಂದ ಅತ್ಯಂತ ರಹಸ್ಯವಾದ ಇನ್ನೊಂದು ಮಾತನ್ನು ಹೇಳುತ್ತೇನೆಂದು

"मन्मना भव मद्भक्तो मद्याजी मां नमस्कुरु ।
मामेवैष्यासि सत्यं ते प्रतिजाने प्रियोऽसि मे ॥
सर्वधर्मान्परित्यज्य मामेकं शरणं व्रज ।
अहं त्वा सर्वपापेभ्यो मोक्षयिष्यामि मा शुचः ॥"

ಎಂಬ ಶ್ಲೋಕಗಳಿಂದ ಭಕ್ತಿಯನ್ನು ಉಪದೇಶಮಾಡಿ ಗೀತಾಶಾಸ್ತ್ರವನ್ನು ಮುಗಿಸಿರುತ್ತಾನೆ.

---

ಶ್ರೀಃ

## ೫ನೇ ವ್ಯಾಖ್ಯಾನ— ಪೃಥ್ವಿಯೊಳಗಣ ಧರ್ಮಗ್ರಂಥಗಳಲ್ಲಿ ಭಗವದ್ಗೀತೆಯ ಸ್ಥಾನವು.

श्रीरामचंद्रचरणौ मनसा स्मरामि ।
श्रीरामचंद्रचरणौ वचसा गृणामि ॥
श्रीरामचंद्रचरणौ शिरसा नमामि ।
श्रीरामचंद्रचरणौ शरणं प्रपद्ये ॥

ಸಭ್ಯರಾದ ಪ್ರಿಯಬಾಂಧವರೆ,

ಈದಿನದ ವ್ಯಾಖ್ಯಾನದ ವಿಷಯವು ಪೃಥ್ವಿಯೊಳಗಣ ಧರ್ಮಗ್ರಂಥಗಳಲ್ಲಿ ಭಗವದ್ಗೀತೆಯ ಸ್ಥಾನದ ವಿಚಾರವಾಗಿ ಇರುವದು. ಈವಿಷಯವನ್ನು ಪ್ರತಿಪಾದನೆಮಾಡಲು ನಾಲಿಗೆಯನ್ನು ಎತ್ತುವದಕ್ಕೆ ನನಗೆ ಒಂದು ಬಗೆಯಾದ ಸಂಕೋಚವುಂಟಾಗುತ್ತದೆ. ನಾನು ಅನ್ಯಧರ್ಮದವನಾಗಿದ್ದರೆ ವಾರನಹೇಸ್ಟಿಂಗ್ಸ ಮತ್ತು ಹಂಬೊಲ್ಟ ಮೊದಲಾದ ಪಾಶ್ಚಿಮಾತ್ಯಪ್ರಸಿದ್ಧಪುರುಷರಂತೆ ಗೀತೆಯ ಪ್ರಭಾವವನ್ನು ಉದಾರಶಬ್ದಗಳಿಂದ ವರ್ಣಿಸಿ, ನನ್ನ ನಿಷ್ಪಕ್ಷಪಾತವಾದ ವಿಚಾರ ಮತ್ತು ನಿಜವಾದ ತತ್ತ್ವಾರ್ಥದ ಮೇಲಣ ಪ್ರೀತಿಗಳನ್ನು ವ್ಯಕ್ತಗೊಳಿಸಿ, ನಿಮ್ಮೆಲ್ಲರ ಪರಮಾದರಕ್ಕೆ ಪಾತ್ರನಾಗುವ ಸುಯೋಗವು ಉಂಟಾಗುತ್ತಿತ್ತು. ವಾರನ ಹೇಸ್ಟಿಂಗ್ಸ ಎಂಬುವರು "There is in it a sublimity of conception, reasoning and diction almost unequalled" ಎಂದರೆ "ಗೀತೆಯಲ್ಲಿ ಅಭಿಪ್ರಾಯವಿಶೇಷಗಳ ಗಾಂಭೀರ್ಯ, ವಿಚಾರ ಮತ್ತು ವಿಷಯಪ್ರತಿಪಾದನಶೈಲಿಗಳು ಬಹುಮಟ್ಟಿಗೆ ಸರಿಜೋಡಿ ಇಲ್ಲದವುಗಳಾಗಿವೆ" ಎಂದೂ ಹಂಬೋಲ್ಟ ಎಂಬುವರು "The most beautiful, perhaps properly the only true philosophical Song that exists in any known

tongue" ಎಂದರೆ "ಪ್ರಪಂಚದಲ್ಲಿ ಎಷ್ಟು ಭಾಷೆಗಳು ಗೊತ್ತಿಗೆ ಬಂದಿ-ವೆಯೊ ಅವುಗಳಲ್ಲಿರುವ ಕಾವ್ಯಗಳಲ್ಲೆಲ್ಲ ಗೀತೆಯು ಅತ್ಯಂತಹೃದಯಂಗಮ-ವಾದುದು. ಸರಿಯಾಗಿ ನೋಡಿದರೆ ಇದೊಂದೆ ನಿಜವಾದ ತತ್ತ್ವಶಾಸ್ತ್ರೀಯ ಕಾವ್ಯ." ಎಂದೂ ಹೇಳಿರುವರು. ಹೀಗೆಯೇ ಇನ್ನೂ ಎಷ್ಟೋ ಜನ ಪಾಶ್ಚಾತ್ಯರು ಗೀತೆಯ ವಿಷಯದಲ್ಲಿ ಎಷ್ಟೋ ಪೂಜ್ಯವಾದ ಅಭಿಪ್ರಾಯ-ಗಳನ್ನು ಕೊಟ್ಟಿರುವರು. ಧರ್ಮಾಂತರದವರು ಪಡುವ ಇಂಥ ಅಭಿಪ್ರಾಯ-ಗಳು ಜನರ ಮನಸ್ಸಿನ ಮೇಲೆ ಬಹು ಉತ್ತಮವಾದ ಪರಿಣಾಮವನ್ನುಂಟು ಮಾಡುವವು. ಏಕೆಂದರೆ ಭಿನ್ನಧರ್ಮದವರು ದರ್ಮಾಂತರದ ಗ್ರಂಥವನ್ನು ಹೀಗೆ ಬಾಯಿತುಂಬ ಹೊಗಳುವದೆಂದರೆ ನಿಜವಾಗಿ ಅದೊಂದು ಮಹತ್ತ್ವದ ವಿಷಯವೆ. ತಮ್ಮತಮ್ಮ ಧರ್ಮಗ್ರಂಥಗಳಲ್ಲಿ ತಮತಮಗೆ ಗುಣಾಧಿಕ್ಯವು ತೋರುವದು ಲೋಕದಲ್ಲಿ ಸಹಜವಾಗಿರುವದು. ಆಧರ್ಮಗ್ರಂಥದ ಅನು-ಯಾಯಿಗಳಲ್ಲದವರಿಗೂ ಅದರಲ್ಲಿ ಗುಣಾಧಿಕ್ಯವು ತೋರಿತೆಂದರೆ ನಿಜವಾಗಿ ಆಧರ್ಮವು ಗುಣಾಢ್ಯವಾದುದೆಂದೇ ನಿಶ್ಚಯಿಸಬೇಕು. ತಮ್ಮತಮ್ಮ ಧರ್ಮ-ಗ್ರಂಥಗಳಲ್ಲಿ ತಾವುತಾವು ಗುಣಾಧಿಕ್ಯವನ್ನು ನೋಡುವದೇನು ಹೆಚ್ಚಿನ ಮಾತು? ತಮ್ಮತಮ್ಮ ಮನೆಯ ಮಕ್ಕಳಿಗೆ ಮುತ್ತು ಕೊಡುವಾಗ ಆಮಕ್ಕ-ಳು ಸುಂದರವಾಗಿಯೇ ಇರುವರೆಂಬ ನಿಯಮವಿಲ್ಲ; ಕುರೂಪಿಗಳಾಗಿದ್ದರೂ ರಕ್ತಸಂಬಂಧವಾದ ಪ್ರೇಮದಿಂದ ಮುದ್ದಿಸುವದುಂಟು. ಹಾಗೆ ಒಂದು ಧರ್ಮವನ್ನು ಅದರ ಅನುಯಾಯಿಯಾದವನು ಹೊಗಳಿದರೆ ಅವನು ಅದರ ನಿಜವಾದ ಗುಣಾಧಿಕ್ಯವನ್ನು ಕಂಡೇ ಹಾಗೆ ಮಾಡುತ್ತಾನೆಂಬ ನೆಲೆಯಿಲ್ಲ. ಅದು ತನ್ನ ಧರ್ಮವೆಂಬ ಅಭಿಮಾನದಿಂದ ಹಾಗೆ ಮಾಡಿದರೂ ಮಾಡುವ ಸಂಭವವುಂಟೆಂದು ಇತರರು ಯೋಚಿಸುವದಕ್ಕೆ ದಾರಿಯಿದೆ. ಆದುದರಿಂದಲೆ ಒಂದು ಧರ್ಮಗ್ರಂಥದ ಗುಣವನ್ನು ಅದರ ಅನುಯಾಯಿಯಾದವನೆ ವರ್ಣನೆಮಾಡಿದರೆ—ಅದು ಕೇವಲ ಗುಣಾಧಿಕ್ಯವನ್ನು ಕಂಡೇ ಮಾಡಿ-ದ್ದಾದರೂ—ಜನರ ಮನಸ್ಸಿನ ಮೇಲೆ ಅಷ್ಟು ಉತ್ತಮಪರಿಣಾಮವನ್ನು ಮಾಡುವದಿಲ್ಲ. ಈಸಂದರ್ಭದಲ್ಲಿ ಅವನ ಮಾತಿಗೆ ಬೆಲೆ ಕಡಮೆಯಾಗು-ವದಕ್ಕೆ ಅವನು ಆಧರ್ಮದ ಅನುಯಾಯಿಯಾಗಿರುವದೇ ಕಾರಣ. ಈಗ

ನಾನು ಈದಿನ ಇಲ್ಲಿ ಇಂಥ ಒಂದು ಸಂಧಿಗೆ ಸಿಕ್ಕುಬಿದ್ದಿದ್ದೇನೆ. ಗೀತೆಯ ವಿಷಯವಾಗಿ ನಾನು ಏನು ಹೇಳಿದರೂ, ಆಹೇಳೋಣವು ಎಷ್ಟು ಸಕಾರಣವಾಗಿದ್ದರೂ, ಎಷ್ಟು ವಿಚಾರಪೂರ್ವಕವಾಗಿ ಇದ್ದರೂ, ಎಷ್ಟು ನಿಷ್ಪಕ್ಷಪಾತವಾಗಿದ್ದರೂ, ಎಷ್ಟು ಸ್ಪಷ್ಟವಾಗಿದ್ದರೂ ನಾನು ಗೀತೆಯ ಅನುಯಾಯಿಯೆಂದು ನೀವೆಲ್ಲರೂ ತಿಳಿದಿರುವದರಿಂದ ನನ್ನ ಹೇಳಿಕೆಗೆ ತಕ್ಕ ಬೆಲೆ ಬರುವದಿಲ್ಲವೆಂಬ ನಿರೀಕ್ಷಣೆಯಿಂದ ನನ್ನ ನಾಲಿಗೆಯು ಈವಿಷಯದಲ್ಲಿ ಹಿಂಜರಿಯುತ್ತಿರುವದು. ಗೀತೆಯ ಅನುಯಾಯಿಯಾಗಿರುವದು ಸುಯೋಗವೊ ದುರ್ಯೋಗವೊ ಅದರ ಮಾತು ಒಂದು ಕಡೆ ಇರಲಿ; ಧರ್ಮಗ್ರಂಥಗಳಲ್ಲಿ ಗೀತೆಯ ಸ್ಥಾನವನ್ನು ಗೊತ್ತುಮಾಡುವ ಈ ಸಂದರ್ಭದಲ್ಲಿ ನಾನು ಗೀತೆಯ ಅನುಯಾಯಿಯಾಗಿರುವದು ನನ್ನ ದುರ್ಯೋಗವೆಂದೇ ಭಾವಿಸುವೆನು. ಹೇಗಾದರೂ ಆಗಲಿ. ಈವಿಷಯದ ವಿಚಾರವು ಈದಿನ ನಡೆಯತಕ್ಕದ್ದೆಂದು ಮೊದಲೆ ಗೊತ್ತಾಗಿರುವದರಿಂದ ಈಗ ನಾನು ಇದನ್ನು ಹೇಳಲೇ ಬೇಕಾಗಿರುವದು. ಅದರಂತೆ ಹೇಳಿಯೂ ಹೇಳುವೆನು. ತಮ್ಮದಾಗಲಿ ಅನ್ಯರದಾಗಲಿ ಒಂದು ಪದಾರ್ಥಕ್ಕೆ ಬೆಲೆಯನ್ನು ಕಟ್ಟುವದಕ್ಕೆ ಕೂತಾಗ ಅದಕ್ಕದಕ್ಕೆ ತಕ್ಕ ಬೆಲೆಯನ್ನು ಕಟ್ಟಲೇ ಬೇಕು. ತನ್ನ ಪದಾರ್ಥವಾದ ಮಾತ್ರಕ್ಕೇ ಸುಮ್ಮಸುಮ್ಮನೆ ಅದರ ಬೆಲೆ ಎಷ್ಟೆಂಬದನ್ನು ಮುಚ್ಚಿಟ್ಟುಕೊಳ್ಳಬೇಕೆ? ತನ್ನ ಮಾತನ್ನು ಇತರರು ಪಕ್ಷಪಾತಪೂರ್ವಕವೆಂದಾದರೂ ತಿಳಿಯಲಿ, ನಿಷ್ಪಕ್ಷಪಾತಪೂರ್ವಕವೆಂದಾದರೂ ತಿಳಿಯಲಿ; ತಾನು ಹೇಳತಕ್ಕದ್ದನ್ನು ಹೇಳುವದು ತನ್ನ ಕರ್ತವ್ಯ. ಹೀಗೆ ಕರ್ತವ್ಯದೃಷ್ಟಿಯಿಂದ ನಾನು ಈದಿನದ ವ್ಯಾಖ್ಯಾನವನ್ನು ಆರಂಭಿಸುವೆನು.

ಧರ್ಮದ ಪ್ರಯೋಜನವನ್ನೂ ಧರ್ಮದ ಲಕ್ಷಣವನ್ನೂ ಹಿಂದಿನ ದಿನಗಳಲ್ಲಿಯೇ ಪ್ರಸ್ತಾಪಿಸಿರುವೆನು. ಧರ್ಮದಿಂದಲೆ ಮನುಷ್ಯಜನ್ಮವು ಸಾರ್ಥಕವಾಗುವದು. **"सुखं तु न विना धर्मात्"** ಎಂಬಂತೆ ಧರ್ಮದ ಹೊರತು ನಿಜಸುಖವು ಸಿಕ್ಕುವಂತೆ ಇಲ್ಲ. ನಾವು ಕಂಡಹಾಗೆ ಸಂಸಾರದಲ್ಲಿ ಅಸಮಾಧಾನವೂ ಸಂಕಟವೂ ಯೋಚನೆಯೂ ಯಾವ ಪ್ರಾಣಿಯನ್ನೂ ಬಿಟ್ಟಿಲ್ಲ. ಎಲ್ಲಿ ನೋಡಿದರೂ ಸಂಕಟವೆಂಬ ಚೇಳಿನ ಹೊಡೆತವನ್ನು ಅರಿಯದ ಹೃದಯವೇ ಇಲ್ಲ; ಯೋಚನೆಯೆಂಬ ಸಮುದ್ರದ ಅಲೆಯ ಹೊಡೆತಕ್ಕೆ

ಸಿಕ್ಕದ ಮನಸ್ಸೇ ಇಲ್ಲ; ಒಬ್ಬರಿಂದೊಬ್ಬರನ್ನು ಅಗಲಿಸಿ ಚಿಂತೆಯಲ್ಲಿ ಮಗ್ನ-ರನ್ನಾಗಿ ಮಾಡುವ ರೋಗ ಮತ್ತು ಸಾವು ಎಂಬ ಯಮದೂತರು ಪ್ರವೇಶಿ-ಸದ ಮನೆಯೇ ಇಲ್ಲ. ಬಿಡಿಸಲಿಕ್ಕೇ ಬರದಂತೆ ಕಾಣುತ್ತಿರುವ ಈದುಃಖ ವೆಂಬ ಬಲೆಯಲ್ಲಿ ಎಲ್ಲರೂ ಸ್ವಲ್ಪವುಟ್ಟಿಗಾದರೂ ಸಿಕ್ಕುಬಿದ್ದಿರುವರು. ಎಂಥ ಶ್ರೀಮಂತರಿಗೂ ಈದುಃಖವು ತಪ್ಪಿದ್ದಲ್ಲ. ಈ ಅರ್ಥವನ್ನು ಸ್ಪಷ್ಟಗೊಳಿಸುವ-ದಕ್ಕೆ ಒಂದು ನಿದರ್ಶನವನ್ನು ಹೇಳುವೆನು. ಆಗತಾನೆ ಗೆದ್ದು ಸಿಂಹಾಸ-ನಕ್ಕೆ ಬಂದ ಒಬ್ಬ ರಾಜನು ತನ್ನ ವಿಷಯದಲ್ಲಿ ಪ್ರಜೆಗಳು ಏನಭಿಪ್ರಾಯ-ಪಡುತ್ತಿರುವರೊ ನೋಡಬೇಕೆಂದು ಒಂದು ರಾತ್ರಿಯಲ್ಲಿ ವೇಷವನ್ನು ಮರೆಸಿ-ಕೊಂಡು ಹೊರಬಿದ್ದನು. ದಾರಿಯಲ್ಲಿ ಒಬ್ಬ ದರಿದ್ರನ ಮನೆಯಲ್ಲಿ ತನ್ನ ಮಾತು ನಡೆಯುತ್ತಿದ್ದಂತೆ ಅವನಿಗೆ ಕೇಳಿಸಿತು. ರಾಜನು ಆಮನೆಯ ಹತ್ತಿರಕ್ಕೆ ಹೋಗಿ ಮರೆಯಲ್ಲಿ ನಿಂತು ಆಲಿಸಿದನು. ಆಗ ಆದರಿದ್ರನು "ನಮ್ಮ ಅರಸಿಗೆಷ್ಟು ಸಂಪತ್ತು ಇರುವದು! ಅವನ ಸುಖಕ್ಕೆಣೆಯುಂಟೆ?" ಎಂದು ಆಡಿದ ಮಾತು ರಾಜನ ಕಿವಿಗೆ ಬಿತ್ತು. ಮರುದಿನ ದೊರೆಯು ಆಬಡವನನ್ನು ಭೋಜನಕ್ಕೆಂದು ಅರಮನೆಗೆ ಬರಹೇಳಿಕಳುಹಿಸಿದನು. ಅದ-ರಂತೆ ಅವನು ಬಂದನು. ಆದಿನ ಭೋಜನಶಾಲೆಯನ್ನೆಲ್ಲ ದಿವ್ಯವಾಗಿ ಅಲಂಕ-ರಿಸಿದ್ದರು. ಆಬಡವನ ಎಡೆಗೆ ಬಹುಸೊಗಸಾದ ಪಕ್ವಾನ್ನಗಳನ್ನೆಲ್ಲ ಬಡಿಸಿ-ದ್ದರು. ದೊರೆಯು ಆದರಿದ್ರನಿಗೆ ಆಗ ರಾಜೋಪಚಾರಗಳನ್ನು ತೋರಿಸ-ಬೇಕೆಂದು ಕಟ್ಟುಮಾಡಿದ್ದಂತೆ ಎಲ್ಲರೂ ಅವನಿಗೆ ಬಹು ಗೌರವವನ್ನು ತೋರಿ-ಸುತ್ತಿದ್ದರು. ಆದರೂ ಆದುರ್ದೈವಿಯು ಒಂದು ತುತ್ತನ್ನಾದರೂ ಬಾಯಿಗೆ ಹಾಕಿಕೊಳ್ಳಲಿಲ್ಲ. ಏಕೆಂದರೆ ಅವನ ನೆತ್ತಿಯ ಮೇಲೆ ಸರಿಯಾಗಿ ಹರಿತವಾದ ಒಂದು ಕತ್ತಿಯನ್ನು ತೂಗುಹಾಕಿದ್ದರು. ಆಕತ್ತಿಯನ್ನು ಒಂದು ಕೂದಲಿಗೆ ಕಟ್ಟಿ ನೇತುಹಾಕಿದ್ದುದರಿಂದ ಅದು ಯಾವಾಗ ಮೇಲೆ ಬೀಳುವದೊ ಎಂಬ ಭೀತಿಯು ಅವನನ್ನು ವ್ಯಾಪಿಸಿತ್ತು. ಆರಾಜನು ಮತ್ತೊಬ್ಬನ ಸಿಂಹಾಸ-ನವನ್ನು ಬಲಾತ್ಕಾರದಿಂದ ಆಕ್ರಮಿಸಿದವನಾಗಿದ್ದನು. ತನ್ನ ಅಧಿಕಾರದಲ್ಲಿ ಬಹಳ ಸುಖವಿದೆಯೆಂದು ತಿಳಿದಿದ್ದ ಆಬಡವನಿಗೆ ತನ್ನ ಸ್ಥಿತಿಯ ನಿಜವಾದ ಬೆಲೆಯನ್ನು ತಿಳಿಸುವದಕ್ಕಾಗಿ ಈರೀತಿ ಮಾಡಿದನಂತೆ. ಪ್ರತಿಯೊಂದು

ಲೌಕಿಕಾನಂದದಲ್ಲಿಯೂ ಇಂಥದ್ದೊಂದು ಶಕ್ತಿ ಇದ್ದೇ ಇರುವದು. ಈಅಭಿ-ಪ್ರಾಯದಿಂದಲೆ ಗೀತೆಯು

"ये हि संस्पर्शजा भोगा दुःखयोनय एव ते"

ಎಂದು ಹೇಳಿರುವದು. ವಿಷಯಗಳ ಮತ್ತು ಇಂದ್ರಿಯಗಳ ಸಂಬಂಧದಿಂದ ಆಗುವ ಸುಖವೆಂಬುದು ಉಪ್ಪುನೀರಿನಂತೆ ಆಕಾಲಕ್ಕೆ ಸುಖವಾಗಿ ತೋರಿ ಇನ್ನೂ ಸುಖದ ಬಯಕೆಯನ್ನು ಹೆಚ್ಚಿಸುವದೇ ಹೊರತು ಅದನ್ನು ಪೂರ್ಣ-ಮಾಡುವದಿಲ್ಲ. ಇಂಥ ಸುಖಾಭಾಸಕ್ಕಾಗಿ ದೇವರು ಮನುಷ್ಯನನ್ನು ಸೃಷ್ಟಿ-ಮಾಡಿರಲಾರನು. ಜಡವಾದ ವಿಷಯಗಳಿಗಿಂತ ಚೇತನವುಳ್ಳ ತಿರ್ಯಕ್ಪ್ರಾಣಿ-ಗಳು ಸಾವಿರಪಾಲು ಮೇಲು. ಮಂದಬುದ್ಧಿಯುಳ್ಳ ಅವುಗಳಿಗಿಂತ ಅಸಾ-ಧಾರಣಬುದ್ಧಿಶಕ್ತಿಯುಳ್ಳ ಮನುಷ್ಯಜನ್ಮವು ಕೋಟಿಪಾಲು ಹೆಚ್ಚಿನದು. ಇಂಥ ಮನುಷ್ಯಜನ್ಮದಲ್ಲಿದ್ದೂ ನಮ್ಮ ಸುಖವು ವಿಷಯಾಧೀನವೆಂದರೆ ನಮ್ಮ-ದೇನು ಹೆಚ್ಚುಗಾರಿಕೆ? ಮಂದಬುದ್ಧಿಯುಳ್ಳ ತಿರ್ಯಗ್ಜಂತುಗಳು ವಿಷಯಗ-ಳಿದುರಿಗೆ ಬಾಯಿನೀರು ಕರೆದುಕೊಂಡಿರಲಿ. ಮನುಷ್ಯನು ತಿರ್ಯಗ್ಜಂತುಗಳಿ-ಗಿಂತ ಶ್ರೇಷ್ಠನೆನಿಸಿಕೊಳ್ಳಬೇಕಾದರೆ ಇವನ ಸುಖವು ತಿರ್ಯಗ್ಜಂತುಗಳಿಗಿರು-ವಂತೆ ವಿಷಯಾಧೀನವಾಗಿರಕೂಡದು. ತಿರ್ಯಗ್ಜಂತುಗಳಂತು ವಿಷಯ-ಸುಖವನ್ನು ದಾಟಿ ಮುಂದೆ ಹೋಗಲಾರವು. ಮನುಷ್ಯನಿಗೆ ಅದು ಅಸಾ-ಧ್ಯವೆ? ಹಾಗಾದರೆ ಅವನ ಬುದ್ಧಿಯ ಉಪಯೋಗವೇನು? ಹೀಗೆಂದರೆ ಮನುಷ್ಯರು ವಿಷಯಸುಖಗಳನ್ನು ಉಪಭೋಗಮಾಡಲೇ ಬಾರದೆಂದು ನನ್ನ-ಭಿಪ್ರಾಯವಲ್ಲ. ಮನುಷ್ಯನ ಸುಖವು ವಿಷಯಾಧೀನವಾಗಿರಬಾರದು. ಇಷ್ಟೆ. ಸುಖವೆಂಬುದು ವಿಷಯಗಳಲ್ಲಿಲ್ಲವೆಂದೂ ಅದು ಮನಸ್ಸಿನ ಸ್ಥಿತಿಯೆಂದೂ ನಾನು ದಿನದಿನವೂ ಹೇಳುತ್ತಲೇ ಇದ್ದೇನೆ. ಇದನ್ನು ನೆನಪಿನಲ್ಲಿಡಬೇಕು. ಹೀಗೆ ಇದನ್ನು ಮತ್ತೆಮತ್ತೆ ಹೇಳುವದಕ್ಕೆ ಕಾರಣವೇನೆಂದರೆ ಇದೊಂದು ಎಲ್ಲರೂ ಮುಗ್ಗರಿಸುವ ಸ್ಥಳ. ವಿಷಯಗಳಲ್ಲಿ ಸುಖವಿಲ್ಲ. ವಿಷಯಗಳ ಯಾವ ಸ್ಥಿತಿಯನ್ನು ಸುಖವೆಂದು ಹೇಳಬೇಕು? ಕ್ಷಣಕ್ಷಣಕ್ಕೂ ಬದಲಾಗುತ್ತಿರುವ ವಿಷಯಗಳನ್ನು ನಂಬುವದು ಹೇಗೆ? ಯಾರ ಮನಸ್ಸು ಎಲ್ಲಿಯವರೆಗೆ ತನಗೆ

ದೊರೆಯುವ ವಿಷಯುಗಳು ಒಂದೇ ರೀತಿಯಲ್ಲಿ ಇರಬೇಕೆಂದು ಬಯಸುತ್ತ ಇರುವದೊ ಅಲ್ಲಿಯವರೆಗೂ ಅವರಿಗೆ ಸುಖವಿಲ್ಲ. ಏಕೆಂದರೆ ಯಾವಾಗಲೂ ಬದಲಾಗುತ್ತಿರುವದೇ ವಿಷಯುಗಳ ಸ್ವಭಾವ. ಆವಿಷಯುಗಳು ಒಂದೇ ಸ್ಥಿತಿ-ಯಲ್ಲಿರಬೇಕೆಂದರೆ ಹೇಗಾದೀತು? ಸೃಷ್ಟಿನಿಯಮಕ್ಕೆ ವಿರೋಧವಾಗಿ ಇಚ್ಛೆ-ಮಾಡುವದು ದಡ್ಡತನ. ಅದೇ ದುಃಖಕ್ಕೆ ಕಾರಣ. ಈಗ ವ್ಯವಹಾರದಲ್ಲಿ ಆಗುತ್ತಿರುವ ದುಃಖವೆಲ್ಲ ಆದರಿಂದಲೆ. ಆದುಃಖವು ಹೋಗಬೇಕಾದರೆ ಮನಸ್ಸು ತನ್ನನ್ನನುಸರಿಸಿ ವಿಷಯುಗಳಿರಬೇಕೆಂಬ ಇಚ್ಛೆಯನ್ನು ಬಿಡಬೇಕು ಮತ್ತು ವಿಷಯುಗಳಂತೆ ತಾನಾಗಬೇಕು. ಎಂದರೆ ವಿಷಯುಗಳು ಯಾವ ಸ್ಥಿತಿಯಲ್ಲಿ ದೊರೆತರೂ ಅದೇ ತನ್ನ ಇಷ್ಟಸ್ಥಿತಿಯೆಂಬಂತೆ ಭಾವಿಸಬೇಕು. ಹೀಗೆ ಮನಸ್ಸನ್ನು ಮಾಡಿಕೊಂಡು ಈಸಂಸಾರದಲ್ಲಿ ನಿರಂತರವೂ ಆನಂದ-ದಿಂದ ಇರುವದಕ್ಕೆ ಮನುಷ್ಯನಿಗೆ ಧರ್ಮವು ಬೇಕು. ಇದಲ್ಲದೆ **"धर्मो विश्वस्य जगतः प्रतिष्ठा"** ಎಂಬ ಶ್ರುತಿಯಂತೆ ಜಗತ್ತಿನ ಸ್ಥಿತಿಯು ಚೆನ್ನಾಗಿ ಇರುವದಕ್ಕಾಗಿಯೂ ಧರ್ಮವು ಬೇಕು.

ಯಾವನು ಯಾವ ಪದಾರ್ಥವನ್ನು ಸೃಷ್ಟಿಮಾಡುತ್ತಾನೊ ಅವನಿಗೆ ಆಪದಾರ್ಥವನ್ನು ಚೆನ್ನಾಗಿ ರಕ್ಷಿಸುವ ಯೋಚನೆ ಇರುವದು. ಈಜಗತ್ತನ್ನು ಸೃಷ್ಟಿಮಾಡಿದ ದೇವರಿಗೆ ಇದನ್ನು ಕಾಪಾಡುವ ಆಲೋಚನೆ ಇದ್ದೇ ಇರುವದು. ಸೃಷ್ಟಿಯನ್ನು ಮಾಡಿದೊಡನೆ ಪರಮಕಾರುಣಿಕನಾದ ಅವನು ಅಂಥ ಧರ್ಮ-ಗಳನ್ನು ತಾನಾಗಿ ಉಪದೇಶವನ್ನು ಮಾಡಿಯೆ ಜಗಚ್ಚಕ್ರಕ್ಕೆ ಕೀಲುಕೊಟ್ಟನು. ಆಕೀಲು ಸಡಿಲವಾಗುತ್ತ ಬಂದು ಜಗತ್ತಿಗೆ ಅಪಾಯವಾಗುವ ಸಂದರ್ಭದಲ್ಲಿ ತಾನು ಅವತಾರಮಾಡಿ ಬಂದು ಉದ್ಧಾರಮಾಡುತ್ತೇನೆಂದು ಕೂಡ ಹೇಳಿರು-ವನು. ಹಾಗೆ ಎಷ್ಟೋ ಅವತಾರಗಳನ್ನೂ ಮಾಡಿರುವನು. ಅಲ್ಲದೆ ತಾನು ಇಳಿದು ಬರಬೇಕಾದಷ್ಟು ಅಗತ್ಯವಿಲ್ಲದ ಸಂದರ್ಭದಲ್ಲಿ ಯಾರು ತನ್ನಲ್ಲಿ ಮನ-ಸ್ಸನ್ನು ಲೀನಮಾಡಿ ಅನ್ಯಾದೃಶವಾದ ಭಕ್ತಿಯನ್ನು ಮಾಡವರೊ ಅಂಥವರ ಹೃದಯದಲ್ಲಿ ಮರೆಯಾಗಿದ್ದು ಎಷ್ಟೋ ವೇಳೆ ಅವರ ಮೂಲಕ ಧರ್ಮಕ್ಕೆ ಕರಾವಲಂಬನವನ್ನು ಕೊಟ್ಟು ಎತ್ತಿರುವನು. ಪರಮಾತ್ಮವಿಚಾರದಲ್ಲಿ ತನ್ಮ-ಯರಾದ ಭಕ್ತರು ಇಂಥ ಕಡೆಯಲ್ಲಿಯೇ ಇಂಥ ಕಾಲದಲ್ಲಿಯೇ ಇರುವರೆಂಬ

ನಿಯಮವಿಲ್ಲ. ಪರಮಾತ್ಮನು ಸೃಷ್ಟಿಮಾಡಿರುವ ಈಬ್ರಹ್ಮಾಂಡದಲ್ಲಿ ಎಲ್ಲಿ ಬೇಕಾದರೂ ಯಾವಾಗ ಬೇಕಾದರೂ ಅವರು ಪ್ರಕಟರಾಗಬಹುದು. ಧರ್ಮ-ವನ್ನುದ್ಧಾರಮಾಡುವದಕ್ಕೆ ಸಾಧನವಾದಂಥ ಪವಿತ್ರದೇಹವುಳ್ಳವರು ಬಹು ಕಡಮೆಯೆಂಬ ಮಾತಿಗೇನೂ ಸಂಶಯವಿಲ್ಲ. ಆದರೆ ಅವರಿಗೆ ದೇಶಕಾಲ-ಗಳ ನಿಯಮವನ್ನು ಮಾತ್ರ ಹೇಳುವದಕ್ಕೆ ಆಗುವದಿಲ್ಲ. ಪರಮಾತ್ಮನಿಗೆ ತಾನು ಸೃಷ್ಟಿಮಾಡಿರುವ ಎಲ್ಲ ಭೂಭಾಗವೂ ಒಂದೆ. ಒಂದು ಕಡೆಯವರ ಮೇಲೆ ಪ್ರೀತಿ, ಇನ್ನೊಂದು ಕಡೆಯವರ ಮೇಲೆ ಹಗೆತನ ಹೀಗೆ ಅವನಿಗಿಲ್ಲ. **"धर्मस्य प्रभुरच्युत:"** ಎಂಬಂತೆ ಧರ್ಮದ ಪ್ರಭುವಾದ ಆಭಗವಂತನು ಒಬ್ಬರ ಕಣ್ಣಿಗೆ ಸುಣ್ಣ, ಒಬ್ಬರ ಕಣ್ಣಿಗೆ ಬೆಣ್ಣೆ ಹೀಗೆ ಭೇದವನ್ನು ಮಾಡುವವ-ನಲ್ಲ. ಎಲ್ಲ ಕಡೆಯವರೂ ಯಾವಾಗಲೂ ಒಳ್ಳೆಯ ಸ್ಥಿತಿಯಲ್ಲಿರಬೇಕೆಂದು ಅವನ ಇಚ್ಛೆ. ಆದುದರಿಂದ ಎಲ್ಲ ಕಡೆಯ ಭಕ್ತರಲ್ಲಿಯೂ ಅವನು ಪ್ರಕಟ-ನಾಗಲೇ ಬೇಕು. ಹಾಗೆ ಆಗಿಯೂ ಇರುವನು. ಲೋಕವೆಲ್ಲ ಒಳ್ಳೆಯ ಸ್ಥಿತಿಯಲ್ಲಿರಬೇಕೆಂಬ ಉದ್ದೇಶದಿಂದ ಧರ್ಮವನ್ನು ಪ್ರಸಾರಮಾಡುವದಕ್ಕೆ ಹೊರಟವರೆಲ್ಲ ಭಗವಂತನ ವಿಭೂತಿವಿಶೇಷದವರೆ. ಅಂಥವರು ಪ್ರಪಂಚದ ಎಲ್ಲ ಕಡೆಯಲ್ಲಿಯೂ ಪ್ರಕಟರಾಗಿರುವರು. ಅವರು ತಮ್ಮತಮ್ಮ ಬುದ್ಧಿ-ಶಕ್ತಿಯನ್ನೆಲ್ಲ ವೆಚ್ಚಮಾಡಿ ಧರ್ಮತತ್ತ್ವವನ್ನು ಹರಡಿರುವರು. ಕ್ರೈಸ್ತಧರ್ಮ-ವನ್ನು ಸ್ಥಾಪಿಸಿದ ಯೇಸುವೂ, ಮುಹಮ್ಮದೀಯ ಮತವನ್ನು ಸ್ಥಾಪಿಸಿದ ಮುಹಮ್ಮದನೂ ಮೊದಲಾಗಿ ಧರ್ಮಸ್ಥಾಪಕರೆನಿಸಿಕೊಂಡಿರುವವರೆಷ್ಟುಮಂದಿ ಇರುವರೊ ಅವರೆಲ್ಲ ಭಗವಂತನ ವಿಭೂತಿವಿಶೇಷದವರೆ. ಹಾಗಿಲ್ಲದಿದ್ದರೆ ಅವರು ವಿಷಯಸುಖಕ್ಕೆಲ್ಲ ತಿಲತರ್ಪಣವನ್ನು ಬಿಟ್ಟು ಲೋಕವೆಲ್ಲ ಸುಖದಿಂದ ಇರಬೇಕೆಂಬ ಉದ್ದೇಶದಿಂದ ತಾವು ಎಷ್ಟೋ ಸಂಕಟಗಳಿಗೆ ಎದೆಗೊಟ್ಟು ಹೋರಾಡುತ್ತಲೆ ಇರಲಿಲ್ಲ. ಹೀಗೆ ಬೇರೆಬೇರೆ ಕಡೆಗಳಲ್ಲಿ ಬೇರೆಬೇರೆ ಜನರು ಧರ್ಮಸ್ಥಾಪನೆಮಾಡಿದ್ದರೂ ಸ್ಥಾಪಿತವಾದ ಧರ್ಮ ಒಂದೆ. ಈಅಭಿಪ್ರಾ-ಯವು ಎಲ್ಲ ಧರ್ಮಗ್ರಂಥಗಳನ್ನೂ ಅವಲೋಕನ ಮಾಡಿದರೆ ತಿಳಿಯುವದು. ಬೇರೆಬೇರೆ ಭಾಷೆಗಳಲ್ಲಿರುವ ಬೇರೆಬೇರೆ ಧರ್ಮಗ್ರಂಥಗಳನ್ನೆಲ್ಲ ಓದುವದು ಸಂಭವವೆಂದು ಈಗಿನ ದಿವಸದಲ್ಲಿ ಹೇಳುವ ಹಾಗೆ ಇಲ್ಲ. ಈಗ ಬಹು-

ಮಟ್ಟಿಗೆ ಎಲ್ಲ ಧರ್ಮಗ್ರಂಥಗಳೂ ಇಂಗ್ಲೀಷಿಗೆ ಭಾಷಾಂತರವಾಗಿರುವವು. ಅವುಗಳನ್ನು ಓದಿನೋಡಿದರೆ ಈಅಭಿಪ್ರಾಯವು ವ್ಯಕ್ತವಾಗುವದು. ಹೀಗೆ ಧರ್ಮವು ಒಂದೇ ಆದರೂ ಒಂದೊಂದು ಕಡೆಯಲ್ಲಿ ಬೇರೆಬೇರೆಯಾಗಿ ಸ್ಥಾಪಿ-ಸಿದ ಒಬ್ಬೊಬ್ಬರ ಸ್ವಭಾವಸಂಸರ್ಗಬಲದಿಂದ ಅದರ ಹೊರಗಣ ಸ್ವರೂಪವು ಭಿನ್ನಭಿನ್ನವಾಗಿ ಕಾಣುವದು. ಇವತ್ತು ಸಮಸ್ತಧರ್ಮಸ್ಥಾಪಕರನ್ನೂ ಒಂದೆಡೆಯಲ್ಲಿ ಕೂಡಿಹಾಕಿ ನೋಡಿದರೆ ಅವರೆಲ್ಲರೂ ಒಂದೇ ಅಭಿಪ್ರಾಯ-ವುಳ್ಳವರೆಂದು ಸ್ಪಷ್ಟವಾಗುವದು. ಒಂದೇ ಅಭಿಪ್ರಾಯವನ್ನು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಆಡಿ ತೋರಿಸುವಂತೆ ಒಂದೇ ಧರ್ಮತತ್ತ್ವವನ್ನು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಜನರ ಮುಂದೆ ಇಟ್ಟಿರುವರು. ಆದು-ದರಿಂದ ಧರ್ಮಗ್ರಂಥಗಳೆಲ್ಲ ಶ್ರೇಷ್ಠವಾದವುಗಳೆ. ಧರ್ಮದೃಷ್ಟಿಯಿಂದ ಅವುಗಳನ್ನು ತಕ್ಕಡಿಯಲ್ಲಿ ಹಾಕಿ ತೂಕಮಾಡಬೇಕಾದುದಿಲ್ಲ. ಹಾಗೆ ಅವು-ಗಳಲ್ಲಿ ಶ್ರೇಷ್ಠತೆ ಇಲ್ಲದಿದ್ದರೆ ಇದುವರೆಗೂ ಆಗ್ರಂಥಗಳು ಜೀವಿಸಿರುತ್ತಲೆ ಇರ-ಲಿಲ್ಲ. ನಮ್ಮ ಕಣ್ಣೆದುರಿಗೇ ಎಷ್ಟೋ ಇತರಗ್ರಂಥಗಳು ಅತ್ತೀಹಣ್ಣಿನ ಹುಳ-ಗಳಂತೆ ಆಗಿಹೋಗುವವಲ್ಲ! ಹೀಗಿರುವಾಗ ಎಷ್ಟೋ ಹಿಂದಿನಿಂದ ಎಷ್ಟೋ ಜನ ವಿದ್ಯಾವಂತರಾದ ಅನುಯಾಯಿಗಳ ಆದರಕ್ಕೆ ಪಾತ್ರವಾಗಿ ಇನ್ನೂ ತಲೆ ಎತ್ತಿಕೊಂಡು ನಗುಮುಖದಿಂದ ನಿಂತಿರುವ ಧರ್ಮಗ್ರಂಥಗಳಲ್ಲಿ ಶ್ರೇಷ್ಠತ್ವ-ವಿಲ್ಲವೆಂದು ಹೇಗೆ ಹೇಳಲಾದೀತು? ಹೀಗಿರುವಾಗ ಒಂದು ಧರ್ಮಗ್ರಂಥವು ಮೇಲೆಂದೂ ಇನ್ನೊಂದು ಧರ್ಮಗ್ರಂಥವು ಕೀಳೆಂದೂ ಹೇಳುವದು ತಪ್ಪು. ಧರ್ಮಗ್ರಂಥದ ಗುಣಗ್ರಹಣವನ್ನು ಮಾಡುವದಕ್ಕೆ ಹೋಗಿ ಅನ್ಯಧರ್ಮವು ಕೀಳೆಂದು ತಿರಸ್ಕರಿಸುವದೇ ಅಧರ್ಮವಾಗುವದು.

"भूतावमानिनाऽर्चायामर्चितोऽहं न पूजितः"

ಎಂದರೆ ಪ್ರಾಣಿಗಳನ್ನು ಅವಮಾನ ಮಾಡುತ್ತ ನನಗೆ ಮಾಡುವ ಪೂಜೆಯು ಪೂಜೆಯೇ ಅಲ್ಲವೆಂದು ಅಧ್ಯಾತ್ಮರಾಮಾಯಣದಲ್ಲಿ ಶ್ರೀರಾಮನು ಹೇಳಿರುವಂತೆ ಇತರರನ್ನು ದೂಷಿಸುವ ಧರ್ಮವು ಎಂದಿಗೂ ಧರ್ಮವೆನಿಸುವದಿಲ್ಲ. ದೂಷ-ಣೆಗೂ ಧರ್ಮಕ್ಕೂ ಬಹುದೂರ. ಬೈಬಲ್. ಕೊರಾನ ಮೊದಲಾದ

ಧರ್ಮಗ್ರಂಥಕಾರರು ಅನ್ಯಧರ್ಮವನ್ನು ಧಿಕ್ಕರಿಸಿದ್ದರೆ ಅದು ತಮ್ಮ ಧರ್ಮದಲ್ಲಿ ಜನರಿಗೆ ವಿಶ್ವಾಸಹುಟ್ಟಲೆಂಬುದಕ್ಕೇ ಹೊರತು ಅನ್ಯಧರ್ಮವನ್ನು ತಿರಸ್ಕರಿಸುವದು ಅವರ ತಾತ್ಪರ್ಯವಲ್ಲ. ನಮ್ಮ ಆರ್ಯಧರ್ಮಗ್ರಂಥಗಳಲ್ಲಿಯೂ ನೋಡಿರಿ. ಒಬ್ಬ ವ್ಯಾಸರೇ ಶಿವಪುರಾಣ, ವಿಷ್ಣುಪುರಾಣ ಮೊದಲಾದ ಅನೇಕ ಪುರಾಣಗಳನ್ನು ಬರೆದಿರುವರು. ಒಬ್ಬರಿಗೇ ಒಬ್ಬರಲ್ಲಿ ಪ್ರೇಮ ಮತ್ತು ಹಗೆತನಗಳೆರಡೂ ಇರುವದೆಂಬುದು ಅಸಂಭವದ ಮಾತಲ್ಲವೆ? ಆದರೂ ವ್ಯಾಸರು ಶಿವಪುರಾಣದಲ್ಲಿ ವಿಷ್ಣುವನ್ನು ಕೆಳಗೆಮಾಡಿರುವರು; ವಿಷ್ಣುಪುರಾಣದಲ್ಲಿ ಶಿವನನ್ನು ಕೆಳಗೆ ಮಾಡಿರುವರು. ಇದೇ ವ್ಯಾಸರೇ ಪರಮಾತ್ಮನು ನಾಮರೂಪಾತೀತನೆಂದೂ ಹೇಳಿರುವರು. ಇದಕ್ಕೆಲ್ಲ ಏನರ್ಥ? ಯಾರಿಗೆ ಯಾವದರಲ್ಲಿ ಪ್ರೇಮವುತ್ಪನ್ನವಾಗುವದೊ ಅವರಿಗೆ ಅದರಲ್ಲಿ ದೃಢವಿಶ್ವಾಸ ಉತ್ಪನ್ನವಾಗಲೆಂಬ ಉದ್ದೇಶದಿಂದ ಮಾತ್ರ ಒಂದು ದೇವತಾಮೂರ್ತಿಯನ್ನು ಇನ್ನೊಂದರ ಕೆಳಗೆ ಮಾಡಿದರೇ ಹೊರತು ಅದೇ ಪರಮತತ್ತ್ವವಲ್ಲ. ದೊಡ್ಡವರ ಮಾತಿನಲ್ಲಿ ಅರ್ಥವು ದೊಡ್ಡದಾಗಿರುವದು. ಅದನ್ನು ತಿಳಿದುಕೊಳ್ಳುವವರ ಬುದ್ಧಿಯೂ ದೊಡ್ಡದಾಗಿರಬೇಕು. ಎಂದರೆ ವಿವೇಕಪೂರ್ವಕವಾಗಿ ತಾತ್ಪರ್ಯವನ್ನು ನಿರ್ಣಯಿಸಬೇಕು. ಕ್ಷುದ್ರಬುದ್ಧಿಗಳಾದ ಅನುಯಾಯಿಗಳ ಕೈಗೆ ದೊಡ್ಡವರ ಧರ್ಮೋಪದೇಶದ ಮಾತು ಸಿಕ್ಕಿದರೆ ಹುಡುಗನ ಕೈಗೆ ಸಿಕ್ಕಿದ ಕತ್ತಿಯಂತೆ ಅದು ಅನರ್ಥಕ್ಕೆ ಕಾರಣವಾಗುವದು. ಧರ್ಮಸ್ಥಾಪಕರಿಗೆ ಎಷ್ಟುಮಾತ್ರವೂ ಅನ್ಯಧರ್ಮದ ವಿಷಯದಲ್ಲಿ ತಿರಸ್ಕಾರಬುದ್ಧಿ ಇಲ್ಲ. ಅವರಲ್ಲಿ ಒಬ್ಬೊಬ್ಬರ ಪದ್ಧತಿ ಒಂದೊಂದಾಗಿರಬಹುದೇ ಹೊರತು ಧರ್ಮವೆಂಬುದು ಎಲ್ಲರಲ್ಲಿಯೂ ಏಕರೂಪವಾಗಿರುವದು. ನನಗೆ ನಿಜವಾಗಿ ಎಲ್ಲ ಧರ್ಮಗ್ರಂಥಗಳಲ್ಲಿಯೂ ಪೂಜ್ಯಬುದ್ಧಿ ಇರುವದು. ಇವುಗಳಲ್ಲಿ ಮೇಲಾವುದು ಕೀಳಾವುದೆಂಬ ಕಲ್ಪನೆಯೇ ನನ್ನ ಮನಸ್ಸಿಗೆ ರುಚಿಸುವದಿಲ್ಲ. ಧರ್ಮದೃಷ್ಟಿಯಿಂದಲಂತು ನನಗೆ ಎಲ್ಲವೂ ಸಮತೂಕವಾಗಿರುವವು. ಇನ್ನು ಆಧರ್ಮವನ್ನು ಪ್ರತಿಪಾದನೆಮಾಡುವ ಶೈಲಿಯನ್ನು ಲಕ್ಷ್ಯದಲ್ಲಿಟ್ಟುಕೊಂಡು ಮಾತ್ರ ಗೀತೆಯ ಸ್ಥಾನವನ್ನು ನಿರ್ಣಯಿಸುವದಕ್ಕೆ ಹೋಗಬೇಕಾಗಿರುವದು.

ಧರ್ಮಗ್ರಂಥಗಳಲ್ಲಿ ಭಗವದ್ಗೀತೆಗೆ ಅಗ್ರಾಸನವನ್ನು ಕೊಡುವದಕ್ಕೆ

ಅದರಲ್ಲಿರುವ ಅನೇಕಗುಣಗಳಲ್ಲಿ ಸರ್ವಧರ್ಮಗಳ ಸಹಾನುಭೂತಿಯು ಮೊದಲನೆಯದಾಗಿದೆ. ತಾವು ಹೇಳುವ ಪೂಜಾಕ್ರಮದಿಂದಲೆ ಭಗವಂತನು ತೃಪ್ತನಾಗುವನೆಂದೂ ತಾವು ಹೇಳುವ ಆಚರಣೆಗಳಿಂದಲೆ ಮನುಷ್ಯನು ಪಾಪ-ವಿಮುಕ್ತನಾಗುವನೆಂದೂ ತಾವು ವಿಧಿಸಿರುವ ಉಪಾಸ್ಯಮೂರ್ತಿಯೇ ಸತ್ಯ-ಸ್ವರೂಪವೆಂದೂ ಬಹುಮಟ್ಟಿಗೆ ಎಲ್ಲ ಧರ್ಮಗ್ರಂಥಗಳೂ ಹೇಳಿಕೊಳ್ಳುವವು. ಆಯಾಧರ್ಮಗ್ರಂಥಗಳ ಅನುಯಾಯಿಗಳು ಯಾರಿಗೂ ತಮ್ಮ ಧರ್ಮದ ಹೊರತು ಎರಡನೆಯ ಗತಿಯೇ ಇಲ್ಲವೆಂದು ಹೇಳುತ್ತ ಸುಖವನ್ನು ಬಯುಸು-ವವರೆಲ್ಲರೂ ತಮ್ಮ ಧರ್ಮಕ್ಕೇ ಬನ್ನಿರೆಂದು ಮುಮುಕ್ಷುಗಳಿಗೆ ಮಂತ್ರಾಕ್ಷತೆ-ಯನ್ನು ಕೊಡುತ್ತಿರುವರು. ಇತರಧರ್ಮದವರು ಪರಮಾತ್ಮನಿಗೆ ಮಲ-ಮಕ್ಕಳೇನು? ಪರಮಾತ್ಮನು ಎಲ್ಲಮೂರ್ತಿಗಳಲ್ಲಿಯೂ ಸರ್ವಾಂತರ್ಯಾಮಿ-ಯಾಗಿರುವನು. ಪರಮಾತ್ಮನಿಗೆಂಬ ಬುದ್ಧಿಯಿಂದ ಯಾವ ಮೂರ್ತಿಗೆ ನಮಸ್ಕಾರಮಾಡಿದರೇನು? ಗೀತೆಯು ಅನ್ಯಧರ್ಮದವರಿಗೆ ಆಮಂತ್ರಣ-ವನ್ನು ಕೊಡುವದಿಲ್ಲ; ತನ್ನ ಧರ್ಮದವರನ್ನು ಬಿಡುವದಿಲ್ಲ.

"यो यो यां यां तनुं भक्तश्श्रद्धयार्चितुमिच्छति ।
तस्य तस्याचलां भक्तिं तामेव विदधामहम् ॥"

ಎಂಬಂತೆ ಶ್ರದ್ಧೆಯನ್ನು ಮಾತ್ರ ಬಿಡದೆ ಯಾರುಯಾರು ಯಾವಯಾವ ಮೂರ್ತಿ-ಯಲ್ಲಿ ಮನಸ್ಸಿಟ್ಟರೂ ಅದರಲ್ಲಿಯೇ ಅವರ ಭಕ್ತಿಯನ್ನು ಸ್ಥಿರಮಾಡಿ ಪಾರು-ಮಾಡುತ್ತೇನೆಂದು ಕೃಷ್ಣನು ಸಾರಿಹೇಳಿರುವನು. ಯಾರೂ ಒಂದು ಮೂರ್ತಿ-ಯನ್ನು ಬಿಡಬೇಕಾಗಿಲ್ಲ; ಇನ್ನೊಂದು ಮೂರ್ತಿಯನ್ನು ಹಿಡಿಯಬೇಕಾಗಿಲ್ಲ. ಯಾರು ಯಾವ ಮೂರ್ತಿಯನ್ನು ನಂಬಿದರೂ ಫಲಿಸುವದೆಂದು ಕೊಡುವ ಈಉತ್ತೇಜನವು ಎಷ್ಟು ಚೆನ್ನಾಗಿದೆ! ಗೀತೆಯ ಪ್ರಮುಖತ್ವಕ್ಕೆ ಕಾರಣವಾದ ಎರಡನೇ ಮಾತೇನೆಂದರೆ ಅದು ಸ್ವಧರ್ಮನಿಷ್ಠೆಗೆ ಕೊಟ್ಟಿರುವ ಪ್ರಮುಖತೆಯು. ಧರ್ಮಗ್ರಂಥಗಳನ್ನೆಲ್ಲ ಹೋಲಿಸಿ ಓದಿನೋಡಿ ಎಲ್ಲದರಲ್ಲಿಯೂ ತಥ್ಯಾಂಶವಿರು-ವದೆಂದು ತಮ್ಮ ಬರೀಮೆಚ್ಚಿಗೆಯನ್ನು ತೋರಿಸಿದ ಮಾತ್ರಕ್ಕೇ ಗೀತೆಗೆ ತೃಪ್ತಿಯಾ ಗುವದಿಲ್ಲ. ಧರ್ಮಗ್ರಂಥಕಾರರು ನಮ್ಮ ಮೆಚ್ಚಿಗೆಯನ್ನು ನಿರೀಕ್ಷಿಸುತ್ತ ಕುಳಿ

ತಿಲ್ಲ. ಅವರು ಮೆಚ್ಚಿಗೆ ಮೊದಲಾದವುಗಳನ್ನು ನಿರೀಕ್ಷಿಸುವ ಸ್ಥಿತಿಗಿಂತ ಎಷ್ಟೋ ಮೇಲೆ ಹೋಗಿರುವರು. ಅವರ ಗ್ರಂಥಗಳನ್ನು ನಾವು ಸುಮ್ಮನೆ ಓದಿ-ಕೊಂಡರೇನಾಯಿತು? ಅದು ಬುದ್ಧಿಶಕ್ತಿಯ ಗರಡೀಸಾಧನೆ. ಧರ್ಮವು ನಮ್ಮ ದುಃಖವನ್ನು ಕಳೆಯುವದಕ್ಕೆ ಸಮರ್ಥವಾಗಬೇಕಾದರೆ ಸುಮ್ಮನೆ ಅದನ್ನು ಹಿಡಿದುಕೊಂಡು ಆಡಿದರೆ ಸಾಲದು. ಔಷಧಿಯನ್ನು ಹಿಡಿದುಕೊಂಡ-ಮಾತ್ರಕ್ಕೇ ರೋಗ ಹೋದೀತೆ? ಅದನ್ನು ತಿಂದು ದಕ್ಕಿಸಿಕೊಳ್ಳಬೇಕು. ಹಾಗೆ ಧರ್ಮವನ್ನು ಅನುಷ್ಠಾನಕ್ಕೆ ತಂದುಕೊಂಡು ತನ್ಮಯನಾಗಬೇಕು. ಆಗ ಧರ್ಮವು ನಮ್ಮ ದುಃಖವನ್ನು ಕಳೆದೀತು. ಎಲ್ಲ ಧರ್ಮಗಳಲ್ಲಿಯೂ ತಥ್ಯಾಂಶವಿರುವದೆಂದು ಧರ್ಮಗ್ರಂಥಕಾರರಿಗೆ ಪ್ರಶಸ್ತಿಪತ್ರಗಳನ್ನು ಕೊಡುವ-ದರಿಂದ ಇಷ್ಟಾರ್ಥವು ನೆರವೇರುವದಿಲ್ಲ. ಎಲ್ಲ ಧರ್ಮಗಳಲ್ಲಿಯೂ ಸಹಾ-ನುಭೂತಿ ಇರಬೇಕು. ಅದರ ಜೊತೆಗೆ "स्वधर्मे निधनं श्रेयः" ಎಂಬ ಗೀತೋಕ್ತಿಯಂತೆ ತನಗೆ ಸ್ವಧರ್ಮವು ಯಾವದೊ ಅದಕ್ಕೆ ಪ್ರಾಣವನ್ನಾ-ದರೂ ಕೊಡಬೇಕು.

"सहजं कर्म कौंतेय सदोषमपि न त्यजेत्"

ಎಂಬಂತೆ ತನ್ನ ಧರ್ಮವು ದೋಷಯುಕ್ತವಾಗಿ ಕಂಡರೂ ಅದನ್ನು ಬಿಡ-ಕೂಡದೆಂದು ಗೀತೆಯ ಅಭಿಪ್ರಾಯ. ಎಷ್ಟು ಮಾತ್ರವೂ ದೋಷವೇ ಕಾಣದೆ ಇರುವದು ಯಾವದು?

"सर्वारंभा हि दोषेण धूमेनाग्निरिवावृताः"

ಎಂಬಂತೆ ಬೆಂಕಿಯ ಮೇಲೆ ಹೊಗೆ ಕಾಣುವ ಹಾಗೆ ಎಲ್ಲ ಕರ್ಮಗಳಲ್ಲಿಯೂ ಏನಾದರೂ ದೋಷವು ಕಾಣಬಹುದು.

"श्रेयान्स्वधर्मो विगुणः परधर्मात्स्वनुष्ठितात्"

ಎಂಬ ಗೀತೋಕ್ತಿಯಂತೆ ಅನ್ಯಧರ್ಮದ ಕೆಲವು ಗುಣಗಳಿಗೆ ಮರುಳಾಗಿ ಅದನ್ನು ಅವಲಂಬಿಸಿ ಒಂದು ಪಕ್ಷ ಅದನ್ನು ಎಷ್ಟೇ ಚೆನ್ನಾಗಿ ನಡೆಸಿದರೂ

ಸ್ವಧರ್ಮವು ಅದಕ್ಕಿಂತ ಹೆಚ್ಚು ಶ್ರೇಯಸ್ಕರವು. "परधर्मो भयावहः" ಎಂಬಂತೆ ಅನ್ಯಧರ್ಮವನ್ನು ಹಿಡಿಯುವದಕ್ಕೆ ಹೋಗುವದು ಎಂದಿದ್ದರೂ ಅಪಾಯಕರವೆ. ಅನ್ಯಧರ್ಮವನ್ನು ಚೂರುಚೂರು ಮಾಡಿಬಿಡಬೇಕೆಂದು ಕತ್ತಿಯನ್ನು ಮಸೆಯುವ ಧರ್ಮಗ್ರಂಥಗಳು ಎಷ್ಟೋ ಇರಬಹುದು. ಹೀಗೆ ಸರ್ವಧರ್ಮಗಳ ಸಹಾನುಭೂತಿಗೆ ಕೊರತೆಯನ್ನು ತರದೆ ಸ್ವಧರ್ಮನಿಷ್ಠೆಯನ್ನುಪದೇಶಿಸುವದು ಗೀತೆಯ ಉದಾರತೆಯನ್ನು ಎಷ್ಟು ಚೆನ್ನಾಗಿ ತೋರಿಸುತ್ತದೆ!

ಗೀತೆಗೆ ಶ್ರೇಷ್ಠತೆಯನ್ನು ತಂದುಕೊಡುವ ಇನ್ನೊಂದು ವಿಷಯುವೇನೆಂದರೆ ಒಂದೊಂದು ಧರ್ಮಗ್ರಂಥವು ಒಂದೊಂದು ದಾರಿಗೇ ಹೆಚ್ಚು ಮಹತ್ತ್ವವನ್ನು ಕೊಡುವದು. ಒಂದು ಜ್ಞಾನವೇ ಹೆಚ್ಚೆಂದೂ ಇನ್ನೊಂದು ಕರ್ಮವೇ ಮೇಲೆಂದೂ ಮತ್ತೊಂದು ಯೋಗವೇ ಮುಖ್ಯವೆಂದೂ ಬೇರೊಂದು ಭಕ್ತಿಯೇ ಪ್ರಧಾನವೆಂದೂ ಒಂದೊಂದು ಒಂದೊಂದು ದಾರಿಯನ್ನೆ ಹಿಡಿದು ಆದಾರಿಯನ್ನೇ ತೋರಿಸುವವು. ಪ್ರತಿಯೊಂದು ದಾರಿಯೂ ಸರಿಯೆ. ಒಂದೊಂದು ದಿಕ್ಕಿನಿಂದ ಬರುವವರಿಗೆ ಒಂದೊಂದುದಾರಿಯಿರುವದು ಸಹಜವಾಗಿದೆ. ಆದರೆ ಇನ್ನೊಂದು ದಾರಿಯನ್ನು ದಾರಿಯೇ ಅಲ್ಲವೆಂದು ಹೇಳುವದು ಯಾವ ನ್ಯಾಯ? ಗೀತೆಯು ಎಲ್ಲದಾರಿಗಳಿಗೂ ಅದಕ್ಕದಕ್ಕೆ ತಕ್ಕ ಮಹತ್ತ್ವವನ್ನು ಕೊಟ್ಟಿರುವದು. ಒಂದನ್ನು ಕೆಳಗೆ ಮಾಡಿಲ್ಲ; ಇನ್ನೊಂದನ್ನು ಮೇಲೆ ಮಾಡಿಲ್ಲ. ಅರ್ಜುನನು ಜ್ಞಾನವು ಹೆಚ್ಚೊ ಕರ್ಮವು ಹೆಚ್ಚೊ ಎಂದು ಸ್ಪಷ್ಟವಾಗಿ ಕೇಳಿದಾಗ ಕೂಡ ಶ್ರೀಕೃಷ್ಣನು

"सांख्ययोगौ पृथग्बालाः प्रवदंति न पंडिताः"

ಎಂಬ ವಾಕ್ಯದಿಂದ ಅವೆರಡನ್ನೂ ಬೇರೆಬೇರೆ ತಿಳಿಯುವವರು ಪಾಮರರೇ ಹೊರತು ಪಂಡಿತರಲ್ಲವೆಂದು ಸ್ವಕಂಠದಿಂದ ಆಡಿತೋರಿಸಿರುವನು. ಒಬ್ಬೊಬ್ಬನಿಗೆ ಒಂದೊಂದುದಾರಿ ಅನುಕೂಲವಾಗಿ ತೋರುತ್ತಿರುವದು. ಅವನವನು ತನತನಗೆ ಬೇಕಾದ ದಾರಿಯನ್ನು ಹಿಡಿಯಲಿ. ನಮ್ಮನಮ್ಮ ದಾರಿಗೇ ಇತರರು ಬರಬೇಕೆಂಬ ಹಠವೇಕೆ? ಮುಖ್ಯವಾಗಿ ಪರಮಾತ್ಮಪ್ರಾಪ್ತಿಗಾಗಿ ಪ್ರತಿಯೊಬ್ಬನೂ ಹೊರಟು ಪ್ರಯಾಣಮಾಡಬೇಕಾದುದು ಅಗತ್ಯ. ಅವನು

ಯಾವ ದಾರಿಯನ್ನಾದರೂ ಹಿಡಿಯಲಿ. ಈಸಹಾನುಭೂತಿಯು ಎಷ್ಟು ಶ್ಲಾಘಾಸ್ಪದವಾಗಿದೆ!

ಗೀತೆಗೆ ಹೆಚ್ಚುಗಾರಿಕೆಯನ್ನು ಕೊಡುವ ಮತ್ತೊಂದು ಸಂದರ್ಭ-ವೇನೆಂದರೆ ಗೀತೆಯ ಹೆಚ್ಚು ಲಕ್ಷ್ಯವು ಸಾಧನದ ಕಡೆಗೆ ಇರುವದೇ ಹೊರತು ಸಾಧ್ಯದ ಕಡೆಗೆ ಇಲ್ಲ. ಸಾಧ್ಯವೆಂಬುದೇನು? ಸಾಧನದ ಪರಿಪಕ್ವಾವಸ್ಥೆ. ಸಾಧನವು ಎಷ್ಟೆಷ್ಟು ಪ್ರಬಲವಾಗುವದೊ ಸಾಧ್ಯವು ಅಷ್ಟಷ್ಟು ಸನ್ನಿಹಿತವಾ-ಗುವದು. ಸಾಧನವಿಲ್ಲದೆ ಸಾಧ್ಯದ ಕಡೆಗೆ ಎಷ್ಟು ಲಕ್ಷ್ಯವನ್ನು ಕೊಟ್ಟರೂ ಪ್ರಯೋಜನವಿಲ್ಲ. ವ್ಯವಹಾರದಲ್ಲಿ ಕೂಡ ನೋಡಿರಿ. ಮೊದಲು ತಾನು ಯಾವ ಕಾರ್ಯವನ್ನು ಸಾಧಿಸಬೇಕಾಗಿರುವದೆಂಬುದನ್ನು ಗೊತ್ತುಮಾಡಿ-ಕೊಳ್ಳಬೇಕು. ಆಮೇಲೆ ಅದಕ್ಕೆ ಸಾಧನಗಳೇನೇನೆಂಬುದನ್ನು ನಿಶ್ಚಯಿಸ-ಬೇಕು. ಇಷ್ಟಾಗುತ್ತಲೆ ತಾನು ಸಾಧಿಸಬೇಕಾಗಿರುವ ಕಾರ್ಯದ ಕಡೆಯ ಲಕ್ಷ್ಯವನ್ನು ಹಿಂದಕ್ಕೆ ತಂದು ಅದರ ಬಲವನ್ನು ಸಾಧನದ ಮೇಲೇ ಹಾಕ-ಬೇಕು. ಹೀಗಾದರೆ ಆಕಾರ್ಯವು ಅವನಿಗೆ ಸಾಧ್ಯವಾಗಿಯೇ ಆಗುತ್ತದೆ. ಸಾಧ-ನದ ಮೇಲೆ ನಮ್ಮ ಲಕ್ಷ್ಯವು ಎಷ್ಟು ಪ್ರಮಾಣದಲ್ಲಿ ಬೀಳುವದೊ ಸಾಧ್ಯವು ಅಷ್ಟು ರೂಪುಗೊಳ್ಳುವದು. ಗೀತೆಯು ಸಾಧ್ಯವಿಷಯವಾದ ಪರಮಾತ್ಮ-ಸ್ವರೂಪವರ್ಣನಾದಿಸಿದ್ಧಾಂತಗಳ ಗೋಜಿಗೆ ಹೋಗಿಲ್ಲ. ಪರಮಾತ್ಮಸ್ವ-ರೂಪವನ್ನು ನಿರ್ಣಯಿಸಿ ಹೇಳುವದಕ್ಕೆ ಹೋಗುವದೆಂಬುದೇ ಅಸಂಭವ. ಏಕೆಂದರೆ ಪರಮಾತ್ಮಸ್ವರೂಪವನ್ನು ಹೇಳುವದಕ್ಕೆ ಹೋಗುತ್ತಲೆ ನಾವು ಉಳಿದುಕೊಂಡಿರುವದೇ ಇಲ್ಲ. ಅದು ಅಷ್ಟು ಚಮತ್ಕಾರವಾಗಿದೆ. ಆದು-ದರಿಂದಲೆ ಗೀತೆಯು ಅದರ ಪ್ರಾಪ್ತಿಯ ಸಾಧನಗಳನ್ನು ಉಪದೇಶಿಸುವದ-ರಲ್ಲಿಯೇ ತನ್ನ ಸರ್ವಸಾಹಸವನ್ನೂ ವಿನಿಯೋಗಿಸಿರುವದು. ಧರ್ಮಗ್ರಂಥ-ಗಳಲ್ಲಿರುವ ಧರ್ಮಗಳೆಂಬುವೇನು? ಉಚ್ಚತರಗತಿಯ ನೀತಿಗಳು. ರಾಜ-ಯೋಗ ಮತ್ತು ಜ್ಞಾನಯೋಗಗಳನ್ನು ಓದಿನೋಡಿರಿ. ಗೀತೆಯು ನೀತಿಗೆ ಎಷ್ಟು ಹೆಚ್ಚು ಲಕ್ಷ್ಯವನ್ನು ಕೊಟ್ಟಿರುವದು! ಭಕ್ತಿಯೋಗದಲ್ಲಿ ಭಗವದ್ಭ-ಕ್ತನ ಲಕ್ಷಣವಾಗಿ ಬಂದಿರುವ

"यस्मान्नोद्विजते लोको लोकान्नोद्विजते च यः"

ಎಂಬ ಒಂದು ನೀತಿಯನ್ನು ತೆಗೆದುಕೊಳ್ಳಿರಿ. ತಾನು ಒಬ್ಬರನ್ನು ನೋಯಿಸಬಾರದು; ಒಬ್ಬರಿಂದ ತಾನು ನೊಂದುಕೊಳ್ಳಬಾರದು. ಇದಕ್ಕೆ ಬೆಲೆಯನ್ನು ಯಾರು ಕಟ್ಟಬಲ್ಲರು?

ಗೀತೆಯು ಪ್ರಾಧಾನ್ಯಕ್ಕೆ ಕಾರಣವಾದ ಬೇರೊಂದು ಸಂಗತಿಯೇನೆಂದರೆ— ಧರ್ಮಗ್ರಂಥವೆಂದರೆ ಲೋಕವ್ಯವಹಾರವನ್ನೆಲ್ಲ ಬಿಡಿಸಿ ಮೂಲೆಯಲ್ಲಿ ಮುದುರಿಕೊಳ್ಳುವಂತೆ ಮಾಡುವದೆಂದು ಒಂದು ಹೆಸರು ಬಿದ್ದಿರುವದು. ಗೀತೆಯು ಆದುರಭಿಪ್ರಾಯವನ್ನು ದೂರಮಾಡುವದು. ಮುಖವನ್ನು ಜೋಲುಹಾಕಿಕೊಂಡು ಕೈಕಟ್ಟಿಕೊಂಡು ಜೀವಶವವಾಗಿ ಒಂದುಕಡೆ ಉರುಳುವದು ರೋಗಿಗಳಿಗೂ ಸೋಮಾರಿಗಳಿಗೂ ತಕ್ಕದ್ದು; ಉತ್ಸಾಹಶೀಲರಾದ ಗೀತಾನುಯಾಯಿಗಳಿಗಲ್ಲ. ಗೀತೆ ಹುಟ್ಟಿರುವದೇ ಈಅರ್ಥವನ್ನು ಸೂಚಿಸುವದಕ್ಕೆ. ವ್ಯವಹಾರವನ್ನು ಬಿಟ್ಟು ಕೊಡಬೇಕೆಂದಿದ್ದ ಅರ್ಜುನನಿಗೆ ಕೃಷ್ಣನು ಪರಮಾರ್ಥವನ್ನು ಬೋಧಿಸಿ ವ್ಯವಹಾರದಲ್ಲಿ ಪ್ರವೃತ್ತಿಮಾಡಿಸಿರುವನು. ಪರಮಾರ್ಥಶಿಕ್ಷಣೆಯೆಂಬುದೇನು? ಸಂಸಾರವೆಂಬ ಸಮುದ್ರದಲ್ಲಿ ಸುಖದುಃಖಗಳ ಲೇಪವನ್ನು ಪಡೆಯದೆ ಹಾಯಾಗಿ ಈಸುವದನ್ನು ಕಲಿಯುವದು. ವ್ಯವಹಾರದಲ್ಲಿ ಬರುವ ಸುಖದುಃಖಗಳಿಗೆಲ್ಲ ತಲೆಗೊಟ್ಟು ಎದೆಗೆಡದಿರುವಂತೆ ಮಾಡುವದೇ ಗೀತೋಪದೇಶದ ಪರಿಣಾಮ.

ಇನ್ನು ಗೀತೆಯ ಮೇಲೆ ದೋಷದೃಷ್ಟಿಯನ್ನು ಹಾಕಿ ನೋಡುವವರಿಗೂ ಕೆಲವು ಅವಕಾಶಗಳು ಸಿಕ್ಕಬಹುದು. ವಿವೇಕಪೂರ್ವಕವಾಗಿ ವಿಚಾರಮಾಡಿದರೆ ಆದೋಷಗಳೇ ಉತ್ಕೃಷ್ಟಗುಣಗಳೆಂದೂ ತಿಳಿದುಕೊಳ್ಳುವವರ ಬುದ್ಧಿಮಾಂದ್ಯದ ದೋಷದಿಂದ ಅವು ದೋಷರೂಪವಾಗಿ ಕಾಣುವವೆಂದೂ ಸ್ಫುಟವಾಗುವದು. ಹೇಗೆಂದರೆ ಉದಾಹರಣಾರ್ಥವಾಗಿ ನೋಡಿರಿ. ಅರ್ಜುನನು ಬಂಧುಗಳ ಮೇಲೆ ಕೃಪಾಪರವಶನಾಗಿ ಯುದ್ಧವನ್ನೊಲ್ಲೆನೆಂದು

ಸುಮ್ಮನಾದಾಗ ಶ್ರೀಕೃಷ್ಣನು

"अवाच्यवादांश्च बहून्वदिष्यंति तवाहिताः ।
निंदंतस्तव सामर्थ्यं ततो दुःखतरन्नु किम् ॥"

ಎಂಬ ಮಾತಿನಿಂದ "ಎಲೆ, ಅರ್ಜುನ, ನಿನ್ನ ಶತ್ರುಗಳು ನಿನ್ನ ವಿಷಯವಾಗಿ ಆಡಬಾರದ ಮಾತುಗಳನ್ನಾಡಿ ನಿನ್ನ ಸಾಮರ್ಥ್ಯವನ್ನು ನಿಂದಿಸುವರು. ಇದಕ್ಕಿಂತ ಹೆಚ್ಚಿನ ದುಃಖವಾವುದು?" ಎಂದು ಹೇಳಿ ಆಮೇಲೆ ಭಕ್ತನ ಲಕ್ಷಣಗಳನ್ನು ಹೇಳುವಾಗ "तुल्यनिंदास्तुतिः" ಎಂಬ ಮಾತಿನಿಂದ ನಿಂದಾಸ್ತುತಿಗಳನ್ನು ಸಮವಾಗಿ ಭಾವಿಸಬೇಕೆಂದು ಹೇಳಿರುವದನ್ನು ನೋಡಿದರೆ ಮೊದಲೊಂದು ರೀತಿ ಆಮೇಲೊಂದು ರೀತಿ ಹೀಗೆ ಒಂದು ಮೂಲಸೂತ್ರವಿಲ್ಲದೆ ಹೇಳಿರುವನೆಂದು ಕೆಲವರು ಗೀತೆಯ ಮೇಲೆ ದೋಷವನ್ನು ಹೊರಿಸುವರು. ವಿಚಾರಮಾಡಿದರೆ ಅದರಲ್ಲಿ ಗುಣವೇ ಹೊರಪಡುವದು. "ನಿಂದೆಯೇ ದುಃಖಕರವಲ್ಲವೆ?" ಎಂಬುದು ಮಾಡಬೇಕಾದ ಕೆಲಸದ ಪ್ರಾರಂಭದಲ್ಲಿ ವಿಚಾರಮಾಡಬೇಕೆಂದು ಹೇಳಿದ ಮಾತು. ನಿಂದೆಯನ್ನೂ ಸ್ತುತಿಯನ್ನೂ ಸಮವಾಗಿ ಭಾವಿಸಬೇಕೆಂಬುದು ಕಾರ್ಯವನ್ನು ಕೈಗೊಂಡಮೇಲೆ ಮನಸ್ಸಿನಲ್ಲಿ ಸ್ಥಿರತಕ್ಕಮಾತು. ಯಾವ ಕಾರ್ಯವನ್ನಾದರೂ ಆರಂಭಿಸುವದಕ್ಕೆ ಮುಂಚೆ ಅದರ ವಿಷಯದಲ್ಲಿ ಜನರು ಏನೆಂದಾರೆಂದು ಯೋಚಿಸಿ ನಿಂದೆಗೆ ಅವಕಾಶವಿಲ್ಲದಂತೆ ಜಾಗರೂಕನಾಗಿ ಕೈಹಾಕಬೇಕು. ಕೈಹಾಕಿದ ಮೇಲೆ ನಿಂದೆಯು ಅಥವಾ ಸ್ತುತಿಯ ಕಡೆಗೆ ಲಕ್ಷ್ಯವನ್ನು ಕೊಡದೆ ಹಿಡಿದ ಕೆಲಸವನ್ನು ಕಡೆಗಾಣಿಸಬೇಕು. ಈ ಅರ್ಥವು ಎಷ್ಟು ಗಂಭೀರವಾಗಿದೆ!

ಮೇಲೆ ಹೇಳಿರುವ ಅಭಿಪ್ರಾಯವನ್ನು ದೋಷವಾಗಿ ಭಾವಿಸುವವರ ಅಣ್ಣತಮ್ಮಂದಿರಿಗೆ ಗೀತೆಯು ಫಲಾಪೇಕ್ಷೆಯನ್ನು ನಿಷೇಧಿಸುವದೂ ಒಂದು ದೋಷವೆಂದು ತೋರುವದು.

"कर्मण्येवाधिकारस्ते मा फलेषु कदाचन"

ಎಂಬ ವಾಕ್ಯದಲ್ಲಿ ಶ್ರೀಕೃಷ್ಣನು "ನಿನಗೆ ಕರ್ಮವನ್ನು ಮಾಡುವದರಲ್ಲಿ ಅಧಿಕಾರವೇ ಹೊರತು ಫಲವಲ್ಲಿ ಎಂದಿಗೂ ಇಲ್ಲ" ಎಂದು ಹೇಳಿರುವದು ನಿಜ. ಈಮಾತನ್ನು ಒಂದುಸಲವೇಕೆ, ಅನೇಕಸಲ ಹೇಳಿರುವನು. ವ್ಯವಹಾರದಲ್ಲಿಯೂ ಕೂಡ ಚೆನ್ನಾಗಿ ನೆನಪಿಡತಕ್ಕ ಮಾತನ್ನು ಅನೇಕ ಸಲ ಹೇಳುವದುಂಟು. ಶಾಸ್ತ್ರಗಳೂ ಈಪದ್ಧತಿಯನ್ನು ಅನುಸರಿಸಿರುವವು. ಗೀತೆಯೂ ಹಾಗೆ ಮಾಡಿರುವದು. ಫಲಾಪೇಕ್ಷೆಯಲ್ಲಿ ಅಧಿಕಾರವಿಲ್ಲವೆಂಬುದು ಅಷ್ಟು ಬೆಲೆಯುಳ್ಳ ಮಾತು. ಫಲದ ಆಶೆ ಇಲ್ಲದೆ ಹೋದರೆ ಕಾರ್ಯದಲ್ಲಿ ಪ್ರವೃತ್ತಿಯಾಗುವದು ಹೇಗೆ? ಒಂದು ಪಕ್ಷ ಇವನು ಫಲವನ್ನು ಬಯಸದೆ ಒಂದು ಕಾರ್ಯವನ್ನು ಮಾಡಿದರೂ ಅದಕ್ಕೇನಾದರೊಂದು ಫಲವಾಗಿಯೇ ಆಗುವದಲ್ಲ. ಹೀಗಿರುವಾಗ ಫಲಾಪೇಕ್ಷೆಯಲ್ಲಿ ಅಧಿಕಾರವಿಲ್ಲವೆಂಬುದೆಂಥ ಮಾತು? ಎಂದರೆ ಒಂದು ಕಾರ್ಯಕ್ಕೇನಾದರೂ ಫಲವಾಗಿಯೇ ತೀರುವದು ನಿಜ. ಆದರೆ ಗೀತೆಯ ರಹಸ್ಯಾರ್ಥವೇನೆಂದರೆ ನಾವು ನಮಗೆ ಇಂಥ ಫಲವೇ ಆಗಬೇಕೆಂದು ಬಯಸಬಾರದು. ನಾವು ಮಾಡುವ ಕರ್ಮಕ್ಕೆ ನಾವೇ ಬೆಲೆಯನ್ನು ಕಟ್ಟಬಾರದು. ನಾವು ನಮ್ಮನ್ನು ಎಷ್ಟೇ ದೊಡ್ಡವರೆಂದು ತಿಳಿದುಕೊಂಡಿದ್ದರೂ ದೇವರ ಜೊತೆಗೆ ಹೋಲಿಸಿದಾಗ ನಾವು ಅತಿಕ್ಷುದ್ರರು. ನಾವು ಕಟ್ಟುವ ಬೆಲೆಯೂ ನಮ್ಮ ಯೋಗ್ಯತೆಗೆ ತಕ್ಕಂತೆ ಇರುವದು. ಬೆಲೆಯನ್ನು ಕಟ್ಟುವ ಕೆಲಸವನ್ನು ನಮಗಿಂತ ದೊಡ್ಡವರಿಗೆ ವಹಿಸಿಬಿಡುವದು ಸರ್ವೋತ್ತಮ. ವ್ಯವಹಾರದಲ್ಲಿ ನೋಡಿರಿ. ಒಬ್ಬ ಆಗರ್ಭಶ್ರೀಮಂತನು ತನ್ನದೊಂದು ಕೆಲಸವನ್ನು ಒಬ್ಬನಿಗೆ ಹೇಳುತ್ತಾನೆ. ಅವನು ಆಕೆಲಸವನ್ನು ಮಾಡಿದ ಮೇಲೆ ಅದಕ್ಕಾಗಿ ತನಗೆ ಇಷ್ಟು ದುಡ್ಡನ್ನು ಕೊಡಬೇಕೆಂದು ತನ್ನ ಬೆಲೆಯನ್ನು ತಾನೆ ಕಟ್ಟಿಕೊಂಡು ಕೇಳಿದರೆ ಶ್ರೀಮಂತನು ಅಷ್ಟನ್ನು ತೆಗೆದು ಒಗೆದುಬಿಡುತ್ತಾನೆ. ಆಸೇವಕನು "ತಮಗೆ ತೋರಿದ್ದು ಕೊಡಿರಿ" ಎಂದರೆ ಆಗ ಶ್ರೀಮಂತನು ನಿರುಪಾಯನಾಗಿ ತಾನು ಕೊಡುವ ದುಡ್ಡು ತನ್ನ ಘನತೆಗೆಲ್ಲಿ ಕೊರತೆಯನ್ನು ತಂದೀತೋ ಎಂದು ಆಸೇವಕನು ನಿರೀಕ್ಷಿಸಿದುದಕ್ಕಿಂತ ಹೆಚ್ಚಾಗಿಯೇ ಕೊಡುತ್ತಾನೆ; ಕೊಡುವದಿಷ್ಟೇ ಅಲ್ಲ; ಹೆಚ್ಚು ದುಡ್ಡನ್ನೂ

ಕೊಟ್ಟು ತನಗೆ ಘನತೆಯನ್ನು ಕೊಟ್ಟದ್ದಕ್ಕಾಗಿ ಅವನ ಮೇಲೆ ಪ್ರೀತಿಯನ್ನೂ ಇಡುತ್ತಾನೆ. ಶ್ರೀಮಂತರ ಲಕ್ಷ್ಯವು ದುಡ್ಡಿನ ಮೇಲೆ ಇರುವದಿಲ್ಲ; ಘನತೆಯ ಮೇಲೆ. ಶ್ರೀಮಂತರಿಗೆ ಕಡಮೆಯಾದ ಬೆಲೆಯನ್ನು ಕಟ್ಟುವ ಅಭ್ಯಾಸವೇ ಇರುವದಿಲ್ಲ. ಇದು ಆಗರ್ಭಶ್ರೀಮಂತರ ಲಕ್ಷಣ. ನಾವು ಏನಾದರೂ ಕೆಲಸವನ್ನು ಮಾಡಿದಾಗಲೂ ಇದಕ್ಕೆ ಇಂಥ ಫಲವೇ ಆಗಬೇಕೆಂದು ನಮ್ಮ ಬೆಲೆಯನ್ನು ನಾವೇ ಕಟ್ಟಿಕೊಂಡರೆ ಆಫಲವನ್ನು ಪೂರ್ಣಮಾಡುವದು ದೇವರಿಗೆ ಬಹುಸುಲಭ. ನಮ್ಮ ಕಾರ್ಯದ ಬೆಲೆಯನ್ನು ಸರ್ವೈಶ್ವರ್ಯಸಂಪನ್ನನಾದ ಪರಮಾತ್ಮನೇ ಕಟ್ಟಲೆಂದು ಬಿಟ್ಟರೆ ಅವನು ನಮ್ಮ ನಿರೀಕ್ಷಣೆಗಿಂತ ಸಾವಿರಪಾಲು ಹೆಚ್ಚು ಕಟ್ಟುವನು. ನಿಷ್ಕಾಮಕರ್ಮವನ್ನು ಮಾಡಿದರೆ ಚಿತ್ತಶುದ್ಧಿಯಾಗುವದೆಂದು ಶಾಸ್ತ್ರಗಳು ಹೇಳುವವಲ್ಲ. ಚಿತ್ತಶುದ್ಧಿಯೆಂಬುದೇನು ಸಾಮಾನ್ಯವೆ? ಅದಕ್ಕೆ ಬೆಲೆಯನ್ನು ಕಟ್ಟುವದಕ್ಕೆ ಮನುಷ್ಯನೆಷ್ಟರವನು! ಚಿತ್ತಶುದ್ಧಿಯಾದ ಆದಹಾಗೆಲ್ಲ ಆಪರಮಾತ್ಮನ ಸ್ಥಿತಿಯೇ ನಮಗೆ ಸಿಕ್ಕುತ್ತ ಬರುವದು. ಇದು ಫಲಾಪೇಕ್ಷೆ ಇಲ್ಲದೆ ಮಾಡಿದ ಕರ್ಮದ ಫಲ. ಈಗ ವಿಚಾರಮಾಡಿ ನೋಡಿರಿ. ಕರ್ಮವನ್ನು ಫಲಾಪೇಕ್ಷೆ ಇಟ್ಟುಕೊಂಡು ಮಾಡುವದೊಳ್ಳೆಯದೊ ನಿಷ್ಕಾಮಬುದ್ಧಿಯಿಂದ ಮಾಡುವದೊಳ್ಳೆಯದೊ? ಮೊದಲೇ ದೋಷದೃಷ್ಟಿಯನ್ನಿಟ್ಟುಕೊಂಡು ನೋಡುತ್ತ ಹೋದರೆ ಇಂಥ ದೋಷಗಳು ಇನ್ನೂ ಸಿಕ್ಕಬಹುದು.

ಗೀತೆಯ ಸರ್ವೋತ್ಕೃಷ್ಟತೆಯನ್ನು ಏನು ಹೇಳಬೇಕು! ಎಲ್ಲ ಉಪನಿಷತ್ತುಗಳ ಸಾರವೇ ಅದು. ಎಲ್ಲ ಉಪನಿಷತ್ತುಗಳಿಗೂ ಗೋರೂಪವೂ ಗೀತಗೆ ದುಗ್ಧಾಮೃತರೂಪವೂ ಪ್ರಸಿದ್ಧವಾಗಿರುವದು. ಹಾಲಿಗಾಗಿ ಗೋವನ್ನು ರಕ್ಷಿಸುವಂತೆ ಗೀತೆಗಾಗಿ ವೇದಗಳನ್ನು ರಕ್ಷಿಸಬೇಕಾಗಿರುವದೆಂದು ಹೇಳುವಷ್ಟು ಗೀತೆಯು ಸರ್ವಸಾರಭೂತವಾಗಿ ವೇದಗಳಿಗಿಂತ ಆದರಣೀಯವಾಗಿರುವಾಗ ಅದನ್ನು ಇನ್ನೊಂದರ ಜೊತೆಗೆ ಹೋಲಿಸುವದಿನ್ನೇನು? ಭರತಖಂಡದ ಪ್ರಮುಖರಾದ ಧರ್ಮಸ್ಥಾಪಕರು ಎಷ್ಟು ಜನರು ಆಗಿಹೋದರೊ

ಅವರು ಯಾರೂ ತಮ್ಮ ಧರ್ಮಸ್ಥಾಪನೆಗೆ ಗೀತೆಯನ್ನು ಆಧಾರವಾಗಿಟ್ಟು-ಕೊಳ್ಳದೆ ಹೋಗಿಲ್ಲ. ಈಭರತಖಂಡದಲ್ಲಿ ಗ್ರಂಥಯುಕ್ತವಾದ ಭಾಷೆಗಳೆಷ್ಟಿ-ವೆಯೊ ಅವೆಲ್ಲದರಲ್ಲಿಯೂ ಗೀತಾರ್ಥವಿಚಾರವು ನಲಿದಾಡುತ್ತಿರುವದು. ಕೇ-ವಲ ನಮ್ಮ ಭರತಖಂಡದ ವಾಙ್ಮಯಗಳ ಮಾತು ಹಾಗಿರಲಿ. ಸಂಸ್ಕೃತ-ದಿಂದ ಇಂಗ್ಲೀಷಿಗೆ ಭಾಷಾಂತರವಾದ ಗ್ರಂಥಗಳಲ್ಲಿ ಗೀತೆಯೇ ಮೊಟ್ಟಮೊದಲ-ನೆಯದು. ಇದನ್ನು ೧೭೮೫ನೆ ವರ್ಷದಲ್ಲಿಯೇ ಚಾರ್ಲೆಸ್‌ವಿಲ್ಕಿನ್ಸ್ ಎಂಬು-ವರು ಇಂಗ್ಲೀಷಿಗೆ ಭಾಷಾಂತರಿಸಿರುವರು. ಇತರ ಪಾಶ್ಚಿಮಾತ್ಯಭಾಷೆಗಳ ಕಡೆಗೆ ನೋಡಿದರೆ ಗ್ಯಾಲೆನೋಸ್ ಎಂಬವರ ಗ್ರೀಕ್ ಭಾಷಾಂತರವೂ ಲ್ಯಾಸೆ೯ ಎಂಬವರ ಲ್ಯಾಟಿನ್ ಭಾಷಾಂತರವೂ ಸ್ಟ್ಯಾನಿಸೆಲ್ಲೊಗೆಟ್ಟಿ ಎಂಬವರ ಇಟಾ-ಲಿಯನ್ ಬಾಷಾಂತರವೂ ಬರ್ನಾಫ್ ಎಂಬವರ ಫ್ರೆಂಚ್ ಭಾಷಾಂತರವೂ ಲಾರೆನ್ಸನ್ ಎಂಬುವರ ಜರ್ಮನ್ ಭಾಷಾಂತರವೂ ಸುಪ್ರಸಿದ್ಧವಾಗಿರುವವು. ಒಟ್ಟಿನ ಮೇಲೆ ನೋಡಿದರೆ ಈಜಗತ್ತಿನಲ್ಲಿ ಗ್ರಂಥಗಳಿಂದ ಅಲಂಕೃತವಾಗಿ ತಲೆಯೆತ್ತಿರುವ ಯಾವ ಭಾಷೆಯೂ ಗೀತೆಯ ಭಾಷಾಂತರವನ್ನು ಪಡೆಯದೆ ಇಲ್ಲ. ಈಪೃಥ್ವಿಯಲ್ಲಿ ಭಗವದ್ಗೀತಾಕ್ಷರಗಳು ರೂಪುಗೊಳ್ಳದ ಭಾಷೆ ಇಲ್ಲ; ಭಗವದ್ಗೀತಾಗ್ರಂಥವು ಕಾಲಿಡದ ದೇಶವಿಲ್ಲ; ಭಗವದ್ಗೀತಾರ್ಥವನ್ನು ವಿಚಾರ-ಮಾಡದ ಜನಾಂಗವೇ ಇಲ್ಲ. ಹೀಗೆ ಎಲ್ಲ ಭಾಷೆಗಳಲ್ಲಿಯೂ ಕೀರ್ತನ-ಗೊಳ್ಳುತ್ತ, ಎಲ್ಲ ದೇಶಗಳಲ್ಲಿಯೂ ದಿಗ್ವಿಜಯವನ್ನು ಮಾಡುತ್ತ, ಎಲ್ಲ ಜನಾಂಗ-ದಲ್ಲಿಯೂ ವಿಹರಿಸುತ್ತ, ಎಲ್ಲೆಲ್ಲಿಯೂ ಏಕಪ್ರಕಾರವಾಗಿ ಎಲ್ಲರೂ ಏಕಮುಖ-ದಿಂದ ಶುಭಾಗಮನವನ್ನು ಬಯಸುತ್ತಿರುವಂತೆ ಮಾಡಿ, ಸಮಸ್ತದಿಗಂತ ವಿಶ್ರಾಂತವಾಗಿರುವ ಪ್ರಖ್ಯಾತಿಯಿಂದ ಪೃಥ್ವಿಯ ಧರ್ಮಧ್ವಜದಂತೆ ದೇದೀಪ್ಯ-ಮಾನವಾಗಿರುವ ಈಭಗವದ್ಗೀತೆಗೆ ಧರ್ಮಗ್ರಂಥಗಳಲ್ಲಿ ಯಾವ ಸ್ಥಾನವನ್ನು ಕೊಡಬೇಕೆಂಬುದನ್ನು ಇನ್ನು ನೀವೇ ಮನಸ್ಸಾಕ್ಷಿಕರಾಗಿ ನಿರ್ಣಯಿಸಿರಿ.

ತಾವು ಇಲ್ಲಿ ನನ್ನ ಗೀತಾವಿಚಾರವ್ಯಾಖ್ಯಾನಮಾಲೆಗೆ ಅವಕಾಶವನ್ನು ಕೊಟ್ಟದ್ದರಿಂದ ಈಗ ಆರುದಿನಗಳಿಂದಲೂ ನನ್ನ ಮನಸ್ಸು ಗೀತಾವಿಚಾರ-ದಿಂದಲೇ ತುಂಬಿ ತನ್ಮೂಲಕ ನನಗೆ ಬಹು ಉಪಕಾರವಾಗಿರುವದು. ಈಗ

ನಾನು ಇಷ್ಟು ದಿನವೂ ಹೇಳಿದ ಅರ್ಥವೆಲ್ಲ ಗೀತಾರ್ಥದ ಛಾಯಾಮಾತ್ರ-ವೆಂದು ತಾವು ಭಾವಿಸಬೇಕು. ಗೀತಾರ್ಥದ ವಿಚಾರದಲ್ಲಿ ಹೇಳುವಾಗ ಶ್ರೀ ಜ್ಞಾನೇಶ್ವರ ಸ್ವಾಮಿಗಳು "ಕಲ್ಪವೃಕ್ಷದ ತೋಟವನ್ನಾದರೂ ಕಷ್ಟಪಟ್ಟು ಬೆಳಿಸ-ಬಹುದು. ಗೀತೆಯ ಮರ್ಮವನ್ನು ಸಂಪೂರ್ಣವಾಗಿ ಹೇಳುವದಕ್ಕೆ ಆಗು-ವದಿಲ್ಲ" ಎಂದು ಹೇಳಿರುತ್ತಾರೆ. ಅಂಥವರೇ ಹಾಗೆ ಹೇಳಿರುವಾಗ ಇನ್ನು ನನ್ನಂಥವನ ಪಾಡೇನು!

ಗೀತಾರ್ಥವನ್ನು ಯಾರು ಎಷ್ಟೇ ಹೇಳಿದರೂ ಅದು ನಿತ್ಯಾನಂದ ಪ್ರಾಪ್ತಿಸಾಧನವಾದ ಧರ್ಮಗಳ ಜ್ಞಾಪಕಮಾತ್ರಕ್ಕಾಗುವದು. ಆ ನಿತ್ಯಾ-ನಂದವೇ ಅನುಭವಕ್ಕೆ ಬರಬೇಕಾದರೆ ಹೇಳುವದರಿಂದ ಕೇಳುವದರಿಂದ ಆಗು-ವದಿಲ್ಲ. ಅದನ್ನು ಪಡೆಯಬೇಕಾದರೆ ಮನುಷ್ಯನು ಮನುಷ್ಯತ್ವವನ್ನು ದಾಟ-ಬೇಕು. ಎಂದರೆ ಇತರರ ಪ್ರೀತಿಯನ್ನು ಸಂಪಾದಿಸಬೇಕೆಂದು ಇತರರನ್ನು ಪ್ರೀತಿಸುತ್ತಾ ಹೋಗುವದು ಮಾನುಷಪ್ರೇಮವೆಂದೂ ಅದು ಪಶುವರ್ಗ-ದಲ್ಲಿ ದೇಹಸಂಬಂಧಿಯಾಗಿ ಪಶುಪ್ರೇಮವೆನಿಸಿಕೊಂಡಿದ್ದು ಬೆಳೆದು ವೃಕ್ಷವಾಗಿ ಮಾನುಷಪ್ರೇಮವೆನಿಸಿಕೊಂಡಿತೆಂದೂ ಭಕ್ತಿಯೋಗದಲ್ಲಿ ಹೇಳಿರುತ್ತೇನಷ್ಟೆ. ಈಮಾನುಷಪ್ರೇಮವೆಂಬ ವೃಕ್ಷವನ್ನ ಅದರ ಸ್ವಭಾವಾನುಗುಣವಾಗಿ ಸುಮ್ಮ-ನೆ ಬೆಳೆಯಗೊಟ್ಟರೆ ಅದರ ಹಣ್ಣುಗಳು ಹುಳಿಗೂಡಿದ ಸಿಹಿಯಾಗಿರುವವು. ಏಕೆಂದರೆ ಇತರರ ಪ್ರೇಮವನ್ನು ಸಂಪಾದಿಸಬೇಕೆಂಬ ನಿರೀಕ್ಷಣೆಯೊಂದು ಆಪ್ರೇಮಕ್ಕಿರುವದು. ಆನಿರೀಕ್ಷಣೆಯೆಂಬ ಹುಳಿ ಹೆಚ್ಚಾದಾಗ ಒಂದೊಂದು ವೇಳೆ ವೈ ಜುಮ್ಮೆನ್ನುವದುಂಟು. ಹುಳಿ ಮರಗಳನ್ನು ಕಶಿಮಾಡಿ ಸಿಹಿ-ಯಾದ ಹಣ್ಣುಬಿಡುವಂತೆ ಮಾಡಿಕೊಳ್ಳುವ ಪದ್ಧತಿಯುಂಟಷ್ಟೆ. ಹಾಗೆಯೇ ಮಾನುಷಪ್ರೇಮವೆಂಬ ವೃಕ್ಷಕ್ಕೂ ಒಂದುಬಗೆಯ ಸಂಸ್ಕಾರವನ್ನು ಮಾಡು-ವದರಿಂದ ಆವೃಕ್ಷದ ಫಲವು ಮಧುರಮಯವಾಗುವ ಸಂಭವವುಂಟು. ಜಡ-ಸ್ವಭಾವದ ಮರಗಳನ್ನು ಕಶಿಮಾಡುವಾಗ ಕಶೀಮರದ ಕೊಂಬೆಯನ್ನು ತಂದು ಹುಳಿಮರಕ್ಕೆ ಹಚ್ಚುತ್ತಾರೆ. ಮಾನುಷಪ್ರೇಮವನ್ನು ಕಶಿಮಾಡುವದು ಹಾಗಲ್ಲ.

ಮಾನುಷಪ್ರೇಮುದವನು ತನ್ನ ಮಾನುಷಪ್ರೇಮುವೆಂಬ ವೃಕ್ಷವನ್ನು ಸದ್ಗುರು-ವೆಂಬ ಕಲ್ಪವೃಕ್ಷದ ಆಶ್ರಯದಲ್ಲಿ ನಿಲ್ಲಿಸಬೇಕು. ಸದ್ಗುರುವಿನ ಶುದ್ಧಪ್ರೇಮುದ ಗಾಳಿ ಬೀಸಿದ ಹಾಗೆಲ್ಲ ಮಾನುಷಪ್ರೇಮುವು ಪತಿಯ ಸಾನ್ನಿಧ್ಯಮಾತ್ರದಿಂದ ಕನ್ಯೆಯು ಮೈದುಂಬಿಕೊಳ್ಳುವಂತೆ ತನಗೆ ತಾನೆ ಪುಷ್ಟಿಗೊಳ್ಳುತ್ತ ಒಮ್ಮೆ ತನ್ನ ತಲೆಯ ಮೇಲೆ ಆಸದ್ಗುರುಸ್ವರೂಪವಾದ ಕಲ್ಪವೃಕ್ಷದ ಶಾಖಾಸ್ಪರ್ಶವಾಯಿ-ತೆಂದರೆ ಮಾನುಷಪ್ರೇಮುವೆಂಬ ಹುಳಿಯೆಲ್ಲ ಹಾರಿ ಹೋಗಿ ಅಲ್ಲಿಂದ ಮುಂದಕ್ಕೆ ಅದು ದೈವಿಕಪ್ರೇಮುವೆಂಬ ನಾಮುಧೇಯವನ್ನು ಹೊಂದಿ

"गुरोस्तु मौनं व्याख्यानं शिष्यास्तु च्छिन्नसंशयाः"

ಎಂಬಂತೆ ಹೇಳುವಿಕೆ ಕೇಳುವಿಕೆಗಳೇನೂ ಇಲ್ಲದೆ ನಿತ್ಯಾನಂದಮಯವಾಗು-ವದು.

Printed at the Dharma Prakash Press, Mangalore.